
ಸುರಗಿ

ಶ್ರೀಮತಿ ಎಂ. ಕೆ. ಇಂದಿರಾ ಅಭಿನಂದನಾಗ್ರಂಥ



ಸಂಪಾದಕಿ : ಎಚ್. ಎಸ್. ಪಾರ್ವತಿ

ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್

ಎನ್.ಎಂ.ಕೆ.ಆರ್.ವಿ.
ಮಹಿಳಾ ಕಾಲೇಜು
ಜಯನಗರ, ಬೆಂಗಳೂರು-560 011

'ಸ ಮ ನ್ವಿ ತಾ'
(ಮಹಿಳಾ ಅಧ್ಯಯನ ಕೇಂದ್ರ)

(ಬಿ.ಎ. ತರಗತಿಯಲ್ಲಿ ಐಚ್ಛಿಕ ವಿಷಯವಾಗಿ
ಮಹಿಳಾ ಅಧ್ಯಯನ ಪ್ರಾರಂಭ)

ರಾಷ್ಟ್ರದಲ್ಲೆ ಪ್ರಥಮ

'ಶಾ ಶ್ವ ತೀ'
(ಮಹಿಳಾ ವಸ್ತು ಸಂಗ್ರಹಾಲಯ)

ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ
ಹಲವಾರು ರಚನಾತ್ಮಕ ಕಾರ್ಯಕ್ರಮಗಳು

ಮಹಿಳೆಯರಿಗೆ ಸಂಬಂಧಿಸಿದ ವಸ್ತು ವಿಶೇಷಗಳನ್ನು
ಶಾಶ್ವತೀಗೆ ಉದಾರವಾಗಿ ಕೊಡುಗೆಯಾಗಿ ನೀಡಿ

ಸಮನ್ವಿತಾ ಮತ್ತು ಶಾಶ್ವತೀ
ಖ್ಯಾತ ಬರಹಗಾರ್ತಿ
ಶ್ರೀಮತಿ ಎಂ. ಕೆ. ಇಂದಿರಾ
ಅವರನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ

ಸುರಗಿ

(ಎಂ. ಕೆ. ಇಂದಿರಾ ಅಭಿನಂದನಾಗ್ರಂಥ)

ಸಂಪಾದಕರು

ಎಚ್. ಎಸ್. ಪಾರ್ವತಿ

ಕರ್ನಾಟಕ ಲೇಖಕಿಯರ ಸಂಘದ

ಪರವಾಗಿ

ಇಳಾ ಪ್ರಕಾಶನ ಬೆಂಗಳೂರು

SURAGI – A commemorative volume on Smt. M. K. Indira edited by H. S. Parvathi. Published by ILA PRAKASHANA, 153, 4th Main, 8th Cross, Chamarajpet, Bangalore-560 018 on behalf of Karnataka Lekhakiyara Sangha.

 First Impression : 1991 P. P. 311 + xii

ಸಂಪಾದಕ ಮಂಡಳಿ :

ಎಚ್. ಎಸ್. ಪಾರ್ವತಿ
ನಾಗಮಣಿ ಎಸ್. ರಾವ್
'ಶಾರದೆ'
ಬಿ. ವೈ. ಲಲಿತಾಂಬ
ನೇಮಿಚಂದ್ರ
ಎನ್. ಗಾಯಿತ್ರಿ

ಬೆಲೆ: ರೂ. 55/-

ಮುದ್ರಕರು :
ಇಳಾ ಪ್ರಿಂಟರ್ಸ್
153, 4 ನೇ ಮುಖ್ಯರಸ್ತೆ, 8 ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು - ೧೮



SURAGI – A commemorative volume on Smt. M. K. Indira edited by H. S. Parvathi. Pubilshed by ILA PRAKASHANA, 153, 4th Main, 8th Cross, Chamarajpet, Bangalore-560 018 on behalf of Karnataka Lekhakiyara Sangha-

 First Impression : 1991 P. P. 311 + xii

ಬೆಲೆ: ರೂ. 55/-

ಮುದ್ರಕರು :
ಇಳಾ ಪ್ರಿಂಟರ್ಸ್
153, 4 ನೇ ಮುಖ್ಯರಸ್ತೆ, 8 ನೇ ಅಡ್ಡರಸ್ತೆ,
ಚಾಮರಾಜಪೇಟೆ, ಬೆಂಗಳೂರು - ೧೮





ಪತಿ ಎಂ. ಕೃಷ್ಣರಾವ್ ಹಾಗೂ ಮಕ್ಕಳೊಂದಿಗೆ ಎಂ.ಕೆ.ಇಂದಿರಾ



ಎಂ.ಕೆ. ಇಂದಿರಾ ಅವರ ಸೋದರ ಟಿ.ಎಸ್. ರಾಮಚಂದ್ರ ಅವರೊಡನೆ ತಮ್ಮ ಮಗನ ಮದುವೆಯ ಸಂದರ್ಭದಲ್ಲಿ.



ತಮಗೆ ದೊರೆತ ಪ್ರಶಸ್ತಿಗಳೊಂದಿಗೆ ಎಂ.ಕೆ.ಇಂದಿರಾ .

ಅಧ್ಯಕ್ಷರ ಮಾತು

○
○
○ ಹೇಮಲತಾ ಮಹಿಷಿ

ಎಂ. ಕೆ. ಇಂದಿರಾ ಕನ್ನಡದ ಒಬ್ಬ ಅಪರೂಪದ ಲೇಖಕಿ. ಜೀವನದ ಅನುಭವವನ್ನೇ ತಮ್ಮ ಸಾಹಿತ್ಯ ಸೃಷ್ಟಿಯ ಮೂಲದ್ರವ್ಯವನ್ನಾಗಿ ಇಟ್ಟುಕೊಂಡು, ತಮ್ಮದೇ ಆದ ಲಲಿತ ಶೈಲಿಯಲ್ಲಿ, ವಿಶಿಷ್ಟ ಸಂವೇದನೆಯನ್ನು ತಮ್ಮ ಕೃತಿಗಳಲ್ಲಿ ಮೂಡಿಸಿರುವ ಲೇಖಕಿ. ಮಲೆನಾಡಿನ ಜೀವನದ ದಟ್ಟ ಅನುಭವ ಅವರ ಕಾದಂಬರಿಗಳಲ್ಲಿ ಪಡಿಮೂಡಿದೆ. ಇಂತಹ ಲೇಖಕಿ 1991ರಲ್ಲಿ ತಮ್ಮ 75ನೇ ವರ್ಷಕ್ಕೆಕಾಲಿಟ್ಟಿರುವುದು ನಮ್ಮೆಲ್ಲರಿಗೆ ಒಂದು ಸಂಭ್ರಮದ ಸಂದರ್ಭ. ಕರ್ನಾಟಕ ಲೇಖಕಿಯರ ಸಂಘ 75ರ ಹೊಸ್ತಿಲಲ್ಲಿರುವ ಲೇಖಕಿಯನ್ನು ಅಭಿನಂದಿಸುತ್ತಿದೆ.

ದಿನಾಂಕ 28ನೇ ಏಪ್ರಿಲ್, 1991ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಎಂ. ಕೆ. ಇಂದಿರಾರವರಿಗೆ 'ಸುರಗಿ' ಅಭಿನಂದನಾ ಗ್ರಂಥದ ಅರ್ಪಣೆ, ಸನ್ಮಾನ ಹಾಗೂ ನಿಧಿಸಮರ್ಪಣೆಯ ಕಾರ್ಯಕ್ರಮವನ್ನು ಸಂಘವು ಹಮ್ಮಿಕೊಂಡಾಗ ಸಾಹಿತ್ಯಾಭಿಮಾನಿಗಳಿಂದ, ಸಾರ್ವಜನಿಕರಿಂದ, ಪತ್ರಿಕೆಗಳಿಂದ ಬಂದ ಪ್ರತಿಕ್ರಿಯೆ ಅದ್ಭುತವಾದುದು. ಅದು ಎಂ.ಕೆ. ಇಂದಿರಾರವರ ಬಗ್ಗೆ ಕನ್ನಡದ ಜನತೆಗಿರುವ ಅಭಿಮಾನದ ದ್ಯೋತಕ.

'ಸುರಗಿ' ಹೊರಬರಲು ಅನೇಕರು ಸಹಾಯ ಮಾಡಿದ್ದಾರೆ. ಅನೇಕ ಬರಹಗಾರರು ಸಂತೋಷದಿಂದ ಲೇಖನಗಳನ್ನು ನೀಡಿದ್ದಾರೆ ; 'ಸುರಗಿಯ' ಮುದ್ರಣ—ಪ್ರಕಾಶನದ ಜವಾಬ್ದಾರಿಯನ್ನು ಇಳಾ ಪ್ರಕಾಶನ

ನಿರ್ವಹಿಸಿದೆ. ಸುಮಾರು 500 ಇಂದಿರಾಭಿಮಾನಿಗಳು ಪ್ರಕಟಣಾಪೂರ್ವ ಕೂಪನ್‌ಗಳನ್ನು ಖರೀದಿಸಿದ್ದಾರೆ; ಮುಖ್ಯವಾಗಿ, ಶ್ರೀಮತಿ ಎಚ್. ಎಸ್. ಪಾರ್ವತಿಯವರ ಸಂಪಾದಕತ್ವದಲ್ಲಿ ಶ್ರೀಮತಿಯರಾದ ನಾಗಮಣಿ ಎಸ್. ರಾವ್, 'ಶಾರದೆ', ಬಿ. ವೈ. ಲಲಿತಾಂಬಾ, ಸೀಮಿಂಚಂದ್ರ ಹಾಗೂ ಎಸ್. ಗಾಯತ್ರಿಯವರ ಸಂಪಾದಕ ಮಂಡಳಿ 'ಸುರಗಿ' ಉತ್ತಮವಾಗಿ ಹೊರಬರಲು ನೆರವಾಗಿದೆ. ಅಂತೆಯೇ ನಿಧಿಸಂಗ್ರಹಣೆಯಲ್ಲಿಯೂ ಅನೇಕರು ನೆರವಾಗಿದ್ದಾರೆ. ಎಲ್ಲರಿಗೂ ಸಂಘವು ತನ್ನ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಎಂ. ಕೆ. ಇಂದಿರಾ ತಮ್ಮ ಆತ್ಮಚರಿತ್ರೆ "ಬಿಂದು"ವನ್ನು ಆದಷ್ಟು ಶೀಘ್ರವಾಗಿ ಬರೆದು ಮುಗಿಸಬೇಕೆಂದು ಸಂಘವು ಉತ್ಕಟವಾಗಿ ಬಯಸುತ್ತದೆ. 'ಬಿಂದು' ನಿಜಕ್ಕೂ ಕನ್ನಡದ ಒಂದು ಅತ್ಯುತ್ಕೃಷ್ಟ ಆತ್ಮಕಥೆಯಾಗಬಲ್ಲದು. ಕನ್ನಡಿಗರು ಅದರ ಬರವನ್ನೇ ಕಾತರದಿಂದ ಎದುರು ನೋಡುತ್ತಿದ್ದಾರೆ. 'ಬಿಂದು' ಹೊರಬಂದು, ಇಂದಿರಾರವರ 100ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸುವ ಅವಕಾಶ ಇಂದಿರಾಭಿಮಾನಿಗಳಿಗೆ ದೊರಕಬೇಕೆಂಬ ಹಾರೈಕೆ ನಮ್ಮದು.

ಸಂಪಾದಕರ ನುಡಿ

○
○
○ ಎಚ್. ಎಸ್. ಪಾರ್ವತಿ

"ಸುರಗಿ" ಮಲೆನಾಡಿನಲ್ಲಿ ಅರಳುವ ಒಂದು ಪುಷ್ಪ. ಇದರ ಸುವಾಸನೆ ಬಹುದೂರದವರೆಗೆ ಹರಡುವಂತಹುದು. ಮಲೆನಾಡಿನ ಒಂದು ಹಳ್ಳಿಯಲ್ಲಿ ಹುಟ್ಟಿ, ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯದೆ ಲೋಕಾನುಭವವನ್ನೇ ಬಂಡವಾಳವನ್ನಾಗಿಟ್ಟುಕೊಂಡು, ಇಂದು ಕನ್ನಡ ನಾಡಿನ ಉದ್ದಗಲಕ್ಕೂ ಖ್ಯಾತರಾಗಿರುವ ಶ್ರೀಮತಿ ಎಂ, ಕೆ. ಇಂದಿರಾ ಅವರ ಹೆಸರಿನಲ್ಲಿ ಪ್ರಕಟವಾಗುತ್ತಿರುವ ಅಭಿನಂದನಾ ಗ್ರಂಥಕ್ಕೆ 'ಸುರಗಿ' ಎನ್ನುವ ಹೆಸರು ಎಷ್ಟೊಂದು ಅನ್ವರ್ಥಕ !

ಎಂ. ಕೆ. ಇಂದಿರಾ ಅವರನ್ನು ಸನ್ಮಾನಿಸಬೇಕೆಂದು ಕರ್ನಾಟಕದ ಲೇಖಕಿಯರ ಪ್ರಾತಿನಿಧಿಕ ಸಂಸ್ಥೆಯಾದ ಲೇಖಕಿಯರ ಸಂಘ ನಿಶ್ಚಯಿಸಿರುವುದು ಉಚಿತವೇ ಆಗಿದೆ. ಇಂದಿರಾ ಈಗ ೭೪ ವಯಸ್ಸನ್ನು ದಾಟಿ ೭೫ ಕ್ಕೆ ಕಾಲಿಟ್ಟಿದ್ದಾರೆ.

ಸಾಹಿತಿಯೊಬ್ಬರ ಸನ್ಮಾನ ಸಮಾರಂಭ ಸದಾಕಾಲ ನೆನಪಿನಲ್ಲಿ ಉಳಿಯುವಂತಾಗಬೇಕಾದರೆ ಅವರ ಕೃತಿ ಪರಿಚಯ ಒಟ್ಟಾಗಿ ಒಂದು ಕಡೆ ಪ್ರಕಟವಾಗುವುದು ಮುಂದಿನ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಅವಶ್ಯಕ ಎನ್ನುವ ಉದ್ದೇಶದಿಂದ ಇಂದಿರಾ ಅವರ ಹೆಸರಿನಲ್ಲಿ ಒಂದು ಸಂಭವನಾಗ್ರಂಥ ಪ್ರಕಟಿಸುವುದೆಂದು ನಿಶ್ಚಯಿಸಲಾಯಿತು. ಲೇಖಕಿಯರ ಸಂಘದ ಸಲಹಾ ಸಮಿತಿಯ ಶ್ರೀ ಜಿ. ನಾರಾಯಣ ಅವರು ಗ್ರಂಥದ ಸಂಪಾದನೆಯ ಕೆಲಸವನ್ನು ನನಗೆ ವಹಿಸಿದರು.

ಎಂ. ಕೆ. ಇಂದಿರಾ ಅವರಿಗೆ ಸಂಭಾವನಾಗ್ರಂಥ ಅರ್ಪಿಸುವ ವಿಚಾರ ತಿಳಿದಾಗ ಅನೇಕ ಲೇಖಕ, ಲೇಖಕಿಯರು ತುಂಬಾ ಉತ್ಸಾಹದಿಂದ ಈ ಕಾರ್ಯವನ್ನು ಸ್ವಾಗತಿಸಿದರು. ಅವರಲ್ಲಿ ಅನೇಕರು ಸಕಾಲದಲ್ಲಿ ಲೇಖನಗಳನ್ನು ಕಳುಹಿಸಿ ಉಪಕರಿಸಿದ್ದಾರೆ. ಆ ಎಲ್ಲ ಲೇಖಕ ಲೇಖಕಿಯರಿಗೆ....

ನಮ್ಮಲ್ಲಿ ಲೇಖಕಿಯರ ಬಗ್ಗೆ ಬಂದಿರುವ ಸಂಭವನಾ ಗ್ರಂಥಗಳು ಬೆರಳೆಣಿಕೆಯಷ್ಟೂ ಇಲ್ಲ. ಅಂತಹ ಒಂದು ಸಾಹಸಕ್ಕೆ ಕೈಹಾಕಿ, ಆ ಸಂತೋಷದ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟ ಲೇಖಕಿಯರ ಸಂಘದ ಅಧ್ಯಕ್ಷೆ ಹೇಮಲತಾ ಮಹಿಷಿ ಹಾಗೂ ಕಾರ್ಯಕಾರಿ ಸಮಿತಿಯವರಿಗೆ....

ಸಂಪಾದಕ ಸಮಿತಿಯ ನನ್ನ ಎಲ್ಲ ಗೆಳತಿಯರಿಗೆ....

ಛಾಯಾಚಿತ್ರ ತೆಗೆದುಕೊಟ್ಟ ಡಿ. ಸಿ. ನಾಗೇಶ್ ಅವರಿಗೆ....

ಪುಸ್ತಕ ಪ್ರಕಾಶನದ ಜವಾಬ್ದಾರಿಯನ್ನು ಹೊತ್ತು ಅದನ್ನು ಅಂದವಾಗಿ ಅಚ್ಚುಮಾಡಲು ಹಗಲೂ-ರಾತ್ರಿ ಶ್ರಮಿಸಿದ ಇಳಾ ಮುದ್ರಣಾಲಯದ ಗುರುಮೂರ್ತಿ ಹಾಗೂ ಸಿಬ್ಬಂದಿ ವರ್ಗದವರಿಗೆ....

ಪ್ರಕಟವಾಗುವುದಕ್ಕೆ ಮುಂಚೆಯೇ ಕೂಪನ್‌ಗಳನ್ನು ಕೊಂಡು ಪ್ರೋತ್ಸಾಹಿಸಿದ ಅಭಿಮಾನಿಗಳಿಗೆ....

ಕೃತಜ್ಞತೆಗಳು

ಕೃತಜ್ಞತೆಗಳು

ಶ್ರೀಮತಿ ಎಂ.ಕೆ. ಇಂದಿರಾ ಅವರಿಗೆ ನಿಧಿ ಅರ್ಪಿಸಲು ನೆರವಾದ ಕೆಳಕಂಡ ವ್ಯಕ್ತಿಗಳು/ಸಂಸ್ಥೆಗಳಿಗೆ ಸಂಘವು ಕೃತಜ್ಞತೆಯನ್ನು ತಿಳಿಸುತ್ತದೆ :

1. ಬೆಂಗಳೂರು ನಗರ ಕಾರ್ಪೊರೇಷನ್
2. ಲೋಕ ಶಿಕ್ಷಣ ಟ್ರಸ್ಟ್
3. ಅಮೇರಿಕನ್ನಡದ ಪರವಾಗಿ ಡಾ. ಹರಿಹರೇಶ್ವರ, ಅಮೆರಿಕಾ
4. ಶಾಶ್ವತೀ
5. ಕಿರ್ಲೋಸ್ಕರ್ ಇನ್‌ವೆಸ್ಟ್‌ಮೆಂಟ್ಸ್ ಮತ್ತು ಫೈನಾನ್ಸ್ ಲಿಮಿಟೆಡ್.
6. ಕೆನರಾ ಬ್ಯಾಂಕ್
7. ಸಂಡೂರು ಮ್ಯಾಂಗನೀಸ್
8. ಡಾ. ಆನಂದ ಸಾಲ್ಡಾನಾ, ಮಂಗಳೂರು
9. ಮುಂಬಯಿ ಕನ್ನಡಿಗರು
10. ಡಾ. ನಳಿನಾಮೂರ್ತಿ, ಕೆನಡಾ
11. ಕನ್ನಡ ಸಂಘ, ಮದ್ರಾಸ್
12. ವಿಜಯಾ ಬ್ಯಾಂಕ್
13. ಜಯರಾಂ ಮತ್ತು ಜಯರಾಂ. ವಕೀಲರು
14. ಗುಣೋದಯ ಎಸ್. ಐಲ್., ಮುಂಬಯಿ
15. ಅಂಜನಾ ಪ್ರಭಾಕರ, ಅಮೇರಿಕಾ
16. ಡಾ. ಡಿ. ಎಸ್. ಶ್ರೀನಿವಾಸ
17. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
18. ಮತ್ತೂರು ಕೃಷ್ಣಮೂರ್ತಿ, ಲಂಡನ್
19. ಮನೋಹರ ಗ್ರಂಥಮಾಲೆ. ಧಾರವಾಡ

20. ಡಾ. ಎಚ್. ಕೆ. ರಂಗನಾಥ
21. ಎಸ್. ವಿ. ರಂಗಸ್ವಾಮಿ
22. ಪಿ. ಲಂಕೇಶ್
23. ಪದ್ಮಶ್ರೀ ಆರ್. ಎಂ. ಬಿ.
24. ಎಚ್. ಕೆ. ರಾಮಕೃಷ್ಣ
25. ಡಾ. ವಿ. ಎಸ್. ವೇಣುಗೋಪಾಲರಾವ್, ಶಿವಮೊಗ್ಗ
26. ಎಂ. ಕಿಶೋರ್
27. ವಿದ್ಯಾವರ್ಧಕ ಪ್ರಥಮ ದರ್ಜೆ ಮಹಿಳಾ ಕಾಲೇಜು
28. ವೆಂಕಟೇಶ್, ಹೇಮಂತ ಸಾಹಿತ್ಯ

ಪರಿವಿಡಿ

ಭಾಗ ಎರಡು : ಕೃತಿ ಚಿಂತನೆ

ಅನುಬಂಧ

ಭಾಗ ಒಂದು

ಮಲೆನಾಡ ಕಂಪು

ಎಂ. ಕೆ. ಇಂದಿರಾ ಅವರ ಬದುಕು-ಬರಹ

○
○
○ ಹೇಮಲತಾ ಮಹಿಷಿ

ಪ್ರಕಟವಾದ ಮೊದಲ ಕಾದಂಬರಿಯೇ ಅದರ ಕರ್ತೃವನ್ನು ಪ್ರಸಿದ್ಧಿಯ ಶಿಖರಕ್ಕೇರಿಸಿರುವುದು ಅಪರೂಪದ ಸಂಗತಿ. ಆದರೆ, ಎಂ.ಕೆ. ಇಂದಿರಾ ಅಂತಹ ಅಪರೂಪದ ಒಬ್ಬ ವ್ಯಕ್ತಿ. ಅವರ ಮೊದಲ ಪ್ರಕಟಿತ ಕಾದಂಬರಿ 'ತುಂಗ-ಭದ್ರ' ಓದುಗರ ಕೈಸೇರಿದಾಗ ರಾತ್ರೋರಾತ್ರಿ ಒಬ್ಬ ಸಾಮಾನ್ಯಗೃಹಿಣಿ ಪ್ರಸಿದ್ಧ ಕಾದಂಬರಿಕಾರಳಾಗಿ ಮಿಂಚಿದರು.

ಎಂ. ಕೆ. ಇಂದಿರಾ ಹುಟ್ಟಿದ್ದು ದಿನಾಂಕ 5-1-1917 ರಂದು ತೀರ್ಥಹಳ್ಳಿಯ ಅಜ್ಜನ ಮನೆಯಲ್ಲಿ (ತಾಯಿಯ ತವರು ಮನೆ). ತಂದೆ ತರೀಕೆರೆ ಸೂರ್ಯ ನಾರಾಯಣರಾವ್, ತಾಯಿ ಬನಶಂಕರಮ್ಮ. ತಂದೆ ನರಸಿಂಹರಾಜಪುರದ ದೊಡ್ಡ ಜಮೀನ್ದಾರರು. ಅಡಿಕೆ, ಭತ್ತ, ಕಬ್ಬು, ಮಾವು, ತೆಂಗುಗಳ ನಡುವೆ ಸಂಸಾರ ನಂದಗೋಕುಲವಾಗಿತ್ತು. ಕೊಟ್ಟಿಗೆಯ ತುಂಬ ಇದ್ದ ಹಸುಗಳಿಂದ ಹಾಲಿನ ಹೊಳೆಯೇ ಮನೆಯಲ್ಲಿ ಹರಿಯುತ್ತಿತ್ತು. ಸೂರ್ಯ ನಾರಾಯಣರಾವ್-ಬನಶಂಕರಮ್ಮ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. 'ಪ್ರಜಾವಾಣಿ'ಯ ಸಂಪಾದಕರಾಗಿದ್ದ 'ಭೂ ಬಾಣ'ದ ಟಿ.ಎಸ್. ರಾಮಚಂದ್ರ ರಾವ್ ಒಬ್ಬ ಮಗ, ಮತ್ತೊಬ್ಬರು ಆನಂದರಾವ್. ಎರಡು ಹೆಣ್ಣು ಮಕ್ಕಳಲ್ಲಿ ಹಿರಿಯವಳು ಶಾರದಮ್ಮ, ಎರಡನೆಯವಳೇ ಇಂದಿರಾ. ಈಗ ಈ ನಾಲ್ವರಲ್ಲಿ ಉಳಿದಿರುವವರು ಈ ಇಬ್ಬರು ಹೆಣ್ಣು ಮಕ್ಕಳು ಮಾತ್ರ.

ಇಂದಿರಾರವರ ಪ್ರತಿಭೆ ಬಹುಶಃ ತಾಯಿಯ ಕಡೆಯಿಂದ ಬಂದುದು.

ತಾಯಿ ಬನಶಂಕರಮ್ಮ ಸುರೂಪಿ, ಎತ್ತರದ ಆಳು. ತಾರುಣ್ಯದಲ್ಲಿ ಆಕಸ್ಮಾತ್ ಬೀದಿಯಲ್ಲಿ ಹೊರಟರೆ ಎಲ್ಲರೂ ನಿಂತು ನೋಡುತ್ತಿದ್ದರಂತೆ,ಅಂತಹ ಚೆಲುವೆ.ಆ ಕಾಲದ ಹೆಣ್ಣು ಮಕ್ಕಳಲ್ಲಿ ಸಮಾಜ ನಿರೀಕ್ಷಿಸುತ್ತಿದ್ದ ಸಕಲ ಗುಣಗಳೂ ಅವರಲ್ಲಿದ್ದವು. ಹಾಡು-ಹಸೆ-ಕಸೂತಿ-ಗಮಕ-ಹಾರ್ಮೋನಿಯಂನಲ್ಲಿ ಅವರು ನಿಪುಣೆ. ಕುಶಲ ಕಲಾವಿದೆಯ ಲಕ್ಷಣಗಳು ಅವರಲ್ಲಿದ್ದವು. 1000 ನುಡಿಗಳಿದ್ದ ಯಕ್ಷಗಾನದ ಅನೇಕ ಪ್ರಸಂಗಗಳನ್ನು ಅವರು ಹೇಳುತ್ತಿದ್ದರಂತೆ. ಸುಪ್ರಭಾ ಕಲ್ಯಾಣ ಎಂಬ ನಾಟಕವನ್ನೂ ಅವರು ಬರೆದಿದ್ದರಂತೆ.

ಇಂದಿರಾ ತಮ್ಮ ಬಾಲ್ಯದ ದಿನಗಳನ್ನು ನರಸಿಂಹರಾಜಪುರ–ತೀರ್ಥಹಳ್ಳಿ ನಡುವೆ ಓಡಾಡುತ್ತ ಕಳೆದರು. ಇತ್ತ ತಾಯಿಯ ತವರಿನಲ್ಲಿ ಸಮೃದ್ಧಿ, ಅತ್ತ ತಂದೆಯ ಮನೆಯ ಶ್ರೀಮಂತಿಕೆ. ಒಟ್ಟನಲ್ಲಿ, ಬಾಲ್ಯದಲ್ಲಿ ತಮ್ಮ ಜೀವನದಲ್ಲಿ ಯಾವ ಕೊರತೆಯನ್ನೂ ಅನುಭವಿಸಲಿಲ್ಲ ಅವರು. ಆದರೆ, ಸುಖದ ಬಾಲ್ಯ ಜೀವನ ಇತರರ ಕಷ್ಟದ-ಕೊರತೆಯ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸುವಲ್ಲಿ, ಅರ್ಥಮಾಡಿಕೊಳ್ಳುವಲ್ಲಿ ಅಡ್ಡಿ ಬರಲಿಲ್ಲವೆಂಬುದು ಮಹತ್ವದ ವಿಷಯ. ತೀರ್ಥಹಳ್ಳಿ—ನರಸಿಂಹರಾಜಪುರ, ಸುತ್ತಲಿನ ಮಲೆನಾಡಿನ ಪುಟ್ಟ-ಪುಟ್ಟ ಹಳ್ಳಿಗಳಲ್ಲಿ ಓಡಾಡುತ್ತಲೇ ಇಂದಿರಾ ತೆರೆದ ಕಣ್ಣಿನಿಂದ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಸವಿದರು. ರೌದ್ರ ರೂಪವನ್ನು ಕಂಡರು, ಅದರ ನಡುವೆ ಬದುಕುವ ಜನರ ನೋವು-ನಲಿವುಗಳನ್ನು ಗುರುತಿಸಿ ಸ್ಪಂದಿಸಿದರು. ಅವರ ಹೆಚ್ಚಿನ ಪುಸ್ತಕಗಳಲ್ಲಿ ಬಾಲ್ಯದ ಈ ಅನುಭವ ಯಥಾವತ್ತಾಗಿ ಮೂಡಿಬಂದಿದೆ.

ಇಂದಿರಾ ವಿದ್ಯಾಭ್ಯಾಸ ಮಿಡ್ಲ್ 2ನೇ ತರಗತಿಗೇ ಮುಗಿಯಿತು. ಅವರ ಕ್ಲಾಸಿನಲ್ಲಿ ಇದ್ದವರು ಇಬ್ಬರು ಹುಡುಗಿಯರು ಮಾತ್ರ. ಇಂದಿರಾ ಯಾವಾಗಲೂ ತರಗತಿಗೆ ಮೊದಲು. ಶಾಲೆಯ ಪುಸ್ತಕ ಭಂಡಾರದಿಂದ ಬಂಕಿಮಚಂದ್ರ, ಶರಶ್ಚಂದ್ರ, ರವೀಂದ್ರನಾಥ ಠಾಕೂರ್—ಎಲ್ಲರ ಸಾಹಿತ್ಯದ ಪರಿಚಯವಾಯಿತು. ಶಾಲೆಯ ಪುಸ್ತಕ ಭಂಡಾರದಿಂದ ಇಷ್ಟು ಪುಸ್ತಕ ತೆಗೆದುಕೊಂಡು ಹೋಗಿ ಓದಿದ ಏಕಮಾತ್ರ ವಿದ್ಯಾರ್ಥಿನಿ ಇವರೆಂಬ ಪ್ರಶಂಸೆ ಶಾಲೆಯ ಮುಖ್ಯೋಪಾಧ್ಯಾಯರಿಂದ ದೊರೆಯಿತು. ಮಿಡ್ಲ್ 2ನೇ ತರಗತಿಯ ಅನಂತರ ಎಷ್ಟು ಅತ್ತು ಕರೆದರೂ ತಂದೆ ಮುಂದೆ ಓದಿಸಲು ಒಪ್ಪಲಿಲ್ಲ.

12ನೇ ವಯಸ್ಸಿನಲ್ಲಿ ಎಂ. ಕೃಷ್ಣರಾವ್ ಅವರೊಂದಿಗೆ ಇಂದಿರಾ ವಿವಾಹವಾಯಿತು. ಕೃಷ್ಣರಾವ್ ತೀರ್ಥಹಳ್ಳಿ—ಶಿವಮೊಗ್ಗ ನಡುವೆ ಮೋಟಾರ್ ಸರ್ವಿಸ್

ನಡೆಸುತ್ತಿದ್ದರು. ಮುಂದೆ ಮಂಡ್ಯದಲ್ಲಿಯೂ ಇದ್ದರು. 17ನೇ ವಯಸ್ಸಿಗೆ ಗಂಡನ ಮನೆಗೆ ಹೋದ ಇಂದಿರಾ 18ನೇ ವಯಸ್ಸಿಗೆ ಮೊದಲ ಮಗುವಿನ ತಾಯಿಯಾದರು. ಅವರಿಗೆ ಹುಟ್ಟಿದ 8 ಮಕ್ಕಳಲ್ಲಿ ಉಳಿದವರು 5 ಜನ ಮಾತ್ರ–4 ಗಂಡು, ಒಂದು ಹೆಣ್ಣು. ಇತ್ತೀಚೆಗೆ ಎಂದರೆ 1974ರಲ್ಲಿ ವಯಸ್ಸಿಗೆ ಬಂದ ಮಗನೊಬ್ಬ ಹೃದಯಾಘಾತದಿಂದ ಮರಣ ಹೊಂದಿದ್ದು ಅವರ ಜೀವನದ ಒಂದು ದೊಡ್ಡ ಆಘಾತ. ಉಳಿದ ನಾಲ್ವರು ಮಕ್ಕಳು ಮದುವೆಯಾಗಿ ಜೀವನದಲ್ಲಿ ತಮ್ಮ-ತಮ್ಮ ನೆಲೆ ಕಂಡುಕೊಂಡಿದ್ದಾರೆ. ಅವರು ಯಾರೂ ತಾಯಿಯನ್ನು ಅನುಸರಿಸಿ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟಿಲ್ಲ.

ಇಂದಿರಾರವರಿಗೆ ತುಂಗ-ಭದ್ರ ಬರೆಯಲು ಪ್ರೇರಣೆಯಾದದ್ದು ಆಕಸ್ಮಿಕವಾಗಿ, ತಾಯಿಯ ಊರಿನ ನೆಂಟರೊಬ್ಬರ ಆಗಮನದಿಂದಾಗಿ, ಬಾಲ್ಯದ ಹಳೆಯ ನೆನಪುಗಳ ಮಹಾಪೂರವೇ ಉಕ್ಕಿ, ಅದು 'ತುಂಗ-ಭದ್ರ' ಕೃತಿಯಲ್ಲಿ ಹರಿದಾಗಲೇ ಅವರ ತುಡಿಯುತ್ತಿದ್ದ ಮನಸ್ಸು ಶಾಂತವಾಗಿದ್ದು. ಅಲ್ಲಿಂದೀಚೆಗೆ ಅವರಿಗೆ ಯಾರ ಪ್ರೇರಣೆಯೂ. ಪ್ರೋತ್ಸಾಹವೂ ಬೇಕಾಗಲಿಲ್ಲ. ಲೇಖನಿ ತನ್ನಿಂದ ತಾನೇ ಓಡಿ ಹಲವಾರು ಕೃತಿಗಳನ್ನು ರಚಿಸಿತು. ಜೀವನದ ಮಧ್ಯಕಾಲದಲ್ಲಿ ತಾವು ಇದ್ದಕ್ಕಿದ್ದಂತೆ ಪ್ರಸಿದ್ಧರಾಗಿ, ಕನ್ನಡದ ಒಬ್ಬ ಜನಪ್ರಿಯ ಲೇಖಕಿಯಾದುದು ಅವರಿಗೇ ಒಂದು ಪವಾಡ.

ಇಂದಿರಾರವರ ಕಾದಂಬರಿ-ಕತೆಗಳ ಮೊದಲ ಓದುಗರಾಗಿದ್ದವರು ಅವರ ಪತಿ ಶ್ರೀ ಕಷ್ಣರಾವ್ ಅವರು. ಕಥಾತಂತ್ರ, ಶೈಲಿ ಇತ್ಯಾದಿ ಸಾಹಿತ್ಯಕ ಚರ್ಚೆ ಮಾಡಲು ಅವರಿಗೆ ಸಾಧ್ಯವಾಗದಿದ್ದರೂ ಪ್ರಾಪಂಚಿಕ ವಿಷಯಗಳ ಬಗ್ಗೆ ಉಪಯುಕ್ತ ಸಲಹೆ ನೀಡುತ್ತಿದ್ದರು. ಗೃಹಿಣಿಯಾಗಿ ಮನೆ-ಮಕ್ಕಳ ನಡುವೆ ಹೆಚ್ಚಿನ ಕಾಲಕಳೆದ ಇಂದಿರಾಗೆ ಇಂತಹ ಸಲಹೆ ಬರವಣಿಗೆಯಲ್ಲಿ ಸಹಾಯಕವಾಗುತ್ತಿತ್ತು. ಇದಕ್ಕಿಂತ ಹೆಚ್ಚಾಗಿ, ಅವರ ಮನೆಯಲ್ಲಿ ಬರೆಯಲು ಪೂರ್ಣ ಸ್ವಾತಂತ್ರ್ಯವಿತ್ತು. ಹೆಂಡತಿ ಪ್ರಸಿದ್ಧಿಗೆ ಬಂದಾಗ ಅಸೂಯೆ ಪಡದೆ ಸಂತೋಷ ಪಡುವ ಹೃದಯ ವೈಶಾಲ್ಯ ಅವರ ಪತಿಗಿತ್ತು. ಮನೆಕೆಲಸ-ಮಕ್ಕಳ ಪೋಷಣೆಯ ನಡುವೆಯೇ ಇಂದಿರಾರವರ ಸಾಹಿತ್ಯ ಕೃಷಿ ವಿಪುಲವಾಗಿ ನಡೆಯಿತು. ಸಾಮಾನ್ಯ ಗೃಹಿಣಿಯಾಗಿದ್ದ, ಅದರಲ್ಲೂ ಹೆಚ್ಚಿನ ಶಾಲಾಶಿಕ್ಷಣ ಪಡೆಯದ ಮಹಿಳೆಯೊಬ್ಬಳ ಈ ಸಾಧನೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖನಾರ್ಹ.

ತಾಯಿಯ ಚಿಕ್ಕಪ್ಪನ ಮಗನೇ ಆಗಿದ್ದ ಪತಿ ಕೃಷ್ಣರಾವ್ 1970ರಲ್ಲಿ ನಿಧನ ರಾದ ಮೇಲೆ ಇಂದಿರಾ ಬಾಳಿನಲ್ಲಿ ಒಂಟಿಯಾದರು. ಆದರೂ ಸಾಹಿತ್ಯ ಕೃಷಿ

ಮುಂದುವರಿಯಿತು. ಬಾಲ್ಯದಲ್ಲಿ, ಯೌವನದಲ್ಲಿ ಯಾವುದಕ್ಕೂ ಕೊರತೆ ಕಾಣದಂತೆ ಜೀವನ ನಡೆಸಿದ ಇಂದಿರಾ ಇಂದು 74 ವರ್ಷದ ಸಾರ್ಥಕ ಬಾಳು ಬಾಳಿದ್ದಾರೆ. ದೇಶದ ಮೂಲೆ-ಮೂಲೆಯಲ್ಲಿರುವ ಕನ್ನಡ ಓದುಗರು ಇಂದಿರಾರವರ ಮೇಲೆ ಪ್ರಶಂಸೆಯ, ಅಭಿಮಾನದ ಮಳೆಗರೆದಿದ್ದಾರೆ, ಕರೆದು ಸನ್ಮಾನಿಸಿದ್ದಾರೆ. ಆ ಬಗ್ಗೆ ಅಪಾರ ಹೆಮ್ಮೆ ಇದೆ ಅವರಿಗೆ.

ಮೊದಲಿನಿಂದಲೂ ಸ್ವತಂತ್ರ ಪ್ರವೃತ್ತಿ ಹೊಂದಿರುವ ಇಂದಿರಾ ಈ ವಯಸ್ಸಿನಲ್ಲೂ ಸ್ವತಂತ್ರವಾಗಿ ಇರಲು ಇಚ್ಛಿಸುತ್ತಾರೆ. ಸರಕಾರದಿಂದ ಬರುವ 500 ರೂ. ಮಾಸಿಕ ಗೌರವ ಧನದಲ್ಲಿ ತಮ್ಮ ಜೀವನ ನಡೆಸುವ ಛಲ ಅವರದು. ಉಳಿದಂತೆ ಆರೋಗ್ಯ ಚೆನ್ನಾಗಿದ್ದರೂ ವಯಸ್ಸು ಅವರ ಮೇಲೆ ತನ್ನ ಪ್ರಭಾವ ಬೀರಿದೆ. ಕಣ್ಣು ಪೊರೆಯಿಂದ ಮಂಜಾಗಿದೆ. ಕಣ್ಣಿನ ಆಪರೇಶನ್ ಮಾಡಿಸಿಕೊಳ್ಳಬೇಕಾಗಿದೆ. ಬರೆದರೆ ಕೈನೋವು ಕಾಣಿಸುತ್ತದೆ. ಆದರೆ ಇನ್ನೂ ಬರೆಯುವ ಮನಸ್ಸಿದೆ. ತಮ್ಮ ಆತ್ಮಚರಿತ್ರೆ ಬರೆಯಬೇಕೆಂಬ ಹಂಬಲವಿದೆ. ಒಂದು ಸಾವಿರ ಪುಟವನ್ನು ಮೀರಬಹುದಾದ ಆತ್ಮಚರಿತ್ರೆ "ಬಿಂದು"ವನ್ನು ಬರೆದು ಮುಗಿಸುವುದು ಇಂದಿರಾ ಅವರಿಗಿರುವ ಭವಿಷ್ಯದ ಏಕಮಾತ್ರ ಹಂಬಲವಾಗಿದೆ. ಸ್ವಾತಂತ್ರ್ಯ ಪೂರ್ವದ ಮಲೆನಾಡಿನ ಜೀವನವನ್ನು, ಅನಂತರದ ಬದಲಾವಣೆಯ ಸಂಧಿಕಾಲವನ್ನು ಕಂಡಂತಹ ಇಂದಿರಾ ಅವರಂತಹ ಲೇಖಕಿಯರು ಮತ್ತಾರೂ ಇಲ್ಲ.

○ ಬರೆಹ

ಮಲೆನಾಡಿನಲ್ಲಿ ಹುಟ್ಟಿ ಬೆಳೆದ ಇಂದಿರಾ ಅಲ್ಲಿಯ ಜನರ ಜೀವನವನ್ನು, ಕಷ್ಟ-ಸುಖಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಲೆನಾಡಿನ ಮೂಲೆ ಮೂಲೆಗಳನ್ನು ಸುತ್ತಿ ಆಯಾ ಪ್ರದೇಶಗಳ ಭಾಷೆ-ಪದ್ಧತಿ-ವ್ಯವಹಾರಗಳ ಪರಿಚಯ ಚೆನ್ನಾಗಿ ಮಾಡಿಕೊಂಡಿದ್ದಾರೆ. ಹಾಗಾಗಿ ಅವರ ಕಾದಂಬರಿಗಳಲ್ಲಿ ಬೇರೆ-ಬೇರೆ ಪ್ರದೇಶದ ಕನ್ನಡದ ಆಡುನುಡಿಯ ಪ್ರಯೋಗಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ, 'ಸದಾನಂದ' ಕಾದಂಬರಿಯಲ್ಲಿ ಆರುವಿಧದ ಕನ್ನಡ ಆಡುಭಾಷೆಯ ಬಳಕೆಯಾಗಿದೆ.

ಬಾಲ್ಯದಿಂದ ಉತ್ತಮ ಸಾಹಿತ್ಯವನ್ನು ಆಶ್ಚರ್ಯದಿಂದ, ಆನಂದದಿಂದ ಓದಿದರೇ ಹೊರತು, ಬರೆಯುವ ವಿಚಾರ ಎಳ್ಳಷ್ಟೂ ಇಂದಿರಾ ಅವರಿಗೆ ಬಂದಿರಲಿಲ್ಲ. ಹಾಗೆ ನೋಡಿದರೆ, ತಾಯಿ ಬನಶಂಕರಮ್ಮನ ಏಳು ಜನ ಸೋದರಮಾವಂದಿರು ಕಲಾವಿದರು. ಕವಿಗಳು, ಸಂಸ್ಕೃತ ವಿದ್ವಾಂಸರು. ಅವರಲ್ಲಿ ಒಬ್ಬರಾದ 'ಹೊಯ್ಸಳ' ಮಕ್ಕಳ

ಸಾಹಿತ್ಯದಲ್ಲಿ ಹೆಸರಾದವರು. ಇನ್ನೊಬ್ಬ ಸೋದರವಾವ ಅನಂತಶರ್ಮ ಅವರಬಗ್ಗೆ ಇಂದಿರಾ ಅವರು 'ಆತ್ಮಸಖಿ' ಎನ್ನುವ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಪ್ರಸಿದ್ಧ ನಾಟಕಕಾರ ಡಾ. ಎಚ್.ಕೆ. ರಂಗನಾಥ್ ಇಂದಿರಾ ಅವರ ತಾಯಿಯ ತಂಗಿಯ ಮಗ. 'ಪ್ರಜಾವಾಣಿ' ಸಂಪಾದಕರಾಗಿದ್ದ ದಿವಂಗತ ಟಿ.ಎಸ್. ರಾಮಚಂದ್ರರಾವ್ ಇವರ ಸಹೋದರ. ಶಿವಮೊಗ್ಗೆಯಲ್ಲಿರುವ ಸಾಹಿತಿ–ವಿಮರ್ಶಕ ಡಾ. ಎ. ಎಸ್. ವೇಣುಗೋಪಾಲರಾವ್ ತಂದೆಯ ತಂಗಿ ಮಗ.

ಹೀಗಿದ್ದೂ ಇಂದಿರಾ ಅವರು ಬರೆಯಲು ಆರಂಭಿಸಿದ್ದು ತಮ್ಮ 44ನೇ ವಯಸ್ಸಿನಲ್ಲಿ ಮೊಮ್ಮಗಳು ಹುಟ್ಟಿದ ಮೇಲೆ, ಅದೂ ಆಕಸ್ಮಿಕವಾಗಿ ಎನ್ನುವುದು ಆಶ್ಚರ್ಯಕರ ಸಂಗತಿ. ಅವರ ಪ್ರತಿಭೆ ಅಲ್ಲಿಯವರೆಗೆ ಸುಪ್ತವಾಗಿ ಉಳಿದಿದ್ದೇ ಹೆಚ್ಚು.

ತ್ರಿವೇಣಿ ಮತ್ತು ಎಂ. ಕೆ. ಇಂದಿರಾ ಭೇಟಿಯಾದ ಘಟನೆ ಉಲ್ಲೇಖನಾರ್ಹ. 1945-46-47ರಲ್ಲಿ ಇಂದಿರಾ ಅವರ ಕುಟುಂಬ ಮಂಡ್ಯದಲ್ಲಿತ್ತು. ಇಂದಿರಾ ಹಾಗೂ ಎದುರುಮನೆ ತ್ರಿವೇಣಿ ಹಿಂದಿ ತರಗತಿಗೆ ಹೋಗುತ್ತಿದ್ದರು. ತ್ರಿವೇಣಿ ಆಗಿನ್ನೂ ಗ್ರ್ಯಾಜ್ಯುಯೇಟ್ ಆಗಿದ್ದು, ತಾಯಿಯ ಮನೆಯಲ್ಲಿಯೇ ಇದ್ದರು. ಒಂದು ದಿನ ಹಿಂದಿ ಮಾಸ್ತರರು ಪ್ರೇಮಚಂದರ 'ನಿರ್ಮಲಾ' ಕಾದಂಬರಿಯ ಕಥಾ ಸಾರಾಂಶವನ್ನು ಕನ್ನಡದಲ್ಲಿ ಆರು ಪುಟಗಳಲ್ಲಿ ಬರೆಯಲು ತಿಳಿಸಿದ್ದರು. ಉಳಿದವರೆಲ್ಲ ಪುಟಗಟ್ಟಲೆ ಬರೆದಿದ್ದರೆ ಇಂದಿರಾ ಚೊಕ್ಕವಾಗಿ ಆರು ಪುಟದಲ್ಲಿ ಬರೆದು ಮಾಸ್ತರರ ಮೆಚ್ಚಿಕೆ ಗಳಿಸಿದರು. ಅದನ್ನು ಓದಲು ತೆಗೆದುಕೊಂಡು ಹೋಗಿದ್ದ ತ್ರಿವೇಣಿ (ಆಗಿನ್ನೂ ಅನಸೂಯ), ಮಾರನೆಯ ದಿನವೆ ಇಂದಿರಾರವರ ಮನೆಗೇ ಬಂದು ಅವರ ಬರವಣಿಗೆಯನ್ನು ಮೆಚ್ಚಿ ಅದನ್ನು ಮುಂದುವರಿಸಲು ತಿಳಿಸಿದರು. ತ್ರಿವೇಣಿಗೆ ತಮ್ಮ ಮದುವೆಯಾದ ಮೇಲೆ, ಮತ್ತಷ್ಟು ಜೀವನದ ಅನುಭವ ಗಳಿಸಿ ಬರೆಯುವ ವಿಚಾರವಿತ್ತು. ಇಂದಿರಾ ತ್ರಿವೇಣಿಯ ಪ್ರೋತ್ಸಾಹದ ಅನಂತರವೂ ಬರೆಯುವ ಬಗ್ಗೆ ಮನಸ್ಸು ಮಾಡಲಿಲ್ಲ. ಮೊತ್ತಮೊದಲ ಬರಹಗಳಾದ ಆ ಎರಡು ಕತೆಗಳೂ ಮಕ್ಕಳ ಕೈಗೆ ಸಿಕ್ಕಿ ಹಾಳಾಗಿ ಹೋದುವು. ಮುಂದೆ ಪುನಃ ತ್ರಿವೇಣಿ ಮೈಸೂರಿನ ವಸ್ತು ಪ್ರದರ್ಶನದಲ್ಲಿ ಪತಿಯೊಂದಿಗೆ ಭೇಟಿಯಾದಾಗ–ಅವರಾಗಲೇ ಒಂದೆರಡು ಕಾದಂಬರಿಗಳನ್ನು ಬರೆದು ಹೆಸರು ಮಾಡಿದ್ದರು–ಆದರೆ, ಇಂದಿರಾ ಇನ್ನೂ ಸಂಸಾರದ ಜಂಜಾಟದಲ್ಲಿಯೇ ಮುಳುಗಿದ್ದರು. ಆಗಲೂ ತ್ರಿವೇಣಿ ಇಂದಿರಾಗೆ ಬರೆಯಲು ಒತ್ತಾಯಪೂರ್ವಕವಾಗಿ ತಿಳಿಸಿದರೂ ಬರೆಯುವ ಘಳಿಗೆ ಕೂಡಿ ಬಂದಿರಲಿಲ್ಲ.

1961-62ರ ಸುಮಾರಿಗೆ ತೀರ್ಥಹಳ್ಳಿಯ ಸನಿಹದ ಬಂಧುವೊಬ್ಬರು ಮನೆಗೆ ಬಂದಾಗ

ಬಾಲ್ಯದ ದಿನಗಳ, ಸೆಂಟರಿಪ್ಪರ ಬಗ್ಗೆ ನೆನಪಿಸಿಕೊಳ್ಳುತ್ತ ಕುಳಿತಾಗ ಇದ್ದಕ್ಕಿದ್ದಂತೆ ಇಂದಿರಾ ಅವರಿಗೆ ಆ ದಿನಗಳ, ವ್ಯಕ್ತಿಗಳ, ಘಟನೆಗಳ ಬಗ್ಗೆ ಬರೆಯುವ ಪ್ರೇರಣೆ ಯುಂಟಾಯಿತು. ಅದೇ ಗುಂಗಿನಲ್ಲಿ ಬರೆಯಲು ಕುಳಿತಾಗ ಎಲ್ಲ ಘಟನೆಗಳು, ವ್ಯಕ್ತಿಗಳು ಯಥಾವತ್ತಾಗಿ ಅಕ್ಷರದಲ್ಲಿ ಮೂಡಿದುವು. ಮೂರು ತಿಂಗಳಿನಲ್ಲಿ 'ತುಂಗ-ಭದ್ರ' ರೂಪುಗೊಂಡಿತು. ಆದರೂ ಅದನ್ನು ಪ್ರಕಟಿಸಲು ಹಿಂಜರಿಕೆ. ಇಂದಿರಾ ಅವರ ಪತಿ ಕೃಷ್ಣರಾವ್ ಅವರ ಅಣ್ಣನ ಮಗ ಶ್ರೀ ರಾಮಸ್ವಾಮಿ ಅದನ್ನು ಓದಿ, ಆಗ ಧಾರವಾಡ ಆಕಾಶವಾಣಿಯಲ್ಲಿದ್ದ ಡಾ. ಎಚ್.ಕೆ. ರಂಗನಾಥ್ ಅವರಿಗೆ ಪುಸ್ತಕದ ಬಗ್ಗೆ ತಿಳಿಸಿ, ಮನೋಹರ ಗ್ರಂಥಮಾಲೆಗೆ ಪ್ರಕಾಶನಕ್ಕಾಗಿ ಕಳಿಸಲು ತಿಳಿಸಿದರು. ಅವರಿಂದ ಶ್ರೀ ಕುರ್ತಕೋಟಿಯವರಿಗೆ ಹಸ್ತಪ್ರತಿ ದೊರೆತು, ಓದಿದ್ದೂ ಅಲ್ಲದೇ ಪ್ರಕಾಶನಕ್ಕೂ ಆಯ್ಕೆಯಾಯಿತು. ಆದರೆ ಇದ್ದ ಒಂದೇ ಹಸ್ತಪ್ರತಿ ಕಳೆದುಹೋಗಿ, ಪುನಃ ಹನ್ನೆರಡು ದಿನದಲ್ಲಿ ಇಂದಿರಾ ಒಂದು ಅಕ್ಷರವೂ ತಪ್ಪದಂತೆ ಬರೆದು ಮುಗಿಸಿದ್ದು ಪವಾಡವೇ ಸರಿ. 1963ರಲ್ಲಿ 'ತುಂಗಭದ್ರ' ಮೊದಲ ಮುದ್ರಣ ಕಂಡು, ಕನ್ನಡ ಸಾಹಿತ್ಯ ಕ್ಷಿತಿಜದಲ್ಲಿ ಹೊಸ ನಕ್ಷತ್ರದ ಉದಯವಾದದ್ದು ಇಂದು ಇತಿಹಾಸದ ಭಾಗ ವಾಗಿದೆ. 'ತುಂಗಭದ್ರ' ಇಂದಿರಾ ಅವರಿಗೆ ಸಾಕಷ್ಟು ಪ್ರಸಿದ್ಧಿಯನ್ನು ತಂದಿತು. ಉತ್ತಮ ಲೇಖಕಿಯರ ಸಾಲಿನಲ್ಲಿ ನಿಲ್ಲಿಸಿತು. ಅನಂತರ ಈ ಕಾದಂಬರಿ ಹಲವಾರು ಬಾರಿ ಮರು ಮುದ್ರಣಗೊಂಡಿದೆ. ಅವರ ಹೆಚ್ಚಿನ ಪುಸ್ತಕಗಳು ಮರು ಮುದ್ರಣ ಗೊಂಡಿವೆ.

ಮೊದಲ ಪುಸ್ತಕ ತುಂಗ-ಭದ್ರ ಹೊರಬಂದ ಅನಂತರ ಇಂದಿರಾ ಹಿಂದಿರುಗಿ ನೋಡಲಿಲ್ಲ. ಯಾವ ಪ್ರಕಾಶಕರನ್ನೂ ತಾವಾಗಿ ಹುಡುಕಿಕೊಂಡು ಹೋಗಲಿಲ್ಲ. ಪ್ರಕಾಶಕರು,ಪತ್ರಿಕೆಯವರೇ ಅವರನ್ನು ಹುಡುಕಿಕೊಂಡು ಬಂದರು. ಒತ್ತಾಯದಿಂದ ಬರೆಸಿದರು.ಮೊದಲು ಬೇಡಿಕೆ ಬಂದುದು ಉತ್ತರ ಕರ್ನಾಟಕದಿಂದ, ಅನಂತರ ಬೆಂಗಳೂರಿನಿಂದ.

ಸೋದರ ಟಿ.ಎಸ್.ರಾಮಚಂದ್ರರಾವ್, 'ಪ್ರಜಾವಾಣಿ' ಸಂಪಾದಕರಾಗಿದ್ದರೂ ಇಂದಿರಾರವರ ಕಾದಂಬರಿಯನ್ನು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹಾಕುವ ಮನಸ್ಸು ಮಾಡಿರಲಿಲ್ಲ. ಇಂದಿರಾ ಕೂಡ ಅವರನ್ನು ಕೇಳುವ ಗೋಜಿಗೇ ಹೋಗಿರಲಿಲ್ಲ. ಅವರ 'ಗೆಜ್ಜೆ ಪೂಜೆ' ಕಾದಂಬರಿಯ ಹಸ್ತ ಪ್ರತಿಯನ್ನು ಓದಿದವ ರೊಬ್ಬರು ಅದನ್ನು ಮೆಚ್ಚಿಕೊಂಡು, ರಾಮಚಂದ್ರರಾವ್ ಅವರನ್ನು 'ಪ್ರಜಾವಾಣಿ' ಯಲ್ಲಿ ಪ್ರಕಟಿಸುವಂತೆ ಒತ್ತಾಯಿಸಿದ ಮೇಲೆ ಅವರು ಅದನ್ನು ಓದಿ ತಮ್ಮ ಪತ್ರಿಕೆ ಯಲ್ಲಿ ಪ್ರಕಟಿಸಲು ನಿರ್ಧರಿಸಿದರು. 'ಗೆಜ್ಜೆಪೂಜೆ' ಓದುಗರ ಗಮನ ಸೂರೆಗೊಂಡಿತು.

ಮುಂದಿನ ಸಂಚಿಕೆಗಾಗಿ ಕಾತರದಿಂದ ಕಾಯುವಂತೆ ಮಾಡಿತು. 'ಗೆಜ್ಜೆಪೂಜೆ'ಯನ್ನು ಓದಿದ ಎಲ್ಲ ಓದುಗರು (ಇಂದಿರಾ ಅವರನ್ನು ಕಣ್ಣಾರೆ ನೋಡದಿದ್ದವರು) ಲೇಖಕಿ ಒಬ್ಬ ಸುಶಿಕ್ಷಿತ, ಆಧುನಿಕ ಯುವತಿ ಎಂದೇ ಬಹುಕಾಲ ಭಾವಿಸಿದ್ದರು. 'ಗೆಜ್ಜೆಪೂಜೆ' ಧಾರಾವಾಹಿ ಕೊನೆಗೊಂಡ ಕೆಲವು ದಿನಗಳಲ್ಲಿ 'ಟು-ಲೆಟ್' ಎನ್ನುವ ಹಾಸ್ಯ ಕಾದಂಬರಿ ಧಾರಾವಾಹಿಯಾಗಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಯಿತು. ಅದು, ಇಂದಿರಾ 'ಗೆಜ್ಜೆ ಪೂಜೆ' ಯಂತಹ ಗಂಭೀರ ವಿಷಯದ ದುಃಖಾಂತ ಕಾದಂಬರಿಯಲ್ಲದೆ 'ಟು-ಲೆಟ್' ನಂತಹ ಲಘು ಬರಹಗಳನ್ನೂ ಬರೆಯಬಲ್ಲರೆಂದು ಸಾಬೀತು ಪಡಿಸಿತು. ಈವರೆಗೆ ಅವರ ಸುಮಾರು 150 ಸಣ್ಣ ಕತೆಗಳು ಬೇರೆ-ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಈವರೆಗೆ ಇಂದಿರಾ 49 ಕಾದಂಬರಿಗಳನ್ನು 11 ಕಥಾಸಂಕಲಗಳನ್ನು ಪ್ರಕಟಿಸಿದ್ದಾರೆ. ಕಾದಂಬರಿಗಳಲ್ಲಿ ಜೀವನ ಚರಿತ್ರೆ, ವ್ಯಕ್ತಿ ಚಿತ್ರ, ಪ್ರವಾಸಕಥನಗಳೂ ಸೇರಿವೆ. ಕಥಾಸಂಕಲನದಲ್ಲಿ ನಗೆಬರಹಗಳೂ ಇವೆ. 'ತುಂಗಭದ್ರ' 1948ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಡಿಗ್ರಿ ತರಗತಿಗಳಿಗೆ ಪಠ್ಯ ಪುಸ್ತಕವಾಗಿತ್ತು. ಈ ಪುಸ್ತಕಕ್ಕೆ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತುಕೋಟಿಯವರು ವಿಮರ್ಶಾತ್ಮಕ ಮುನ್ನುಡಿಯನ್ನು ಬರೆದು ತಮ್ಮ ಮೆಚ್ಚಿಕೆ ವ್ಯಕ್ತಪಡಿಸಿದ್ದಾರೆ. ಇಂದಿರಾ ಅವರ ಮೊದಲ ಅಭಿಮಾನಿಯಾದ ತ್ರಿವೇಣಿಯವರ ಹೆಸರಿನಲ್ಲಿ ಲೇಖಕಿಯರ ಚೊಚ್ಚಲ ಕೃತಿಗೆ ಕೊಟ್ಟ ಬಹುಮಾನ (ತ್ರಿವೇಣಿ ಕಾದಂಬರಿ ಸ್ಪರ್ಧೆ)'ತುಂಗ–ಭದ್ರಕ್ಕೆ' ಲಭಿಸಿರುವುದು ವಿಧಿಯ ಆಟವೇ ಸರಿ. ಅವರ 'ಸದಾನಂದ', 'ನವರತ್ನ', 'ಫಣಿಯಮ್ಮ' ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 1975ರಲ್ಲಿ ಶ್ರೇಷ್ಠ ಲೇಖಕಿಯ ಪ್ರಶಸ್ತಿಯೂ ದೊರೆತಿದೆ. ಗೆಜ್ಜೆಪೂಜೆ, ಸದಾನಂದ, ಹೂ ಬಾಣ, ಫಣಿಯಮ್ಮ ಚಲನಚಿತ್ರಗಳಾಗಿವೆ. 'ಗೆಜ್ಜೆಪೂಜೆ'ಯಿಂದ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಅತ್ಯಂತ ಜನಪ್ರಿಯ ಚಿತ್ರವಾಗಿತ್ತು.

'ತುಂಗ-ಭದ್ರ', 'ಗೆಜ್ಜೆಪೂಜೆ' ತೆಲುಗಿಗೆ ಹಾಗೂ 'ಫಣಿಯಮ್ಮ' ಮಲೆಯಾಳಂ ಮತ್ತು ಇಂಗ್ಲೀಷಿಗೆ ಅನುವಾದಗೊಂಡಿವೆ. ಇಂದಿರಾ ಅವರಿಗೆ ಇಷ್ಟವಾದ ತಮ್ಮ ಕೃತಿಗಳೆಂದರೆ ತುಂಗ-ಭದ್ರ, ಸದಾನಂದ, ಫಣಿಯಮ್ಮ ಮತ್ತು ತೆಗ್ಗಿನ ಮನೆ ಸೀತೆ, ತಾವು ಕಂಡ, ಅನುಭವಿಸಿದ ಘಟನೆಗಳ ಆಧಾರದ ಮೇಲೆ, ತಮ್ಮ ಬಾಲ್ಯದ ಆತ್ಮೀಯ ಗೆಳೆಯರ, ಬಂಧುಗಳ ಜೀವನವನ್ನು ಆಧರಿಸಿ ಬರೆದ ಈ ಕೃತಿಗಳು ಅವರಿಗೆ ಪ್ರಿಯವಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅದನ್ನು ಬರೆಯುವಾಗ ಬಹುಶಃ ಅವರು ಮಾನಸಿಕವಾಗಿ ತಮ್ಮ ಬಾಲ್ಯವನ್ನು ಪುನಃ ಅನುಭವಿಸಿರಬೇಕು. ಮಲೆನಾಡಿನ

ಪ್ರಕೃತಿಯ ಸೊಬಗಿನ ನಡುವೆ ಲಂಗ-ಕುಪ್ಪಸ ತೊಟ್ಟ ಪುಟ್ಟ ಹುಡುಗಿಯಾಗಿ ಮರ ಹತ್ತುತ್ತ, ತೀರ್ಥಹಳ್ಳಿಯ ಕಲ್ಲುಸಾರ ದಾಟುತ್ತ ಆನಂದಪಟ್ಟಿರಬೇಕು.

ಅವರ ಒಂದು ಕಾದಂಬರಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬರುತ್ತಿದ್ದಾಗ ಬಂಧುಗಳೊಬ್ಬರ ಕೋಪಕ್ಕೆ ಈಡಾಗಿ ಇಂದಿರಾ ನ್ಯಾಯಾಲಯದ ಮೆಟ್ಟಿಲು ಹತ್ತುವ ಪ್ರಸಂಗ ಬಂದಿತ್ತು. ಆದರೆ, ಉಪಾಯವಾಗಿ ತಪ್ಪಿಸಲಾಯಿತು. ಇಂದಿರಾ ಕವನ ಮತ್ತು ನಾಟಕವನ್ನು ಮಾತ್ರ ಬರೆದಿಲ್ಲ. ಇಂಗ್ಲಿಷ್ ಭಾಷೆ ಅಷ್ಟಾಗಿ ಬರದಿರುವುದ ರಿಂದ ಇಂಗ್ಲಿಷ್ ಪುಸ್ತಕಗಳನ್ನು ಓದಿಯೇ ಇಲ್ಲ. ಆದ್ದರಿಂದ, ಅವರ ಕತೆಗಳು ಕಾದಂಬರಿಗಳು, ಅಪ್ಪಟ ಕನ್ನಡ ನೆಲದಿಂದ ಹುಟ್ಟಿದವು. ಕೃತಿಚೌರ್ಯ ಅವರಿಂದ ಬಲುದೂರ. ಇಂಗ್ಲೀಷ್ ಸಾಹಿತ್ಯದಿಂದ ಪ್ರಭಾವಿತರಾಗಿ ಬರೆಯಲು ಯಾವ ವಿಶ್ವ ವಿದ್ಯಾಲಯದಲ್ಲೂ ಅವರು ಅಧ್ಯಾಪಕಿ ಆಗಿಲ್ಲ. ಅಂತೆಯೇ ಯಾವುದೇ ಅಕಾಡೆಮಿಕ್ ಚರ್ಚೆಯಲ್ಲೂ ಭಾಗವಹಿಸಲಾರರು. ತುಂಗ-ಭದ್ರ, ಸದಾನಂದ, ಫಣಿಯಮ್ಮನಂತಹ ಮಹತ್ವದ ಕೃತಿಗಳನ್ನೂ ಯಾವುದೇ ಸಾಹಿತ್ಯ ಚರ್ಚೆಯಲ್ಲೂ ಉಲ್ಲೇಖ ಮಾಡದೆ ಇರುವುದು ಆಶ್ಚರ್ಯಕರ. ಬಹುಶಃ ಲೇಖಕಿಯೊಬ್ಬಳ ಕಾದಂಬರಿಗಳು ಎನ್ನುವ ಅಸಡ್ಡೆ ಧೋರಣೆಯ ಮನೋಭಾವ ಇದಕ್ಕೆ ಕಾರಣವಿರಬೇಕು.

ಮಲೆನಾಡಿನ ಜನರ ಆಡುಭಾಷೆಯ ಬಳಕೆ, ಆಕರ್ಷಕ ಕಥನ ಶೈಲಿ ಇಂದಿರಾ ಅವರ ಆಸ್ತಿ. ಬಾಲ್ಯದ ಕೇವಲ 17 ವರ್ಷಗಳಲ್ಲಿ ಕಂಡುಂಡ ಅನುಭವವೇ ಅವರ ಬರವಣಿಗೆಯ ಮೂಲ ಬಂಡವಾಳ. ಆ ಅನುಭವಗಳನ್ನು ಆಧರಿಸಿ ಬರೆದಾಗ ಇಂದಿರಾ ಸಹಜವಾಗುತ್ತಾರೆ, ಆತ್ಮೀಯರಾಗುತ್ತಾರೆ, ಯಶಸ್ವಿಯಾಗುತ್ತಾರೆ, ಅನುಭವದಿಂದ ದೂರವಾಗಿ ಕಲ್ಪನೆಯ ಬೆನ್ನೇರಿದಾಗ ಕೃತಕವಾಗುತ್ತಾರೆ, ಅಪರಿಚಿತ ರಾಗುತ್ತಾರೆ, ವಿಫಲರಾಗುತ್ತಾರೆ. ಮಲೆನಾಡಿನ ಜೀವನದ ಅನುಭವವೇ ಇಂದಿರಾ ಅವರ ದೊಡ್ಡ ಸಂಪತ್ತು. ಯಾವುದನ್ನೂ ವೈಭವೀಕರಿಸದೆ ನಿರ್ಲಿಪ್ತರಾಗಿ ಕಥೆ ಹೇಳುವ, ಪಾತ್ರಕ್ಕೆ ಜೀವ ತುಂಬುವ ಕಲೆ ಇಂದಿರಾರವರಿಗೆ ಸಿದ್ಧಿಸಿದೆ. ಫಣಿಯಮ್ಮನ ಗಂಡ ನಂಜುಂಡಯ್ಯ ಹಾವು ಕಡಿದು ಸತ್ತ ಘಟನೆಯನ್ನು ನಿರ್ವಹಿಸಿರುವ ರೀತಿ ಇದಕ್ಕೆ ಒಂದು ಉದಾಹರಣೆ. ಕೆಲವೇ ಕೆಲವು ಮಾತುಗಳಲ್ಲಿ ವ್ಯಕ್ತಿ ಚಿತ್ರಣವನ್ನು ಘಟನೆಗಳ ಚಿತ್ರವನ್ನು ಕಟ್ಟಿಕೊಡುವುದರಲ್ಲಿಯೂ ಇಂದಿರಾ ನಿಪುಣರು. ತುಂಗ-ಭದ್ರದ ನದಿಯಾಚೆಯ ಫಣಿಯಮ್ಮ ಹಾಗೂ ಶಂಕರಪ್ಪನವರ ಹೆಂಡತಿ ಗಂಗಮ್ಮ ಕಾದಂಬರಿಯಲ್ಲಿ ಸಣ್ಣ ಪಾತ್ರಗಳಾದರೂ ಬಹು ಸಮರ್ಥವಾಗಿ ಮೂಡಿ ಬಂದಿವೆ. ಕಥೆಯೊಂದಿಗೆ ಹೊರಗಿನ ಸಮಾಜದಲ್ಲಿ ನಡೆಯುತ್ತಿದ್ದ ಬದಲಾವಣೆಗಳನ್ನು ಸುತ್ತ ಮುತ್ತಲಿನ ಆಗು-ಹೋಗುಗಳನ್ನು ಇಂದಿರಾ ದಾಖಲಿಸುತ್ತ ಹೋಗುತ್ತಾರೆ. ಈ

ತಲೆಮಾರಿನ ಓದುಗರಿಗೆ ಅದರ ಐತಿಹಾಸಿಕ ಮಹತ್ವವಿದ್ದೇ ಇದೆ. ಮುಖ್ಯವಾಗಿ, ತಲ ತಲಾಂತರದಿಂದ ಸಮಾಜದಲ್ಲಿ ನಡೆದುಕೊಂಡು ಬಂದ ಅನೇಕ ಅನಿಷ್ಟ ಸಂಪ್ರದಾಯಗಳನ್ನು ಕಟುವಾಗಿ ಟೀಕಿಸುತ್ತಾರೆ. ಜಾತಿಪದ್ಧತಿ, ವಿಧವೆಯರ ದುಃಸ್ಥಿತಿ, ಬಾಲ್ಯವಿವಾಹದ ಅಪಾಯ, ವಿಧವಾ ವಿವಾಹ, ಹೆಣ್ಣು-ಗಂಡಿನ ನಡುವೆ ಸಮಾಜದ ತಾರತಮ್ಯ ಧೋರಣೆ ಇಂತಹ ವಿಷಯಗಳು ಅವರ ಕಾದಂಬರಿಗಳ ವಸ್ತುವಾಗಿರುವುದಲ್ಲದೆ ಅವು ಇಂದಿರಾ ಅವರ ಕ್ರಾಂತಿಕಾರಿ ಅಲ್ಲದಿದ್ದರೂ ಸುಧಾರಣಾವಾದಿ ಮನೋಭಾವಕ್ಕೆ ಸಾಕ್ಷಿಯಾಗುತ್ತವೆ. ಅವರ ಮಾನವೀಯ ಅನುಕಂಪ ಎದ್ದು ಕಾಣುತ್ತದೆ. ಚುರುಕಾದ ಸಂಭಾಷಣೆಗಳು, ಅದರಲ್ಲಿರುವ ಹಾಸ್ಯದ ಲೇಪ ಅವರ ಬರವಣಿಗೆಯ ವಿಶೇಷತೆ. ಕೀರ್ತಿನಾಥ ಕುರ್ತುಕೋಟಿಯವರು ತುಂಗ-ಭದ್ರದ ತಮ್ಮ ಮುನ್ನುಡಿಯಲ್ಲಿ, "ಈ ಕಾದಂಬರಿಯ ತುಂಬೆಲ್ಲ ಹೆಣ್ಣು ಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನದರ್ಶನ ಹರಡಿದೆ" ಎಂದಿರುವುದು ಅಕ್ಷರಶಃ ಸತ್ಯ.

46 ವರ್ಷಗಳ ಅವಧಿಯಲ್ಲಿ 60 ಪುಸ್ತಕಗಳನ್ನು ಪ್ರಕಟಿಸಿರುವ ಇಂದಿರಾ ಇತ್ತೀಚೆಗೆ ಏನೂ ಬರೆದಿಲ್ಲ. ವಯಸ್ಸಿನೊಂದಿಗೆ ಬಂದ ತೊಂದರೆಗಳಲ್ಲದೆ ಮಾನವ ನಿರ್ಮಿತ ತೊಂದರೆಗಳೂ ಸೇರಿಕೊಂಡು ಬರವಣಿಗೆಯ ಕಾರ್ಯ ನಿಂತು ಹೋಗಿದೆ. ಆತ್ಮಚರಿತ್ರೆ 'ಬಿಂದು' 120 ಪುಟಗಳಷ್ಟು ಮುಂದುವರಿದಿದ್ದು, ಹಲವಾರು ಕಾರಣಗಳಿಂದ ಪೂರ್ಣಗೊಳ್ಳದೆ ನಿಂತುಹೋಗಿದೆ. ಇಂದಿರಾ ಅವರಿಂದ ಅದನ್ನು ನಾವು ಪೂರ್ಣರೂಪದಲ್ಲಿ ಪಡೆಯಲು ವಿಫಲರಾದಲ್ಲಿ, ಹಿಂದಿನ ತಲೆಮಾರಿನ ಲೇಖಕಿಯ ವಿಶಿಷ್ಟ, ಅಮೂಲ್ಯ ಅನುಭವ ಸಂಪತ್ತು ನಮಗೆ ದೊರಕದೆ ಹೋಗುತ್ತದೆ. ಲೇಖಕಿಯರ ಸಾಹಿತ್ಯ ಆ ಮಟ್ಟಿಗೆ ಬಡವಾಗುತ್ತದೆ. ಆದ್ದರಿಂದ ಅವರ ಆ ಕೃತಿ ಆದಷ್ಟು ಬೇಗ ಕನ್ನಡಿಗರ ಕೈ ಸೇರುವಂತಾಗಲಿ ಎನ್ನುವುದು ನಮ್ಮೆಲ್ಲರ ಹಾರೈಕೆ.

ನನ್ನ ಮೆಚ್ಚಿನ ಲೇಖಕಿ ಎಂ.ಕೆ. ಇಂದಿರಾ

○

○

○ ಡಾ. ಪು. ತಿ. ನರಸಿಂಹಾಚಾರ್

ಶ್ರೀಮತಿ ಎಂ.ಕೆ. ಇಂದಿರಾ ಅವರಿಗೆ ಒಂದು ಅಭಿನಂದನ ಉತ್ಸವವನ್ನು ಏರ್ಪಡಿಸಿ ಒಂದು ಸಂಭಾವನಾ ಗ್ರಂಥವನ್ನು ಸಮರ್ಪಿಸಬೇಕೆಂದು ಮಹಿಳಾ ವೃಂದ ಉತ್ಸಾಹ ಸಂಪನ್ನವಾಗಿರುವುದು ತಿಳಿದು ನನಗೆ ತುಂಬಾ ಹರ್ಷವಾಗಿದೆ. ಶ್ರೀಮತಿ ಇಂದಿರಾ ಅವರು ಅಭಿನಂದನೀಯರು. ಅವರ ಸಾಹಿತ್ಯ ಕನ್ನಡ ಗದ್ಯಕ್ಕೆ ಭೂಷಣ ಪ್ರಾಯವಾಗಿದೆ. ದಿವಂಗತ ಶ್ರೀಮಾನ್ ಕೀರ್ತಿಶೇಷ ಎಂ. ಎಸ್. ಪುಟ್ಟಣ್ಣನವರನ್ನು ಬಿಟ್ಟರೆ ಅಷ್ಟೆ ಮೋಹಕವಾಗಿ, ಅಂಥದೇ ಸೊಗಡುಳ್ಳ, ಆದರಂಥದೇ ಐನಿಯಾದ ಕನ್ನಡವನ್ನು ನಾವು ಕಾಣುವುದು ಶ್ರೀಮತಿಯವರ ಕಾದಂಬರಿಗಳಲ್ಲಿ. ಇವರ "ತೆಗ್ಗಿನ ಮನೆ ಸೀತೆ"ಯನ್ನು ಓದಿದಾಗ ನನ್ನ ಮನಸ್ಸು ಪ್ರಫುಲ್ಲವಾಯಿತು, ಹೃದಯ ತಣಿಯಿತು. ಎಂಥ ದಿಟ್ಟ ನ್ಯಾಯ ಪರಳಾದ ಆದರೆ ಕರುಣಾಂತರಂಗದ ಅತ್ತೆ–ಅತ್ತೆಗೆ ತಕ್ಕ ಸೊಸೆ. ಸೊಸೆ ಒಳ್ಳೆಯ ಋಜುಗಾತಿ, ಶುಚಿ ಮನಸ್ಸಿನವಳು. ಧೈರ್ಯವಿಲ್ಲದಿದ್ದರೆ ಶುಚಿ ಮನಸ್ಸನ್ನು ಉಳಿಸಿಕೊಳ್ಳುವುದು ಕಷ್ಟ. ಈ ಸಣ್ಣ ಕಾದಂಬರಿಯ ಈ ಪಾತ್ರಗಳ ಸೊಗಡನ್ನು ಓದಿಯೇ ತಿಳಿಯಬೇಕು. ಹಾಗೆಯೇ "ಫಣಿಯಮ್ಮ" ಎಂಬ ಕಥೆಯೂ ಕೂಡ ಓದಿಗೆ ಬಹು ಒಳ್ಳೆಯ ಪುಸ್ತಕ. ಆ ಫಣಿಯಮ್ಮ ನಗುನಗುತಾ ಎಂಥ ದಾರುಣ ಕಷ್ಟಗಳನ್ನು ಸಹಿಸಿಕೊಂಡು ಉಪಕಾರ ಶೀಲಳಾಗಿ ಎಲ್ಲರನ್ನೂ ಸಂತೈಸುತ್ತಾ ಎಂಥ ಯೋಗಿಯ ಬದುಕನ್ನು ನಡೆಸಿದಳು ! ಈ ಪಾತ್ರಗಳ ಮರ್ಮವನ್ನು ಅರಿತು ಸಹೃದಯದ ಮನಸ್ಸು 'ಅಸ್ತು ಅಸ್ತು' ಅನ್ನುವಂತೆ ಬರೆಯುವುದು ಸಾಮಾನ್ಯವಲ್ಲ. ಕನ್ನಡವೋ, ಎಂಥ ದೇಸೀ ಕನ್ನಡ ! ಈ ಮುಖದ ವರ್ಣನೆಯನ್ನು ಕೇಳಿರಿ : "ತಳಿರು ಮೀಸೆ ಅವನ

ತುಟಿಗಳಿಗೆ ತೋರಣವಾಗಿತ್ತು." ಅಪೂರ್ವವಾದ ವರ್ಣನೆ. "ಅವರ ತಪ್ಪನ್ನು ಅವರ ಮುಖಕ್ಕೆ ತಟ್ಟಿ ಕಳಿಸುತ್ತಿದ್ದಳು" ಕನ್ನಡದ ದೇಸಿ ಎಂದರೆ ಇದಲ್ಲವೇ ? ಇಂಥ ಎಷ್ಟೊ ಮಾತುಗಳು ಶ್ರೀಮತಿಯವರ ಬರಹಗಳಲ್ಲಿ ಸುಗ್ಗಾಡುತ್ತವೆ. ಇವರ ಬಿಡಿ ಲೇಖನ ಗಳನ್ನು ನಾನು "ಯಾತ್ರಿಕ" ಎಂಬ ಪತ್ರಿಕೆಯಲ್ಲಿ ಓದಿ ಹರ್ಷಿತನಾಗಿದ್ದೇನೆ.

ಶ್ರೀಮತಿಯವರ ಪರಿಚಯ ನನಗೆ ಮೊದಲು ಆದದ್ದು ಮಾನಸ ಗಂಗೋತ್ರಿ ಯಲ್ಲಿ ಜರುಗಿದ ಒಂದು ಸಾಹಿತಿಗಳ ಸಂತೋಷ ಕೂಟದಲ್ಲಿ. ಆಗ ಅವರಲ್ಲಿ ನಾನು ಯಾವ ವಿಶಿಷ್ಟ ಶಕ್ತಿಯನ್ನೂ ಕಂಡಿರಲಿಲ್ಲ. "ತೆಗ್ಗಿನಮನೆ ಸೀತೆ" ಓದಿದ ಮೇಲೆ ನನ್ನ ಕಣ್ಣು ತೆರೆಯಿತು. ಶ್ರೀಮತಿಯವರೂ ನನ್ನ ಮೇಲೆ ವಿಶ್ವಾಸ ತೋರಿದ್ದಾರೆ. ಇವರ ಕಾದಂಬರಿಗಳು ಮತ್ತು ಬರಹಗಳ ಮೇಲೆ ಒಂದು ವಿಶ್ಲೇಷಣೆ ನಡೆಯಬೇಕೆಂದು ತೋರುತ್ತದೆ. ವಿಮರ್ಶೆಗೆ ಹೆಸರಾದವರು ಈ ಕೆಲಸ ಕೈಗೊಳ್ಳುವರೆಂದು ಆಶಿಸು ತ್ತೇನೆ. ಒಂದು ವಿಶ್ವವಿದ್ಯಾಲಯವಾದರೂ ಇವರಿಗೆ ಒಂದು ಗೌರವ ಡಾಕ್ಟರೇಟ್ ಕೊಟ್ಟೀತು ಎಂದು ನನ್ನ ಬಯಕೆ.

ಶ್ರೀಮತಿಯವರು ಆರೋಗ್ಯ ಭಾಗ್ಯದಿಂದ ಕೂಡಿ ನಮ್ಮ ಜತೆಯಲ್ಲಿ ಕೀರ್ತಿಶ್ರೀ ಗಳೊಡನೆ ಸಂಪನ್ನರಾಗಿ ಚಿರಕಾಲವಿರಲೆಂದು ಹಾರೈಸುತ್ತೇನೆ. ಶ್ರೀಮತಿ ಅವರಿಗೆ ನನ್ನ ಹಾರ್ದಿಕ ಅಭಿನಂದನಗಳು ಹಾಗೂ ಅಭಿವಂದನೆಗಳು.

ಏನು ವಿಚಿತ್ರ ಸಂಪ್ರದಾಯ ನಮ್ಮದು ? ಗಂಡಸು ಹೊಲತಿಯನ್ನು ಮುಟ್ಟಿ ಬಂದರೂ ಸ್ನಾನ ಮಾಡಿ, ಜನಿವಾರ ಬದಲಾಯಿಸಿದರೆ ಶುದ್ಧ. ಹೆಂಗಸು ಅಪ್ಪಿ ತಪ್ಪಿ ಪರಪುರುಷನನ್ನು ನೋಡಿದರೆ ಆಕೆ ಕುಲಟೆ ! ಭಗವಂತ ಏನು ನಿನ್ನ ವಿಚಿತ್ರ ಲೀಲೆ ?

(ಫಣಿಯಮ್ಮ ಪುಟ 83)

ಎಂ.ಕೆ. ಇಂದಿರಾ: ಜೀವನ ದೃಷ್ಟಿ

○

○

○ ಎಚ್.ಎಸ್. ಪಾರ್ವತಿ.

ಸಾಹಿತ್ಯ ರಚನೆಗೆ ಆವಶ್ಯಕವಾದ ಗುಣಗಳೇನು ? ಎನ್ನುವ ಪ್ರಶ್ನೆಗೆ ಸಾಮಾನ್ಯವಾಗಿ ಬರುವ ಉತ್ತರ, ಉನ್ನತ ಶಿಕ್ಷಣ, ತಾನು ಬರೆಯುವ ಭಾಷೆಯಲ್ಲಿ ಪಾಂಡಿತ್ಯ, ನಾಲ್ಕಾರು ಭಾಷೆಗಳ ಹಾಗೂ ಸಾಹಿತ್ಯದ ಪರಿಚಯ, ಅಪಾರವಾದ ಲೋಕಾನುಭವ, ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸಬಲ್ಲ, ಅದರ ಆಗುಹೋಗುಗಳ ಬಗ್ಗೆ ಮಥನ ಮಾಡಬಲ್ಲ ವಿಚಾರವಂತಿಕೆ ಮತ್ತು ಹೃದಯವಂತಿಕೆ, ಸಾಹಿತ್ಯಿಕ ಚರ್ಚೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಭಾಗವಹಿಸಬಲ್ಲ ಸಾಮರ್ಥ್ಯ, ಹೀಗೆ ಹಲವು ಆವಶ್ಯಕ ಗುಣಗಳನ್ನು ಪಟ್ಟಿ ಮಾಡಬಹುದು. ಈ ಗುಣಗಳನ್ನೆಲ್ಲ ಬೆಳೆಸಿಕೊಂಡಾಗ ಒಬ್ಬ ಸಮರ್ಥ ಲೇಖಕನಿಂದ ಶ್ರೇಷ್ಠ ಸಾಹಿತ್ಯ ನಿರ್ಮಾಣವಾಗುತ್ತದೆ ಎನ್ನುವುದೂ ನಿಜವೇ. ಆದರೆ ಇವುಗಳಲ್ಲಿ ಬಹಳಷ್ಟು ಗುಣಗಳು ಇಲ್ಲದಿರುವಾಗಲೂ ಅಪಾರ ಜೀವನಾನುಭವ, ಅಸಾಧಾರಣ ನೆನಪಿನಶಕ್ತಿ, ಸರಳ ಸುಂದರ ಭಾಷೆಯಲ್ಲಿ ಆಕರ್ಷಕವಾಗಿ ಕಥೆ ಹೇಳುವ ಶಕ್ತಿ ಇವುಗಳನ್ನಷ್ಟೇ ಬಂಡವಾಳವನ್ನಾಗಿಟ್ಟುಕೊಂಡು ಯಶಸ್ವಿ ಲೇಖಕಿ ಎನ್ನಿಸಿ ಕೊಂಡಿರುವ ಅಪರೂಪದ ವ್ಯಕ್ತಿ ಶ್ರೀಮತಿ ಎಂ.ಕೆ. ಇಂದಿರಾ.

I

ಇಂದಿರಾ ಅವರ ಮೊದಲ ಪುಸ್ತಕ 'ತುಂಗಭದ್ರಾ' ಪ್ರಕಟವಾದದ್ದೇ ಆಕೆ ನಲವತ್ತನಾಲ್ಕನೆಯ ವಯಸ್ಸಿನಲ್ಲಿದ್ದಾಗ ಎನ್ನುವುದೂ ಕನ್ನಡ ಕಾದಂಬರಿಪ್ರಿಯರಿಗೆಲ್ಲ ಈಗಾಗಲೇ ತಿಳಿದಿರುವ ವಿಷಯ. ಆದರೆ ಅದುವರೆಗೆ ಅವರು ಏನೂ ಬರೆದೇ ಇರಲಿಲ್ಲವೇ ? ಬರೆಯಬೇಕೆಂದೂ ಅವರಿಗೆ ಅನ್ನಿಸಿಯೇ ಇರಲಿಲ್ಲವೇ ?

ಸಮಷ್ಟಿ ಕುಟುಂಬದಲ್ಲಿ ಬೆಳೆದ ಇಂದಿರಾ ಚಿಕ್ಕ ವಯಸ್ಸಿನಲ್ಲಿಯೇ ತನಗಿಂತ ಕಿರಿಯರನ್ನೆಲ್ಲ ಸುತ್ತಲೂ ಕೂರಿಸಿಕೊಂಡು ಸೊಗಸಾಗಿ ಕಥೆ ಹೇಳುತ್ತಿದ್ದರಂತೆ. ಅಲ್ಲದೆ, ಚಿಕ್ಕಂದಿನಿಂದಲೂ ನೆನಪಿನ ಶಕ್ತಿ ಚುರುಕಾಗಿದ್ದ ಇಂದಿರಾ ಅವರಿಗೆ ಊರಿಗೆ ಬರುತ್ತಿದ್ದ ಯಾವುದೇ ಕಂಪನಿ ನಾಟಕ ನೋಡಲಿ, ಹರಿಕಥೆ ಕೇಳಲಿ ಅದನ್ನು ಚಾಚೂ ತಪ್ಪದೆ ಸ್ವಾರಸ್ಯವಾಗಿ ಪುನರುಚ್ಚರಿಸುವ ಶಕ್ತಿಯೂ ಸಾಧಿಸಿತ್ತು. ಜೊತೆಗೆ ನರಸಿಂಹರಾಜಪುರದ ಮಿಡಲ್ ಸ್ಕೂಲಿನಲ್ಲಿ ಓದುತ್ತಿರುವಾಗಲೇ ಅಲ್ಲಿನ ಲೈಬ್ರರಿಯಲ್ಲಿ ದೊರೆಯುತ್ತಿದ್ದ ಎಲ್ಲ ಕನ್ನಡ ಪುಸ್ತಕಗಳನ್ನು ಮನೆಗೆ ತಂದು ಓದುವ ಅಭ್ಯಾಸ ಬೆಳೆಸಿಕೊಂಡಿದ್ದರು. ಆಗ ಹೆಚ್ಚಾಗಿ ದೊರೆಯುತ್ತಿದ್ದುದು ಬಂಕಿಮಚಂದ್ರ, ಶರಚ್ಚಂದ್ರರ ಬಂಗಾಳಿ ಕಾದಂಬರಿಗಳ ಕನ್ನಡ ಅನುವಾದ. ಇದಲ್ಲದೆ ತಾಯಿ, ಅಜ್ಜಿ (ತಾಯಿಯ ತಂದೆ) ಹೇಳುತ್ತಿದ್ದ ಕಥೆಗಳನ್ನೆಲ್ಲ ಕುತೂಹಲದಿಂದ ಕೇಳುತ್ತಿದ್ದರು. ಹೀಗಾಗಿ ಚಿಕ್ಕ ವಯಸ್ಸಿನಲ್ಲೇ ಇಂದಿರಾಗೆ ಕಥೆಗಳೆಂದರೆ ಅಪಾರ ಆಸಕ್ತಿ.

ಇಂದಿರಾ ಬೆಳೆದ ಹುಡುಗಿ ಆಗುವ ಹೊತ್ತಿಗೆ ಕಥಾಂಜಲಿ (ಅ.ನ.ಕೃ. ಸಂಪಾದಿತ), ಕಥಾವಳಿ, ವಿಕಟ ವಿನೋದಿನಿ ಮುಂತಾದ ಸಣ್ಣ ಕಥೆಗಳಿಗೇ ಮೀಸಲಾದ ಪತ್ರಿಕೆಗಳು ಪ್ರಕಟವಾಗುತ್ತಿದ್ದವು. 'ತಾಯಿನಾಡು' 'ಪ್ರಜಾಮತ'ಗಳಲ್ಲೂ ಕತೆಗಳು ಅಚ್ಚಾಗುತ್ತಿದ್ದವು. ಇವುಗಳನ್ನೆಲ್ಲಾ ಇಂದಿರಾ ತಪ್ಪದೆ ಓದುತ್ತಿದ್ದರು. ಯಾವುದೇ ವಿಚಾರವನ್ನು ಅವರು ಸ್ವಾರಸ್ಯವಾಗಿ ಹೇಳುತ್ತಿದ್ದುದನ್ನು ಕೇಳಿದ ಅವರ ಸಮೀಪ ಬಂಧುಗಳು, ಅದನ್ನೇ ಬರೆಯುವಂತೆ ಒತ್ತಾಯ ಮಾಡುತ್ತಿದ್ದರು. ಹೀಗಾಗಿ ತಮ್ಮ 24ನೆಯ ವಯಸ್ಸಿನಲ್ಲಿ 'ಬೂರಾ ಸಕ್ಕರೆ' ಎನ್ನುವ ಕಥೆಯೊಂದನ್ನು ಬರೆದು 'ವಿಶ್ವಕಲಾ' ಎನ್ನುವ ಹಸ್ತಪತ್ರಿಕೆಯಲ್ಲಿ ಪ್ರಕಟಿಸಿದ್ದರು. 1947ರಲ್ಲಿ (ಅವರಿಗೆ ಸುಮಾರು 30 ವರ್ಷವಾಗಿದ್ದಾಗ) 'ನವರತ್ನ' ಎನ್ನುವ ಕತೆಯನ್ನು ಬರೆದರು. ಬಹುಶಃ ಇದೇ ಇಂದಿರಾ ಅವರ ಮೊದಲ ಪ್ರಕಟಿತ ಕಥೆ ಎನ್ನಬಹುದು. ಕಾಫಿ ಎಸ್ಟೇಟಿಗೆ ಸಂಬಂಧಿಸಿದ ಈ ಕತೆ 'ಪಶ್ಚಿಮ ಕರಾವಳಿ' ಎನ್ನುವ ಪತ್ರಿಕೆಯಲ್ಲಿ ಪ್ರಕಟವಾಯಿತು. ಇದೇ ಪತ್ರಿಕೆಗಾಗಿ 'ಹಳ್ಳಿಗಾತಿ' ಎನ್ನುವ ಕತೆಯನ್ನೂ ಬರೆದರು.

ಈ ಮಧ್ಯೆ ಇಂದಿರಾ ಅವರ ಪತಿ ಕೃಷ್ಣರಾವ್ ಅವರು ನೌಕರಿಯ ಪ್ರಯುಕ್ತ ಮಂಡ್ಯಕ್ಕೆ ಬಂದರು. ಇಂದಿರಾ ಅಲ್ಲಿ ನಡೆಯುತ್ತಿದ್ದ 'ಹಿಂದೀ ಪ್ರವೇಶಿಕಾ' ತರಗತಿಗೆ ಸೇರಿದರು. ಆಗ ಮಂಡ್ಯದಲ್ಲೇ ಇದ್ದ ಅನಸೂಯಾ (ಮುಂದೆ 'ತ್ರಿವೇಣಿ' ಎಂದು ಪ್ರಸಿದ್ಧರಾದವರು) ಇಂದಿರಾ ಜೊತೆ ಹಿಂದೀ ತರಗತಿಯಲ್ಲಿ ಓದುತ್ತಿದ್ದರು. ಒಮ್ಮೆ ಅಧ್ಯಾಪಕರು ಪ್ರೇಮಚಂದರ 'ನಿರ್ಮಲಾ' ಕಾದಂಬರಿಯನ್ನು ಆರೇಳು ಪುಟಗಳಷ್ಟು ಸಂಕ್ಷಿಪ್ತವಾಗಿ ಕನ್ನಡದಲ್ಲಿ ಬರೆಯುವಂತೆ ತಿಳಿಸಿದರು. ಇಂದಿರಾ ಅವರ

ಬರಹ ಅಧ್ಯಾಪಕರನ್ನು ಬಹಳವಾಗಿ ಮೆಚ್ಚಿಸಿತು. ಅವರ ಹೊಗಳಿಕೆಯನ್ನು ಕೇಳಿ ತ್ರಿವೇಣಿಯವರೂ ಆ ಲೇಖನವನ್ನು ಓದಿ, ' ಇಂದಿರಮ್ಮ ನಿನಗೆ ಬರೆಯುವ ಶಕ್ತಿ ಇದೆ. ಏನಾದರೂ ಬರೆದು ಪ್ರಕಟಣೆಗೆ ಕಳುಹಿಸಿ ' ಎಂದರು. ಆದರೆ ಆಗ ಸಂಸಾರ ತಾಪತ್ರಯಗಳಿಂದಾಗಿ ಅವರಿಗೆ ಏಕಾಗ್ರಚಿತ್ತದಿಂದ ಬರೆಯುವುದು ಸಾಧ್ಯವಾಗಲೇ ಇಲ್ಲ. " ತ್ರಿವೇಣಿ ಬದುಕಿರುವವರೆಗೆ ನನ್ನ ಯಾವ ಕಾದಂಬರಿಯೂ ಪ್ರಕಟವಾಗಲಿಲ್ಲ. " ಎಂದು ಇಂದಿರಾ ತಮ್ಮ ಲೇಖನ ಸಾಮರ್ಥ್ಯವನ್ನು ಗುರುತಿಸಿದ ತ್ರಿವೇಣಿಯವರನ್ನು ಈಗಲೂ ವಿಷಾದದಿಂದ ಜ್ಞಾಪಿಸಿಕೊಳ್ಳುತ್ತಾರೆ. ಆದರೂ ಇಂದಿರಾ ಬರೆಯುವುದನ್ನೇನೂ ಪೂರ್ತಿಯಾಗಿ ನಿಲ್ಲಿಸಿರಲಿಲ್ಲ. ' ಅಭಿನಯ ' ಎನ್ನುವ ಕಾದಂಬರಿಯನ್ನು ಬರೆದು ಇಟ್ಟುಕೊಂಡಿದ್ದರು. ' ತುಂಗ-ಭದ್ರಾ ' ಪ್ರಕಟವಾದ ನಂತರ ಇದೇ ಕಾದಂಬರಿ ' ಹೆಣ್ಣಿನ ಆಕಾಂಕ್ಷೆ ' ಎನ್ನುವ ಹೆಸರಿನಲ್ಲಿ ಪ್ರಕಟವಾಯಿತು.

ಹೀಗೆ ಬರೆಯುವ ಶಕ್ತಿ ಇದ್ದರೂ ಬರೆಯುವುದಕ್ಕೆ ಬೇಕಾದ ಪ್ರೇರಣೆ. ಸರಿಯಾದ ಪ್ರೋತ್ಸಾಹ ದಕ್ಕದೆ ಇಂದಿರಾ ಎಲೆಮರೆಯಕಾಯಿಯಾಗಿಯೇ ಉಳಿದು ಬಿಡುತ್ತಿದ್ದರೋ ಏನೋ ! ಆದರೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಎಂ.ಕೆ. ಇಂದಿರಾ ಅವರ ಸ್ಥಾನ ಪೂರ್ವ ನಿಶ್ಚಿತವಾಗಿತ್ತೆಂದೇ ತೋರುತ್ತದೆ. ಅಂತೆಯೆ ಅನೇಕ ವರ್ಷ ಬನಾರಸ್ಸಿನಲ್ಲಿದ್ದ ರಾಧಮ್ಮ ಎಂಬ ಇಂದಿರಾ ಅವರ ಊರಿನ ಮಹಿಳೆ ಬೆಂಗಳೂರಿಗೆ ಬಂದು ಇಂದಿರಾ ಅವರನ್ನು ಭೇಟಿಯಾದರು. ಮಾತಿನ ಮಧ್ಯೆ ಬಹಳ ಹಿಂದೆ ಊರಿನಲ್ಲಿ ನಡೆದ ಘಟನೆಯ ಬಗ್ಗೆ ರಾಧಮ್ಮ ವಿವರಿಸಿದರು. ಅದನ್ನು ಕೇಳಿದ ಇಂದಿರಾ ಅವರಿಗೆ ಆ ಕಥೆಯನ್ನು ಕಾದಂಬರೀ ರೂಪದಲ್ಲಿ ಬರೆಯಲೇ ಬೇಕೆಂಬ ಮನಸ್ಸಾಯಿತು. ನಡೆದ ಘಟನೆಗೆ ಕಲ್ಪನೆಯ ರೆಕ್ಕೆ ಪುಕ್ಕ ಸೇರಿಕೊಂಡಿತು, ' ತುಂಗ-ಭದ್ರಾ ' ಕಾದಂಬರಿ ರೂಪು ತಾಳಿತು. ಮಲೆನಾಡಿನ ಹಿನ್ನೆಲೆಯಲ್ಲಿ ಮನನೀಯವಾಗಿ ಮೂಡಿ ಬಂದ ಕಾದಂಬರಿಯನ್ನು ಕನ್ನಡ ಸಾಹಿತ್ಯ ಪ್ರಪಂಚ ಆದರದಿಂದ ಸ್ವಾಗತಿಸಿತು. ಕನ್ನಡ ಕಾದಂಬರೀ ದಿಗಂತದಲ್ಲಿ ಎಂ.ಕೆ. ಇಂದಿರಾ ಪ್ರಕಾಶ ಮಾನವಾಗಿ ಮೂಡಿಬಂದರು.

ಇಂದಿರಾ ಅವರ ಯಶಸ್ಸಿಗೆ ಕಾರಣವಾದ ಅಂಶಗಳಲ್ಲಿ ಅವರು ಬಳಸುವ ಭಾಷೆಯದೂ ಬಹು ಮುಖ್ಯ ಪಾತ್ರವಿದೆ. ಅವರ ಭಾಷೆಯಲ್ಲಿ ಮಲೆನಾಡಿನ ಸೊಗಡು ತುಂಬಿದೆ. ಅವರು ಧಾರಾಳವಾಗಿ ಬಳಸುವ ಜನಪದ ಗಾದೆಗಳೂ ಆ ಭಾಷೆಯ ಆಕರ್ಷಣೆಯನ್ನು ಹೆಚ್ಚಿವೆ. ನರಸಿಂಹರಾಜಪುರದ ಸುತ್ತಮುತ್ತಲ ಆಡು

ಭಾಷೆಯನ್ನು ಇಂದಿರಾ ಚೆನ್ನಾಗಿ ಬಳಸಿಕೊಂಡಿದ್ದಾರೆ. ' ಸದಾನಂದ ' ಕಾದಂಬರಿ ಒಂದರಲ್ಲೇ ಆರು ರೀತಿಯ ಆಡುಭಾಷೆಯನ್ನು ಅವರು ಉಪಯೋಗಿಸಿದ್ದಾರೆ. 'ಇದು ನಿಮಗೆ ಸಾಧ್ಯವಾದದ್ದು ಹೇಗೆ ?' ಎನ್ನುವ ಪ್ರಶ್ನೆಗೆ ಇಂದಿರಾ ಹೇಳುತ್ತಾರೆ. ' ಕಂಡದ್ದು, ಕೇಳಿದ್ದು, ಅನುಭವಿಸಿದ್ದು ತಲೆಯಲ್ಲಿ ಬಲವಾಗಿ ಕೂತು ಬಿಟ್ಟಿದೆ. ವಿಷಯದೊಂದಿಗೆ ಭಾಷೆಯೂ ನೆನಪಿನಲ್ಲಿ ಉಳಿದು ಬಂದಿದೆ. ಮಲೆನಾಡಿನ ಗ್ರಾಮಾಂತರ ಪ್ರದೇಶದ ಆಡುಭಾಷೆಗಳನ್ನು ಬಳಸಿಕೊಂಡು ಒಂದು ಕಾದಂಬರಿ ಬರೆಯಬೇಕೆಂಬ ಉದ್ದೇಶವಿದೆ.'

ಎಂ.ಕೆ. ಇಂದಿರಾ ಅವರನ್ನು ನೋಡಿದೊಡನೆ ಯಾರೇ ಆದರೂ ಅವರನ್ನು ತುಂಬಾ ಸಂಪ್ರದಾಯವಾದಿ ಎಂದೇ ಭಾವಿಸಬಹುದು. ಆದರೆ ಅವರ ಕೆಲವು ಕಾದಂಬರಿಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳಲ್ಲಿ ಸಂಪ್ರದಾಯಕ್ಕೆ ವಿರುದ್ಧ ವಾದ ಭಾವನೆಗಳೇ ಕಂಡುಬರುತ್ತವೆ. ಆದರಲ್ಲೂ ಅವರ ' ತಪೋವನದಲ್ಲಿ ' ಯಂತಹ ಕಾದಂಬರಿಗಳನ್ನು ಓದಿದಾಗ ಈಗ ಎಲ್ಲೆಲ್ಲೂ ಕಾಣುವ ಸ್ವಾಮಿಗಳು, ಸನ್ಯಾಸಿಗಳು, ಬಾಬಾಗಳ ಬಗ್ಗೆ ಅವರಿಗೆ ಗೌರವವೇನೂ ಇಲ್ಲ ಎನ್ನುವುದು ಸ್ಪಷ್ಟ ವಾಗುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟು ಕೊಂಡೇ ನಾನು ಅವರನ್ನು ಪ್ರಶ್ನಿಸಿದೆ.

'ನಿಮ್ಮ ಕೆಲವು ಬರಹಗಳನ್ನು ನೋಡಿದಾಗ ನಿಮಗೆ ಸಂಪ್ರದಾಯಗಳಲ್ಲಿ, ಸನ್ಯಾಸಿಗಳು, ಬಾಬಾಗಳಲ್ಲಿ ಅಷ್ಟಾಗಿ ನಂಬಿಕೆ ಇಲ್ಲವೇನೋ ಎನ್ನಿಸುತ್ತದೆ. ನಿಜವೇ ? ದೈವದ ಬಗ್ಗೆ ನಿಮ್ಮ ನಂಬಿಕೆಯ ರೂಪ ಎಂತಹದು ?'

ನನ್ನ ಮಾತನ್ನು ಒಪ್ಪುತ್ತಾ ಇಂದಿರಾ ಹೇಳಿದರು: ನಿಜ. 'ಪೂಜೆ, ಪುನಸ್ಕಾರ, ಸಂಪ್ರದಾಯಗಳನ್ನು ಮನೆಯುಮಟ್ಟಿಗೆ ಆಚರಿಸಿದರೂ ಅದು ಹೀಗೆಯೇ ಆಗಬೇಕೆಂಬ ಹಟವಿಲ್ಲ. ಉಪವಾಸ, ವನವಾಸಗಳಲ್ಲಿ ನನಗೆ ನಂಬಿಕೆ ಇಲ್ಲ. ಒಂದೆರಡು ಬಾರಿ ಯಾತ್ರಾಸ್ಥಳಗಳನ್ನು ಸಂದರ್ಶಿಸಲು ಹೋಗಿದ್ದುಂಟು. ಆಗೆಲ್ಲ ಸ್ಥಳಗಳನ್ನು, ದೇವಸ್ಥಾನಗಳ ಶಿಲ್ಪವನ್ನು ನೋಡುವುದರಲ್ಲಷ್ಟೇ ಆಸಕ್ತಿ, ಯಾತ್ರೆಯಿಂದ ಪುಣ್ಯ ಬರುತ್ತದೆ ಎನ್ನುವ ವಿಶ್ವಾಸ ಇಲ್ಲ. ಅಗೋಚರ ಶಕ್ತಿ ಇದೆ ಎಂದು ನಂಬಿದರೂ ಕಾಣದ ದೇವರ ಬಗ್ಗೆ ಅತೀವವಾದ ನಂಬಿಕೆಯಂತೂ ಇಲ್ಲವೇ ಇಲ್ಲ. ರಾಮ ಕೃಷ್ಣರು ನಮ್ಮ ಹಾಗೇ ಮನುಷ್ಯರು. ಕಷ್ಟ ಸುಖಗಳನ್ನೂ, ದುಃಖ ದುಮ್ಮಾನಗಳನ್ನೂ ಅನುಭವಿಸಿದವರು, ಎಂಬುದೇ ನನ್ನ ಅನ್ನಿಸಿಕೆ'

ತಮ್ಮ ಪ್ರತಿ ಕಾದಂಬರಿಗೂ ತಾವು ಜೀವನದಲ್ಲಿ ಕಂಡ ಯಾವುದೋ ಘಟನೆ ಯನ್ನೋ, ವ್ಯಕ್ತಿಯನ್ನೋ ಆಧಾರವಾಗಿರಿಸಿಕೊಂಡಿರುವ ಇಂದಿರಾ 'ತಪೋವನದಲ್ಲಿ'

ಕಾದಂಬರಿಗೂ ಇಂತಹ ಒಬ್ಬ ಅಷಾಢಭೂತಿಯ ನಡತೆಯೇ ವಸ್ತುವಾಯಿತು ಎಂದರು. "ಇಂತಹ ಅನೇಕ ಮಾಂತ್ರಿಕ, ತಾಂತ್ರಿಕರನ್ನು ನಾನು ನೋಡಿರುವುದ ರಿಂದ ಮತ್ತು ಹೆಚ್ಚಿನವರು ಸಣ್ಣ ಪುಟ್ಟ ಪವಾಡ ತೋರಿಸಿ ಜನರನ್ನು ಮರುಳು ಮಾಡುವುದರಲ್ಲೇ ತೊಡಗಿರುತ್ತಾರಾದ್ದರಿಂದ ನನಗೆ ಸನ್ಯಾಸಿ, ಬಾಬಾಗಳಲ್ಲಿ ನಂಬಿಕೆ ಇಲ್ಲ" ಎಂದು ಸ್ಪಷ್ಟವಾಗಿ ಹೇಳಿದರು.

ಪೂಜೆ ಪುನಸ್ಕಾರ, ವ್ರತ ನೇಮಗಳಲ್ಲಿ ನಂಬಿಕೆ ಇಲ್ಲದ ಇಂದಿರಾ ಅವರಿಗೆ ಅದೃಷ್ಟದಲ್ಲಿ ಮಾತ್ರ ಅಪಾರ ವಿಶ್ವಾಸ. 'ಇದಕ್ಕೆ ನನ್ನ ಜೀವನವೇ ಒಂದು ದೊಡ್ಡ ನಿದರ್ಶನವಲ್ಲವೇ ?' ಎನ್ನುತ್ತಾರೆ. "ಅದೃಷ್ಟ ಕೈ ಹಿಡಿದು ಎತ್ತದಿದ್ದರೆ ನಾನೊಬ್ಬ ಲೇಖಕಿ ಎನ್ನಿಸಿಕೊಳ್ಳುತ್ತಿದ್ದೆನೆ ?" ಎಂದು ಮರುಸವಾಲು ಹಾಕುತ್ತಾರೆ. ಹಾಗೆಯೇ ಇದಕ್ಕೆ ಸಂಬಂಧಿಸಿದ ಹಾಗೆ ಚಿಕ್ಕಂದಿನಲ್ಲಿ ನಡೆದ ಘಟನೆಯೊಂದನ್ನು ಜ್ಞಾಪಿಸಿ ಕೊಳ್ಳುತ್ತಾರೆ.

ಇಂದಿರಾ ಅವರ ಬಾಲ್ಯಕಾಲದಲ್ಲಿ ಅನೇಕರಂತೆ ಯಾಜಿಮಾಸ್ತರು ಎನ್ನುವ ಹಿರಿಯರೊಬ್ಬರು ಇವರ ಮನೆಗೆ ಬಂದು ಹೋಗುತ್ತಿದ್ದರು. ಅವರು ಹಸ್ತ ಸಾಮುದ್ರಿಕವನ್ನು ಒಲ್ಲವರು. ಒಂದು ದಿನ ಹುಡುಗರೆಲ್ಲರೂ ಅವರ ಮುಂದೆ ಸೇರಿ, 'ಕೈ ನೋಡಿ ಭವಿಷ್ಯ ಹೇಳಿ' ಎನ್ನುತ್ತಾ ಅವರ ಮುಂದೆ ಕೈ ನೀಡಿದರು. ಎಲ್ಲ ರಿಗೂ ಭವಿಷ್ಯ ಹೇಳಿದ ಮಾಸ್ತರರು ಇಂದಿರಾ ಅವರ ಕೈ ನೋಡಿ : 'ನಿನ್ನ ಬರಹ ಚೆನ್ನಾಗಿದೆ. ಅದರಿಂದ ನಿನಗೆ ಕೀರ್ತಿ ಬರುತ್ತೆ.' ಎಂದರಂತೆ. ತಾನು ಲೇಖಕಿಯಾಗ ಬೇಕೆಂಬ ಕನಸನ್ನೂ ಕಂಡಿರದ ಬಾಲಕಿ ಇಂದಿರಾ ಬರಹ ಚೆನ್ನಾಗಿದೆ ಎಂದರೆ ಅಕ್ಷರ ಮುದ್ದಾಗಿದೆ ಎಂದು ಮಾಸ್ತರರು ಹೇಳುತ್ತಿದ್ದಾರೆ ಎಂದು ಅರ್ಥ ಮಾಡಿಕೊಂಡು, ಅಂದಿನಿಂದ ಅಕ್ಷರಗಳನ್ನು ಮತ್ತಷ್ಟು ತಿದ್ದಿ ತಿದ್ದಿ ಬರೆಯಲು ತೊಡಗಿದರಂತೆ. ಈ ಘಟನೆಯನ್ನು ನೆನಪಿಗೆ ತಂದುಕೊಂಡ ಇಂದಿರಾ 'ಮಾಸ್ತರರ ಭವಿಷ್ಯ ಸತ್ಯವಾದದ್ದು ಅದೃಷ್ಟದ ದ್ಯೋತಕವಲ್ಲವೇ ?' ಎಂದು ಪ್ರಶ್ನಿಸುತ್ತಾರೆ.

ಇಂದಿರಾ ಅವರ ಬರವಣಿಗೆಯನ್ನು ಓದಿದವರಿಗೆಲ್ಲ ಒಂದು ಮಾತು ಸ್ಪಷ್ಟ ವಾಗುತ್ತದೆ. ಮಲೆನಾಡಿಗೆ ಸಂಬಂಧಿಸಿದ ಅವರ ಕಥೆ ಕಾದಂಬರಿಗಳು ಹೆಚ್ಚು ಜೀವಂತಿಕೆಯಿಂದ, ಸಹಜತೆಯಿಂದ ಕೂಡಿ ಸತ್ವಯುತವಾಗಿರುತ್ತವೆ. ಆದರೆ ನಗರ ಜೀವನದ ಕಥೆ ಕಾದಂಬರಿಗಳಲ್ಲಿ ಈ ಜೀವಂತತೆ ಕಾಣುವುದಿಲ್ಲ. ಅವರು ನಗರದಲ್ಲೂ ಬಹುಕಾಲದಿಂದ ವಾಸಿಸುತ್ತಿದ್ದರೂ ಈ ಕೊರತೆ ಅವರ ಕಾದಂಬರಿಗಳಲ್ಲಿ ಎದ್ದು ಕಾಣುತ್ತದೆ. ಇಂದಿರಾ ಅನ್ನುತ್ತಾರೆ,'ಇರಬಹುದು. ಅನುಭವವೇ ನನ್ನ ಬರವಣಿಗೆಯ

ಜೀವಾಳವಾದ್ದರಿಂದ ನನಗೆ ಅಷ್ಟಾಗಿ ತಿಳಿಯದ ವಿಚಾರಗಳ ಬಗ್ಗೆ ಬರೆದಾಗ ಅದು ಹೆಚ್ಚು ಸಹಜವಾಗಿರುವುದಿಲ್ಲವೆಂದು ತೋರುತ್ತದೆ.'

'ಹಾಗಾದರೆ ಅಂಥ ಕಾದಂಬರಿಗಳನ್ನು ಯಾಕೆ ಬರೆಯುತ್ತೀರಿ ?'

'ಹೆಸರು ಬಂದಂತೆ ಪತ್ರಿಕೆಯವರಿಂದ, ಪ್ರಕಾಶಕರಿಂದ ನನ್ನ ಕಾದಂಬರಿಗಳ ಬಗ್ಗೆ ಬೇಡಿಕೆ ಹೆಚ್ಚಾಯಿತು. ಮುಂಗಡ ಹಣವನ್ನು ಕೊಟ್ಟು ಕಾದಂಬರಿ ಬರೆದು ಕೊಡಿ ಎಂದಾಗ ನಾನು ಬರೆಯಲೇ ಬೇಕಾಯಿತು. ಹಣದ ಅವಶ್ಯಕತೆಯೂ ಇತ್ತು. ಆದರೆ 'ಟು-ಲೆಟ್' ಮುಂತಾದ ನಗರ ಜೀವನಕ್ಕೆ ಸಂಬಂಧಿಸಿದ ಕಾದಂಬರಿಗಳೂ ನನ್ನ ಅನುಭವದ ಮೂಸೆಯಲ್ಲಿ ಮೂಡಿಬಂದವುಗಳೇ. ಈ ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾದಾಗ ಜನ ಕುತೂಹಲದಿಂದ ಮುಂದಿನ ಸಂಚಿಕೆಗಾಗಿ ಕಾಯುತ್ತಿದ್ದರು.'

ಇಂದಿರಾ ಅವರ ಕಾದಂಬರಿಗಳನ್ನು ಸಮೀಕ್ಷಿಸಿದಾಗ ಸ್ಪಷ್ಟವಾಗುವ ಇನ್ನೊಂದು ಅಂಶವೆಂದರೆ ಅವರ ಕಾದಂಬರಿಗಳಲ್ಲಿ ಪ್ರೇಮ ವಿವಾಹದ ಬಗ್ಗೆ ಇರುವ ವಿರೋಧ. ಪ್ರೇಮ ವಿವಾಹದ ಅಸಫಲತೆಯನ್ನೇ ಅವರು ಹೆಚ್ಚಾಗಿ ಚಿತ್ರಿಸಿದ್ದಾರೆ. ಗಂಡು–ಹೆಣ್ಣು ತಾವು ತಾವೇ ನೋಡಿಕೊಂಡು ಮಾಡಿಕೊಳ್ಳುವ ವಿವಾಹಕ್ಕಿಂತ, ಹಿರಿಯರು ಒಪ್ಪಿ ಮಾಡಿದ ಮದುವೆಯೇ ಹೆಚ್ಚು ಯಶಸ್ವಿಯಾಗುತ್ತದೆ ಎನ್ನುವ ಧ್ವನಿ ಅವರ ಕಾದಂಬರಿಗಳಿಂದ ಹೊರಡುತ್ತದೆ. ಯಾಕೆ ಹೀಗೆ ?' ಎನ್ನುವ ಪ್ರಶ್ನೆಗೆ ಇಂದಿರಾ ಅವರ ಉತ್ತರ ಹೀಗಿದೆ : "ತಕ್ಷಣದ ವ್ಯಾಮೋಹವನ್ನೇ ನಮ್ಮ ತರುಣ ತರುಣಿಯರು ಪ್ರೇಮವೆಂದು ಭಾವಿಸಿಕೊಂಡು ಹಿರಿಯರ ಅಸಮಾಧಾನಕ್ಕೆ ತುತ್ತಾಗುತ್ತಾರೆ. ಪರಸ್ಪರರ ಗುಣ, ಸ್ವಭಾವ, ಅಭಿರುಚಿ ಗಳಿಗಿಂತ ರೂಪು, ಮಾತುಗಾರಿಕೆ ಅವರಿಗೆ ಮುಖ್ಯವಾಗಿ ಕಾಣುತ್ತದೆ. ಅದ ರಲ್ಲೂ ಹೆಣ್ಣು ಮಕ್ಕಳಂತೂ ಮೇಲು ಮೇಲಿನ ಆಮಿಷಕ್ಕೆ ಬೇಗ ಬಲಿಯಾಗು ತ್ತಾರೆ. ಅನಂತರ ಹೆಚ್ಚಾಗಿ ತೊಂದರೆಗೆ ಒಳಗಾಗುವುದೂ ಹೆಣ್ಣು ಮಕ್ಕಳೇ ಆದ್ದ ರಿಂದ ಹಿರಿಯರು ಒಪ್ಪಿ ಮಾಡುವ ಮದುವೆಯೇ ಹೆಚ್ಚು ಸೂಕ್ತ, ಎನ್ನುವ ಇಂದಿರಾ 'ಒಬ್ಬ ಹುಡುಗ ಅಥವಾ ಹುಡುಗಿಗಾಗಿ ಇನ್ನೊಬ್ಬರು ಪ್ರಾಣ ಕಳೆದುಕೊಳ್ಳುವುದು, ತಲೆ ಕೆಡಿಸಿಕೊಂಡು ಕೊರಗುವುದು, ಕುಡಿತವನ್ನು ಅಭ್ಯಾಸ ಮಾಡಿಕೊಳ್ಳುವುದು ಇವೆಲ್ಲ ತೀರಾ ಹುಚ್ಚುತನ. ಇಂತಹ ಕಾದಂಬರಿಗಳನ್ನು ಓದುವುದರಿಂದ, ಸಿನಿಮಾಗಳನ್ನು ನೋಡುವುದರಿಂದ ನಮ್ಮ ತರುಣ ತರುಣಿಯರು ಪಥಭ್ರಷ್ಟರಾಗುತ್ತಾರೆ. ಅದಕ್ಕೇ ನಾನೆಂದೂ ನನ್ನ ಕಾದಂಬರಿಗಳಲ್ಲಿ ಪ್ರೇಮ ವಿವಾಹವನ್ನು ಸಮರ್ಥಿಸುವುದಿಲ್ಲ'

ಎನ್ನುತ್ತಾರೆ. ಇಂದಿರಾ ಅವರ ದೃಷ್ಟಿಯಲ್ಲಿ ಕ್ಷಣಿಕವಾದ 'ಪ್ರೇಮಕ್ಕಿಂತ' ಶಾಶ್ವತವಾದ ಜೀವನಕ್ಕೇ ಹೆಚ್ಚು ಬೆಲೆ.

ನಾಟಕ ಮತ್ತು ಕವಿತೆಯನ್ನು ಬಿಟ್ಟು ಇಂದಿರಾ ಗದ್ಯದ ಎಲ್ಲ ಪ್ರಕಾರಗಳಲ್ಲೂ ಬರೆದಿದ್ದಾರೆ. ಹರಟೆ, ಕಥೆ, ಚಿಂತನ, ಕಾದಂಬರಿ ಹೀಗೆ. ಆದರೆ ಕಾದಂಬರಿಯೇ ಇಂದಿರಾ ಅವರಿಗೆ ಇಷ್ಟವಾದ ಮಾಧ್ಯಮ. ಅಲ್ಲಾದರೆ ವಿಸ್ತಾರವಾದ ಹಿನ್ನೆಲೆಯಲ್ಲಿ ಕಥೆ ನದಿಯಂತೆ ಹರಿಯುತ್ತದೆ. ಜೀವನವನ್ನು ಎಳೆಎಳೆಯಾಗಿ ಬಿಡಿಸುವ ಅವಕಾಶ ಕಾದಂಬರಿಯಲ್ಲಿ ಹೆಚ್ಚಾಗಿರುತ್ತದೆ ಎನ್ನುವುದು ಇಂದಿರಾ ಅವರ ಅಭಿಪ್ರಾಯ.

ಇತ್ತೀಚಿನ ಸಾಹಿತ್ಯವನ್ನು ಇಂದಿರಾ ಹೆಚ್ಚಾಗಿ ಓದಿಲ್ಲ. ಆದರೆ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ', 'ಗ್ರಾಮಾಯಣ', 'ಸಮರಸವೇ ಜೀವನ', 'ಬೆಟ್ಟದ ಜೀವ' 'ಮರಳಿ ಮಣ್ಣಿಗೆ', 'ಬಾಳ್ವೆ'(ಲೇಖಕರು : ಡಾ. ಕೆ.ವಿ. ರಾವ್) ಮುಂತಾದ ಕನ್ನಡದ ಮೇರುಕೃತಿಗಳನ್ನು, ಅ. ನ. ಕೃ. ಅವರ ಮೊದಮೊದಲುಕಾದಂಬರಿಗಳನ್ನು,ತ್ರಿವೇಣಿ, ಆನಂದ ಮುಂತಾದವರ ರಚನೆಗಳನ್ನು ಬಹಳವಾಗಿ ಮೆಚ್ಚಿರುವ ಇಂದಿರಾ ಅವರಿಗೆ ತಮ್ಮ ಬರಹಗಳಲ್ಲಿ 'ಗೆಜ್ಜೆಪೂಜೆ' 'ಫಣಿಯಮ್ಮ' 'ತುಂಗಭದ್ರಾ' 'ಸದಾನಂದ' 'ನಾಗವೀಣಾ' ಮುಂತಾದವು ಹೆಚ್ಚು ಇಷ್ಟ. ಕೆಲವೊಮ್ಮೆ ತಾವು ಆತುರದಲ್ಲಿ ಕಾದಂಬರಿಗಳನ್ನು ರಚಿಸಿರುವುದು ನಿಜ ಎಂದು ಅವರು ಒಪ್ಪುತ್ತಾರೆ.

ಇಂದಿರಾ ಅವರು ರಚಿಸಿರುವ 'ಗೆಜ್ಜೆಪೂಜೆ' 'ಫಣಿಯಮ್ಮ' 'ಗಿರಿಬಾಲೆ' 'ಸದಾನಂದ' 'ಹೂ ಬಾಣ' ('ಮತ್ತು ಒಂದು ಮುತ್ತು') ಕಾದಂಬರಿಗಳು ಚಲನ ಚಿತ್ರಗಳಾಗಿವೆ. 'ಒಂದು ಮಾಧ್ಯಮದಿಂದ ಇನ್ನೊಂದು ಮಾಧ್ಯಮಕ್ಕೆ ಒಂದು ಕತೆಯನ್ನು ಅಳವಡಿಸಿಕೊಳ್ಳುವಾಗ ಅದರಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ, ಎನ್ನುವುದನ್ನು ಇಂದಿರಾ ಅವರು ಒಪ್ಪುತ್ತಾರಾದರೂ, 'ಹಾಗೆ ಅಳವಡಿಸಿಕೊಳ್ಳುವಾಗ ಮೂಲಕೃತಿಯ ಉದ್ದೇಶಕ್ಕೇ ತೀರಾ ಭಿನ್ನವಾಗಿರಬಾರದಲ್ಲವೇ ?'ಎಂದು ಪ್ರಶ್ನಿಸುವ ಅವರಿಗೆ ಚಲನಚಿತ್ರಗಳಾಗಿ 'ಗೆಜ್ಜೆಪೂಜೆ' 'ಫಣಿಯಮ್ಮ' ತುಂಬಾ ತೃಪ್ತಿಕೊಟ್ಟಿವೆ. ಮಿಕ್ಕವುಗಳ ಬಗ್ಗೆ ಸಮಾಧಾನವಿಲ್ಲ.

ಸಾಹಿತ್ಯದ ಉದ್ದೇಶ ಏನಾಗಿರಬೇಕು ? ಕೇವಲ ಮನರಂಜನೆಯೇ ? ಅಥವಾ ಅವುಗಳ ಮೂಲಕ ಸಾಹಿತಿಗಳು ಸಮಾಜಕ್ಕೆ ಏನಾದರೂ ಉಪದೇಶವನ್ನು ನೀಡಬೇಕೇ ? ಇಂತಹ ಪ್ರಶ್ನೆಗಳ ಬಗ್ಗೆ ಇಂದಿರಾ ಅವರ ಉತ್ತರ ಇಷ್ಟೇ.

'ನನ್ನ ಕಾದಂಬರಿಗಳಿಂದ ಜನರಿಗೆ ನಾನು ದೊಡ್ಡ ತತ್ತ್ವಗಳನ್ನು ಉಪದೇಶಿಸ

ಬೇಕೆಂಬ ಉದ್ದೇಶವಂತೂ ನನಗೆ ಖಂಡಿತ ಇಲ್ಲ. ಹಾಗೆಯೇ ಕೇವಲ ಮನರಂಜನೆಗಾಗಿ ಕಾದಂಬರಿಯನ್ನು ರಚಿಸುವುದೂ ನನ್ನ ಉದ್ದೇಶವಲ್ಲ. ನಾನು ಹೆಚ್ಚಾಗಿ ಸತ್ಯ ಘಟನೆಗಳನ್ನು ಆಧರಿಸಿಯೇ ಕಾದಂಬರಿ ರಚಿಸಿರುವುದಕ್ಕು ಜನಕ್ಕೆ ಮಾರ್ಗದರ್ಶನ ದೊರೆಯಬಹುದು ಎನ್ನುವ ಉದ್ದೇಶದಿಂದಲೇ. ಇನ್ನೊಂದು ವಿಚಾರ, ಸಾಮಾನ್ಯವಾಗಿ ಜನ ಹಣವುಳ್ಳವರೆಲ್ಲ ಸುಖವಾಗಿರುತ್ತಾರೆ ಎನ್ನುವ ಭ್ರಮೆಯಲ್ಲಿ ಮುಳುಗಿರುತ್ತಾರೆ. ಆದರೆ ಹೊರನೋಟಕ್ಕೆ ಸುಖವಾಗಿರುವಂತೆ ಕಂಡರೂ ಜೀವನದಲ್ಲಿ ಎಂಥೆಂಥದೋ ಸಮಸ್ಯೆಗಳನ್ನು ಜನ ಇದಿರಿಸುತ್ತಿರಬೇಕಾಗುತ್ತದೆ. ಕಾದಂಬರಿಯ ಮೂಲಕ ಈ ಸತ್ಯ ಸಂಗತಿಯನ್ನು ಚಿತ್ರಿಸುವುದೂ ನನ್ನ ಉದ್ದೇಶಗಳಲ್ಲಿ ಒಂದು.'

ಅನೇಕ ದೈಹಿಕ, ಮಾನಸಿಕ ಕ್ಲೇಶಗಳಿಂದಾಗಿ ಇಂದಿರಾ ಅವರಿಗೆ ಈಗ ಹಿಂದಿನಂತೆ ಬರೆಯಲಾಗುತ್ತಿಲ್ಲ. ಆದರೆ ಎರಡು ಮಹತ್ವಪೂರ್ಣ ಕೃತಿಗಳನ್ನು ರಚಿಸುವ ಉದ್ದೇಶ ಅವರಿಗಿದೆ. ಅವರು ತಮ್ಮ ಬಾಲ್ಯದಲ್ಲಿ ಕಂಡ ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ತಮ್ಮ ಜೀವನವನ್ನು ಚಿತ್ರಿಸುವ ಉದ್ದೇಶವುಳ್ಳ 'ಬಿಂದು' ಎಂದು ಹೆಸರಿಸಲಾದ ಕೃತಿಯ ಕೆಲವು ಭಾಗಗಳಷ್ಟೇ ಈಗ ಪೂರ್ಣಗೊಂಡಿದೆ. ಇಂದಿರಾ ಅವರ ಅಂದಾಜಿನಂತೆ ಈ ಕೃತಿ ಸಾವಿರ ಪುಟಗಳಷ್ಟಾಗಬಹುದು. ಬರೆದು ಮುಗಿಸಿದರೆ ಪ್ರಕಟಿಸುವವರೂ ಸಿದ್ಧವಾಗಿದ್ದಾರೆ.

ಅವರು ಬರೆಯಲಿಚ್ಛಿಸಿರುವ ಇನ್ನೊಂದು ಕೃತಿ ರಾಮಾಯಣವನ್ನು ಆಧರಿಸಿದ್ದು. ಕೇವಲ ರಾಮ ಸೀತೆಯರ ಕಥೆಯಲ್ಲ. ಅಂದಿನ ಸಮಾಜ ಜೀವನವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕಾದಂಬರಿಯ ರೂಪದಲ್ಲಿ ರಾಮಾಯಣವನ್ನು ಬರೆಯುವುದು. ಇದೂ ಸಹಾ ಬೃಹತ್ ಗಾತ್ರದ ಹೊತ್ತಿಗೆಯೇ ಆಗುತ್ತದೆ. 'ಈ ಎರಡು ಕೃತಿಗಳನ್ನು ಬರೆದು ಮುಗಿಸುವುದಕ್ಕಾದರೆ ಸಾಕು, ಅದಕ್ಕಿಂತ ಹೆಚ್ಚಿಗೆ ಬರೆಯಲಾರೆ' ಎನ್ನುತ್ತಾರೆ ಇಂದಿರಾ.

ಇದುವರೆಗೆ ಇಂದಿರಾ ಅವರ ಕೈ ಹಿಡಿದು ನಡೆಸಿರುವ ಅದೃಷ್ಟವೇ ಅವರ ಈ ಎರಡು ಮಹತ್ವಾಕಾಂಕ್ಷಿ ರಚನೆಗಳು ಹೊರಬರುವಂತೆ ಮಾಡಲಿ ಎಂಬುದಷ್ಟೇ ಎಂ. ಕೆ. ಇಂದಿರಾ ಅಭಿಮಾನಿಗಳೆಲ್ಲರ ಹಾರೈಕೆ.

ಇಂದಿರಾ ನಡೆದು ಬಂದ ದಾರಿ

○
○
○ ರಾಮಸ್ವಾಮಿ

ಇಂದಿರಾ ನನ್ನ ಸೋದರತ್ತೆಯ ಮಗಳು. ಚಿಕ್ಕಪ್ಪನ ಹೆಂಡತಿಯೂ ಹೌದು! ಚಿಕ್ಕಂದಿನಿಂದಲೂ ಜೊತೆಯಲ್ಲಿ ಆಡಿ ಹಾಡಿ ಬೆಳೆದು ಬಂದವರು. ಯಾವುದಾದರೂ ಸಿನಿಮಾ ನೋಡಲಿ, ನಾಟಕ ವೀಕ್ಷಿಸಲಿ, ಕಡೆಗೆ ಒಂದು ಹರಿಕಥೆ ಕೇಳಲಿ ಅದನ್ನ ಅನುಕರಿಸುವುದು, ಹಾಡಿ ತೋರಿಸುವುದು. ಆದರ ಕಥೆ ನೋಡಿದ್ದಕ್ಕಿಂತಲೂ ಸ್ವಾರಸ್ಯವಾಗಿ ವಿವರಿಸಿ ಹೇಳುವುದರಲ್ಲಿ ನಿಸ್ಸೀಮ ವ್ಯಕ್ತಿ ಇಂದಿರ.

ಆಗ ಅವಳಿಗೆ ಐದು ಅಥವಾ ಆರು ವರ್ಷ ವಿರಬೇಕು. ಒಂದು ನಾಟಕ ನೋಡಿಬಂದ ಇಂದಿರ....

ಬರುತವಳೆ ದೇವಕಿ ದೇವಿ
ಸರಿಗಮ ಹಾಡುತ
ವಲುಪು ಮಾಡುತ
ಬರುತವಳೆ ದೇವಕಿದೇವಿ...

....ಆ ನಾಟಕದ ನಾಯಕಿ ನಟಿ ಹಾಡುತ್ತಾ ರಂಗಕ್ಕೆ ಬಂದ ರೀತಿಯಲ್ಲಿ ಮನೆಗೆ ಕುಣಿಯುತ್ತಾ ಬಂದ ಇಂದಿರಾಳನ್ನ ನೀವು ನೋಡಬೇಕಿತ್ತು! ಒಂದೇ ಬಾರಿ ನೋಡಿದ ದೃಶ್ಯ, ಹಾಡಿದ ಹಾಡು ಮರುಕ್ಷಣದಲ್ಲಿ ಅವಳ ಬಾಯಲ್ಲಿ ಅದೇ ಹಾವಭಾವದಿಂದ ಹೊರಬಂದಿತ್ತು.

ಹುಟ್ಟಿದ್ದು ತೀರ್ಥಹಳ್ಳಿಯಾದರೂ, ಬೆಳೆದದ್ದು ನರಸಿಂಹರಾಜಪುರ.

ದೊಡ್ಡ ಕುಟುಂಬ. ವಿಶಾಲವಾದ ಮನೆ. ಅದೂ ಮುಖ್ಯರಸ್ತೆಯಲ್ಲಿ. ಇವಳ ಅಣ್ಣ ಆನಂದ ಬಲು ಪ್ರಚಂಡ–ಪುಂಡ. ಅವರ ಮನೆ ವರಾಂಡದ ಒಂದು ಮೂಲೆಯಲ್ಲಿ ಒಂದು ಕೊಠಡಿ. ಅದರ ಮುಂದುಗಡೆಯೇ ಮಹಡಿ ಹತ್ತಲು ಮೆಟ್ಟಿಲುಗಳು. ಮೆಟ್ಟಲು ಮೇಲಿನಿಂದ ಕೊಠಡಿವಳಗಿನವರೆಗೆ ಕಡ್ಲೆಪುರಿ ಸ್ವಲ್ಪ ಸ್ವಲ್ಪ ಸುರಿಯುತ್ತಾ ಬಂದ ಆನಂದ ಆ ಕೊಠಡಿ ಬಾಗಿಲ ಚಿಲಕಕ್ಕೆ ಒಂದು ಹಗ್ಗ ಕಟ್ಟಿ....ಆ ಕೊಠಡಿ ಎದುರುಗಡೆ ರೂಂನಲ್ಲಿ ಕುಳಿತು ಬಿಡುತ್ತಿದ್ದ–ಆ ಹಗ್ಗದ ಇನ್ನೊಂದು ತುದಿ ಹಿಡಿದು....

.... ಈ ವಾಲಿ, ಸುಗ್ರೀವ ಆಂಜನೇಯನ ಸಂತತಿಯವರು ಬೆಳಿಗ್ಗೆ ಇಲ್ಲಿಗೆ ವಾಕಿಂಗ್ ಬರುವುದು ಸಂಪ್ರದಾಯ. ಈ ಪುರಿಕಡ್ಲೆ ಕಂಡತಕ್ಷಣ ಅದನ್ನ ಹೆರಕಿ ತಿನ್ನುತ್ತಾ ರೂಂ ಒಳಗೆ ಬಂದು ಬಿಡುತ್ತಿದ್ದರು. ಆಗ ಈ ತುದಿಯಲ್ಲಿದ್ದ ಹಗ್ಗದ ತುದಿ ಎಳೆದು ಬಾಕಿಲು ರಪ್ಪನೆ ಎಳೆದುಕೊಂಡಾಗ, ನೋಡಬೇಕು ಅವುಗಳ ಕಿರಿಚಾಟ ವಗೈರೆ. ಇದೊಂದು ಮೋಜು ಆನಂದನಿಗೆ. ಆದರೆ ಅದನ್ನ ಹೊರಗೆ ಬಿಡುವುದು ಹೇಗೆ ? ಆನಂದ ಈ ಕೆಲ್ಸದ ನಂತರ ಓಡಿಬಿಡುತ್ತಿದ್ದ....ಬಾಗಿಲು ತೆಗೆದಾಗ ಅವು ಮೇಲೆ ಬಿದ್ದರೆ....?

ರಾಮಚಂದ್ರನಿಗೆ ಅಳುವೇ ಬರುತ್ತಿತ್ತು [ಟಿ.ಎಸ್. ರಾಮಚಂದ್ರ ರಾವ್ ಪ್ರಜಾವಾಣಿ ಸಂಪಾದಕರು] ಆಗ ಒಂದು ಕೋಲು ಹಿಡಿದು ಇಂದಿರಾ–ಕೊಠಡಿ ಬಾಗಿಲನ್ನ ಕೊಲಿನಿಂದ ನೂಕಿ, ಮಂಗಗಳನ್ನ ಓಡಿಸಲು ನಿಲ್ಲುತ್ತಿದ್ದ ದೃಶ್ಯ ಈಗಲೂ ಮನಸ್ಸಿನಲ್ಲಿ ತೇಲಿಬರುತ್ತದೆ. ಈ ದೃಶ್ಯ ನೆನಸಿಕೊಂಡಾಗ ಇದೇ ರೀತಿ ಇನ್ನೊಂದು ದೃಶ್ಯವೂ ನೆನಪಿಗೆ ತರುತ್ತದೆ. ಅದು ಆಕೆ ಮಾಡುತ್ತಿದ್ದ ಸಖಿಪಾತ್ರ. ಅವಳ ಅಕ್ಕ ಶಾರದೆ [ಡಾ॥ ಎನ್. ಎಸ್. ನಾರಾಯಣ್ ಅವರ ಪತ್ನಿ] ಹೀರೋ ಪಾತ್ರ ವಹಿಸಿದಾಗ ಒಂದು ನಾಟಕದಲ್ಲಿ ಈಕೆಯದು ಸಖಿಪಾತ್ರ. ಮಂಗಗಳನ್ನು ಬೆದರಿಸುವ ರೀತಿ ಪ್ರೇಕ್ಷಕರನ್ನ ದುರುದುರು ನೋಡುತ್ತಾ ನಿಲ್ಲುತ್ತಿದ್ದ ರೀತಿ, ಠೀವಿ, ಇಂದಿಗೂ ಮರೆಯುವಂತಿಲ್ಲ.

ನಮ್ಮಪ್ಪ ಮಾಳೂರು ಶಂಕರಪ್ಪ ಒಂದು ಮೋಟಾರ್ ಸರ್ವಿಸ್ ಹುಬ್ಬಳ್ಳಿಯಲ್ಲಿಟ್ಟಿದ್ದರು. ಸಿನಿಮಾ ನಾಟಕದವರು ಪ್ರಚಾರಕ್ಕೆ ನಮ್ಮ ಬಸ್ಸುಗಳಲ್ಲಿ ಪೋಸ್ಟರುಗಳನ್ನು ಹಾಕುತ್ತಿದ್ದದ್ದರಿಂದ ನಮಗೆ ಫ್ರೀ ಪಾಸುಗಳೂ ಕೊಡುತ್ತಿದ್ದರು. ಇದರಿಂದ ಇಂದಿರಾ ನಮ್ಮನ್ನು ಕರೆದುಕೊಂಡು ಪ್ರತಿ ಸಿನಿಮಾ ನೋಡುವುದನ್ನು ಬಿಡುತ್ತಿರಲಿಲ್ಲ. ಆಗ ಇದ್ದದ್ದು ಡೆಕ್ಕ್ ಹಾಗೂ ಮಲ್ಲಿಕಾರ್ಜುನ ಥಿಯೇಟರುಗಳು ಮಾತ್ರ.

ಆಗ ಮೂಕಿ ಸಿನಿಮಾಗಳು, ಲಾರೆಲ್ ಅಂಡ್ ಹಾರ್ಡಿ, ಚಾರ್ಲಿಚಾಪ್ಲಿನ್. ಹೆರಾಲ್ಡ್ ಲಾಯಿಡ್, ಎಡ್ಡಿ ಕೆಂಟರ್ ಸಿನಿಮಾಗಳು ಜನಪ್ರಿಯ. ನಮ್ಮ ಮನೆ ಹಿಂಭಾಗವೇ 'ಶೇಂಗಾಯಿ' ಕಾರ್ಖಾನೆ. ಅವನ್ನ ತಂದು ತಿನ್ನುವುದು-ಸಿನಿಮಾ ನೋಡುವುದು ಒಂದು ಹವ್ಯಾಸ.

ಹಿಂದಿಯಲ್ಲಿ ನೆನಪಿನಲ್ಲಿ ಉಳಿದಿರುವ ಚಿತ್ರ 'ಬ್ರಹ್ಮಚಾರಿ'- ಹಿಂದಿ ನಟಿ, ನಂದಾ ತಂದೆ ವಿನಾಯಕ್ ನಾಯಕನ ಪಾತ್ರ. ಆತನ ರೂಂನಲ್ಲಿ ಬೆಳಿಗ್ಗೆ ಆಂಜನೇಯನ, ರಾಮನ, ಗಣೇಶನ ಚಿತ್ರಗಳು. ರಾತ್ರಿ ಬಾಟ್ಲಿ ಸೇವೆ ಆಗಬೇಕು. ಆಗ ಈ ದೇವರುಗಳು ಅದನ್ನ ಕಾಣಬಾರದಲ್ಲ ! ಆದ್ದರಿಂದ ಅದನ್ನ ತಿರುಗಿಸಿ ಹಾಕಿದರೆ....ಅವುಗಳ ಹಿಂದೆ ಬೆತ್ತಲೆ ಹೆಣ್ಣುಗಳ ಚಿತ್ರಗಳು....ಆಗ ಇದನ್ನ ನೋಡಿ ಆನಂದಿಸುವ ವಯಸ್ಸು ನಮ್ಮದಾಗಿರಲಿಲ್ಲ.

ಇಂದಿರಾ....ವಿನಾಯಕ್ ಹಾಡಿದ 'ಬಲುಮಾ ಬ್ರಹ್ಮಚಾರಿ' ಬಹಳ ರಸ ವತ್ತಾಗಿ ಹಾಡುತ್ತಿದ್ದಳು. ಗೋಹರ್ ಕರ್ನಾಟಕಿ, ಅಮೀರ್ ಬಾಯ್ ಕರ್ನಾಟಕಿ, ಕುಮಾರ್ ಮಾಸ್ಟರ್ ವಿಠಲ್, ಇ. ಬಿಲ್ಮೋರಿಯಾ ಆಗಿನ ಕಾಲದ ಪ್ರತಿಭಾವಂತ ನಟರು.

ನಂತರ ಇಂದಿರಾ ನಾ ಕಂಡಾಗ ಮದುವೆ ಆಗಿತ್ತು. ಶಿವಮೊಗ್ಗಾದಲ್ಲಿ ಹಿಂದೂ-ಮುಸ್ಲಿಂ ಗಲಾಟೆ ಕಾಲ. ಮಹಡಿ ಮೇಲೆ ಇಂದಿರಾ ಸಂಸಾರವಾದರೆ ಕೆಳಗೆ ನಾವು. ಹಾಲಪ್ಪ-ಮಂಜಪ್ಪನವರ ಮನೆ. ಈಗ ಇಂದಿರಾ ಸ್ವಲ್ಪ ಗಂಭೀರೆ. ಮೊದಲಿನ ಹುಡುಗಾಟವಿಲ್ಲ. ಆದರೆ ಈ ಗಲಾಟೆಯಿಂದ ಹೊರಗೆ ಹೋಗುವಂತಿಲ್ಲ ವಲ್ಲ. ಆಗ ಇಂದಿರಾಳನ್ನ ಹಿಡಿಸಿದರೆ ಕಥೆ ಹೇಳುತ್ತಿದ್ದಳು....ಕಥೆ ಶುರುವಾದರೆ ತೀರಿತು....ಗಾಂಭೀರ್ಯ ಮರೆತು ಹುಡುಗಿ ಆಗಿಬಿಡುತ್ತಿದ್ದಳು....

ಕೆಲವು ಕಾಲದ ನಂತರ ಬಸ್ಸುಗಳನ್ನ ಮಾರಿ ನಮ್ಮ ತಂದೆ ಮೈಸೂರು ಸೇರಿದರು. ಸಿ.ಪಿ.ಸಿ ಮೋಟಾರ್ ಸರ್ವಿಸಿನಲ್ಲಿ ಕೆಲಸ. ಆದರೆ ಅಲ್ಲಿಗೂ ಹಾಜರಾಗ ಬೇಕೆ ಇಂದಿರಾ ? ಅವರ ಯಜಮಾನರಿಗೆ ಟಿ.ಎಸ್. ಮೋಟಾರ್ ಸರ್ವಿಸಿನಲ್ಲಿ ಕೆಲಸ ವಾಯ್ತು. ಆಗ ಆಕೆಗೆ ಇಬ್ಬರು ಮುದ್ದು ಮಕ್ಕಳು. ಸುಬ್ಬಣ್ಣ ಹಾಗೂ ಲೋಲಾಕ್ಷಿ ! ಒಂದಕ್ಕಿಂತ ಒಂದು ಸುಂದರ ಮಕ್ಕಳು. ಆಗ ಊರಲ್ಲಿ ಡಿಫ್ತೀರಿಯಾ ಖಾಹಿಲೆ. ಲೋಲಾಕ್ಷಿಗೆ ಡಿಫ್ತೀರಿಯ ಅಂಟಿತ್ತು. ಔಷಧ ಕೊಡುತ್ತಿದ್ದ ಡಾಕ್ಟರ್

ಕಾಮತ್‌ಗೆ ಅದು ಡಿಫ್ತೀರಿಯಾ ಅಂತ ಅರ್ಥವಾಗುವ ಹೊತ್ತಿಗೆ ಮಗು ತೀರಿ ಕೊಂಡಿತ್ತು.

ನಮ್ಮ ತಂದೆಗೆ ನಾವು ಹತ್ತು ಜನ ಮಕ್ಕಳು. ನಾನೇ ದೊಡ್ಡವನಾದ್ದರಿಂದ, ಈ ಎಲ್ಲ ಮಕ್ಕಳಿಗೆ ಆಂಟಿ ಡಿಫ್ತೀರಿಯಾ ಇಂಜಕ್ಷನ್ ಕೊಡಿಸುವುದು, ಅವುಗಳ ಶುಶ್ರೂಷೆ ವಗೈರೆ ಕೆಲ್ಸ ನನ್ನದಾಗಿತ್ತು. ಇಂದಿರಳಿಗೂ ಈ ಇಂಜಕ್ಷನ್ ಮಕ್ಕಳಿಗೆ ಕೊಡಿಸುವಂತೆ ತಿಳ್ಸಿದ್ದೆ. ಆದರೆ ಅವರು ಈ ಬಗ್ಗೆ ಗಮನವಿಡದೆ ಆ ಮುದ್ದು ಹೆಣ್ಣು ಮಗುವನ್ನ ಕಳೆದುಕೊಂಡರು. ನನಗೆ ತುಂಬಾ ಬೇಸರವಾಗಿ, ಹೋಗಿ ಸಾಕಷ್ಟು ಅಂದು, ಉಳಿದಿದ್ದ ಸುಬ್ಬಣ್ಣನನ್ನು ಹೊತ್ತು ಹೊರಟೆ. ಅವನಿಗಾಗಲೇ ಸೋಂಕು ತಗುಲಿತ್ತು. ಆಸ್ಪತ್ರೆಯ ಡೀನ್ ಟೆನ್ನಿಸ್ ಕೋರ್ಟಿನಲ್ಲಿದ್ದರು. ಅವರೇ ಚೀಟಿ ಕೊಟ್ಟಲ್ಲಿ ಮಾತ್ರ ಇಂಜೆಕ್ಷನ್. ಹೋಗಿ ಬೇಡಿಕೊಂಡೆ. ಇವನ ತಂಗಿ ಈಗತಾನೆ ತೀರಿಕೊಂಡ ವಿಚಾರ ತಿಳ್ಸಿದೆ. ಆತನ ಮನ ಕರಗಲಿಲ್ಲ.

"ಒಳ್ಳೆ ಗ್ರಹಚಾರ ಬಂತಲ್ಲ. ಯಾರು ನಿನಗೆ ಹೇಳಿದ್ದು ನಾನು ಇಲ್ಲಿದ್ದೀನಿ ಅಂತ ! ಇವನ ತಂಗಿ ಸತ್ರೆ ಇವ್ನೂ ಅದೇದಾರಿ ಹಿಡೀತಾನೆ. ಸಾಯೋರನ್ನೆಲ್ಲಾ ನಾನು ಬದುಕ್ಸೋಕಾಗತ್ತ" ಎಂದು ಆರ್ಭಟಿಸಿದರು....

ಈ ಮಾತು ನನ್ನಿಂದ ತಡೆಯಲಾಗಲಿಲ್ಲ. ನಾನೇ ಮಗುವಿನಂತೆ ಅಳತೊಡಗಿದೆ...ಇದು ಸುತ್ತಮುತ್ತ ಇದ್ದ ಎಲ್ಲಾ ಡಾಕ್ಟರುಗಳ ಗಮನಕ್ಕೆ ಬಂದು, ಆತನಿಗೂ ಕಸಿವಿಸಿ ಆಗಿರಬೇಕು. ಚೀಟಿ ಬರೆದು ಕೊಟ್ಟರು.

ಈ ಚೀಟಿ ತಂದ ತಕ್ಷಣ ಇಂಜೆಕ್ಷನ್ ಕೊಟ್ಟರು. ಅವರು ಡಾ॥ ಸುಬ್ರಹ್ಮಣ್ಯಂ. ಎಂ. ಕೆ. ಇಂದಿರಾ ಸೋದರತ್ತೆ ದಿ॥ ನಾಗಮ್ಮ [ಮಾಳೂರು ಸುಬ್ಬರಾಯರ ಪತ್ನಿ] ನವರ ತಮ್ಮ. ಸುಬ್ಬಣ್ಣ ಬದುಕಿದ. ಇವನೇ ಇಂದಿರಾಳ ಹಿರಿಯ ಮಗ ಎಂ.ಕೆ. ಸುಬ್ಬರಾವ್. ಕಿರ್ಲೋಸ್ಕರ್‌ನಲ್ಲಿ ಕೆಲ್ಸ. ಇವನಿಗೂ ಇಬ್ಬರು ಮಕ್ಕಳಿದ್ದಾರೆ.

ಇಷ್ಟೆಲ್ಲಾ ಕಥೆ ರಸವತ್ತಾಗಿ ಹೇಳುವ ಈಕೆ, ತಾನೇ ಕಥೆ ಕಾದಂಬರಿ ಏಕೆ ಬರೆದು ಜನರನ್ನ ರಂಜಿಸಬಾರದು....? ಸ್ವಂತ ತಮ್ಮ ಟಿ. ಎಸ್. ಆರ್. ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ 'ಹೆತ್ತೊಡಲು' ಕಥೆಗೆ ಪ್ರಥಮ ಬಹುಮಾನ ಬಂದಾಗ ಪಕ್ಕಕ್ಕಿಟ್ಟಿದ್ದರು. ತಮ್ಮ ತಮ್ಮವರಿಗೇ ಬಹುಮಾನ ಹಂಚಿಕೊಳ್ಳುತ್ತಾರೆ ಎಂಬ ಕೆಟ್ಟ ಹೆಸರು ಬಾರದಿರಲೆಂದು. ಅಂದ ಮೇಲೆ ಕಾದಂಬರಿ ಬರೆದರೆ ಪ್ರಕಟಿಸುವವರ್ಯಾರು ? ಆಗಾ

ಗಲೇ ಎರಡು ಮೂರು ಕಾದಂಬರಿ ಬರೆದಿದ್ದಳು. ಒಮ್ಮೆ ಈಕೆ ಬರೆದ ಕಾದಂಬರಿ 'ತುಂಗಭದ್ರ' ನನ್ನ ಕಣ್ಣಿಗೆ ಬಿದ್ದು, ಓದಿದೆ. ಇದೊಂದು ಉತ್ತಮ ಕಾದಂಬರಿ. ಇದು ಪ್ರಕಟಣೆ ಆಗದಿದ್ದಲ್ಲಿ ಇದು ಈಕೆಗಿಂತ, ಕನ್ನಡ ಸಾಹಿತ್ಯಕ್ಕೊಂದು ನಷ್ಟ ಅನ್ನಿಸಿತು.

ಆಗ ನನ್ನ ಸೋದರತ್ತೆ ಮಗ ಡಾ॥ ಹೆಚ್. ಕೆ. ರಂಗನಾಥ್‌ಗೆ ವಿಚಾರ ತಿಳ್ಸಿದೆ. ಆತನೂ ಓದಿ ಮೆಚ್ಚಿಕೊಂಡು ಕುರ್ತಕೋಟಿಯವರೆಗೆ ಕೊಟ್ಟಾಗ 'ತುಂಗಭದ್ರ' ಬೆಳಕಿಗೆ ಬಂತು. ಅದು ಈಕೆಯ ಪ್ರತಿಭೆಗೆ ನಾಂದಿ ಆಗಿ–ಒಬ್ಬ ಪ್ರಖ್ಯಾತ ಕಾದಂಬರಿ ಕಾರ್ತಿ ಆಗಲು ಅವಕಾಶ ಮಾಡಿಕೊಟ್ಟಿತು.

ಇಷ್ಟೊಂದು ಕಷ್ಟ, ಕಾರ್ಪಣ್ಯಗಳ ನಡುವೆ ಸಾವುನೋವುಗಳ, ಮಾನಸಿಕ ಹಿಂಸೆಗಳ ಮಧ್ಯೆ ಕುಗ್ಗದೆ ಎಪ್ಪತ್ತೈದು ವರ್ಷ ತಲ್ಪಿದ ಇಂದಿರಾ ನಿಜಕ್ಕೂ ಸಾಹಸಿ.... ಹಿಂದೆ ಹೇಳಿದ ಚಿಕ್ಕ ಹುಡುಗಿ, ಮಂಗಗಳ ಹಿಂಡು ಎದುರು ಬಿದ್ದಾಗ ಕೋಲು ಹಿಡಿದು ಹೆದರಿಸಿ ನಿಂತ ದಿಟ್ಟ ಹುಡುಗಿ ಚಿತ್ರಣ ಈಗಲೂ ನೆನಪಿಗೆ ಬರುತ್ತದೆ....ಹೀಗೇ ಮುಂದೆ ಸಾಗಿ 'ಸೆಂಚುರಿ' ಬಾರಿಸಲೆಂದು ಹಾರೈಸುವೆ !

"ಅಂಥ ಶ್ರೀರಾಮನ ಕೈ ಹಿಡಿದ ಮಹಾತಾಯಿ ಸೀತಾದೇವಿಯೆಂತ ಸುಖ ಪಟ್ಳೆ ? ಉದ್ದಕ್ಕೂ ಆಕಿಗೆ ಕಷ್ಟವೇ. ಹೋಗ್ಲಿ ಆ ಗಂಡನಾರಾ ಸುಖ ಕೊಟ್ನೇ ? ಪ್ರಪಂಚಕ್ಕೆಲ್ಲಾ ಬೇಕಾದ ದೇವರು ಆ ರಾಮಚಂದ್ರ ಆಕೇನ ಬೆಂಕಿಗೆ ಹಾರಿಸ್ದ. ಬಸುರಿ ಹೆಂಗ್ಸನ್ನ ಕಾಡಿಗೆ ಕಳಿಸ್ದ. ಎಂತ ಪುರಾಣವೋ, ಪುಣ್ಯ ಕಥೆಯೋ–ಅಂತೂ ಮಾಡೂಕೆ ಕಸುಬಿಲ್ಲದೋರು ಬರೆದಿಟ್ಟು, ನಮ್ಮಂಥ ಸೋಮಾರಿಗಳು ಅದನ್ನು ನಂಬೂದು ಅಷ್ಟೇ ಸೈ."

(ಫಣಿಯಮ್ಮ, ಪುಟ 100)

ಸಹಜ ಪ್ರತಿಭೆ

○

○

○ ಅನುಪಮಾ ನಿರಂಜನ

1963ರ ಆದಿಭಾಗ ಅದು. ಒಂದು ದಿನ ನಾನು ಕ್ಲಿನಿಕ್ಕಿನಲ್ಲಿ ಕೆಲಸ ಮಾಡುತ್ತಿರುವಾಗ ಅಪರಿಚಿತೆಯೊಬ್ಬರು ಬಂದು,

''ನನ್ನ ಹೆಸರು ಎಂ. ಕೆ. ಇಂದಿರಾ ಅಂತ. ನನ್ನ ಕಾದಂಬರಿ 'ತುಂಗ ಭದ್ರ' ಇದೇ ತಾನೇ ಪ್ರಕಟವಾಗಿದೆ. ಅದನ್ನ ನಿಮಗೆ ಕೊಡೋಕೇಂತ ಬಂದೆ" ಎಂದರು.

ಆದುವರೆಗೆ ಕನ್ನಡ ಸಾಹಿತ್ಯ ಲೋಕದಲ್ಲಿ ನಾನು ಇಂದಿರಾ ಅವರ ಹೆಸರು ಕೇಳಿರಲೇ ಇಲ್ಲ. ಪುಸ್ತಕ ಕಂಡಾಗ ಸಂತೋಷವಾಯಿತು. ''ಓದಿ ಅಭಿಪ್ರಾಯ ತಿಳಿಸ್ತೀನಿ''ಅಂದೆ.

ನಾನು ಬೇರೆ ರೋಗಿಗಳನ್ನು ಪರೀಕ್ಷಿಸಲಾರಂಭಿಸಿದೆ. ಸ್ವಲ್ಪ ಹೊತ್ತಿನ ಬಳಿಕ ಇಂದಿರಾ ಮತ್ತೆ ಒಳಬಂದು

''ಡಾಕ್ಟರನ್ನು ನೋಡಿದಾಗ ಏನಾದ್ರೂ ಔಷದ ಕೇಳಬೇಕೆನಿಸುತ್ತೆ. ನನ್ನ ಎರಡೂ ಕಾಲಲ್ಲಿ ತುಂಬಾ ಕಲ್ಲೊತ್ತುಗಳಿವೆ. ಇದಕ್ಕೆ ನಿಮ್ಮಲ್ಲಿ ಔಷಧಿ ಏನಾದ್ರೂ ಇದೆಯೆ ?" ಎಂದು ಪ್ರಶ್ನಿಸಿದರು.

ಮುಲಾಮು ಸಿದ್ಧಪಡಿಸಿ ಅವರಿಗೆ ಕೊಟ್ಟೆ. ಆಮೇಲೆ ಅದರ ಬಗ್ಗೆ ಮರೆತೂ ಬಿಟ್ಟಿದ್ದೆ. ಆದರೆ ಮುಂದೆ ಇಂದಿರಾ ಸಿಕ್ಕಿದಾಗಲೆಲ್ಲ,

''ನಿಮ್ಮ ಮುಲಾಮಿನಿಂದ ಕಾಲೊತ್ತು ಗುಣವಾಯಿತು" ಅನ್ನುತ್ತಿದ್ದರು.

ಆ ಹೊತ್ತಿಗೆ ನಾನು ಮೂರು ನಾಲ್ಕು ಕಾದಂಬರಿ ಬರೆದಿದ್ದೆ. 'ತುಂಗಭದ್ರ' ಓದಿದಾಗ ನನಗೆ ಅಪೂರ್ವವಾದ ಅನುಭವವಾಯಿತು. ಮಲೆ ನಾಡಿನ ಚಿತ್ರಗಳನ್ನು ಕುವೆಂಪು ಬಿಟ್ಟರೆ ಬೇರೆ ಯಾರೂ ಬರೆದಿರಲಿಲ್ಲ. ಈಗ ಇಂದಿರಾರ ಪಾತ್ರಗಳೊಂದಿಗೆ ಹೊಸಲೋಕ ಹೊಕ್ಕ ಹಾಗಾಯಿತು. ಕಾದಂಬರಿಯಲ್ಲಿ ಬಳಸಿದ ಪ್ರಾದೇಶಿಕ ಭಾಷೆಯ ಸೊಗಡು ನನ್ನನ್ನು ಮೋಹಿಸಿತು. ಅದುವರೆಗೆ ಸಾಹಿತ್ಯ ರಚನೆಯ ಸುಳಿವೇ ಇಲ್ಲದ ಈ ವ್ಯಕ್ತಿ ಇಂಥ ಒಳ್ಳೆಯ ಕೃತಿ ರಚಿಸಿದ್ದಾರಲ್ಲ ಎಂದು ವಿಸ್ಮಯ ವಾಯಿತು.

ಮುಂದೆ ಯಾವುದೋ ಸೆಮಿನಾರಿನಲ್ಲಿ ಇಂದಿರಾ ಸಿಕ್ಕಿದರು. ಆಗ ಅವರೆಂದಿದ್ದರು.

''ನಂಗೆ ಹೆಚ್ಚು ವಿದ್ಯಾಭ್ಯಾಸವಾಗಿಲ್ಲ. ಓದಿದೋರ ಜೊತೆ ಭಾಗವಹಿಸೋಕೆ ಸಂಕೋಚವಾಗುತ್ತೆ !''

ಓದಿಗೂ ಸೃಜನಶೀಲತೆಗೂ ಸಂಬಂಧವಿಲ್ಲ ಎಂಬ ಅಂಶ ಆಗಲೇ ನನಗೆ ಮನದಟ್ಟಾಗಿತ್ತು. ಉನ್ನತ ವ್ಯಾಸಂಗ ಮಾಡಿದ ಬೇರೆ ಲೇಖಕಿಯರ ಕೃತಿಗಳನ್ನೂ ಇಂದಿರಾರ ಕೃತಿಗಳನ್ನು ಒಟ್ಟಿಗೆ ಇಟ್ಟಾಗ, ಇಂದಿರಾ ಕೃತಿಗಳೇ ಹೆಚ್ಚು ಮೌಲಿಕವಾಗಿ ಕಂಡುವು. ಓದು ಸೃಜನಶೀಲತೆಯನ್ನು ಅರಳಿಸುವುದಿಲ್ಲ (ಆದರೆ ಒಂದಿಷ್ಟು ಒಪ್ಪ ಓರಣ ಕೊಡಬಹುದು ಅಷ್ಟೆ.) ಆ ಕ್ರಿಯೆ ತನ್ನಿಂದ ತಾನೇ ನಡೆಯಬೇಕಾದದ್ದು, ಕಾನನದಲ್ಲಿ ಹೂವೊಂದು ವಿಕಸಿಸುವ ಹಾಗೆ, ಇಂದಿರಾ ಇಂತಹ ಸಹಜ ಪ್ರತಿಭೆಯ ಲೇಖಕಿಯಾಗಿದ್ದರು.

ಕೆಲವೇ ವರ್ಷಗಳಲ್ಲಿ ಇಂದಿರಾ ತುಂಬ ಜನಪ್ರಿಯರಾದರು. ಎಲ್ಲ ಪತ್ರಿಕೆಗಳಲ್ಲೂ ಅವರ ಕತೆ, ಕಾದಂಬರಿ ಕಾಣುತ್ತಿದ್ದುವು. ಅವರು 'ಗೆಜ್ಜೆ ಪೂಜೆ'ಯಂತಹ ಒಂದು ಅಪ್ರತಿಮ ಕಲಾಕೃತಿ ರಚಿಸಿದಾಗ, ಅದು ಚಲನಚಿತ್ರವೂ ಆದಾಗ, ಜನ ಅವರನ್ನು ಹಾಡಿ ಹೊಗಳಿದ್ದು ಅಚ್ಚರಿಯೇನಲ್ಲ.

ಇಂದಿರಾ ಸ್ನೇಹಮಯಿ. ಇಷ್ಟವಾದರೆ ಗಂಟೆಗಟ್ಟಲೆ ಮಾತಾಡುತ್ತಿದ್ದರು. ತಾವು ಮಾತಾಡಲು ಶುರು ಮಾಡಿದರೆ ಬೇರೆಯವರಿಗೆ ಮಾತಾಡಲು ಅವಕಾಶ

ಕೊಡುತ್ತಿರಲಿಲ್ಲ. ಅನೇಕ ಕಿರಿಯ ಲೇಖಕಿಯರಿಗೆ ಅವರು ಪ್ರೋತ್ಸಾಹ ನೀಡಿದ್ದನ್ನು ಕಂಡಿದ್ದೇನೆ.

ಕುಗ್ರಾಮದಲ್ಲಿ ಬೆಳೆದವರಾದರೂ ಇಂದಿರಾ ವಿಚಾರಶಕ್ತಿ ಪ್ರಖರವಾದದ್ದು. ಸಂಸ್ಕೃತ ಮತ್ತು ಹಳಗನ್ನಡ ಕಾವ್ಯದ ಓದು ಅವರ ಭಾಷೆಗೆ ಕಾವ್ಯಮಯತೆ ತಂದು ಕೊಟ್ಟಿತ್ತು. 'ತಪೋನಂದನ'ದಂತಹ ಕೃತಿಯಲ್ಲಿ ಠಕ್ಕ ಬಾಬಾಗಳನ್ನು ಧೈರ್ಯದಿಂದ ಬಯಲಿಗೆಳೆದ ಹಾಗೆ, 'ಫಣಿಯಮ್ಮ'ನಲ್ಲಿ ಸ್ತ್ರೀಪರ ದನಿ ಎತ್ತಿದರು. ಸಂಪ್ರದಾಯ ಗಳನ್ನು ಅವರು ಪ್ರಶ್ನಿಸಿದರು. ಹಳೆಯ ಪೀಳಿಗೆಯ ಲೇಖಕಿಯಾದ ಇಂದಿರಾ, ಆಧುನಿಕ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು, ಹೊಸತಕ್ಕೆ ಸ್ಪಂದಿಸುತ್ತಿದ್ದ ರೀತಿ ಅನನ್ಯವಾಗಿತ್ತು.

ಈ ಮಧ್ಯೆ 'ಫಣಿಯಮ್ಮ'ದ ಇಂಗ್ಲಿಷ್ ಆವೃತ್ತಿ ತರಲು ದೆಹಲಿಯ ಕಾಳಿ ಪ್ರೆಸ್‌ನವರು ಮುಂದಾದರು.

ನನ್ನ ಹಿರಿ ಮಗಳು ತೇಜಸ್ವಿನಿ ಆ ಕಾದಂಬರಿಯನ್ನು ಇಂಗ್ಲೀಷಿಗೆ ಅನುವಾದಿಸಿ ಕೊಡಲು ನನ್ನನ್ನು ಕೇಳಿದ್ದಾರೆ ; ಅಂದಾಗ ನನಗೆ ಅತ್ಯಾನಂದವಾಯಿತು. ಕನ್ನಡ ಲೇಖಕಿಯೊಬ್ಬರ ಕೃತಿ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗುತ್ತಿರುವುದು, ನಮಗೆಲ್ಲಾ ಹೆಮ್ಮೆಯ ಸಂಗತಿಯೋ.

1980ರ ಬಳಿಕ ಇಂದಿರಾ ಮತ್ತು ನನ್ನ ಭೇಟಿ ಕಡಿಮೆಯಾಯಿತು. ಕಾರಣ ಅನಾರೋಗ್ಯಗಳು. ಆದರೆ ಸಿಕ್ಕಿದಾಗಲೆಲ್ಲ ಅವರು ಪ್ರೀತಿ ವಿಶ್ವಾಸಗಳಿಂದ ಮಾತಾಡಿ ಸುತ್ತಿದ್ದುದನ್ನು ಮರೆಯುವಂತಿಲ್ಲ.

ಈಗ್ಗೆ ನಾಲ್ಕಾರು ತಿಂಗಳ ಹಿಂದೆ ಎಂ.ಕೆ. ಇಂದಿರಾ ಬದುಕು–ಬರಹಗಳ ಬಗ್ಗೆ ಒಂದು ವಿಸ್ತೃತ ಲೇಖನ 'ತುಷಾರ' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅದನ್ನೋದಿ ನನಗೆ ತುಂಬಾ ಹಿಗ್ಗು. ಒಬ್ಬ ಲೇಖಕಿಯ ಕೃತಿಗಳನ್ನು ಗಂಭೀರವಾಗಿ ಪರಿಗಣಿಸಿ, ಅಧ್ಯಯನದ ಒರೆಗಲ್ಲಿಗೆ ಹಚ್ಚಿದ್ದಾರಲ್ಲ, ಎಂದು. ಧಾರವಾಡದ ಶ್ರೀಮತಿ ಮಂದಾಕಿನಿ ಪುರೋಹಿತ ಇಂದಿರಾ ಕೃತಿಗಳ ಬಗ್ಗೆ ಡಾಕ್ಟೊರೇಟ್ ಮಾಡಿದ ವಿಷಯ ಆ ಲೇಖನದಲ್ಲಿ ನಮೂದಿತವಾಗಿರಲಿಲ್ಲ. ಈ ಎಲ್ಲ ವಿಷಯ ಕುರಿತು ಇಂದಿರಾರಿಗೆ ಒಂದು ಪತ್ರ ಬರೆದೆ, ಅವರು ಆಗ ಜಯನಗರದ ತಮ್ಮ ಸೋದರಿಯ ಮನೆಯಲ್ಲಿದ್ದರು. ಪತ್ರದ

ಕಡೆಯಲ್ಲಿ, "ಎಂದಾದರೊಂದು ಸಂಜೆ ನಿಮ್ಮನ್ನು ಕಾಣಲು ಬರುತ್ತೇನೆ. ನೋಡಬೇಕು ಅಂತ ತುಂಬ ಅನ್ನಿಸಿದೆ" ಎಂದು ಬರೆದೆ.

ಮರದಿನವೇ ಇಂದಿರಾ ನಮ್ಮ ಮನೆಯಲ್ಲಿ ಪ್ರತ್ಯಕ್ಷರಾದರು. ನನಗೋ ಆಶ್ಚರ್ಯ. ಅವರೆಂದರು.

"ನಾನು ನಾಳೆಯೇ ವಿಲ್ಸನ್‌ಗಾರ್ಡನ್‌ಗೆ ಹೋಗುತ್ತಿದೀನಿ. ನಾನಿಲ್ಲದಾಗ ನೀವು ನನ್ನ ಸೋದರಿಯ ಮನೆಗೆ ಬಂದರೆ ಬೇಜಾರಾಗುತ್ತೆ ಅಂತ ನಾನೇ ಬಂದೆ."

ಅವರ ಮಗುವಿನಂತಹ ಮನಸ್ಸಿಗೆ, ನಮ್ರತೆಗೆ, ನಿಗರ್ವಕ್ಕೆ ಈ ಘಟನೆ ಸಾಕ್ಷೀಭೂತವಾಗಿದೆ.

ಅಂದು ಬಹಳ ಹೊತ್ತು ಮಾತಾಡಿದೆವು. ಸಾಹಿತ್ಯ ಅಲ್ಲದೆ ಇತರ ವಿಚಾರಗಳೂ ಬಂದವು. ಬಲಗೈ ನೋವಾಗುತ್ತದೆ, ಬರೆಯೋದು ಕಷ್ಟ, ಅಂದರು ಇಂದಿರಾ. ಆದರೂ ಆತ್ಮಕಥನ ರೂಪದ 'ಬಿಂಬ' ಬರೆದು ಮುಗಿಸಬೇಕೆಂಬ ಆಸೆಯಿರುವುದಾಗಿ ನುಡಿದರು. 75ರ ಇಂದಿರಾರ ಅದಮ್ಯ ಉತ್ಸಾಹ ಕಂಡು ನಾನು ಬೆರಗಾದೆ. ಅವರು ನೂರ್ಕಾಲ ಬಾಳಲಿ, ಎಂಬ ಹಾರೈಕೆ ನಮ್ಮೆಲ್ಲರದೂ.

ತಾನು ಒಂದು ಉಪನಯನ ಮಾಡಿಕೊಳ್ಳುವುದರಿಂದ ಅನೇಕರಿಗೆ ಸಂತೋಷವಾಗುವುದರಿಂದ ನನಗಾಗುವ ನಷ್ಟವೇನು ? ಅಲ್ಪ ತೃಪ್ತರು ಈ ಜನ. ಇದೇ ಜನರ ನಡುವೆ ಹುಟ್ಟಿ ಬೆಳೆದ ನಾನು ಮುಂದೆಯೂ ಇವರ ನಡುವೆಯೇ ಬಾಳಬೇಕು. ನಮ್ಮಲ್ಲಿ ಬುಡವೇ ಇಲ್ಲದ ಮೂಢ ನಂಬಿಕೆಗಳಿರುವುದು ನಿಜ. ಅದರ ಬಗ್ಗೆ ವಾದಿಸಿ ಸಾಧಿಸಿ ನನಗೆ ಆಗಬೇಕಾದ್ದು ತಾನೇ ಏನು ?

(ಗುಂಡ–ಪುಟ 161)

ಸರಳ ಸೋದರಿ

○

○

○ ಟಿ. ಸುನಂದಮ್ಮ

ಕಾಲು ಶತಮಾನಕ್ಕೂ ಮೀರಿದ ಹಿಂದಿನ ದಿನಗಳ ನೆನಪು. ಲೇಖಕಿಯರ ಸಂಖ್ಯೆ ಬೆರಳ ಮೇಲಣ ಎಣಿಕೆ ದಾಟಿ ಎರಡಂಕಿನ ಪಂತ ಮುಟ್ಟಿತ್ತು. ಆದರೆ ಪರಸ್ಪರ ಬೆರೆಯುವ ಅವಕಾಶವಿರಲಿಲ್ಲ. ಕಾದಂಬರಿಗಳ ಮುಖ ಪುಟಗಳ ಮೇಲೆ, ಕತೆಗಳ ತಲೆ ಬರಹದ ಕೆಳಗೆ, ಅವರ ಹೆಸರುಗಳನ್ನು ಓದುತ್ತಿದ್ದುದೇ ಹೊರತಾಗಿ, ವೈಯಕ್ತಿಕ ಪರಿಚಯವಿಲ್ಲ!

ಈ ಕೊರತೆಯನ್ನು ನೀಗುವ ಪ್ರಥಮ ಪ್ರಯತ್ನ ಮಾಡಿದವರು ಶ್ರೀಮತಿ ಶಾಂತಾ ದಿವಾಕರ. 1964ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಒಂದು ದಿನದ ಲೇಖಕಿಯರ ಸಹೃದಯ ಸಂಕಿರಣ ಏರ್ಪಾಟಾಗಿತ್ತು. ಖ್ಯಾತ ಕವಯತ್ರಿ ಜಯದೇವಿ ತಾಯಿ ಲಿಗಾಡೆ ಹಾಗೂ ಶ್ರೀಮತಿ ಸರೋಜಿನಿ ಮಹಿಷಿ ವೇದಿಕೆಯಲ್ಲಿ ಮಂಡಿಸಿದ್ದರು. ನನಗಂತೂ ಅದೊಂದು ಮರೆಯಲಾಗದ ಅನುಭವ. ಹೆಸರು ಕೇಳಿದ್ದ, ಕೇಳಿರದ, ಹಲವು ಲೇಖಕಿಯರನ್ನು ನೋಡುವ ಸೌಭಾಗ್ಯ ನನ್ನ ದಾಯಿತು.

ಅವರ ಮಧ್ಯೆ ಮಂಡಿಸಿದ್ದ ಮಧ್ಯಮ ವಯಸ್ಸಿನ ಸರಳ ಸೌಂದರ್ಯದ ಸಂಪ್ರದಾಯಸ್ಥ ಮಹಿಳೆ ಯಾರಿರಬಹುದೆನ್ನುವ ಸಂದಿಗ್ಧದಲ್ಲಿರುವಾಗಲೇ ಪರಿಚಯಕಾರ್ತಿ ಶಾಂತಾರವರ ಧ್ವನಿ ಮೂಡಿಸಿತು–"ಎಂ.ಕೆ. ಇಂದಿರಾ" ಆಗ ನಾನು ಮನೋಹರ ಗ್ರಂಥಮಾಲೆಯ ಚಂದಾದಾರಳಾಗಿದ್ದೆ. 'ತುಂಗಭದ್ರ' ಕಾದಂಬರಿ ಕೈ ಸೇರಿದ್ದು, ಅದೇ ತಾನೇ ಓದಿ ಮುಗಿಸಿದ್ದ

ನಾನು ಪುಳಕಿತಳಾದೆ. ಆ ಕಾದಂಬರಿಯ ವಸ್ತು ಹಾಗೂ ನಿರೂಪಣಾ ಶೈಲಿ, ಆಳವಾದ ಪ್ರತಿಕ್ರಿಯೆ ಮೂಡಿಸಿತು.

ಶ್ರೀಮತಿ ಇಂದಿರಾರವರ ವೈಯಕ್ತಿಕ ಪರಿಚಯವಾದದ್ದು, ದಿವಂಗತ ಶ್ರೀಮತಿ ಎಚ್. ಆರ್. ಇಂದಿರಾರವರು ಹುಟ್ಟು ಹಾಕಿದ 'ಲೇಖಕಿಯರ ಸಂಘ'ದ ಮೂಲಕ. ಸಂಘದ ಪ್ರಾರಂಭೋತ್ಸವದಂದು ಪ್ರತಿಯೊಬ್ಬ ಲೇಖಕಿಯನ್ನೂ ಸಂಚಾಲಕಿ ಪರಿಚಯಿಸಿದಾಗ ಹಿಂದಿರುಗಿ ನನ್ನನ್ನು ನೋಡಿದ ಎಂ. ಕೆ. ಇಂದಿರಾರವರ ಉದ್ಗಾರ, "ಇವರೇನಾ ಟಿ. ಸುನಂದಮ್ಮ ?"

ವಯಸ್ಸಿನಲ್ಲಿ ಆರು ತಿಂಗಳು ಮಾತ್ರ ಹಿರಿಯರು ; ಬರವಣಿಗೆಯ 'ಸರ್ವಿಸ್' ನಲ್ಲಿ ನಾನು ಅವರಿಗಿಂತ ಇಪ್ಪತ್ತೈದು ವರ್ಷ ಹಿರಿಯಳು ! ಬದುಕಿನ ನಾಲ್ಕು ದಶಕಗಳ ನಂತರ 'ಬರಹಗಾರ್ತಿ'ಯ ಬಿರುದು ಪಡೆದ ಶ್ರೀಮತಿ ಇಂದಿರಾ, "ನೀವು ನಮ್ಮ ಮನೆಯವರಿಗೆಲ್ಲ 'ಕೊರವಂಜಿ' ಸುನಂದಮ್ಮನಾಗಿ ಪ್ರಿಯರು" ಎಂದು ಮೆಚ್ಚುಗೆಯ ನುಡಿಯಾಡಿದಾಗ ನನಗೆ ನಿಜಕ್ಕೂ ಹೆಮ್ಮೆ ಎನಿಸಿತು.

'ತುಂಗಭದ್ರೆ'ಯಿಂದ ಪ್ರಾರಂಭವಾದ ಸಾಹಿತ್ಯ ನದಿಯಪಾತ್ರ ವಿಶಾಲವಾಗಿ ಹರಿದು ರಾಜಗಾಂಭೀರ್ಯದಿಂದ ಸಾಗಿ ಇಂದು ಶ್ರೀಮತಿ ಇಂದಿರಾರವರನ್ನು ಕನ್ನಡದ ಶ್ರೇಷ್ಠ ಕಾದಂಬರಿಕಾರ್ತಿಯರ ಸಾಲಿನಲ್ಲಿ ನಿಲ್ಲಿಸಿದೆ.

ಇಂದಿರಾ 'ಅಪ್ಪಟ' ಕನ್ನಡತಿ ; ಕೇವಲ ಎರಡನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಅವರಿಗೆ ಕನ್ನಡದ ಹೊರತಾಗಿ ಬೇರೆ ಭಾಷೆ ಬಾರದು. ಆಕೆ ಅನುಭವದ ವಿಶ್ವವಿದ್ಯಾಲಯ ಪದವೀಧರೆ !

ಗೆಳತಿ ಸಾವಿತ್ರೀದೇವಿಯವರೊಂದಿಗೆ ಇಂದಿರಾರವರ ಮನೆಗೆ ಮೊದಲಬಾರಿ ಹೊರಟಾಗ, ತುಂಬ ಕುತೂಹಲ. ಹೆಸರಾಂತ ಲೇಖಕಿಯ ಖಾಸಗಿ ಕೋಣೆ ಹೇಗಿರಬಹುದು ? ಬರವಣಿಗೆಗೆ ಏಕಾಂತವನ್ನು ಹೇಗೆ ಸಾಧಿಸಿಕೊಳ್ಳುತ್ತಾರೆ ?...ಅಲ್ಲಿ ಕಂಡದ್ದು, ವಿಲ್ಸನ್ ಗಾರ್ಡನ್ ಮನೆಯೊಂದರ ಮಹಡಿ. 'ಹಾಲ್'ಗೆ ನೇರಪ್ರವೇಶ ಎಡಬದಿಗೆ ದೊಡ್ಡ ಮೇಜು, ಕುರ್ಚಿ ; ಮೇಜಿನ ಮೇಲೆ ಪುಸ್ತಕಗಳು, ಪತ್ರಗಳು ಹಸ್ತಪ್ರತಿಗಳು, ಪೆನ್ನು, ಪಕ್ಕದಲ್ಲಿದ್ದ ಗೋಡೆ ಶೆಲ್ಫಿನ ತುಂಬ ಇಂದಿರಾರವರಿಗೆ ದೊರೆತ ಫಲಕಗಳು, ಕಲಾಕೃತಿಗಳು, ಭಾವಚಿತ್ರಗಳು. ಒಳಬಾಗಿಲಲ್ಲೇ ಅಡಿಗೆ ಕೋಣೆ. ಓಡಾಡುತ್ತಿರುವ ಕುಟುಂಬ ಸದಸ್ಯರು, ಭೇಟಿಗೆ ಬರುತ್ತಿರುವ ಅಭಿಮಾನಿ

ಗಳು, ಪ್ರಕಾಶಕರು, ಸಾಹಿತಿ ಮಿತ್ರರು. ಬಂದವರಿಗೆ ಕಾಫಿ ಕೊಡಿಸಿ ಬಾಯ್ತುಂಬ ಮಾತನಾಡಿ ಕಳಿಸುತ್ತ ಮೇಜಿನ ಮುಂದೆ ಕೂತಿರುವ ಲೇಖಕಿ !

ಇಂದಿರಾರವರ ಜೀವನ ಕ್ರಮ ಸರಳ-ರಾತ್ರಿ ಮಲಗುವ ಮುನ್ನ ಕುಡಿಯಲೇ ಬೇಕಾದ ಒಂದು ಬಟ್ಟಲು ಹಾಲು ಬಹುಶಃ ಅವರ ಒಂದೇ ಒಂದು ಆಗತ್ಯ ಅವಶ್ಯಕತೆ. ಭಾವ ಚಿತ್ರಕ್ಕೆ ಶಾಲು ಹೊದ್ದಿರಬೇಕು, ಇದು ಅವರ ವೈಶಿಷ್ಟ್ಯ.

ಪತ್ರಿಕೆಯೊಂದರ ವಿಶೇಷ ಸಂಚಿಕೆಗಾಗಿ ಬರೆದಿಟ್ಟಿದ್ದ, ತಾಯಿ–ಮಗನ ಪ್ರೇಮ ಬಂಧವನ್ನು ಕೇಂದ್ರೀಕರಿಸಿದ್ದ, ಕಿರು ದುರಂತ ಕಾದಂಬರಿಯ ಹಸ್ತಪ್ರತಿಯನ್ನು ತಮಗೆ ಪುತ್ರವಿಯೋಗವಾದಾಗ ಹರಿದು ಹಾಕಿದ್ದು, ಅಲ್ಲಿ ಉಪಸ್ಥಿತರಿದ್ದು ಕಥೆ ಕೇಳಿದ ಶ್ರೀ ಬೀಚಿ, ಸೂರ್ಯನಾರಾಯಣ ಚಡಗ, ಶ್ರೀಮತಿ ಸಾವಿತ್ರೀದೇವಿ ಮತ್ತು ನನಗೆ ತಿಳಿದ ವಿಚಾರ.

ವೈಯಕ್ತಿಕ ಜೀವನದಲ್ಲಿ ಕಷ್ಟ ದುಃಖಗಳನ್ನು ಅನುಭವಿಸಿದ್ದಾರೆ ; ಮಕ್ಕಳು ಸೊಸೆಯರು ಅಳಿಯ ಮೊಮ್ಮಕ್ಕಳ ಆನಂದವನ್ನು ಪಡೆದಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಜನಪ್ರಿಯತೆಯ ಭಂಡಾರವನ್ನೇ ಗಳಿಸಿದ್ದಾರೆ.

ಶ್ರೀಮತಿ ಎಂ. ಕೆ. ಇಂದಿರಾರವರಿಗೆ ಆಯುರಾರೋಗ್ಯ ಭಾಗ್ಯ ಕೊಡಲಿ ಎನ್ನುವುದು ಸೃಷ್ಟಿಕರ್ತನಲ್ಲಿ ನನ್ನ ನಮ್ರ ಕೋರಿಕೆ.

ಇಂದಿರಾ ಅತ್ತೆ ಮತ್ತು ನಾವುಗಳು

○

○

○ ಎ.ಎಸ್. ವೇಣುಗೋಪಾಲರಾವ್

" ಓ ! ಬಾ ಸ್ವಾಮಿ, ಬಾರೋ. ಎಷ್ಟು ದಿವಸ ಆಗಿ ಬಿಡ್ತಲ್ಲೋ ನಿನ್ನ ನೋಡಿ. ದಪ್ಪಗಾಗಿರೋ ಹಾಗಿದೀ. ಇಂದಿರಾ– ಮಕ್ಕಳು ಎಲ್ಲ ಚೆನ್ನಾಗಿದ್ದಾರಾ ?.... ಸರಿ ಒಬ್ಬನೇ ಬಂದೆಯಾ, ಯಾವಾಗಲೂ ಹೀಗೆ ನೀನು. ಏನಾದ್ರೂ ನೆವ ಹೇಳಿಬಿಡ್ತೀ... ಅಯ್ಯೋ, 'ಆ' ಮನೆಗೆ ಹೋಗಿ ಬಂದೆಯಾ, ಎಷ್ಟು ದೂರವಲ್ಲೋ. ನಾನು ಇಲ್ಲಿಗೆ ಬಂದು ಎಷ್ಟೋ ದಿವ್ಸ ಆಯ್ತಪ್ಪ. "

ಅತ್ತೆ ಎಂದಿನಂತೆ ಚಟಪಟ ಮಾತಾಡ್ತಾನೇ ಇದ್ದರು. ಆದರೆ ಆ ವೇಳೆಗೆ ಮಟ ಮಟ ಮಧ್ಯಾಹ್ನದ ಮಸಕುಗಣ್ಣನ್ನು ಮತ್ತೆ ಮತ್ತೆ ಉಜ್ಜಿಕೊಂಡು ನೋಡಿದೆ. ಜಯನಗರದ ಒಳಹಜಾರದ ಸುತ್ತಲ ಕತ್ತಲೆ ಮೆಲ್ಲಗೆ ತಿಳಿಯಾಗುತ್ತಿತ್ತು. ಅದೇ ಲವಲವಿಕೆ. ಅದೇ ಪುಟಿಯುವ ಉಲ್ಲಾಸ. ಅದೇ ಚಟಪಟ ಮಾತು. ಆದರೆ ಅತ್ತೆ ಹೇಗಿದ್ದವರು ಹೇಗಾಗಿ ಬಿಟ್ಟಿದ್ದಾರೆ. ತುಂಬುಗೆನ್ನೆ ಸುಕ್ಕುಸುಕ್ಕಾಗಿದೆ. ಕಣ್ಣು ಒಳ ಸರಿದು ಹೋಗಿದೆ. ಪದೇ ಪದೇ ಮಂಜಾಗುವ ಕನ್ನಡಕ ಮೇಲೆತ್ತಿ ಮತ್ತೆ ಮತ್ತೆ ಅಕ್ಕರೆಯಿಂದ ಆಳವಾಗಿ ನನ್ನನ್ನೇ ನೋಡುತ್ತಿದ್ದರೂ ಏನೋ ಹುಡುಕ್ತಾ ಇರೋ ಕಣ್ಣು, ಮೂಳೆ ಚಕ್ಕಳ ಆಗಿ ಬಿಟ್ಟಿದಾರಲ್ಲ. ಕಣ್ಣು ಆರ್ದ್ರವಾಯಿತು. " ಏನಮ್ಮಾ ಹೀಗಾಗಿ ಬಿಟ್ಟಿದೀರಿ ? "

" ಅಯ್ಯೋ ! ಅದೊಂದು ದೊಡ್ಡ ಕಥೆ ಹೇಳ್ತೀನಿ ತಾಳು. ಮೊದಲು ಒಂದು ಹನಿ ಕಾಫಿ ಕುಡಿ. ಶಾರದಾ, ಗೊತ್ತಾಗಲಿಲ್ವ ? ಗಂಗಮ್ಮನ ಮಗ ಸ್ವಾಮಿ ಅಲ್ವಾ ? ಈಗೇನೂ ಅಂತಿ. "

ಅವರನ್ನು ಕಷ್ಟಪಟ್ಟು ತಡೆದೆ. ಅತ್ತೆ ಹಿಂದೆಲ್ಲ ವಿಲ್ಸನ್ ಗಾರ್ಡನ್ ಮನೇಲಿ ಇದ್ದಾಗ ಅಲ್ಲೇ ನಮ್ಮ ಭೇಟಿ ಬೆಂಗಳೂರಿಗೆ ಹೋದಾಗಲೆಲ್ಲ. ಅಲ್ಲಿಂದಲೇ ಅವರ ಪ್ರೀತಿಯ-ವಾತ್ಸಲ್ಯದ-ದುಗುಡದ-ದುಮ್ಮಾನ ಉದ್ವೇಗದ-ಹರ್ಷ ಉಲ್ಲಾಸದ ತುಂಬು ಪತ್ರಗಳು ನನಗೆ 8–10 ವರ್ಷಗಳಿಂದ ಬರುತ್ತಲೇ ಇದ್ದದ್ದು. ನನ್ನ ಬರವಣಿಗೆ ಉದ್ಯೋಗಗಳ ಅವಾಂತರದಲ್ಲಿ ನನ್ನಿಂದಲೇ ಅದು ಕೆಲಕಾಲದಿಂದ ನಿಂತು ಹೋಗಿತ್ತು. ಬೆಂಗಳೂರಿಗೆ ಒಂದೆರಡು ಬಾರಿ ಹೋದಾಗಲೂ ನೂರೆಂಟು ಕೆಲಸಗಳ ಗಡಿಬಿಡಿ. ಎರಡು ಸಲವೂ ಕಾಣಲಾಗಿರಲಿಲ್ಲ. ಇದ್ದಕ್ಕಿದ್ದಂತೆ ತುಷಾರದಲ್ಲಿ ಕಂಡ ಒಂದು ಕಿರು ಲೇಖನದಲ್ಲಿ ಅವರು ತೀರ ಅಸ್ವಸ್ಥತೆಯಿಂದ ಮಗನ ಮನೆಯಲ್ಲಿದ್ದಾರೆಂದು ನನಗೆ ತಿಳಿಯದ ಒಂದು ಹೊಸ ವಿಳಾಸ ಇತ್ತು. ಕೆಲವು ದಿನಗಳ ನಂತರ ಬಿಡುವು ಮಾಡಿ ಕೊಂಡು ಅಲ್ಲಿಗೆ ಧಾವಿಸಿದಾಗ, ಮನೆಗೆ ಬೀಗ. ತೀರಾ ಉದ್ವೇಗ ಕಳವಳಗಳಿಂದ ಅವರಿವರನ್ನು ವಿಚಾರಿಸಿ, ಎಂ.ಕೆ. ಇಂದಿರಾ ಈಗ ಜಯನಗರದಲ್ಲಿ ಅಕ್ಕನ ಮನೇಲಿ ಇದ್ದಾರೆ. ಈಗ ಸ್ವಲ್ಪ ವಾಸಿ ಎಂದು ಕೇಳಿ ಸ್ವಲ್ಪ ಸಮಾಧಾನಗೊಂಡೆ. ಮರು ದಿನವೇ ಅಲ್ಲಿಗೆ ಧಾವಿಸಿದೆ. ಅವರ ಮಾತಿನ ಮಧ್ಯೆ ಈ ವಿವರಗಳನ್ನು ತಿಳಿಸಿದಾಗ ಅತ್ತೆ ಹೇಳಿದರು. "ಅದೇ-ದೊಡ್ಡ ಕತೆ ಅಂದೆನಲ್ಲ, ಚೆನ್ನಾಗಿಯೆ ಆರೋಗ್ಯ ವಾಗಿದ್ದೋಳಿಗೆ ಇದ್ದಕ್ಕಿದ್ದಂತೆ ಒಂದು ದಿನ ಮೂಗು ಬಾಯಿಂದ ರಕ್ತ ಧಾರೆ ಧಾರೆ. ಒಂದೇ ದಿನದಲ್ಲಿ ಕೆಸರು ಕೆಸರಾಗಿ ಮೂರು ಸೇರಿನಷ್ಟು ಧುಮ್ಮಿಕ್ಕಿ ಹೋಯ್ತಪ್ಪ. ನಾಕಾರು ಜನ ಡಾಕ್ಟರು ಇಡೀ ದಿನ ಶತ ಪ್ರಯತ್ನ ಮಾಡಿದರು. ನಿಲ್ಲಲೇ ಬ್ಯಾಡವೆ ? ಕಡೇ ಪ್ರಯತ್ನಾಂತ ಮಕ್ಕಳಿಂದ ಸಹಿ ಮಾಡ್ಸಿಕೊಂಡು ಆಪರೇಷನ್ ಮಾಡಿ ನಿಲ್ಲಿ ಸಿದರು. ಎರಡೆರಡು ಬಾಟ್ಲಿ ರಕ್ತ ಕೊಟ್ರು. ಆರು ಬಾಟ್ಲಿ ಡ್ರಿಪ್ಸ್, ನಾಕುದಿನದ ನರ್ಸಿಂಗ್ ಹೋಂಗೆ ಆರು ಸಾವಿರ ಕೈಬಿಡ್ತು. ಉಂಡ್ಹಂಗಲ್ಲ ತಿಂದ್ಹಂಗಲ್ಲ, ಅಲ್ವೇನೋ ಸ್ವಾಮಿ. ನೋಡು ಈಗ ಮೇಣ ಗೊಂಬೆ. ಯಾವ ವಾಹನ ಹತ್ತ ಬ್ಯಾಡ. ತಣ್ಣೀರು ಮಜ್ಜಿಗೆ ಕುಡೀ ಬ್ಯಾಡ. ಹುಳಿ ಕಾರ ತಿನ್ನಲೇ ಬ್ಯಾಡ. ಮತ್ತೇನು ತಿನ್ನಬೇಕಂತೆ, ಕುಡೀಬೇಕಂತೆ, ಇವರ ಅಜ್ಜೀ ತಲೆ ಕಾಯಿ. ಇನ್ನು ಓದಿ ಬರೆದು ಮಾಡೋಕೆ ಕಣ್ಣು ತೀರ ಕಾಣೋಲ್ವೋ. ಅರ್ಧಗಂಟೆ ಟಿ.ವಿ. ನೋಡ್ತೀನಿ ಮಲಗು ಮಲಗು. ಹೀಗೆ ಒಂದೆರಡು ವರ್ಷ ಆಯಸ್ಸು. ಹೆಚ್ಚು ಕಡಿಮೆ ಆಗಿ ಮತ್ತೆ ಮೂಗಿನಲ್ಲಿ ರಕ್ತ ಬಂದರೆ ನೇರವಾಗಿ ಪರಲೋಕವಂತೆ ! ಆರು ಸಾವ್ರ ಕೊಟ್ರೂ ಉಂಡ್ಹಂಗಲ್ಲ ತಿಂದ್ಹಂಗಲ್ಲ." ಈ ಸಂಕಟ ಕಥನದ ಮಧ್ಯದಲ್ಲಿಯೂ ಅವರ ಅರಳು ಹುರಿಯುವ ಮಾತುಗಾರಿಕೆಗೇನೂ ಮೋಸವಿಲ್ಲ. ಕೀಟಲೆ ದನಿಯಲ್ಲೇ ಹೇಳಿದೆ "ಹಾಗ್ಯಾಕಂತೀರಿ ಅತ್ತೆ. ನೀವೇ ಹೇಳಿದಿರಲ್ಲ ಎರಡು ಬಾಟ್ಲಿ ರಕ್ತ ! ಆರು ಬಾಟ್ಲಿ ಡ್ರಿಪ್ಸ್. ಕುಡಿದ ಹಾಗೇ ಅಲ್ವಾ ? ಅದಲ್ಲದೆ ನಿಮ್ಮ ಪರ್ಸ್ಸು ನಿಮ್ಮ ಹಳೇ ಶಕ್ತಿ ಹೀರಿದರೂ ನಿಮ್ಮ

ನಾಲಗೆಯ ದ್ರವ ಹೀರೋದಕ್ಕೆ ಯಾವ ಎಕ್ಸ್‌ಪರ್ಟ್ ಡಾಕ್ಟರ ಸಿರಿಂಜಿಗೂ ಸಾಧ್ಯ ಇಲ್ಲ ಬಿಡಿ. ಇನ್ನೂ ಆ ನಿಮ್ಮ ಡಾಕ್ಟರಿಗೆ ಗೊತ್ತಿಲ್ಲ. ಪರಲೋಕದಲ್ಲೂ ಈಗೆಲ್ಲ ಎಸ್.ಟಿ.ಡಿ. ಕೇಬಲ್ ಗ್ರಾಂ ಎಲ್ಲ ಇದೆಯಂತೆ. ನಿಮ್ಮ ಜೊತೆ ಹೀಗೇ ಮಾತಾಡ್ತಾನೇ ಇರಬಹುದು. ಅದರಿಂದ ಡಾಕ್ಟರಿಗೂ ಖರ್ಚು. ಅದಕ್ಕೆ ಬದಲು ನಿಮ್ಮನ್ನ ಇನ್ನೂ ಬಹಳ ಕಾಲ-ಶತಂಜೀವಶ್ಯರದಃ- ತಮ್ಮ ಕಣ್ಣೆದುರಿನಲ್ಲೇ ಇಸ್ಕೊಂಡು ಕಾಪಾಡಿ ಕೊಂಡರೆ ಅವರಿಗೆ ಕ್ಷೇಮ. ನಾವೆಲ್ಲ ಅವರಿಗೆ ತಿಳಿಸಿ ಹೇಳ್ತಿವಿ ಬಿಡಿ. ಹಾಗೆಲ್ಲ ನಿಮ್ಮನ್ನ ಇಷ್ಟು ಬೇಗ ..."

" ನಿನ್ನ ಎಡವಟ್ಟು ಮಾತೇ ಹೀಗೆ. ಎಷ್ಟಾದರೂ "ನನ್ನ" ಸೋದರತ್ತೆ ಮಗ ಅಲ್ವೆ ? ಎಲ್ಲಿ ಹೋಗುತ್ತೆ ಸುಳಿ ... "

" ಆದರೆ ನಿಮ್ಮ ಹಾಗೆ ಬರ್ಯೋದು ಮಾತ್ರ ಬರಲಿಲ್ಲ ನೋಡಿ. ನನ್ನ ಮೇಲೆ ನಿಮಗೆ ಸಾಕಷ್ಟು ಪ್ರೀತೀನೆ ಇಲ್ಲ. "

ಅತ್ತೆ ಮಗುವಿನಂತೆ ಕೆಂಪಾದರು, " ಯಾಕೋ ನೀನೇನು ಕಡಿಮೆ ಅಂದು ಕೊಂಡೆ ? ನಮ್ಮ ಮನೆಯೋರು ಅಂದರೆ.... "

" ಓ ! ಅತ್ತೆ ಅತ್ತೆ ಹೋಲ್ಡಾನ್. ಕಾಗೇನೂ ಕೂಗುತ್ತೆ, ಕೋಗಿಲೆ ಹಾಗೆ ಅದೂ ಕಪ್ಪೆ. ಆದರೆ ನೀವೇ ಹೇಳಿದ ಹಾಗೆ ನಾನೂ ಜಾಣನೇ. ಅದಕ್ಕೆ ನಿಮ್ಮ ಯೋಗ್ಯತೆ–ನನ್ನ ಯೋಗ್ಯತೆ ಎರಡೂ ನನಗೆ ಚೆನ್ನಾಗಿ ಗೊತ್ತಿದೆ. ಇನ್ನು ನಿಮ್ಮ ಕಥೆ ಬೆಳೆಸಿ. "

ಇಂದಿರಾ ನಿಟ್ಟುಸಿರಿಟ್ಟರು. ಕಣ್ಣು ಮಂದ ಆಗ್ತಾ ಇದೆ. ಲೇಖನಿ ಓಡೋದಿಲ್ಲ. "ಬಿಂದು"- ಆತ್ಮ ಚರಿತ್ರೆ ಮುಗಿಸಲೇ ಬೇಕು ಎಂದು ನಮ್ಮೆಲ್ಲರಂತೆ ಅವರಿಗೂ ತುಂಬಾ ಆಸೆ ಇದೆ. ಆದರೆ ಕೈ ನಡಗುತ್ತದೆ. ನೂರು ಪುಟಕ್ಕೂ ಹೆಚ್ಚು ಬರೆದೂ ಇದಾರೆ. ಅವರ ನೆನಪಿನ ಗಣಿಯೇ ಅಗಾಧ. ಮರೆವು ತಲೆಹಾಕಿಲ್ಲ. ಲೇಖಕಿ ಯರ ಸಂಘ ಯಾವುದಾದರೂ ರೀತಿ ನೆರವು ನೀಡಿ ಈ ಕೃತಿಯನ್ನು ಪೂರ್ಣಗೊಳಿಸು ವಂತಾದರೆ ಪುಣ್ಯ ಕಟ್ಟಿಕೊಳ್ಳುತ್ತದೆ. ಪ್ರಾಯಶಃ ಕೊಂಚ ಕೊಂಚ ಟೇಪ್ ಆದರೂ ಮಾಡಿಸಿಕೊಂಡರೆ ? ಸೂಕ್ಷ್ಮ ಸಂವೇದಿಯೂ ಆದ ದಕ್ಷ ಟೈಪಿಣಿಯೊಬ್ಬಳು ಅದನ್ನು ಕೃತಿಗಿಳಿಸಲು ಸಾಧ್ಯವಾದರೆ ? ಹೀಗೆ ಬಹುದೂರದ ಶಿವಮೊಗ್ಗೆಯಿಂದ ನನ್ನ ರೆ ರಾಜ್ಯದ ನಿಟ್ಟುಸಿರುಗಳು ಹರಡುತ್ತಲೇ ಇವೆ. ಮುಂದಿನ ಪೀಳಿಗೆಗೆ "ಬಿಂದು"

ವಿನ ಅತಿ ವಿಶಿಷ್ಟವೇ ಆದ ತಲೆಮಾರಿನ ಅನುಭವ ದಾಟದೆ ಹೋಗುತ್ತದಲ್ಲ ಎಂಬ ವ್ಯಥೆ ಮುತ್ತುತ್ತದೆ. ಇರಲಿ ಹಲವಾರು 'ಅಗಾಧ' ಗಳನ್ನು ಸಾಧಿಸಿದ ಲೇಖಕಿಯರು ಏನನ್ನಾದರೂ ಮಾಡಿಯಾರು. ಎಂ.ಕೆ. ಇಂದಿರಾ ಬಗೆಗೆ ಪಿಎಚ್.ಡಿ. ವ್ಯಾಸಂಗವೂ ನಡೆದಿದೆ ಎಂದು ಕೇಳಿದ್ದೇನೆ. ಅವರ ಕೃತಿಗಳ ಬಗ್ಗೆ ವಿಮರ್ಶಾ ಲೇಖನಗಳೂ ಬೆಳೆದಿವೆ. ಆದರೆ ಈ ಎಲ್ಲ ಅಕ್ಯಾಡಮಿಕ್ ಸ್ವರೂಪದ ಕೆಲಸದ ಜೊತೆಗೆ ಸ್ವತಃ ಲೇಖಕಿಯ ಆತ್ಮಚರಿತೆಯೇ ಆ ವಿಶಿಷ್ಟ ವ್ಯಕ್ತಿಯನ್ನು ಸಮಗ್ರವಾಗಿ ಕಡೆದು ನಿಲ್ಲಿಸಲು ಅತ್ಯಗತ್ಯವೆನಿಸುತ್ತದೆ.

ಈ ಬಗ್ಗೆ ನನಗೆ ಸಂಶಯವೇ ಇಲ್ಲ. ಏಕೆಂದರೆ ಎಂ.ಕೆ. ಇಂದಿರಾ ಬರಹದಲ್ಲಿ ಅದರಲ್ಲೂ ಆತ್ಮ ಚರಿತೆಯಲ್ಲಿ ತೀರ ಅಪರೂಪದ ಅಪ್ಪಟ ಪ್ರಾಮಾಣಿಕತೆಯಿದೆ. ಆದರ ತಾಜಾತನ ಅವರದ್ದೇ. ನಮ್ಮೆಲ್ಲರ ಬರಹಗಳಲ್ಲಿ ತಿಳಿದೋ ತಿಳಿಯದೆಯೋ ಇಣಕುವ ಪ್ರಭಾವಗಳು ಅಥವಾ ಅವುಗಳಿಂದ ಬಿಡಿಸಿಕೊಳ್ಳುವ ಚಟಗಳು ಇಲ್ಲವೇ ಹಟಗಳು ಅವರಲ್ಲಿಲ್ಲ. ಅದು ಹೇಗೋ ಬೌದ್ಧಿಕವೇ ಆಗಿ ಬಿಡುವ ಗೀಳಿನಿಂದ ಅವರು ತೀರಾ ಸಹಜವಾಗಿಯೇ ಮುಕ್ತರಾಗಿದ್ದಾರೆ. ಅವರ ಗಟ್ಟಿತನ ಇರುವುದೇ ಈ ಅಂಶದಲ್ಲಿ. ಪ್ರಾಯಶಃ ಅನುಭವದ ಮಣ್ಣಿನ ಕಂಪಿನಲ್ಲಿ ಅವರನ್ನು ಸರಿಗಟ್ಟು ವವರುಕನ್ನಡದಲ್ಲಿ ತೀರ ಕಡಿಮೆ. ಇಲ್ಲವೇ ಇಲ್ಲ ಎಂದರೆ ಸತ್ಯಕ್ಕೆ ತೀರ ದೂರವೇನೂ ಆಗುವುದಿಲ್ಲ. ಅವರು ಬೆಳೆದ ಪರಿಸರ, ಅವರ ಮಿಡ್ಲಿಸ್ಕೂಲು ಮೀರದ ವಿದ್ಯಾಭ್ಯಾಸ, ತೀರ ತಡವಾಗಿ ಬರೆಯುವುದಕ್ಕೆ ತೊಡಗಿದ ಕಥೆ-ಈ ಎಲ್ಲ ಉಳಿದವರಿಗೆ ತಿಳಿದದ್ದೇ, ಆದರೆ ಅವರ ಬರಹದ ಅಂತಃಸತ್ವ ಅವರದ್ದೇ. ಅವರ ಲೇಖನಿಯ ಸೋಲು ಗಳೆಲ್ಲವನ್ನೂ ಗಮನಿಸಿಯೂ ಈ ಮಾತು ಹೇಳಬಲ್ಲೆ. ತಮ್ಮದಲ್ಲದ ಅನುಭವಕ್ಕೆ ಅಪರೂಪಕ್ಕೆ ಲಗ್ಗೆ ಹಾಕುವಾಗ, ಅಂಥ ಭಾಷೆ ಬಳಸುವಾಗ, ಕೆಲವೊಮ್ಮೆ ಪರಿಸ್ಥಿತಿಯ ಒತ್ತಡದಿಂದ ಕೆಲವು ಕೃತಿಗಳನ್ನು ಅವರು ಹೊಸೆಯಲೇಬೇಕಾಗಿ ಬಂದ ಸಂದರ್ಭಗಳಲ್ಲಿ ಅವರ ಸೋಲುಗಳನ್ನು ಸುಲಭವಾಗಿಯೇ ಗುರುತಿಸಬಹುದು. ಅಷ್ಟೇಕೆ ಅವರ ತುಂಬ ಜನಪ್ರಿಯ ಕೃತಿ 'ಸದಾನಂದ'ದ ಸಿದ್ಧಿ ಆದರದೇ 'ಎರಡನೆ ಭಾಗ 'ಮಧುವನ' ದಲ್ಲಿ ಕಾಣದಿರುವುದು, ಸದಾನಂದದಲ್ಲಿಯೇ ರಾಜು–ಗೌರಿ-ಕಮಲ-ರಾಮಣ್ಣ-ಶಾಮಣ್ಣ ಕಡೆಗೆ ಆ ಬಚ್ಚನನ್ನು ಕಡೆದಿರುವ ಸಹಜತೆ, ಸದಾನಂದ ಉರುಫ್ ರಮಾನಂದರ ಚಿತ್ರಣದಲ್ಲಿ ಕಾಣುವುದಿಲ್ಲ. ಅವರ ತೆಗ್ಗಿನಮನೆ ಸೀತೆ, ಫಣಿಯಮ್ಮರಂತೆ ಬೆಂಗಳೂರು ಬೊಂಬಾಯಿ ಪಾತ್ರ ಪರಿಸರಗಳು ಪ್ರಿಯವಾಗುವು ದಿಲ್ಲ. ಬಾಲ್ಯದ ಅನುಭವದ ಗಾಢತೆ ಅವರ ಬರಹಗಳಲ್ಲಿ ಅಚ್ಚಳಿಯದ ಮುದ್ರೆ ಒತ್ತಿ ಬಿಟ್ಟಿದೆ. ಎಂ. ಕೆ. ಇಂದಿರಾ ಸಿದ್ಧಿಯನ್ನು ಅಲ್ಲಿಯೇ ಗುರುತಿಸಬೇಕು. ಗುರುತಿಸುವುದೇನು ? ಅದು ಮುತ್ತಿ ಬರುವ ಕಾಡು ಸಂಪಿಗೆಯ ಕಟು ಸೌರಭದಂತೆ,

ನೆಲಹಲಸಿನ ತಾಜಾ ಸವಿಯಂತೆ, ಹಲ್ಲಿಗೆ ಹುಚ್ಚು ಹಿಡಿಸುವ ದೋರೆ ಪೇರಲೆಯಂತೆ, ಮಾವಿನ ಮಿಡಿಯ ಉಪ್ಪಿನಕಾಯಿ ಹಣ್ಣಿನ ಗೊಜ್ಜುಗಳಂತೆ ತಾವೇ ನಿಮ್ಮನ್ನು ಮುತ್ತಿ ಆಕ್ರಮಿಸಿ ಬಿಡುತ್ತವೆ. ದುಂಬಿಯ ದಾಳಿಗೆ ತಾವರೆ ನಾಚಬೇಕಾದುದೂ ಇಲ್ಲ. ಅಧಿಕಸ್ಯ ಅಧಿಕತರ ಲಾಭ ದೊರಕುವುದು 'ಫಲ' ದೊರಕುವುದು ತಾವರೆಗೆ ಎಂಬುದೇನೂ ಸುಳ್ಳಲ್ಲ !

ಆದರೆ ಎಂ. ಕೆ. ಇಂದಿರಾ ಕೃತಿಗಳಲ್ಲಿ ಸುಲಭವಾಗಿ ಕಾಣಿಸಿಕೊಳ್ಳದೆ ಆತುರದ ವಿಮರ್ಶಕನ ಅವಸರದ ನಿರ್ಣಯಗಳನ್ನು ನಗುವಂತಹವು ಎಂದರೆ ಮೇಲು ನೋಟಕ್ಕೆ ಸಂಪ್ರದಾಯಸ್ಥರಂತೆ ತೋರುವ ಅವರ ಅನುಭವದ ಅಂಗಳದಲ್ಲಿ ಬೆಳೆದ ಪಾತ್ರಗಳಲ್ಲಿ ಸಹಜವಾಗಿ ಸಿಡಿಯುವ, ಒಳಗೊಳಗೆ ಗುಡುಗುವ ಕ್ರಾಂತಿಯ ಕಿಡಿಗಳು. ಇಂದಿರಾ ಅಬ್ಬರದ ಆವೇಶದ ರಿಬೆಲ್ ಅಂತೂ ಅಲ್ಲ. ಸ್ವತಂತ್ರ ಸಮಕಾಲೀನತೆಗಳ ಸಾಮಾಜಿಕ ಬದ್ಧತೆ ಇತ್ಯಾದಿಗಳ ಮಾಡರ್ನ್ ತುರ್ತುಗಳಿಗೆ ಅವರು ಹರದಾರಿ ದೂರವೇ ಇದ್ದಾರೆ. ಹೊಸ ಚಿಂತನೆಗಳ ಬಗ್ಗೆ ಅಷ್ಟಾಗಿ ಅವರು ಆಸಕ್ತಿ ತೋರಿದಂತಿಲ್ಲ. ಸಂಘಟನೆಗಳಲ್ಲಿ ಸಕ್ರಿಯ ಪಾತ್ರವೂ ಅವರಿಗೆ ಅನೇಕರಂತೆ ಸಾಧ್ಯವಾಗಿಲ್ಲ—ಸಹಜವೂ ಆಗಿಲ್ಲ. ಈ ಎಲ್ಲ ಮಾತುಗಳನ್ನು ಒಪ್ಪಿಯೂ ಅವರ ಪಾತ್ರಗಳು ಅದೆಷ್ಟು ಸಹಜವಾಗಿ ಹೊಸ ಅಗತ್ಯಗಳಿಗೆ ತೆರೆದುಕೊಂಡಿವೆ ಎಂಬುದು ಅಚ್ಚರಿ ಮೂಡಿಸುವ ಅಂಶವೇ. ತೀರ ಕುಗ್ರಾಮದ ಮಲೆನಾಡಿನ ಮೂಲೆಯ ವಿಧವೆ ಕಮಲೆ ಮದುವೆಗೆ ಸಿದ್ಧವಾಗಿ ಬಿಡುವುದು, ಗೌರಿ ಅದೆಷ್ಟು ಒರಟಾಗಿ ಒತ್ತರಿಸಿ ತಳ್ಳಿದರೂ ಅದರ ಹೃದಯದಲ್ಲಿ ಒಲವಿನ, ಅಸ್ಪಷ್ಟ ಅಗೋಚರ ಒಲವು ಕಚಗುಳಿಯಾಡಿಸಿ ಬಿಡುವುದು. ಹದಿನಾರಾಣೆ ಕಂದಾಚಾರದ ಫಣಿಯಮ್ಮ ಹೊಲೇರ ಆಳಿನ ಹೆಂಡತಿಯ ಹೆರಿಗೆಯನ್ನು ಯಾವ ಮುಜುಗರ ಇಲ್ಲದ ಕೋಮಲ ಬೆರಳುಗಳಲ್ಲಿ ಸಲೀಸಾಗಿ ಮಾಡಿಬಿಡುವುದು, ಗಂಡಸತ್ತ ಎಳೆ ಹುಡುಗಿಯ ಅಕ್ರಮ ಸಂಬಂಧವನ್ನು ಅಂತಃಕರಣದಿಂದ ಒಪ್ಪಿ ಬಿಡುವುದು, ಅಡ್ಡ ಮಾತಾಡುವ ಉಳಿದವರನ್ನು ತರಾಟೆಗೆ ತೆಗೆದುಕೊಳ್ಳುವುದು ಇಂಥ ಕೆಲವು ಉದಾಹರಣೆಗಳು ಮಾತ್ರ.

ಆದರೂ ತುಂಗಭದ್ರ, ಗೆಜ್ಜೆಪೂಜೆ ಇತ್ಯಾದಿ ಕಾದಂಬರಿಗಳನ್ನು ಬರಿಯ ಕುತೂಹಲ ಸಹಜ ಮೆಚ್ಚುಗೆಗಳಿಂದಲೇ ಓದಿದರೂ "ಅತ್ತೆ ಇಂದಿರಾ ನಮ್ಮನ್ನು ತಟ್ಟಿದ್ದು ಅವರ 'ತಾಪದಿಂದ ತಂಪಿಗೆ' ಕಾದಂಬರಿಯಿಂದ. ಆ ವೇಳೆಗೆ ಅಮ್ಮ ಬಹುದೂರದ ದೆಹಲಿಯಲ್ಲಿದ್ದರು. ಕಾಣದ ಕೇಳದ ದೇಶ ಭಾಷೆಗಳ ಬೇಸರ ಗೆಲ್ಲಲು ಆ ವಯಸ್ಸಿನಲ್ಲೂ ಕುರುಡುಗಣ್ಣಿನಲ್ಲಿ ಹೊಸ ಪುಸ್ತಕಗಳನ್ನು ಓದುತ್ತಲೇ ಇದ್ದರು. 'ತಾಪದಿಂದ....' ಓದಿ ಅವರು ಕಣ್ಣು ಒರೆಸಿಕೊಂಡದ್ದು, ತಮ್ಮ ಎಳೆಯ ದಿನದ ನೆನಪು

ಗಳೆಲ್ಲ ಅವರಿಗೆ ಮರುಕಳಿಸಿ ಅವರು ತುಂಬ ಹರ್ಷಚಿತ್ತರಾದದ್ದು.... ಈ ವಿವರಗಳನ್ನು ಅಣ್ಣ ಮೂರ್ತಿ ಇಂದಿರಾ ಅತ್ತೆಗೆ ಬರೆದು ತಿಳಿಸಿದರು. ಇದರ ಹಿನ್ನೆಲೆಯೆಂದರೆ 'ತಾಪದಿಂದ ತಂಪಿಗೆ'ಯ ನಾಯಕಿಯರು ಸ್ವತಃ ನನ್ನ ಅಮ್ಮ-ದೊಡ್ಡಮ್ಮ, ಅಲ್ಲಿಯ ಕತೆಯೆಲ್ಲ ಅವರು ಆಡಿ ಬೆಳೆದ ಶೀಗೋನೆ ತ್ವಾಟದ ಮನೆ-ಬಯಲು ಅಂಗಳ ಇತ್ಯಾದಿ. ಹೀಗೆ ಎರಡು ಸಾವಿರ ಮೈಲಿ ಆಚೆಯಲ್ಲಿ ದೆಹಲಿಯ ಕೆಟ್ಟ ಬಿಸಿಲನ್ನೂ ತಂಪುಗೊಳಿಸಿ ಮುದಿ ಹೃದಯಕ್ಕೆ ಚೇತನವೆರೆದ ಬರವಣಿಗೆ ಅತ್ತೆಯದು. ಅತ್ತ ತಂಗಿ ಗಂಗಮ್ಮ ನಿಗೆ ಆದ ಅನುಭವವೇ ಇತ್ತ ನರಸಿಂಹರಾಜಪುರದ ಅಗ್ರಹಾರದ ಮೂಲೆ ಮನೆಯಲ್ಲಿ ಕಂಬಕ್ಕೊರಗಿ ಕತೆ ಕೇಳಿದ ಅಕ್ಕ ಕಾಡಮ್ಮನಿಗಾಯಿತು. ಎಂದರೆ ನೋಡಿ ಎರಡು ಬೆಂದ ಜೀವಗಳಲ್ಲಿ ಬಾಲ್ಯ ಮರುಕಗೊಳಿಸಿ ದೇಶ ಕಾಲಗಳನ್ನು ಮರೆಸಿ ಬಿಟ್ಟರಲ್ಲಾ ಅತ್ತೆ, ತಮ್ಮ ಕಾದಂಬರಿಯಿಂದ. ನನ್ನ ಸಂಸಾರ ಇದೊಂದು ಕಾದಂಬರಿಗಾಗಿಯೇ ಜೀವಮಾನದ ಋಣವನ್ನು ಅವರಿಗೆ ಸಲ್ಲಿಸಬೇಡವೇ ?

1964ರ ವೇಳೆಗೆ ಅಪ್ಪ ಅಮ್ಮ ಕಿರಿಯ ಮಗನನ್ನು ಬಿಟ್ಟಿರಲಾರದೆ ಬೆಂಗಳೂರಲ್ಲಿ ಬಂದು ಕಡೆಯ ದಿನಗಳಲ್ಲಿ ನೆಲೆಸುವ ವೇಳೆಗೆ ಇಂದಿರಾ ನಮ್ಮನ್ನೆಲ್ಲ ಗೆದ್ದುಕೊಂಡಿದ್ದರು. ನಮ್ಮ ಮೂಕಾಂಬಿಕೆಯ ಬಾಲ್ಯ ಯೌವನಗಳು ನಮ್ಮ ಅಮ್ಮನ ಬಾಯಲ್ಲಿ ರಸರಸವಾಗಿ ಮೂಡಿಬಂದು ನಮ್ಮನ್ನು ತಣಿಸಿದ್ದು ಆಗಲೇ. ಹಳೆಯ ಬಾಂಧವ್ಯಗಳು ತೊಡಕು ತೊಡಕಾಗಿ ತೋರುತ್ತಿದ್ದ ವಾವೆಗಳು ತಿಳಿ ಗೊಂಡದ್ದು ಆಗಲೇ. ಅತ್ತೆಯ ಆ ಮನೆ-ಈ ಮನೆಯ ವಿವರಗಳು ಕಣ್ಣಿಗೆ ಕಟ್ಟಿದ್ದು. ಆಗಲೇ ಇಂದಿರಾ ಪುಂಖಾನುಪುಂಖವಾಗಿ ಬರೆಯ ತೊಡಗಿದ್ದ ಹಲವಾರು ಕಥೆಗಳಲ್ಲಿ ನಮ್ಮ ಹಲವಾರು ಕುಟುಂಬಗಳ ಸುತ್ತ ಹಬ್ಬಿ ಬೆಳೆದುದನ್ನು—ಆತ್ಮಸಖಿ, ತೆಗ್ಗಿನಮನೆ ಸೀತೆ, ಕಡೆಗೆ ಅವರ ಮೊದಲ ಕಾದಂಬರಿ ತುಂಗ-ಭದ್ರದ ರಹಸ್ಯಗಳು ಬಿಚ್ಚಿಕೊಂಡದ್ದು ಈ ವರ್ಷಗಳಲ್ಲೇ. ಅತ್ತೆ ಇಂದಿರಾ ನಮ್ಮ ವಿಸ್ಮಯ-ಮೆಚ್ಚುಗೆ-ಹೆಮ್ಮೆಗಳನ್ನು ಬೆಳೆಸುತ್ತಲೇ ಹೋದರು.

ನಮ್ಮದು ವಿಧಿಹತವಾದ ವಿಚಿತ್ರ ಸಂಸಾರವೇ ಸರಿ. ಈ ಬೆಂಗಳೂರಿನ ಸಂಸಾರವೂ ಎರಡೇ ವರ್ಷಗಳದ್ದು; ಕಡೆಯ ದಿನಗಳನ್ನು ಕಿರಿಯ ಮಗನೊಡನೆ ಕಳೆದ ಅಪ್ಪ ಹೋಗಿಯೇ ಬಿಟ್ಟರು. ಅಮ್ಮನನ್ನು ದುರ್ಭರ ಏಕಾಂತಕ್ಕೆ ತಳ್ಳಿ ಬಿಟ್ಟರು. ಮನೆಯಲ್ಲಿ ಹಿರಿಯ ಕಿರಿಯ ಸಾವುಗಳ ಪರಂಪರೆ. ನನ್ನ ಹಿಂದಿನ ಉದ್ಯೋಗ ನನ್ನನ್ನು ಧಾರವಾಡಕ್ಕೆ ಎತ್ತಿ ಎಸೆಯಿತು. ನಾಲ್ಕು ಜಿಲ್ಲೆಗಳ (ಧಾರವಾಡ, ಬೆಳಗಾಂ, ವಿಜಾಪುರ, ಕಾರವಾರ) ತಾಲ್ಲೂಕುಗಳ ಗ್ರಾಮಗಳ ಅಲವಟೆಯ ಬದುಕು. ಮುಪ್ಪಿನ ಅಮ್ಮ ಈ ಲಪಾಟಿಗಳನ್ನು ತಡೆಯಲಾರದೆ

ಮತ್ತೆ ಕೆಲವು ವರ್ಷಗಳು ದೂರದ ದಿಲ್ಲಿಗೆ ಹೊರಟು ಹೋದರು. ಎಳೆಯ ಮೂರು ಕಂದಗಳೊಡನೆ ಪಡಬಾರದ ಪಡಪಾಟಲು ಪಟ್ಟುಕೊಂಡು ನಮ್ಮ ಸಂಸಾರಯಾತ್ರೆ ಮುಂದುವರೆಯಿತು. ಕಡೆಗೆ ಬೇಸತ್ತು ಒಲ್ಲದ ಸರಕಾರೀ ಕೆಲಸಕ್ಕೆ ರಾಜೀನಾಮೆ ಯಿತ್ತು ಶಿವಮೊಗ್ಗೆಗೆ ಬಂದು ನನಗೆ ಪ್ರಿಯವಾದ ಅಧ್ಯಾಪನ ವೃತ್ತಿಯನ್ನು ಕೈಗೊಂಡಾಗಲೇ ಸಂಸಾರ ಒಂದು ನೆಲೆ ಕಂಡದ್ದು. ಜೀವ ಒಂದು ನೆಮ್ಮದಿ ಪಡೆದದ್ದು. ಪುನಃ ಅಮ್ಮ ದಿಲ್ಲಿಯಿಂದ ಬಂದು ತಮ್ಮ ವೃದ್ಧಾಪ್ಯದ ಕಡೆಯ ಆರೇಳು ವರ್ಷಗಳನ್ನಾದರೂ ನಮ್ಮೊಡನೆ ಕಳೆವಂತಾಗಿ ಅವರ ಕೊನೆಯ ಸೇವೆಯ ಸೌಭಾಗ್ಯ ದೊರೆತಾಗಲೇ. ಅವರ ನೆಪದಲ್ಲಿ ಅಕ್ಕಂದಿರು, ಸೋದರ ಸೊಸೆ ಅಳಿಯಂದಿರು ಮನೆಯನ್ನು ತುಂಬಿ ನಗುನಗಿಸಿದಾಗಲೇ ಬದುಕು ಕೊಂಚ ಸಾರ್ಥಕ ಎನಿಸಿದ್ದು. ನನ್ನ ಪ್ರಿಯ ಉದ್ಯೋಗ ಎಳೆಯ ಚೇತನಗಳ ನಡುವಣ ಉಲ್ಲಾಸವನ್ನು ದಯಪಾಲಿಸಿತು. ಹಳೆಯ ಸಾಹಿತ್ಯಕ ಒಲವುಗಳು ಸಂಬಂಧಗಳು ಬೆಸೆದುಕೊಂಡವು. ಲೇಖನ ವ್ಯವಸಾಯ, ಗೋಷ್ಠಿ, ಉಪನ್ಯಾಸಗಳ ಆಲಂಪಿನ ಇಂಪು ಬದುಕಿಗೆ ಸಂತಸ ತಂದದ್ದೂ ಆಗಲೇ.

ಶಿವಮೊಗ್ಗೆ ಮತ್ತೆ ಅತ್ತೆಯನ್ನು ಮನೆಗೆ ಮರಳಿಸಿತು. ನಾನು ವಿದ್ಯಾರ್ಥಿ ಸಂಘದ ಅಧ್ಯಾಪಕ ಕಾರ್ಯದರ್ಶಿಯಾಗಿ, ವಿಜಯಶ್ರೀ ಅಂತಹ ಕ್ರಿಯಾಶೀಲ ಬರಹಗಾರ್ತಿ ಅಧ್ಯಕ್ಷೆಯಾದಾಗ—ಕಾಲೇಜಿನ ಮುಖ್ಯ ಅತಿಥಿಗಳ ಪಟ್ಟಿಯಲ್ಲಿ ಮೊದಲ ಹೆಸರೇ ನಮ್ಮಿಬ್ಬರಿಗೂ ಆತ್ಮೀಯರಾಗಿದ್ದ ಎಂ. ಕೆ. ಇಂದಿರಾ. ಅವರ ಜೊತೆ ತಮ್ಮ ಚುರುಕುಗಣ್ಣಿನ ಹುಡುಕುಗಣ್ಣಿನ ಚೈತನ್ಯದ ಚಿಲುಮೆ ವಿಜಯಾ. ವಿದ್ಯಾರ್ಥಿ ಸಂಘದ ಸಮಾರಂಭದ ಅಬ್ಬರ. ಗೆಜ್ಜೆಪೂಜೆಯ ಕತೆಗಾರ್ತಿಯನ್ನು ಯುವತಂಡ ಮುತ್ತಿದ ಗದ್ದಲ. ಕಿವಿಗಡಚಿಕ್ಕುವ ಚಪ್ಪಾಳೆ. ಕೇಕೆ, ಉಲ್ಲಾಸ...ನಭೂತೋ ನಭವಿಷ್ಯತಿ.

ವಿಜಯಾ ಹಾಗೂ ಅತ್ತೆ ಮನೆಗೆ ಬಂದರು. ಹಾಸಿಗೆ ಹತ್ತಿದ್ದ ಗಂಗತ್ತೆಯ ಹತ್ತಿರ ಕುಳಿತರು. ಅವರ ಈಗಿನ ತುಂಬುಗೆನ್ನೆ ಅಮ್ಮನ ನಡುಗು ಬೆರಳುಗಳ ನೇವರಿಕೆಗೆ ಈಡಾಯಿತು. ತಬ್ಬುವ ಕೊರಳುಗಳು, ಸವರುವ ಬೆರಳುಗಳು, ಅಪ್ಪಿ ಅಳುವ ಗದ್ಗದಿಸಿ ಹರ್ಷ ಭಾಷ್ಪ ಸುರಿಸುವ ಹಳೆಯ ಬದುಕುಗಳು. ನೋಟಕರ ಕಣ್ಣನ್ನೂ ಕರಗಿಸಿದವು. ವಾಚಾಳಿ ಇಂದಿರಾ ಮೂಕಾಂಬಿಕೆಯಾಗಿ ಬಿಟ್ಟರು. ಅಮೃತ ಕ್ಷಣ.

ಆದರೆ ಅದೆಷ್ಟು ಕ್ಷಣ ! ಇಬ್ಬರಿಗೂ ಮಾತು ಬೇಕು. ವರ್ಷ ವರ್ಷಗಳು

ಹುದುಗಿದ್ದ ಭಾವಗಳು—ರಾಗಗಳು. ಗಂಟೆಗಳು ನಿಮಿಷಗಳಾಗಿ ಕರಗಿ ಹೋದವು. ವಿಜಯಾಗೆ ಈ ಅಪರಿಚಿತ ಅಣ್ಣನ ಮನೆಯ ಆ ಕ್ಷಣಗಳು ಮರೆತಿರಲಾರವು. ಅವು ಮರೆಯುವಂಥವಲ್ಲ. ಅದರಲ್ಲೂ ಸೂಕ್ಷ್ಮ ಸಂವೇದಿಯಾದ ಸ್ವಯಂ ಸಾಹಿತಿ ನಾಟಕಕಾರ್ತಿ-ವಿಮರ್ಶಕಿಯಾದ ವಿಜಯಾಗೆ; ಎಂದುಕೊಂಡಿದ್ದೇನೆ.

ಮತ್ತೆ ಸಮಾರಂಭ-ಮತ್ತೆ ಗದ್ದಲ.

ಕೆಲವೇ ಉದಾಹರಣೆಗಳು. ಏಕೆಂದರೆ, ನೆನಪಿನಲ್ಲಿ ನುಗ್ಗಿ ಬರುವ ಈ ಕ್ಷಣದ ಪಾತ್ರ-ಸನ್ನಿವೇಶಗಳನ್ನು ವಿವರಿಸಲು ಹೊರಟರೂ ನನ್ನದು ಲೇಖನವಾಗದೆ ಗ್ರಂಥ ವಾಗಿ ಬಿಡುತ್ತದೆ. ಅಲ್ಲದೆ ಎಂ. ಕೆ. ಇಂದಿರಾ ಕೃತಿಗಳ ವಿಮರ್ಶೆ ಈ ಲೇಖನದ ಉದ್ದೇಶವೂ ಅಲ್ಲ. ಅದು ಪರಿಷ್ಕಾರವಾಗಿ, ಸಮರ್ಥವಾಗಿ, ಬಿಡಿ ಬಿಡಿಯಾಗಿ ಬೇರೆ ಲೇಖಕರಿಂದ ಈ "ಸುರಗಿ"ಯಲ್ಲಿಯೇ ನಡೆದಿದೆ ಎಂಬ ನಂಬಿಕೆ ನನಗಿದೆ. ಮತ್ತೊಂದು ಮಾತು. ಈ ಲೇಖನ ನಾನು ಬರೆಯುತ್ತಿರುವುದನ್ನು ಕದ್ದು ನೋಡಿದ ನನ್ನ ಮಗ ಪದ್ಮನಾಭ ಹೇಳುತ್ತಾನೆ. "ಅಣ್ಣಾ, ಇಬ್ಬರು ಅಜ್ಜೀರು ಹುಲಿ ಹೊಡೆದು ಕೆಡವಿದ ರಲ್ಲಾ ಆ ಕಥೆ ಬಗ್ಗೆ ಬರೆಯೊಲ್ವಾ ? ಏನು ಟೆನ್ಸ್ ಎಂಡ್ ಗ್ರಿಪ್ಪಿಂಗ್ ಆಗಿದೆ" ....ಕೂಚುಭಟ್ಟನ ಕೃತಿಯಲ್ಲಿ ಬರೋ ರಸ್ಟಿಕ್ ಎಂಡ್ ರಿಯಲ್ ಹಾಸ್ಯ ಇಂದಿರಾ ಅವರದ್ದೇ. ಬೇರೆ ಎಲ್ಲೂ ನಾನು ನೋಡಲಿಲ್ಲ...."ಅಂತಾನೆ. ಅವನು ಹಿಂದೀ ಸಾಹಿತ್ಯ ಬಲ್ಲ ಕಾಲೇಜು ಉಪನ್ಯಾಸಕ. ಆಡೀಟರ್ ಮಗ ಸೂರ್ಯಪ್ರಸಾದ್ ತಲೆ ಹಾಕುತ್ತಾನೆ : "ಅವರು ಕಾದಂಬರಿ ಕಥಾ ಸಂಕಲನ ಬರೆದಿದ್ದಾರೆ. ಇಷ್ಟು ಪುಟಗಳಿಗೆ ಮೀರುವ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಬರೆಯುವುದಕ್ಕೆ ಪ್ರಾರಂಭ ಮಾಡಿದ್ದು, 44ನೇ ವಯಸ್ಸಿನವರೆಗೆ ಬರೆಯಲು ಪ್ರಾರಂಭಿಸಿರಲಿಲ್ಲ ಅಂತೀರಿ, ಈಗ ಅವರಿಗೆ 75 ವರ್ಷ. ಅಂದರೆ ಒಂದು ವರ್ಷಕ್ಕೆ ಸರಾಸರಿ....("ಸರಿ! ಏನು ಹೇಳ ಬೇಕೂಂತಿದಿಯೋ ಹೇಳೋ!-"ನಾನು) ಇಷ್ಟು ದೊಡ್ಡ ಕನ್ನಡ ಲೇಖಕಿಯ ಹೆಸರು ನಿಮ್ಮ ಅಕ್ಯಾಡಮಿಯೇ ಪ್ರಕಟಿಸಿದ ಸಾಲುದೀಪಗಳು ಅಂಥ ರೆಫರೆನ್ಸ್ ಪುಸ್ತಕದಲ್ಲಿರ ಬೇಕಿತ್ತಲ್ಲವಾ ?" ನಾನು ಸುಧಾರಿಸಿಕೊಳ್ಳುತ್ತಾ ಮುಖದ ಬೆವರು ಒರಸಿಕೊಳ್ಳು ತ್ತೇನೆ. ಅಷ್ಟು ಹೊತ್ತಿಗೆ ನಮ್ಮ ಶೈಲಾ ಮೂಗೊರೆಸಿಕೊಳ್ಳುತ್ತಾ: "ಅಣ್ಣಾ, ಮಾಲ್ಗುಡಿ ಡೇಸ್ ಥರಾ. ಇಂದಿರಾ ಅತ್ತೆ ಕಥೆ ಹುಲೀದು, ಎಲ್ಲಾ ("ತಾಳೆ! ಟುಲೆಟ್ ಕಾದಂಬರಿ ಪ್ರಸಂಗಗಳನ್ನೇ ಆರಿಸಿಕೊಂಡರೆ ಇನ್ನೂ ಮಜ್ಜು ವಾಗಿರುತ್ತೆ"- ಪದ್ಮನಾಭ) ಟಿ.ವಿ. ಮಾಡಿದರೆ ಎಷ್ಟು ಚೆನ್ನ ಅಲ್ಲವಾ ?"ಎನ್ನುತ್ತಾಳೆ. ಅಷ್ಟು ಹೊತ್ತಿಗೆ ಅಡಿಗೆ ಮನೆಯಿಂದ ಸರಬರ ಸದ್ದು ಮಾಡ್ತಾ ಕೈಯಲ್ಲಿ ಇಕ್ಕಳ ಹಿಡಿದು ಬಂದು ನಿಂತಳು. "ರೀ, ಇದೆಲ್ಲ ಬರೀತೀರಿ. ಗಿರಿಬಾಲೆ ಸೇರಿಸೋದಿಲ್ಲವಾ?

ನೋಡಿ, ಮಕ್ಕಳಿಲ್ಲ ತನಗೆ ಅಂತ ತಾನೇ ಗಂಡಸಿಗೆ ಎರಡನೆ ಮದುವೆ ಮಾಡಿಸಿದಳಲ್ರೀ? ಅವನೋ ಅವಳನ್ನು ಒದ್ದು ಆಚೆ ಹಾಕಿ ಯಾವಳನ್ನೋ ಕಟ್ಟಿಕೊಂಡು ಅಲೀತಿಲ್ಲ ಪೋಲಿಗಂಡ. ಕಡೇಗೆ ಅದನ್ನೇ ಉಂಡೇನು ಕದಾ ತೆಗೀ ಅಂತ ಅವಳ ಕಾಲಿಗೇ ಬಿದ್ದು ಕರಕೊಂಡು ಬಂದೋನು. ಚೆನ್ನಾಗಿ ಸಂಸಾರ ಮಾಡ್ತೀನಿ ಅಂತ ಏನೋ ಮಹಾ ಸಂಕಲ್ಪ ಮಾಡಿದ್ದ ಕಾಲದಲ್ಲಿ ಹೀಗೆ ಹುಡುಗಿ ತನ್ನ ತಲೇ ಮೇಲೆ ತಾನೇ ಕಲ್ಲು ಹಾಕಿ ಕೊಂಡು ಬಿಡ್ತು ಪಾಪ. ಬಂದ ಹೊಸ ಹೆಣ್ಣು ಪೆದ್ದು-ಒಳ್ಳೇ ಹುಡುಗಿ. ಆದರೆ ಒಂದೇ ಬರೋದು ಬಿಟ್ಟು ಅಮ್ಮನ್ನೂ ಕರಕೊಂಡು ಬಂತಲ್ಲ. ಆ ಗಯ್ಯಾಳಿ ಮನೆ ಒಡೆದು ಪಾಪ. ಇದನ್ನು ಮತ್ತೆ ಮನೆ ಬಿಡ್ಸಿ, ತಮ್ಮನ ಮನೆಗೋ ಎಲ್ಲೋ ಬಿಡ್ತಲ್ರೀ..."ಪಾಪ! "ಅಮ್ಮಾ ಅಮ್ಮಾ ಹಾಲು ಉಕ್ತು,ಅಯ್ಯೋ ಉಕ್ಕೇ ಹೋಯ್ತು" ಶೈಲ ಕೂಗಿದಳು. ಅಡಿಗೆ ಮನೆಯ ಸ್ಟೌಮೇಲಿನ ಹಾಲು ಉಕ್ಕಿ ಉಕ್ಕಿ ಸುರಿದು ಹೋಯಿತು. ಉಕ್ಕಿದ ಹಾಲಿನ ಕಂಪು ಕ್ಷಣಾರ್ಧದಲ್ಲಿ ಮನೆಯೆಲ್ಲ ತುಂಬಿಕೊಂಡಿತು.

...ನನ್ನ ಬಡಪಾಯಿ ಲೇಖನಿ ಎಲ್ಲೋ ಮುದುರಿ ಬಿದ್ದಿತ್ತು. ನಾನು ಕೈಕಟ್ಟಿ ಕೊಂಡು ಮೌನವಾಗಿ ಕುಳಿತುಬಿಟ್ಟಿದ್ದೆ. ಮನಸ್ಸು ಒಳಸರಿಯಿತು. ಮುಖ ಆರ್ದ್ರ ವಾಯಿತು. ಪಿಎಚ್.ಡಿ. ಮಾಡುವ ಮಗನಿಂದ ಅಡಿಗೆ ಮನೆಯ ಗೃಹಿಣಿವರೆಗೆ ತಲೆಮಾರುಗಳ ಮನಸ್ಸನ್ನು ಹೇಗೆ ಎಷ್ಟು ಸಹಜವಾಗಿ ಗೆದ್ದುಕೊಂಡುಬಿಟ್ಟಿದ್ದಾರೆ.

ಹಾಗೆ ನೋಡಿದರೆ, ಇವರು ಈ ಶ್ರೀಮತಿ ಎಂ. ಕೆ. ಇಂದಿರಾ ಸುಪ್ರಸಿದ್ಧ ಕನ್ನಡ ಕಾದಂಬರಿಗಾರ್ತಿ ನನ್ನ ಪ್ರೀತಿಯ ಅತ್ತೆ ಎಂದು ತಿಳಿದಿದ್ದಾದರೂ ಎಷ್ಟು ತಡವಾಗಿ! ನನಗೇ ಅಚ್ಚರಿ. 1961–62ರವರೆಗೂ ಅವರು ಬರೆದದ್ದೇ ಬಹು ಕಮ್ಮಿ. ಈ ವೇಳೆಗೆ ನನ್ನ ಸಂಸಾರ ಚಿತ್ರ ವಿಚಿತ್ರ ಗತಿಯಲ್ಲಿ ಸಾಗಿತ್ತು. ನರಸಿಂಹರಾಜ ಪುರದ ಸಂಪರ್ಕವೇ ಇಲ್ಲದಂತಾಗಿತ್ತು. ಅಪ್ಪ ಶಿವಮೊಗ್ಗೆಯಲ್ಲಿ ನಿವೃತ್ತರಾಗಿ ತುಮಕೂರು ಸೇರಿದಾಗ ಇನ್ನೂ ಮಿಡ್ಲಿಸ್ಕೂಲ್ ಹುಡುಗ ನಾನು. ಹೈಸ್ಕೂಲು ಮುಗಿಸುವ ವೇಳೆಗೆ ಅಪ್ಪ–ಅಮ್ಮ ಅಣ್ಣನ ಒತ್ತಾಯಕ್ಕೆ ಬೊಂಬಾಯಿ ಅನಂತರ ಬಹುದೂರದ ದೆಹಲಿ ಸೇರಿಬಿಟ್ಟರು. ಹೈಸ್ಕೂಲು ಮುಗಿಸಿದ್ದ ನಾನು ವಿದ್ಯಾಭ್ಯಾಸ ಅನಂತರ ಉದ್ಯೋಗದ ಬೇಟೆಯಲ್ಲಿ ಬೆಂಗಳೂರು-ಅರಸೀಕೆರೆ-ಕೋಲಾರ-ಹಾಸನಗಳೆಲ್ಲ ತಿರುಗಿಕೊಂಡಿದ್ದೆ. ಅತ್ತೆ ಏನಾದರೂ ಅಂತಲಾಗಲೀ ಅವರ ಪೂರ್ವೋತ್ತರಗಳ ನ್ನಾಗಲೀ ನನಗೆ ಹೇಳುವವರಾದರೂ ಯಾರು ಅಮ್ಮ ಬಿಟ್ಟರೆ ? ಹೀಗಾಗಿ ಈಕೆ ನನ್ನ ನೆನಪಿನಿಂದ ಜಾರಿಯೇ ಹೋದರು. ನರಸಿಂಹರಾಜಪುರ-ತೀರ್ಥಹಳ್ಳಿಗಳೇ ಅಂಡಮಾನ್ ನಿಕೋಬಾರ್‌ಗಳಾಗಿದ್ದವು. ಅಕ್ಕ ನಾನು ಹುಚ್ಚು ಹಿಡಿದ ಹಾಗೆ ಸಿಕ್ಕ ಸಿಕ್ಕ ಇಂಗ್ಲಿಷ್ ಕನ್ನಡ ಕಾದಂಬರಿ ಎಲ್ಲ ನುಂಗಿಹಾಕ್ತಾ ಇದ್ದದ್ದೇನೋ ನಿಜವೇ.

ಆಗೆಲ್ಲ ನಮ್ಮನ್ನು ಮುತ್ತಿಕೊಂಡಿದ್ದವರು-ಹೊಸ ಲೇಖಕಿ ತ್ರಿವೇಣಿ, ಇಂದಿರಾ ಅಲ್ಲ. ಶ್ರೀಮತಿ ವಾಣಿ, ಇಂದಿರಾ ಅಲ್ಲ. ತ್ರಿವೇಣಿ ಒಳ್ಳೆ ಬರಹಗಾರ್ತಿ. ಆದರೂ ಅಕ್ಯಾಡಮಿಕ್ ಆಗ್ತಾರೆ. ಅವರ ಕೆಲವು ಪಾತ್ರಗಳು ಮನಶ್ಶಾಸ್ತ್ರದ ಯಾವುದೋ ಸೂತ್ರದ ಬೊಂಬೆಗಳಾಗಿ ಬಿಡುತ್ತವೆ. ಆದರೂ ಅತ್ಯಂತ ಮಹತ್ವದ ಕಾದಂಬರಿಕಾರ್ತಿ. ಅವರ ಅಕಾಲ ಮರಣ ತುಂಬಿಬಾರದ ನಷ್ಟ. ಅವರೀಗ ಬದುಕಿದ್ದರೆ....ತಮ್ಮ ಕೊರತೆಗಳನ್ನು ತಾವೇ ಖಂಡಿತವಾಗಿ ತುಂಬಿಕೊಂಡು ನಂಬರ್ ಒನ್ ಆಗಿ ಈಗಲೂ ಉಳಿಯುತ್ತಿದ್ದರು. ಇಂಥ ಯೋಚನೆಗಳೆಲ್ಲ ಈಗೀಗ ಸುಳಿದು ಹೋಗುತ್ತವೆ. ಅತ್ತೆ ಇಂದಿರಾ ಬೆಳಕಿಗೆ ಬರಲು ಅವರನ್ನು ಮೊದಲು ಗುರುತಿಸಿ ಪ್ರೋತ್ಸಾಹಿಸಲು ತ್ರಿವೇಣಿ ವಹಿಸಿದ ಪಾತ್ರವನ್ನು ಗೌರವದಿಂದ ನೆನೆಯುತ್ತಿದ್ದೇನೆ. ಆದರೆ ಎಂ. ಕೆ. ಇಂದಿರಾ ಕೃತಿಗಳ ಅಪ್ಪಟ ತಾಜಾತನ ಹಾಗೂ ಅದರ ಕಾರಣಗಳೂ ಸ್ಪಷ್ಟವಾಗಿ ನನ್ನ ಕಣ್ಣ ಮುಂದಿವೆ.

"ಅಯ್ಯೋ ನಂಗೆ ನೆನಪಿಲ್ವಾ ?" ಅತ್ತೆಯ ಸುಕ್ಕುಗಟ್ಟಿದ ಮುಖ ಮತ್ತೆ ಪೂರ್ವ ಸ್ಮರಣೆಯಿಂದ ತುಂಬಿಕೊಳ್ಳುತ್ತದೆ. "ಅಯ್ಯಪ್ಪಾ ಆ ಪಡ್ಡೆ ಹುಡುಗೀರು ಗಂಡು ಹುಡುಗರ ಹಾಗೆ ಶಿಳ್ಳೆ ಹಾಕಿ ಬಿಟ್ಟರಲ್ಲೋ. ಅದೇ ಉತ್ಸಾಹದ ಭಾರಿ ಸಭೆ! ನನಗಂತೂ ಮಾತಾಡೋಕೆ ನಿಂತರೆ ಕೈಕಾಲು ನಡುಕ. ತೊದಲು ತೊದಲು. ನಂಗೇ ಕೇಳವಲ್ದು. ಜೊತೆಗೆ ಹಿಂದಿನಿಂದ ಬಾಗಿಲು ಬಡಿದು ತೆಗೆಸಿ ನುಗ್ಗೇ ಬಿಟ್ರು ಹುಡುಗರು. ಬಂದು ಮಿಕ ಮಿಕ ನೋಡಿಕೊಂಡು ಪೆಚ್ಚಾಗುತ್ವೆ! ಇಂದಿರಾ ಅಂದರೆ ತಮ್ಮ ಮುದ್ದು ಕಲ್ಪನಾ ಹಾಗಿದ್ದಾಳೆ ಎಂದು ತಿಳಿದಿದ್ವೋ ಏನೋ ಪಾಪ ! ಇಂಥಾ ಅಜ್ಜೀನ ಇದು! ಅಂತ! ನೋಡೋಕಾಗ್ದು ಅವುಗಳ ಮುಖ. ನನ್ನ ಫೋಟೋ ತೆಗೆಯೋದರ ಬದಲು ನಿಮ್ಮ ಕಾಲೇಜಿನೋರು ಅವುಗಳ ಪೆಚ್ಚು ಮುಖ ತೆಗೀ ಬೇಕಿತ್ತು."

ನಾನು ಬಿಕ್ಕಿ ಬಿಕ್ಕಿ ನಗುತ್ತಿರುವಾಗ ಅತ್ತೆ ಸಡಗರಿಸಿ ಎದ್ದರು. ಯಾಕೆ ಆಯಾಸ ಮಾಡಿಕೋತೀರಿ ಅಂದರೂ ಕೇಳಲಿಲ್ಲ. "ಶಾರದಾ ಒಂದು ನಿಮಿಷ ಕೈ ಹಿಡಕೊಂಡು ನಾಲ್ಕು ಹೆಜ್ಜೆ ನಡೆಸು. ನಮ್ಮ ಸ್ವಾಮಿಗೆ ಒಂದು ಫೋಟೋ ತೋರಿಸ್ತೀನಿ" ಎಂದರು. ತಂದರು. "ಇಕಾ, ಇದು ನೋಡು ಗೆಜ್ಜೆ ಪೂಜೆ ಗ್ರೂಪು. ಬಣ್ಣದ್ದು, ಎಷ್ಟು ಚೆನ್ನಾಗಿದೆ ಅಲ್ವಾ ? ಇವಳು ಕಲ್ಪನಾ ಗೊತ್ತೇ ಇದೆ. ಪುಟ್ಟಣ್ಣ ನೋರನ್ನ ನೋಡಿದ್ದೀಯೋ ಇಲ್ಲವೊ– ತುಂಬ ದೊಡ್ಡೋರು. ಆ ಗಂಗಾಧರ, ಇವರೆಲ್ಲ ಗೊತ್ತಲ್ಲ. ನಿಮ್ಮ ಹುಡುಗೀರಿಗೆ ಇವರೇ ತಾನೆ ಇಂದ್ರ-ಚಂದ್ರ-ದೇವೇಂದ್ರ. ಪಾಪ ತುಂಬ ಒಳ್ಳೇ ಹುಡುಗೀರು ಕಣೋ. ಅಮ್ಮ ಅಮ್ಮ ಅಂತ ಫಂಕ್ಷನ್ ಆದ

ಮೇಲೆಯೂ ಸೆರಗು ಹಿಡಿಕೊಂಡು ಓಡಾಡಿಬಿಟ್ರು. ಚೆನ್ನಾಗಿರಲಪ್ಪ ಎಲ್ಲಾದ್ರೂ. ಎಲ್ಲೆಲ್ಲಿವೆಯೋ ಏನೊ ? ಇಷ್ಟು ವರ್ಷ ಆಯ್ತಲ್ಲೋ ?"

"ಅಂದಹಾಗೆ ಇದೊಂದು ಫೋಟೋ ಮಾತ್ರ ಯಾರಿಗೂ ಕೊಡುಲ್ಲಪ್ಪ. ಆದರೆ ನನಗೆ ಇದೇ ಗೆಜ್ಜೆಪೂಜೆಗೆ ಸನ್ಮಾನ ಮಾಡಿ ಬಿಳೀ ಶಾಲು ಹೊದಿಸಿದರಲ್ಲ. ಅದೇ ಬಣ್ಣದ್ದು-ಎನ್‌ಲಾರ್ಜೋ ಅದೇನೋ. ಅದನ್ನ ಬೇಕಾದರೆ ತೊಗೊಂಡು ಹೋಗು ಮನೇಲಿ ಇಟ್ಕೊಕೋ. ಆದರೆ ಇದರದ್ದೊಂದು ಪುಟ್ಟ ಕಾಪಿ ಮಾಡಿಸಿ ಕೊಡ್ತೀಯಾ ನನ್ನ ಆಲ್ಬಂಗೆ ?"- ಇಂದಿರಾ ಯಾವ ನೆನಪನ್ನೂ ಮಾಸಲು ಬಿಡೋರಲ್ಲ ಭದ್ರವಾಗಿ ಬಚ್ಚಿಟ್ಟುಕೊಳ್ಳಲು ಬಯಸುತ್ತಾರೆ, ಹನಿಗಣ್ಣಾದೆ.

"ಆಗಲಿ ಅತ್ತೆ ಮಾಡಿಸಿಕೊಟ್ಟೇ ಊರಿಗೆ ಹೋಗ್ತೀನಿ. ಆದರೆ ಒಂದು ರಿಕ್ವೆಸ್ಟು ನಡೆಸಿ ಕೊಡ್ತೀರಾ ? ಇಷ್ಟು ಚೆನ್ನಾಗಿರೋ ಈ ಫೋಟೋನ ನನ್ನ ಮನೆ ಗೋಡೆ ಮಾತ್ರ ಅಲ್ಲ-ಇಡೀ ಕಾಲೇಜೇ ಅಲಂಕರಿಸಬೇಕು ಅಂತ ಆಸೆ. ನಿಮ್ಮ ಆ ತುಂಬ ಒಳ್ಳೆ ಹುಡುಗೀರು ದಿನಾ ದಿನಾ ನೋಡಲಿ. ತಮ್ಮ ನೆಚ್ಚಿನ ಕಾದಂಬರಿಕಾರ್ತಿಯಿಂದ ಸ್ಫೂರ್ತಿ, ಆಶೀರ್ವಾದ ಪಡೀಲಿ. ಯಾರಾದರೂ ದೊಡ್ಡ ಸಾಹಿತಿಗಳಿಂದ ಇದರ ಅನಾವರಣ ಮಾಡಿಸ್ತೀನಿ :

ಮತ್ತೊಮ್ಮೆ ಅತ್ತೆ ಹುಡುಗಿಯ ಹಾಗೆ ನಾಚಿದರು. "ಇದೆಲ್ಲ ಬ್ಯಾಡಕಣೋ. ನಾನ್ಯಾವ ಮಹಾ....(ನೋಡಿದ್ರಾ ನೋಡಿದ್ರಾ-ನಾನು) ಹೂಂ ಹೋಗಲಿ ಇಷ್ಟು ಕೇಳತೀ ತೊಗೋ. ತಾಳು ಪೇಪರ್ ಸುತ್ತಿ, ಹುರಿ ಕಟ್ಟಿ."

"ಅಯ್ಯೋ, ಅದೆಲ್ಲ ನಾನು ಮಾಡಿಕೋತೀನಿ ಬಿಡಿ ಅತ್ತೆ. ಆಯಾಸ ಮಾಡಿಕೋ ಬೇಡಿ."ಎಂದು ಸಂಭ್ರಮದಿಂದ ಫೋಟೋ ಆತುಕೊಂಡೆ. ಮುಂದೆ ಹಾಗೇ ಮಾಡಿದೆ. ಗುಲಬರ್ಗಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ನಮ್ಮ ಹಿರಿಯ ಕವಿ ಪೂಜ್ಯ ಸಿದ್ದಯ್ಯ ಪುರಾಣಿಕರು ಕಾಲೇಜಿನ ಸಮಾರಂಭಕ್ಕೆ ಬಂದು ಭಾವಚಿತ್ರ ಅನಾವರಣ ಮಾಡಿ ತುಂಬ ಒಳ್ಳೆಯ ಮಾತು ಆಡಿದರು. ಇಂದಿಗೂ ಇಂದಿರಾ ಕಾಲೇಜಿನ ಗೋಡೆಯನ್ನಲಂಕರಿಸಿ ನಮ್ಮನ್ನು ಆಶೀರ್ವದಿಸುತ್ತಿದ್ದಾರೆ. ಅದು ನಿತ್ಯದ ಮಂಗಳ ನೋಟ.

ಅತ್ತೆಯ ವಾತ್ಸಲ್ಯ ಅಲ್ಲಿಗೆ ನಿಲ್ಲಲಿಲ್ಲ. "ಈ ಫೋಟೋನೂ ಕಾಲೇಜಿಗೆ ಕೊಟ್ಟು ಬಿಟ್ಯಾ ? ಮತ್ತೆ ನಿಂಗೇನು ಉಳಿತು ಘೊಸ್ಲೆ ! ಅಂ, ತಾಳು ತಾಳು....

ಇಕಾ—ಇದು ನೋಡು. ಕೊಳಲ ಕೃಷ್ಣ, ನೀಲಮೇಘ ಶ್ಯಾಮ, ಎಷ್ಟು ಮುದ್ದಾದ ಫೋಟೋ. ಯಾರು ಯಾರೊ ಕಣ್ಣು ಹಾಕಿದಾರೆ ಇದರ ಮ್ಯಾಲೆ. ನೀನು ಎಷ್ಟಾದರೂ ವೇಣುಗೋಪಾಲ. ತೊಗೊಂಡು ಹೋಗು. ಯಾರಿಗಾದರೂ ಕೊಟ್ಟರೆ ನನ್ನಾಣೆ.... ಆಮೇಲೆ ಇದೊಂದು ಪರ್ಸಿದೆ ಕಣೋ. ಮೂರು ಚೀಲದ್ದು. ನೋಡು ಇಲ್ಲಿ ಸ್ಟಾಂಪು ಇಡೋದು. ನೂರು ಐವತ್ತು ಇಲ್ಲಿ, ಹತ್ತು ಐದು ಇಲ್ಲಿ, ಚಿಲ್ಲರೇಗೂ ಜಾಗ ಇದೆ. ಇದೂ ನಿಂಗೇ. ಸ್ವಲ್ಪ ತುದಿ ಕಿತ್ತು ಹೋಗಿದೆ ಕಣೋ. ನಿನ್ನ ಹೆಂಡತಿಗೆ ಹೇಳು ಹೊಲಿದು ಕೊಡ್ತಾಳೆ. ನನ್ನ ಹೆಸರೇ ಅಲ್ವಾ ? ಇನ್ನೂ ಪುಟ್ಟ ಹುಡುಗಿ ಹಾಗೇ ಇದಾಳೆ. ನಂಗಂತೂ ಮೂರು ಹೆತ್ತಿದಾಳೆ ಅಂದರೆ ಈಗಲೂ ನಂಬೋಕೆ ಆಗೊಲ್ಲಪ್ಪ. ಒಳ್ಳೆ ಹುಡುಗಿ, ಹಾಡಂತೂ ಸರಸ್ವತಿ. ಅಲ್ವೋ ವೀಣೆ ಯಾಕೋ ಹೇಳಿಸ್ಲಿಲ್ಲ ? ಪಾಪ, ಎಷ್ಟು ಅಕರಾಸ್ತೆ, ಅವತ್ತು ಏನು ಸಂಭ್ರಮ ಪಟ್ಟುಕೊಂಡ್ತು ಹುಡುಗಿ..."

"ಅತ್ತೇ ಅತ್ತೇ ಮೊದಲೆ ನನ್ನ ತಲೆ ಹತ್ತಿ ಕೂತಿದ್ದಾಳೆ. ನೀವು ಹೀಗೆಲ್ಲ ಹೊಗಳಿದಿರೀ ಅಂತ ಹೇಳಿದರೆ ದೇವರೇ ಗತಿ. ದೇವರಿರಲಿ ನನ್ನಗತಿ ಹೇಳಿ !"

"ಹತ್ತಿ ಕೂರಲಿ ಬಿಡು. ಇದೆಲ್ಲ ಸಮಾನತೆ ಅಲ್ಲ ಆದರ ಆಚೆ ಕಾಲ ಅಲ್ವೇನೋ ? ಅಲ್ಲದೆ ನಿನ್ನ ತಲೆ ಮೇಲೆ ಕೂತರಾದರೂ ಪುಟ್ಟ ಹುಡುಗಿ ಒಂದಿಷ್ಟು ಎತ್ತರ ಕಂಡಾಳು."

ನಾವಿಬ್ಬರೂ ಅಬ್ಬರದ ನಗೆ ನಕ್ಕೆವು. ಅದರ ಅಲೆ ಅಲೆ ಹಬ್ಬಿ ಶಾರದಮ್ಮನವರೂ ಅವರ ಮಕ್ಕಳೂ ಪಕ್ಕದ ರೂಮಿನಲ್ಲಿ ಔಷಧಿ ಅಳೀತಿದ್ದ ಡಾಕ್ಟರ್ ಸಾಹೇಬರು ಶಾರದಮ್ಮನವರ ಯಜಮಾನರೂ ಬಂದು ಗುಂಪು ಕೂಡಿತ್ತು. ನೋಡನೋಡುತ್ತ ಮನೆಯಲ್ಲಿ ಬೆಳಕು ಹಬ್ಬಿತು. ಆ ಜೀರ್ಣಕಾಯದ ವೃದ್ಧೆಯ ಮನಸ್ಸು ಚೈತನ್ಯದ ಚಿಲುಮೆಯಾಯಿತು. ಅವರ ಮುಪ್ಪು ಅನಾರೋಗ್ಯದ ಬೇಸರ ಭಾರಗಳು ಎಲ್ಲಿ ಹಾರಿಹೋದವೋ !

ಇಂದಿರಾ ಸ್ವಭಾವವೇ ಹೀಗೆ. ಅವರಿಗೆ ಮಾತು ಬೇಕು, ಜನ ಬೇಕು. ಎಷ್ಟೆ ಅಕ್ಕರೆಯಿಂದ ಮಗ-ಸೊಸೆ ಅವರನ್ನು ನೋಡಿಕೊಳ್ಳುತ್ತಿದ್ದರೂ ನಗರಕ್ಕೆ ಬಹುದೂರ ಬಡಾವಣೆಯನ್ನು ಬಿಟ್ಟು ಅವರು ಬೆಂಗಳೂರಿಗೆ ಬಂದು ಹೋದವರಿಗೆಲ್ಲ ತಮ್ಮನ್ನು ಕಾಣಲು ಅನುಕೂಲವಾಗಲಿ ಅಂತಲೇ ಅವರು ಜಯನಗರದ ಅಕ್ಕನ ಮನೆಗೆ ಬಂದರು. ಮಕ್ಕಳೇ ಬಂದು ಹೋಗಿ ಮಾಡ್ತಾರೆ. ಇವರಿಗೂ ನೆಮ್ಮದಿ. ಈ ನಿರ್ಮಲ ಮನಸ್ಸಿನ ಮುಕ್ತ ಮಾತುಗಾರಿಕೆಯೇ ಇಂದಿರಾ ಅವರ ಬದುಕಿನಲ್ಲಿಯೂ ಬರಹದಲ್ಲಿಯೂ ನವ

ಚೇತನವನ್ನೂ ಉಂಟುಮಾಡುವ ಅಂಶ. ನಾವು ಆಧುನಿಕರೆನಿಸಿಕೊಂಡವರೂ ಏನೋ ಮುಜುಗರ ಪಟ್ಟುಕೊಂಡು ಸುತ್ತಿ ಬಳಸಿ ಆಡುವುದನ್ನು, ಒಮ್ಮೊಮ್ಮೆ ಬರೆದವರೂ ಏನೋ ಮಹಾನ್ ಕ್ರಾಂತಿ ಸಾಧಿಸಿ ಬಿಟ್ಟದ್ದೇವೆ ಎಂದು ಬಡಾಯಿ ಕೊಚ್ಚುವಂತಹುದನ್ನು ಇಂದಿರಾ ಮುಕ್ತವಾಗಿ ಸಲೀಸಾಗಿ ಬೆಟ್ಟದತಾವರೆ ಬಿಮ್ಮನೆ ಬಿರಿದಂತೆ ಆಡಿಬಿಡುತ್ತಾರೆ–ಬರೆದು ಬಿಡುತ್ತಾರೆ. ಒಂದೇ ಉದಾಹರಣೆ ಸಾಕು....

"ಕತ್ತೆ ಲೌಡಿ ನಿಂಗೆ ಇಪ್ರೀತ ನೆಣ ಹೆಚ್ಚುನೋಡು, ಊರೆಲ್ಲ ಜರೆದು ಒಂಟಿಯಾಗಿ ಹುಟ್ಟೊಂತ..."

"ತುಸನಾದ್ರೂ ನಾಚ್ಕೆ ಇಲ್ಲ ಈ ಗಂಡಸರಿಗೆ. ಆಪಾಟಿ ನೋಡಾಕೆ ಏನಿದೆಅಲ್ಲಿ? ಎಲ್ಲ ಬೆತ್ ಬೆತ್ಲಾಗಿ ಸೊಟ್ಟು ಸೊಟ್ಟಾಗಿ ನಿಂತವೆ...ನಿಮ್ಮ ಹಾಗೆ ನಾವೇನು ಸಂದಿಗೊಂದಿಯಲ್ಲ ನೋಡ್ತಾ ನಿಂತ್ಗಳ್ಲ."..... [ಸದಾನಂದದಿಂದ]

ಇಂಥ ಬನಿ ಗಮ್ಮತ್ತಿನ ಬಿಡುಬೀಸಾದ ಮುಜುಗರವಿಲ್ಲದ ಮಾತುಗಾರಿಕೆ ಇಂದಿರಾ ಕೃತಿಗಳಲ್ಲಿ ಪುಟ ಪುಟಕ್ಕೂ ದೊರೆಯುತ್ತದೆ. ಇಷ್ಟು ಸಾಕು.

ಅತ್ತೆ ತಮ್ಮ ಪ್ರೀತಿಯ ಶಿಮಗ್ಗಿಗೆ ಬಂದು ತುಂಬ ದಿನಗಳೇ ಕಳೆದವು. ಅವರು ಹತ್ತ ಮಲಗಿಬಿಟ್ಟಿದ್ದಾರೆ ಬಲ್ಲೆ. ಭಗವಂತ ಅವರಿಗೆ ಮೊದಲಿನ ಆರೋಗ್ಯ ಕರುಣಿಸಿದರೆ ಸಾಕು. ಅವರು ಹತ್ತಾರು ಬಾರಿ ಸ್ವಾಮಿ ಮನೆಗೆ ಬಂದಾರು. ಚೂಟಿಯಾಗಿ ಹಿಂದಿನಂತೆ ಹತ್ತುಮನೆಗೆ ಓಡಾಡಿಕೊಂಡಿದ್ದಾರು. ಅವರೇನು ದಿನದ ಇಪ್ಪತ್ತುನಾಲ್ಕು ಗಂಟೆಯೂ ನನ್ನ ಮುಂದೆ ಕುಳಿತಿರಲಿ ಎನ್ನುವಷ್ಟು ಸ್ವಾರ್ಥಿ ಖಂಡಿತ ನಾನಲ್ಲ. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ". ಕನ್ನಡಮ್ಮನ ಮುದ್ದು ಸೊಸೆಯಾಗಿ "ಆಕೆಯನ್ನು ನಾವು ಧಾರೆಯೆರೆದು ಕೊಟ್ಟು ಅರ್ಧ ಶತಮಾನಕ್ಕೂ ಮೇಲಾಯಿತು. ಶಿವಮೊಗ್ಗೆಯಲ್ಲಿ ಅವರ ಯಜಮಾನರ ಕಡೆ ಒಂದಿಬ್ಬರು ಬಂಧುಗಳಿದ್ದಾರೆ. ಅಭಿಮಾನಿಗಳ ಅಪಾರ ಬಳಗವೇ ಇದೆ. ಅವರೆಲ್ಲ ಕಿತ್ತಾಡಿ ಅವರನ್ನು ತಮ್ಮ ತಮ್ಮ ಮನೆಗಳಿಗೆ ಕರೆದುಕೊಂಡು ಹೋಗಿ ಭೂರಿ-ಭೋಜನಗಳಿಂದ ಅವರ ಪುಟ್ಟ ಹೊಟ್ಟೆ ತುಂಬಿಬಿಡುತ್ತಾರೆ. ನಾನು ಬಲ್ಲೆ. ನನಗೇನೂ ಬೇಸರ ಇಲ್ಲ. ಆದರೇನು ? ರಾತ್ರಿ ಮಲಗೋ ಹೊತ್ತಿಗಾದರೂ ಅತ್ತೆ ನನ್ನ ಮನೆಗೆ ಬಂದೇ ಬರ್ತಾರೆ. ಮಂಚದ ಮೇಲೆ ಕೂತು–"ಸ್ವಾಮಿ, ಒಂದು ಹಾಸಿಗೆ ಕೊಡಪ್ಪ ಬೆನ್ನಿಗೆ ಯಾಕೋ ತುಂಬ ಸುಸ್ತು ಕಣೋ" ಎನ್ನುತ್ತಾರೆ. ಮುತ್ತಿಕೊಳ್ಳುವ ಮಕ್ಕಳಿಗೆ ಕಿತ್ತಲೆ ತೊಳೆ ಹಂಚ್ತಾ ಕೆನ್ನೆಸವರಿ "ಏನೇನು ಮಾಡ್ತಿದೀರಪ್ಪಾ ? ಎಷ್ಟು ಬೆಳೆದು ಬಿಟ್ಟದೀರಲ್ಲೋ !" ಎನ್ನುತ್ತಾರೆ. "ಇಂದಿರಾ ಬಾ ಇಲ್ಲಿ.

ನೀನೇನು ಪರದಾಟವೇ ಮಗು. ಕಂಠಮಟ್ಟ ತಿನ್ನಿಸಿ ಬಿಟ್ಟಿದ್ದಾರೆ ಎಲ್ಲ ಸೇರಿಕೊಂಡು. ಕೇಸರಿಬಾತು, ಹೋಳಿಗೆ ಏನೇನೋ.ತಿಳ್ಳಗೆ ಒಂದು ಹುಣಿಸೆ ಸಾರು ಮಾಡಿ ಬಿಡವ್ವಾ. ನೆಲ್ಲೀಕಾಯಿ ತೊಕ್ಕಿದೆ ಅಂತೀಯಲ್ಲ ಒಂದು ಚೂರು ರುಚಿ ನೋಡ್ತೀನಿ, ಮಜ್ಜಿಗೆ ಮಾತ್ರ ಎರಡು ಲೋಟ ಕುಡೀತನಿ ನೋಡು. ಬಲು ಬಾಯಾರಿಕೆ" ಅಂತಾರೆ. ಅವಳು ಅತ್ತ ಸರೀತಿದ್ದಾಗೇ. "ಆ ತೆಗ್ಗಿನಮನೆ ಸೀತೇದು ಏನಾಯ್ತು ಅಂತ ಮಾಡಿದೀ. ಬಾ ಕೂತ್ಕೊ" ಅಂತ ನನ್ನನ್ನು ಪಕ್ಕದಲ್ಲಿ ಕೂರಿಸಿಕೊಂಡು ನೆನಪಿನ ಬುತ್ತಿ ಬಿಚ್ತಾರೆ.

ಅಡಿಗೆ ಪಡಿಗೆ ಆಗಿ ನಾವೆಲ್ಲ ಸೊರಬರ ಉಂಡು ಅತ್ತೆಯೂ ಉಂಡ ಶಾಸ್ತ್ರ ಮಾಡಿ, "ನಿಂದೇನಾದರೂ ಬರ್ಕಳದು ಓದ್ಕಳೂದು ಇದ್ರೆ, ಹೋಗಪ್ಪ. ಇನ್ನು ನಾನು ಉರುಡ್ಕತಿನಿ. ಯಾಕೋ ತುಂಬಾ ಸುಸ್ತು ಕಣೊ"ಅಂದು ನನ್ನನ್ನು ಸ್ಟಡೀಗೆ ಇವಳನ್ನ ಕಸಮುಸುರೆಗೆ ಕಳುಹಿಸುತ್ತಾರೆ. ಮಕ್ಕಳು ಶ್ರದ್ಧೆಯಿಂದ ಹಾಸಿಕೊಟ್ಟ ಹಾಸಿಗೆ ಮೇಲೆ ಆಕಳಿಸುತ್ತಾ ಒರಗುತ್ತಾರೆ.

....ಒಂದು ಗಂಟೆ ಬಿಟ್ಟುಕೊಂಡು ಬಂದು ನೋಡುವ ಹೊತ್ತಿಗೆ ಅತ್ತೆಯ ಕಾಲ ಬುಡದಲ್ಲಿ ಬೊಂಬೆಗಳ ಹಾಗೆ ಮಕ್ಕಳು ಮುದುರಿ ಮಲಗಿ ಗೊರಕೆ ಹೊಡೆಯುತ್ತಿವೆ. ಮಡದಿಯೂ ಕೋಣೆ ಸೇರಿ ರಾಮಾ–ಕೃಷ್ಣಾ ಅನ್ನುತ್ತಿದ್ದಾಳೆ. ಅತ್ತೆಗೆ ಸೊಂಪಾದ ನಿದ್ರೆ. ಬದುಕಿನಲ್ಲಿ ಬರಹದಲ್ಲಿ ಹಣ್ಣಾದ ಪ್ರಶಾಂತ ಮುಖ. ಫ್ಯಾನಿನ ಗಾಳಿಯಲ್ಲಿ ಆಟವಾಡುತ್ತಿರುವ ಬಿಳಿಗೆ ತಿರುಗಿದ ಕೂದಲು–ಅದೂ ಸೊಂಪು ಸೊಂಪು. ತುಂಬಿ ಕೊಂಡ ಅಕ್ಕರೆಯನ್ನು ನೆನಪಿಸುವ ಮೆಲ್ಲ ಮೆಲ್ಲಗೆ (ಏರಿಳಿತ-ಎಂದರೆ ಎಲ್ಲಿ ಭಾರ ವಾಗುವುದೋ ಎಂಬಂತೆ) ಉಸಿರಾಡುವ ಎದೆ. ಪುಟ್ಟ ಹಸಿರು ಬೆಡ್‌ಲೈಟಿನಲ್ಲಿ ಮಂದ ವಾಗಿ ಹರಡುವ ಅತ್ತೆಯ ಅಪಾರ ವಾತ್ಸಲ್ಯ. ಕನ್ನಡದ ಖ್ಯಾತ ಮಾತಿನಮಲ್ಲಿ ಇಂದಿರಾ ಇದೀಗ ನನ್ನ ಅತ್ತೆ ಮೂಕಾಂಬಿಕೆ.

ನಮ್ಮ ಕುಟುಂಬದ ಶ್ರೀರಕ್ಷೆ.

ನನ್ನ ಅತ್ತಿಗೆ

○

○

○ ಲಲಿತಾ ರಾಮಚಂದ್ರರಾವ್

ನನ್ನ ಮದುವೆಯಾದಾಗ ನಾನು, ನನ್ನ ಅತ್ತಿಗೆ, ಶ್ರೀಮತಿ ಎಂ. ಕೆ. ಇಂದಿರಾರವರನ್ನು ಕಂಡದ್ದು, ಗೃಹಿಣಿಯಾಗಿ, ಐದು ಮಕ್ಕಳ ತಾಯಿ ಯಾಗಿ. ಪತಿ, ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹುದ್ದೆಯಲ್ಲಿದ್ದರು. ಮದುವೆಯಾದ ಹೊಸದರಲ್ಲಿ, ನಾನು ಅವರನ್ನು ನಿಕಟವಾಗಿ ಸಂಪರ್ಕಿಸಲು ಸಾಧ್ಯವಾಗಿರಲಿಲ್ಲ. ಏಕೆಂದರೆ, ನಮ್ಮ ಮನೆಗೆ ಅವರು ಬಂದರೆ, ಯಜಮಾನರ ಜೊತೆಯಲ್ಲಿಯೇ ಬಂದು, ಅವರೊಂದಿಗೇ ಹಿಂದಿರುಗುತ್ತಿದ್ದರು. ಹೀಗಾಗಿ, ನಮ್ಮಿಬ್ಬರಲ್ಲಿ ಹೆಚ್ಚಿನ ಸಲಿಗೆ ಯಿಲ್ಲದೇ. ಅವರ ಬಗ್ಗೆ ಹೆಚ್ಚಿನ ತಿಳುವಳಿಕೆ ಆಗ ನನಗೆ ಸಾಧ್ಯವಾಗಿರ ಲಿಲ್ಲ. ಆದರೆ, ಆಗ ನನಗೆ ತೋಚಿದ್ದು, "ಇವರಿಗೆ ತುಂಬ ಜಂಬ ಇದೆ. ಬಹಳ ಬಿಗುಮಾನದ ವ್ಯಕ್ತಿ" ಎಂದು.

ಕೆಲಕಾಲದ ನಂತರ, ನಮ್ಮ ಅತ್ತೆಯವರ, ಅನಾರೋಗ್ಯದ ನಿಮಿತ್ತ ಅವರೊಬ್ಬರೇ, ಆಗಾಗ್ಗೆ ನಮ್ಮ ಮನೆಗೆ ಬಂದು, ಸ್ವಲ್ಪ ಹೊತ್ತು ಇದ್ದು ಹೋಗುವುದು ವಾಡಿಕೆಯಾಯಿತು. ಆಗೆಲ್ಲಾ ನಾನು ಅವ ರೊಡನೆ ಬಹಳಷ್ಟು ಹರಟುತ್ತಿದ್ದೆ. ಅವರ ಮಾತಿನ ವ್ಯಾಪ್ತಿಯಲ್ಲಿ, ಹುರಿಗಡಲೆ ಹಾಕಿದ ಮಜ್ಜಿಗೆ ಹುಳಿ ಮಾಡುವುದರಿಂದ ಹಿಡಿದು, ಬಾಣಂತಿಯರಿಗೆ ಕೊಡುವ ಅಂಟುಂಡೆ ಮಾಡುವ ವಿಧಾನ ಕುರಿತಲ್ಲದೆ, ಹಿಂದಿನ ಸಿನಿಮಾ ನಟ ನಟಿಯರಾರು, ಅವರುಗಳು ನಟಿಸಿದ ಸಿನಿಮಾ ಗಳಾವುವು, ಎಂಬೆಲ್ಲಾ ವಿಷಯಗಳು ಪ್ರಾಸಂಗಿಕವಾಗಿ, ಹಾಸು ಹೊಕ್ಕಾಗಿ ಬರುತ್ತಿದ್ದವು. ಅವರ ಅನುಭವದ ಜ್ಞಾನ ಭಂಡಾರ ಅಪಾರವಾಗಿತ್ತು. ನೆನಪಿನ ಶಕ್ತಿ ಅಸಾಧಾರಣವಾಗಿತ್ತು. ಯಾವ

ವಿಷಯವನ್ನೇ ಆಗಲಿ. ಕೇಳುಗರ ಮನಮುಟ್ಟುವಂತೆ ಹೃದಯಂಗಮವಾಗಿ ವರ್ಣಿಸುವ ಕಥನ ಕಲೆ ಅವರಲ್ಲಿ ಸಹಜವಾಗಿಯೇ ವ್ಯಕ್ತಿಗತವಾಗಿತ್ತೆಂಬ ಅರಿವು, ನನಗೆ ಆಗಲೇ ಆಯಿತು.

ಒಮ್ಮೆ ನಾವುಗಳು ಮಲೆನಾಡಿಗೆ. ಪ್ರವಾಸ ಕೈಗೊಂಡಿದ್ದೆವು. ಆಗ ಇಂದಿರಮ್ಮ ಕೂಡ, ನಮ್ಮ ಜೊತೆ ಬಂದಿದ್ದರು. ನಮ್ಮ ಯಜಮಾನರ ಹುಟ್ಟೂರಾದ ತೀರ್ಥ ಹಳ್ಳಿಗೆ ಹೋದಾಗ, ಇವರಿದ್ದ ಮನೆಗೆ ಕರೆದೊಯ್ದುದ್ದಲ್ಲದೆ, ನಮ್ಮೆಜಮಾನರು ಜನಿಸಿದ ಕೊಠಡಿ, ಅಂದು ಮನೆಯಲ್ಲಿ ನಡೆದ ವಿದ್ಯಮಾನಗಳು, ಅಲ್ಲಿಯ ರಾಮೇಶ್ವರ ದೇವಸ್ಥಾನದ ಸ್ಥಳ ಐತಿಹ್ಯ-ಮಹಾತ್ಮೆ ಮುಂತಾದವುಗಳ ಬಗ್ಗೆ ಓತ ಪ್ರೋತವಾಗಿ, ವರ್ಣಿಸಲಾರಂಭಿಸಿದರು. ಎಷ್ಟೋ ವರ್ಷಗಳ ಹಿಂದೆ ನಡೆದ ಸಂಗತಿ ಗಳನ್ನು, ಅಂದೇ ನಡೆದವೋ ಎಂಬಂತೆ, ಕಣ್ಣಿಗೆ ಕಟ್ಟುವಂತೆ ವರ್ಣಿಸಿದ ಅವರ ಕಥನ ಕಲೆಗೆ, ಸ್ಮರಣ ಶಕ್ತಿಗೆ ವಿಸ್ಮಿತಳಾದೆ. ಮಲೆನಾಡಾದ ನರಸಿಂಹರಾಜಪುರದಲ್ಲಿ, ತೋಟ ಗದ್ದೆಗಳಲ್ಲಿ ಅಲೆದಾಡುವಾಗ ಅವರು ಹಿಂದೆ ಚಿಕ್ಕವಯಸ್ಸಿನಲ್ಲಿ ಜೋಕಾಲೆ ಆಡಿದ ಮರಗಳು, ಸುತ್ತಾಡುತ್ತಿದ್ದ ಸ್ಥಳಗಳು, ಅಡಿಕೆ ಸುಲಿಯುತ್ತಿದ್ದ ಜಾಗಗಳು, ಮೊದಲಾದುವನ್ನು ನಿರರ್ಗಳವಾಗಿ ವಿವರಿಸಿದರು. ಸುಮಾರು 100 ವರ್ಷಗಳಿಗೂ ಮಿಗಿಲಾಗಿ ವಯಸ್ಸಾದ ಒಬ್ಬ ಮುದುಕಿ ಅಡಿಕೆ ಸುಲಿಯುತ್ತಿದ್ದರೆ, ಅವಳ ಬಳಿ ಹೋಗಿ ಅವಳ, ಅವಳ ಸಂಸಾರದವರ ಹೆಸರುಗಳನ್ನೆಲ್ಲಾ ಹೇಳಿ ಅವರ ಬಗ್ಗೆ ವಿಚಾರಿಸಿದರು. ಇವರು ಚಿಕ್ಕವರಾಗಿದ್ದಾಗಲೂ ಅವಳು ಅಡಿಕೆ ಸುಲಿಯಲು ಬರುತ್ತಿದ್ದಳಂತೆ. ನಾನು ಅವರನ್ನು ಕೇಳಿದೆ. "ಇಷ್ಟೆಲ್ಲಾ ನಿಮಗೆ ಜ್ಞಾಪಕಶಕ್ತಿ ಇದೆ. ಕಥನ ಕಲೆ, ನಿಮಗೆ ಸಹಜವಾಗಿಯೇ ಸಿದ್ಧಿಸಿದೆ. ನೀವು ಏಕೆ, ಇವೆಲ್ಲದರ ಬಗ್ಗೆ ಪುಸ್ತಕ ಬರೆಯಬಾರದು ?" ಎಂದು. ಅದಕ್ಕೆ ಅವರು, "ನನಗೂ ಬರೆಯ ಬೇಕೆಂಬ ಇಚ್ಛೆಯಿದೆ. ಇಷ್ಟೇ ಅಲ್ಲ, ಇನ್ನೂ ಎಷ್ಟೋ ವಿಷಯಗಳು, ನನ್ನ ತಲೆ ಯಲ್ಲಿ ಅಡಕವಾಗಿವೆ. ಅವನ್ನೆಲ್ಲಾ ಪುಸ್ತಕ ರೂಪದಲ್ಲಿ ಬರೆಯಬೇಕು. ಆದರೆ, ಈ ಸಂಸಾರದ ಜಂಝಾಟದಲ್ಲಿ, ನನಗೆ ಕಾಗದ ಪೆನ್ನು ಹಿಡಿಯಲು ಪುರುಸೊತ್ತೆಲ್ಲಿದೆ ? ಬಹುಶಃ ಈ ಸಂಸಾರದ ಜವಾಬ್ದಾರಿಯೆಲ್ಲಾ ಮುಗಿದ ಬಳಿಕ, ಮುದಿ ವಯಸ್ಸಿ ನಲ್ಲಾದರೂ, ಬರೆಯುತ್ತೇನೋ ಏನೋ" ಎಂದು ಹೇಳಿ ನಕ್ಕರು. ಅದು ಹಾಗೆಯೇ ಆಯಿತು. ಅವರ ಸಾಹಿತ್ಯ ರಚನೆಯ ಆರಂಭ ಅವರ ಮೊಮ್ಮಗಳು ಹುಟ್ಟಿದ ಮೇಲೆಯೇ ಆದದ್ದು. ಅವರು ಹೇಳಿದಂತೆ, ಸಂಸಾರ ತಾಪತ್ರಯಗಳ ನಡುವೆ, ಮನಶ್ಶಾಂತಿ ಇಲ್ಲದಿರುವಾಗ, ನಿರಾಳವಾಗಿ ಕುಳಿತು ಬರೆಯುವುದಾದರೂ ಹೇಗೆ ? ಪುರುಸೊತ್ತಾದರೂ ಎಲ್ಲಿ ? ಆಗ ಅವರ ಮಾತು ಸರಿಯೆಂದು ನನಗೆ ತೋರಿತು.

ಕೆಲ ಕಾಲದ ನಂತರ, ಅವರ ದೊಡ್ಡ ಮಗನ ಮದುವೆ ನಡೆಯಿತು. ಸೊಸೆ ಮನೆಗೆ ಬಂದಳು. ಇನ್ನೊಬ್ಬ ಹುಡುಗನಿಗೂ ಒಳ್ಳೆಯ ನೌಕರಿ ದೊರೆಯಿತು. ಸಂಸಾರದ ತಾಪತ್ರಯ, ಜವಾಬ್ದಾರಿ ಎಲ್ಲ ಸ್ವಲ್ಪ ಕಡಿಮೆಯಾಯಿತು. ಸೊಸೆಗೆ, ಮನೆ ಜವಾಬ್ದಾರಿ ವಹಿಸಿದ ಬಳಿಕ ಅವರ ಸಾಹಿತ್ಯ ರಚನೆ ಆರಂಭವಾಯಿತು. ಅವರ ಪ್ರಥಮ ಕಾದಂಬರಿಯೇ ಅತ್ಯಂತ ಜನಪ್ರಿಯವಾಯಿತು. ಅದರಲ್ಲಿಯೂ ತುಂಬ ಶ್ರಮದಿಂದ ಮರಳಿ ಬರೆದ ಕಾದಂಬರಿಯಾಗಿ, ಇಂದಿರಮ್ಮನವರಿಗೆ ಆ ಜನಪ್ರಿಯತೆ ಬಹಳ ಮುದ ಕೊಟ್ಟಿತು. ಬಳಿಕ ಅವರ ಅನೇಕ ಕಾದಂಬರಿಗಳು ಕಥಾಸಂಕಲನಗಳು, ಹರಟೆಗಳು, ಜೀವನ ಚಿತ್ರಗಳೂ, ಪ್ರಕಟವಾದವು. ಇದರಿಂದ ಅವರಿಗೆ ಸನ್ಮಾನ, ಕೀರ್ತಿ, ಧನಸಂಪತ್ತು ಎಲ್ಲೆಡೆಯಿಂದಲೂ ದೊರೆತವು. ಈ ಮಧ್ಯೆ, ನಮ್ಮ ಅತ್ತೆಯವರು ಮರಣಿಸಿದ ನಂತರ, ಮೊದಲಿನಂತೆ ನಮ್ಮ ಮನೆಗೆ ಪುರುಸೊತ್ತಾಗಿ ಬರುವುದು, ನಿಂತುಹೋಯಿತು. ಇದಕ್ಕೆ ಮುಖ್ಯ ಕಾರಣ, ಸಾಹಿತ್ಯ ರಚನೆಯಿಂದಾಗಿ ಅವರಿಗೆ ಸಾಕಷ್ಟು ಬಿಡುವು ಸಿಗದಿರುವುದು, ಅವರ ಯಜಮಾನರು, ಮನೆಯ ಇತರರು, ಅವರ ಸಾಹಿತ್ಯ ಕೃಷಿಗೆ ಸಾಕಷ್ಟು ನೀರೆರೆದು ಪ್ರೋತ್ಸಾಹಿಸುತ್ತಿದ್ದರು. ಅವರ ಪುಸ್ತಕಗಳು ಪ್ರಕಟಗೊಂಡಾಗ ಅವುಗಳನ್ನು ನನ್ನ ಹೆಸರಿಗಾಗಲಿ, ನಮ್ಮ ಯಜಮಾನರ ಹೆಸರಿಗಾಗಲಿ ಬರೆದು, ತಪ್ಪದೆ ನಮಗೆ ಅವುಗಳನ್ನು ತಂದು ಕೊಡುತ್ತಿದ್ದರು. ಆಗ ಅವುಗಳ ರಚನೆಯ ಬಗ್ಗೆ, ಪ್ರಕಾಶನದ ಬಗ್ಗೆ, ಸಂಕ್ಷಿಪ್ತ ವರದಿ ನಮಗೆ ಸಿಗುತ್ತಿತ್ತು. ಅವರ ಎಷ್ಟೋ ಕಾದಂಬರಿಗಳು. ಆಗಿನ ದೈನಿಕಗಳಲ್ಲಿ, ಮಾಸಿಕಗಳಲ್ಲಿ, ಧಾರಾವಾಹಿಗಳಾಗಿ ಪ್ರಕಟಗೊಂಡವು. ಅವರ ಕೆಲವು ಕಾದಂಬರಿಗಳು ಚಲಚ್ಚಿತ್ರಗಳಾದದ್ದು ಸರ್ವಜನ ವಿದಿತ. ಈ ವೇಳೆಗೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಉತ್ತಮ ಕೃತಿಗಳಿಂದಾಗಿ ಉನ್ನತ ಸ್ಥಾನ ವನ್ನೂ ಗಳಿಸಿಕೊಂಡಿದ್ದರು. ಜನಪ್ರಿಯತೆಯೂ ಅಪಾರವಾಗಿ ದೊರೆಯಿತು. ಅವರ ಈ ಜನಪ್ರಿಯತೆಯಿಂದಾಗಿ ಎಷ್ಟೋ ಕಡೆಗಳಿಂದ ಅವರಿಗೆ ಸಮಾರಂಭ ಗಳಲ್ಲಿ ಭಾಗವಹಿಸಲು ಭಾಷಣ ಮಾಡಲು ಆಹ್ವಾನಗಳು ಬರುತ್ತಿದ್ದುವು. ಕೆಲವು ಸಲ ಅವರು, "ನನ್ನ ನಾದಿನಿ ಕಾಲೇಜಿನಲ್ಲಿ ಪ್ರೊಫೆಸರಾಗಿದ್ದಾಳೆ. ನನ್ನ ಬದಲು ಅವಳನ್ನು ಕರೆದುಕೊಂಡು ಹೋಗಿ" ಎಂದು ಹೇಳಿ, ಅವರನ್ನು ನಮ್ಮ ಮನೆಗೆ ಕರೆದು ಕೊಂಡು ಬರುತ್ತಿದ್ದುದೂ ಉಂಟು. ಆದರೆ ನಾನು ಉದ್ಯೋಗದಲ್ಲಿದ್ದುದರಿಂದ, ಸಂಸಾರದ ಜವಾಬ್ದಾರಿ ಹೊತ್ತಿದ್ದರಿಂದ ಊರಿಂದ ಊರಿಗೆ ಹೋಗಲಾಗುತ್ತಿರಲಿಲ್ಲ. ಮುಖ್ಯವಾಗಿ, ಇಂದಿರಮ್ಮ ಇಲ್ಲದೆ ನಾನು ಮಾತ್ರ ಹೋಗಲು ನಾನು ಇಷ್ಟ ಪಡು ತ್ತಿರಲಿಲ್ಲ. ಹೀಗಾಗಿ ನಯವಾಗಿಯೇ ಏನಾದರೂ ಸಬೂಬು ಹೇಳಿ ನಾನು ಅಂತಹ ಸಂದರ್ಭಗಳನ್ನು ತಪ್ಪಿಸಿಕೊಳ್ಳುತ್ತಿದ್ದೆ. ಆದರೆ, ಅವರು ಭಾಗವಹಿಸಿದ ಒಂದೆರಡು ಸಮಾರಂಭಗಳಿಗೆ ನಾನು ಅವರ ಜೊತೆ ಹೋಗಿದ್ದೆ. ಅಲ್ಲಿ ಅವರಿಗೆ ಸಿಗು

ತ್ತಿದ್ದ ಗೌರವಾದರಗಳನ್ನು ಕಂಡು ನನಗೆ ಹೃದಯ ತುಂಬಿ ಬರುತ್ತಿತ್ತು. ನಮ್ಮ ಮನೆಯ ಹೆಣ್ಣು ಮಗಳೊಬ್ಬಳು ಇಂತಹ ಸನ್ಮಾನಕ್ಕೆ ಪಾತ್ರಳಾಗಿರುವುದು ನನಗೆ ಹೆಮ್ಮೆಯ ವಿಷಯವಾಗಿತ್ತು.

ಒಮ್ಮೆ ಹಾಸನದ ಇಂಜಿನೀರಿಂಗ್ ಕಾಲೇಜಿನ ಕರ್ನಾಟಕ ಸಂಘದವರು ಇಂದಿರಾರವರನ್ನು ಅವರ ಸಮಾರಂಭವೊಂದಕ್ಕೆ ಆಹ್ವಾನಿಸಲು ಬಂದರು. ಅವರನ್ನು ಇಂದಿರಮ್ಮ ನಮ್ಮ ಮನೆಗೆ ಕರೆದುಕೊಂಡು ಬಂದರು. ನನ್ನನ್ನೂ ಸಮಾರಂಭದಲ್ಲಿ ಭಾಗವಹಿಸುವಂತೆ ಹೇಳಿದರು. ಆಗ ನಮ್ಮ ಯಜಮಾನರು ಮನೆಯಲ್ಲಿಯೇ ಇದ್ದರು. ಅವರನ್ನೂ ಸಮಾರಂಭಕ್ಕೆ ಬರುವಂತೆ ಕಾರ್ಯಕರ್ತರು ಆಹ್ವಾನಿಸಿದರು. ಮೊದಲು ಅವರು ಈ ಆಹ್ವಾನಕ್ಕೆ ಒಪ್ಪದಿದ್ದರೂ ಬಳಿಕ ಅವರ ಒತ್ತಾಯಕ್ಕೆ ಮಣಿದು, ಬರಲು ಸಮ್ಮತಿಸಿದರು. ನಮ್ಮ ಯಜಮಾನರು ಮುಖ್ಯ ಅತಿಥಿಯಾಗಿಯೂ, ಇಂದಿರಮ್ಮನವರು ಅಂದಿನ ಸಭೆಗೆ ಅಧ್ಯಕ್ಷಿಣಿಯಾಗಿಯೂ, ನಾನು ಭಾಷಣಕಾರ್ತಿಯಾಗಿಯೂ, ಭಾಗವಹಿಸಬೇಕೆಂದು ತೀರ್ಮಾನವಾಯಿತು. ಕಾರ್ಯಕ್ರಮದಂದು, ಸ್ವಾಗತ ಭಾಷಣ ಮಾಡಿದ ಕಾರ್ಯಕರ್ತರು "ಶ್ರೀಮತಿ ಸುಭದ್ರಾದೇವಿಯವರೇ, ಶ್ರೀಕೃಷ್ಣರವರೇ, ಶ್ರೀಮತಿ ರುಕ್ಮಿಣೀ ದೇವಿಯವರೇ" ಎಂದು ಸಂಬೋಧಿಸಿದರು. ಸಭೆಯಲ್ಲಿ ಭಾರಿ ಕರತಾಡನವಾಯಿತು. ಅವರು ಯಾರನ್ನು ಕುರಿತು ಈ ರೀತಿ ಹೇಳುತ್ತಿರುವರೆಂಬುದನ್ನು ಅರಿಯಲು ನನಗೆ ಸ್ವಲ್ಪ ಸಮಯವೇ ಬೇಕಾಯಿತು. ನಮ್ಮ ಮೂವರ ಸಂಬಂಧವನ್ನು ವಿಶ್ಲೇಷಿಸಿ ಅವರು ಆ ರೀತಿ ಸಂಬೋಧಿಸಿದ್ದರು. ಈ ಘಟನೆ, ನನ್ನ ಜೀವನದಲ್ಲಿ ಒಂದು ಅವಿಸ್ಮರಣೀಯವಾದ ಪ್ರಸಂಗ. ಒಂದೇ ಕುಟುಂಬಕ್ಕೆ ಸೇರಿದ, ಮೂವರು ವ್ಯಕ್ತಿಗಳು, ಏಕಕಾಲದಲ್ಲಿ. ಸಮಾನ ವೇದಿಕೆಯ ಮೇಲೆ ಆಸೀನರಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಒಂದು ಮಹತ್ವದ ವಿಷಯವೆಂದೇ ನನ್ನ ಭಾವನೆ.

ಆ ದಿನಗಳೆಲ್ಲಾ ಇಂದಿರಮ್ಮನವರ ಜೀವನದಲ್ಲಿ ಸ್ವರ್ಣಕಾಲವೆಂದೇ ಹೇಳಬೇಕು. ಸಾಹಿತ್ಯ ಕೃತಿ ರಚನೆಯ ಜೊತೆಜೊತೆಗೆ ಜನಪ್ರಿಯತೆ, ಯಶಸ್ಸು, ಸನ್ಮಾನಗಳು, ಅವರನ್ನು ಉತ್ತುಂಗ ಶಿಖರಕ್ಕೇರಿಸಿದ್ದವು. ಈ ಸಂದರ್ಭದಲ್ಲಿಯೇ ಅವರ ಕೆಲವು ಕೃತಿಗಳು ಚಲಚಿತ್ರಗಳಾಗಿ ಮಾರ್ಪಟ್ಟವು. ಆರ್ಥಿಕವಾಗಿಯೂ ಅವರ ಸ್ಥಿತಿ ಸುಧಾರಿಸಿತು. ಇಂದಿರಮ್ಮನವರು ಬೇಕಾದಷ್ಟು ಗಳಿಸಿದರು. ಆದರೆ, ಏನನ್ನೂ ಉಳಿಸಲಿಲ್ಲ. ಗಂಡು ಮಕ್ಕಳ ಮದುವೆ, ಹೆಣ್ಣು ಮಗಳ ಮದುವೆ, ಸಂದರ್ಭಗಳಲ್ಲಿ ಧಾರಾಳವಾಗಿ ಖರ್ಚು ಮಾಡಿದರು.

ಭಾಗ್ಯಚಕ್ರ ಉರುಳುವಾಗ, ಚಕ್ರದ ಮೇಲ್ಭಾಗದ ನಂತರ ಚಕ್ರದ ಕೆಳಭಾಗ ಮೇಲೇರಿ ಬರಲೇಬೇಕಷ್ಟೆ. ಇಂದಿರಮ್ಮನವರ ಜೀವನದಲ್ಲಿಯೂ ಹಾಗೆಯೇ ಆಯಿತು. ಒಳ್ಳೆಯ ಕೆಲಸದಲ್ಲಿದ್ದು ಆರೋಗ್ಯವಾಗಿದ್ದ, ಇನ್ನೂ ಚಿಕ್ಕ ವಯಸ್ಸಿನ ಮಗನೊಬ್ಬ, ಇದ್ದಕ್ಕಿದ್ದಂತೆ ಮರಣಿಸಿದ. ಈ ಆಘಾತದಿಂದ ಇಂದಿರಮ್ಮನವರು ಸ್ವಲ್ಪ ಕಾಲ ವಿಚಲಿತರಾದರೂ ಎದೆಗುಂದಲಿಲ್ಲ. ಕೈಕಟ್ಟಿ ಕೂಡುವಂತಿರಲಿಲ್ಲ. ಕರ್ತವ್ಯದ ಕರೆ ಅವರನ್ನು ಕೈಬೀಸಿ ಕರೆಯುತ್ತಲಿತ್ತು. ವ್ಯಾಧಿಯಿಂದ ನರಳುತ್ತಿದ್ದ ಪತಿಯ ಶುಶ್ರೂಷೆ, ಸಂಸಾರದ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಇವೆಲ್ಲಾ ಗುರುತರವಾದ ಜವಾಬ್ದಾರಿಗಳು ಅವರನ್ನು ಹೆಚ್ಚು ಸಾಹಿತ್ಯದ ಕಡೆಗೆ ವಾಲುವಂತೆ ಮಾಡಿದವು. ಏಕೆಂದರೆ ಇದಕ್ಕೆಲ್ಲಾ ಅವರ ಸಂಪಾದನೆಯೇ ಕಾರಣವಾಗಿದ್ದಿತು. ಅವರ ಈ ದುಸ್ಥಿತಿಯನ್ನು ಅರಿತ ಎಷ್ಟೋ ಪ್ರಕಾಶಕರು ಅವರಿಗೆ ಮುಂಗಡವಾಗಿಯೇ ಹಣ ಸಹಾಯ ಮಾಡಿ ನಂತರ ಕೃತಿಗಳನ್ನು ಪಡೆಯುತ್ತಿದ್ದರು. ಹಣ ಪಡೆದ ಕಾರಣಕ್ಕಾಗಿಯಾದರೂ ಅವರು ಕೃತಿಗಳನ್ನು ರಚಿಸಬೇಕಾಗಿತ್ತು. ತಲೆ ಮೇಲೆ ಕೈ ಹೊತ್ತು ಕೂಡುವಂತಿರಲಿಲ್ಲ.

ಈ ಸಮಯದಲ್ಲಿಯೇ ಪ್ರಜಾವಾಣಿಯಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿದ್ದ ಅವರ "ಗೆಜ್ಜೆ ಪೂಜೆ" ಎನ್ನುವ ಕಾದಂಬರಿಯನ್ನು ರಾಶಿ ಸಹೋದರರು ಚಿತ್ರೀಕರಿಸಲು ಕೈಗೆತ್ತಿಕೊಂಡಿದ್ದರು. ಚಿತ್ರೀಕರಣ ಮೈಸೂರಿನ ಪ್ರೀಮಿಯರ್ ಸ್ಟುಡಿಯೋಸ್‌ನಲ್ಲಿ ನಡೆಯುತ್ತಿತ್ತು. ಆಗ ಅವರ ಯಜಮಾನರ ಆರೋಗ್ಯ ತೀವ್ರ ಹದಗೆಟ್ಟಿದ್ದು ಅವರು ವಿಶ್ರಾಂತಿ ಚಿಕಿತ್ಸೆಗಾಗಿ ನಮ್ಮ ಮನೆಯಲ್ಲಿದ್ದರು. ಚಿತ್ರದ ನಿರ್ಮಾಪಕರಾದ ಶ್ರೀ ರಾಮನಾಥನ್‌ರವರು ಇಂದಿರಮ್ಮನವರನ್ನು ಚಿತ್ರದ ಷೂಟಿಂಗ್ ವೀಕ್ಷಿಸಲು ಮೈಸೂರಿಗೆ ಆಹ್ವಾನಿಸಿದರು, ಅವರ ಯಜಮಾನರ ಅನಾರೋಗ್ಯದ ನಿಮಿತ್ತ ನಾನೇ ಇಂದಿರಮ್ಮನವರ ಜೊತೆ ಮೈಸೂರಿಗೆ ಹೋದೆ. ನಿರ್ದೇಶಕ ಪುಟ್ಟಣ್ಣ ಕಣಗಾಲ್‌ರವರೂ ನಮ್ಮ ಜೊತೆಗಿದ್ದರು. ದುಃಖದ ಸಂಗತಿಯೇನೆಂದರೆ ಅದು ಪ್ರದರ್ಶನಗೊಳ್ಳುವುದಕ್ಕೆ ಮೊದಲೇ ಇಂದಿರಮ್ಮನವರ ಯಜಮಾನರು ನಿಧನರಾದುದು. ಅವರು ಗತಿಸಿದ ಒಂದು ತಿಂಗಳ ನಂತರ ಗೆಜ್ಜೆ ಪೂಜೆ ಪ್ರದರ್ಶನಕ್ಕೆ ಸಿದ್ಧವಾಯಿತು. ಪ್ರದರ್ಶನದ ದಿನದಂದು ಅದರ ವಿತರಕರು ಅವರನ್ನು ಪ್ರದರ್ಶನಕ್ಕೆ ಕರೆತರುವ ಜವಾಬ್ದಾರಿಯನ್ನು ನಮ್ಮ ಯಜಮಾನರಿಗೇ ವಹಿಸಿದ್ದರು ನಾವುಗಳು ಅಂದು ಇವರು ಬರುತ್ತಾರೋ ಇಲ್ಲವೋ, ಏನು ಹೇಳುವರೋ, ಎಂಬ ಅಳುಕಿನಿಂದಲೇ ಅವರ ಮನೆಗೆ ಹೋದೆವು. ಆದರೆ ಅವರು ಅಂತಹ ಆರ್ಭಟಗಳನ್ನೇನನ್ನೂ ಮಾಡದೇ ನಮ್ಮ ಜೊತೆ ಪ್ರದರ್ಶನಕ್ಕೆ ಬಂದರು. ಪ್ರದರ್ಶನವು ಮುಗಿದ ಬಳಿಕ ಮೆಟ್ಟಲಿಳಿದು ಬರುವಾಗ್ಗೆ ಅದುವರೆವಿಗೂ ತಡೆ

ಓಡಿದಿದ್ದ ಅವರ ದುಃಖದ ಕಟ್ಟೆ ಒಡೆದು ಅಳಲು ಆರಂಭಿಸಿದರು. ಅವರ ಸಾಹಿತ್ಯ ಸೇವೆಗೆ ಅಷ್ಟೆಲ್ಲಾ ಬೆಂಬಲಿಸಿದ ಅವರ ಪತಿ ಆ ಪ್ರದರ್ಶನವನ್ನು ಕಾತುರದಿಂದ ನಿರೀಕ್ಷಿಸುತ್ತಿದ್ದವರು, ಆ ಸಮಯದಲ್ಲಿರಲಿಲ್ಲವಲ್ಲಾ ಎಂಬ ಕೊರಗು ನಮ್ಮನ್ನು ಬಹಳವಾಗಿ ಬಾಧಿಸಿತು.

ಯಜಮಾನರ ಮರಣದ ನಂತರ ಅವರ ಆರ್ಥಿಕ ಸ್ಥಿತಿ ಇನ್ನಷ್ಟು ಹದಗೆಟ್ಟಿತು. ಅಂತಹ ಸಮಯದಲ್ಲಿ, ಅವರ ಕೆಲ ಪ್ರಕಾಶಕರು ಅವರ ಬೆಂಬಲಿಗರಾಗಿ ಅವರಿಗೆ ಆರ್ಥಿಕ ನೆರವು ನೀಡಿದ್ದಾರೆ. ಈ ವಿಷಯದಲ್ಲಿ ಇಂದಿರಮ್ಮನವರು ಬಹಳ ಭಾಗ್ಯಶಾಲಿ. ಈಗಲೂ ಕೂಡ ಅವರು ಏನೂ ಬರೆಯದಿದ್ದರೂ ಅವರ ಕೆಲವು ಅಭಿಮಾನಿ ಪ್ರಕಾಶಕರು ಅವರ ಕಷ್ಟದಲ್ಲಿ ಭಾಗಿಗಳಾಗಿ ಅವರಿಗೆ ಸಹಾಯ ಹಸ್ತ ನೀಡಿದ್ದಾರೆ. ಕೆಲವರ ಸಹಾಯದಿಂದ ಅವರಿಗೆ ಮಾಸಿಕ 250 ರೂ.ಗಳ ಪೆನ್‌ಷನ್ ದೊರೆಯಿತು. ಸ್ವಲ್ಪ ಕಾಲದ ನಂತರ ಯಾರೋ ಪುಣ್ಯಾತ್ಮರು ತಮ್ಮ ಸ್ವಪ್ರಯತ್ನದಿಂದ ಅವರಿಗೆ ತಿಂಗಳಿಗೆ 500 ರೂ. ಬರುವಂತೆ ಮಾಡಿದರು. ಏತನ್ಮಧ್ಯೆ ತಮ್ಮ ವ್ಯಾವಹಾರಿಕ ಜೀವನದ ಸಲಹೆಗಾರರಾಗಿ, ಮಾರ್ಗದರ್ಶಕರಾಗಿದ್ದ ತಮ್ಮನ ಅನಿರೀಕ್ಷಿತ ಸಾವು ಅವರನ್ನು ಇನ್ನಷ್ಟು ಧೃತಿಗೆಡುವಂತೆ ಮಾಡಿತು. ಈ ಎಲ್ಲಾ ಬವಣೆಗಳಿಂದುಂಟಾದ ಮಾನಸಿಕ ಒತ್ತಡದಿಂದಾಗಿ ಅನಾರೋಗ್ಯಗೊಂಡ ಇಂದಿರಾರವರು ಕೆಲಕಾಲ ನರ್ಸಿಂಗ್ ಹೋಂನಲ್ಲಿರಬೇಕಾಯಿತು. ಮುಂಚಿನಂತೆ ಅವರಿಗೆ ಈಗ ಬರೆಯಲು ಸಾಧ್ಯವಾಗುತ್ತಿಲ್ಲ. ಸ್ವಭಾವತಃ, ಸ್ವಾಭಿಮಾನಿಯಾದ ಅವರಿಗೆ ಯಾರ ಹಂಗೂ ಇಲ್ಲದೆ, ಯಾರ ಆಶ್ರಯದಲ್ಲಿಯೂ ಇರದೆ, ಸ್ವತಂತ್ರವಾಗಿ ತಾನು ವಾಸಮಾಡಬೇಕೆಂಬಾಸೆ. 500 ರೂ.ಗಳ ಮಾಸಾಶನದಲ್ಲಿ ಇದು ಹೇಗೆ ಸಾಧ್ಯ ? ವಿದೇಶಗಳಲ್ಲಿಯಾದರೆ ಸಾಹಿತಿಗಳಿಗೆ, ಕಲಾವಿದರಿಗೆ ಸಾಕಷ್ಟು ಪ್ರೋತ್ಸಾಹವಿದೆ. ಅವರ ಜೀವನೋಪಾಯಕ್ಕೆ ಸಹಾಯ ಮಾಡುತ್ತಾರೆ. ಷೇಕ್ಸ್‌ಪಿಯರ್‌ನ ಜನ್ಮಸ್ಥಳ ಇಂದು ಒಂದು ಯಾತ್ರಾಸ್ಥಳವಾಗಿದೆ. ಅವನು ಜನಿಸಿದ ಮನೆ ಒಂದು ನೆನಪಿನ ತಾಣವಾಗಿದೆ. ಆದರೆ, ನಮ್ಮ ದೇಶದಲ್ಲಿ ಜೀವನಾಧಾರವಾಗಿ ಬೇರೆ ಉದ್ಯೋಗವಿಲ್ಲದ ಸಾಹಿತಿಯ ಪಾಡೇನು ? "ಸಾಹಿತಿ, ನೀನು ಸಾಯಿತಿ" ಎಂಬಂತೆ ನಾಳಿನ ಚಿಂತೆ ಅವನನ್ನು ಕಾಡುತ್ತಿರುವಾಗ, ಅವನಿಂದ ಕೃತಿ ರಚನೆ ಆಗುವುದಾದರೂ ಹೇಗೆ ? ಇಂದಿರಮ್ಮನವರ ಸ್ಥಿತಿಯೂ ಹಾಗೆಯೇ. ಅವರಿಗೆ ಕೃತಿಗಳನ್ನ ರಚಿಸುವ ಬಯಕೆ ಅದಮ್ಯವಾಗಿದೆ. ಸರಿಯಾದ ವಾತಾವರಣ, ಆರ್ಥಿಕ ಸಹಾಯ, ಪೂರ್ಣ ಆರೋಗ್ಯ, ತನ್ಮೂಲಕ ಮಾನಸಿಕ ನೆಮ್ಮದಿ ಇವು ದೊರೆತರೆ ಈಗಲೂ ನಾನು ಬರೆಯುತ್ತೇನೆಂದು ಆತ್ಮ ವಿಶ್ವಾಸದಿಂದ ಅವರು ಹೇಳುತ್ತಾರೆ. ಅವರು ಈಗ

ಬರೆಯುದಿದ್ದರೂ, ಜನಪ್ರಿಯತೆ ಏನೂ ಕಡಿಮೆಯಾಗಿಲ್ಲ. ಅವರಿಗೆ ಈಗಲೂ ಸನ್ಮಾನಗಳು ನಡೆಯುತ್ತಲೇ ಇರುತ್ತವೆ.

ಇಂದಿರಮ್ಮನವರ ಜೀವನದಲ್ಲಿ ನಲಿವಿಗಿಂತ ನೋವೇ ಹೆಚ್ಚೆಂದರೆ ಸತ್ಯಕ್ಕೆ ದೂರವಾದ ಮಾತೇನಲ್ಲ. ಹನ್ನೆರಡನೇ ವಯಸ್ಸಿಗೇ ಮದುವೆಯಾಗಿ, ಗಂಡನ ಮನೆಗೆ ಬಂದ ಅವರು ಸ್ವಭಾವತಃ ಮುಂಗೋಪಿಯಾಗಿದ್ದ, ಶಿಸ್ತಿನ ವ್ಯಕ್ತಿಯಾಗಿದ್ದ ಪತಿಯೊಡನೆ ಬಾಳುವೆ ನಡೆಸಬೇಕೆಂದರೆ ಅವರಿಗೆ ಆರಂಭದಲ್ಲಿ ಅಸಿಧಾರಾ ವ್ರತದಂತೆ, ಕಠಿಣವಾಗಿಯೇ ಇದ್ದಿರಬೇಕು. ಸುಮಾರು ನಲವತ್ತೈದು ವರ್ಷ ಕಾಲ ಅವರೊಡನೆ ದಾಂಪತ್ಯ ಜೀವನ ನಡೆಸಿದ ಅವರು ಒಮ್ಮೆಯಾದರೂ ಗಂಡನಿಗೆ ವಿರೋಧವಾಗಿ ವರ್ತಿಸಿದ್ದಾಗಲಿ ಮಾತನಾಡಿದ್ದಾಗಲೀ ನಾನು ಕಂಡುದಿಲ್ಲ. ದಾಂಪತ್ಯ ಜೀವನದುದ್ದಕ್ಕೂ, ಅವರನ್ನು ಅವರ ನೆರಳಿನಂತೆಯೇ ಹಿಂಬಾಲಿಸಿದರು. ಅವರ ಈ ಸಹನಾ ಗುಣವೇ ಅವರ ಬಾಳಿನಲ್ಲಿ ವಿಷಮ ದಾಂಪತ್ಯದ ಪರಿಣಾಮದ ಛಾಯೆಯನ್ನು ಸಹಾ ಹರಡದೆ ಅವರನ್ನೂ ಕಾಪಾಡಿದೆ. ಸ್ವಭಾವತಃ ಇಂದಿರಾರವರು ಆಶಾವಾದಿ. ಕಷ್ಟ ಕಾರ್ಪಣ್ಯಗಳು ಜೀವನದಲ್ಲಿ ಎದುರಾದಾಗ ಎದೆಗುಂದಿ, ಕಿಂಕರ್ತವ್ಯ ಮೂಢರಾಗುವ ಜಾಯಮಾನದವರಲ್ಲ. ಏನೇ ಬರಲಿ ಎದುರಿಸುವೆನೆಂಬ ದಿಟ್ಟತನದ ಕಲೆಗಾರಿಕೆ ಅವರಿಗೆ ಕರಗತವಾಗಿದೆ. ಈ ಛಲಗಾರಿಕೆಯೇ, ಅವರ ಜೀವನದ ದುರ್ಭರ ಸನ್ನಿವೇಶಗಳಲ್ಲಿ ಅವರಿಗೆ ಬದುಕನ್ನು ಸಹನೀಯವನ್ನಾಗಿ ಮಾಡಲು ಸಹಕಾರಿಯಾಗಿದೆ.

ಇಂದಿರಾರವರದು ಸರಳ ಸ್ವಭಾವ. ನಿರಾಡಂಬರ ವ್ಯಕ್ತಿತ್ವ. ಅವರು ಸದಾ ಹಸನ್ಮುಖಿ. "ಸುಖವನ್ನು ಸಕಲರಿಗೂ ಹಂಚು. ದುಃಖವನ್ನು ನೀನು ಮಾತ್ರ ಅನುಭವಿಸು" ಎಂಬ ಧೋರಣೆ ತಳೆದವರು. ಯಾರಲ್ಲಿಯೂ ದೈನ್ಯತೆಯಿಂದ ತಮ್ಮ ದುಃಸ್ಥಿತಿಯ ಅಳಲನ್ನು ಹೇಳಿದ್ದನ್ನು ನಾನು ಕಾಣೆ. ಅವರು ಮಾತಿನಲ್ಲಿ ಹಾಸ್ಯದ ಚಟಾಕಿ ಸಿಡಿಸುತ್ತಾರೆ. ನಗೆಯ ಹೊನಲನ್ನು ಹರಿಸುತ್ತಾರೆ. ಒಮ್ಮೆ ಅವರನ್ನು ಕಂಡವರು, ಅವರೊಡನೆ ಮಾತನಾಡಿದವರು, ಮತ್ತೆ ಮತ್ತೆ ಅವರನ್ನು ಕಾಣಬೇಕು, ಅವರೊಡನೆ ಮಾತನಾಡಬೇಕೆಂದು ಬಯಸಿದರೆ ಆಶ್ಚರ್ಯವೇನಿಲ್ಲ. ನಾನೂ ಕೂಡ, ಬೇಜಾರಾದಾಗಲೆಲ್ಲಾ ಅವರಲ್ಲಿಗೆ ಹೋಗಿ ಸ್ವಲ್ಪ ಹೊತ್ತು ಹರಟುತ್ತಿದ್ದು, ಹೊಸ ಹುರುಪು, ಉತ್ಸಾಹಗಳೊಡನೆ ಹಿಂದಿರುಗುತ್ತೇನೆ.

ಅವರಿಗೆ ತಾನು ಹೆಚ್ಚು ಓದಲಿಲ್ಲವಲ್ಲಾ, ಕಾಲೇಜು ಶಿಕ್ಷಣ ಪಡೆಯಲಿಲ್ಲವಲ್ಲಾ

ಎಂಬ ಕೊರಗು. ಆದರೆ, ಅವರ ಕೃತಿ "ಫಣಿಯಮ್ಮ" ಚಲಚ್ಚಿತ್ರವಾದುದಷ್ಟೇ ಅಲ್ಲದೆ, ಪ್ರಶಸ್ತಿಗಳನ್ನು ಪಡೆದದ್ದು ಮಾತ್ರವಲ್ಲದೇ, ಆಂಗ್ಲ ಭಾಷೆಗೆ ತರ್ಜುಮೆಗೊಂಡು ವಿದೇಶದಲ್ಲಿ ಪ್ರಕಾಶಗೊಂಡಿದೆ. ಇದಕ್ಕಿಂತ ಹೆಚ್ಚಿನ ಗೌರವ ಅವರಿಗೆ, ಇನ್ನೇನಿದೆ ? ಕಾಲೇಜು ಮೆಟ್ಟಿಲು ಹತ್ತದ ನಮ್ಮ ದೇಶದ ಹೆಣ್ಣು ಮಗಳೊಬ್ಬಳ ಕೃತಿ ವಿದೇಶದಲ್ಲಿ ಪ್ರಚಾರಗೊಂಡು ವಿಶ್ವವಿಖ್ಯಾತಿಯನ್ನು ಪಡೆಯುವುದು, ಭಾರತೀಯರಾದ ನಮ್ಮೆಲ್ಲರಿಗೂ ಹೆಮ್ಮೆಯ ಮಾತೇ ಅಲ್ಲವೇ ? ಒಬ್ಬಾಕೆ, ಅವರ ಸಾಹಿತ್ಯ ಕೃತಿಗಳ ಬಗ್ಗೆ ಥೀಸಿಸ್ ಬರೆದು, Ph. d. ಡಿಗ್ರಿ ತೆಗೆದುಕೊಂಡಿದ್ದಾರೆ. ಇದೇನು ಸಾಮಾನ್ಯದ ವಿಷಯವೇ ? ಅವರಿಗೆ, "ಸಿಂಧುವಿನಲ್ಲಿ ಬಿಂದು" ಎಂಬ ಅಭಿದಾನದಲ್ಲಿ, ತನ್ನ ಆತ್ಮಚರಿತ್ರೆಯನ್ನು ಬರೆಯಬೇಕೆಂಬ ಉತ್ಕಟೇಚ್ಛೆ ಇದೆ. ಅವರ ನೆನಪಿನಂಗಳದಲ್ಲಿ ಶೇಖರಿಸಿರುವ ಅದೆಷ್ಟೋ ವಿಷಯಗಳು, ಅನುಭವಗಳು ಕೃತಿ ರೂಪದಲ್ಲಿ ಹೊರಹೊಮ್ಮಿ, ಓದುಗರಿಗೆ ದೊರಕುವ ಸೌಭಾಗ್ಯ ಒದಗಿಬರಬೇಕು. ಸಂಪೂರ್ಣ ಆರೋಗ್ಯ, ಆರ್ಥಿಕ ಪರಿಪೂರ್ಣತೆ, ಮನಶ್ಶಾಂತಿ, ಸುಖವಾದ ವಾತಾವರಣ ಇವುಗಳು ದೊರೆತು, ಅವರು ಅತಿಶೀಘ್ರದಲ್ಲಿ, ಆತ್ಮ ಚರಿತ್ರೆಯನ್ನೂ ಇತರ ಕೃತಿಗಳನ್ನೂ ರಚಿಸಿ, ಓದುಗರ ಮನಸ್ಸಿಗೆ ಆನಂದವನ್ನು ದೊರಕಿಸಿಕೊಡುವಂತಾಗಲೆಂದು, ನಾನು ದೇವರಲ್ಲಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಇಂದಿರಾ ಅವರ ಸದಾನಂದ ಮತ್ತು ನಾನು

○

○

○ **ಸೂರ್ಯನಾರಾಯಣ ಚಡಗ**

"ಚಡಗರೇ...."

ಶ್ರೀಮತಿ ಎಂ. ಕೆ. ಇಂದಿರಾ ಅವರ ಧ್ವನಿ. ತೀರಾ ಪರಿಚಿತವಾದ ಧ್ವನಿಯಾದ್ದರಿಂದ ಅವರ ಆಗಮನ ಎಂದರೆ ಇನ್ನಿಲ್ಲದ ಸಂತೋಷ. ಮನೆ ಮುಂದೆ ಆಟೊ ನಿಂತ ಸದ್ದು ಕೇಳಿದ ಕೇವಲ ಎರಡು ನಿಮಿಷದಲ್ಲಿ ಅವರು ಬಂದಿರುವುದರ ಬಗ್ಗೆ ಸುಳಿವು ಸಿಕ್ಕಿತ್ತು. ಬಾಗಿಲು ತೆರೆದಾಗಲೇ ಹೊರ ನಿಂತಿದ್ದ ಅವರು ಬಲಗಾಲು ಒಳ ಇಡುತ್ತಲೇ, "ನಾನು ಇಷ್ಟು ಅವಸರವಾಗಿ ವಿಲ್ಸನ್‌ಗಾರ್ಡನ್‌ನಿಂದ ಆಟೋ ಮಾಡಿಕೊಂಡು ನಿಮ್ಮಲ್ಲಿಗೆ ಬಂದ ಉದ್ದೇಶ ಏನು ಗೊತ್ತೇ ಚಡಗರೇ....ಹೇಳುತ್ತೇನೆ. ಸಿಹಿಸಿಹಿಯಾದ ಸುದ್ದಿ. ನಿಮಗೀಗ ಭಾರೀ ಸಂತೋಷವಾಗುವಂತಹ ಸುದ್ದಿಯನ್ನೇ ಹೇಳುತ್ತೇನೆ. ನಿಮಗಿಂತ ಹೆಚ್ಚು ಶಾಂತಮ್ಮನಿಗೆ ಇನ್ನೂ ಹೆಚ್ಚಿನ ಸಂತೋಷವಾಗುತ್ತದೆ...."ಎಂದು ಹೇಳುವುದಕ್ಕೆ ಆರಂಭಿಸಿದಾಗ ನನಗೆ ಒಂದೂ ಅರ್ಥವಾಗಲಿಲ್ಲ. ಆಗಾಗ ನನ್ನ ಅವರ ಪರಸ್ಪರ ಭೇಟಿ ಇದ್ದದ್ದೆ. ಅವರನ್ನು ತಾಯಿಯ ಸ್ಥಾನದಲ್ಲಿ ಕಂಡು ಗೌರವಿಸಿದವನು ನಾನು. "ಮೊದಲು ಕುಳಿತುಕೊಳ್ಳಿ ತಾಯಿ..." ಎಂದೆ. ಏನದು ಸಂತೋಷದ ಸುದ್ದಿ. ನನಗೂ ಸ್ವಾಭಾವಿಕವಾದ ಆತುರ ಕಾತರ. ಮಾನವನ ಸಹಜ ಸ್ವಭಾವವೇ ಅದಲ್ಲವೆ ? ಅದರಲ್ಲೂ ಅಮ್ಮ ಅವಸರದಿಂದ ಬಂದು ಹೇಳುವಂತಹ ಸಂತೋಷದ ಸುದ್ದಿ ಏನಿರಬಹುದು ? ಎಂದು ನಾನು ಬಹಳಷ್ಟು ತಲೆ ಕೆಡಿಸಿಕೊಂಡೆ. ಆಗಲೇ ನನ್ನ ಹೆಂಡತಿಯ ಕಿವಿಗೂ ಎಂ. ಕೆ. ಇಂದಿರಾ ಅವರ ಮಾತು ಬಿದ್ದಿರಬೇಕು. ಅಡಿಗೆ ಮನೆಯಿಂದ ಬಂದವಳೇ ನಮಸ್ಕರಿಸಿ ಆರೋಗ್ಯ, ಕ್ಷೇಮ ವಿಚಾರಿಸಿದಳು.

ನನಗಿಂತ ಹೆಚ್ಚು ಆಕೆಗೆ ಸಂತೋಷದ ಸುದ್ದಿ ಕೇಳುವ ತವಕ. ಆಕೆ ಕೇಳಿದಳು "ಏನು ವಿಚಾರ..." ಎಂದು.

"ನೋಡಿ ಶಾಂತಮ್ಮಾ....ನಿಮ್ಮ ಯಜಮಾನರು ಸದ್ಯದಲ್ಲಿ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಾರೆ. ನೋಡಿ....ಒಳ್ಳೆಯ ಅವಕಾಶ. ಅವರೂ ಸಿನೆಮಾ ಸ್ಟಾರ್ ಆಗುತ್ತಾರೆ" ಎಂದು ನಗುತ್ತಲೇ ಹೇಳಿದರು. ನನ್ನ ಹೆಂಡತಿಗೆ ಅರ್ಥವಾಗುವುದಿರಲಿ....ಅವರ ಮಾತಿನ ಅರ್ಥ ನನಗೇ ಆಗಲಿಲ್ಲ. ನನಗೂ ಚಲನಚಿತ್ರ ಪ್ರಪಂಚಕ್ಕು ಸಾವಿರಾರು ಮೈಲಿ ದೂರ. ನಿಜ ಜೀವನದಲ್ಲಿ ನಟಿಸಿದ್ದೇನೆಯೋ ಹೊರತು ಎಂದೂ ಯಾವ ಚಿತ್ರದಲ್ಲೂ ನಾನು ನಟಿಸಿದವನೇ ಅಲ್ಲ. ಅಪ್ಪಿತಪ್ಪಿಯೂ ಆ ಬಗ್ಗೆ ಪ್ರಯತ್ನಿಸಿದವನೂ ಅಲ್ಲ. ಸಂದರ್ಭ ಹಾಗಿರುವಾಗ ತಾಯಿ ಇಂದಿರಾ ಅವರು ಹೇಳಿದ ಮಾತಿಗೆ ಯಾವ ಅರ್ಥವನ್ನು ಕಲ್ಪಿಸಿಕೊಳ್ಳಲಿ? ಅವರು ನನ್ನ ಮನೆಗೆ ಬಂದಿರುವುದರಲ್ಲಿ ಯಾವುದೇ ವಿಶೇಷವೂ ಇರಲಿಲ್ಲ. ಆಗಾಗ ಅವರು ನನ್ನ ಮನೆಗೆ ಬರುವುದು....ನಾನು ಅವರ ಮನೆಗೆ ಹೋಗುವುದು ಇದ್ದದ್ದೆ. ಆದರೆ ಇಂದು ಅವರು ಬಂದಾಗ ಹೇಳಿದ ಮಾತು ತೀರಾ ಆಕಸ್ಮಿಕ ಹಾಗೂ ಅನಿರೀಕ್ಷಿತ. "ಸದ್ಯದಲ್ಲೆ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತೇನೆಯೆ?" ಅರ್ಥವಾಗದೆ ಅವರಲ್ಲಿ ಕೇಳಿದೆ.

"ಏನಮ್ಮ....ನನಗೆ ನಿಮ್ಮ ಮಾತಿನ ಅರ್ಥವೇ ಆಗಲಿಲ್ಲ" ಎಂದು.

"ನೋಡಿ ಜಡಗರೇ....ನೀವು ಕೂಡಾ Film Star ಆಗ್ತೀರಿ".

"ಅದು ಹೇಗೆ ತಾಯಿ....ನಾನು ಯಾವ ಪಾಪವನ್ನೂ ಮಾಡಿಲ್ಲ. ಹಾಗಿರುವಾಗ ಸಿನೆಮಾದಲ್ಲಿ...." ನನ್ನ ಮಾತು ಮುಗಿದಿರಲಿಲ್ಲ.

"ಈಗ ಅಂತಹ ಅವಕಾಶ ಬಂದಿದೆ ಜಡಗರೇ....ನನ್ನ ಸದಾನಂದ ಕಾದಂಬರಿ ಇದೆಯಲ್ಲ...."

"ಗೊತ್ತು...ನಾನೂ ಓದಿದ್ದೇನೆ. ತುಂಬಾ ಒಳ್ಳೆಯ ಕಾದಂಬರಿ".

"ಆ ಕಾದಂಬರಿಯನ್ನು ಹೊನ್ನಪ್ಪ ಭಾಗವತರು ಚಲನಚಿತ್ರಕ್ಕಾಗಿ ತೆಗೆದುಕೊಂಡಿದ್ದಾರೆ...."

"ವಿಷಯ ತಿಳಿದಿದೆ. ಹಾಗೆಂದು ಪತ್ರಿಕೆಯಲ್ಲಿ ಸುದ್ದಿ ಕೂಡಾ ಬಂದಿದೆಯಲ್ಲ.... ಅದಕ್ಕು ನನಗೂ ಏನು ಸಂಬಂಧ....?"

"ಅಲ್ಲೇ ಇರುವುದು ಸ್ವಾರಸ್ಯ. ಆ ಕಾದಂಬರಿಯಲ್ಲಿನ ಸದಾನಂದ ಪಾತ್ರ ಇದೆಯಲ್ಲ...ಆತನ ಕೆಲವು ಲಕ್ಷಣಗಳನ್ನು ನಿಮ್ಮಲ್ಲಿ ಕಂಡಿದ್ದೇನೆ. ನಿಮ್ಮನ್ನು ನೋಡಿದಾಗ ನನಗೆ ನನ್ನ ಕಾದಂಬರಿಯ ಸದಾನಂದ ನೆನಪಿಗೆ ಬರುತ್ತಾನೆ. ಆತ ಕೂಡಾ ಮಾತನಾಡುವ ರೀತಿ ಎಲ್ಲಾ ನಿಮ್ಮ ಹಾಗೆ. ಅದಕ್ಕೆ ಹೊನ್ನಪ್ಪ ಭಾಗವತರಲ್ಲಿ ಆ ಪಾತ್ರಕ್ಕೆ ನಿಮ್ಮನ್ನು ಆಯ್ಕೆ ಮಾಡುವಂತೆ ನಾನು ಶಿಫಾರಸ್ಸು ಮಾಡಿದ್ದೇನೆ...."

ನನಗಿಂತ ಹೆಚ್ಚು ಸಂತೋಷವಾದದ್ದು ನನ್ನ ಹೆಂಡತಿಗೆ. ಆಗ ಅವಳ ಮುಖ ನೋಡಬೇಕಿತ್ತು. ಮೊರದಗಲ ಅರಳಿತ್ತು. ನನ್ನ ಮುಖದಲ್ಲೂ ಆಗ ತೃಪ್ತಿಯ ಪ್ರಸನ್ನತೆ ಇತ್ತು. ಇಲ್ಲಿ ನಿಜವಾಗಿಯೂ ನಾನು ಸಂತೋಷಪಡಬೇಕಾದ್ದು ಎಂ. ಕೆ. ಇಂದಿರಾ ಅವರಿಗೆ ನನ್ನ ಮೇಲಿದ್ದ ವಿಶ್ವಾಸ ಮತ್ತು ಅಭಿಮಾನಕ್ಕಾಗಿ. ಸದಾನಂದನ ಪಾತ್ರಕ್ಕೆ ನನ್ನನ್ನೇ ಆಯ್ಕೆ ಮಾಡುವಂತೆ ಶಿಫಾರಸ್ಸು ಮಾಡಿ....ಹೊನ್ನಪ್ಪ ಭಾಗವತರು ಆ ಕುರಿತು ಯೋಚಿಸುವಂತೆ ಮಾಡಿ ಆ ವಿಚಾರ ತಿಳಿಸಲು ನನ್ನ ಮನೆಗೆ ಅವಸರವಾಗಿ ಬಂದಿದ್ದರು. ಇಲ್ಲಿ ನಾನು ಉದ್ಧರಿಸಬೇಕಾದ್ದು ಇಂದಿರಾ ಅವರಿಗೆ ನನ್ನ ಮೇಲೆ ಇದ್ದ ಅಭಿಮಾನದ ಮಹತ್ವದ ಬೆಲೆ ಎಷ್ಟೊಂದು ಅಮೂಲ್ಯ ? ಮಗನ ಸ್ಥಾನ ದಲ್ಲಿಯೇ ನನ್ನನ್ನು ಕಂಡು ಸದಾ ನನ್ನ ಹಿತವನ್ನು ಬಯಸುವವರು ಅವರು. ಚಲನ ಚಿತ್ರದಲ್ಲಿ ನಟಿಸುವ ಅವಕಾಶವನ್ನು ನನಗೆ ಕಲ್ಪಿಸಿಕೊಡುವುದರಲ್ಲಿಯೇ ಅವರಿಗೆ ಮಹದಾನಂದ.

"ನಾನು ಹೇಳಿದ್ದು ಸಂತೋಷವಾಗುವಂತಹ ಸುದ್ದಿ ತಾನೆ?" ಎಂದು ಇಂದಿರಾ ಅವರು ಮತ್ತೆ ಕೇಳಿದರು.

"ಸಂತೋಷ ತಾಯಿ....ಆದರೆ ಅವಕಾಶ ಸಿಕ್ಕಬೇಕಲ್ಲ....ಅದಿರಲಿ...ನೀವು ಹೇಳಿದಾಗ ಭಾಗವತರು ಏನು ಹೇಳಿದರು?...."

"ನಿಮ್ಮ ಬಗ್ಗೆ ಕೇಳಿದರು. ನಾನು ವಿವರವಾಗಿ ಹೇಳಿದ್ದೇನೆ. ಸದಾನಂದನ ಪಾತ್ರದ ಹಲವು ಲಕ್ಷಣಗಳು ನಿಮ್ಮಲ್ಲಿವೆ ಎಂದು ಅವರಿಗೆ ಅರ್ಥವಾಗುವಂತೆ ಹೇಳಿದ್ದೇನೆ. ಲೇಖಕ ಯಾ ಲೇಖಕಿಯರು ಹೇಳುವುದು ತತ್‌ಕ್ಷಣ ನಿರ್ಮಾಪಕರ ತಲೆಗೆ ಹೋಗುತ್ತದೆಯೆ ? ತುಂಬಾ ಹೇಳಿದ ಮೇಲೆ ನನ್ನ ಒತ್ತಾಯಕ್ಕೆ ಒಪ್ಪಿ

ಕೊಂಡರು. ಒಪ್ಪಿಕೊಂಡರು ಎಂದರೆ—ನನ್ನ ಮಾತಿಗೆ ಬೆಲೆ ಕೊಟ್ಟು. 'ಆಗಲಿ.... ಅವರನ್ನು ನೋಡಬೇಕು' ಎಂದರು. ನಾನು ಹೇಳಿದೆ 'ಇಂದು ಸಂಜೆ ಕನ್ನಡಸಾಹಿತ್ಯ ಪರಿಷತ್ತಿನ ಒಂದು ಕಾರ್ಯಕ್ರಮದಲ್ಲಿ ಚಡಗರು ಭಾಗವಹಿಸುತ್ತಾರೆ. ಸಂಜೆ ನೀವೂ ಆ ಸಮಾರಂಭಕ್ಕೆ ಬಂದರೆ ಅವರನ್ನು ನೋಡಬಹುದು. ನಾನೂ ಬರುತ್ತೇನೆ. ಅಲ್ಲಿಯೇ ನಿಮ್ಮನ್ನು ಪರಿಚಯ ಮಾಡಿಸುತ್ತೇನೆ. ನಂತರ ಮುಂದಿನ ಮಾತುಕತೆ' ಎಂದೆ. ಒಪ್ಪಿದರು. "ಸಂಜೆ ನನ್ನ ಮಗ ರಾಮಕುಮಾರನ ಜೊತೆ ಬರುತ್ತೇನೆ. ಅವನ ತೀರ್ಮಾನ ಕೂಡಾ ಮುಖ್ಯ. ಚಲನಚಿತ್ರ ಪ್ರಪಂಚ ಬಹಳ ಎಚ್ಚರವಹಿಸಬೇಕಾಗುತ್ತದೆ. ನಿರ್ಮಾಪಕ ಹಾಕಿದ ಹಣ ವಾಪಸ್ ಪಡೆಯುವ ಬಗ್ಗೆ ಯೋಚಿಸಬೇಕಲ್ಲವೆ? ಪ್ರಸಿದ್ಧ ನಟರನ್ನು ಹಾಕಿಕೊಂಡು ಭಾರೀ ಮೊತ್ತದ ಹಣ ವ್ಯಯ ಮಾಡಿ ನಿರ್ಮಿಸಿದ ಚಿತ್ರಗಳೇ ನೆಲ ಕಚ್ಚಿ ಹೋಗುತ್ತದೆ. ಹಾಗಿರುವಾಗ ಹೊಸಬರನ್ನು ಹಾಕಿಕೊಂಡು ಚಿತ್ರ ನಿರ್ಮಿಸಬೇಕೆಂದರೆ....ಅದು ನಮಗೆ ಗೊತ್ತಾಗುವುದಿಲ್ಲ. ಆ ಕಷ್ಟ....ನಷ್ಟದ ಭಯ ನಮಗಿರುತ್ತದೆ. ನೋಡೋಣ ಎಂದರು. ಇಷ್ಟು ಮಾತುಕತೆ ನನ್ನ ಮತ್ತು ಅವರ ನಡುವೆ ಆಗಿದೆ" ಎಂದರು ಎಂ. ಕೆ. ಇಂದಿರಾ ಅವರು.

"ಹಾಗಿದ್ದರೆ ಸಂಜೆ ಅವರೂ ಪರಿಷತ್ತಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಬರುತ್ತಾರೇನು ?" ನಾನು ಕೇಳಿದೆ.

"ನೀವು ಅನುಮಾನ ಪಡಬೇಕಾಗಿಲ್ಲ. ನನ್ನ ಮಾತಿಗೆ ಗೌರವ ಕೊಟ್ಟ ಹಾಗೆ ಕಾಣುತ್ತದೆ. ಖಂಡಿತಾ ಬರುವುದಾಗಿ ಹೇಳಿದ್ದಾರೆ. ನೀವು ಸ್ವಲ್ಪ ಲಕ್ಷಣವಾಗಿ ಕಾಣುವ ಹಾಗೆ ಬನ್ನಿ...." ಎಂದರು ನಗುತ್ತಾ.

"ಲಕ್ಷಣವಾಗಿ ಕಾಣುವ ಹಾಗೆ ಅಂದರೆ....ಎಂದಾದರೂ ನಾನು ಅವಲಕ್ಷಣವಾಗಿ ಕಂಡಿದ್ದೇನೆಯೆ ?

"ಹಾಗಲ್ಲ...ಚಲನಚಿತ್ರದವರು. ಅವರ ಮಗ ರಾಮಕುಮಾರ ಇದ್ದಾನಲ್ಲ. ಅವರನ್ನೇ ಹೀರೋ ಮಾಡುವ ಉದ್ದೇಶ ಅವರಿಗಿದ್ದಂತೆ ಮಾತಿನಿಂದ ತಿಳಿಯಿತು. ನೀವೂ ಯಾವಾಗಲೂ ತೊಡುವ ಜುಬ್ಬಾ ಪೈಜಾಮದಲ್ಲೆ ಬನ್ನಿ ..."

"ಬರುವುದಕ್ಕೆ ಏನು ಅಡ್ಡಿಯಿಲ್ಲ ತಾಯಿ. ಆದರೆ ಇದೆಲ್ಲಾ ಸಾಧ್ಯವೆ?" ಅನುಮಾನದಿಂದ ಕೇಳಿದೆ.

"ಯಾವುದು ಹೇಳಿ...."

"ಅವರು ನನ್ನನ್ನು ಆ ಪಾತ್ರಕ್ಕೆ ಆಯ್ಕೆ ಮಾಡುವುದು. ನೀವು ನನ್ನ ಮೇಲಿನ ಅಭಿಮಾನದಿಂದ ಶಿಫಾರಸ್ಸು ಮಾಡಿದ್ದೀರಿ. ಲಕ್ಷಲಕ್ಷ ರೂಪಾಯಿ ಹಾಕುವವರು ಆ ಬಗ್ಗೆ ಧೈರ್ಯ ಮಾಡಬೇಕಲ್ಲ..."

"ಆ ಕಾದಂಬರಿಯ ಲೇಖಕಿಯಾಗಿ ನಾನು ಚಿತ್ರಿಸುವ ಪಾತ್ರದ ಕಲ್ಪನೆಯಿಂದ ಅವರಲ್ಲಿ ಹೇಳಿದ್ದೇನೆ. ನಿಮ್ಮಿಂದಲೇ ಆ ಪಾತ್ರ ಮಾಡಿಸಿದರೆ ಸಂತೋಷ. ಇಲ್ಲವಾದರೆ ನಾನೇನು ಮಾಡಲು ಸಾಧ್ಯ ಹೇಳಿ. ಅದನ್ನು ತಿಳಿಸುವುದಕ್ಕೆ ನಾನು ಬಂದದ್ದು..."

ಸಂತೋಷದ ಸುದ್ದಿಯನ್ನು ಅವರು ತಿಳಿಸಿದ್ದಾಗಿದೆ. ನಿಜವಾಗಿಯೂ ನಾನು ಮತ್ತು ನನ್ನ ಹೆಂಡತಿ ಸಂತೋಷದಿಂದ ಪುಲಕಿತರಾದದ್ದು ನಿಜ. ಆದರೂ ನನಗೆ ಸಂದೇಹ.

"ನನ್ನ ಅನುಮಾನ ಹೀಗಿದೆ ತಾಯಿ"

"ಏನು ಹೇಳಿ...."

"ಅಂತಹ ಉತ್ತಮ ಕಾದಂಬರಿಯನ್ನು ಚಿತ್ರ ಮಾಡುವಾಗ ನಿರ್ಮಾಪಕರು ಸ್ಟಾರ್ ವ್ಯಾಲ್ಯೂ ನೋಡಬೇಕಲ್ಲವೆ? ನಾನು ಲೇಖಕ. ಚಿತ್ರನಟನೇ ಅಲ್ಲ. ಅದರಲ್ಲೂ ಚಿತ್ರದ ಹೀರೋ ಪಾತ್ರ ಮಾಡುವುದೆಂದರೆ...."

"ನೀವು ನಟನೆ ಮಾಡಬೇಕಾಗಿಯೇ ಇಲ್ಲ ಜಡಗರೇ...ಸಹಜವಾಗಿಯೇ ನೀವು ಮಾತನಾಡಿದರೆ ಸಾಕು. ಅದೇ ನಟನೆಯಾಗುತ್ತದೆ. ಆ ಪಾತ್ರಕ್ಕೆ ನೀವು ಖಂಡಿತಾ ಸರಿಯಾದ ವ್ಯಕ್ತಿ..."

ಎಂತಹ ಅಭಿಮಾನ? ಅದೆಷ್ಟು ಭರವಸೆ ಇದೆ ನನ್ನಲ್ಲಿ ಅವರಿಗೆ. ನಿಜವಾಗಿಯೂ ಇಲ್ಲಿ ನನಗೆ ಹೆಚ್ಚು ಪ್ರಿಯವಾದದ್ದು ಇಂದಿರಾ ಅವರ ಅಭಿಮಾನ. ಇಲ್ಲಿ ನಾನು ಹೇಳಬೇಕಾದ್ದು ಅವರಿಗೆ ನನ್ನ ಮೇಲೆ ವಿಶ್ವಾಸ ಇದೆ ಎಂಬುದನ್ನು, ಯಾವುದೇ ಕಪಟ ವಂಚನೆಯ ಎಳೆ ಕೂಡಾ ಅವರ ಮಾತಿನಲ್ಲಿ ಇಲ್ಲ. ನಿರ್ಮಲ ಹೃದಯದ ಅಂತಃಕರಣದಿಂದ ಹೇಳಿದ ಮಾತು. ಬರವಣಿಗೆಯಲ್ಲಿ ಅವರೆಂತಹ ಶ್ರೀಮಂತರೋ

ಹೃದಯವಂತಿಕೆಯಲ್ಲೂ ಅಷ್ಟೇ ಶ್ರೀಮಂತಿಕೆ. ತಮ್ಮ ಕಾದಂಬರಿಯಲ್ಲಿನ ನಾಯಕನ ಪಾತ್ರಕ್ಕೆ ನನ್ನನ್ನೇ ಆಯ್ಕೆ ಮಾಡುವಂತೆ ಶಿಫಾರಸ್ಸು ಮಾಡಿದ್ದಲ್ಲದೆ ಅದನ್ನು ತಿಳಿಸುವುದಕ್ಕೆ ಅವರಸದಿಂದ ಬಂದಿದ್ದರು.

ಇದು ಸಾಧ್ಯವೆ ?

ನನ್ನ ಪ್ರಶ್ನೆ. ಉತ್ತರ ಹೇಳಬೇಕಾದವರು ಹೊನ್ನಪ್ಪ ಭಾಗವತರು. ಅದೂ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನನ್ನನ್ನು ನೋಡಿದ ಮೇಲೆ. ಚಲನಚಿತ್ರ ನಟನಾಗುವ ಯೋಗ ನನ್ನ ಹಣೆಯಲ್ಲಿ ಬರೆದಿದೆಯೆ ? ಆ ಪ್ರಶ್ನೆಗೆ ಇಂದಿರಾ ಅವರ ಉತ್ತರ ಹೀಗಿತ್ತು. "ಏಕಾಗಬಾರದು....ನಟಿಸಿದ ಮೇಲಲ್ಲವೇ ನಟನಾಗುವುದು" ಎಂದು.

ಬಹು ಆಕರ್ಷಕ ಚಲನಚಿತ್ರ ಮಾಧ್ಯಮ. ಕಲಾದೇವಿ ಎಲ್ಲರನ್ನೂ ಆಕರ್ಷಿಸುತ್ತಾಳೆ. ಆಕೆಯ ಆಲಿಂಗನ ಸುಖಕ್ಕಾಗಿ ಎಲ್ಲರೂ ಹಾತೊರೆಯುತ್ತಾರೆ. ಆದರೆ ಕಲಾದೇವಿ ಮಾತ್ರ ತನಗೆ ಬೇಕಾದವರನ್ನೆ ಆಯ್ಕೆ ಮಾಡಿ ಅವರಿಗೇ ಆಲಿಂಗನ ಸುಖ ಕೊಡುತ್ತಾಳೆ. ಕೆಲವು ವರ್ಷಗಳ ಹಿಂದೆ ನನ್ನ ಹೆಣ್ಣು–ಹೊನ್ನು–ಮಣ್ಣು ಕಾದಂಬರಿ ತುಳು ಭಾಷೆಯಲ್ಲಿ ಚಲನಚಿತ್ರವಾಯ್ತು. ಆಗ ನನಗೆ ಅಲ್ಪಸ್ವಲ್ಪ ಚಲನಚಿತ್ರ ಪ್ರಪಂಚದ ಪರಿಚಯವಾದದ್ದು. ನಿರ್ಮಾಪಕನ ಮನೋಭಾವವನ್ನು ನಾನು ಅರಿತುಕೊಂಡದ್ದು ಆಗಲೇ. ಕಾದಂಬರಿಯಲ್ಲಿರುವಂತೆ ಚಿತ್ರ ನಿರ್ಮಾಣ ಸಾಧ್ಯ ಎಂದು ಲೇಖಕ ವಾದಿಸುತ್ತಾನೆ. ಕಾರಣ ಅವನಿಗೆ ಚಿತ್ರ ನಿರ್ಮಾಣ ಮಾಡಿ ಅನುಭವ ಇರುವುದಿಲ್ಲ. ಕಾದಂಬರಿಯಲ್ಲಿನ ಸನ್ನಿವೇಶದಂತೆ ಚಿತ್ರ ನಿರ್ಮಾಣ ಸಾಧ್ಯವಿಲ್ಲ ಎನ್ನುತ್ತಾನೆ ನಿರ್ಮಾಪಕ. ಕಾರಣ ಆತನಿಗೆ ಕಾದಂಬರಿ ಬರೆದ ಅನುಭವ ಇರುವುದಿಲ್ಲ. ಇವರಿಬ್ಬರೂ ಒಮ್ಮತಕ್ಕೆ ಬಂದು ಸೂಕ್ತ ಬದಲಾವಣೆಯ ಅನಂತರವೇ ಚಿತ್ರ ತಯಾರಿಕೆ ಆರಂಭವಾಗುತ್ತದೆ. ಹಾಗಿರುವಾಗ ಎಂ. ಕೆ. ಇಂದಿರಾ ಅವರ ಶಿಫಾರಸ್ಸಿಗೆ ನಿರ್ಮಾಪಕರಾದ ಹೊನ್ನಪ್ಪ ಭಾಗವತರು ಮಹತ್ವ ಕೊಡುತ್ತಾರೆಯೆ ? ಆ ನಂಬಿಕೆ ನನಗಿರಲಿಲ್ಲ .ಆದರೂ ತಾಯಿ ಇಂದಿರಾ ಅವರ ಮಾತಿನ ಮೇಲಿನ ಭರವಸೆಯಿಂದ,

"ತಾಯಿ....ಸಂಜೆ ನೀವು ಕನ್ನಡ ಸಾಹಿತ್ಯ ಪರಿಷತ್ತಿಗೆ ಬರುತ್ತೀರಾ ?" ಎಂದು ಕೇಳಿದೆ.

"ಹೌದು...ಬರಬೇಕಲ್ಲ. ಅವರಲ್ಲಿ ನಿಮ್ಮ ಬಗ್ಗೆ ಹೇಳಿದ್ದಾಗಿದೆ. ನಿಮ್ಮನ್ನು

ಅವರು ನೋಡಬೇಕಂತೆ. ನನ್ನ ಪ್ರಯತ್ನ ನಾನು ಮಾಡಿದ್ದೇನೆ. ಭಾಗವತರಿಗೆ ಬಾಕಿ ವಿಚಾರ ಸೇರಿದ್ದು."

ತೀರ ಅನಿರೀಕ್ಷಿತ ಹಾಗೂ ಆಕಸ್ಮಿಕ. ಆಗಾಗ ಸಂತೋಷ ಪಡುವಂತಹ ಘಟನೆ ಬದುಕಿನಲ್ಲಿ ನಡೆದಿರುವುದುಂಟು. ಆದರೆ ಇಂದಿನ ಸಂದರ್ಭ ನನ್ನ ಅನುಭವದಲ್ಲಿ ಎಂದೂ ಬಂದಿರಲಿಲ್ಲ. ಅಂದಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿನ ನಿತ್ಯ ಭವಿಷ್ಯ ನೋಡಿದೆ. ಶುಭವಾರ್ತೆ ಮತ್ತು ಧನ ಲಾಭ ಎಂದಿತ್ತು. ಒಂದು ವಿಚಾರದಲ್ಲಿ ಭವಿಷ್ಯ ನಿಜವಾಗಿತ್ತು. ಅದು ಶುಭ ವಾರ್ತೆ. ಇನ್ನೊಂದರ ಬಗ್ಗೆ ತಲೆ ಕೆಡಿಸಿ ಕೊಳ್ಳಲಿಲ್ಲ. ಆದರೂ ಅದು ಹೊನ್ನಪ್ಪ ಭಾಗವತರು ನನ್ನನ್ನು ನೋಡಿದ ಮೇಲೆ ನಿರ್ಧಾರವಾಗಬೇಕಾದ ಸಂಗತಿ, ಅವರು ನನ್ನನ್ನು ಒಪ್ಪಿದರೆ ಧನ ಲಾಭ ಖಂಡಿತಾ. ಒಪ್ಪಲಿಲ್ಲ...ಬೇಡ.

ಇದಿಷ್ಟು ವಿಚಾರದ ಕುರಿತು ಇಂದಿರಾ ಅವರು ಹೇಳಿದ ಅನಂತರ ನಾವು ಬೇರೆ ವಿಷಯದ ಬಗ್ಗೆ ಅಂದು ಮಾತಾಡಿದ ನೆನಪು. ಸುಮಾರು ಒಂದು ಗಂಟೆಕಾಲ ಅವರು ಆ ದಿನ ಮನೆಯಲ್ಲಿದ್ದರು. ತರುವಾಯ "ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಿಗುತ್ತೇನೆ" ಎಂದು ಅಪ್ಪಣೆ ಪಡೆದು ಹೊರಟುಹೋದರು.

ಅನಂತರ ನಡೆದ ಸಂಗತಿಯನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಕನ್ನಡಸಾಹಿತ್ಯ ಪರಿಷತ್ತಿನಲ್ಲಿ ಅಂದು ಸಂಜೆ ನಡೆದ ಸಮಾರಂಭದಲ್ಲಿ ನಾನೂ ಭಾಗವಹಿಸಿದ್ದೆ. ಹೊನ್ನಪ್ಪ ಭಾಗವತರು ಸಮಾರಂಭಕ್ಕೆ ಬರಲೇ ಇಲ್ಲ. ನನಗಿಂತ ಹೆಚ್ಚು ನಿರಾಶೆ ಯಾದದ್ದು ತಾಯಿ ಇಂದಿರಾ ಅವರಿಗೆ. "ನನ್ನ ಮಾತಿಗೆ ಅವರು ಬೆಲೆ ಕೊಡಲಿಲ್ಲ ನೋಡಿ" ಎಂದರು ಬೇಸರದಿಂದ. "ಚಿಂತೆಯಿಲ್ಲ ಅವರು ಬರುವ ಬಗ್ಗೆ ನನಗೆ ಅನುಮಾನವಿತ್ತು ಇಂದಿರಾ ಅವರೇ. ಕಾರಣ ಅವರು ಸಿನಿಮಾ ಮಂದಿ. ನನಗೆ ಏನೂ ಬೇಸರವಿಲ್ಲ. ನಿಮ್ಮ ಅಭಿಮಾನಕ್ಕೆ ನಾನು ಚಿರಋಣಿಯಾಗಿದ್ದೇನೆ. ನಿಮ್ಮ ವಿಶ್ವಾಸವೇ ನನಗೆ ಬಹುದೊಡ್ಡ ಸಂಪತ್ತು. ಚಲನಚಿತ್ರದಲ್ಲಿ ನಟಿಸಬೇಕೆಂದು ನಾನು ಕನಸಿನಲ್ಲಿಯೂ ಎಣಿಸಿದವನಲ್ಲ. ಹಾಗಾಗಿ ನಾನು ಬೇಸರಪಡಬೇಕಾದ ಪ್ರಸಂಗವೇ ಇಲ್ಲ" ಎಂದೆ. ಆ ದಿನ ಇಷ್ಟಕ್ಕೆ ನನ್ನ ಮತ್ತು ಅವರ ಮಾತು ಮುಗಿದಿತ್ತು.

ಮತ್ತೆ ತಿಳಿಯಿತು,ಹೊನ್ನಪ್ಪ ಭಾಗವತರು ಸದಾನಂದನ ಪಾತ್ರಕ್ಕೆ ಅವರ ಮಗ ರಾಮಕುಮಾರನನ್ನೆ ಆಯ್ಕೆಮಾಡಿದ್ದಾರೆಂದು.ಸಹಜವಾದದ್ದೆ.ಅವರೇ ನಿರ್ಮಾಪಕರು. ಅವರ ಮಗನೇ ಹೀರೋ ಪಾತ್ರ ಮಾಡುವುದರಲ್ಲಿಯೂ ಅರ್ಥವಿದೆಯಲ್ಲವೆ ? ಒಂದೆರಡು ಕನ್ನಡ ದಿನಪತ್ರಿಕೆಯಲ್ಲಿ ನಾನೇ ಸದಾನಂದನ ಪಾತ್ರಕ್ಕೆ ಆಯ್ಕೆಯಾಗಿ

ದ್ದೇನೆಂದು ಕೂಡಾ ಸುದ್ದಿ ಪ್ರಕಟವಾಯ್ತು. ಒಂದು ಪತ್ರಿಕೆಯಲ್ಲಿ ಸದಾನಂದ ಚಡಗ ಎಂದೇ ಪ್ರಚಾರ ಕೊಟ್ಟಿದ್ದರು. ಇನ್ನೊಂದು ಪತ್ರಿಕೆಯಲ್ಲಿ ಇನ್ನೂ ವಿವರವಾದ ಸುದ್ದಿ ಬಂದು ನನಗೆ ಸಾಕಷ್ಟು ಪ್ರಚಾರ ಸಿಕ್ಕಿತ್ತು. ನನಗೂ ಒಂದಿಷ್ಟು ಪುಕ್ಕಟೆ ಪ್ರಚಾರ ಸಿಕ್ಕಿದ್ದೇ ನನಗೆ ದಕ್ಕಿದ ಲಾಭ. ಅನೇಕ ಮಿತ್ರರು ಆ ಬಗ್ಗೆ ಹಲವು ಪ್ರಶ್ನೆ ಕೇಳಿದ್ದರು. ಹತ್ತಾರು ಅಭಿನಂದನಾ ಪತ್ರ ಕೂಡಾ ಬಂದಿತ್ತು. ಇದಿಷ್ಟು ನಡೆದ ಸಂಗತಿ.

ಸದಾನಂದ ಚಿತ್ರ ಬಿಡುಗಡೆಯೂಾಯ್ತು. ಬಿಡುಗಡೆಯಾದಾಗಲೂ ಜನರ ಗಮನ ಸೆಳೆಯಲಿಲ್ಲ. ತೆರೆ ಕಂಡದ್ದೂ ತಿಳಿಯಲಿಲ್ಲ. ತೆರೆಯಿಂದ ಮರೆಯಾದಾಗಲೂ ಯಾರಿಗೂ ಸುಳಿವು ಸಿಕ್ಕಿರಲಿಲ್ಲ. ಲೇಖಕಿ ಎಂ. ಕೆ. ಇಂದಿರಾ ಅವರಿಗೆ ಆ ಚಿತ್ರದಿಂದ ಸಮಾಧಾನವಾಗಲಿಲ್ಲ ಎಂದು ತಿಳಿಯಿತು.

ಮತ್ತೊಮ್ಮೆ ತಾಯಿ ಇಂದಿರಾ ಅವರು ನನ್ನ ಮನೆಗೆ ಬಂದಾಗ "ಇನ್ನೂ ಏನಾದರೂ ಸಂತೋಷದ ಸಿಹಿ ಸುದ್ದಿ ಹೇಳುವುದಿದೆಯೆ ?" ಎಂದು ತಮಾಷೆಯಾಗಿ ಕೇಳಿದಾಗ ಅವರು "ನೋಡಿ...ಆ ಒಂದು ವಿಚಾರ ಬಿಟ್ಟು ಬೇರೆ ವಿಚಾರದ ಬಗ್ಗೆ ಮಾತನಾಡಿ..." ಎಂದರು. ಆ ಒಂದು ವಿಚಾರ ಎಂದರೆ ಯಾವುದು ? ಅಂದೆ. ಸದಾನಂದನ ಪಾತ್ರಕ್ಕೆ ನನ್ನನ್ನು ಶಿಫಾರಸ್ಸು ಮಾಡಿದ ಸಿಹಿ ಸುದ್ದಿಯ ವಿಚಾರ. ಅವರು ಅದನ್ನು ಮರೆತಿರಬೇಕು. ಆದರೆ ನನ್ನ ಮನ ಮಂದಿರದಲ್ಲಿ ಮಾತ್ರ ಅದು ಹಾಗೆಯೇ ಉಳಿದಿದೆ.

ಸದಾ ಡಬ್ಬಕ್ಕೆ ಕಲ್ಲು ಹಾಕಿ ಕುಲುಕಿದಂತೆ ಒಡ ಒಡಗುಟ್ಟುವ ನಮ್ಮ ಭಾರತೀಯರಿಗೆ ಮೌನವೆಂದರೆ ಅದಕ್ಕಿಂತಾ ಕಠಿಣ ಶಿಕ್ಷೆ ಇಲ್ಲ. ಅರೆಗಳಿಗೆ ಬಾಯಿ ಮುಚ್ಚಿ ಕುಳಿತರೆ ನಮಗೆ ಅನಾರೋಗ್ಯ. ಅದರಲ್ಲೂ ಕೆಲಸಕ್ಕೆ ಬಾರದ, ಕಂಡವರ ಸುದ್ದಿ ಮಾತಾಡುವುದೆಂದರೆ ನಮಗೆ ಮೃಷ್ಟಾನ್ನ ಭೋಜನ ಸಿಕ್ಕಿದಂತೆ !

(ಅನುಭವ ಕುಂಜ ಪುಟ 27)

ಸ್ನೇಹಜೀವಿ

○

○

○ ಎಚ್. ಎಸ್. ಸುಜಾತ

ಸುಮಾರು ಎರಡೂವರೆ ದಶಕಗಳಿಗೂ ಹಿಂದಿನ ಮಾತು. ಆಗ ನಾನು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿನಿ. ಆಗ ತಾನೇ ಎಂ. ಕೆ. ಇಂದಿರಾ ಅವರ ಮೊದಲ ಕಾದಂಬರಿ 'ತುಂಗಭದ್ರ' ಹೊರಬಂದಿತ್ತು. ನಮ್ಮಿಬ್ಬರ ಮನೆಗಳೂ ವಿಲ್ಸನ್ ಗಾರ್ಡನ್ನಿನಲ್ಲೇ, ತುಂಬ ಸಮೀಪವೇ. ದೂರದಿಂದ ಒಮ್ಮೆ ಅವರನ್ನು ನೋಡಿದ್ದೆ. ಅವರ ಕಾದಂಬರಿ ಹೊರಬಂದ ಕೂಡಲೇ ಕೊಳ್ಳುವ ಆತುರದಿಂದ ನನಗೆ ತಿಳಿದಿದ್ದ ಪುಸ್ತಕದ ಅಂಗಡಿಯಲ್ಲಿ ವಿಚಾರಿಸಿದೆ, ದೊರಕಲಿಲ್ಲ. ಮರುದಿನ ಬಸ್ ನಿಲ್ದಾಣದಲ್ಲಿ ಇಂದಿರಾ ಅವರ ಭೇಟಿಯಾಯಿತು. ನಾನೇ ಮುಂದಾಗಿ ಪರಿಚಯಿಸಿಕೊಂಡೆ. ತುಂಬ ಆತ್ಮೀಯತೆಯಿಂದ ಮಾತಾಡುತ್ತಾ ಇಂದಿರಾ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ಮಾತಿನ ನಡುವೆ ಅವರ ಕಾದಂಬರಿಗಾಗಿ ನಾನು ಹುಡುಕಾಡಿದ್ದನ್ನು ಹೇಳಿದೆ. ಅದರ ಬೆಲೆಯನ್ನು ಕೊಟ್ಟು "ನಿಮ್ಮ ಬಳಿ ಪ್ರತಿ ಇದ್ದರೆ ಕೊಡಿ" ಎಂದೆ. "ಈ ಪುಸ್ತಕ ನಾನೇ ಕೊಡೋಣ ಅಂದ್ಕೊಂಡೆ, ಬೆಲೆ ಬೇಡ, ಪುಸ್ತಕ ತಗೋಳಿ" ಎಂದು ಇಂದಿರಾ ತಮ್ಮ ಪುಸ್ತಕ ಕೊಟ್ಟರು. "ದಯವಿಟ್ಟು ಬೆಲೆ ತಗೊಳ್ಳಿ, ನಿಮ್ಮ ಹಸ್ತಾಕ್ಷರ ಹಾಕಿ ಕೊಡಿ" ಎಂದೆ, ಹಾಗೇ ಮಾಡಿದರು. ಅನಂತರ ತುಂಟ ನಗೆ ನಕ್ಕು "ಕಾಂಪ್ಲಿಮೆಂಟರಿ ಕಾಪಿಗೆ ದುಡ್ಡು ಕೊಟ್ಟವರು ನೀವು ಎಂದೇ ನಿಮ್ಮನ್ನು ನೆನಪಿಟ್ಟುಕೊಳ್ಳುತ್ತೇನೆ" ಎಂದು ಚುಡಾಯಿಸಿದರು. ಆದಿನ ನಾವಿಬ್ಬರೂ ಬಹಳ ಮಾತಾಡಿದೆವು. ಮಲೆನಾಡಿನ ಅವರ ಬಾಲ್ಯವನ್ನು ಕುರಿತು, ನನ್ನ ಕಾಲೇಜಿನ ಚಟುವಟಿಕೆಗಳನ್ನು ಕುರಿತು, ಆ ದಿನಗಳ ಲೇಖಕಿಯರನ್ನು ಕುರಿತು, ಇನ್ನೂ ಅನೇಕ ವಿಷಯಗಳನ್ನು ಕುರಿತು.

ಮದುವೆ, ಪದವಿಗಳ ನಂತರ ಮೈಸೂರಿನಲ್ಲಿ ನಾನು ನೆಲೆಸಿದೆ. ಆದರೂ ನನ್ನ, ಇಂದಿರಾ ಅವರ ನಂಟು ಮುಂದುವರೆಯಿತು. ನನ್ನ ತವರುಮನೆಯ ಬಳಿಯೇ ಅವರ ಮನೆ ಇದ್ದದ್ದು ಪದೇ ಪದೇ ಭೇಟಿಯಾಗಲು ಇಬ್ಬರಿಗೂ ಅನುಕೂಲವಾಗಿತ್ತು. ಅವರು ಯಾವಾಗಲೂ ನನ್ನನ್ನು ತಮ್ಮ ಒಬ್ಬ ತಂಗಿಯಂತೆ, ಮಗಳಂತೆ, ಗೆಳತಿಯಂತೆ, ಸಮಾನಳಂತೆ ನಡೆಸಿಕೊಳ್ಳುತ್ತಿದ್ದರು. ನಮ್ಮಿಬ್ಬರ ನಡುವೆ ಆಗಾಗ ಪತ್ರಗಳು ಓಡಾಡುತ್ತಿದ್ದವು. ನಾನಿಲ್ಲದಾಗಲೂ ಅವರು ನಮ್ಮ ಮನೆಗೆ ಹೋಗಿ ನಮ್ಮ ತಾಯಿಯನ್ನು ಮಾತಾಡಿಸಿಕೊಂಡು ಬರುತ್ತಿದ್ದರು. ಕೆಲವೇ ದಿನಗಳಲ್ಲಿ ಅವರು ನಮ್ಮ ಕುಟುಂಬದ ಸ್ನೇಹಿತರಲ್ಲಿ ಒಬ್ಬರಾಗಿದ್ದರು. ಇಂದಿರಾ ಅವರನ್ನು ಎಂದಾದರೂ ನೋಡಲಾಗದೆ ಇದ್ದರೆ ನನ್ನ ಬೆಂಗಳೂರಿನ ಭೇಟಿ ಅಪೂರ್ಣ ಎನ್ನಿಸುತ್ತಿತ್ತು. ಅವರನ್ನು ನೋಡಲಾಗಲಿಲ್ಲ ಎಂಬ ಕೊರತೆ ಇನ್ನೊಂದು ಭೇಟಿಯಲ್ಲಿ ಅವರನ್ನು ಕಾಣುವವರೆಗೆ ಕಾಡುತ್ತಿತ್ತು.

ಆ ದಿನಗಳಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಕುರಿತಂತೆ–ಸರಿಯಾಗಿ ನೆನಪಿಲ್ಲ–ಯಾವುದೋ ಪ್ರಬಂಧ ಸ್ಪರ್ಧೆಯ ವಿಚಾರವನ್ನು ತಿಳಿಸಿ ಸ್ವಭಾವತಃ ಸೋಮಾರಿಯಾದ ನನಗೆ "ನೀವು ಭಾಗವಹಿಸಲೇ ಬೇಕು" ಎಂದು ಇಂದಿರಾ ಒತ್ತಾಯಿಸಿದರು. ಅವರ ಉತ್ಸಾಹಕ್ಕೆ ನೀರೆರಚಲಾರದೆ ಒಪ್ಪಿದೆ, ಲೇಖನ ಬರೆದು ಕಳಿಸಿದೆ. ಮುಂದೆ ಫಲಿತಾಂಶ ಬಂದಾಗ ನಾನು ಬೆಂಗಳೂರಿನಲ್ಲಿರಲಿಲ್ಲ. ನನಗೆ ಬಹುಮಾನ ಬಂದ ವಿಷಯ ತಿಳಿದು ಅವರೇ ಪತ್ರ ಬರೆದರು. ತಮ್ಮ ಪತ್ರದಲ್ಲಿ ಅದೆಂಥ ಪ್ರೀತಿ, ಅಭಿಮಾನಗಳನ್ನು ಹೊರಸೂಸಿದ್ದರು ! ನೆನೆದರೆ ಈಗಲೂ ಸಂತಸ ಆಗುತ್ತದೆ.

ಮುಂದೆ ನನ್ನ ಪ್ರಥಮ ಎಂ. ಎ. ತರಗತಿಯಲ್ಲಿ ಅವರದೊಂದು ಕಾದಂಬರಿಯ ಬಗ್ಗೆ ಒಂದು ಪ್ರಬಂಧ ತಯಾರಿಸಿದ್ದೆ. ಅದು ಕೆಲವು ದಿನಗಳ ನಂತರ ಅಚ್ಚಾಯಿತು. ಅದನ್ನು ಓದಿ ಅವರು ತುಂಬ ತೃಪ್ತಿಪಟ್ಟರು. ಅವರ ಅಕೃತ್ರಿಮ ಪ್ರೀತಿ, ಶಿಶುಸಹಜ ಸಂತೋಷಗಳು ನನಗೆ ಎಷ್ಟು ಮುದ ನೀಡಿತು ಎಂಬುದನ್ನು ತಿಳಿಸಲು ನಾನು ಅಶಕ್ತೆಯಾಗಿದ್ದೇನೆ.

ನನ್ನ ಪಿಎಚ್. ಡಿ. ಪ್ರಬಂಧದ ಬರವಣಿಗೆಯ ಸಿದ್ಧತೆಯ ದಿನಗಳಲ್ಲಿ ಒಮ್ಮೆ ಬೆಂಗಳೂರಿನ ಪ್ರಜಾವಾಣಿ ಕಛೇರಿಗೆ ಹೋಗಬೇಕೆಂದು ಹೊರಟಿದ್ದೆ. ದಾರಿಯಲ್ಲಿ ಅಚಾನಕವಾಗಿ ಅವರ ಭೆಟ್ಟಿಯಾಯಿತು. ಕಛೇರಿ ವೇಳೆಗೆ ಕಾಲಾವಕಾಶ ಇದ್ದುದರಿಂದ ಅವರೊಡನೆ ಮಾತನಾಡುತ್ತಾ ಅವರ ಮನೆಗೂ ಹೋದೆ. ಮಾತಿನ ಸಂದರ್ಭದಲ್ಲಿ ನಾನು ಪ್ರಜಾವಾಣಿ ಕಛೇರಿಗೆ ಹೋಗಲಿರುವುದನ್ನು ತಿಳಿದು "ನಿಮ್ಮ ಜೊತೆಗೆ

ನಾನು ಬರುತ್ತೇನೆ, ಕೆಲಸ ಸುಲಭದಲ್ಲಿ ಆಗುತ್ತದೆ" ಎಂದು ತಾವೂ ಹೊರಟರು. "ಬೇಡ, ನಾನೇ ಹೋಗಿ ಬರುತ್ತೇನೆ" ಎಂದರೂ ಕೇಳಲಿಲ್ಲ. "ನಿಮಗೆ ಗೊತ್ತಾಗುವು ದಿಲ್ಲ, ಸುಮ್ಮನಿರಿ" ಎಂದುಬಿಟ್ಟರು. ನನಗೆ ಬೇಕಾದ ದಾಖಲೆಗಳು, ಹಳೆಯ ಸಂಚಿಕೆಗಳು ಯಾವುವು ಎಂಬುದರ ಪಟ್ಟಿ ಪಡೆದರು. ಅನಂತರ ಇಬ್ಬರೂ ಮಹಾತ್ಮಾ ಗಾಂಧಿ ರಸ್ತೆಯಲ್ಲಿರುವ ಪ್ರಜಾವಾಣಿ ಕಛೇರಿಗೆ ಹೋದೆವು. ಪತ್ರಿಕೆಯ ಅನೇಕ ಹಿರಿಯರನ್ನು ಇಂದಿರಾ ನನಗೆ ಭೆಟ್ಟಿ ಮಾಡಿಸಿದರು. ಕ್ಷಣಗಳಲ್ಲಿ ನನಗೆ ಬೇಕಾದ ಸಂಚಿಕೆಗಳೆಲ್ಲ ನನ್ನ ಮುಂದೆ ಬಂದವು. ಇಂದಿರಾ ಅವರ ಸಹಾಯವಿಲ್ಲದಿದ್ದರೆ ನಾನು ಎಷ್ಟು ಬಾರಿ ಅಲೆಯಬೇಕಾಗಿತ್ತೋ ತಿಳಿಯದು. ಮುಂದೆ ನನಗೆ ಪಿಎಚ್. ಡಿ. ಪದವಿ ದೊರೆತಾಗ ನನ್ನನ್ನು ಅಭಿನಂದಿಸಿ ಇಂದಿರಾ ತಮ್ಮ ನಿರ್ಮಲ ಮನಸ್ಸಿನ ಪ್ರತೀಕವಾಗಿ ಒಂದು ಪತ್ರ ಬರೆದರು. ಪತ್ರದ ತುಂಬ ಆತ್ಮೀಯತೆಯ ಹೊನಲು, ಆಪ್ತ ಭಾವನೆ. ನನ್ನ ಪುಸ್ತಕಗಳು ಅಚ್ಚಾದ ಹಾಗೆಲ್ಲ ಅವರಿಗೊಂದು ಪ್ರತಿ ಕೊಡು ತ್ತಿದ್ದೆ, ಆವರು ಅದನ್ನು ಕೂಲಂಕಷವಾಗಿ ಓದುತ್ತಿದ್ದರು. ಮತ್ತೆ ಮುಖತಃ ಕಂಡಾಗ ತಮ್ಮ ಅಭಿಪ್ರಾಯ ತಿಳಿಸುತ್ತಿದ್ದರು. ನನ್ನ ಭೆಟ್ಟಿ ತಡವಾದರೆ ಪತ್ರ ಬರೆಯುತ್ತಿದ್ದರು. ಈಗ ಇಂದಿರಾ ದೈಹಿಕವಾಗಿ ಸ್ವಲ್ಪ ಸೋತಿದ್ದಾರೆ. ಅವರ ಇಂಥ ಚಟುವಟಿಕೆಗಳು ಕಡಿಮೆಯಾಗಿವೆ. ನನ್ನ ಪುಸ್ತಕಗಳಿಗೆ ಬಹುಮಾನ ಬಂದಾಗ ತುಂಬ ಸಂತಸ ವ್ಯಕ್ತಪಡಿಸಿದ ಆತ್ಮೀಯರಲ್ಲಿ ಅವರೂ ಒಬ್ಬರು. ಅವರಂಥ ಹಿರಿಯ (ಎಲ್ಲ ಅರ್ಥಗಳಲ್ಲೂ) ಗೆಳತಿ ದೊರೆತದ್ದು ನನ್ನ ಜೀವನದ ಸೌಭಾಗ್ಯಗಳಲ್ಲಿ ಒಂದು ಎಂದು ನನ್ನ ನಂಬಿಕೆ.

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ 1982ರಲ್ಲಿ ಗುಲ್ಬರ್ಗದಲ್ಲಿ ನಡೆದ ಲೇಖಕಿಯರ ಸಮ್ಮೇಳನಕ್ಕೆ ಲೇಖಕಿಯರೆಲ್ಲ ಬೆಂಗಳೂರಿನಿಂದ ಬಸ್ಸಿನಲ್ಲಿ ಹೊರಟಿ ದ್ದೆವು. ಒಂದು ವಾರದ ಆ ಪ್ರವಾಸದಲ್ಲಿ, ದಾರಿಯಲ್ಲಿ ನಾವು ಇಳಿದುಕೊಂಡ ಸ್ಥಳಗಳಲ್ಲೆಲ್ಲ ಒಂದೊಂದು ಕೊಠಡಿಯಲ್ಲಿ ಇಬ್ಬರು ಲೇಖಕಿಯರು ತಂಗುವ ವ್ಯವಸ್ಥೆ ಇರುತ್ತಿತ್ತು. ಪ್ರತಿಬಾರಿಯೂ "ನಾವಿಬ್ಬರೂ ಒಂದೇ ಕಡೆ ತಂಗೋಣ" ಎಂದು ಇಂದಿರಾ ಪ್ರೀತಿಯ ಒತ್ತಾಯ ಮಾಡುತ್ತಿದ್ದರು. ಅವರ ಅಕ್ಕರೆಯನ್ನು ಕಂಡು ನನ್ನ ಓರಗೆಯ ಲೇಖಕಿಯರೆಲ್ಲ ತಮಾಷೆ ಮಾಡುತ್ತಿದ್ದರು. ನಾನು ನಕ್ಕು ಸುಮ್ಮನಾಗುತ್ತಿದ್ದೆ. ಇಂದಿರಾ ಅವರೇ ಒಮ್ಮೆ "ಹೌದು, ನನ್ನ ಜೊತೆ ಸುಜಾತಾನೇ ಭೂಷಣ" ಎಂದುಬಿಟ್ಟರು. ಸುತ್ತಲಿದ್ದವರೆಲ್ಲ ಗೊಳ್ಳನೆ ನಕ್ಕರು. ತುಂಬ ಸಂತೋಷ ವೆನಿಸಿದರೂ ಸಂಕೋಚದಿಂದ ನಾನು ಮುದುರಿ ಹೋದೆ. ಈ ಘಟನೆ ಆದ ಮೇಲೆ ಕಿರಿಯ ಲೇಖಕಿಯೊಬ್ಬರು ನನ್ನನ್ನು 'ಭೂಷಣ' ಎಂಬ ಅಡ್ಡ ಹೆಸರಿನಿಂದಲೇ ಕೂಗು ತ್ತಿದ್ದರು. ಇಂದಿರಾ ಅವರ ಕಿವಿಗೆ ಈ ಸಂಬೋಧನೆ ಬಿದ್ದಾಗ ಅವರು ಮಗುವಿನಂತೆ

ನಕ್ಕು ನನಗೆ ಈ ವಿಷಯ ತಿಳಿಸಿ "ನಿಮಗೆ ಆ ಹೆಸರು ಚೆನ್ನಾಗಿ ಒಪ್ಪುತ್ತೆ" ಎಂದು ಕಿಚಾಯಿಸಿದರು. (ಆ ದಿನಗಳಲ್ಲಿ ನಾನು ತುಂಬ ದಪ್ಪವಾಗಿದ್ದೆ !) ಅದೇ ಪ್ರವಾಸ ದಲ್ಲಿ ಪ್ರೇಕ್ಷಣೀಯ ಸ್ಥಳವೊಂದಕ್ಕೆ ಹೋದಾಗ ನಾನು ಹಾಡುತ್ತೇನೆ ಎಂಬ ವಿಷಯ ವನ್ನು ಇಂದಿರಾ ಎಲ್ಲರೆದುರಿಗೆ ಹೇಳಿಬಿಟ್ಟರು. ಅಲ್ಲಿಂದ ಮುಂದೆ ನಾನು ಹಲವು ಬಾರಿ ಹಾಡಬೇಕಾಯಿತು. ನನಗೂ ಅದು ಅಪ್ರಿಯವಾಗಿರಲಿಲ್ಲ. ನನ್ನ ಹಾಡನ್ನು ಹಲವರು ಮೆಚ್ಚಿದ್ದನ್ನು ಕಂಡು ನನಗಿಂತ ಹೆಚ್ಚು ಸಂತೋಷ ಪಟ್ಟವರು ಇಂದಿರಾ.

ಅವರ ನೆನಪಿನ ಶಕ್ತಿ ಅದ್ಭುತವಾದದ್ದು. ಐದಾರು ದಶಕಗಳ ಹಿಂದಿನ ಸಂಗತಿ ಗಳನ್ನು ಆಗಷ್ಟೇ ನಡೆದಂತೆ ಅವರು ಹೇಳಬಲ್ಲರು. ಅವರು ಕೆಲವು ವರ್ಷಗಳ ಹಿಂದೆ ಪ್ರಾರಂಭಿಸಿದ 'ಬಿಂದು'ವಿನ ಬರವಣಿಗೆಯನ್ನು—ಹಸ್ತಪ್ರತಿ ಸಿದ್ಧವಾಗುತ್ತಿದ್ದಂತೆ–ಓದಿದ್ದೇನೆ. ಮಧ್ಯೆ ಮಧ್ಯೆ 'ಬಿಂದು' ನಿಲ್ಲುತ್ತಿತ್ತು. ಮತ್ತೆ ಮುಂದುವರೆಯು ತ್ತಿತ್ತು. ಆ ನೆನಪಿನ ಗಣಿಯು ಬರೆಹ ಒಂದು ರಸಘಟ್ಟಿಯಾಗಿ ಅವರ ಕೈಯಿಂದ ರೂಪುಗೊಳ್ಳಲಿ, ಆದಷ್ಟು ಬೇಗ ಅಚ್ಚಾಗಿ ಕನ್ನಡಿಗರ ಕೈಸೇರಲಿ ಎಂಬುದೇ ನನ್ನ ಈ ಹೊತ್ತಿನ ಹಾರೈಕೆ ; ಅವರ ಹುಟ್ಟುಹಬ್ಬದಲ್ಲಿ ಹೇಳುವ ಶುಭಾಶಯ.

ನೆನಪುಗಳು ಹಲವಾರು, ಎಲ್ಲವನ್ನೂ ಇಲ್ಲಿ ಹೇಳಲಾಗಿಲ್ಲ. ಆದರೆ ಅವರನ್ನು ಕುರಿತ ಯಾವುದೇ ನೆನಪಿನಲ್ಲಿ ಎಂ. ಕೆ. ಇಂದಿರಾ ಎಂದರೆ ನನ್ನ ಮನಸ್ಸಿನಲ್ಲಿ ಸುಳಿ ಯುವ ಭಾವನೆ ಎಂದರೆ ಒಬ್ಬ ಅತ್ಯಂತ ಸರಳ, ನಿಷ್ಕಳಂಕ ಜೀವಿ, ಜೀವನದ ಹಲವು ಸಂಕಷ್ಟಗಳಲ್ಲಿ ಹಾದು ಬಂದರೂ ಸಿನಿಕರಾಗದ ವ್ಯಕ್ತಿತ್ವವುಳ್ಳವರು ಎಂಬುದೇ. ಅವರು ಬಾಲ್ಯದ ಮುಗ್ಧತೆಯನ್ನೂ, ಮುಪ್ಪಿನ ಪ್ರಕೃತಿಯನ್ನೂ ಒಂದೇ ಬಿಂದುವಿನಲ್ಲಿ ಹಿಡಿ ದಿಟ್ಟುಕೊಂಡ ಒಬ ಅಪೂರ್ವ ಮಹಿಳೆ.

ಇಂದಿರಾ ಮತ್ತು ನಾನು

○

○

○ ಎಚ್. ವಿ. ಸಾವಿತ್ರಮ್ಮ

ನನಗೆ ಇಂದಿರಾರವರ ಪರಿಚಯವಾದುದು ತೀರ ಇಳಿವಯಸ್ಸಿನಲ್ಲಿ. ಪರಿಚಯ ಎನ್ನುವುದಕ್ಕಿಂತ "ಕಂಡದ್ದು" ಎನ್ನಬಹುದು. ಪರಿಷತ್ತಿನ ಯಾವುದೋ ಸಮ್ಮೇಳನದಲ್ಲಿ ಆಕೆ ನನ್ನ ಪಕ್ಕದಲ್ಲಿ ಕುಳಿತಿದ್ದರು. ಆ ವೇಳೆಗೆ ಆಕೆ ಕನ್ನಡದ ಪ್ರಸಿದ್ಧ ಬರಹಗಾರ್ತಿಯರ ಸಾಲಿನಲ್ಲಿ ಸೇರಿ ಹೋಗಿದ್ದರು. ಲೆಕ್ಕವಿಲ್ಲದಷ್ಟು ಕಾದಂಬರಿಗಳನ್ನು ಪ್ರಕಟಿಸಿದ್ದರು. ವೈಯಕ್ತಿಕವಾಗಿಯೇ ಅಲ್ಲದೆ ಆಕೆಯ ಅನೇಕ ಕಾದಂಬರಿಗಳಿಗೂ ಪ್ರಶಸ್ತಿಗಳು ದೊರೆತಿದ್ದುವು. ಅನೇಕ ಕೃತಿಗಳು ಚಲನಚಿತ್ರಗಳಾಗಿ ಜನರ ಕಣ್ಮನಗಳನ್ನು ಸೆಳೆದಿದ್ದುವು.

ತೀರ ಸರಳ ವ್ಯಕ್ತಿ ; ವೇಷ ಭೂಷಣಗಳಲ್ಲಾಗಲಿ, ನಡೆನುಡಿಗಳಲ್ಲಾಗಲಿ ಏನೇನೂ ಆಡಂಬರವಿಲ್ಲ. ನನಗೂ ಮಾತಿನಲ್ಲಿ ಹೆಚ್ಚು ಚಾಕಚಕ್ಯತೆಯಿಲ್ಲದುದರಿಂದ "ನೀವು ಇಂದಿರಾ—ಅಲ್ಲವೆ ?" ಎಂದೆ. ಆಕೆ ಕೂಡ "ನೀವು ಸಾವಿತ್ರಮ್ಮ" ಎಂದರು. ಅಷ್ಟೇ ನಮ್ಮ ಸಂಭಾಷಣೆ !

ಇಂದಿರಾರವರ ಕಾದಂಬರಿಗಳ ವಿಪುಲತೆಯನ್ನು ಅನೇಕರು ಮೀರಿಸಲಾರರು. ನನ್ನ ಬರೆಹಗಳಂತೂ ತೀರ ಅಲ್ಪ ; ಸಾಮಾನ್ಯ. ಅವುಗಳನ್ನು ಮೆಚ್ಚಿಕೊಂಡಿರುವುದು ಕನ್ನಡಿಗರ ಸೌಜನ್ಯ ; ಕೆಲವು ಕಿರಿಯ ಹುಡುಗಿಯರು ಅವುಗಳನ್ನು ಜನರ ಗಮನಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ವಯಸ್ಸಿನಲ್ಲಂತೂ ಹಿರಿಯಳಾದ ನಾನು ಪ್ರಸಿದ್ಧಳಾದ ಒಬ್ಬ ತಂಗಿಯ ಸಾಧನೆಯ ವಿಚಾರ ಬರೆಯುವುದೂ ಹೆಮ್ಮೆಯ ವಿಷಯವೇ.

ಇಂದಿರಾರವರ ಕಾದಂಬರಿಗಳಿಗೆಲ್ಲಾ ಮಲೆನಾಡಿನ ಮನೋಜ್ಞ ಹಿನ್ನೆಲೆಯಿದೆ. ಅಲ್ಲೆ ಹುಟ್ಟಿ ಬೆಳೆದ ಆಕೆ ಆ ನಿಸರ್ಗ ಸೌಂದರ್ಯದಲ್ಲಿ ಸೇರಿ ಹೋಗಿದ್ದಾರೆ. ಅಲ್ಲಿಯ ಕಷ್ಟ ಜೀವನ, ಮರೆ ಮೋಸಗಳನ್ನರಿಯದ ಸರಳತೆ ಇವೆಲ್ಲವನ್ನೂ ಮೈಗೂಡಿಸಿಕೊಂಡು ಬರೆದಿದ್ದಾರೆ. ಮನುಷ್ಯ ಸಂಪರ್ಕವೇ ಅಪರೂಪವಾಗಿರುವ ಆ ನಾಡಿನಲ್ಲಿ, ಕಲ್ಪನಾ ಲೋಕದಲ್ಲಿ ವಿಹರಿಸಿ ತಮ್ಮ ಅನುಭವಗಳನ್ನು ಓದುಗರ ಮನಮುಟ್ಟುವಂತೆ— ಅಯ್ಯೋ ! ನಾವೂ ಇಂತಹ ಸುಂದರ ತಾಣದಲ್ಲಿ ಜೀವನ ಕಳೆಯಲಿಲ್ಲವಲ್ಲಾ ಎನ್ನಿಸುವಂತೆ ಚಿತ್ರಿಸಿದ್ದಾರೆ.

ಅವರ ಒಂದೊಂದು ಕಾದಂಬರಿಯಲ್ಲೂ ಪ್ರತ್ಯೇಕತೆಯಿದೆ. ಒಂದರಂತೆ ಮತ್ತೊಂದಿಲ್ಲ. ಹೀಗೆ ನಲವತ್ತಕ್ಕೂ ಹೆಚ್ಚಿನ ಕಾದಂಬರಿಗಳನ್ನು ಬರೆದಿರುವುದು ಆಕೆಯ ಕಲ್ಪನಾ ಚಾತುರ್ಯ ವಿಚಾರಶಕ್ತಿಗಳನ್ನು ತೋರಿಸುತ್ತವೆ. ಕನ್ನಡ ನಾಡಿನಲ್ಲೇ ಪ್ರಸಿದ್ಧಳಾಗಿರುವ, ಕನ್ನಡ ನಾಡೇ ಹೆಮ್ಮೆ ಪಡುತ್ತಿರುವ ಈಕೆಯ ವಿಚಾರ ಹೆಚ್ಚಾಗಿ ಬರೆಯುವ ಧೈರ್ಯ ನನಗಿಲ್ಲ. ನಾನೂ ಕೆಲವು ಕಾದಂಬರಿಗಳನ್ನು ಓದಿ ಸಂತೋಷ ಪಟ್ಟಿದ್ದೇನೆ ; ಗೆಜ್ಜೆ ಪೂಜೆ ಚಲನಚಿತ್ರವನ್ನು ನೋಡಿ ಕಣ್ಣೀರು ಕರೆದಿದ್ದೇನೆ.

ಶ್ರೀಮತಿ ಇಂದಿರಾರವರನ್ನು ಮದರಾಸು ಕನ್ನಡ ಸಂಘದವರು ಸನ್ಮಾನ ಮಾಡಿದಾಗ ನಾನೂ ಆಕೆಯೊಡನೆ ಹೋಗಿದ್ದೆ. ಹೆಚ್ಚು ಪರಿಚಯ ಬೆಳಸಿಕೊಳ್ಳುವ ಅವಕಾಶ ಸಿಕ್ಕಲಿಲ್ಲ ; ಇದು ನನ್ನ ದೌರ್ಭಾಗ್ಯ

ಈ ಪ್ರತಿಭಾವಂತ ಸಾಹಿತಿಗೆ ಅನೇಕ ವರ್ಷ ಭಗವಂತ ಆಯುರಾರೋಗ್ಯಗಳನ್ನು ಕೊಟ್ಟು, ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಶಕ್ತಿ ಕೊಡಲೆಂದು ಹಾರೈಸುತ್ತೇನೆ.

ನಮ್ಮ ಪ್ರೀತಿಯ ಕಿಟ್ಟಿ

○

○

○ ಎಚ್. ಕೆ. ರಂಗನಾಥ

ಮಲೆನಾಡಿನಿಂದ ಇಂದಿರಾ–ಕಿಟ್ಟಿ, ಮೈಸೂರಿನ ನಮ್ಮ ಮನೆಗೆ ಬಂದಾಗ ನನಗೆ ಹತ್ತು–ಹನ್ನೊಂದು. ಇಂದಿರಾತಾಯಿ ನನ್ನ ತಾಯಿಯ ಅಕ್ಕ. ಕಿಟ್ಟಿಯೂ ಮೊದಲಿಂದ ಮಾವೆಯ ಸಂಬಂಧ. ಆ ಇಬ್ಬರೂ ಬಂದುದು ನನ್ನ ಪಾಲಿಗಂತೂ ಹೊಸಬೆಳಕು ಹೊಕ್ಕು ಮನೆಯನ್ನು ಬೆಳಗಿದಂತೆ ಆಯಿತು. ಮದುವೆಯಾಗಿ ಮಾವನ ಮನೆಗೆ ಹೋಗಿದ್ದ ನನ್ನ ಸ್ವಂತ ಅಕ್ಕ ಸೀತೆಯ ಸ್ಥಾನವನ್ನು ಇಂದಿರಾ ತುಂಬಿಬಿಟ್ಟಳು. ಕಿಟ್ಟಿಯಂತೂ ಎರಡೇ ದಿನಗಳಲ್ಲಿ ಅಣ್ಣನಾಗಿ— ಅದಕ್ಕಿಂತ ಹೆಚ್ಚಿನ ಗೆಳೆಯನೇ ಆಗಿ, ತನ್ನ ಹಿರಿತನವನ್ನು ಮರೆತು ಒಡನಾಡಿಯಾಗಿಬಿಟ್ಟ. ನನಗಿಂತ ಹತ್ತು ಹದಿನೈದು ವರುಷ ಹಿರಿಯ ನಾಗಿದ್ದ ಆತನನ್ನ ಯಾರೂ ಕೃಷ್ಣರಾವ್ ಎಂದು ಕರೆದುದಿಲ್ಲ. ಎಲ್ಲರ ಪಾಲಿಗೂ ಆತ ಕಿಟ್ಟಿ. ಆತನ ಬಗೆಗೆ ದೊಡ್ಡವರಿಗೂ, ವಾರಿಗೆಯ ವರಿಗೂ, ನನ್ನಂತಹ ಕಿರಿಯರಿಗೂ ಏಕವಚನವೇ ಗಟ್ಟಿ.

ಮೋಟಾರು ನಡೆಸುವಲ್ಲಿ, ಅದರ ಹೊಟ್ಟೆಯ ಬಾಗಿಲು ತೆರೆದು ಒಳ ಪ್ರಪಂಚದ ಮೇಲೆ ಕೈಯಾಡಿಸಿ ಮುಟ್ಟಿ ತಟ್ಟಿ, ರಿಪೇರಿ ಮಾಡುವಲ್ಲಿ ಕಿಟ್ಟಿಯದು ಸಿದ್ಧಹಸ್ತ. ಆತ ಅಂಥ ಪರಿಣತಿ ಪಡೆದದ್ದು ಶಿವಮೊಗ್ಗ ದಲ್ಲಿ ; ಸಾರಿಗೆ ಸಂಸ್ಥೆ ನಡೆಯಿಸುತ್ತಿದ್ದ ನನ್ನ ತಾಯಿಯ ಚಿಕ್ಕಪ್ಪ— ಮೋಟಾರು ಮಂಜಪ್ಪನವರ ಗರಡಿಯಲ್ಲಿ ; ಹಯಾತ್, ದೊರೆಸ್ವಾಮಿ ಮೊದಲಾದ ಅವರ ಚಾಲಕರ ನೇತೃತ್ವದಲ್ಲಿ ಈತನಿಗೆ "ಟ್ರೇನಿಂಗು ಶಿಕ್ಷಣ" ಏನೆಂಥ ತರಕಟಾಲ್ ಮೋಟಾರನ್ನು ಎಳೆ ತರಿಸಿ ನಿಲ್ಲಿಸಿ, ಅದರ ಕಾಹಿಲೆಗಳನ್ನು ಹೇಳಿದರೆ ಆಯಿತು—ದಟ್ಟಿ ಪಂಚೆಯ ಕಿಟ್ಟಿ,

ಬಲಗೈಯಲ್ಲಿ ಸ್ಪಾನರು, ಎಡಗೈಯಲ್ಲಿ ಬೀಡಿ ಹಿಡಿದು, ಕಾರಿನ ಬಾನಟ್ ತೆರೆದು, ಇಲ್ಲಿ ಕುಟ್ಟಿ, ಅಲ್ಲಿ ತಟ್ಟಿ, ಪರೀಕ್ಷಿಸಿ, ಅದರ ಅಂಗಾಂಗಗಳನ್ನು ಬಿಡಿಸಿ ತೆಗೆದು ಹೊರಗೆ ಸಾಲಿನಲ್ಲಿಟ್ಟು, ಕಾರಿನ ತಳಕ್ಕೆ ತೆವಳುತ್ತ ತೆರಳಿ, ಅಲ್ಲಿನ ಎಲ್ಲವನ್ನೂ ಕಳಚಿ ತೆಗೆದಿಟ್ಟು, ಕೈಕಾಲು, ಮೂತಿ ಮಸ್ತಕಗಳನ್ನು ಎಣ್ಣೆ ಮಸಿ ಮಾಡಿಕೊಂಡು ಹೊರ ಬಂದು, ಮತ್ತೊಂದು ಬೀಡಿ ಹೊಡೆದು, ಆ ಎಲ್ಲವನ್ನೂ ಸೀಮೆಎಣ್ಣೆಯಲ್ಲಿ ತೊಳೆದು, ಗ್ರೀಸ್ ಹಚ್ಚಿ ಮತ್ತೆ ಜೋಡಿಸಿ, ಫಿಟ್ ಮಾಡಿ ಹ್ಯಾಂಡಲ್ ಹೊಡೆದಾ ಅಂದರೆ, Immovable Property ಯಾಗಿ ತಿಂಗಳಾನುಗಟ್ಟಲೆ ತುಕ್ಕು ಹಿಡಿದು ನಿಂತಿರುತ್ತಿದ್ದ ಮೋಟರು, ಮೊದಲಿಗೆ ಕೆಮ್ಮಿ, ಕ್ಯಾಕರಿಸಿ, ಹೊಗೆ ಉಗುಳಿ ಘೋರ ವಾದ ಶಬ್ದ ಮಾಡುತ್ತ ಹೊರಟೇ ಹೊರಡುತ್ತಿತ್ತು. ಶಾಲೆಯ ಬಿಡುವಿನ ದಿನ ಗಳಲ್ಲಿಯಂತೂ ಸರಿಯೇ, ಆದರೆ ಇಂಥ ಕೆಲಸವನ್ನು ಕಿಟ್ಟಿ ಕೈಗೆತ್ತಿಕೊಂಡಾಗ ಕ್ಲಾಸಿಗೆ ಚಕ್ಕರ್ ಹೊಡೆದು ಕಿಟ್ಟಿಗೆ ಅಸಿಸ್ಟೆಂಟ್ ಆಗಿ ಕೇಳಿದ್ದನ್ನು ತಂದುಕೊಡುತ್ತ ಹೇಳಿದ್ದನ್ನು ಮಾಡುತ್ತ ತುಂಬ ಖುಷಿಯಿಂದ ಯಂತ್ರಕ್ಕೆ ಕಿಟ್ಟಿ ಜೀವಕೊಡುವುದನ್ನೇ ಪ್ರತೀಕ್ಷಿಸು ತ್ತಿದ್ದೆ. ಸರಿ, ಕಾರು ಹೊರಟಿತು ಅಂದರೆ ನಮಗೆಲ್ಲ ಜಾಯ್‌ರೈಡು, ಹೋಟೆಲಿ ನಲ್ಲಿ ಕೇಸರೀಭಾತು-ದೋಸೆ ! ನಮ್ಮ ಹುಯಿಲು ಹೇಳತೀರದು.

ಕಿಟ್ಟಿಯದು ಗಟ್ಟಿ ಮೈ. ನಾರು ದೇಹ. ಆತನ ಹೆಸರು ಹೇಳಿದವರಿಗೂ ಹೊಟ್ಟೆ ಬರಲು ಸಾಧ್ಯವಿಲ್ಲ. ಸ್ಫುರದ್ರೂಪಿ. ಸಿಂಗಾರ ಪುಟ್ಟಸ್ವಾಮಿ. ಮೂರು ಹೊತ್ತೂ ಮುಗುಳು ನಗೆ. ಆತ ಗಟ್ಟಿಯಾಗಿ ಮಾತನಾಡಿದ್ದೇ ನನಗೆ ಗೊತ್ತಿಲ್ಲ. ಆದರೆ ಮಹಾ ಮುಂಗೋಪಿ, ಉಡಾಫೆ ಮನುಷ್ಯ ಅಂತ ಇನ್ನೂ ಹತ್ತಿರದವರ ಹೇಳಿಕೆ. ಇಂದಿರೆಯೇ ಸಾಕ್ಷ್ಯ ಕೊಡಬೇಕು. ಆತನಿಗೆ ಈ ಕೆಲಸ-ಆ ಕೆಲಸ ಎಂಬ ವ್ಯತ್ಯಾಸವಿಲ್ಲ. ಯಾರು ಏನು ಹೇಳಿದರೂ ತನಗೆ ತೋಚಿದ ರೀತಿಯಲ್ಲಿಯೇ ಮಾಡಬೇಕು ! ಇಂದಿರ ಬಿಟ್ಟರೆ ಬೀಡಿಯೇ ಆತನ ಸಂಗಾತಿ. ಆದರೆ ಆತ ಮನೆಯಲ್ಲಿ ಎಂದಿಗೂ ಬತ್ತಿ ಹೊತ್ತಿಸಲಿಲ್ಲ ; ದೊಡ್ಡವರ ಎದುರು ಸೇದಲಿಲ್ಲ. ನನ್ನ ಎದುರು ಪರವಾಗಿಲ್ಲ. ಆತ ದುಡ್ಡುಕೊಟ್ಟು ನನ್ನಿಂದ ಬೀಡಿಕಟ್ಟು ತರಿಸಿದ್ದುಂಟು.

ಇಂದಿರಾ ಕಿಟ್ಟಿಯದು ಅತ್ಯಂತ ಉತ್ಕಟವಾದ ಪ್ರೇಮ ದಾಂಪತ್ಯ. ಆದರೆ ಮನೆಯ ಪರಿಸರವನ್ನು ಸಂಕೋಚಗೊಳಿಸುವ ರೀತಿಯಲ್ಲಿ ಮೈತೋರಿಕೊಂಡುದಲ್ಲ. ನಮ್ಮದಾದರೂ ಬಡತನದ ಸಂಸಾರ. ಆದರೆ ನನ್ನ ತಾಯ ಕೈ ದೊಡ್ಡದು. 'ದೇವರು' ಕೊಟ್ಟದ್ದನ್ನ ಎಂದರೆ ನನ್ನ ತಂದೆ ಕೊಟ್ಟದ್ದನ್ನು ಜತನವಾಗಿ ಉಪಯೋಗಿಸಲು ಪ್ರಯತ್ನಿಸಿ ಸೋತವಳು. ಸಣ್ಣ ಪುಟ್ಟ ಸಾಲ ಸೋಲ. ಆದರೆ ಬಂದವರಿಗೆಲ್ಲ ಅದೇ ತವರು. ಎಲ್ಲೆಲ್ಲಿಂದಲೋ ಯಾರು ಯಾರೋ ನಂಟರು, ಗಳಗನಾಥರಂತಹ

ಅತಿಥಿಗಳು. ತುಂಬಿದ ಮನೆ. ಚಿನ್ನಮ್ಮ ಎಂದರೆ ಎಲ್ಲರಿಗೂ ಚಿನ್ನಮ್ಮ. ಆಕೆಯ ಅನುಕಂಪೆ, ಹೃದಯ ವೈಶಾಲ್ಯ ಜನಜನಿತವಾದದ್ದು. ಆದರಿಂದಾಗಿ ನಮ್ಮಮನೆಗೆ ಬಂದು ನಿಂತವರಲ್ಲಿ-ಇಂದಿರ-ಕಿಟ್ಟಿ ಕೂಡ. ಬಂದ ದಿನದಿಂದಲೇ ಇಂದಿರ ಮನೆಯ ಮಗಳು. ಕಿಟ್ಟಿ ಅಳಿಯನ ಬಿಗುಮಾನ ತೋರದವನು. ಮನೆಯ ಪರಿಳಿತಗಳಲ್ಲಿ ಇಬ್ಬರೂ ಬೆರೆತು ಒಂದಾಗಿ ಹೋದವರು.

ಮೈಸೂರಿಗೆ ಬಂದ ನಾಲ್ಕಾರುದಿನಗಳಲ್ಲಿ ಕಿಟ್ಟಿಗೆ ಜಿ. ಆರ್. ರಾಮಯ್ಯನವರ ಮೋಟಾರು ಕಂಪನಿಯಲ್ಲಿ ಡ್ರೈವರ್-ಮೆಕಾನಿಕ್ ಆಗಿ ಕೆಲಸ ಸಿಕ್ಕಿತು. ಅಲ್ಲಿ ಇಲ್ಲಿ ಸಣ್ಣಪುಟ್ಟ ಮೇಲುಗೆಲಸ. ವಾರವಾರಗಳ ಕಾಲ ನಾನು ಆತನನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ನಾನು ಎಚ್ಚರಗೊಳ್ಳುವ ವೇಳೆಗೆ ಎದ್ದು ಸ್ನಾನಮಾಡಿ ತಿಂಡಿ ತಿಂದು ಕೆಲಸಕ್ಕೆ ಹೋಗಿರುತ್ತಿದ್ದ. ರಾತ್ರಿ ನಾನು ಮಲಗಿದ ಮೇಲೆಯೇ ಆತನ ಆಗಮನ. ಆದರೆ ಭಾನುವಾರಗಳಂದು, ಮತ್ತೆ ಎಲ್ಲ ರಜೆಯ ದಿನಗಳಲ್ಲಿ ಆತನ ಬಾಲ ನಾನು. ಮೋಟಾರುಗಾಡಿಯ ಎಲೆಕ್ಟ್ರಿಕ್ ಹಾರನ್ನಿನಂತೆ ಊಊದ್ದವಾಗಿ, ಅಷ್ಟೇ ಪ್ರಭಾವ ಶಾಲಿಯಾಗಿ ಧ್ವನಿ ಹೊರಡಿಸುತ್ತಿದ್ದೆ. ನಿಜವಾಗಿ, ಮೋಟಾರು ಬಂದಿತೇನೋ ಎಂಬ ಭ್ರಮೆ ಹುಟ್ಟಿಸುತ್ತಿದ್ದೆ. ಆದರಿಂದ ಕಿಟ್ಟಿಗೆ ತುಂಬ ಮೋಜು. ದಸರೆ-ಬೇಸಿಗೆ ರಜೆಗಳಲ್ಲಿ ಅನುದಿನವೂ ನನ್ನನ್ನು ಮುಂಜಾನೆ ತನ್ನೊಂದಿಗೆ ಕರೆದೊಯ್ಯುದ್ದ ಮೋಟಾರು-ಆಫೀಸಿನಲ್ಲಿ ಯಾರು ಯಾರ ಮುಂದೋ ಹಾರನ್ ಕೂಗಿಸಿ ಬೆರಗಾದ ಅವರಿಂದ ನನ್ನನ್ನು ಡಿಸ್‌ಕವರ್ ಮಾಡಿದ್ದಕ್ಕೆ ತಾನೂ ಹೊಗಳಿಕೆ ತಿನ್ನುತ್ತಿದ್ದ. ಪ್ರತಿದಿನವೂ ಯಥಾಪ್ರಕಾರ ಕೇಸರೀಬಾತು-ದೋಸೆ-ಕಾಫಿ. ಲೈನ್‌ಮೇಲೆ ಹೋದರಂತೂ ಡ್ರೈವರ ಸೀಟಿನ ಬಳಿಯೇ ನಾನು. ಆತನೊಂದಿಗೇ ಹೋಟೆಲಿನಲ್ಲಿ ಊಟ. ದೇಹ ಬೆಳೆಯುತ್ತಿದ್ದ ಆ ಕಾಲದಲ್ಲಿ ಕಿಟ್ಟಿಯ ಆತಿಥ್ಯ ನನಗೆ ತುಂಬ ಇಂಬುಗೊಟ್ಟಿತು.

ಹೀಗೆ ತಿಂಗಳುಗಳು ಉರುಳುತ್ತಿದ್ದಾಗ, ಕಿಟ್ಟಿ, ಒಂದು ಮೋಟಾರ್‌ಕಾರನ್ನು ತಂದು ನಮ್ಮ ಮನೆಯ ಬೇಲಿಯಿಲ್ಲದ ಅಂಗಳದಲ್ಲಿ ನಿಲ್ಲಿಸಿದ. ಒಂದುನೂರು ರೂಪಾಯಿ ಒಟ್ಟು ಬೆಲೆಗೆ ಅದನ್ನು ಕೊಂಡು ತಂದನಂತೆ. ಹಾರನ್ ಒಂದನ್ನು ಉಳಿದು ಅದರ ಉಳಿದೆಲ್ಲ ಅಂಗಾಂಗಗಳೂ ಚಿತ್ರವಿಚಿತ್ರವಾದ ಶಬ್ದ ಮಾಡುತ್ತಿದ್ದವು. ಬಂದು ಅಂಗಳದಲ್ಲಿ ನಿಂತದ್ದೇ ಆಯಿತು-ಅಲುಗಾಡಲಿಲ್ಲ-ಅದು ಮಿಸುಕಾಡಲಿಲ್ಲ. ಅಂಥ ಕಿಟ್ಟಿಯ ಶೈತ್ಯೋಪಚಾರ-ಶಾಖೋಪಚಾರಗಳಿಗೂ ಮಣಿಯಲಿಲ್ಲ. ಅದರ ರಿಪೇರಿಗಾಗಿ ಹಟತೊಟ್ಟು ಕುಳ್ಳಿರಲು ಆತನಿಗೂ ತಿಂಗಳಾನುಗಟ್ಟಲೆ ಅನುವಾಗಲಿಲ್ಲ. ಅಲ್ಲಿಯೇ ನಮ್ಮ ಎಳೆತನದ ರಾಜ್ಯಭಾರ. ಪಕ್ಕದ ಮನೆ ಟೀಕೆ, ಎದುರುಮನೆ ಎಂಕೆ-ನಾನು ಹೆಚ್‌ಕೆ ಆ ಕಾರಿನಲ್ಲಿಯೇ ಕಾಲ ಕಳೆದೆವು. ದಿನ ಕಳೆಯುತ್ತ ಅದರ ಸವಕಲು

ಟೈರುಗಳೂ ಮೆತ್ತಗಾಗಿ ನೆಲಕಚ್ಚಿದವು. ನಾವು ಏನೆಷ್ಟು ಗೇರು, ಬ್ರೇಕು, ಕ್ಲಚ್ಚು ಅಲುಗಿಸಿ ತಿರಿಚಿ, ತೂಗಾಡಿಸಿದರೂ ಅದು ಜಪ್ಪಯ್ಯ ಎನ್ನಲಿಲ್ಲ. ಆದರೂ ಸ್ಟೀರಿಂಗ್ ತಿರುಗಿಸುತ್ತ ಬಾಯಿನಿಂದಲೇ ಹಾರನ್ ಅರಚುತ್ತ ಮನೆಯಲ್ಲಿ ಎಲ್ಲರಿಂದ ಬೈಗುಳ-ಒತ್ತಗಳನ್ನು ತಿನ್ನುತ್ತ ಅನೇಕ ದಿನಗಳನ್ನು ಕಳೆದೆವು.

ಇದ್ದಕ್ಕಿದ್ದಂತೆ ಒಂದು ದಿನ ಕಿಟ್ಟಿ, ತನ್ನ ಸಹೋದ್ಯೋಗಿಯನ್ನು ಕರೆತಂದ. ಇಬ್ಬರೂ ಮೂರು ದಿನಗಳ ಕಾಲ ಸತತ ಕಾರಿನೊಂದಿಗೆ ಹೋರಾಡಿ, ಅದರ ಎಲ್ಲ ಅಂಗಾಂಗಗಳನ್ನು ಕಿತ್ತು ತೆಗೆದು, ಹರಡಿ, ಒಂದೊಂದನ್ನೂ ಪರೀಕ್ಷಿಸಿ ನೇರ್ಪಡಿಸಿ ಕಡೆಗೊಮ್ಮೆ ಕೂಡಿಸಿ ಫಿಟ್ ಮಾಡಿದರು. ಆ ಮೂರುದಿನ ಹಗಲು ರಾತ್ರಿ ಎದೆ ಮುಚ್ಚದೆ ಅವರ ಸರ್ಕಸ್ ನೋಡುತ್ತ ಆ ಇಬ್ಬರಿಗೂ ಕಾಫಿ-ಬೀಡಿ ಸಪ್ಲೇ ಮಾಡಿದ ನೆನಪು ನನಗೆ. ಕಡೆಗೊಮ್ಮೆ ಅತ್ಯಂತ ಸೂಕ್ಷ್ಮವಾಗಿ ಎಲ್ಲವನ್ನೂ ಪರೀಕ್ಷಿಸಿ, ಟೈರುಗಳಿಗೆ ಗಾಳಿ ಪಂಪು ಹೊಡೆದು, ಟ್ಯಾಂಕ್‌ಗೆ ಪೆಟ್ರೋಲ್ ತುಂಬಿ, ಕಾರಿನಲ್ಲಿ ಒಂದೇ ಆಗಿದ್ದ ವಿಂಡ್‌ಸ್ಕ್ರೀನ್ ಗಾಜನ್ನು ತಿಕ್ಕಿ ತೊಳೆದು ಒರೆಸಿ, ದೇವರನ್ನು ಪ್ರಾರ್ಥಿಸಿ, ಸ್ಟಾರ್ಟ್ ಮಾಡಿದಾಗ ಮೊದಮೊದಲು ವಿಪರೀತ ರಾಂಗ್ ಮಾಡಿದರೂ, ಅರ್ಧಗಂಟೆಯ ಪ್ರಯತ್ನದ ಫಲವಾಗಿ ಫಟ ಫಟ ಶಬ್ದ ಮಾಡುತ್ತ ಎಂಜಿನ್ ಹಿಂದಿನಿಂದ ಹೊಗೆ ಕಾರಿದಾಗ ವೈಯಕ್ತಿಕವಾಗಿ ನನಗೆ ಆದ ಆನಂದ, ಕಿಟ್ಟಿಯ ವಿಷಯದಲ್ಲಿ ಮೈತುಂಬಿ ಕೊಂಡ ಅಭಿಮಾನ ಮಾತಿಗೆ ಹೊರತು. ಅಂತೂ ಕಾರು ಹೊರಟಿತು. ಒಂದು ಬಾರಿ ಜಾಯ್‌ರೈಡು ಸುತ್ತಾಡಿ ಮತ್ತೆ ಅಂಗಳಕ್ಕೆ ಬಂದು ನಿಂತಿತು.

ಇದಾದ ಎರಡೇ ದಿನಕ್ಕೆ ಇಂದಿರ-ಕಿಟ್ಟಿ ತಮ್ಮ ಕಾರಿನಲ್ಲಿ ಕೃಷ್ಣರಾಜಪೇಟೆಗೋ ಏನೋ ಹೊರಟುಬಿಟ್ಟರು. ಆತನಿಗೆ ಅಲ್ಲಿ ಬೇರೆ ಕೆಲಸ ಸಿಕ್ಕಿತಂತೆ. ನಮ್ಮೆಲ್ಲರ ಅಚ್ಚುಮೆಚ್ಚಿನ ಅಕ್ಕನನ್ನು ನಿಂತ ಕಾಲ ಮೇಲೆ ಎಂಬಂತೆ ಕಿಟ್ಟಿ ಹೊರಡಿಸಿಬಿಟ್ಟ. ಹನಿಗಣ್ಣು ಮಾಡಿಕೊಂಡು ಚಿನ್ನಮ್ಮ ಇಂದಿರೆಗ ಉಡಿತುಂಬಿ ಹರಸಿ ಕಳುಹಿಸಿ ಕೊಟ್ಟಳು. ನಾನಂತೂ ಬಿಕ್ಕಿ ಬಿಕ್ಕಿ ಅತ್ತ ನೆನಪು. ಇನ್ನು ಮನೆಯಲ್ಲಿ ಇಂದಿರ ಇಲ್ಲ! ಒಡನಾಡಿ ಕಿಟ್ಟಿ ಇಲ್ಲ! ಅದಕ್ಕಿಂತ ಹೆಚ್ಚಾಗಿ ನನ್ನದೇ ಎನಿಸಿಹೋಗಿದ್ದ ರಥ ಅಂಗಳದಲ್ಲಿ ಇಲ್ಲ. ಆ ದಿನವೆಲ್ಲ ಮುಸುಮುಸು ಮಾಡುತ್ತ ಯಾರ ಮೇಲಿನದೋ ಕೋಪ–ಎಲ್ಲಿನದೋ ದುಃಖ ನುಂಗಿಕೊಳ್ಳುತ್ತ ಸಂಕಟಪಟ್ಟು ಉಣ್ಣದೆಯೆ ಮಲಗಿ ಬಿಟ್ಟೆ. ಮಾರನೆಯ ಮುಂಜಾನೆ, ಮುಖ ತೊಳೆದು ಕಾಫಿಗೆಂದು ಅಡಿಗೆ ಮನೆಗೆ ಹೋಗುತ್ತ ಎಡಗಡೆಯ ರೂಮಿನ ಕಡೆಗೆ ಕಣ್ಣು ಹಾಯ್ದಾಗ-ಹೌದು-ಎಂದಿನಂತೆಯೇ ನಿಜವಾಗಿ ಇಂದಿರ-ಕಿಟ್ಟಿ ಮಲಗಿದ್ದಾರೆ! ಸಂತೋಷ! ಆಶ್ಚರ್ಯಗಳಿಂದ ನೆತ್ತಿ ಒಡೆಯು ವಂತಾಯಿತು. ಅನಂತರ ಚಿನ್ನಮ್ಮ ವಿವರಣೆ ಕೊಟ್ಟಳು. ಪಶ್ಚಿಮವಾಹಿನಿಯುವರೆಗೆ

ದಂಪತಿಗಳು ಸಾವಕಾಶವಾಗಿ ಪ್ರಯಾಣ ಮಾಡುವಷ್ಟರಲ್ಲಿ ಒಂದು ಟೈರು ಒಡೆಯಿತಂತೆ. ಕಾರಿಗೂ ಸಾಯಿ ಕೆಮ್ಮು-ಗೂರಲು. ಟೈರಿಗೆ ಹುಲ್ಲು ತುರುಕಿ ಹಾಗೂ ಹೀಗೂ ದಂಪತಿಗಳು ನೂಕಿ, ತಳ್ಳಿಕೊಂಡು ಸ್ಟಾರ್ಟ್‌ಮಾಡಿ ಹತ್ತುಮಾರುಹೋಗುವಲ್ಲಿ ಟೈರಿನಲ್ಲಿ ತುಂಬಿದ್ದ ಹುಲ್ಲು ಹೊರಬಂದು, ಗಾಡಿಯೆಲ್ಲ ಗಡ-ಗಡ ! ಮತ್ತೆ ಹುಲ್ಲು ತುಂಬು-ನೂಕು-ತಳ್ಳು-ಸ್ಟಾರ್ಟ್ ಮಾಡು, ಹತ್ತುಮಾರು ಓಡಿಸು-ಪುನಃ ಗಾಡಿಯೆಲ್ಲ ಗಡಗಡ! ಬೆಳಿಗ್ಗೆ ಮೈಸೂರ್ ಬಿಟ್ಟ ದಂಪತಿಗಳು ಹೀಗೆ ಸಂಜೆಯವರೆಗೆ ಕಾರಿನೊಂದಿಗೆ ಹೆಣಗಾಡಿ ಸೋತು, ಅದನ್ನು ಯಾರ ಮನೆಯ ಮುಂದೆಯೋ ನಿಲ್ಲಿಸಿ, ಫರ್ಲಾಂಗು ನಡೆದು, ಬಸ್ಸು ಹಿಡಿದು, ರಾತ್ರಿ ಒಂಭತ್ತಕ್ಕೆ ಮತ್ತೆ ನಮ್ಮ ಮನೆಗೆ ಬಂದರಂತೆ. ನನ್ನ ಹಿಗ್ಗು ಹೇಳತೀರದು. ಆದರೆ ಆ ಕಾರು ಮುಂದೆ ಏನಾಯಿತೂ ಎಂದು ಈವರೆಗೆ ತಿಳಿಯಲಿಲ್ಲ.

ಮತ್ತೆ ತಿಂಗಳಾರು ಕಳೆಯುವಲ್ಲಿ ಇಂದಿರ ತನ್ನ ಮೊದಲ ಮಗುವಿಗೆ ಜನ್ಮ ಕೊಟ್ಟಳು. ಮತ್ತೊಂದು ತಿಂಗಳಲ್ಲಿ ಮಗುವಿನ ಮುಖ-ಮೈಗಳಲ್ಲಿ ರೂಪ ಮೂಡಿತು. ಹೆಸರು ಬನಶಂಕರಿ-ಇಂದಿರಾ ಅಮ್ಮನದೂ ಅದೇ ಹೆಸರು. ಏನೆಂಥ ಮುದ್ದು ಅದು. ತಿದ್ದಿಮಾಡಿದ ಮುದ್ದು ಮುಖ-ಬೆಳುದಿಂಗಳನ್ನು ಹಾಲಲ್ಲಿ ಕಡೆದು ಮಾಡಿದ ಮೈ ಬಣ್ಣ. ಏನೆಂಥ ಮಾಟ ಅವರದು ! ಮುಂದಿನೆರಡು ತಿಂಗಳಲ್ಲಿ, ಕೆಂಪಗಿನ ಅದರ ಹಾಲ್ಜೇನು ತುಟಿಯಲ್ಲಿ ಮುಗುಳು ಮೂಡಿದಾಗ ದೈವಸತ್ವ ಅದರ ಮುಖದಲ್ಲಿ ತೋರಿಕೊಂಡಿತು. ಮನೆಯಲ್ಲಿ ಎಲ್ಲರ ಕಣ್ಣಗೊಂಬೆಯಾದ ಮಗು ನನ್ನ ಕೈಗೊಂಬೆಯೇ ಆಯಿತು. ಅನಿವಾರ್ಯವಾಗಿ ಶಾಲೆಗೆ ಓಡಿಹೋದ-ಅಲ್ಲಿಂದ ಓಡಿ ಬಂದ ಒಟ್ಟು ಅವಧಿಯನ್ನು ಬಿಟ್ಟರೆ ಮೂರು ಹೊತ್ತೂ ಆ ಮುದ್ದು ಕಂದನನ್ನೆತ್ತಿ ಆಡಿಸಿಕೊಂಡು ಮಹದಾನಂದ ಪಡೆಯುತ್ತಿದ್ದೆ. ಮಗುವನ್ನು ನನ್ನ ಕೈಯಲ್ಲಿಟ್ಟು ಇಂದಿರ ಅಮ್ಮನಿಗೆ ಮನೆಗೆಲಸದಲ್ಲಿ ನೆರವಾಗುತ್ತಿದ್ದಳು. ಶಂಕರಿ ನನ್ನ ಜೀವದ ಜೀವ ಆಗಿಬಿಟ್ಟಳು.

ಕಿಟ್ಟಿಗೆ ಚಾಮುಂಡಿ ಎಕ್ಸ್‌ಟೆನ್‌ಶನ್‌ನಲ್ಲಿ ಪುಟ್ಟದೊಂದು ಮನೆ, ಅಂದಿನ ಸಣ್ಣ ಬಾಡಿಗೆಗೆ ಸಿಕ್ಕಿತು. ಕಂದನನ್ನು ಕರೆದುಕೊಂಡು ದಂಪತಿಗಳು ಅಲ್ಲಿ ಹೊಸ ಸಂಸಾರ ಹೂಡಿದರು. ತಿಂಗಳು ಕಳೆಯುವಲ್ಲಿ ಆ ಮನೆ ಇಂದಿರೆಯ ಕೈಯಲ್ಲಿ ಹೊಳೆ ಹೊಳೆಯಿತು. ಮನೆತನದ ಸಂಸ್ಕೃತಿಯ ಮೂರ್ತಿಯಾಗಿ ಆಕೆ, ದೊರೆತದ್ದನ್ನು ಹತ್ತೂ ಜನರಲ್ಲಿ ಹಂಚಿಕೊಂಡು, ತನ್ನ ಅಮ್ಮನಂತೆ, ನನ್ನ ಅಮ್ಮನಂತೆ ಅನುನಿತ್ಯದ ಅನ್ನಪೂರ್ಣೆಯಾದಳು. ಕಸದಿಂದ ರಸ ಮಾಡುವುದರಲ್ಲಿ ಇಂದಿರೆಯ ಸಾಧನೆ-ಸಿದ್ಧಿ ಅಪೂರ್ವವಾದದ್ದು. ಮಲೆನಾಡಿನ ಹೆಣ್ಣುಮಕ್ಕಳ ಹುಟ್ಟುಗುಣ ಅದು. ಏನೆಷ್ಟೋ ಹೊಸ ಹೊಸ ತಿನಿಸುಗಳನ್ನು ಇಂದಿರೆಯ ಮನೆಯಲ್ಲಿ ಸವಿದೆ. ಕೇವಲ ನೆಪಕ್ಕೆಂದು ಕೃಷ್ಣಮೂರ್ತಿಪುರದ ನಮ್ಮ ಮನೆಯಲ್ಲಿ ಇರುತ್ತಿದ್ದೆ ಅಷ್ಟೆ. ಮಧ್ಯಾಹ್ನದ

ಬಿಡುವಿನಲ್ಲಿಯೂ ಪುಟ್ಟ ಶಂಕರಿಯನ್ನು ನೋಡಿಬರಲು ಶಾಲೆಯಿಂದ ಧಾವಿಸುತ್ತಿದ್ದೆ. ಮಗು ನಿದ್ರೆ ಮಾಡಿದ್ದರೆ ಹಳಹಳಿಸಿ ಅದನ್ನೆಚ್ಚರಿಸಿ ಆಟಪಾಠ ಅರ್ಧಗಂಟೆಯೊಳಗಾಗಿ ಹಿಂದಿರುಗುತ್ತಿದ್ದೆ. ಶಾಲೆಯಿಂದ ಹೊರಟಾಗ ಖಾಲಿಯಾಗಿದ್ದ ಹೊಟ್ಟೆ. ಬರುವಾಗ ಭರ್ತಿ. ಸಂಜೆಯಂತೂ, ಶಾಲೆ ಬಿಟ್ಟೊಡನೆ ಒಂದೇ ಉಸಿರಿನಲ್ಲಿ ಓಟ ಅಲ್ಲಿಗೆ! ಇರುಳು ಮುಸುಕಿ ಇಳೆಗೆ ಇಳಿಯುವವರೆಗೂ ಅಕ್ಕನೊಡನೆ ನಗುನಗುತ ಹರಟೆ ಹೊಡೆದು, ಮಗುವಿನೊಂದಿಗೆ ಸಂಭ್ರಮದ ಕಾಲ ಕಳೆಯುತ್ತಿದ್ದೆ. ಒಂದೊಂದು ದಿನ ತಡವಾಗಿ ಮನೆಗೆ ಮರಳಿ ಉಂಡು ಮುಸುಗೆಳೆದು ತೆಳ್ಳಗೆ ಗೊರಕೆ ಹೊಡೆಯುತ್ತಿದ್ದ ಕಿಟ್ಟಿ ಎಚ್ಚರಗೊಳ್ಳುವವರೆಗೂ ಕಾದಿದ್ದು, ಮುದ್ದಿನ ಪೆಟ್ಟುಗಳೊಂದಿಗೆ ಹೋಟೆಲಿನ ತಿಂಡಿ ಯಥೇಚ್ಛವಾಗಿ ತಿಂದು ಕಾಲೆಳೆದುಕೊಂಡು ಮನೆಗೆ ಬರುತ್ತಿದ್ದೆ. ಏನೆಂಥ ಸುಖದ ಕಾಲ ಅದು! ಆಗಲಾದರೂ ಕಿಟ್ಟಿಗೆ ಕೈತುಂಬ ದುಡ್ಡು ಬರುತ್ತಿತ್ತು ಎಂಬ ನಂಬಿಕೆ ನನಗಿಲ್ಲ. ಆದರೆ ಆ ಚಿಕ್ಕ ಚೊಕ್ಕ ಮನೆಯಲ್ಲಿ ಯಾವ ಕೊರತೆಯೂ ಕಾಣಲಿಲ್ಲ; ಅಲ್ಲಿನ ಹಿಗ್ಗು, ಸಡಗರ, ನಗೆಚಾಟಿಕೆ ಕಿಂಚಿತ್ತೂ ಮಾಸಲಿಲ್ಲ. ಮುಗುಳುನಗೆಯನ್ನು ಮುಂದಿಟ್ಟುಕೊಂಡು ಪ್ರವಾಹವಾಗುತ್ತಿದ್ದ ಇಂದಿರೆಯ ಮಾತಿಗೆ ಮುಗಿತಾಯವಿರಲಿಲ್ಲ. ಕಿಟ್ಟಿಯ ಕೀಟಲೆ. ಹುಡುಗಾಟಿಕೆಗೆ ಇಳಿಮುಖವಿರಲಿಲ್ಲ. ಅವರ ಮನೆಗೆ ಹೋಗುವುದೆಂದರೆ ಅನುದಿನವೂ ನನ್ನೆದೆಯಲ್ಲಿ ದೀಪೋತ್ಸವ.

ನಮ್ಮ ಮುದ್ದು ಶಂಕರಿಗೆ ಎರಡು ಮುಗಿದಿತ್ತು ಎನಿಸುತ್ತದೆ. ಅದೊಂದು ದಿನ ಏಕೋ ಏನೋ ಮಗುವಿನ ಮೈಯಲ್ಲಿ ಥಟ್ಟನೆ ಜ್ವರ ಒಡೆಯಿತು. ಮಾರನೆಯ ದಿನ ಮಗುವಿನ ಮೈ ಕೆಂಡಾಮಂಡಲವಾಗಿ ದೇಹವನ್ನು ಹಿಂಡಿ ಸೊಪ್ಪು ಮಾಡಿತು. ಮೀನಾಕ್ಷಮ್ಮನವರ ನಾರುಬೇರುಗಳ ಔಷಧಿಗಳಿಗೆ ಜ್ವರ ಮಣಿಯಲಿಲ್ಲ. ಮನೆಯವರನ್ನು ಬಿಡಿ, ಆ ದಿವ್ಯವನ್ನು ಎತ್ತಿ ಆಡಿಸಿದ ನೆರೆಹೊರೆಯವರೂ, ಓಣಿಯ ಎಲ್ಲರೂ ಹೌಹಾರಿ ಹೋದರು. ಆ ಮೂರು ನಾಲ್ಕು ದಿನ ಹಗಲು-ರಾತ್ರಿ ಎಚ್ಚರವಿದ್ದು, ನನಗೆ ಬರುತ್ತಿದ್ದ ಮೂರು ನಾಲ್ಕು ಪ್ರಾರ್ಥನೆಗಳನ್ನು ಅಳುತಳುತ ಮತ್ತೆ ಮತ್ತೆ ದೇವರಲ್ಲಿ ಸಲ್ಲಿಸಿ ಮಗುವಿನ ಆರೋಗ್ಯಕ್ಕಾಗಿ ಹಂಬಲಿಸಿ ಅಲವರಿತುಕೊಂಡೆ.

ಮಾರನೆಯ ದಿನ ಮಗು ತಣ್ಣಗಾಗಿ ಹೋಯಿತು. "ದೇವರು ಕೊಟ್ಟರು-ದೇವರು ಕೊಂಡರು-ಅಂಥ ಮಕ್ಕಳನ್ನು ಕಂಡರೆ ದೇವರಿಗೆ ತುಂಬ ಇಷ್ಟ" ಎಂಬ ಮಾತು ಎಲ್ಲೆಲ್ಲಿಂದಲೋ ಕೇಳಿ ಬಂತು. ಅಂಥ ದೇವರ ಮೇಲೆ ಭುಗಿಲೆದ್ದ ರೋಷದಿಂದಾಗಿ ತಲೆ ಸಿಡಿದು, ಎದೆ ಒಡೆಯುವ ಅನುಭವವಾಯಿತು ನನಗೆ. ಮುಂದಿನ ಎರಡು ದಿನಗಳಲ್ಲಿ ಏಳಲಾರದಂಥ ಸ್ಥಿತಿಗೆ ಇಳಿದು, ಹಳಹಳಿಸುತ್ತ ಹಾಸಿಗೆ ಹಿಡಿದೆ.

ನನ್ನ ಸುದ್ದಿ ತಿಳಿದ ತಕ್ಷಣ, ಅಂಥ ದುರ್ಭರವಾದ ಶೋಕ-ಸಂಕಟದಲ್ಲಿಯೂ ಇಂದಿರೆ-ಕಿಟ್ಟಿ ನಮ್ಮ ಮನೆಗೆ ಧಾವಿಸಿ ಬಂದು ಹಾಸಿಗೆಯ ಬಳಿ ಕುಳಿತರು. ಏನನ್ನೋ ಕನವರಿಸಿಕೊಳ್ಳುತ್ತಿದ್ದ ನಾನು, ಇಂದಿರೆಯ ಪ್ರೀತಿ ತುಂಬಿ ತುಳುಕಿಸುತ್ತಿದ್ದ "ರಂಗನಾಥಾ" ಎಂಬ ಕರೆ ಕೇಳಿ ತಟ್ಟನೆ ಕಣ್ದೆರೆದೆ. ಕಣ್ಣಿನಲ್ಲಿ ಒಂದು ಹನಿಯನ್ನೂ ಬಾರಗೊಡದೆ, ತೋರಗೊಡದೆ, ನನ್ನನ್ನೇ ನಿಟ್ಟಿಸುತ್ತ ಶಿಲಾಮೌನಿಯಾದ ಅಕ್ಕ, ನನ್ನ ಮೈಮೇಲೆ ಕೈಯಾಡಿಸುತ್ತಿದ್ದಾಳೆ! ಕಾಲ ಬಳಿ ತಲೆ ಬಾಗಿಸಿ ಕುಳಿತಿದ್ದ ಕಿಟ್ಟಿ, ಉಕ್ಕಿ ಬರುತ್ತಿದ್ದ ಉಮ್ಮಳವನ್ನು ತಾಳಿಕೊಳ್ಳಲಾರದೆ ನಿಡಿದಾಗಿ ಸುಯ್ಯುತ್ತಿದಾನೆ!

ಅಂತಹ ಇಂದಿರೆಯನ್ನು, ಅಂತಹ ಕಿಟ್ಟಿಯನ್ನು ನಾನು ಆವರೆಗೆ ನೋಡಿದ್ದಿಲ್ಲ.

ಇಂತಹ ಬಿರುಗಾಳಿ, ಪ್ರವಾಹ,ರೋಗ-ರುಜಿನ ಬಿಸಿಲು-ಮಳೆ ಇತ್ಯಾದಿ ಪಂಚಭೂತ ಪ್ರಕೃತಿಯ ಪ್ರಕೋಪಗಳಲ್ಲಿ ತಮ್ಮ ಭಕ್ತಾದಿಗಳು ಸಿಕ್ಕ ಇರುವೆಗಳು ಸತ್ತಂತೆ ಸಾಯುತ್ತಿದ್ದರೂ ಆ ದೇವರುಗಳು ಬಂದು ಒಬ್ಬನನ್ನಾದರೂ ಉಳಿಸುವಂತಿಲ್ಲ. ಆ ದೇವರುಗಳೆಲ್ಲರಿಗೂ ಕಲ್ಲಿನ ಕೋಣೆಯೊಳಗೆ ಬೀಗ ಮುದ್ರೆಯ ಬಂಧನ!

ಮನುಷ್ಯರು ನಿರ್ಮಿಸಿ ಕೂಡಿ ಹಾಕಿರುವ ಆ ಜೈಲಿನಲ್ಲಿ ದೇವರಿಗೆ ಆಜೀವ ಕಠಿಣ ಶಿಕ್ಷೆ!

(ಅನುಭವ ಕುಂಜ-ಪುಟ-27)

ಸೀರಿಯಲ್‌ಗೆ ನಾಂದಿ

ರಾಂಕಿ

30ರ ದಶಕದ ಮೊದಲರ್ಧ. ಆಗ ನಾನು 'ಸ್ವಂತ ಅಕ್ಕ' ಅಥವ 'ಕಸಿನ್' ಎಂಬುದರ ಅರ್ಥ ತಿಳಿಯದಷ್ಟು ಎಳೆಯ. ಎಂ. ಕೆ. ಇಂದಿರಾ (ಆಗ ಬರೀ ಇಂದಿರಾ !) ಮೈಸೂರಿನಲ್ಲಿ ಹಳೇ ಅಗ್ರಹಾರದಲ್ಲೆಲ್ಲೊ ಮನೆ ಮಾಡಿದ್ದಳು. ಗಂಡ 'ಕಿಟ್ಟಿ'ಯವರು ತಮ್ಮ ಬಸ್ ಸಮೇತ ತಿಂಗಳಿಗೆ ಒಂದೆರಡು ಸಲ, 3-4 ದಿನಗಳಿಗಾಗಿ ಸರ್ಕೀಟು ಹೊರಟುಬಿಡುತ್ತಿದ್ದರು. ಆ ಸಮಯದಲ್ಲಿ ಇಂದಿರಾ ನಮ್ಮ ಮನೆಗೆ, ಅಂದರೆ ತನ್ನ ಚಿಕ್ಕಮ್ಮನ ಮನೆಗೆ ಬಂದಿರುತ್ತಿದ್ದಳು. ಇಂದಿರಾ ಬಂದಳೆಂದರೆ ನಮಗೆಲ್ಲಾ ತುಂಬ ಖುಷಿ, ಅವಳಲ್ಲಿ ಅಪಾರ ಸಲುಗೆ. ಆವಳಿಗಾಗಲೇ ಕಥೆ ಹೇಳುವ ಕಲೆ ಕರಗತವಾಗಿದ್ದುದೇ ಇದಕ್ಕೆ ಮುಖ್ಯ ಕಾರಣ. ರಾತ್ರಿ ಮಲಗಿದ ಮೇಲೆ ಮೆಲುಧ್ವನಿಯಲ್ಲಿ ಕಥೆಯ ಸುರುಳಿ ಬಿಚ್ಚುತ್ತಿದ್ದಳು. ಆದರೆ ಮನೆಯಲ್ಲಿ ಹಿರಿಯರು ಜಾಸ್ತಿ. ದೀಪ ನಂದಿಸಿದ ಮೇಲೆ ಮಾತು-ಕಥೆಗಳಿಗೆ ಅವಕಾಶವಿರುತ್ತಿರಲಿಲ್ಲ. ನಮ್ಮ ಪಿಸು-ಪಿಸು, ಗುಸು-ಗುಸು ಕೇಳಿದಾಗ ಒಂದು ಗದರಿಕೆ. ಸರಿ ಮೌನ. "ಚಿನ್ನಮ್ಮ, ಯಾವಾಗಲೂ ನಾನೇ ಬರುತ್ತಿರುತ್ತೇನೆ. ಮುಂದಲ ಸಲ ಯಜಮಾನರು ಸರ್ಕೀಟ್ ಹೋದಾಗ ರಾಜಿ-ಶಾರದ-ರಾಮುವನ್ನು ನಮ್ಮ ಮನೆಗೇ ಕಳಿಸು. ಎರಡು ದಿನ ಇದ್ದು ಬರುತ್ತಾವೆ"– ಎಂದು ಇಂದಿರಾ ನಮ್ಮ ಅಮ್ಮನಿಗೆ ಪೀಠಿಕೆ ಹಾಕುತ್ತಿದ್ದಳು. 'ಸಧ್ಯ ಒಂದೆರಡು ದಿನ ಇವುಗಳ ಕಾಟದಿಂದ ಬಚಾವಾಗುತ್ತೇನಲ್ಲ' ಎಂಬ ಖುಷಿಯಿಂದ ತಾಯಿಯವರಿಂದ ಕೂಡಲೇ ಒಪ್ಪಿಗೆ. ಕಿಟ್ಟಿಯವರ ಬಸ್, ನಮ್ಮ ಮನೆಯ ಮುಂದೆ ಈ ತುದಿಯಿಂದ ಆ ತುದಿಯವರೆಗೆ ಓಡುವ ಸಿಲ್ಲುವ ದಿನವನ್ನೇ ನಾವು ಎದುರು ನೋಡುತ್ತಿದ್ದೆವು. ಬಸ್ ಬಂದಾಗ ನಮಗೊ ಹೇಳಲಾಗದಷ್ಟು 'ಹೆಮ್ಮೆ'.

ಟೀಪಿಯಿಂದ ನಾವು ಬಸ್ ಏರುವುದನ್ನೇ ಸುತ್ತಮುತ್ತಲ ಜನ 'ಅಸೂಯೆ'ಯಿಂದ ನೋಡುತ್ತಿದ್ದಾರೆಂಬ ಜಂಬ !

ಇನ್ನು ಇಂದಿರಳ ಮನೆಯಲ್ಲಿ ೩/೪ ದಿನ ನಮ್ಮನ್ನು ಹಿಡಿಯುವವರೇ ಇಲ್ಲ. ರುಚಿಕಟ್ಟಾದ ತಿಂಡಿ-ಊಟ. ಒಂದೆರಡು ಸಿನೆಮಾ. ಎಲ್ಲಕ್ಕಿಂತ ಮುಖ್ಯವಾಗಿ ರಾತ್ರಿ 'ಹಾಲ್'ನಲ್ಲಿ ಜಮಖಾನವನ್ನು ಬಿಡಿಸಿ, ದಿಂಬಿಗೆ ತಲೆಯೂರಿದೊಡನೆ ಇಂದಿರಳಿಂದ ಪುಂಖಾನುಪುಂಖವಾಗಿ ಕಥೆಗಳ ಸರಮಾಲೆ. ನಾವು ಎಂದೆಂದೂ ಕಾಣದ ನರಸಿಂಹ ರಾಜಪುರ-ಮುಂಡಗದ್ದೆಗಳ ಹಾದಿ-ಬೀದಿಗಳು, ಮನೆಗಳು ಮತ್ತು ಜನ ನಮಗೆ ಚಿರ ಪರಿಚಿತ. ಪುಟ್ಟ ವಿಷಯವೊಂದನ್ನು ತೆಗೆದುಕೊಂಡು, ಅದಕ್ಕೆ ರೆಕ್ಕೆ-ಪುಕ್ಕ ಕಟ್ಟಿ, ವಿಶಾಲವಾದ ದಿಗಂತದಲ್ಲಿ ಹಾರಿಬಿಡುತ್ತಿದ್ದಳು. ಮುಂಡಗದ್ದೆ ಪಟೇಲರ ಸೊಸೆಯ ಗೋಳು ವರ್ಣಿಸುತ್ತಾ....ಮಧ್ಯದಲ್ಲಿ ಹಠಾತ್ತನೆ ಚಿಮಣಿ ಎಣ್ಣೆಯ ಬುಡ್ಡಿಯ ಬತ್ತಿಯನ್ನು ದೊಡ್ಡದು ಮಾಡಿ, ನಮ್ಮ ಮುಖದ ಮುಂದೆ ಹಿಡಿಯುತ್ತಿದ್ದಳು. ಉಗ್ಗಿ-ಉಗ್ಗಿ ಬರುತ್ತಿದ್ದ ನಮ್ಮ ಕಣ್ಣೀರನ್ನು ಕಂಡು "ಅಯ್ಯೋ ಪೆದ್ದುಗಳೇ ಆ ಸೊಸೆ ಸಂಕಟ ಪಟ್ಟರೆ ನೀವೇಕೆ ಕಣ್ಣೀರು ಸುರಿಸುತ್ತಿದ್ದೀರಿ" ಎಂದು ಕಿಲಕಿಲ ನಗುತ್ತಿದ್ದಳು. "ಯುಗಾದಿ ಬಂತೆಂದರೆ ನಮಗೆಲ್ಲಾ ಹೇಳಲಾಗದ ಹಿಗ್ಗು. ಅಂದು ನಮಗೆಲ್ಲಾ ಶಾನುಭೋಗರ ಮನೆಯಲ್ಲಿ ಊಟ..." ಎಂದು ಶುರುಮಾಡಿ ಅಡಿಗೆಯನ್ನು ವರ್ಣಿಸುವಳು "ಪಲ್ಯ-ಗೊಜ್ಜು-ಕೋಸಂಬರಿಗಳಿರಲಿ, ಒಬ್ಬಟ್ಟೇ ನಾಲ್ಕಾರು ಬಗೆಗಳು" ಎಂದು ಅವುಗಳನ್ನು ತಯಾರಿಸುವ ವಿಧಾನವನ್ನು ವಿವರಿಸುವಳು. ಮೊದಲಿನಿಂದ ನಾಲಿಗೆಯ ಮೇಲೆ ಹತೋಟಿ ಕಳೆದುಕೊಂಡಿದ್ದ (ರುಚಿಯಲ್ಲಿ ಮಾತ್ರ) ನನಗಂತೂ.... "ಏ ರಾಮು, ತುಂಬ ನೀರು ಕುಡಿಯಬೇಡ ಒಳ್ಳೆಯದಲ್ಲ" ಎಂದು ಹಾಸ್ಯ ಕೀಟಲೆ ಮಾಡುತ್ತಿದ್ದಳು. ಕಥೆ ಸಾಗಿರುವಾಗ ದೂರದಲ್ಲೆಲ್ಲೋ 12 ಗಂಟೆ ಬಡಿದದ್ದು ಕೇಳಿದಾಗ, ಮಾತನ್ನು ಅಲ್ಲಿಗೇ ನಿಲ್ಲಿಸಿ "ಇನ್ನು ಸಾಕು, ಮಲಗಿಕೊಳ್ಳಿ, ನಾಳೆ ಮುಂದುವರಿಸುತ್ತೇನೆ" ಎಂದು ಹಠಾತ್ತನೆ ನಿಲ್ಲಿಸುವಳು. ನಮ್ಮ ಗೋಗರೆಗೆ ಜಪ್ಪಯ್ಯ ಅಂದರೂ ಓಗೊಡುತ್ತಿರಲಿಲ್ಲ. 'ಕಿಟ್ಟಿ'ಯವರು ಹಿಂದಿರುಗುವ ದಿನದ ಹಿಂದಿನ ರಾತ್ರಿ ಕಥೆ ಕೊನೆ ಕಾಣುತ್ತಿತ್ತು. ಹೀಗೆ, 50 ವರ್ಷಗಳಿಗೆ ಹಿಂದೆಯೇ, ಇಂದಿರಾ, ತನ್ನ ಮುಂದಿನ ಧಾರಾವಾಹಿ ಅಥವ ಸೀರಿಯಲ್‌ಗಳಿಗೆ ನಾಂದಿ ಹಾಕಿಕೊಟ್ಟಳು !

ಬತ್ತದ ಸೆಲೆ

○

○

○ ವೆಂಕಟೇಶ

ಕನ್ನಡದ ಕಾದಂಬರೀ ಕ್ಷೇತ್ರದಲ್ಲಿನ ಹಿರಿಯ ವ್ಯಕ್ತಿ, ದೊಡ್ಡ ಹೆಸರು ಶ್ರೀಮತಿ ಎಂ. ಕೆ. ಇಂದಿರಾರವರದು. ಅವರೆಂದೂ ಪ್ರಚಾರ ಪ್ರಿಯರಲ್ಲ. ಖ್ಯಾತಿ ಅವರನ್ನೇ ಅರಸಿ ಬಂದಿತು. ಅವರ 'ಗೆಜ್ಜೆಪೂಜೆ' ಕಾದಂಬರಿ, ಕನ್ನಡದ ಕಾದಂಬರೀ ಪ್ರಕ್ರಿಯೆಯಲ್ಲಿ ಒಂದು ಮೈಲಿಗಲ್ಲನ್ನೇ ಸ್ಥಾಪಿಸಿತು.

ಜೀವನ ಸಂಗ್ರಾಮದ ಜಂಜಾಟ, ತೊಳಲಾಟಗಳ ನಡುವೆ, ಬಾಳಸಾಗರ ಮಂಥನದಲ್ಲಿ ಅನೇಕಾನೇಕ ಅಣಿಮುತ್ತುಗಳು ಹೊರಬಂದು ಕನ್ನಡದ ಸಾರಸ್ವತ ಲೋಕದಲ್ಲಿ ಧೃವತಾರೆಗಳಾಗಿ ಪ್ರಶಸ್ತಿಗಳನ್ನು ತಂದು ಕೊಟ್ಟವು.

ನನಗೆ ಶ್ರೀಮತಿ ಎಂ. ಕೆ. ಇಂದಿರಾರವರ ಪರಿಚಯವಾದದ್ದು ೧೯೬೯ ರಲ್ಲಿ. 'ಪಿಷ್ಯನ್‌ನ ಟ್ರಾವಲ್ ಲೈನ್ಸ್'ನ ಮಾಲೀಕರೂ, ಸಾಹಿತಿಗಳೂ ಆಗಿದ್ದ ದಿ॥ ಶ್ರೀ ಹೆಚ್, ಎ. ನಾರಾಯಣ್‌ರವರೊಂದಿಗೆ ಶ್ರೀಮತಿ ಹೆಚ್. ಆರ್. ಇಂದಿರಾರವರು ತಮ್ಮದೊಂದು ಕಾದಂಬರಿಯನ್ನು ಹೊರತರುವಂತೆ ಕೇಳಿದಾಗ, ನಾನು "ನೀವು ಶ್ರೀಮತಿ ಎಂ.ಕೆ. ಇಂದಿರಾರವರ ಒಂದು ಹಸ್ತಪ್ರತಿಯನ್ನು ಕೊಡಿಸಿದರೆ, ನಿಮ್ಮ ಕಾದಂಬರಿಯನ್ನು ಪ್ರಕಟಿಸುತ್ತೇನೆ" ಎಂದು ಹೇಳಿದೆ. ದಿ॥ ಶ್ರೀಮತಿ ಎಚ್. ಆರ್. ಇಂದಿರಾರವರು ಶ್ರೀಮತಿ ಎಂ. ಕೆ. ಇಂದಿರಾರವರನ್ನು ಪೀಡಿಸಿ ಕೇವಲ ಇಪ್ಪತ್ತು ದಿನಗಳಲ್ಲಿ 'ಡಾಕ್ಟರ್' ಎಂಬ ಒಂದು ಕಾದಂಬರಿಯ ಹಸ್ತಪ್ರತಿಯನ್ನು ನನಗಾಗಿ ಬರೆಸಿಕೊಟ್ಟರು.

ನಂತರ, ನನ್ನ ಮತ್ತು ಶ್ರೀಮತಿ ಎಂ. ಕೆ. ಇಂದಿರಾರವರ ಪರಿಚಯ ನಿಕಟ ವಾಯ್ತು. ಬಿಡುವಾದಾಗ ಅವರ ಮನೆಗೆ ಹೋಗುವುದು, ಅವರೊಂದಿಗೆ ಆತ್ಮೀಯತೆ ಯಿಂದ ಚರ್ಚಿಸುವುದು ಮಾಮೂಲಾಯ್ತು. ನಾನವರ ಮನೆಗೆ ಹೋದಾಗಲೆಲ್ಲಾ ತಾಯಿಯಂತೆ ಉಪಚರಿಸುತ್ತಿದ್ದರು. ಆತ್ಮೀಯತೆಯ ಆಗರವಾಗಿ, ನಿರಂತರ ಹಸನ್ಮುಖಿಯಾಗಿ, ತಮ್ಮೆಲ್ಲಾ ಆಂತರಿಕ ಅಳಲನ್ನು ಅಡಗಿಸಿಕೊಂಡು ನಗುನಗುತ್ತಲೇ ಇರುತ್ತಿದ್ದರು. ಕಾದಂಬರಿಗೆ ಒಂದು ಹೊಸ ಆಯಾಮವನ್ನು ನವಪಂಥದಲ್ಲಿ ಕಥನ ವನ್ನು ನಡೆಸಿ, ಓದುಗರ ಮೇಲೆ ಸಮ್ಮೋಹನವನ್ನು ಬೀರುವುದರಲ್ಲಿ ಅವರ ಕಾದಂಬರಿ ಗಳು ಅದ್ವಿತೀಯವಾಗಿದ್ದವು.

ಶ್ರೀಮತಿ ಎಂ.ಕೆ. ಇಂದಿರಾರವರ ಕಾದಂಬರಿಗಳು ಐಷಾರಾಮ ಜೀವನದ ಕಾಲಹರಣದ ವಸ್ತುಗಳಾಗಿರದೆ ಬಾಳದೀವಿಗೆಗಳಾದ ಪ್ರಕ್ರಿಯೆಗಳಾಗಿವೆ. ಕ್ರಮೇಣ ನನ್ನ ಮತ್ತು ಅವರ ವ್ಯವಹಾರ ಕೇವಲ ಪ್ರಕಾಶಕ—ಲೇಖಕರ ಸಂಬಂಧದಿಂದ, ತಾಯಿ—ಮಗನ ಬಾಂಧವ್ಯವಾಗಿ ಬದಲಾಯ್ತು. ಅವರಿಗೆ ಅನಾರೋಗ್ಯವಾಗಿ ದ್ದರೂ ನಾನು ಕೇಳಿದಾಗಲೆಲ್ಲಾ ನಮ್ಮ ಅನುಬಂಧದ ಅಂತಃಕರಣಕ್ಕೆ ಕಟ್ಟು ಬಿದ್ದು ಹಸ್ತಪ್ರತಿಗಳನ್ನು ಒದಗಿಸಿಕೊಡುತ್ತಿದ್ದರು.

ಶ್ರೀಮತಿ ಎಂ. ಕೆ. ಇಂದಿರಾರವರ ಸುಮಾರು ಇಪ್ಪತ್ತು ಕೃತಿಗಳನ್ನು ಹೊರ ತರುವ ಸುದೈವ ನನ್ನದಾಗಿದೆ. ಅನೇಕ ಕೃತಿಗಳು ಪುನಃಮುದ್ರಣಗೊಂಡಿವೆ. ಇದು ಅವರು ಓದುಗರ ಆದರಣೆಗೆಷ್ಟು ಪಾತ್ರರಾಗಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ.

ಹೊಸ ಲೇಖಕರು ಯಾರಾದರೂ ಶ್ರೀಮತಿ ಎಂ. ಕೆ. ಇಂದಿರಾರವರನ್ನು ಸಲಹೆ ಸಹಕಾರಗಳಿಗೆ ಸಂಪರ್ಕಿಸಿದಾಗ ಸಹೃದಯತೆಯಿಂದ ಸೂಚನೆ, ಉತ್ತೇಜನ ಗಳನ್ನು ಕೊಡುವವರು ಶ್ರೀಮತಿ ಎಂ. ಕೆ. ಇಂದಿರಾರವರೊಬ್ಬರೇ ಎಂದು ನನ್ನ ಭಾವನೆ.

ಧಾರವಾಡದ ಶ್ರೀಮತಿ ಮಂದಾಕಿನಿ ಪುರೋಹಿತರವರು, ತಮ್ಮ ಪಿಎಚ್. ಡಿ. ಪದವಿಗಾಗಿ ಶ್ರೀಮತಿ ಎಂ. ಕೆ. ಇಂದಿರಾ (ಸಮಗ್ರ ಅಧ್ಯಯನ) ಎಂಬ ಗ್ರಂಥವನ್ನು ಬರೆದು ಅದೀಗ ಪ್ರಕಟಣೆಯ ಹಂತದಲ್ಲಿದೆ. ಹೀಗೆ ಉನ್ನತ ಪದವಿಗಾಗಿ ಒಬ್ಬ ಲೇಖಕರನ್ನು ಆಯ್ಕೆ ಮಾಡಿಕೊಂಡು ಆಳ ಅಧ್ಯಯನ ನಡೆಸಿರುವುದು ಸ್ವಾಗತಾರ್ಹ ಮತ್ತು ಲೇಖಕಿಗೆ ಒಂದು ಅನುಪಮ ಗೌರವ.

ಅವರ ಅಭಿಮಾನಿಗಳು ಇದೀಗ ಅವರಿಗೆ ಸನ್ಮಾನ ಮಾಡುತ್ತಿರುವುದು ನನಗೆ ವೈಯುಕ್ತಿಕವಾಗಿ ತುಂಬಾ ಸಂತೋಷವನ್ನುಂಟು ಮಾಡಿದೆ. ನನಗೆ ಅವರ ಮೇಲಿರುವ ಭಕ್ತಿ, ಗೌರವಗಳ ದ್ಯೋತಕವಾಗಿ ಅಭಿನಂದನಾ ಗ್ರಂಥಕ್ಕೆ ಈ ಲೇಖನ ಬರೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಇಂಥಾ ಇಳಿವಯಸ್ಸಿನಲ್ಲೂ ಶ್ರೀಮತಿ ಎಂ. ಕೆ. ಇಂದಿರಾರವರು ಬತ್ತದ ಸೆಲೆಯಾಗಿ ಚೈತನ್ಯದ ಚಿಲುಮೆಯಾಗಿದ್ದಾರೆ. ಇವರಿಂದ ಇನ್ನೂ ಅನೇಕಾನೇಕ ಕೃತಿಗಳು ಹೊರಬರಲೆಂದು ನನ್ನ ಆಶಯ.

ಭಗವಂತನು ಶ್ರೀಮತಿಯವರಿಗೆ ಮತ್ತಷ್ಟು ಚೈತನ್ಯ, ಆರೋಗ್ಯ, ಆಯಸ್ಸು ನೆಮ್ಮದಿಗಳನ್ನಿತ್ತು ಕನ್ನಡದ ಸೇವೆಯನ್ನು ಇದೇ ರೀತಿ ಮುಂದುವರೆಸಲಿ ಎಂಬುದೇ ನನ್ನ ಆಶಯ.

"ರಾಮ-ಭೀಮ ಯಾವ ದೇವರಿಗೂ ನನ್ನನ್ನು ಹೋಲಿಸಬೇಡ. ಹದಿನಾಲ್ಕು ವರ್ಷ ವನವಾಸದಲ್ಲಿ ಗಂಡನ ನೆರಳಾಗಿ ನಾನಾ ಕಷ್ಟಗಳನ್ನು ಅನುಭವಿಸಿದ ಸೀತೆಗೆ ಅಗ್ನಿಪರೀಕ್ಷೆ ವಿಧಿಸಿದ ರಾಮನಿಗೆ ನನ್ನನ್ನು ಹೋಲಿಸಬೇಡ. ಕಂತ್ರಿ ಅಗಸನ ಮಾತನ್ನು ನಂಬಿ ತುಂಬು ಗರ್ಭಿಣಿಯನ್ನು ನಿಷ್ಕರುಣೆಯಿಂದ ಅಡವಿಗಟ್ಟಿದ ಆ ರಾಮನಿಗೆ ನಿಜವಾಗಿ ಸೀತೆಯಲ್ಲಿ ಪ್ರೇಮವಿತ್ತೆ ? ನಂಬಿಕೆ ಇತ್ತೆ ?"

(ಗುಂಡ- ಪುಟ-211)

ಭಾಗ ಎರಡು

ಕೃತಿ ಚಿಂತನೆ

ತುಂಗ–ಭದ್ರ : ಒಂದು ಸಮೀಕ್ಷೆ

○

○

○ **ಕೀರ್ತಿನಾಥ ಕುರ್ತಕೋಟಿ**

ಶ್ರೀಮತಿ ಎಂ. ಕೆ. ಇಂದಿರಮ್ಮನವರ ತುಂಗ-ಭದ್ರ ಕಾದಂಬರಿ ಅವರ ಜೀವನಶ್ರದ್ಧೆಯ ಫಲವಾಗಿದೆ. ಜೀವನ ಶ್ರದ್ಧೆ ಎಂಬ ಮಾತನ್ನು ನಾನು ಇಲ್ಲಿ ಒಂದು ವಿಶಿಷ್ಟ ಅರ್ಥದಲ್ಲಿ ಮಾತ್ರ ಪ್ರಯೋಗಿಸುತ್ತಿದ್ದೇನೆ. ಸಾಹಿತ್ಯವೆಂದರೆ ನಿಜಜೀವನದ ಪ್ರತಿಬಿಂಬ ಎನ್ನುವ ತೀರ ಸುಲಭವಾದ ಸಿದ್ಧಾಂತವೊಂದು ನಮ್ಮ ಕೆಲವು ಲೇಖಕರಿಗೆ ಪ್ರತಿಜ್ಞೆಯಾಗಿದ್ದರೆ ಮತ್ತೆ ಕೆಲವರಿಗೆ ಅಂಧವಿಶ್ವಾಸವೂ ಆಗಿದೆ. ಆದರೆ ಹುಟ್ಟು, ಬದುಕು, ಸಾವುಗಳಿಂದ, ಸುಖದುಃಖಗಳಿಂದ ಕೂಡಿದ ಜೀನನದ ಬುಡಕ್ಕಿರುವ ತಾತ್ವಿಕ ಅರ್ಥಪೂರ್ಣತೆಯನ್ನು ಆರಾಧಿಸುವ ಶ್ರದ್ಧೆಯುಳ್ಳ ಲೇಖಕರು ಅಪರೂಪವಾಗಿದ್ದಾರೆ. ಲೇಖಕನ ಸೃಜನಶೀಲವಾದ ಪ್ರಜ್ಞೆ, ಇಂಥ ಶ್ರದ್ಧೆಯಿಂದ ಪುನೀತವಾದ ಜೀವನದ ಮೇಲೆ ಬೆಳಕು ಚಲ್ಲಿ ಅದನ್ನು ಸಾಹಿತ್ಯವನ್ನಾಗಿ ಮಾರ್ಪಡಿಸಿದಾಗ ಆ ಸೊಗಸು ಹೆಚ್ಚುತ್ತದೆ. ಈ ಬಗೆಯ ಜೀವನದ ಶ್ರದ್ಧೆ ಶ್ರೀಮತಿ ಇಂದಿರಮ್ಮನವರ ಈ ಕಾದಂಬರಿಗೆ ಪ್ರೇರಕಶಕ್ತಿಯಾಗಿದೆ.

ನಮ್ಮ ಜಾನಪದ ಸಾಹಿತ್ಯವೆಲ್ಲ ಸೃಷ್ಟಿಯಾಗಿರುವುದೇ ಹೀಗೆ. ಈ ಸಾಹಿತ್ಯಕ್ಕೆ ಯಾವಾಗಲೂ ಕರ್ಮನಿರತವಾದ ಬದುಕಿನ ಆಶೀರ್ವಾದವಿದೆ. ತೋರಿಕೆಗೆ ಈ ಕಾದಂಬರಿ ಇಂದಿನ ಯಾವ ಕಾದಂಬರಿಯಂತೆಯೇ ಕಾಣುತ್ತಿದ್ದರೂ ಅದರ ಮೂಲ ರೂಪ ಒಂದು ಜಾನಪದ ಕತೆಯಂತೆಯೇ ನನಗೆ ಕಂಡಿತು. ಈ ಕಾದಂಬರಿಯು ಜೀವನದರ್ಶನ ಅದರ ಪ್ರಾದೇಶಿಕತೆಯಿಂದ ಮೂರ್ತವಾಗಿದೆ. ಇಲ್ಲಿಯ ಕಥಾವಸ್ತು ತೀರ ಸರಳವಾದದ್ದು, ಮಲೆನಾಡಿನ ಹಳ್ಳಿಯೊಂದರ ಪರಿಸರದಲ್ಲಿ

ನಾಲ್ಕಾರು ವ್ಯಕ್ತಿಗಳ ಸರಳವಾದ ಬೆಳವಣಿಗೆಯೇ ಈ ವಸ್ತುವಿನ ತಿರುಳಾಗಿದೆ. ಕಾದಂಬರಿಯ ಪ್ರಾರಂಭಕ್ಕೆ ಮುದ್ದುರಾಮ, ರಾಘು, ಕೃಷ್ಣವೇಣಿ, ತುಂಗ-ಭದ್ರ, ಶಂಭು, ಮಂದಾ ಇವರೆಲ್ಲ ಬಾಳೆಂಬುದು ಏನೆಂದು ಅರಿಯದ ಹುಡುಗ-ಹುಡುಗಿಯರು. ಕಾದಂಬರಿಯ ಕೊನೆಗೆ ಅವರೆಲ್ಲ ಪ್ರಬುದ್ಧ ವ್ಯಕ್ತಿಗಳು. ಆದರೆ ಈ ಎರಡು ತುದಿಗಳ ನಡುವಿನ ಬದುಕಿಗೆ ಮಾತ್ರ ವಿಶಿಷ್ಟ ಸಂಸ್ಕಾರವಿದೆ. ಕಥಾನಕದ ಪರಿಮಿತಿಯಲಿ ಈ ವ್ಯಕ್ತಿಗಳಿಗೆ ಅವರ ಅಂತಃಸತ್ವಕ್ಕೆ ಸರಿಯಾಗಿ ಬೆಲೆಗಳಿವೆ. ತಮ್ಮ ಬೆಲೆ ಏನೆಂಬುದನ್ನು ಈ ವ್ಯಕ್ತಿಗಳು ಬಲ್ಲರು. ಈ ಕತೆಯ ಕೇಂದ್ರ ವ್ಯಕ್ತಿಯಾದ ಮುದ್ದುರಾಮ ಉಳಿದವರ ದೃಷ್ಟಿಯಲ್ಲಿ ಸುಸಂಸ್ಕೃತನಾದವನು. ಅವನು ದುಗ್ಗಾಭಟ್ಟರ ವಂಶದ ಬಳ್ಳಿಗೆ ಬಿಟ್ಟ ಹೀಚುಗಾಯಿ, ಮನೆತನದ ಕಣಜದಲ್ಲಿಯ ಬೀಜಗಾಳು. ಅವನ ನಡೆನುಡಿಗಳೆಲ್ಲ ಅವನ ಈ ಅಂತಸ್ತಿಗೆ ತಕ್ಕವಾಗಿವೆ. ಉಳಿದ ವ್ಯಕ್ತಿಗಳ ಅಂತಃ ಸತ್ವಕ್ಕೆ, ಪರಿಪಾಕಕ್ಕೆ ಅವನೇ ಪ್ರಮಾಣವಾಗಿರುವದರಿಂದ ಇಡೀ ಕಾದಂಬರಿ ಅವನ ಕತೆಯಾಗಿದೆ. ಇನ್ನು ಮುದ್ದುರಾಮನ ಘನತೆ ಕೂಡ ಅವನಿಗೆ ಜನ್ಮಜಾತವಾಗಿ ಬಂದದ್ದೇ ಹೊರತು ಅವನೇ ಸಂಪಾದಿಸಿದ್ದಲ್ಲ. ಈ ವ್ಯಕ್ತಿಗಳಿಗೆ ವಿವೇಕಯುತವಾದ ಬದುಕಿಗಿಂತ ದೊಡ್ಡದು ಯಾವದೂ ಇಲ್ಲ. ಈ ಕಾದಂಬರಿಯ ಎಲ್ಲ ರೀತಿ ನೀತಿಗಳಿಗೂ ಈ ಬಗೆಯ ಜೀವನದರ್ಶನ ಮೂಲವಾಗಿದೆ. ಮುದ್ದುರಾಮ–ಕೃಷ್ಣವೇಣಿಯರ ಮದುವೆಯ ಸಂಭ್ರಮ, ಅವರ ಶೃಂಗಾರಲೀಲೆಗಳು ಈ ಜೀವನದ ಶ್ರೀಮಂತ ಅಂಶಗಳಾಗಿವೆ. ಇವರಿಬ್ಬರ ಬದುಕು ಪರಿಪೂರ್ಣವಾದದ್ದು. ಅಖಂಡವಾದದ್ದು. ಅಂತೇ ಆದಕ್ಕೆ ಬೆಲೆ ಹೆಚ್ಚು. ಆದರೆ ಅದಕ್ಕಾಗಿ ಉಳಿದವರು ಜೀವನದಿಂದ ಬಹಿಷ್ಕೃತರಾಗಬೇಕಾಗಿಲ್ಲ. ತುಂಗ-ಭದ್ರೆಯರು ಹುಟ್ಟು ಕುರುಡಿಯರು ; ಶಂಭು ಪೆದ್ದ ; ರಾಘು ಮನೆತನದ ವಿಷಮಚಕ್ರದಲ್ಲಿ ಸಿಕ್ಕುಬಿದ್ದವ. ಆದರೆ ಜೀವಿಸುವ ಶಕ್ತಿ ಇರುವವರೆಗೂ ಜೀವನ ಸಂಸ್ಕಾರಗಳಿಂದ ತಪ್ಪಿಸಿಕೊಳ್ಳುವಂತಿಲ್ಲ. ಅವರಿಗೂ ಮದುವೆಯಾಗಿ ಬದುಕು ಮುಂದುವರಿಯಬೇಕು. ತುಂಗ-ಭದ್ರೆಯರ ಸಮಸ್ಯೆ ಇಲ್ಲಿ ವಿಷಮವಾದ ಸಾಮಾಜಿಕ ಸಮಸ್ಯೆಯಾಗಿ ಉಳಿದಿದ್ದಿಲ್ಲವೆಂಬುದು ಮೇಲಿನ ಮಾತನ್ನೇ ಮತ್ತೆ ಸಮರ್ಥಿಸುತ್ತದೆ. ಅದಕ್ಕೆ ಕಾರಣವೆಂದರೆ ಈ ವ್ಯಕ್ತಿಗಳು ತಮಗೆ ಸಿಕ್ಕ ಬಾಳುವೆಯನ್ನು ಸಂತೋಷದಿಂದ ಒಪ್ಪಿಕೊಂಡಿರುವದೇ ಆಗಿದೆ. ಇದಕ್ಕೆ ಜೀವಂತ ಉದಾಹರಣೆಯೆಂದರೆ ನಾಗಾಭಟ್ಟರ ವಿಕೃತ ಸಂಸಾರ. ಅವರದು ಮೊದಲೇ ದಾಸ್ಯ ಜೀವನ. ಅವರ ಬದುಕಿನ ನಿರ್ವಾಹವೆಲ್ಲ ಇನ್ನೊಬ್ಬರ ಮೇಲೆ ಅವಲಂಬಿಸಿದೆ. ಅವರ ಮಕ್ಕಳಲ್ಲಿ ಇಬ್ಬರು ಕುರುಡಿಯರಾದರೆ, ಒಬ್ಬ ಪೆದ್ದ. ಇಷ್ಟಾಗಿಯೂ ಅವರು ಯಾವುದರ ಬಗ್ಗೆಯೂ ತಕರಾರು ನುಡಿದಿಲ್ಲ. ಆದರೆ ಇಂಥ ವ್ಯಕ್ತಿಯ ಬದುಕಿನಲ್ಲಿಯೂ ಕೊನೆಗೆ ಪರಿಪಾಕ ಬಂದಿರುವುದನ್ನು ನೋಡಿದರೆ ಬೆರಗುಂಟಾಗುತ್ತದೆ. ಕೃಷ್ಣವೇಣಿಯ ಮರಣದ ನಂತರ ಮುದ್ದುರಾಮ ಅನ್ನ ನೀರು

ಬಿಟ್ಟು ಹುಚ್ಚನಂತಾದಾಗ, ಯಾರು ಎಷ್ಟು ಸಮಾಧಾನ ಹೇಳಿದರೂ ಕೇಳದಿದ್ದಾಗ, ರಾತ್ರಿಹೊತ್ತು ನಾಗಾಭಟ್ಟರು ರೋಷಭೀಷರಾಗಿ ಸಂಸಾರಸಮೇತ ಹೊಳೆಗೆ ಹಾರಲು ಸಿದ್ಧರಾದ ಸನ್ನಿವೇಶವನ್ನು ಇಲ್ಲಿ ನೆನೆಯಬಹುದು. ಹಗಲು ರಾತ್ರಿ ಬಿಡುವಿಲ್ಲದ ದುಡಿತದಿಂದ ದುಗ್ಗಾಭಟ್ಟರ ಋಣವನ್ನೂ ತಮ್ಮ ಕರ್ಮವನ್ನೂ ಕ್ಷಯಿಸುತ್ತಿರುವ ಅವರು ತಮ್ಮ ಜೀವನದಲ್ಲಿ ಒಮ್ಮೆ ಮಾತ್ರ ತಮ್ಮ ಒಳ್ಳೆಯತನದ ಅಧಿಕಾರವನ್ನು ಇನ್ನೊಬ್ಬರ ಮೇಲೆ ಉಪಯೋಗಿಸುತ್ತಾರೆ. ಅದೂ ಒಂದು ಒಳ್ಳೆಯ ಕೆಲಸಕ್ಕಾಗಿಯೇ. "ನಿಮ್ಮಪ್ಪ, ನಿಮ್ಮಮ್ಮ ಹೋದಮ್ಯಾಲೆ ಎಷ್ಟ್ ವರ್ಷ ಒದುಕಿದ್ರು ನಿನಗೆ ತಿಳೀದಾ ? ನಿಂಗೋಸ್ಕರ ಅಲ್ಲನ ಅವರ ಒದ್ದಾಟಯಲ್ಲ" ನಾಗಾಭಟ್ಟರ ಈ ಮಾತಿನಲ್ಲಿ ಅವರು ಜೀವಮಾನದುದ್ದ ಸಂಚಯಿಸಿದ್ದ ಅರಿವೆಲ್ಲ ಅಡಗಿದೆ. ಮುದ್ದುರಾಮ ಅವರಿಗಿಂತ ವಯಸ್ಸಿನಲ್ಲಿ, ಅನುಭವದಲ್ಲಿ ಎಷ್ಟೋ ಚಿಕ್ಕವನು. ಆದರೆ ಮುದ್ದುರಾಮನ ಜೀವನದ ಬೆಲೆಯನ್ನರಿತ ಅವರು 'ಮನೆಯ ನಿಷ್ಠಾವಂತ ಜೀತದಾಳಿನಂತೆ ವಿಧೇಯತೆ ತೋರಿಸು ತ್ತಿರುವದು' ಅವರ ಒದುಕಿನ ತಿಳುವಳಿಕೆ ಎಷ್ಟೆಂಬುದನ್ನು ಸೂಚಿಸುತ್ತದೆ. ಈ ಕಾದಂಬರಿಯ ತುಂಬೆಲ್ಲ ಹೆಣ್ಣು ಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನ ದರ್ಶನ ಹರಡಿದೆ. ಜೀವನದ ಬಗ್ಗೆ ಇರುವ ಗೌರವವೇ ಅದರ ಮೂಲ ಸೂತ್ರವಾಗಿದೆ. ತುಂಬಿದ ಬಸುರಿಯನ್ನು, ಬೆಳೆಯುವ ಮಗುವನ್ನು ನೋಡಿಕೊಂಡಂತೆ ಈ ವ್ಯಕ್ತಿಗಳೆಲ್ಲ ಜೀವನದ ಮೌಲ್ಯಗಳನ್ನು ಎಚ್ಚರದಿಂದ ಕಾಪಾಡಿಕೊಂಡಿದ್ದಾರೆ. ಸಿಡುಗು, ಬೇನೆ, ಮರಣ, ತುಂಬಿ ಬಂದ ಹೊಳೆ, ಮಲತಾಯಿಯ ಕಾಟ, ಇವುಗಳಿಂದಲೂ ಜೀವನ ಧರ್ಮ ನಾಶವಾಗುವುದಿಲ್ಲ.

ಈ ಬಗೆಯ ಜೀವನದರ್ಶನಕ್ಕೆ ತಕ್ಕಂತೆ ಈ ಕಾದಂಬರಿಯ ಬರವಣಿಗೆಯ ರೀತಿಯೂ ಇದೆ. ಇಲ್ಲಿಯ ಕಥನಮಾರ್ಗ ತೀರ ಸರಳವಾದದ್ದು. ಆದರೆ ಯಾವ ಘಟನೆಯೂ ಅನವಶ್ಯಕವಾಗಿಲ್ಲ. ನಡೆಯುವ ಘಟನೆಗಳೆಲ್ಲ ಈ ಕಾದಂಬರಿಯ ಪಾತ್ರ ಗಳ ಮೇಲೆ ಒಂದಿಲ್ಲೊಂದು ರೀತಿಯಿಂದ ಪ್ರಭಾವವನ್ನು ಬೀರುತ್ತಲೇ ಇವೆ. ಆಯಾ ಘಟನೆಗಳಲ್ಲಿ ಈ ವ್ಯಕ್ತಿಗಳ ಅಂತರಂಗ ಒಂದಿಲ್ಲೊಂದು ರೀತಿಯಿಂದ ಬೆಳಗು ತ್ತದೆ. ವರದಾಚಾರ್ಯರ ನಾಟಕ ಕಂಪೆನಿ ಬಂದಾಗ ಮುದ್ದುರಾಮ ತನ್ನ ಕಾರ್ಯೋತ್ಸಾಹವನ್ನೆಲ್ಲ ಪ್ರಕಟಿಸುತ್ತಾನೆ. ಅದೇ ಫಣಿಯಮ್ಮ ತುಂಗ-ಭದ್ರೆಯರ ಹತ್ತಿರ ಮಲಗಿಕೊಂಡು ನಾಟಕದ ಕಥೆಯನ್ನು ತಾನು ಎದ್ದ ಮೇಲೆ ತನಗೆ ಹೇಳಲು ಸೂಚಿಸುತ್ತಾಳೆ. ಆದರೆ ಇಂಥ ಸದ್ದು ಗದ್ದಲಗಳ ಸನ್ನಿವೇಶಗಳು ಇಲ್ಲಿ ಕಡಿಮೆ ಯೆಂದೇ ಹೇಳಬೇಕು. ಇಲ್ಲಿ ಹೆಚ್ಚಾಗಿ ವರ್ಣಿತವಾಗಿರುವದು ದೈನಂದಿನ ಜೀವನದ ಘಟನೆಗಳೇ. ಮತ್ತು ಅವುಗಳಲ್ಲಿ ನವೀನತೆ ಏನೂ ಇಲ್ಲ. ಆದರೆ ಕಾದಂಬರಿಯಲ್ಲಿ ಇವುಗಳ ಸದುಪಯೋಗವೇ ಆಗಿದೆ. ಕೆಲವು ವಿವರಗಳಂತೂ ಮತ್ತೆ ಮತ್ತೆ ಬಂದು

ಕಾದಂಬರಿಯ ಭಾವ ಪ್ರಪಂಚವನ್ನು ರಸಸ್ಥಾಯಿಗೆ ಒಯ್ದು ಮುಟ್ಟಿಸುತ್ತದೆ. ಗುಡಿಯಲ್ಲಿ ದಿನವೂ ಸಂಜೆ ಸುಬ್ಬಾಭಟ್ಟನ ವೀಣೆ ಕೇಳಿಸುತ್ತದೆ. ಅವನು ಬಾರಿಸುವದೂ ಅದೇ ರಾಗವೇ. ಮುದ್ದುರಾಮು ಇದನ್ನು ಹುಡುಗನಿದ್ದಾಗ ಕೇಳಿದ್ದ; ಮದುವೆಯಾದ ಮೇಲೆಯೂ ಕೇಳುತ್ತಿದ್ದ; ಮುಂದೆ ಮಡದಿಯನ್ನು ಕಳೆದುಕೊಂಡು ವಿಧುರನಾದ ಮೇಲೆಯೂ ಅದನ್ನು ಕೇಳಿದ. ತುಂಗಾನದಿ, ಕಲ್ಲುಸಾರ, ದೇವಸ್ಥಾನಗಳಂತೆಯೇ ಸುಬ್ಬಾಭಟ್ಟನ ವೀಣೆಯೂ ಒಂದು ನಿತ್ಯ ಸತ್ಯವೇ ಆಗಿದೆ. ನಶ್ವರವಾದ ಅನುಭವ ಇಂಥ ನಿತ್ಯ ತತ್ವಗಳ ಮೂಲಕ ತಾನೂ ನಿತ್ಯವಾಗುತ್ತದೆ. ಮದುವೆಯಾದ ಹೊಸದರಲ್ಲಿ ಆಗಸೆಗಿಡದ ಮೇಲೆ ಕೊಳ್ಳಿದೆವ್ವವಿದೆ ಎಂದು ಮುದ್ದುರಾಮು ಕೃಷ್ಣವೇಣಿಯನ್ನು ಹೆದರಿಸಿದ್ದ. ಮುಂದೆ ಅವಳು ಸತ್ತ ಮೇಲೆಯೂ ಆಗಸೆಗಿಡ ಇದೆ; ಕೊಳ್ಳಿದೆವ್ವದ ನೆನಪೂ ಇದೆ. ಇಂಥ ನೆನಪುಗಳು ಜೀವಂತವಾಗಿರುವದರಿಂದಲೇ ಅವನು ಮಂದಾಳನ್ನು ಮದುವೆಯಾಗಲು ಒಪ್ಪಿಕೊಳ್ಳುತ್ತಾನೆ. ಈ ವರ್ಣನೆಯ ರೀತಿ ಕೂಡ ಜಾನಪದಕತೆಗೆ ಅನುರೂಪವಾಗಿಯೇ ಇದೆ. ಈ ಮಾತು ಹೆಚ್ಚು ಅರ್ಥವಾಗಬೇಕಾದರೆ ಮಧುರಾಳ ಮದುವೆಯ ಸನ್ನಿವೇಶವನ್ನು ನೋಡಬಹುದು. ರಘುವನ್ನು ಮನಸಾರ ಪ್ರೀತಿಸಿದ್ದ ಮಧುರಾ ತನಗೆ ಹುಡುಕಿದ್ದ ಗಂಡನೊಂದಿಗೆ ಮದುವೆಯಾಗಲು ನಿರಾಕರಿಸುತ್ತಾಳೆ. ಆದರೆ ಅವಳ ಮಾತಿಗೆ ಯಾರೂ ಬೆಲೆ ಕೊಡದೆ ಮದುವೆ ನಿಶ್ಚಯವಾಗಿ ಬಿಡುತ್ತದೆ. ಇದರಿಂದ ಪಾರಾಗುವದು ಹೇಗೆಂದು ದಿಕ್ಕುಗಾಣದೆ ಮಧುರಾ ದನದ ಕೊಟ್ಟಿಗೆಯಲ್ಲಿ ಹುಲ್ಲಿನ ಬುಡದಲ್ಲಿ ಎರಡು ದಿನಗಳವರೆಗೆ ಅಡಗಿರುತ್ತಾಳೆ. ಊರೆಲ್ಲ ಹುಡುಕಿದರೂ ಅವಳ ಪತ್ತೆ ಹತ್ತದಂತಾಗಿ ಮದುವೆ ಮುರಿಯುತ್ತದೆ. ಎರಡು ದಿನಗಳಾದ ಮೇಲೆಯೇ ನಸುಕಿನ ಮುಂಗಾಪಳದಲ್ಲಿ ಶಾರದಾಬಾಯಿಯ ಕಣ್ಣಿಗೆ ಅವಳು ಬೀಳುತ್ತಾಳೆ. ಇಂಥ ಸನ್ನಿವೇಶ ನಮ್ಮ ಸುಶಿಕ್ಷಿತರ ಕಾದಂಬರಿಯಲ್ಲಿ ಬರುವುದು ಸಾಧ್ಯವಿಲ್ಲ. ಬಂದರೂ ಅದು ಕೇವಲ ವಿನೋದಕ್ಕಾಗಿಯೇ ಹೊರತು ಗಂಭೀರವಾಗಿರುವ ಸಮಸ್ಯೆಯೊಂದರ ಗಂಭೀರ ಪರಿಹಾರಕ್ಕಾಗಿಯಲ್ಲ. ಈ ಘಟನೆ ನಮ್ಮ ಹಳ್ಳಿಯ ಜಾನಪದಕತೆಗಳನ್ನು ನೆನಪಿಗೆ ತರುವಂತಿದಯಲ್ಲದೆ ಈ ಕಾದಂಬರಿಯ ಕಥಾನಕದಲ್ಲಿ ಏನೂ ವಿಸಂಗತಿ ತೋರದಂತೆ ಹೊಂದಿಕೆಯಾಗಿಬಿಟ್ಟಿದೆ. ಜೀವನದ ಯಾವ ಘಟನೆಯನ್ನು ಸ್ವೀಕರಿಸಬೇಕಾದರೂ 'ವಾಗತ್ಯ'ವೆನಿಸದಿರುವುದು ಈ ಕಾದಂಬರಿಯ ವಿಶೇಷತೆಯಾಗಿದೆ. ಮಡದಿಯನ್ನು ಕಳೆದುಕೊಂಡ ಮುದ್ದುರಾಮುನಿಗೆ ಕೆಲಸಿಗ ನರಸ ಕೂಡ ಎರಡನೆಯ ಮದುವೆಗಾಗಿ ಉಪದೇಶ ಮಾಡುತ್ತಾನೆ.

ಇಷ್ಟೆಲ್ಲ ಮಾತು ಹೇಳಿದ್ದು ಕಾದಂಬರಿಯ ಸಮರ್ಥನೆಗಾಗಿ ಅಲ್ಲ. ಒಳ್ಳೆಯ ಸಾಹಿತ್ಯಕ್ಕೆ ಯಾರ ಸಮರ್ಥನೆಯೂ ಬೇಕಾಗಿಲ್ಲ. ಈ ಕಾದಂಬರಿಯಲ್ಲಿ ಅಂಥ ಅಂತಃಸತ್ವವಿದೆ. ಪ್ರಾರಂಭದಲ್ಲಿ ಬರವಣಿಗೆ ಸಡಿಲಾದಂತೆ, ಪಾತ್ರಗಳು ದೈನಂದಿನದ

ಯಾಂತ್ರಿಕತೆಯಿಂದ ಕೂಡಿದ್ದಂತೆ ಕಂಡರೂ ಕಾದಂಬರಿಯ ಉತ್ತರಭಾಗ ತುಂಬಿಕೊಂಡು ಬಂದಿದೆ. ಆಡುನುಡಿಯ ಕಸುವನ್ನು ಹೀರಿಕೊಂಡ ಸಂಭಾಷಣೆ ಕೊನೆಕೊನೆಯಲ್ಲಿ ಕಾವ್ಯದ ಬೆಡಗನ್ನೂ ಪಡೆದಿದೆ. ಹುಡುಕುತ್ತ ಹೋದರೆ ದೋಷಗಳು ಸಿಗಬಹುದು. ಕಾದಂಬರಿಗೆ ಹೆಸರನ್ನು ತಂದುಕೊಟ್ಟ ತುಂಗ-ಭದ್ರೆಯರು ಅಷ್ಟು ಪ್ರಾಮುಖ್ಯವನ್ನು ಪಡೆದಿಲ್ಲ. ಮುದ್ದುರಾಮನಂತೆ ರಾಘುವಿನ ಜೀವನದ ಪರಿಳಿತಗಳಲ್ಲಿ ಪರಿಪಾಕದ ಕ್ರಮವಿಲ್ಲ. ಆದರೆ ಇರುವ ಒಳ್ಳೆಯ ಗುಣಗಳು ಇಂಥ ದೋಷಗಳನ್ನು ಮರೆಸುವಂತೆ ಮಾಡಿವೆ. ಆರೋಗ್ಯಕರವಾದ ಜೀವನದ ಅಂಶವೊಂದಕ್ಕೆ ಕನ್ನಡಿ ಹಿಡಿದು ಅದರ ಚೆಲುವು-ವಿಕಾರಗಳೊಡನೆಯೇ ಅದರ ತಳಹದಿಗಿರುವ ಶ್ರದ್ಧೆಯನ್ನೂ ವಿವೇಕವನ್ನೂ ಕಾಣಿಸಿಕೊಟ್ಟ ಈ ಲೇಖಕಿಯರು ನಿಜವಾಗಿಯೂ ಅಭಿನಂದನಾರ್ಹರು. ಸೂಕ್ಷ್ಮವೇದಿಯಾದ ಬರವಣಿಗೆಯಿಂದ ತಮ್ಮ ಕಲೆ ಯಾವ ಮಟ್ಟದ್ದೆಂಬುದನ್ನು ತೋರಿಸಿಕೊಟ್ಟಿದ್ದಾರೆ.

"ಬನಶಂಕರಿ–ಜಾತಕ–ಪಾತಕ ಅತೀ ನೋಡಸಬಾರ್‍ದು ಕಣೆ-ಗೋತ್ರ-ಸೂತ್ರ ನೋಡ್ಕೊಳ್ಳಿ ಸಾಕು. ನಮ್ಮಪ್ಪ ಜಾತಕ ನೋಡಿ ಹೇಳಿದ್ದೇ ಹೇಳಿದ್ದು-ಅಖಂಡ ಮುತ್ತೈದೆ ತನ ಅಂತ. ನೀವೆಲ್ಲಾ ಕಾಣ್ತಾ ಇದ್ದೀರಲ್ಲ ನನ್ನ ಬಾಳ್ನ. ಹುಡುಗ ಆರೋಗ್ಯವಂತನಾಗಿ ಲಕ್ಷಣವಾಗಿ ಇದ್ರಾತು. ಸುಮ್ಮನೆ ಲಗ್ನ ಮಾಡಿ. ಇಪ್ಪತ್ತೆಂಟು ಜನಕ್ಕೆ ಜಾತ್ಕ ತೋರಿಸಬ್ಯಾಡಿ"

(ಫಣಿಯಮ್ಮ–ಪುಟ 99)

ಇಂದಿರಾ ಕೃತಿಗಳಲ್ಲಿ ಮಲೆನಾಡ ಚಿತ್ರಣ

○
○
○ ಶ್ರೀನಿವಾಸ ಉಡುಪ

ಎಂ. ಕೆ. ಇಂದಿರಾ ಅವರ ಕಾದಂಬರಿಗಳನ್ನು ನಾವು ಓದಿದಾಗ, ಅವರ ಸಣ್ಣ ಕಥೆಗಳನ್ನು, ಲೇಖನಗಳನ್ನು ಯಾವುದೇ ಆಗಲಿ ಓದಿದಾಗ ಮಲೆನಾಡಿನ ಬಗ್ಗೆ-ಜನರ ಬಗ್ಗೆ-ಹಿಂದಿನ ಬದುಕು ಬಗ್ಗೆ–ಪರಿಸರದ ಬಗ್ಗೆ–ಪ್ರತಿ ಒಂದನ್ನೂ ನೋಡುತ್ತಾ ಹೋಗುತ್ತೇವೆ. ಅವರು ಹೇಳುವುದು ಯಾವಾಗಲು ಜೀವನವನ್ನು ಕುರಿತು-ಮನುಷ್ಯನನ್ನು ಕುರಿತು-ಮನುಷ್ಯನ ಹಿಂದಿನ ಮೌಲ್ಯಗಳನ್ನು ಕುರಿತು-ಅವರ ಉತ್ತಮ ಕೃತಿಗಳು ಸಾಮಾನ್ಯ ಜನರನ್ನು, ಅವರ ಬದುಕನ್ನು-ಮಲೆನಾಡನ್ನು ಕುರಿತವುಗಳು.

'ತಾಪದಿಂದ ತಂಪಿಗೆ' 'ಸದಾನಂದ' 'ಮಧುವನ' 'ತುಂಗ-ಭದ್ರ' 'ಕೂಚುಭಟ್ಟ' 'ಫಣಿಯಮ್ಮ' ಕಾದಂಬರಿಗಳು-ವ್ಯಕ್ತಿಗೂ-ಅವನು ವಾಸಿಸುವ ಮಲೆನಾಡಿಗೂ ಇರುವ ಸಂಬಂಧ, ಸಾಂಸ್ಕೃತಿಕ ಚೌಕಟ್ಟನ್ನು ಅವಲಂಬಿಸಿರುತ್ತದೆ. ಜೀವನಾಸಕ್ತಿಯನ್ನು ಕಳೆದುಕೊಳ್ಳದೆ ತಟಸ್ಥ ಚಿತ್ತದಿಂದ ಜೀವನಾನುಭವವನ್ನು ಅಳೆದು ತೂಗಿ ಬೆಲೆ ಕಟ್ಟುವ, ಒಂದು ಅನುಭವಕ್ಕೆ ಇನ್ನೊಂದು ಅನುಭವ ಪ್ರಯೋಗವಾಗುವಂತೆ ಜೋಡಿಸಿ–ಅವುಗಳ ಪರಸ್ಪರ ಪ್ರತಿಕ್ರಿಯೆಯಲ್ಲಿ ಸತ್ಯ ಶಾನಾಗಿ ಮೈದೋರುವಂತೆ ಅವರ ಕಾದಂಬರಿಗಳಲ್ಲಿ ಇದ್ದು-ಮಲೆನಾಡಿನ ಹೊಳೆ–ಬೆಟ್ಟ-ಕಾಡು, ಮನೆ-ತುಂಬಿದ ದೊಡ್ಡ ಸಂಸಾರ, ಅಲ್ಲಿಯ ಕೃಷಿಕರ ಕೃಷಿ ಅಲ್ಲದೇ ಇತರೆ ಕಾರ್ಮಿಕರ, ಎಲ್ಲಾ ಜಾತಿಗಳ, ಪ್ರಾಣಿಗಳ ಕಲೆಗಳ ಆಗಿನ ಜೀವನಗಳು ಹೀಗೆ ಒಂದೊಂದಾಗಿ ಸಾಧ್ಯವಾದಷ್ಟು ಮಲೆನಾಡಿನ ಚಿತ್ರಣ-ಇಂದಿರಾ ಅವರು ತಮ್ಮ ಹಲವಾರು ಕೃತಿಗಳಲ್ಲಿ ದಾಖಲಾಯಿಸಿದ್ದಾರೆ.

ಸುಂದರವಾಗಿ ಬರೆಯಬೇಕು, ಆಕರ್ಷಕವಾಗಿ ಕಾಣಬೇಕು ಎನ್ನುವ ಚಪಲವಿಲ್ಲದೆ ಆಯ್ದುಕೊಂಡ ವಿಷಯಗಳಲ್ಲಿ ಏಕಾಗ್ರ ಮನಸ್ಕರಾಗಿ ತಮ್ಮ ಅನುಭವಗಳನ್ನು ಸೃಷ್ಟಿಸುತ್ತಾರೆ. ಅವರದು ವಾಸ್ತವ ಮನದ ದೊಡ್ಡಸ್ತಿಕೆ. ನಮ್ಮ ಸಾಂಸ್ಕೃತಿಕ ಸಾಮಾಜಿಕ ಸನ್ನಿವೇಶದ ಎಲ್ಲಾ ವೈರುಧ್ಯಗಳನ್ನು ಗಮನಿಸಿ, ಸಂಸ್ಕೃತಿಯ ಜತೆ ಪ್ರೀತಿ ದ್ವೇಷದ ಸಂಬಂಧ ಚಿತ್ರಿತವಾಗುತ್ತದೆ.

ಫಣಿಯಮ್ಮ–ಒಂದು ವಿಶಾಲವಾದ ಹರವಿನಲ್ಲಿ ಒಂದು ಜನಾಂಗದ ಏಳುಬೀಳುಗಳನ್ನು, ಅಷ್ಟು ಮಲೆನಾಡಿನ ಪರಿಸರ, ಬದುಕುಗಳನ್ನು, ಆಳವಾದ ಜೀವನಾನುಭವ ಮತ್ತು ಸಮೃದ್ಧಿ ವಿವರಗಳಿಂದ ಇಂದಿರಾ ಅವರು ಚಿತ್ರಿಸಿದರು. ಮನುಷ್ಯನ ಇರುವಿಕೆಯನ್ನು ನಾಗರಿಕ ಸಂಪರ್ಕಕ್ಕೆ ಅವನು ಒಗ್ಗಿಕೊಂಡದ್ದನ್ನು ಅವನ ಸಮಾಜಿಕ ಸಂಬಂಧಗಳಲ್ಲಿ ದೈನಂದಿನ ಜೀವನದ ಪರಿಚಿತ ವಿವರಗಳನ್ನು ಪೂರ್ಣವಾಗಿ, ಅಧಿಕೃತವಾಗಿ ಚಿತ್ರಿಸಲು ಪ್ರಯತ್ನಿಸಿ ಇಂದಿರಾ ಯಶಸ್ವಿಯಾದರು. ವಾಸ್ತವ ಪಥದ ಉತ್ತಮ ಲಕ್ಷಣಗಳನ್ನು ಅವರು ಬೀರಿದರು.

ಒಂದು ತಪ್ಪಲೆ ಅನ್ನ ಬೆಂದಿದಿಯೆ ಎಂದು ತಿಳಿಯಬೇಕಾದರೆ, ಸಟಕದಲ್ಲಿ ತೆಗೆದು ಎರಡು ಅಗಳು ಬೆಂದಿದೆಯ ನೋಡಿ, ಪೂರ್ತಿ ಅನ್ನವಾಯಿತೆಂದು ತಿಳಿಯುವಂತೆ ನಾನು ಈ ಲೇಖನದಲ್ಲಿ 'ಮಧುವನ' 'ಫಣಿಯಮ್ಮ' ಕಾದಂಬರಿ ಆರಿಸಿ, ಇಂದಿರಾ ಅವರ ಕೃತಿಗಳಲ್ಲಿ ಮಲೆನಾಡಿನ ಚಿತ್ರಣ ದಾಖಲಾಯಿಸಲು ಪ್ರಯತ್ನಿಸಿದ್ದೇನೆ. ಅವರ ಸಮಗ್ರ ಕೃತಿಗಳು ಇಡೀ ಬದುಕಿಗೆ, ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿದ್ದರು, ಮಲೆನಾಡಿನ ಚಿತ್ರಣ ಒಳಗೊಂಡೆ ಕಥೆ, ಹಂದರ, ನಿರೂಪಣೆ, ಪಾತ್ರಗಳು ಅಥವ ಎಲ್ಲೋ ಒಂದು ಕಡೆ ಮಲೆನಾಡು ಚಿತ್ರಿತವಾಗಿರುವುದು ಮರೆಯುವಂತಿಲ್ಲ.

ಮಲೆನಾಡಿನ ಹಿರಿಯ ಹೆಂಗಸಿನ ಆಡುಮಾತು ಎಷ್ಟೊಂದು ನೈಜವಾಗಿ ಮೂಡಿದ್ದು ಹೀಗೆ—"ಇಶ್ಶೀ, ಯಂತದ ಅಪ್ಪ ಬೆಳಗಾತ ನಿನ್ನ ಪುರಾಣ ? ಪಾಪದ್ದು, ಮನೆ ಒಳಗೆ ಇದ್ದ ಹೆಣ್ಣಲ್ಲವಾ ಇನ್ನು ಮ್ಯಾಲೆ ಎಲ್ಲ ತಿಳಕಾತದೆ. ಈಗ ಎಂತ ನಿನ್ನ ಜತಿಗೆ ಕುಣಿಬಕಾ ಅದು ? ನಿನಗೆ ಎರಡು ಲಗ್ನ ಆದರೂ ಇನ್ನೂ ಬಾಲ ಆಡಿದ ಹಾಂಗೆ ಆಡ್ತಿಯಲ್ಲ ? ಅದಕ್ಕೇ ನಾಚ್ತದೆ ಆ ಹೆಣ್ಣು ನಾಕ್ದಿನ ಹೋದರೆ ಎಲ್ಲಾ ಒಗ್ಗುದಿಲ್ಲವಾ". ಮಲೆನಾಡಿನಲ್ಲಿ ಗಿಣಿಯ ಬಗ್ಗೆ ಆದರ ಜಾತಿ ಬಗ್ಗೆ ಸದಾನಂದ, ಕಮಲಳಿಗೆ ನಡೆದ ಸಂಭಾಷಣೆ—'ಗಿಣಿ ಹೆಸರು ತೋತಾ ಏನಿಲ್ಲ,

ನೀವು ಅದನ್ನು ತೋತಾ ಅಂತೀರಲ್ಲ, ಅದು ಗಂಡೋ ಹೆಣ್ಣೋ ? ಹೇಗೆ ಗೊತ್ತಾಯಿತು ನಿಮಗೆ ?'

'ಆಯ್ತು ನನಗಿಂತ ಹುಷಾರಿದ್ದೀ ನೀನು. ಆದರೂ ನನಗೆ ತಿಳಿದಿದ್ದು ಹೇಳುತ್ತೇನೆ. ಹೆಣ್ಣು ಗಿಳಿ ಹೆಚ್ಚು ಹಸಿರಾಗಿರುತ್ತಂತೆ ಮತ್ತೆ ಅದರ ಕೊಕ್ಕು ಅಚ್ಚು ಕೆಂಪಾಗಿರುವಂತೆ-ಗಂಡುಗಿಳಿಯ ಬಣ್ಣ ಸ್ವಲ್ಪ ಮಾಸಲು ಹಸಿರು. ಕೊಕ್ಕು ಮಾಸಲು ಕೆಂಪು. ಹೆಣ್ಣೆಂದು ಗುರುತಿಸೋಣ ಯೆಂದರೆ ನಿಮ್ಮಂತೆ ಅದಕ್ಕೆ ತಲೆಯಲ್ಲಿ ಕೂದಲಿಲ್ಲ. ಮೊಲೆಗಳಿಲ್ಲ. ಗಂಡನ್ನೋಣವೆಂದರೆ ದಾಡಿ, ಮೀಸೆಗಳಿಲ್ಲ ಅಂತಾ ಗುರುತಿಸಲು ಬೇರೆ ವಿಧಾನಗಳಿವೆ ಅನ್ನು, ಅಸಹ್ಯದ ಅವಸ್ಥಾಂತರಗಳನ್ನೆಲ್ಲ ಮನುಷ್ಯರಿಗೆ ಕೊಟ್ಟು, ಸ್ವಚ್ಛ ಗಾಂಭೀರ್ಯವನ್ನಷ್ಟೇ ಪಶುಪಕ್ಷಿಗಳ ಪಾಲಿಗೆ ಬಿಟ್ಟಿದ್ದಾನೆ ಭಗವಂತ'.

ಮಲೆನಾಡಿನ ಹೆಂಗಸರಿಗೆ ಮನೆ ಬಿಡೋದು ಸಾಧ್ಯವಾಗಲ್ಲಾ, ಗಂಡಸರು ಒಪ್ಪಿಗೆ ಕೊಟ್ಟರೂ, ಅವರಿಗೆ ಕೊಟ್ಟಿಗೆ ದನಕರುಗಳು ಒಪ್ಪಲಾರವು ಆ ಬಗ್ಗೆ— ಅಚ್ಚಮ್ಮ ಯಂಟಮ್ಮನಿಗೆ ಹೇಳಿದರು" 'ಈ ಸಂಸಾರ ಎಂದು ಇದ್ದುದ್ದೇ ನಡೀರಿ ನೀವು, ಸಾಕ್ಷಿನ ಇದ್ದು ಬರಾಣ ಅಲ್ಲಿ' ಪುಟ್ಟಮ್ಮ ತಿರುಗಿ ನಿಂತರು. 'ನಾಚಿಕ್ಕೇಡು ಕಣೇ ಅಚ್ಚಮ್ಮ-ಮನೇಲಿ ದನಕರುಗಳು ಅದಾವೆ ಅವೆಲ್ಲ ಬಿಟ್ಟು ನಾನು ಬರೂದಾ ? ನಂಗೇನಾಗಿದೆ ಧಾಡಿ ನಾ ಇರ್ತೀನಿ ಮನೇಲಿ, ನೀವೆಲ್ಲ ಹೋಗಿ ಬನ್ನಿ- ಮನೆ ಬಾಗ್ಲು ಯಾಕೆ ಹಾಕ್ಬಕೂ ? ನಂಗೇನು ದಿಗಿಲಾ ? ಭಯವಾ ಈ ಮನೇಲಿ ?' ಸದಾನಂದ ವಿಧವೆಯಾದ ಕಮಲನ್ನ ಮದುವೆಯಾಗಿ ತನ್ನ ಮೊದಲ ಹೆಂಡತಿ ರಮಾಳೇ ಕಮಲ ಆಗಬೇಕೆಂದಾಗ-ಕಮಲ ಹೇಳುವ ಸಂಪ್ರದಾಯಸ್ಥ ಮಲೆನಾಡ ಹೆಣ್ಣಿನ ಮಾತು ಇದು- 'ನಾನೇ ನಿಮ್ಮ ಕೈಲಿದ್ದೇನೆ-ಘಟ್ಟದಲ್ಲಿ ಬಿದ್ದೋಳನ್ನ ತಂದು ಬೆಟ್ಟದ ಮೇಲೆ ಕೂರಿಸಿದ್ದೀರಿ. ನಿಮ್ಮ ಘನ ವಂತಿಗೆಗೆ ಕುಂದು ಬರದಂತೆ ನಡೆದು ಕೊಳ್ಳುವ ಯೋಗ್ಯತೆ ನನಗೆ ದಯಪಾಲಿಸಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.'

ಈ ಕಾದಂಬರಿಯಲ್ಲಿ-ಹೇಮಾವತಿ ನದಿ, ಅಲ್ಲಿನ ಒಂದುಹಳ್ಳಿ ದುಂಡು ಮಲ್ಲಿಗೆಯ ನಿಸರ್ಗ, ಚಿಕ್ಕಮಗಳೂರಿನ ಕಾಫಿ ತೋಟದ ವರ್ಣನೆ–ಕಾರವಾರದ ಕಡಲು ತೀರದ ಸೊಬಗು–ಮಲೆನಾಡಿನ ಅಡಿಗೆ-ಉಡಿಗೆ–ಮಾತುಗಳು, ಸಂಪ್ರದಾಯ, ಹೀಗೆ ಎಲ್ಲವನ್ನು ಇಂದಿರಾ ಅವರು ದಾಖಲಿಸುತ್ತಾರೆ.

ಸದಾನಂದ ಹೆಂಡತಿಯಾದ ಕಮಲಳಿಗೆ ನಿಸರ್ಗ ಹೀಗೆ ಪರಿಚಯಿಸುತ್ತಾನೆ— 'ಆದರೆ ನಿಸರ್ಗ ಮನುಷ್ಯನಿಗೆ ಮಾತುಕಲಿಸಿ ವಿಪರೀತ ಬುದ್ಧಿ ಕೊಟ್ಟು, ಸ್ವಾತಂತ್ರ್ಯವನ್ನು ಮಾತ್ರ ಕಸಿದುಕೊಂಡಿದೆ. ಅದಕ್ಕೇ ಮನುಷ್ಯ ತನಗೆ ಬೇಕಾದ ಸುಖವನ್ನೆಲ್ಲ

ಕಳ್ಳತನದಿಂದ ಪಡೆಯಲು ಹೋರಾಡುತ್ತಾನೆ-ಆದೇ ಪ್ರಾಣಿ ಜಾತಿ ನೋಡು-ಯಾವ ಕಟ್ಟುನಿಟ್ಟಿಲ್ಲ. ಸ್ವತಂತ್ರವಿದೆ. ಆದರೂ ಅವು ಮೀರಿ ನಡೆಯುವುದಿಲ್ಲ.' ಸದಾನಂದನ ಎಸ್ಟೇಟಿನ ವರ್ಣನೆ ಇದು : ಕಾಫಿ ತೋಟಗಳ ನಡುನಡುವೆ ಕೊಡವರ ಆಳುಗಳು. ಅವರ ಗುಡಿಸಲುಗಳು. ಅದರ ಮುಂದೆ ಒಂದಿಷ್ಟು ಅಂಗಳ-ತರಕಾರಿ ಚಪ್ಪರಗಳು. ಜತೆಗೆ ಕೋಳಿಗಳ ಗೂಡು-ಕುರಿ ಹಂದಿಗಳು ಎಲ್ಲಿ ಇರುತ್ತಿದ್ದವು. ಒಂದು ದಿನ ಎಲ್ಲಕ್ಕಿಂತ ಎತ್ತರವಾದ ಜಾಗಕ್ಕೆ ಕರೆದೊಯ್ದರು. ಅಲ್ಲಿ ಸಿಮೆಂಟಿನ ಒಂದು ವಿಸ್ತಾರವಾದ ಮಂಟಪ. ಆದರಲ್ಲಿ ನಾಲ್ಕಾರು ಸಿಮೆಂಟಿನ ಆಸನಗಳು-ಅಲ್ಲಿ ಕುಳಿತರೆ ಸದಾನಂದನ ಸಮಗ್ರ-ಕಾಫಿ-ಟೀ-ತರಕಾರಿ-ತೆಂಗು, ಹಲಸು, ಬಾಳೆ ತೋಟಗಳು-ದೂರದ ಕೆರೆ-ತೊರೆಗಳು, ಬಾಳೆಹೊನ್ನೂರು ಮಧುವನದ ಕವಲು ರಸ್ತೆ-ಸುತ್ತಲಿನ ರಮ್ಯ ಸಂಪತ್ತು-ಸೂರ್ಯೋದಯ, ಸೂರ್ಯಾಸ್ತ ಎಲ್ಲವು ಕಾಣುತ್ತದೆ. ಬೇಸಿಗೆಯಲ್ಲಿ ಅಲ್ಲಿ ಬಂದು ಕುಳಿತರೆ ಎಂತಹ ಸೆಖೆಯಲ್ಲು ತಂಗಾಳಿ ಬೀಸುತ್ತದೆ...

ಎಂ. ಕೆ. ಇಂದಿರಾ ಅವರು-ಮನುಷ್ಯನ, ಗಂಡು ಹೆಣ್ಣುಗಳ ಸಂಬಂಧದೊಡನೆ ಮಧುರ ಬಾಂಧವ್ಯ ಬೆಸೆಯುತ್ತಾ ಮಲೆನಾಡಿನ ಎಲ್ಲಾ ಬಗೆಯ ಚಿತ್ರಣ ಮಾಡುತ್ತಾ ಹೋಗುತ್ತಾರೆ. ಸದಾನಂದ-ಕಮಲಳನ್ನು ಮೋಟಾರು ಬೈಕಿನಲ್ಲಿ ಮೊದಲ ಸಾರಿ ಸವಾರಿ ಮಾಡಿ, ತಂತ್ರಿ ಇದ್ದ ಹಳ್ಳಿಗೆ ಬಂದಾಗ ಆ ಹಳ್ಳಿ, ಮನೆ ಚಿತ್ರಣ ಇದು : ....ಕಿಕ್ಕಿರಿದ ಮಕ್ಕಳು-ದೊಡ್ಡ ಸಂಸಾರದ ತಂತ್ರಿ ಮನೆ. ಅಂಗಳ-ಮನೆ ಶುಭ್ರವಾಗಿತ್ತು. ಹಣ್ಣು-ಹೂವು, ದವಸ ಧಾನ್ಯ ಸಸ್ಯ ಸಮೃದ್ಧವಾದ ಹಳ್ಳಿ. ಮನೆಯ ಕರಾವು, ಹಾಲು ಹೈನಿಗೆ ತಕರಾರಿಲ್ಲ. ಅಡಿಕೆ ತೋಟದ ಬದಿಯಲ್ಲೋ ಕನ್ನಡಿಯಂಥ ಕೆರೆ. ಕೆರೆಯಲ್ಲಿ ಕೆಂದಾವರೆ ಅರಳಿದ್ದನ್ನು ಕಮಲ ಮೊದಲ ಬಾರಿ ಅಲ್ಲಿ ನೋಡಿದಳು. ಅಬ್ಬೆಕೊಪ್ಪ ಕೂಡ ಸುಂದರವಾದ ಹಳ್ಳಿ ಅನ್ನಿಸಿತು ಅವಳಿಗೆ. ಅಲ್ಲಿ ಅವರು ದೊಡ್ಡ ತಂಬಿಗೆ ಬಿಸಿ ಬಿಸಿ ಸ್ಟ್ರಾಂಗ್ ಕಾಫಿ ಕುಡಿದು-ಮೊಸರವಲಕ್ಕಿ—ಸೇವನೆ, ಬಾಳೆ ಎಲೆ ಸಿಗತೆಯಲ್ಲಿ ಅವರಿಗಾಯಿತು. ಮೊಸರವಲಕ್ಕಿ ಮಾವಿನ ಮಿಡಿ ಉಪ್ಪಿನಕಾಯಿ ಎಷ್ಟೊಂದು ರುಚಿ. ಅವರು ಮತ್ತೆ ಮಕ್ಕಳ ಜತೆ ಮಕ್ಕಳಾಗಿ ಪನ್ನೇರಲ ಮರವೇರಿ ಹಣ್ಣು ಕಿತ್ತಿದ್ದು, ತಿಂದದ್ದು ಅಬ್ಬೆಕೊಪ್ಪವೆಲ್ಲ ನೋಡಿ ಬಂದರು. ಆಳುಗಳೆಲ್ಲ ಅವರೆದುರಾದಾಗ ಅಡ್ಡ ಬಿದ್ದು ಗೌರವ ಸೂಚಿಸಿದ್ದರು. ಹುಲ್ಲಿನ ಬಣವೆ-ಮದುವೆ ನಿಶ್ಚಯವಾಗಿದ್ದು-ಬಣವೆ ಹತ್ತಿ ಇಳಿದಾಗ ಅವರ ನೆಂಟರಾಗಿದ್ದು, ದೊಡ್ಡ ಅಡಿಗೆಯ ಮನೆ-ಕುಡಿ ಬಾಳೆ ಎಲೆಗಳನ್ನು ಸಾಲಾಗಿ ಹಾಕಿ ಪಾಯಸ ಬಡಿಸಿದ್ದು-ಗಸಗಸೆ ಪಾಯಸ, ಒತ್ತು ಶಾವಿಗೆ-ಎರಡು ಬಗೆ ಪಲ್ಯ, ಗೊಜ್ಜು ಇವೆಲ್ಲ ಮಲೆನಾಡಿನ ಅಡಿಗೆ, ಗಂಡಹೆಂಡಿರು ಮೊದಲು ಬಂದಾಗ ಔತಣ-ಇದು ಮಲೆನಾಡಿಗರ ಸಂಪ್ರದಾಯ-ಹಾಗೂ ತಂತ್ರಿ ಮನೆಯ ಸಂಭ್ರಮ-ಉಪಚಾರ, ಬಡಿಸಾಟ ಸಾಕು

ಅಂದರೂ ಮತ್ತಷ್ಟು ಬಡಿಸುವ ಬಗೆ, ತಾಂಬೂಲ....ಇಂದಿರಾ ಅವರು ಮಲೆನಾಡಿನ ಜೀವನ ಒಂದಿಷ್ಟೂ ಬಿಡದೇ ಚಿತ್ರಿಸುತ್ತಾರೆ.

ಬಾಯಿ ಕಿವಿ ಇಲ್ಲದ ಅಂಬಕ್ಕನ ಬಗ್ಗೆ ಜಲಜಾಕ್ಷಮ್ಮ ಹೇಳುವುದು ಹೀಗೆ : "ಅಂಬಕ್ಕಾನಾ ಅದು ಮನುಷ್ಯರ ಹಾಂಗೆ ಕೆಲಸ ಮಾಡ್ತಾದ ? ಯಂತ್ರದ ಹಾಗೆ ಮಾಡ್ತದೆ, ಚುರುಕು ಅಂದರೆ ಪಾದರಸ. ನಿಮ್ಮ ಮಾವ, ಅಂಬಕ್ಕನ ತಂದು ಈ ತಂತ್ರಿಗೆ ಮದುವೆ ಮಾಡಿದಾಗ ಇವನು ಒಂದು ವರ್ಷ ಮನೆ ಬಿಟ್ಟು ಹೋಗಿ ಕುಮಟೆಯಲ್ಲಿ ಹೋಟೆಲ್ ಲೋಟ ತೊಳೆಯುತ್ತಿದ್ದ. ನಿಮ್ಮ ಮಾವ ಒಮ್ಮೆ ಹೋಗಿ ಎರಡು ಒದ್ದು ಎಳೆದುಕೊಂಡು ಬಂದರು. ಹೆಂಡತಿ ಬೇಡವೆಂದವ ಇವ. ಈಗ ನೋಡು ಮನೆ ತುಂಬ ಮಾಣಿಗಳು, ಹೆಣ್ಣುಗಳು. ಎಷ್ಟು ಚಂದದ ಸಂಸಾರ. ಬಾಯಿ, ಕಿವಿ, ನೆಟ್ಟಗಿದ್ದವರು, ಅಂಬಕ್ಕನ ಹಾಗೆ ಸಂಸಾರ ಮಾಡಿದ್ದನ್ನ ನೀನು ಕಂಡಿದ್ದುಂಟಾ ಕಮಲಾ, ಇವರು ಯಾವತ್ತೂ ನಿಮ್ಮಲ್ಲೆ ಸೇತಾಡುವವ. ಅವ ಇಲ್ಲ ದಿದ್ದರೆ ನಡೆಯಲಿಕ್ಕಿಲ್ಲ ಅಸ್ನು. ಎಲ್ಲಾ ಖಾರ ಬಾರು ಅವನದೇ. ನಮ್ಮ ಆಸ್ತಿ ಪಾಸ್ತಿ ಸಂಗತಿ ಅವನಿಗೆ ಗೊತ್ತಿರುವಷ್ಟು ನನಗೆ, ಅಪ್ಪಿಗೆ ಎಲ್ಲಿ ಗೊತ್ತಿದೆ ? ಅವ ಇದ್ದರೆ ನಿಮಗೆ ಹತ್ತು ಜನ ಇದ್ದ ಹಾಂಗೆ. ಹಾಗಂತ ಮನೆಗೆ ಹೋಗಲು ನಾವು ಅಡ್ಡ ಮಾಡಿದ್ದಿಲ್ಲಾ. ಆದರೆ ಅವನೇ ಹೋಗುವುದಿಲ್ಲ. ಇದಕ್ಕೆ ನಾನೇನು ಮಾಡುವುದು ? ಮತ್ತೆ ನಿದ್ರೆ ಮಾಡದ ದಿನ ರಾತ್ರಿ ಹತ್ತು ಗಂಟೆಯಾದರೂ ಸಮ ಅಂಬಕ್ಕನ ಗ್ಯಾಪಕ ಬರ್ತದೊ ಯಂತ ಮಣ್ಣೋ ? ಇದ್ದಿದ್ದ ಹಾಗೆ ಸೈಕಲ್ ಹತ್ತಿ ಮನೆಗೆ ಹೋಗುವುದುಂಟು. ಮತ್ತೆ ಬೆಳಗ್ಗೆ ನಾನು ಕಣ್ಣು ಬಿಡುವಾಗ ಅವನು ಇಲ್ಲಿ ಹಾಜರು'

ಮಲೆನಾಡಿನ ತೋಟದ ಮನೆಯವರಲ್ಲಿ ಊಟ ಇಟ್ಟುಕೊಂಡರೆ ಹತ್ತಾರು ಹಳ್ಳಿಜನ ಬರುವುದು, ಸೊಗಸಾದ ಊಟ, ಮಾತುಕತೆ ಇತ್ಯಾದಿ...ಎಲೆ ಹಾಕಿ ಬಡಿಸಿಯಾಗಿತ್ತು. ಮನೆಯ ಹಜಾರ, ಊಟದ ಮನೆ ಎಲ್ಲಾ ಭರ್ತಿ. ಕಾಯಿ ಹೋಳಿಗೆ, ಅಂಬೊಡೆ, ಹುಳಿಯನ್ನ, ಪಾಯಸದ ಊಟ ಬೇಕಂತಲೇ ನಾಲ್ಕು ಜೋಡಿ ದಂಪತಿಗಳನ್ನು ಒಂದೆ ಸಾಲಿನಲ್ಲಿ ಕೂರಿಸಿದ್ದರು. ಮುಕ್ತಾ ಯಥಾ ಪ್ರಕಾರ ನಿರ್ಭಿಡೆಯಿಂದ ಪದ್ಮಾಸನ ಹಾಕಿ ಕೂತಳು. ಮಾತು ನಗು ಹಲ್ಲೆ ಗುಲ್ಲುಗಳೊಡನೆ ಊಟವಾಯಿತು. ಇಲ್ಲಿ ಬಚ್ಚ ಸರ್ವ ಸ್ವತಂತ್ರ, ಅವನೇ ಎಲ್ಲಾ ಕೆಲಸಗಳಿಗೆ ಮುಂದಾಳು. ಎಲ್ಲರೂ ಬಚ್ಚನನ್ನು ಕರಿಯುವರೇ. ಪುಟ್ಟಮ್ಮನವರ ಹೃದಯ ಹಿಗ್ಗಿನಿಂದ ಬಿರಿಯುವಂತಾಗಿತ್ತು. ತನ್ನ ಅಣ್ಣ ಮತ್ತು ಕುಟುಂಬದ ಮೇಲೆ ಬೆಟ್ಟದಂತೆ ಎದ್ದು ಬಂದ ಕಷ್ಟಗಳು ಈಗ ಹತ್ತಿಯಂತೆ ಹಾರಿ ಹೋಗಿ

ಎರಡು ಕುಟುಂಬಗಳಲ್ಲೂ ಹಾಲು ಜೇನು ಹರಿಯುತ್ತಿತ್ತು...ಕೌಟುಂಬಿಕ ವಿವರಣೆ ಒಡನೆ ಮಲೆನಾಡಿನವರ ಆತಿಥ್ಯ-ಅಡಿಗೆಗಳ ವೈವಿಧ್ಯ ಬಡಿಸುವವನ ಆತ್ಮೀಯತೆ-ಮಾತಿನೊಡನೆ ಮಲೆನಾಡಿನ ಬೆಟ್ಟ-ಹಾಗೂ ಹತ್ತಿಯ ಬಳಕೆ ಎಂ. ಕೆ. ಇಂದಿರಾ ಅವರ ಕಾದಂಬರಿಯ ನಿರೂಪಣೆಯ ವಿಶೇಷತೆಯೇ ಇದಾಗಿದೆ. ಫಣಿಯಮ್ಮ ಕಾದಂಬರಿ ಉದ್ದಕ್ಕೂ ಮಲೆನಾಡಿನ ಚಿತ್ರ ಭವ್ಯವಾಗಿ ಕಾಣಿಸಿವೆ.

1840ರಲ್ಲಿ ಇದ್ದ ಮಲೆನಾಡಿನ ಚಿತ್ರ, ಅದು ಕೂಡ ದಟ್ಟವಾದ ಕಾಡು, ಮಳೆ ಬಿಸಿಲು,ಚಳಿ ಇದ್ದಾಗ ಸಂಚಾರ ಮಾರ್ಗ ನಾಗರಿಕತೆಯ ಯಾವ ಸಾಧನೆಗಳು ಇಲ್ಲದಾಗ ಚಿತ್ರಿಸಿದ ಒಂದು ಸಮರ್ಥ ಕಾದಂಬರಿ ಫಣಿಯಮ್ಮ. ಎಂ. ಕೆ. ಇಂದಿರಾ ಅವರ ಕಾದಂಬರಿಗಳಲ್ಲಿ,ಮಲೆನಾಡಿನ ಚಿತ್ರಗಳನ್ನು ಗುರುತಿಸ ಬೇಕಾದರೆ ಈ ಕಾದಂಬರಿ ಒಂದೇ ಸಾಕು. ಮಲೆನಾಡಿನ ಜನರ ಕಷ್ಟ ನಷ್ಟಗಳು, ನೈಸರ್ಗಿಕತೆ, ಪ್ರಾಮಾಣಿಕತೆ, ವೈಭವ, ಉಡಿಗೆ ತೊಡಿಗೆ, ಜನರನ್ನು ಅವಲಂಬಿಸಿದ ಪ್ರಾಣಿ ಪ್ರಪಂಚ ಎಲ್ಲ ಇಲ್ಲಿ ಚಿತ್ರಿತವಾಗುತ್ತದೆ. ಅಂಚೆ ಮನೆಯೆಂದರೆ ಹದಿನಾರು ಕಂಬದ ತೊಟ್ಟಿಯಮನೆ-ನಾಡು ಹೆಂಚಿನ ಮನೆ, ಕೇವಲ ಐದೇ ಐದು ಬ್ರಾಹ್ಮಣರ ಮನೆಗಳನ್ನು ಪಡೆದ ಆ ಹೆಬ್ಬಲಿಗೆ ಗ್ರಾಮಕ್ಕೆ ಇದೇ ಅತಿ ದೊಡ್ಡಮನೆ ಮತ್ತು ಹೆಂಚಿನಮನೆ. ಉಳಿದ ನಾಲ್ಕು ಮನೆಗಳು ಹುಲ್ಲು ಮಾಡಿನವು !

ಅಂಚೆ ಮನೆಯಲ್ಲಿ ಎಷ್ಟು ಜನ ಇದ್ದರೆಂಬುದು-ಮನೆಯುವರಿಗಾಗಲಿ, ನೆರೆ ಹೊರೆಯವರಿಗಾಗಲಿ ಗೊತ್ತಿರಲಿಲ್ಲ. ಮನೆಯ ಜನರನ್ನು ಎಣಿಸುವುದಾಗಲಿ, ಮಕ್ಕಳನ್ನು ಎಣಿಸುವುದಾಗಲಿ ಆಗಿನ ಕಾಲಕ್ಕೆ ಮಹಾ ಅಪರಾಧ-ಪಾಪಕರವೆನಿಸಿತ್ತು.

ಮಲೆನಾಡಿನ ಹಳ್ಳಿಮನೆ, ತೀರ್ಥಹಳ್ಳಿಯ ಸಮೀಪ ಎನ್ನಬಹುದು. ಸಮೃದ್ಧವಾಗಿ ಗದ್ದೆ, ತೋಟ-ಕಬ್ಬಿನ ಗದ್ದೆ, ಬಾಳೆ-ತೆಂಗು, ತರಕಾರಿ, ಹಣ್ಣು, ಹೂವು ಸಕಲವು ಬೆಳೆಯುವ ಫಲವತ್ತಾದ ಭೂಮಿ-ಮನೆಯ ಜನರಿಗಿಂತ ದನ ಕರುಗಳು ಮತ್ತೂ ಹೆಚ್ಚು. ಆಳು ಕಾಳುಗಳ ಮನೆ ಸ್ವಲ್ಪದೂರ,

ಇದು ಅಂಚೆಮನೆ ತಮ್ಮಯ್ಯನ ಮನೆ ಜನರ ವರ್ತನೆ: ಆಗಿನಕಾಲದಲ್ಲಿ ಇದ್ದ ಪರಿಸರ, ಸಂಪ್ರದಾಯದ ಬಗ್ಗೆ :

ಆಗಿನ ಕಾಲದಲ್ಲಿ ಬೇರೂರಿದ್ದೆಂದರೆ ವಿಪರೀತ ಮಡಿವಂತಿಕೆ, ಅದರ ಜತೆಗೆ ಸಂಪ್ರದಾಯ, ಶಾಸ್ತ್ರ ಮತ್ತು ಹೆಚ್ಚೆಂದರೆ ಕೂಪ ಮಂಡೂಕತ್ವ-ಏನಾದರು ಆದರೆ

ಬ್ರಾಹ್ಮಣರೆಲ್ಲರು ಕಾಲು ನಡಿಗೆಯಲ್ಲಿ ಮೂವತ್ತು ಮೈಲಿ ಶೃಂಗೇರಿಗೆ ಬರಬೇಕು. ಶ್ರೀ ಶ್ರೀ ಶ್ರೀ ನರಸಿಂಹಭಾರತಿಸ್ವಾಮಿಗಳಿಗೆ ತಿಳಿಸಬೇಕು. ಮಾತೆತ್ತಿದರೆ ಬಹಿಷ್ಕಾರ. ಯಾವಳಾದರೂ ಬಾಲವಿಧವೆ ಬಸಿರಾದಳೆಂದರೆ ಮುಗಿಯಿತು. ಅದಕ್ಕೆ ಕಾರಣರಾದವರೇ ಶೃಂಗೇರಿಗೆ ಹೋಗಿ ಆಕೆಯ ಬಗ್ಗೆ ಸ್ವಾಮಿಗಳಲ್ಲಿ ದೂರು ಹೇಳಿ ಆಕೆಯನ್ನು ಜಾತಿಯಿಂದ ಹೊರಗೆ ಹಾಕುತ್ತಿದ್ದರು.

ಇನ್ನು ಮಲೆನಾಡಿನ ಹೆಂಗಸರ ಬಗ್ಗೆ ಹೀಗೆ: ಮನೆ ತುಂಬ ಮುದುಕಿಯರಿದ್ದರು. ಅವರು ಹೆರಿಗೆ ಮಾಡಿಸುತ್ತಿದ್ದರು. ಹೆಂಗಸರು ಬಸುರಿಯಾಗಲಿ, ಕಾಹಿಲೆಯಾಗಲಿ ಬೆಳಗಿನಿಂದ ಸಂಜೆಯತನಕ ಅವರಿಗೆ ಮೈತುಂಬ ಕೆಲಸವಿದ್ದೇ ಇರುತ್ತಿತ್ತು. ದುಡಿದು ದುಡಿದು ಮೈಹಣ್ಣಾಗುತ್ತಿತ್ತು. ಹೆರಿಗೆ ನೋವು ಕಾಣಿಸಿಕೊಂಡಾಗ ಅವಳು ಹೆರಿಗೆ ಕೋಣೆಗೆ ಹೋಗಬೇಕು. ಆ ಕೋಣೆಗೆ ಬಾಣಂತಿ ಕೋಣೆಯೆಂದೇ ಹೆಸರು. ಅಲ್ಲಿ ಎಲ್ಲಾ ಸಿದ್ಧವಿರುತ್ತಿತ್ತು. ಗೋಣಿಚೀಲ, ಕಂಬಳಿ, ಕಸ ಹಾಕಲು ಮಡಕೆ-ವೀಳ್ಯದೆಲೆ ಅಡಿಕೆ ಕಸ್ತೂರಿ, ಬಾಣಂತಿ ಟೋಪಿ-ಮಗು ಮಲಗಿಸುವ ಮರ ಇತ್ಯಾದಿ.

ಇನ್ನು, ಗಡಿಯಾರವಿಲ್ಲದ ಕಾಲದಲ್ಲಿ ಮಲೆನಾಡಿನಲ್ಲಿ ಕಾಲ ನೋಡುವಬಗ್ಗೆ : ಗಳಿಗೆ ಬಟ್ಟಲನ್ನು ಕೋಣೆಯ ಬಾಗಿಲಲ್ಲಿ ಇಟ್ಟುಕೊಂಡು ಒಬ್ಬರು ಮುದುಕರು ಕೂಡುತ್ತಿದ್ದರು. ಹಗಲು ಹೊತ್ತಾದರೆ ಗೋಡೆಯ ಮೇಲಿನ ಬಿಸಿಲಿನ ಲೆಕ್ಕದಿಂದ ಸರಿಯಾದ ಗಂಟೆ ಹೇಳುತ್ತಿದ್ದರು. ಮಳೆಗಾಲವಾದರೆ ಆರು ತಿಂಗಳು ಸೂರ್ಯನಾರಾಯಣ ಮಲೆನಾಡ ಕಡೆ ಮುಖ ತಿರುಗಿಸುತ್ತಿರಲಿಲ್ಲ. ಆಗ ಈ ಗಳಿಗೆ ಬಟ್ಟಲು ಬೇಕು.

ಇನ್ನು ವಿದ್ಯಾಭ್ಯಾಸದ ಬಗ್ಗೆ: ಬ್ರಾಹ್ಮಣರು ಬಿಟ್ಟರೇ ಬೇರೆ ಜನಗಳಿಗೆ ವಿದ್ಯೆ ಇಲ್ಲ. ಜಗಳ ಪಾಠದಲ್ಲಿ ಮರಳಿನ ಮೇಲೆ ಅ ಆ ಇ ಈ ತಿದ್ದಬೇಕು. ಎ ಕ್ಲಾಸ್, ಬಿ. ಕ್ಲಾಸ್ ಪಾಸು ಮಾಡಿದವರಿಗೆ ಮಾತ್ರ ಹುದ್ದೆ ಸಿಗುತಿತ್ತು. ಬಾಕಿಯೆಲ್ಲ ಸಂಸ್ಕೃತ ಬಾಯಿಪಾಠವೇ ಸರಿ-ಇತರೇ ಜನರಿಗಂತೂ ಅಕ್ಷರ ಜ್ಞಾನವೇ ಇಲ್ಲ. ಅಮಲ್ದಾರಿಕೆ, ಶೇಖದಾರಿಕೆ ಬ್ರಾಹ್ಮಣರಿಗೆ ಮೀಸಲು. ಅವರೇ ಲೋಯರ್ ಸೆಕೆಂಡರಿ ಡಿಗ್ರಿ ಮಾಡಿಕೊಳ್ಳುತ್ತಿದ್ದರು. ಹಳ್ಳಿಗೆ ಬಂದ ಕಾರ್ಡು-ಕವರು ಓದುವವರು ಶ್ಯಾನುಭೋಗರು ಅಥವ ಅಕ್ಷರಸ್ತನಾದ ಅಂಚೆಪೇದೆ. ಅವನೇ ಅಂಚೆ ಹಂಚುವನು. ಕಾರ್ಡು ಕವರು ಮಾರುವವನು-ಪತ್ರ ಓದಿ ಉತ್ತರ ಬರೆಯುವವನು. ಅವನಿಗೆ ಬ್ರಾಹ್ಮಣರ ಮನೆಯಲ್ಲಿ ಊಟ-ಉಪಚಾರ. ಇತರೇ ಜನರು ಸಾಮಗ್ರಿಗಳನ್ನು ಕೊಡುತ್ತಿದ್ದರು. ಸಂಚಾರ : ಕಾಲುನಡಿಗೆ, ಇಲ್ಲ ಎತ್ತಿನ ಗಾಡಿ.

ಇನ್ನು ಮಲೆನಾಡಿನ ಬ್ರಾಹ್ಮಣ ಹೆಣ್ಣು ಮಕ್ಕಳು ಬೆಳೆಯುವ ಬಗೆ: ಇಂದಿರಾ ಅವರು ತಮ್ಮ ಫಣಿಯಮ್ಮ ಕಾದಂಬರಿಯಲ್ಲಿ ಹೀಗೆ ದಾಖಲು ಮಾಡುತ್ತಾರೆ: 'ಅಂದಿನ ಹೆಣ್ಣು ಮಕ್ಕಳಲ್ಲಿ ಬಾಲ್ಯ ಜೀವನ ಅದರಲ್ಲು ಹಳ್ಳಿ ಜನಗಳ ಬಾಲ್ಯ ಜೀವನ ತೀರ ಪವಿತ್ರವಾದದ್ದು ಮತ್ತು ಬಹುಸೀಮಿತವಾದದ್ದು–ಅಂತೆಯೇ ಫಣಿಯಮ್ಮನ ಶೈಶವ, ಬಾಲ್ಯಗಳು ತೀರಮುಗ್ಧವಾಗಿ ಕಳೆಯುತ್ತಿತ್ತು. ಐಗಳ ಮಠ ಗಂಡು ಮಕ್ಕಳಿಗೆ ಮಾತ್ರ. ಹೆಣ್ಣು ಮಕ್ಕಳಿಗೆ ಅಕ್ಷರ ದರ್ಶನವಿಲ್ಲ. ಮನೆತುಂಬ ಅಜ್ಜಿಯರು ಚಿಕ್ಕಮ್ಮ, ದೊಡ್ಡಮ್ಮ, ಅತ್ತಿಗೆ ಹೀಗೆ ನೂರೆಂಟು ಜನ ಹೆಂಗಸರು ಇರುತ್ತಿದ್ದುದರಿಂದ ಹೆಣ್ಣು ಮಕ್ಕಳಿಗೆ ಅದೇ ತರಬೇತಿ ಕೇಂದ್ರ. ಹಾಡು. ಹಸೆ ಮನೆಗೆಲಸ-ದೇವರ ಉಪಕರಣೆ ತೊಳೆಯುವುದು, ಮನೆ ಸಾರಿಸಿ ರಂಗವಲ್ಲಿ ಇಡುವುದು. ಎರಡು ವರ್ಷದ ಮಗುವಿನಿಂದಲೇ ಮಡಿ-ಹುಡಿ-ಎಂಜಲು-ಮುಸುರೆಯ ಅವಾಂತರ-ದಿನ ಬೆಳಗಾದರೆ ನೂರೆಂಟು ಹಬ್ಬ ಹರಿದಿನ-ಮದುವೆ ಮುಂಜಿಗಳು.

ಇನ್ನೂ ವೃತ್ತ ಪತ್ರಿಕೆಗಳು ಇರದಿದ್ದ ಕಾಲ. ಹಳ್ಳಿಯವರಿಗೆ ಸುದ್ದಿ ಸಂಗ್ರಹ ಹೇಗೇ? ನೈಜ ಚಿತ್ರಣ ಇಂದಿರಾ ಹೀಗೆ ನೀಡುತ್ತಾರೆ: 'ಅಲ್ಲಿ ವೃತ್ತ ಪತ್ರಿಕೆ ಎಂಬ ಹೆಸರನ್ನೇ ಕೇಳದ ಅಂದಿನ ಜನರಿಗೆ ಅಂಚೆ ಮನೆಯುವರು ಬಂದರೆಂದರೆ ಊರಚಾವಡಿಯಲ್ಲಿ ಊರಿನ ಚಿಳ್ಳೆ ಪಿಳ್ಳೆಗಳು ಬಂದು ಮುತ್ತಿಕೊಳ್ಳುವುದು-ಕಾರಣ ನೂರಾರು ಹಳ್ಳಿಗಳನ್ನು ಸದಾ ಸುತ್ತುವ ಇವರಿಗೆ ಅನೇಕ ಊರಿನ ಹೊಸ ಹೊಸ ಸುದ್ದಿಗಳು ಸಿಕ್ಕುವುವು, ತಮಗೆ ತಿಳಿದಿದ್ದಕ್ಕೆ ಮತ್ತಷ್ಟು ಉಪ್ಪುಕಾರ ಹಚ್ಚಿ ಸ್ವಾರಸ್ಯವಾಗಿ ಹೇಳಿ ಹಳ್ಳಿಯ ಜನರನ್ನು ಆಕರ್ಷಿಸುಕೊಳ್ಳುವ ಕಲೆ ಅಂಚೆ ಮತೆತನದವರಿಗೆ ಕರಗತವಾಗಿ ಹೋಯ್ತು.'

ಇನ್ನು ಹಳ್ಳಿಯವರ ದ್ವೇಷ-ಅಸೂಯೆ ಬೆಳೆಸಿಕೊಳ್ಳುವುದು, ಒಬ್ಬರ ಮೇಲೆ ಒಬ್ಬರು ಮಾಟ-ಕೂಟ ಮಾಡಿಸುವುದು, ಮಾತೆತ್ತಿದರೆ ಗಾಜನೂರು ಅಮ್ಮನವರ ಆಣೆ-ಜಕಣೆ-ಧರ್ಮಸ್ಥಳದ ದೇವರಾಣೆ. ಯಾರಾದರು ಬಲವಾದ ಕುಳ ಇದ್ದರೆ ಅವರ ಜಬರಿಸ್ತಿನಲ್ಲಿ ಕಟ್ಟೆ ಪಂಚಾಯಿತಿ ತೀರ್ಮಾನ ರಾಜಿ–ನೂರೆಂಟು ರಗಳೆಗಳು.

ಮಲೆನಾಡಿನ ಹಳ್ಳಿಗಳ ಬಗ್ಗೆ: ಇತ್ತ ಮಳೂರು, ಹಿರೆಸಾವೆ ಗುಡ್ಡದ ಮಠ, ಶೀಕೆ, ಕೋಣಂದೂರು, ಮಾದೂರು ಗಡ್ಡೇಪಾಲು, ಬಾಳಗಾರು ಭಾಂಡ್ಯ. ಕುಕ್ಕೆ ಕಸಗಾರು ಕಲ್ಲಳ್ಳಿ. ಹೆದ್ದೂರು, ಅರಗ. ಮೇಗರವಳ್ಳಿ. ಭೀಮನಕಟ್ಟೆ, ವಿರೂಪಾಕ್ಷಿ. ದೇವಂಗಿ, ಕುಪ್ಪಳ್ಳಿ, ಅಂಭೂತೀರ್ಥ, ಚಂದಸಮಕ್ಕಿ ಅತ್ತ ಸಿಂಭಾವಿ ಸೀತೂರು, ಲಕ್ಕುಂದ, ಕೌಲೆದುರ್ಗ, ಕಳೂರು, ಕೊಣಾರು, ಹಳೇಮನಿ ಹೂವಳ್ಳಿ

ಇನ್ನು ಹತ್ತಿರದ ಅಲ್ಲಾಪುರ, ದೇವಲಾಪುರ, ಸೋಮಲಾಪುರ, ಹಾಲು ಮತ್ತೂರು, ಹೊಸ ಅಗ್ರಹಾರ, ತೀರ್ಥಮತ್ತೂರು, ಹುಲ್ಲತ್ತಿ, ಕಿತ್ತಂದೂರು, ನಿಜಗುರು ತೀರ್ಥಹಳ್ಳಿ, ಹೊಳೆ ಆಚೆ ಕುರುವಳ್ಳಿ, ತೆಂಕಣ ಬೈಲು, ಮೇಳಿಗೆ ಸಂಬಳ ಲಕ್ಷ್ಮೀಪುರ, ಗೋಪಾಲಪುರ, ಚೆಬ್ಬಲಗುಡ್ಡೆ, ಅಂದಗೇರಿ, ಹಾರೋಕೊಪ್ಪ, ದಿಬ್ಬಣದ ಗದ್ದೆ, ಮಹಿಷಿ ಗುಡ್ಡೆ ಇತ್ತಕಡೆ ಮಂಡಗದ್ದೆ, ಸೀತೂರು, ಹುಂಚ ಸಿಂಧಘಟ್ಟ, ಶಿವಮೊಗ್ಗ.

ಮಲೆನಾಡಲ್ಲಿ ಕಾಹಿಲೆ ಬದುಕಿನ ಕ್ಲಿಷ್ಟತೆ ಬಗ್ಗೆ ಜಾತಕ ನೋಡುವುದು, ಕವಡೇ ಹಾಕಿ ನಿಮಿತ್ಯ ನೋಡುವುದು, ಯಂತ್ರ ಮಂತ್ರ, ಬೂದಿ ಚೀಟಿಗಳಿಂದ ಕಾಹಿಲೆ-ಹೆದರಿದ್ದು ಹೋಗಲಾಡಿಸುವುದು. ಅಳಲೇಕಾಯಿ ಪಾಂಡಿತ್ಯ, ಮನೆ ಹಿರಿಯರು, ಅಜ್ಜಿಯರು, ವಂಚಿತೆಯರು, ಸೂಲಗಿತ್ತಿ ಆಗಿರುತ್ತಿದ್ದರು. ನಾಟಿ-ಯುನಾನಿ ಆಯುರ್ವೇದ–ಹೋಮಿಯೋಪತಿ ಹೀಗೆ ಯಾವುದೋ ಒಂದು ಔಷಧಿ ಮಾಡುವುದು. ಜತೆಗೆ ಯಂತ್ರ-ಮಂತ್ರಗಳು ಸೇರುತ್ತಿದ್ದವು. ಒಟ್ಟಿನಲ್ಲಿ ಕಾಹಿಲೆ ವಾಸಿಯಾಗುತ್ತಿತ್ತು. ಆಯುಸ್ಸು ಮುಗಿದವರು ಸಾಯುತ್ತಿದ್ದರು, ಗಟ್ಟಿ ಇದ್ದವರು ಹೇಗೋ ಉಳಿದುಕೊಳ್ಳುತ್ತಿದ್ದರು. ಇಂಜಕ್ಷನ್ ತಿಳಿಯಬೇಕಿಲ್ಲ-ಆದಾಗ್ಯೂ ಜೀವನ ಸಂಯಮ-ಸದಾ ದುಡಿಮೆ, ಒಳ್ಳೆಯ ಆಹಾರ, ಹವೆ, ಜೀವನಶ್ರದ್ಧೆ ಇವುಗಳಿಂದಲೋ, ಏನೋ ಆಗಿನ ಕಾಲದಲ್ಲಿ ಸಾಮಾನ್ಯ ಎಂಭತ್ತು, ನೂರು, ನೂರಹತ್ತು ವರ್ಷಗಳವರೆಗೆ ಬದುಕಿ, ಬಾಳಿ ಹಗುರವಾಗಿ ಸಾಯುತ್ತಿದ್ದರು. ಅರೆ ಆಯುಸ್ಸಿನಲ್ಲಿ, ನಡು ಪ್ರಾಯದಲ್ಲಿ ಸಾಯುತ್ತಿದ್ದವರು ತೀರಾ ಕಡಿಮೆ!

ಮಲೆನಾಡಿನ ಗಂಡಸರು-ಹೆಂಗಸರ ಕೆಲಸದ ಬಗ್ಗೆ 'ಹೆಂಗಸರಿಗೆ ಒಳಗಿನ ಕೆಲಸ, ಗಂಡಸರಿಗೆ ಹೊಲ ಗದ್ದೆ ತೋಟ ಇಂತಹ ಕೆಲಸ, ಮುದುಕರಿಗೆ ಸ್ನಾನ, ಪೂಜೆ, ಪುನಸ್ಕಾರ. ಇನ್ನೂ ಕೆಲವರಿಗೆ ದನ ಕರೆಯುವ, ಮಜ್ಜಿಗೆ ಕಡಿಯುವ ಕೆಲಸ. ಮನೆ ಮಂದಿಗೆಲ್ಲ ಕೆಲಸ, ಸೋಮಾರಿತನಕ್ಕೆ ಅಲ್ಲಿ ಎಡೆಯೆಲ್ಲಿ? ಮನೆಯ ಹುಡುಗ ಹುಡುಗಿಯರಿಗೆ ಕೈತುಂಬ ಕೆಲಸ. ಬಾಗಿಲು ತುಳಸಿ ಕಟ್ಟೆ ಸಾರಿಸಿ ರಂಗವಲ್ಲಿ ಇಡುವುದು, ರಾಶಿ ರಾಶಿ ಹೂವು ಕೊಯ್ದು ಕಟ್ಟುವುದು, ತೋಟದ ಹೊಂಡಕ್ಕೆ ಹೋಗಿ ಬಟ್ಟೆ ಒಗೆದು ತರುವುದು ಇತ್ಯಾದಿ. ಮನೆ ಮುದುಕಿಯರು ಪದ್ಯ ರೂಪದ ರಾಮಾಯಣ ಮಹಾಭಾರತ ಭಾಗವತ ಶ್ಲೋಕಗಳನ್ನು ಹೇಳಿಕೊಳ್ಳುತ್ತಾ ಕೆಲಸ ಮಾಡುವಾಗ ಮನೆ ಹುಡುಗರಿಗೆಲ್ಲ ಅದು ಬಾಯಿಪಾಠವಾಗಿ ಹೋಗಿ ಗಂಡು ಹುಡುಗರು ಚೌಕಿಯ ಕಂಬ ಒರಗಿ ಕುಳಿತು ಮನೆಯ ಅಜ್ಜನಿಗೆ ಕೇಳುವ ಹಾಗೆ ಗಟ್ಟಿಯಾಗಿ ಅವರು ಹೇಳಬೇಕು; ಅಜ್ಜ ಪ್ರತಿದಿನವೂ ರಾಮಾಯಣ ಪಾರಾಯಣ ಮಾಡುತ್ತಿದ್ದುದರಿಂದ ಮನೆಯವರಿಗೆಲ್ಲ ಅದು ಕಂಠಗತವಾಗಿತ್ತು.

ಇನ್ನು ಗದ್ದೆ ಕೊಯ್ಲು-ಅಡಿಕೆಕೊಯ್ಲಲ್ಲಿ ಮಲೆನಾಡಿಗರಲ್ಲಿ ಗಂಡಸರ ಹೆಂಗಸರ ದಾಖಲಾತಿ ಇದು :-

'ಗಂಡಸರು ಅಡಿಕೆ ಬೇಯಿಸಿ ಒದಗಿಸುವುದಾದರೆ ಆಳು ಕಾಳುಗಳಲ್ಲದೇ ಮನೆ ಮಂದಿಯೆಲ್ಲ ಮೆಟ್ಟು ಕತ್ತಿಹೂಡಿ ಅಡಿಕೆ ಸುಲಿಯಲು ಕೂರ ಬೇಕಾಗುತ್ತಿತ್ತು. ರಾತ್ರಿ ಒಂದು ಗಂಟೆಯವರೆಗೆ ಅಡಿಕೆ ಸುಲಿದು ನಂತರ ಮಲಗುವುದು. ಅಲ್ಲಿಯವರೆಗೆ ಬೇಸರ ಕಳೆಯಲು ಒಂದು ಉಪಾಯ ಬೇಕಲ್ಲ. ಅದಕ್ಕಾಗಿ ಅಲ್ಲಲ್ಲಿ ಹಳ್ಳಿಯ ರಸಿಕರು ಪ್ರಸಂಗ ಕೂಟ ಮಾಡಿಕೊಂಡಿದ್ದು ಅಡಿಕೆ ಕೊಯ್ಲಿನ ದಿನಗಳಲ್ಲಿ ಮದುವೆ ಮುಂಜಿಗಳಲ್ಲಿ ಪ್ರಸಂಗ ಹೂಡುವರು. ಅದು ಮಹಾಭಾರತದ್ದೇ ಜಾಸ್ತಿ. ಈಗಿನ ಕಾಲದಂತೆ ಬೇರೆ ಮನೋರಂಜನೆಗಳು ಇಲ್ಲದ ಕಾಲ ಅದು. ಸರಿ ಬಭ್ರುವಾಹನ ಕಾಳಗ, ಶ್ರೀಕೃಷ್ಣ ಪಾರಿಜಾತ, ರಾಮಾಂಜನೇಯ ಯುದ್ಧ ಇತ್ಯಾದಿ ಕಾರ್ಯಕ್ರಮಗಳು. ಆಗ ಶೃತಿ ಪೆಟ್ಟಿಗೆಯೂ ಇರಲಿಲ್ಲ. ಏಕನಾದ ತಾಳ, ಮದ್ದಲೆ, ಕೊಳಲು, ಮೃದಂಗ ಇಂಥ ವಾದ್ಯಗಳು.

ಬಣ್ಣ ಬೇಡ, ವೇಷ ಬೇಡ–ವಿಸ್ತಾರವಾದ ಅಂಗಳದ ಮಧ್ಯೆ ಪ್ರಸಂಗದವರು ವೃತ್ತಾಕಾರವಾಗಿ ಕೂಡುವುದು, ಎಲ್ಲಾ ಗಂಡಸರೇ. ಹೆಣ್ಣು ಪಾತ್ರದ ಮಾತನ್ನೂ ಗಂಡಸರೇ ಆಡಬೇಕು-ಮಹಾಭಾರತ ಯಾವುದಾದರು ಒಂದು ಭಾಗವಾದರೂ, ಕೌರವರು, ಪಾಂಡವರು, ದ್ರೌಪತಿ, ಕುಂತಿ, ಕೃಷ್ಣ ಇದ್ದೇ ಇರಬೇಕಲ್ಲ. ಕೇಳಿದ್ದನ್ನೇ ಕೇಳಲು ಇವರಿಗೆ ಬೇಸರವಿಲ್ಲ-ತಮ್ಮ ತಮ್ಮ ಪಾತ್ರದ ಮಾತುಗಳನ್ನು ಪ್ರವರ ಪೌರುಷ ಸಮೇತ ಹೇಳಿ 'ಡಂ' ಎದ್ದು ಮದ್ದಲೆ ಒಡಿಯುವರು. ಮನೆ ಮಕ್ಕಳೆಲ್ಲ ಅಡಿಕೆ ಸುಲಿಯುತ್ತಾ ಅದನ್ನು ಕೇಳುವರು.

ಒಂದೊಂದು ಬಾರಿ ಯಾರಾದರೂ ಹರಿಕಥೆ ದಾಸರು ಬಂದು ಠಿಕಾಣಿ ಹಾಕಿದರೆಂದರೆ ಅಡಿಕೆ ಕೊಯ್ಲು ಮುಗಿಯುವತನಕ ಅವರು ಕಲಿತ ಕಲೆಗಳನ್ನೆಲ್ಲ ದಿನ ಹರಿಕಥೆ ಮಾಡಿ ಮುಗಿಸಿ ಉಂಡು ತಿಂದು ಹೊರುವಷ್ಟು ಬೆಲ್ಲ-ಅಕ್ಕಿ-ಅಡಿಕೆ-ಬಾಳೆಎಲೆ ದೊಪ್ಪೆ ಹೊತ್ತು ನಡೆಯುವರು.

ಅಪರೂಪಕ್ಕೆ ಭಾಗವತರ ಆಟ ಕೂಡಿತೆಂದರೆ ಪೋಸ್ಟಿನ ಜೊತೆಯಲ್ಲಿ ಸುತ್ತ-ಮುತ್ತಲಿನ ಹತ್ತಿಪ್ಪತ್ತು ಹತ್ತಿರದ ಹಳ್ಳಿಗಳ ಜನ ಬಂದು ಜಮಾಯಿಸುವರು-ಬಂದ ಅತಿಥಿಗಳಿಗೆ-ಭಾಗವತ ಆಟದ ಗುಂಪಿನವರಿಗೆ ಎರಡು ದಿನ ಕೂಳು ಇವರ ಮನೆಯದೇ ಆಗಬೇಕು.

ಇನ್ನು ಮಲೆನಾಡಿಗರ ಸಾಕಿದ, ದನಕರು ಎಮ್ಮೆ-ಎತ್ತು-ನಾಯಿ, ಅವರು ಬೆಳೆದ ಗಿಡಗಳಿಗೆ ಕಾಹಿಲೆ ಬಂದರೆ ಔಷಧಿ ಮಾಡುವ ಚಿತ್ರಣ ಇದು: ಎಂತಹ ಕಷ್ಟ-ಕಾರ್ಪಣ್ಯವನ್ನೇ ಆಗಲಿ ಸಹಿಸುವ ಶಕ್ತಿ ಧೈರ್ಯ-ಸಹನೆ ಅಂದಿನ ಜನರಿಗಿರುತ್ತಿತ್ತು. ಮನುಷ್ಯರಿಗಲ್ಲದೆ ಪ್ರತಿ ಮನೆಯಲ್ಲಿ ಇರುತ್ತಿದ್ದ ದನಕರುಗಳಿಗೆ ಏನಾದರು ಕಾಹಿಲೆ ಇರುವುದು. ಮನೆಯವರದ್ದೇ-ಅಡಿಕೆ, ತೆಂಗು, ಪೈರುಪಚ್ಚೆಗಳಿಂದ ರೋಗಕ್ಕೆ ಅವರು ಮದ್ದು ಅರೆಯುತ್ತಿದ್ದರು-ಅದು ಅವರ ಪಾಲಿಗೆ ಕಷ್ಟವಿಲ್ಲ. ತಾವು ಇರುವ ಸ್ಥಿತಿಗಿಂತ ಹೆಚ್ಚಿನ ಸುಖ ಪ್ರಪಂಚದಲ್ಲಿ ಇದೆಯೆಂದು ಅವರಿಗೆ ಗೊತ್ತಿದ್ದರೆ ತಾನೆ ಅವರು ವ್ಯಸನ ಪಡಬೇಕಾದದ್ದೂ ! ತಾವಿರುವುದೇ ಸುಖ ಅವರ ಪಾಲಿಗೆ.

ಎಂ. ಕೆ. ಇಂದಿರಾ ಅವರು ಫಣಿಯಮ್ಮ ಕಾದಂಬರಿಯಲ್ಲಿ ಉದ್ದಕ್ಕೂ ಪ್ರಕೃತಿ ಸಂಕೇತಿಸಿ-ಜನರಿಗೆ ಹೋಲಿಸುತ್ತಿದ್ದು-ಅದಕ್ಕೆ ಉದಾಹರಣೆ ಇದು : ಪ್ರಶಾಂತವಾಗಿ ಸದ್ದಿಲ್ಲದೆ ಮೆಲ್ಲಗೆ ಬಳ್ಳಿಯಂತೆ ಬೆಳೆದಳು ಫಣಿಯಮ್ಮ. ಇನ್ನು ಕೆಲಸದ ಮಧ್ಯೆ ಮಲೆನಾಡಿಗರ ಆಹಾರ ಪಾನೀಯಗಳ ಬಗ್ಗೆ ಅವರ ಚಿತ್ರಣ ಹೀಗೆ : ಅಕ್ಕಿ, ಬೆಲ್ಲ-ಹಾಲು-ಮೊಸರು-ತರಕಾರಿ ಸಮೃದ್ಧಿ ಇತ್ತು. ಹೆಂಗಸರು ಮಾಡಿ ಚಾಚಿದ್ದೇ,ಬಂದವರು ಪಗದಸ್ತಾಗಿ ಎರಡು ದಿನ ಹೊಡೆದಿದ್ದೇ. ಅಂದಿನ ಮುಖ್ಯವಾದ ಲೋಪವೆಂದರೆ ಕಾಫಿ ಎಂಬ ಪಾನೀಯ ಪ್ರಾಂತ್ಯದಲ್ಲೇ ಅದರಲ್ಲೂ ಬ್ರಾಹ್ಮಣರ ಮನೆಗಳಲ್ಲಿ ಜಾರಿಗೆ ಬಂದಿರಲಿಲ್ಲ. ಆಗಿನ ಪಟ್ಟಿಗೆ ಅದು ಅಸ್ಪೃಶ್ಯ ವಸ್ತುವಾಗಿತ್ತು. ಮಕ್ಕಳಿಗೆ ಹಾಲು ಮುದುಕರಿಗೆ ಬೇಕೆಂದರೆ ಶುಂಠಿ ಮೆಣಸಿನ ಕಷಾಯ ಅಷ್ಟೇ-ಅತಿಥಿಗಳಿಗೆ ಅವರು ಮೇಯುವಷ್ಟು ತಾಂಬೂಲ-ಅದಕ್ಕೆ ಬರವೇ ಇಲ್ಲ. ಅದು ಬಿಟ್ಟರೆ ನಸ್ಯ. ಕಾಫಿ ಬೀಜ, ಕಾಫಿ ಬಗ್ಗೆ ಕೇಳಿದ್ದರಷ್ಟೇ ಅದನ್ನು ನೋಡಿರಲಿಲ್ಲ.

ಇನ್ನು ಸಂಸಾರಗಳ ಬಗ್ಗೆ ಇಂದಿರಾ ವಿವರಿಸುವಾಗ ಹೀಗೆ : 'ಅಂದಿನ ಕಾಲಕ್ಕೆ ಗಂಡು ಮಕ್ಕಳಿಗೆ ಐದು ವರ್ಷಕ್ಕೆ ಉಪನಯನ, ಹೆಣ್ಣು ಮಕ್ಕಳಿಗೆ ಏಳು ವರ್ಷದಿಂದ ಒಂಭತ್ತು ವರ್ಷದೊಳಗೆ ಮದುವೆ ಮಾಡಿ ಮುಗಿಸುವರು. ಹತ್ತು ವರ್ಷವಾಯಿ ತೆಂದರೆ ಹಾಹಾಕಾರ ಹತ್ತುವುದು.'

'ಮದುವೆಯಾಗುವ ಗಂಡನ್ನಾಗಲಿ, ಹೆಣ್ಣನ್ನಾಗಲಿ ಕೇಳಬೇಕೆಂಬ ಸಂಪ್ರದಾಯ ಆಗ ಜಾರಿಯಲ್ಲಿ ಇರಲಿಲ್ಲ. ಹೇಳುವುದಿರಲಿ, ಒಬ್ಬರನ್ನೊಬ್ಬರು ನೋಡಬೇಕು, ಒಪ್ಪಬೇಕು ಎಂಬುದು ಕೂಡ ಮಹಾಪರಾಧವಾಗುತ್ತಿತ್ತು. ಮನೆಯ ಹಿರಿಯರು ಅಂದರೆ ಹುಡುಗಿ ಅಪ್ಪನೋ, ಅಣ್ಣನೋ ನೋಡಿದರೆ ಸಾಕು-ಹುಡುಗನಿಗೆ ವಿದ್ಯೆ

ಬೇಕೆಂಬ ಆಲೋಚನೆ ಅವರ ತಲೆಗೆ ಹೋಗುತ್ತಿರಲಿಲ್ಲ. ಸಂಧ್ಯಾವಂದನಾ ಮಂತ್ರ ದೇವರ ಪೂಜೆ ಮಂತ್ರ ಬಂದರೆಸಾಕು-ಜೋಯಿಸರ ಮನೆಯವರಾದರೆ ಪೌರೋಹಿತ್ಯ ತಿಳಿದಿದ್ದರೆ ಸಾಕು-ಹುಡುಗ ಗಟ್ಟಿಮುಟ್ಟಾಗಿ ಆರೋಗ್ಯವಾಗಿದ್ದರೆ ಅದೇ ಮಹಾ ಡಿಗ್ರಿ'

ಇನ್ನು ಉಡುಪಿನ ಬಗ್ಗೆ : ಪಿಳ್ಳೆ ಜುಟ್ಟು-ಪೇಟಾ-ಪಂಚೆ ಹೆಗಲ ಮೇಲೊಂದು ಅಂಗವಸ್ತ್ರ ಇಷ್ಟೇ ಅಂದಿನವರ ದಿನನಿತ್ಯದ ಉಡುಪು. ತೀರ್ಥಹಳ್ಳಿ ಎಳ್ಳಮಾವಾಸ್ಯೆಗೆ ಉಡುಪಿ ಪರ್ಯಾಯಕ್ಕೊ-ಶೃಂಗೇರಿ ನವರಾತ್ರಿ ಉತ್ಸವಕ್ಕೊ ಹೋಗುವಾಗ ಮಾತ್ರ ಅವರ ಜನ್ಮದ ಏಕೈಕ ವೈಭವದ ಉಡುಪಾದ, ತುಂಬುತೋಳಿನ ಕಸೆ ಅಂಗಿ ತೊಟ್ಟು ಕಚ್ಚೆ ಪಂಚೆಯುಟ್ಟು ತಲೆಗೆ ಕೆಂಪುವಸ್ತ್ರ ಸುತ್ತುತ್ತಿದ್ದರು.

ಹಳ್ಳಿಗೆ ಬಳೆಗಾರ ಬಂದಾಗ ಮನೆಮಂದಿಯೆಲ್ಲ ಬಳೆತೊಟ್ಟುಕೊಳ್ಳಬೇಕು. ಮನೆಮಂದಿ ಏನು-ಊರು ಮಂದಿಎಲ್ಲ ಅನ್ನಬೇಕು; ಆಗಿನ ಕಾಲದಲ್ಲಿ ಇದ್ದದ್ದು ಕರಿಪಟ್ಟೆ ಬಳೆ-ಬಳೆಗೆ ಬದಲಾಗಿ ಭತ್ತ-ಅಡಿಕೆ ಇಂಥದ್ದೇ ಏನಾದರು ಕೊಡುವುದು-ಉಗಾದಿ, ದೀಪಾವಳಿ ಗೌರಿಹಬ್ಬ ಇಂಥ ಸಮಯದಲ್ಲಿ ಸಾಕಷ್ಟು ಹಳ್ಳಿ ಸುತ್ತಿ ಸಂಪಾದಿಸಬೇಕು !

ಹೆಂಗಸರಿಗೆ ಎಂಟು ವರ್ಷಕ್ಕೆ ಹದಿನೆಂಟು ಮೊಳದ ಕೊರನಾಡು ಕೆರಿಗೆ ಉಡಿಸುತ್ತಿದ್ದರು. ದಿಂಬಿನ ಗಾತ್ರದ ಬಾಳೆಕಾಯಿ ಹಾಕಿ ಸೀರೆ ಉಟ್ಟು ಸೊಂಟಕ್ಕೆ ಕುಣಿಕೆಯ ಬೆಳ್ಳಿಯ ಡಾಬು ಹಾಕಿ ಬಿಟ್ಟರೆ ಮುಗಿಯಿತು. ತರಕಾರಿ ಹೆಚ್ಚುವ ಈಳಿಗೆ ಮಣೆಯಲ್ಲಿ ಒಂಭತ್ತು ತುಂಡಿನ ರವಿಕೆಯನ್ನು ಮನೆಯ ಮುದುಕಿಯರು ಯಾರಾದರು ಕತ್ತರಿಸಿಕೊಟ್ಟರೆ ಅದನ್ನು ಹುಡುಗಿಯರು ತಾವು ಬಂದ ಹಾಗೆ ಹೊಲಿದು ಕೊಳ್ಳಬೇಕು. ಅಂದ ಚೆಂದ-ಅಳತೆ ಕೇಳುವರಾರು ? ಧರ್ಮಾವರ-ಕಂಚಿ-ಕುಂಭಕೋಣ ಸೀರೆಗಳೆಂದರೆ ಅಂದಿನ ಸಾಹುಕಾರರ ಮನೆಗಳಲ್ಲಿ ಕಾಣಬೇಕು. ಮಧ್ಯಮ ವರ್ಗದವರಿಗೆ ಕುತ್ತಾಲದ ಸೀರೆಯೇ ಪೀತಾಂಬರ-ಅದೂ ಮದುವೆ ಮುಂಜಿಗಳಲ್ಲಿ ಮಾತ್ರ ಉಡುವುದು.

ಮಲೆನಾಡಿನ ಮದುವೆ ಬಗ್ಗೆ-ಫಣಿಯಮ್ಮನ ಮದುವೆಯಲ್ಲಿ ಆಗಿನ ಮದುವೆ ಮನೆ ವಿವರಣೆ ಇದು—

'ಸರಿ ಮದುವೆಯ ಸುದ್ದಿ ಎದ್ದಿತು. ಹಪ್ಪಳ ಸಂಡಿಗೆ ಕಾರ್ಖಾನೆ, ಉಂಡೆ-ಚಕ್ಕುಲಿಗಳರಾಶಿ, ಹದಿನೈದು ದಿನ ಮುಂಚೆನಿಂದ ಊರು ಊರಿಂದ ಹಳ್ಳಿ-ಹಳ್ಳಿ

ಗಳಿಂದ ಜನರು ಬಂದು ತುಂಬಿದರು. ಬೀಗರನ್ನು ಕರೆತರಲು ಜೋಡೆತ್ತಿನ ಕಮಾನು ಗಾಡಿಗಳು ನಾಲ್ಕು ಹೊರಟವು. ದೊಡ್ಡ ತೊಟ್ಟಿಯ ಮನೆ ಬೀಗರ ಮನೆಯಾಯಿತು. ಎಂಟು ದಿನಗಳ ಮದುವೆ-ಸುಮಾರು ನಲವತ್ತು ಜನ ಪುರೋಹಿತರು ಸೇರಿದ್ದರು. ಮದುವೆಯ ಹುಡುಗಿಯು ಸಾಕಷ್ಟು ಉರುಟಣೆ ಉಯ್ಯಾಲೆ ಹಾಡುಗಳನ್ನು ಕಲಿತಿದ್ದಳು. ಹುಳಿಯನ್ನ ಒಬ್ಬಟ್ಟು, ಪಾಯಸ, ಹೋಳಿಗೆ. ಸಜ್ಜಪ್ಪ-ಅತಿರಸ-ಅನ್ನಾರಸ ಇಂತಹ ಭಕ್ಷ್ಯಗಳು, ಎಂಟು ದಿನವು ಹಬ್ಬ-ಲಿಗೆಯ ಯಾರ ಮನೆಯಲ್ಲೂ ಒಲೆ ಹಚ್ಚಿರಲಿಲ್ಲ-ಎಲ್ಲರ ಮನೆಯವರಿಗೂ ಇಲ್ಲಿಯೇ ಊಟ. ಕಾಫಿಯ ಗದ್ದಲವಿಲ್ಲ. ಅವಲಕ್ಕಿ ಅರಳು ಕಡುಬಿನ ತಿಂಡಿಗಳು-ಉಂಡೆ-ಚಕ್ಕುಲಿ ಕರಗಡಬುಗಳಿಗೆ ಬರವಿಲ್ಲ. ಆ ಪುಟ್ಟ ವಧು ವರರು ಏಳು ದಿನ ಎರಡು ಹೊತ್ತು ಹೊಗೆಯ ಮುಂದೆ ಕೂತು ಸೋತು ಹೋದವು-ಕಣ್ಣುಗಳು ಊದಿಕೊಂಡಿದ್ದವು' ಆಗಿನ ಒಡವೆಗಳ ಚಿತ್ರಣ ಇದು—'ಅಡಿಕೆ, ಸರಿಗೆ, ಚಂದ್ರಹಾರ, ಜಡೆ ಬಂಗಾರ, ರಾಗಟೆ, ನಾಗರ, ತಿರುಪಿನ ಹೂವು ಕುಚ್ಚು, ಮಲ್ಲಿಗೆ ಮೊಗ್ಗು, ಬುಗುಡಿ, ಚಳತುಂಬು, ಚಂದ್ರಮರು, ಕುರುಡಿ ಬಾವಲಿ, ತೋತಾಬಂದಿ ಹೆಂಗಸರ ಒಡವೆಗಳು. ಕಾಸಿನಸರ, ಕಾಲುಸರ, ಪಾಡಗ ಗಗ್ಗರ ಇದು ಗಂಡಸಿನ ಒಡವೆಗಳು-ಇದರ ಮಧ್ಯೆ ಎರಡು ಹೊತ್ತು ಗಂಟೆ ಗಟ್ಟಳೆ ಉರುಟಣೆ-ಉಯ್ಯಾಲೆ ಹಾಡು ಹೇಳಬೇಕು. ನಡು ನಡುವೆ ಮುದುಕಿ-ಮುತ್ತೈದೆ ಯರ ಅಪಸ್ವರದ ಶಾಸ್ತ್ರಗಳ ಹಾಡುಗಳು ಬೇರೆ. ಎಲ್ಲಕ್ಕೂ ಮೇಲಾಗಿ ಹಜಾಮ ನರಸಿಂಗನ ಅಪಸ್ವರದ ವಾಲಗ. ಅವನಿಗೆ ನುಡಿಸಲು ಬರುತ್ತಿದ್ದುದು ಮೂರು ನಾಲ್ಕು ಹಾಡುಗಳು, ಅದೂ ತಾಳವಿಲ್ಲ, ತಂತ್ರವಿಲ್ಲ. ಅವನು ವಾಲಗ ನುಡಿಸುವಾಗ ಅವನ ತಿದಿಯಂತೆ ಉಬ್ಬಿ ಇಳಿಯುವ ನರಗಳು-ತಲೆಯ ತುಳುಕಾಟ ಭಯಂಕರವಾಗಿರು ತ್ತಿತ್ತು. ಶ್ರುತಿಯವನು, ಡೋಲಿಯವನು ಮತ್ತೂ ಭೀಕರ ! ಡೋಲು ಹರಿಯು ವಂತೆ ಬಡಿಯುತ್ತಿದ್ದ.

ಬಾಲವಿಧವೆಯಾದ ಮಲೆನಾಡ ಹೆಣ್ಣು ಸೇವಾ ಮನೋಭಾವದಿಂದ ತಪಸ್ವಿನಿ ಯಾಗಿ ತನ್ನ ಇಡೀ ಬಾಳನ್ನು ಇತರರ ಉಪಕಾರಕ್ಕಾಗಿ ಕಳೆಯುತ್ತಿದ್ದಳು. ಇದರ ಬಗ್ಗೆ ಎಂ. ಕೆ. ಇಂದಿರಾ–ಫಣಿಯಮ್ಮ ಕಾದಂಬರಿಯಲ್ಲಿ–ಫಣಿಯಮ್ಮನ ಬದುಕನ್ನು ಉದ್ದಕ್ಕೂ ಚಿತ್ರಿಸಿದ್ದು ಮಲೆನಾಡಿನ ವಿಧವಾಜೀವನ ಚಿತ್ರಣವಾಗಿದೆ.

'ಒಂದುಎಳ್ಳಮಾವಾಸ್ಯೆ ದಿನ ತೀರ್ಥಹಳ್ಳಿಯಲ್ಲಿ ತನ್ನ ಜಡೆ ಕತ್ತರಿಸಲ್ಪಟ್ಟದ್ದು, ಎರಡನೆಯದು ತಾನು ಮೈ ನೆರೆದಾಗ, ನಾಲ್ಕನೇ ದಿನವೇ ತನ್ನ ತಲೆ ಬೋಳಾದದ್ದು,

ಮೂರನೆಯದು, ಸುಬ್ಬಿ–ಪುಟ್ಟ ಜೋಯ್ಸರ ಪ್ರಸಂಗ' ಇದು ಮೂರು ಆಕೆಯನ್ನು ಈ ಕೊಳಚೆ ಪ್ರಪಂಚದಿಂದ ತಪಸ್ಸಿನ ಜೀವನದ ಕಡೆಗೆ ಒಯ್ದಿದ್ದು.'

ಮಲೆನಾಡಿನಲ್ಲಿ ಯಾವ ಜಾತಿಯವರಲ್ಲಿ ಹೆರಿಗೆ ಆದರು. ವಿಧವೆಯರು, ಹೆಂಗಸರು–ತಮ್ಮ ಜಾತಿ ಬದಿಗೊತ್ತಿ ಅಲ್ಲಿ ಹೋಗಿ ಹೆರಿಗೆ ಮಾಡಿಸುತ್ತಿದ್ದರು. ಫಣಿಯಮ್ಮ ಎಂಭತ್ತು ವರ್ಷದ ವಿಧವೆ. ಮುದುಕಿ–ಕಾಶಿಯಾತ್ರೆ, ಋಷಿಪಂಚಮಿ ಮಾಡಿದಾಕೆ–ಕೊಣಂದೂರಲ್ಲಿ ಅವಳ ಸಂಬಂಧಿಕರ ಮನೆಯಲ್ಲಿ ಬಾಣಂತನ ಮಾಡಿ ಊರಿಗೆ ಹೊರಡಬೇಕೆಂದಾಗ ಆದ ಪ್ರಸಂಗ ಹೀಗೆ : 'ಒಂದುರಾತ್ರಿ ಹನ್ನೆರಡು ಗಂಟೆ ಆಗಿ ಹೋಗಿತ್ತು. ಹಸಲರಬೈರನ ಹದಿನೈದು ವರ್ಷದ ಮಗಳು ಸಿಂಕಿಗೆ ಬ್ಯಾನೆ ಸಂಕಟ ಪ್ರಾರಂಭವಾಗಿ ಮೂರು ನಾಲ್ಕು ದಿನಗಳಾಗಿತ್ತು. ಊರಲ್ಲಿ ಸೂಲಗಿತ್ತಿ ಇರಲಿಲ್ಲ. ಒಬ್ಬಿಬ್ಬರು ಬೂಬಿಯರು, ಗೌಡರ ಮುದುಕಿಯರೇ ಆಲೂರಿನ ಸೂಲಗಿತ್ತಿಯರು. ಈಗ ನಾಲ್ಕು ದಿನದಿಂದ ಅವರೆಲ್ಲ ಸಿಂಕಿಯ ಹೆರಿಗೆಗೆ ಬಂದು ಸೋತಿದ್ದರು. ಸಿಂಕಿ ಸಣ್ಣ ಹುಟ್ಟಿನ ಹುಡುಗಿ. ಆದರೂ ಹೊಟ್ಟೆಯಲ್ಲಿ ಮಗು ಚೆನ್ನಾಗಿ ಬೆಳೆದಿತ್ತು. ಹುಡುಗಿ ನೋವು ತಿಂದು ತಿಂದು ಸೋತು ಸೊರಗಿದ್ದಳು. ಕಡೆಗೆ ಇದ್ದಕ್ಕಿದ್ದಂತೆ ನೋವು ನಿಂತಿತು. ಆ ವೇಳೆಗೆ ಬೀಬಿಯರು, ಗೌಡತಿಯರು ಕೈಗಳಿಗೆ ಹರಳೆಣ್ಣೆ ಬಳಿದುಕೊಂಡು–ಮಗುವನ್ನು ಎಳೆದುಹಾಕಲು ಪ್ರಯತ್ನಿಸಿ ಅದರಲ್ಲಿ ಸೋತಿದ್ದರು. ಕೈಹಾಕಲು ಅಲ್ಲಿ ಜಾಗವಿದ್ದರೆ ತಾನೆ ? ಇವರ ಕೈಗಳು ದಪ್ಪ. ಎಲ್ಲರು ಹುಡುಗಿಯ ಆಸೆ ಬಿಟ್ಟು ಅಳುತ್ತಾ ಕುಳಿತರು. ಕಡೆಗೆ ಜಬೀನಾಬೀ–ಬೈರನಿಗೆ ಜ್ಞಾಪಿಸಿದಳು, 'ಫಣಿಯಮ್ಮನ ಕರೆಯಲು. ಆದರೆ ಬೈರ ಅಳುತ್ತಾ ಹೇಳಿದ. ಫಣಿಯಮ್ಮ ಬಾಂಬ್ರ ಮುದುಕಪ್ಪ–ಋಷಿ ಇದ್ದಂಗಪ್ರೆ. ಅವರನ್ನು ನನ್ನ ಮನೆಗೆ ಕರಿಯೋದ ? ಅಂತಹ ಕೆಲಸ ಮಾಡಿ ನಾವು ಯಾವ ಪಾಪಕ್ಕೆ ಹೋಗಾನಾ ? ಕೊನೆಗೆ ಜಮೀನಾಳೇ ಫಣಿಯಮ್ಮನ ಸಂಧಿಸಿ ಪರಿಸ್ಥಿತಿ ವಿವರಿಸಿ ಎರಡು ಜೀವ ಉಳಿಸಲು ಬೇಡುತ್ತಾಳೆ, 'ರಾತ್ರಿ ಹೊತ್ತು-ಅಂಚೆಆತ್ತೆ ಕಾಶಿಯಾತ್ರೆ, ಋಷಿ ಪಂಚಮಿ ನೇಹಿವೃತ ಮುಗಿಸಿದವರು, ಅವರು ಹೆರಿಗೆಗೆ ಬಂದಾರ ?' ಸಾಹುಕಾರರು ಹೇಳಿದರು. ಆದರೆ ಫಣಿಯಮ್ಮ ಒಂದು ತುಂಡುಉಟ್ಟು ಹೊರಟೇಬಿಟ್ಟಳು–ಮನೆಯಲ್ಲಿದ್ದವರು ಅವಳು ಹೋದ ಮೇಲೆ, ತುಂಬಾ ಮಾತನಾಡಿದರು, ಅಸಮಧಾನಗೊಂಡರು. ಫಣಿಯಮ್ಮ ರಾತ್ರಿ–ಬೈರ–ಮುಸಲಮಾನರ ಹೆಂಗಸಿನ ಜತೆಗೆ ಅಲ್ಲಿಗೆ ಬಂದಾಗ ಇಡೀ ಸೇರಿದ ಜನ ಭಯ ಭೀತರಾದರು. ನೂರಾರು ಬಾಣಂತನ ಮಾಡಿದ್ದರು, ಹೆರಿಗೆ ಮಾಡಿಸಿದ್ದರು 'ಫಣಿಯಮ್ಮ, ಬೂಬಿಯರಿಂದ ವಿಷಯ ತಿಳಿದು ತನ್ನ ಸಣ್ಣ ಕೈಗಳಿಗೆ ಹರಳೆಣ್ಣೆ ಹಚ್ಚಿಕೊಂಡು ಸಿಂಕಿಯ ಹೆರಿಗೆ ಮಾಡಿಸಿದಳು. ಮಗು

ಹೊರಗೆ ಬಂತು. ಅದರ ಹಿಂದೆ ರಕ್ತ ಪ್ರವಾಹ, ಫಣಿಯಮ್ಮನ ಮೈ ಜುಂ ಎಂದಿತು. 'ಭಗವಂತ ಇದೆಂತಹ ಹೊಲಸು ನಿನ್ನ ಸೃಷ್ಟಿ, ನನಗೆ ಮುಂಡೆ ತನವಾದರೂ ಅಡ್ಡಿಲ್ಲ ಈ ಹೊಲಸಿನಿಂದ ಪಾರುಮಾಡಿದಿಯಲ್ಲ' ಅಂದುಕೊಂಡಳು ಫಣಿಯಮ್ಮ. ಬಾಣಂತಿ ಮುಖದಲ್ಲಿ ನಗುಬಂತು-ಬಾಣಂತಿಯನ್ನು-ಎಲ್ಲರನ್ನು ಸಮಾಧಾನ ಮಾಡಿ, ಮಧ್ಯ ರಾತ್ರಿ ತೋಟದ ಹಳ್ಳದಲ್ಲಿ ಸ್ನಾನಮಾಡಿ, ಆತ್ಮ ಶುದ್ಧಿಯ ಮಂತ್ರ ಹೇಳಿ ಮನೆಗೆ ಬಂದರು. ಸುಳ್ಳು ಹೇಳಿ ಬಾಣಂತಿಗೆ-ಮಗೂಗೆ ಔಷಧಿ ಕೊಟ್ಟು ಕಳುಹಿಸಿದಳು. ಜಾತಿಗಿಂತ ಮಲೆನಾಡಿಗರಿಗೆ, ನೀತಿ-ಹೃದಯವಂತಿಕೆ ಹೆಚ್ಚಾಗಿತ್ತು. ಮಾನವತೆ ಅಷ್ಟಿತ್ತು. ಆದ್ದರಿಂದ ಎಲ್ಲಾ ಜಾತಿಯವರು ಹೊಂದಿಕೊಂಡು ಸುಖದಿಂದ ಇದ್ದರು. ಇದನ್ನು ಇಂದಿರಾ ಫಣಿಯಮ್ಮ ಕಾದಂಬರಿಯಲ್ಲಿ ನಿರೂಪಿಸಿದ್ದಾರೆ.

ಮಲೆನಾಡಿನ ಹಳ್ಳಿಗಳ, ಅಲ್ಲಿನ ಮನುಷ್ಯರ ಪಶುಪಕ್ಷಿಗಳ ಆಚಾರ-ವಿಚಾರಗಳ, ಕಾಡು-ಮೇಡುಗಳ-ಗುಡ್ಡ ಬೆಟ್ಟಗಳ, ತೊರೆ-ನಿಧಿಗಳ, ಕೌಟುಂಬಿಕ ಬದುಕಿನ ಸುಖ-ದುಃಖಗಳನ್ನು ಎಂ.ಕೆ. ಇಂದಿರಾ ತಮ್ಮ ಬರಹಗಳಲ್ಲಿ ತಂದರು,ದಾಖಲಿಯಿಸಿದವರು. ಅವರ ಅನುಭವಗಳು, ಕೇಳಿದ ಮಾಹಿತಿಗಳು. ಓಡಾಡಿದ ಭಾಗಗಳ ಬದಕನ್ನೂ ಆಯಾಯ ಕೌಟುಂಬಿಕ ಆಡು ಮಾತುಗಳನ್ನು-ತಾವು ಕಳೆದ ಕಾಲದಲ್ಲೇ ಸಿಕ್ಕಷ್ಟು ಮಲೆನಾಡಿನ ಚಿತ್ರಣವನ್ನು ಅವರ ಹಲವಾರು ಕಾದಂಬರಿಗಳಲ್ಲಿ-ಕಥೆಗಳಲ್ಲಿ-ಬರಹ ಗಳಲ್ಲಿ ಕಾಣಬಹುದು.

ಬದುಕಿನ ಗಂಟು-ಬರಹದ ನಂಟು

○

○

○ **ಪ್ರೇಮಾಭಟ್**

ವ್ಯಕ್ತಿಯ ನೆನಪಿನಂಗಳದ ಚಿತ್ತಬುತ್ತಿಯಲ್ಲಿ ನೆನಪುಗಳು ಸದಾ ತುಂಬಿ ಕೊಂಡಿರುತ್ತವೆ. ಅದು ಬತ್ತುವುದಿಲ್ಲ, ಬದಲು ಅವನು ಅಥವಾ ಅವಳು ಇರುವಷ್ಟು ದಿನಗಳೂ ಜೊತೆಗೂಡಿಕೊಂಡು, ಸೆಲೆಒಡೆದು ಒರತೆಯಾಗಿ ಹರಿವುದುಂಟು. ಅದು ವ್ಯಕ್ತಿ-ವ್ಯಕ್ತಿಯೊಳಗಣ ಸಂಬಂಧದ ನೆನಪುಗಳಾಗಿರಬಹುದು, ವಸ್ತುವಿನ ಸಂಬಂಧವಾಗಿರಬಹುದು, ಇಲ್ಲ ಯಾವುದೋ ಒಂದು ಅಘಟಿತ ಘಟನೆಯ ನೆನಪಾಗಿರಬಹುದು. ವ್ಯಕ್ತಿಯು ಅಥವಾ ವಸ್ತುವಿನ ಮಧುರ ಸಂಬಂಧ ಒಂದು ರೀತಿಯ ಅವಿನಾಭಾವ ಸಂಬಂಧ. ಆ ಮಧುರ ಸಂಬಂಧದ ಸಿಹಿ ಅನುಭವಗಳನ್ನು ಭಾವಿಸಿ ನೋಡಬೇಕಷ್ಟೇ.

ಸಾಹಿತ್ಯ ಎಂದರೆ ವಿಶಿಷ್ಟ ಪದಗಳ ಜೋಡಣೆಯಲ್ಲ. ಪದಗಳನ್ನು ತುರುಕುವುದರಿಂದ ಸಾಹಿತ್ಯ ಸರ್ವಾಂಗೀಣವಾಗಲಾರದು. ಅದು ಹುಟ್ಟಿಬರುವುದು ಹುಟ್ಟುಪ್ರತಿಭೆಯಿದ್ದವರಲ್ಲಿ, ಅದು ವಿಕಾಸವಾಗು ವುದು ಸಾಮಾಜಿಕ ತಳಹದಿಯ ಮೆಟ್ಟಿಲಲ್ಲಿ, ಅದು ಹರಳುಗೊಳ್ಳು ವುದು ಲೋಕಾನುಭವದಲ್ಲಿ. ಎಲ್ಲರಿಗೂ ನಿಲುಕದ, ಎಲ್ಲರಿಗೂ ಅಲ್ಲದವು ಗಳು ಕಲೆ, ಕಾವ್ಯ, ಸಾಹಿತ್ಯ.

ಶ್ರೀಮತಿ ಎಂ.ಕೆ. ಇಂದಿರಾ ಅವರು ಹುಟ್ಟಿ ಬೆಳೆದದ್ದು ತೀರ್ಥಹಳ್ಳಿಯ ಪರಿಸರದಲ್ಲಿ. ಮಲೆನಾಡಿನ ಮಲೆಗಳ ಬೀಡಲ್ಲಿ, ತೆಂಗು ಕಂಗು ಬಾಳೆಗಳ ಬನದಲ್ಲಿ. ಅಗಾಧವಾದ, ಸವಿದಷ್ಟೂ, ಸಂತೋಷಕೊಡುವ ಪ್ರಕೃತಿಯ ಸಿರಿಮುಡಿಯಲ್ಲಿ ಹೂವಾಗಿ ಅರಳಿದ ಕುಡಿ. ಸಮೃದ್ಧವಾಗಿ

ದೊರಕುವ ಹಾಲು ತುಪ್ಪದಲ್ಲಿ ಕೈತೊಳೆದು ಪರಕಾರ ತೊಟ್ಟ ಹುಡುಗಿ. ಆಸುಪಾಸಿನ ಕುಟುಂಬಗಳ ಸಿಹಿ-ಕಹಿ ಅನುಭವಗಳನ್ನು ಮೈಗೂಡಿಸಿಕೊಂಡು ಬೆಳೆದ ಶ್ರೀಮತಿ ಎಂ. ಕೆ. ಇಂದಿರಾ ಅವರು ಕಲಿತದ್ದು ತೀರ ಅಲ್ಪ. ವಿದ್ಯಾಭ್ಯಾಸವೇ ಸಾಹಿತ್ಯಕ್ಕೆ ಪೂರಕವಲ್ಲ. ಹಾಗಿದ್ದರೆ ವಿದ್ಯಾವಂತರೆಲ್ಲರೂ ಬರವಣಿಗೆಗೆ ಇಳಿಯುತ್ತಿದ್ದರು. ವಿದ್ಯೆ ವ್ಯಕ್ತಿಯ ಜ್ಞಾನದಾಹವನ್ನು ತಣಿಸುತ್ತದೆಯೇ ಹೊರತು ಸಾಹಿತಿಯನ್ನಾಗಿ ಮಾಡುವುದಿಲ್ಲ. ಬದುಕು ಎಂಬ ಮಹಾಪಾಠಶಾಲೆಯಲ್ಲಿ ಕಲಿತದ್ದು ಅಪಾರವಾಯ್ತು. ಕೆಲವರಿಗೆ ಬದುಕು ಸಂಪಾದಿಸಿ ಗಂಟುಮಾಡುವುದಕ್ಕಷ್ಟೆ, ಒಡವೆ ವಸ್ತ್ರಗಳನ್ನು ಹಾಕಿಕೊಂಡು ಮೆರೆಯಲಿಕ್ಕಷ್ಟೆ. ಶ್ರೀಮತಿ ಎಂ. ಕೆ. ಇಂದಿರಾ ಅವರಿಗೆ ಬದುಕು ಒಂದು ಗಂಟಾಗಿ ಪರಿಣಮಿಸಿತು. ಆ ಗಂಟೊಳಗೆ ಇದ್ದ ಬದುಕಿನ ವಿವಿಧ ಮುಖಗಳು ಬರವಣಿಗೆಗೆ ಪೂರಕವಾದುವು. ಆ ಗಂಟಲ್ಲಿ ಏನಿದೆ ಏನಿಲ್ಲ. ಬದುಕಿನ ವಿವಿಧ ಮುಖಗಳು ಅಲ್ಲಿವೆ. ಅದು ಎಷ್ಟು ಅಭದ್ರ, ಆದರೆ ಅಷ್ಟೇ ಸಾಂದ್ರ. ಅದೆಷ್ಟು ವಿಚಿತ್ರ ಆದರೆ ಅಷ್ಟೇ ಸಚಿತ್ರ. ಅದೆಷ್ಟು ಭವ್ಯ, ಅಷ್ಟೇ ನೀರಸ. ಬದುಕಿನ ವಿವಿಧ ಮುಖದ ಗಂಟನ್ನು ಬಿಚ್ಚಲು, ಪದರು ಪದರಾಗಿ ತೆರೆದಿಡಲು ಸಾಧ್ಯವಾಯಿತು. ಬದುಕಿನ ಗಂಟು ಬರಹದ ನಂಟನ್ನು ಸಂಪಾದಿಸಿಕೊಟ್ಟಿತು.

ನನಗೆ ಶ್ರೀಮತಿ ಎಂ. ಕೆ. ಇಂದಿರಾ ಅವರ ಪರಿಚಯವಾದ್ದು ಅವರ ಪ್ರಥಮ ಕಾದಂಬರಿ ತುಂಗ ಭದ್ರ ಪುಸ್ತಕ ರೂಪದಲ್ಲಿ ಬಂದ ಹೊಸದರಲ್ಲಿ. ಈ ಸಂದರ್ಭದಲ್ಲಿ ಅವರ ಪತಿ ಶ್ರೀ ಕೃಷ್ಣರಾವ್ ಅವರನ್ನು ನೆನೆಯದೆ ಹೋದರೆ ಅವರಿಗೆ ಮಾತ್ರ ಏನು ಶ್ರೀಮತಿ ಎಂ. ಕೆ. ಇಂದಿರಾ ಅವರಿಗೂ ಅನ್ಯಾಯ ಮಾಡಿದಂತೆ. ಒಂದು ಪ್ರತಿಭೆ ವಿಕಾಸವಾಗಬೇಕಾದರೆ ಮನೆಯ ಪರಿಸರ ಅತಿಮುಖ್ಯ. ಕಾಡುವ ಗಂಡ, ಪೀಡಿಸುವ ಮಕ್ಕಳು ಇದ್ದರೆ, ಅಥವಾ ಕಾಡುವ ಹೆಂಡತಿ ಪೀಡಿಸುವ ಮಕ್ಕಳ ಮಧ್ಯೆ ಬರವಣಿಗೆ ಕಷ್ಟಸಾಧ್ಯ. ನಾನು ನೋಡಿದ ಹಾಗೆ ಶ್ರೀ ಕೃಷ್ಣರಾವ್ ಸರಸಿ. ಅವರೊಳಗಿದ್ದ ಹಾಸ್ಯ ಪ್ರಜ್ಞೆ ಶ್ರೀಮತಿ ಎಂ. ಕೆ. ಇಂದಿರಾ ಅವರಿಗೆ ಸ್ಫೂರ್ತಿನೀಡಿರಬೇಕು. ಶ್ರೀ ಕೃಷ್ಣರಾವ್ ಅವರ ಎಷ್ಟೋ ಅನುಭವಗಳೂ ಅವರ ಬರವಣಿಗೆಯಲ್ಲಿ ಹಾಸು ಹೊಕ್ಕಿರಬಹುದು. ಮನೆಯಲ್ಲಿದ್ದದ್ದು ಬಡತನ. ದಂಪತಿಗಳಿಗೆ ನಾಲ್ಕು ಗಂಡು ಒಬ್ಬ ಹುಡುಗಿ. ಜೀವನ ಸುಗಮವಾಗಿರಲಿಲ್ಲ. ಬಡತನ ಬವಣೆ ಎಂದು ದಂಪತಿಗಳಿಗೆ ಅನಿಸುತ್ತಿರಲಿಲ್ಲವೋ ಏನೋ. ಆಗಾಗ ಹೋಗುತ್ತಿದ್ದ ನಮಗೆ ಅವರಿಬ್ಬರ ಮಾತಿನಲ್ಲಿದ್ದ ಹಾಸ್ಯ ಪ್ರಜ್ಞೆ ರಸಗವಳವಾಗಿರುತ್ತಿತ್ತು. ಪ್ರಜಾವಾಣಿ ಸಂಪಾದಕರಾಗಿದ್ದು ಕೀರ್ತಿಶೇಷರಾದ ಟಿ. ಎಸ್. ರಾಮಚಂದ್ರ ಮತ್ತು ಅವರ ಮತ್ತೊಬ್ಬ ಬಂಧು ಡಾ। ಹೆಚ್.ಕೆ. ರಂಗನಾಥ ಹೆಸರಾಂತ ಲೇಖಕರು. ಶ್ರೀಮತಿ ಎಂ.ಕೆ. ಇಂದಿರಾ ಅವರ ಕುಟುಂಬವೇ ಸಾಹಿತ್ಯಕ್ಕೆ ಹೆಸರಾದ್ದು.

ಸುರಗಿ

ಶ್ರೀಮತಿ ಎಂ.ಕೆ. ಇಂದಿರಾ ಅವರ ಯಾವುದೇ ಕೃತಿಯನ್ನು ಕೈಗೆತ್ತಿಕೊಂಡರೂ ಅಲ್ಲಿ ಕಂಡು ಬರುವುದು ಮಲೆನಾಡಿನ ಮಣ್ಣಿನ ವಾಸನೆ ಹರಳುಗೊಂಡಿರುವುದನ್ನು. ಶೈಲಿಗೆ ತಕ್ಕಂತೆ ಬಾಗುವ ಭಾಷೆಯ ಲಾಲಿತ್ಯಕ್ಕೆ ಓದುಗರು ಮಂತ್ರ ಮುಗ್ಧರಾದರೆ ಆಶ್ಚರ್ಯ ಪಡಬೇಕಾಗಿಲ್ಲ. ತಮ್ಮ "ತುಂಗ ಭದ್ರ" ಕಾದಂಬರಿಯಲ್ಲಿ ಕಥೆ ಸತ್ಯಕ್ಕೆ ಸಮೀಪವಾದ್ದೆಂದು, ಈ ಸತ್ಯ ಶಿಲ್ಪಕ್ಕೆ ಹಿತಮಿತವಾಗಿ ಕಲ್ಪನೆಯ ಕವಚ ತೊಡಿಸಿದ್ದೇನೆ ಎಂದು ಅವರೇ ಹೇಳಿಕೊಂಡಿದ್ದಾರೆ.

ಸತ್ಯ ಘಟನೆಗಳಿಗೆ ಅವರು ಕೊಡುವ ಅಲಂಕಾರ ತಂತ್ರದ ದೃಷ್ಟಿಯಿಂದ ಕಳಶಪ್ರಾಯವಾದ್ದು. "ದೀಪ ಉರಿದೇ ಉರಿಯಿತು. ಗಂಧದ ಕಡ್ಡಿಯ ಪರಿಮಳ ಕೋಣೆ ತುಂಬಾ ತುಂಬಿಕೊಂಡಿತು. ಅಂದೋಜಿಯ ಸಾಮಾನುಗಳು ಮಿಟಮಿಟ ಕುಳಿತಿದ್ದುವು, ಊರೆಲ್ಲ ನಿದ್ರಿಸಿ ತುಂಗೆಯ ಭೋರ್ಗರೆತ ತಾನೇ ತಾನಾಗಿತ್ತು. ಮುದ್ದುರಾಮು ಹೊರ ಜಗತ್ತನ್ನು ಸಂಪೂರ್ಣ ಮರೆತ. ಅವನ ಅರಸಿಕತನದ ಅವಿದ್ಯಾವಂತ, ಅನಾಗರಿಕ ಕೃಷ್ಣವೇಣಿ ಇಂದು ಅವನ ಪಾಲಿಗೆ ಮೋಹಿನಿಯಾಗಿ ಮಂಗಳಾರತಿಯಾಗಿ ಮೈತುಂಬಿದಳು" ಎನ್ನುವಾಗ ಭಾಷೆಯ ಲಾಲಿತ್ಯದ ದೃಷ್ಟಿಯಿಂದ ತಂತ್ರದ ದೃಷ್ಟಿಯಿಂದ ಆಪ್ಯಾಯಮಾನವಾಗುತ್ತದೆ. (ಪುಟ-64) ಹಳ್ಳಿಯ ಮುಗ್ಧ ಹೆಣ್ಣು ಕೃಷ್ಣವೇಣಿಯನ್ನು ಮದುವೆಯಾದ ಮುದ್ದುರಾಮು ಅವಳನ್ನು ಕೆಣಕುವುದು ಕುಚೇಷ್ಟೆ ಮಾಡುವುದು, ಕೃಷ್ಣವೇಣಿ ಮುದುಡುವುದು, ಮೊದಮೊದಲು ಒಳಗೊಳಗೆ ಬುಸುಗುಡುವುದು ಸಹಜತೆಯನ್ನು ಪ್ರತಿಬಿಂಬಿಸಿದರೆ, ಅಂಥ ಹುಡುಗಿಯರಾದ ತುಂಗ ಭದ್ರೆಯರ ಪಾತ್ರಗಳೂ ಹಿಗ್ಗಿದಷ್ಟೂ ಹಿಗ್ಗಿಸಿಕೊಳ್ಳುತ್ತವೆ. ಊರೊಳಗೆ ನಾಟಕ ನಡೆದಾಗ ಹುಡುಗಿಯರು ಕೇಳುವ ಪ್ರಶ್ನೆ

"ಏ ಮಂದಾ ವೈಕುಂಟ ಹೆಂಗಿರುತ್ತೆ"

"ಹಳದಿ ಬಣ್ಣಂದ್ರೆ ಎಂತದೆ"

"ಅರಿಶಿನ ಬಣ್ಣ ಅಂದ್ರೆ ಹೆಂಗಿರುತ್ತೊ ನಂಗೇನ್ ಗೊತ್ತೆ" (ಪುಟ-101)

ಈ ಮಾತುಗಳಿಗೆ ಮುದ್ದುರಾಮು ಪ್ರತಿಕ್ರಿಯಿಸಿದರೆ, ಕೃಷ್ಣವೇಣಿ ಕೊಡುವ ನೇರ ಉತ್ತರ.

"ನಿಮ್ಜಂಬಕ್ಕಷ್ಟು ಕಲ್ ಬಡೀತು, ಅವಕ್ಕೆ ಕಣ್ಣಿರದಿದ್ರೆ ಕಿವಿ ಇಲ್ಲಾ ಬ್ಯಾಂಡು, ಹಾರ್ಮನಿ, ಪದಯಲ್ಲಾ ಕೇಳ್ತಾಕೂತಿರ್ತಾವೆ. ಮಾತಜಗೆಲ್ಲ ಕೇಳುತ್ತಲ್ಲ, ಪಾಪ ನಾವೆಲ್ಲ ನೋಡ್ಕಬಂದು ಅವೆರಡನ್ನೆ ಬಿಟ್ಟಿರಾದಾ ?" ಎನ್ನುವಾಗಿನ ಕಳವಳ, ಕಾದಂಬರಿಯ ಉದ್ದಕೂ ಕೃಷ್ಣವೇಣ ತುಂಗ ಭದ್ರೆಯರಲ್ಲಿ ತಳೆದಿರುವ ಅಥವ ಇಟ್ಟಿರುವ ಅನುಕಂಪ ಎಲ್ಲರ ಅನುಕಂಪವಾಗಿ ಪರಿಣಮಿಸುತ್ತದೆ.

ಶ್ರೀಮತಿ ಎಂ.ಕೆ. ಇಂದಿರಾ ಅವರ ಫಣಿಯಮ್ಮ ಕಾದಂಬರಿಯಲ್ಲಿ ಒರುವ ಫಣಿಯಮ್ಮ ಬಾಲ ವಿಧವೆ. ಸಂಪ್ರದಾಯ ಕಟ್ಟುಕಟ್ಟಳೆಯನ್ನು ಶಾಸ್ತ್ರಬದ್ಧವಾಗಿ ಆಚರಿಸುವ ಫಣಿಯಮ್ಮ ಹೇಳುವುದು :

"ಉಣ್ಣೋದು ತಿನ್ನೋದು ಎಲ್ಲೋಗತ್ತೆ ಮಾಲಕ್ಷ್ಮಿ. ಒಂದಪ ಎಂಜಲ ಶಾಸ್ತ್ರ ಮಾಡಿ ಕೈತೊಳೆದ್ರಾತು. ಇನ್ನು ನಮ್ಮಂತೋರು ಎರಡ್ನೆದಪ ಉಣ್ಬಾರ್ದು ಕಣೆ" ಎನ್ನುವಲ್ಲಿ ಕೇಂದ್ರೀಕರಿಸಿದ್ದರೆ, ಬದಲಾಗುವ ಭಾವ, ದಾಕ್ಷಾಯಿಣಿಯ ಗಂಡ ಸತ್ತು ಅವಳು ಮಂಡೆ ಬೋಳಿಸಿಕೊಳ್ಳೋದಿಲ್ಲ ಎಂದು ಹಟಮಾಡಿದಾಗ ವ್ಯಕ್ತವಾಗುವ ಭಾವ, ತಾವು ಬಾಳಿನುದ್ದಕ್ಕೂ ಅನುಭವಿಸಿದ ನೋವು ಒಳಗೊಳಗೆ ದಹಿಸುತ್ತಿದ್ದುದರಿಂದ ಇರಬಹುದೇ ಎಂದು ಯೋಚಿಸುವಂತೆ ಮಾಡುತ್ತದೆ, ಅವರ ಆಗಿನ ಮಾತುಗಳು.

"ಪ್ರಾಯದ ಹೆಣ್ಣು ನೆಟ್ಟಗೆ ಎರಡ್ವರ್ಷ ಗಂಡನ ಜೊತೆ ಬಾಳಲಿಲ್ಲ. ಈಗಿನ ಪ್ರಾಯದ ಹೆಣ್ಣು ಆ ಚೌರದೋನ ಮುಂದೆ ಮೈತುಂಬ ಬಟ್ಟೆಲ್ದೆ ಕೂರಬಕು ಅಂದ್ರೆ ಅದಕಾರ ಆದೀತಾ" ಎನ್ನುವಲ್ಲಿ ವರ್ತಮಾನಕಾಲಕ್ಕೆ ಪ್ರತಿಸ್ಪಂದಿಸುವ ಫಣಿಯಮ್ಮನನ್ನು ನೋಡಬಹುದು. ಹಾಗೆ ಸರಸಿಯ ಮದುವೆಗೆ ಗಂಡುಗಳು ಬರುತ್ತಿದ್ದಾಗ ಅವರು ಆಡುವ ಮಾತು,

"ಬನಶಂಕ್ರಿ ಜಾತಕ ಪಾತಕ ಅತಿನೋಡಿಸಬಾರ್ದು ಕಣ್ರೆ, ಗೋತ್ರ ಸೂತ್ರ ನೋಡ್ಕಳ್ಳಿ ಸಾಕು, ನನ್ನಪ್ಪ ನನ್ನ ಜಾತಕ ನೋಡಿ ಹೇಳಿದ್ದೇ ಹೇಳಿದ್ದು ಅಖಂಡ ಮುತ್ತೈದೆತನ ಅಂತ. ನೀವೆಲ್ಲ ಕಾಣ್ತಾ ಇದ್ದೀರಲ್ಲ ನನ್ನ ಬಾಳ್ನ" ಎನ್ನುವಲ್ಲಿ ಫಣಿಯಮ್ಮ ಅದುವರೆಗೆ ಅನುಭವಿಸಿದ ಮೂಕವೇದನೆ, 'ಇಪ್ಪತ್ತೆಂಟು ಜನಕ್ಕೆ ಜಾತಕ ತೋರಿಸ ಬ್ಯಾಡ' ಎನ್ನುವಾಗ ಅದು ಧ್ವನಿಸುತ್ತದೆ.

ಮನೆಮಾತಾದ ಎಂ. ಕೆ. ಇಂದಿರಾ ಅವರ 'ಗೆಜ್ಜೆಪೂಜೆ'ಯಂತು ಕಾದಂಬರಿ ಕ್ಷೇತ್ರಕ್ಕೆ ಅವರು ನೀಡಿರುವ ಅತ್ಯುತ್ತಮ ಕೊಡುಗೆ...ಕೆಂದಾವರೆ ಲಾಸ್ಯವಾಡಿದಳು ಒನಪಿನಿಂದ ! ಮಧು ಮತ್ತು ಹೆದ್ದುಂಬಿಯೊಂದು ಸೊಕ್ಕಿ ಜೊಂಯ್‌ಗುಡುತ್ತ ತಾವರೆಯನ್ನರಸಿಕೊಂಡು ರೊಯ್ಯನೆ ಹಾರಿತು, ಕೊಳಚೆ ಮಧ್ಯದಲ್ಲಿ ಅರಳಿನಿಂತ ಕಮಲವನ್ನು ಅಚ್ಚರಿಗಣ್ಣುಗಳಿಂದ ನೋಡುತ್ತ ನಿಂತ ಬಾಲಕ ಸೋಮು.... ಎನ್ನುವ ಈ ಮಾತುಗಳು ವೇಶ್ಯೆಯೊಬ್ಬಳ ಜೀವನ ಚಿತ್ರ ಎನ್ನುವುದು ಪ್ರಾರಂಭದಲ್ಲೇ ಓದುಗನ ಗಮನಕ್ಕೆ ಬಂದರೂ, ಅವರು ಕೊಡುವ ಉಪಮೆ ಕಾದಂಬರಿಯ ವೈಶಿಷ್ಟ್ಯವನ್ನು ಹೆಚ್ಚಿಸಿದೆ.

ಚಂದ್ರಳ ತಾಯಿ ಅಪರ್ಣ ಹೃದಯ ಸಂಸ್ಕಾರ ಹೊಂದಿದ ವೇಶ್ಯೆ, ಗರತಿಯಂತೆ ಬಾಳಬೇಕೆಂಬ ಹಿರಿಯಾಸೆ ಹೊತ್ತವಳು. ಮಗಳು ಚಂದ್ರಳ ಬದುಕು ಹಸನಾಗ ಬೇಕೆಂದು ತುಡಿಯುತ್ತಿದ್ದ ಜೀವ. ಆದರೆ ವೇಶ್ಯೆಯೊಬ್ಬಳಿಗೆ ಹುಟ್ಟಿದ ಮಗಳು ಗರತಿಯಾಗಲು ಸಾಧ್ಯವೆ ? ಇದು ಕಾದಂಬರಿಯ ವಸ್ತು. ಸೋಮುವಿಗೆ ಕಾಯಾ ವಾಚಾ ಮನಸಾ ತನ್ನನ್ನು ಒಪ್ಪಿಸಿಕೊಂಡ ಚಂದ್ರ ಅವನ ಕೈ ಹಿಡಿಯಲು ಸಾಧ್ಯ ವಾಗುವುದಿಲ್ಲ. ಅವಳ ಸಾವು ಗೆಜ್ಜೆಪೂಜೆಯಲ್ಲಿ ಪರ್ಯಾವಸಾನವಾಗುತ್ತದೆ. ಚಂದ್ರ ಇದನ್ನು ಬಯಸಿದವಳಲ್ಲ. ಬಯಸದ್ದನ್ನು ಸ್ವೀಕರಿಸಲು ಸಿದ್ಧಳಿಲ್ಲ. ಅವಳ ಮಾನಸಿಕ ತುಮುಲ ಸೋಮು ಬೇರೊಬ್ಬ ಹೆಣ್ಣನ್ನು ಕೈಹಿಡಿದಾಗಿನ ನಂತರದ್ದು. ಕಥಾನಾಯಕಿ ಚಂದ್ರ, ಅಪರ್ಣ, ಆಗೊಮ್ಮೆ ಈಗೊಮ್ಮೆ ಮಿಂಚುವ ಚಂದ್ರಳ ಗೆಳತಿ ಮಾಲತಿಯೇ ಆಗಲಿ ಜೀವತುಂಬಿದ ಪಾತ್ರ. ವಿಟಪುರುಷ ಗಂಗಯ್ಯನೇ ಆಗಲಿ, ಚಂದ್ರಳ ತಂದೆ ಚಂದ್ರಶೇಖರನೇ ಆಗಲಿ, ಸೋಮುವೇ ಆಗಲಿ ಕ್ಷಣಕಾಲ ವಾದರೂ ಕಣ್ಣಮುಂದೆ ನಿಲ್ಲುವ ಪಾತ್ರಗಳು. 'ಸದಾನಂದ' ಅವರ ಮತ್ತೊಂದು ಉತ್ತಮ ಕಾದಂಬರಿ. 'ಸದಾನಂದ' ವಿಧವಾ ಸಮಸ್ಯೆಗೆ ಪರಿಹಾರ ನೀಡುತ್ತದೆ. ಸದಾನಂದ ವಿಧವೆ ಕಮಲಳ ಕೈ ಹಿಡಿಯುವುದೇ, ಕಾದಂಬರಿಯ ಕಥಾವಸ್ತು. ಲಕ್ಷ್ಮೀನರಸಿಂಹ ಮೋಟಾರ್ ಸರ್ವೀಸ್‌ಗೆ 'ನೂಕೋನರಸಿಂಹ' ಎಂದು ಅಡ್ಡ ಹೆಸರಿಟ್ಟು ಕರೆಯುವುದು ವಾಡಿಕೆ. ಆ ಬಸ್ಸು ನೂಕಿದಷ್ಟು ನೂಕಿಕೊಳ್ಳುತ್ತಿತ್ತು. ಬಸ್ಸು ಮುಂದೆ ಹೋಗದಿದ್ದಾಗ ಬಸ್ಸಿನ ಚಾಲಕ ಶಿಂಗ್ರಿಯ ಬೈಗುಳದ ಬಗ್ಗೆ ಹೇಳುವಾಗ ಅವನ ಸಾಹಿತ್ಯ ಭಂಡಾರ ಬಹಳ ಪವಿತ್ರವಾದದ್ದು ಎನ್ನುತ್ತಾರೆ ಲೇಖಕಿ. ಅವರ ಹಾಸ್ಯ ಪ್ರಜ್ಞೆ ಅವನ ಬೈಗುಳದ ಮಾತಿನಲ್ಲಿ ಓದುಗನನ್ನು ನಗೆಗಡಲಲ್ಲಿ ತೇಲಿಸುತ್ತದೆ.

"ಮತ್ತೇನಾತ ಶಿಂಗ್ರಿ" ಎಂದ ಲಕ್ಷ್ಮೀನರಸಿಂಹಯ್ಯನವರ ಮಾತಿಗೆ "ಆತು ನನ್ನಮ್ಮನ ಪಿಂಡ" ಎನ್ನುವ ಶಿಂಗ್ರಿಯಂತ ಚಾಲಕರನ್ನು ಕಂಡಿರುವವರಿಗೆ ಅವನ ವರ್ತನೆ ಹೊಸದೇನು ಅಲ್ಲ ಎನಿಸಬಹುದು. ಕಮಲೆ ವಿಧವೆ ಆದರೆ ಚಿಂತನ ಶೀಲೆ, ಬುದ್ಧಿವಂತೆ, ಅವಳು ಕಾದಂಬರಿ ಕತೆ ಪುಸ್ತಕ ಓದ ಎಲ್ಲಳು. ಕಾದಂಬರಿಯಲ್ಲಿ ಬರುವ ಪ್ರಕರಣಗಳನ್ನು ಮತ್ತೆ ಮತ್ತೆ ಓದುವಳು. ಅಜ್ಜಮ್ಮ, ಯಂಟಮ್ಮ ಇಬ್ಬರದೂ ಒಂದೇ ಮಾತು, ಒಂದೇ ತೀರ್ಮಾನ, ಅವಳು ಕಡೆವರೆಗೂ ಹಾಗೇ ಇರಬೇಕು. ಅದಲ್ಲದೆ ಇನ್ನೇನಿದೆ. ಅವರು ಹಾಗೆ ಯೋಚಿಸಿದರೆ ರಾಮಣ್ಣ ಯೋಚಿಸುವುದೇ ಬೇರೆ, ತಮ್ಮ ಆಸ್ತಿಯಲ್ಲಿ ಮೂರು ಭಾಗ ಮಾಡಿ, ಮೂರು ಹೆಣ್ಣುಮಕ್ಕಳಿಗೆ ಹಂಚುವುದು. ಕಮಲ ಹೆಣ್ಣಲ್ಲ ಗಂಡು, ಅವಳನ್ನು ಹಾಗೆ ನೋಡಿಕೊಳ್ಳಬೇಕು. ತಮ್ಮ ವಂಶದ ಗಂಡು ಮಕ್ಕಳ ಕೈಗೆ ಅವಳನ್ನು ಸಿಕ್ಕಿಸಬಾರದು. ರಾಮಣ್ಣನ ಮಗ ರಾಜು ಅಕ್ಕನ ಮದುವೆಗೆ ಮುಂದೊಂದು ದಿನ ಸಿದ್ಧವಾಗುತ್ತಾನೆಂದು ಆಗ ರಾಮಣ್ಣ

ತೀದಿರಲಿಕ್ಕಿಲ್ಲ. ಮುಂದೆ ವಿಧವೆಯ ಮದುವೆಯ ಪ್ರಶ್ನೆ ಬಂದಾಗ ತಮ್ಮ ಅರ್ಧ ಶತಮಾನದ ಆಯುಷ್ಯದಲ್ಲಿ ಮಾಡದ ಒಂದು ಅನುಚಿತ ಕಾರ್ಯವನ್ನು ತಾವೀಗ ಮಾಡಬೇಕಾಗಿ ಬಂದಿದೆ ಎಂದುಕೊಳ್ಳುವಾಗ ಪಡುವ ಸಂಕಟ-ಕೊನೆಗೊಮ್ಮೆ ಎಲ್ಲವನ್ನು ಕಿತ್ತೊಗೆದು ಮಗಳ ಭವಿಷ್ಯವನ್ನು ನೆನೆದು, ರಾಜುವಿನ ಅಗೋಚರ ಅಂತಃಕರಣ ನೆನೆದು, ಮಗಳ ಮದುವೆಗೆ ಒಪ್ಪುವುದು ನಿಜಕ್ಕೂ ಅಂತಃಕರಣವನ್ನು ಕಲಕುತ್ತದೆ.

ಟು-ಲೆಟ್, ಗಿರಿಬಾಲೆ, ತಾಪದಿಂದ ತಂಪಿಗೆ, ಕೂಚುಭಟ್ಟ ಹೀಗೆ ಹಲವಾರು ಅತ್ಯುತ್ತಮ ಕಾದಂಬರಿಗಳನ್ನು ಕನ್ನಡ ಜನತೆಗೆ ಕೊಟ್ಟಿರುವ ಶ್ರೀಮತಿ ಎಂ.ಕೆ. ಇಂದಿರಾ ಅವರ ಬದುಕು ಅರ್ಥಪೂರ್ಣ-ಬರಹ ಸತ್ವಪೂರ್ಣ.

"ನಮ್ಮಂಥ ಜಾಣರಿಗೆ ಬೇಕು ಬಣ್ಣದ ಬೊಂಬೆಗಳು. ಡಿಗ್ರಿಗಳನ್ನು ಪಡೆದು ಶೃಂಗಾರ ಕಾವ್ಯಗಳನ್ನೋದಿ ಕಲ್ಪನಾ ಕಾವ್ಯ ಸುಂದರಿಯರನ್ನೇ ಅಪ್ಪಿಕೊಳ್ಳುವುದರಲ್ಲಿ ಆಯ್ತು. ನಮ್ಮ ಬಾಳು-ಗಟ್ಟಿಯಾಗಿ ಶೀಸಿದರೆ ಆಕಾಶವಾಣಿ, ಪತ್ರಿಕೆಗಳಲ್ಲಿ ಬರಬೇಕೆಂಬ ಜಾಹೀರಾತು ಬುದ್ಧಿ ನಮ್ಮದು. ಒಂದು ಚಲುವೆ ಹುಡುಗಿಯನ್ನು ಮದುವೆಯಾದರೆ ಯಾವ ಲೋಕೋದ್ಧಾರದ ಕೆಲಸ ಅನ್ನುವಿರಿ ?"....

(ಪುಟ 317 ಸದಾನಂದ)

"ಇಂದಿರಾ ಅವರ ಪತ್ತೇದಾರಿ ಕಾದಂಬರಿ"

○

○

○ **ಉದಯಾದ್ರಿ**

ಎಂ. ಕೆ. ಇಂದಿರಾ ಅವರು ಬರೆದಿರುವ ಪತ್ತೇದಾರಿ ಕಾದಂಬರಿಗಳ ಬಗ್ಗೆ ಲೇಖನ ಬರೆದುಕೊಡಬೇಕು ಎಂಬ ಪತ್ರ ತಲುಪಿದೊಡನೆ, ತಲೆ ತುರಿಸಿಕೊಂಡೆ. ಕಣ್ಮುಚ್ಚಿ ಇಂದಿರಾ ಅವರ ಕಾದಂಬರಿಗಳನ್ನೆಲ್ಲಾ ನೆನೆದೆ. ಯಾವುದೂ ಪತ್ತೇದಾರಿ ಕಾದಂಬರಿ ಎನಿಸಲಿಲ್ಲಾ. "ಇಂದಿರಾ ಯಾವಾಗ ಪತ್ತೇದಾರಿ ಕಾದಂಬರಿ ರಚಯಿತ್ರಿ ಆಗಿದ್ದರು?" ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡೆ. ಬದುಕಿನ ಜಂಜಾಟವನ್ನು ಕಾದಂಬರಿಯ ವಸ್ತುವನ್ನಾಗಿಸಿಕೊಂಡು, ಸುತ್ತಲಿನ ಸಮಾಜ, ಪರಿಸರವನ್ನು ತೀಕ್ಷ್ಣವಾಗಿ, ನಿರ್ಭಿಢೆಯಿಂದ ಕೃತಿಯಲ್ಲಿಳಿಸಬಲ್ಲ ಸೃಜನಶೀಲ ಲೇಖಕಿ ಎಂಬುದನ್ನು ಎಲ್ಲರೂ ತೆರೆದ ಮನಸ್ಸಿನಿಂದ ಒಪ್ಪುತ್ತಾರೆ. ಅವರ ಎಲ್ಲಾ ಕಾದಂಬರಿಗಳು ಸಾಮಾಜಿಕ ಕಾದಂಬರಿಗಳು ಎಂಬುದು ದಿಟವಾದರೂ, ಏಕೋ "ಪತ್ತೇದಾರಿ" ಎಂಬ ಶಬ್ದ ಮನಸ್ಸಿನಲ್ಲಿ ಹೊಕ್ಕಾಗಿನಿಂದ ನನ್ನ "ಪತ್ತೇದಾರಿಕೆ" ಪ್ರಾರಂಭವಾಗಿಬಿಟ್ಟಿತು. ಇಂದಿರಾ ಅವರ ಕಾದಂಬರಿಗಳ ಗುಡ್ಡೆಯನ್ನು ಮುಂದೆ ಇಟ್ಟುಕೊಂಡು ಪುಟ, ಪುಟದಮೇಲೂ ಎಚ್ಚರಿಕೆಯಿಂದ ಕಣ್ಣಾಡಿಸುತ್ತಾ ಹೊರಟೆ. ಪತ್ತೇದಾರಿ ಕಾದಂಬರಿಯ ಪತ್ತೇದಾರಿಕೆ ಬಹಳ ದೀರ್ಘವಾದ ಸಂಗ್ರಾಮವಾಗಿತ್ತು. ನಾನೇಕೆ ಹೀಗೆ ಮಾಡಿದೆ ಎಂದು ಯೋಚಿಸಿದರೆ ಅಚ್ಚರಿ ಎನಿಸುತ್ತದೆ. ಈ ಗ್ರಂಥದ ಸಂಪಾದಕಿಯವರಿಗೆ ಪತ್ರ ಬರೆದು ಇಂದಿರಾ ಅವರ "ಪತ್ತೇದಾರಿ" ಕಾದಂಬರಿ ಯಾವುದೂ ಪತ್ತೆಯಾಗಲಿಲ್ಲ ಎಂದು ವಿಷಾದಿಸಿ, ಕ್ಷಮೆಯಾಚಿಸಿ ತಣ್ಣಗಿದ್ದುಬಿಡೋಣವೇ ? ಹೀಗೂ ಯೋಚಿಸಿದ್ದೆ. ಅದನ್ನೂ ಮಾಡಲಾಗದಿದ್ದುದಕ್ಕೆ ಬೇರೆ ಯಾವ ಕಾರಣವೂ ಇರಲಿಲ್ಲವಾದರೂ,

ತಲೆಯನ್ನು ಜಿಗಣೆಯಂತೆ ಹಿಡಿದಿದ್ದುದು "ಪತ್ತೇದಾರಿ" ಎನ್ನುವ ಶಬ್ದ. ಆ ಪದದಲ್ಲಿಯೇ ಅದ್ಭುತ ಅವ್ಯಕ್ತ ಶಕ್ತಿಯಿದೆ. ಈ ಶಕ್ತಿಯಿಂದ ಸ್ಫೂರ್ತಿಗೊಂಡು, "ಪತ್ತೇದಾರಿ" ಪ್ರಾರಂಭಿಸಿ ಆನಂದಿಸಬೇಕು. ನಮ್ಮಲ್ಲಿನ ಆತ್ಮವಿಶ್ವಾಸ ಪುಟಿದೆದ್ದು ಮೈಯೆಲ್ಲಾ ಹರಿದಾಡುತ್ತದೆ. ಜೀವನದಲ್ಲಿ ಸವಾಲುಗಳನ್ನು ಸಾಹಸಪಟ್ಟು ಎದುರಿಸುವ ಮನೋ ಪ್ರವೃತ್ತಿಯನ್ನು ಮಾನವ ಬೆಳೆಸಿಕೊಳ್ಳುವುದೂ ಈ ಪತ್ತೇದಾರಿಕೆಯ ತವಕದಿಂದಲೇ. ಉದಾಹರಣೆಗೆ ಮಕ್ಕಳ ಮನೋಭೂಮಿಕೆಯನ್ನೆ ಅಭ್ಯಸಿಸಿದರೆ ಸಾಕು, ಎಳೆಮನಸ್ಸಿನಲ್ಲಿ ಪತ್ತೇದಾರಿಕೆಯ ಮೊಳಕೆಯನ್ನು ಗುರುತಿಸಬಹುದು. ಮನೆಯಲ್ಲಿ ಬುಡಬುಡ ಓಡಾಡುತ್ತಿರುವ "ಪುಟ್ಟ"ನನ್ನು ಕರೆದು ಹೇಳಿ, "ಲೇ ಪುಟ್ಟು, ನನ್ನ ಕನ್ನಡಕ ಎಲ್ಲೋ ಮರೆತುಬಿಟ್ಟಿದ್ದೀನಿ. ಸ್ವಲ್ಪ ಹುಡುಕಿ ಕೊಡ್ತೀಯಾ?"–ಸರಿ, ಪುಟ್ಟುವಿನ ಪತ್ತೇದಾರಿಕೆ ಪ್ರಾರಂಭವಾಗುತ್ತದೆ. ಮಂಚದ ಕೆಳಗೆ ಬೆಕ್ಕಿನಂತೆ ನುಗ್ಗುತ್ತಾನೆ, ಅಲ್ಲಿ ಏನೂ ಇಲ್ಲವೆಂಬುದು ಅರಿವಿಗೆ ಬಂದೊಡನೆಯೆ ಹನುಮನಂತೆ ಮೇಜಿನ ಸಹಾಯದಿಂದ ಪುಸ್ತಕಗಳ ರ್‍ಯಾಕ್ ಏರುತ್ತಾನೆ. ಹಾಗೂ ಹೀಗೂ ಹೇಗೋ ಮಾಡಿ, ನಮ್ಮ ಎದುರಿಗಿನ ಪುಸ್ತಕದ ಕಪಾಟಿಗೆ ಕೈಹಾಕಿ ಕನ್ನಡಕವನ್ನು ಹುಡುಕಿ ತಂದು ಒಪ್ಪಿಸುತ್ತಾನೆ. ಕನ್ನಡಕವನ್ನು ತಾನೇ ಹುಡುಕಿಕೊಟ್ಟ ಆನಂದದಿಂದ ಅವನ ಮುಖ ಮಿನುಗುತ್ತಿರುತ್ತದೆ. ಬೆವರಿನ ಸಣ್ಣ ಹನಿಗಳು ಆ ಪುಟ್ಟ ದೇಹ ಪಟ್ಟಿರುವ ಶ್ರಮವನ್ನು ಹೇಳುತ್ತಿದ್ದರೂ, ಯಾವುದೋ ಅಪೂರ್ವವನ್ನು ಸಾಧಿಸಿದ ಹೆಮ್ಮೆ ಪುಟ್ಟನದಾಗಿರುತ್ತದೆ. ಕನ್ನಡಕ ತೆಗೆದುಕೊಂಡ ಹಿರಿಯರು ಬೆನ್ನುತಟ್ಟಿ ಪ್ರೋತ್ಸಾಹಿಸಿಬಿಟ್ಟರಂತೂ ಆಯಿತು, ಅವನು ಹಿಮಾಲಯವನ್ನು ಅಲ್ಲಾಡಿಸು ಎಂದರೂ ಒಲ್ಲೆನೆನ್ನದೆ ತನ್ನ ಪುಟ್ಟ ಕೈಗಳನ್ನು ಸಾಹಸಕ್ಕೆ ಒಡ್ಡುತ್ತಾನೆ. ಹೀಗೆ ಮಾನವನಲ್ಲಿ ಕುತೂಹಲ ಉಮ್ಮಳಿಸುವ ಪತ್ತೇದಾರಿಕೆ ಅಂಶವಿದ್ದೇ ಇರುತ್ತದೆ. ಇದನ್ನು ಉತ್ತಮವಾಗಿ ಬೆಳೆಸಿಕೊಳ್ಳಬೇಕಷ್ಟೆ. ಬೆಳೆದರೆ ಹೇರಳವಾಗಿ ಬೆಳೆಯುತ್ತದೆ. ಆದರೆ ಅದನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಲ್ಲವರು ಬುದ್ಧಿವಂತರು ಮಾತ್ರ. ಬುದ್ಧಿವಂತಿಕೆ - ಪತ್ತೇದಾರಿಕೆ ಮಿಳಿತವಾದರೆ ಅದ್ಭುತಗಳನ್ನು ಸೃಷ್ಟಿಸಬಲ್ಲದು. ಇನ್ನು ಇವೆರಡರ ಜೊತೆ ಬರಹ ಶಕ್ತಿಯೂ ಇದ್ದರೆ ಪ್ರತಿಯೊಂದು ಘಟನೆಯೂ ಪತ್ತೇದಾರಿ ಕಾದಂಬರಿಯಾಗಲು ಇಂಬುಕೊಡುತ್ತದೆ. ಅದಕ್ಕಾಗಿಯೇ ಮನಸ್ಸಿಗೆ ಸಾಕಷ್ಟು ಕಸರತ್ತು ಕೊಟ್ಟು ಘಟನೆಗಳನ್ನು ಕುತೂಹಲಕಾರಿಯಾಗಿ ಬೆಳೆಸಿಕೊಳ್ಳುತ್ತಾ ಹೋಗಿ ದಡ ಮುಟ್ಟುವ ಪತ್ತೇದಾರಿ ಕಾದಂಬರಿಗಳು ಅತ್ಯಂತ ಜನಪ್ರಿಯ ಪ್ರಕಾರವಾಗಿರುವುದು. ಪತ್ತೇದಾರಿ ಎಂದೊಡನೆಯೇ ನಮ್ಮ ಮನದಲ್ಲಿ ಮೂಡಿ ನಿಲ್ಲುವ ವ್ಯಕ್ತಿ "ಶೆರ್ಲಾಕ್ ಹೋಮ್ಸ್". ಶೆರ್ಲಾಕ್ ಹೋಮ್ಸ್ ನಾಯಕನಾಗಿರುವ ಪತ್ತೇದಾರಿ ಕಾದಂಬರಿಗಳು ಎರಡುತನದಿಂದ ಮೆರೆಯುತ್ತವೆ. ಮೊದಲನೆಯದು, ಕಾದಂಬರಿಯ ಕೊನೆಯ ಪುಟದವರೆಗೂ ನಿಗೂಢತೆಯನ್ನು ಹಿಡಿದಿಟ್ಟಿರು

ತ್ತವೆ. ಎರಡನೆಯದು ಸಾಧ್ಯವಾದಷ್ಟು ಅಪರಾಧಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ವೈಜ್ಞಾನಿಕ ಆಧಾರಗಳನ್ನು ಸೃಷ್ಟಿಸಿ ಅಪರಾಧಿಯ ಕೈಗೋ ಕೊರಳಿಗೋ ಉರುಲು ಹಾಕಿಸುವ ವಿಧಾನ ಮೆಚ್ಚಿಗೆಯಾಗುತ್ತದೆ. ಇಲ್ಲಿ ಆಧಾರಗಳನ್ನು ಅನುಸರಿಸಿ ಪತ್ತೇದಾರ 'guess work' ಮಾಡುತ್ತಾ ಹೋಗುತ್ತಾನೆ. ಅವನ ಸಂಶಯದ ಕಣ್ಣು ಒಬ್ಬರಾದಮೇಲೆ ಮತ್ತೊಬ್ಬರ ಮೇಲೆ ಕುಪ್ಪಳಿಸುತ್ತಾ ಹೋಗುತ್ತದೆ. ಓದುಗನ ಹೃದಯವನ್ನು ಡವಗುಟ್ಟಿಸುತ್ತಾ ಹೋಗಿ, ಅಚ್ಚರಿ ಪಡುವಂತೆ ಅಪರಾಧಿಯನ್ನು, ಅಪರಾಧವನ್ನು ಶೋಧಿಸುವ ಹೋಮ್ಸ್ ಕಾದಂಬರಿಯ ಯಶಸ್ವಿ ನಾಯಕನಾಗುತ್ತಾನೆ. ನಿಗೂಢತೆಯನ್ನು ಒಡೆದು ಬಿಡಿಸುವ ದಾರಿಯಲ್ಲಿ ನಾಯಕ ಶೆರ್ಲಾಕ್ ಹೋಮ್ಸ್ ಅಮೋಘ ತಂತ್ರಗಳನ್ನು ಹೂಡುತ್ತಾನೆ. ಅಂತಹ ತಂತ್ರಗಳನ್ನು ರೂಪಿಸಿ, ಸಾಧಿಸುವುದರಿಂದಲೇ ಅವನು ಯಾವುದೇ ಸೀಮೆಂಬುವನಾದರೂ ನಮ್ಮವನಾಗಿಬಿಡುತ್ತಾನೆ; ಇಲ್ಲೇ ನೆಲೆಸಿಬಿಡುತ್ತಾನೆ. ಇದೆಲ್ಲವೂ ಮತ್ತೊಮ್ಮೆ ಸೂತ್ರಧಾರನಾಗಿರುವ ಕಾದಂಬರಿ ಬರೆಹಗಾರನಮೇಲೆ ಅವಲಂಬಿತವಾಗಿರುತ್ತದೆ. ಸನ್ನಿವೇಶಗಳನ್ನು ಸೃಷ್ಟಿಸುವಲ್ಲಿ, ಅದಕ್ಕೆ ಪುಷ್ಟಿ ನೀಡುವ ಮಾತುಗಳನ್ನು ಹೆಣೆಯುವಲ್ಲಿ, ನಿಗೂಢತೆಯನ್ನು ಇಮ್ಮಡಿಸುವಲ್ಲಿ ಆತ ಪ್ರಯತ್ನಶೀಲನಾಗಿರಬೇಕು.

ಯಾವುದೇ ಸಮಸ್ಯೆಯಾಗಲಿ ಕೊಲೆಯಾಗಿರಬಹುದು, ಅಪಹರಣವಾಗಿರಬಹುದು, ದರೋಡೆಯಾಗಿರಬಹುದು ಅಪರಾಧವನ್ನು ಶೋಧಿಸುವಾಗ ಹೆಚ್ಚಾಗಿ ವೈಜ್ಞಾನಿಕ ಪುರಾವೆಗಳನ್ನು ನೀಡುತ್ತಾ ಅಪರಾಧಿಯನ್ನು ಹಿಡಿಯುವ ಕಾದಂಬರಿಗಳು ಒಂದರ್ಥದಲ್ಲಿ "ಸಂಪೂರ್ಣ" ಎನಿಸುತ್ತವೆ. ಏಕೆಂದರೆ ಅಂತಹ ಕಾದಂಬರಿಗಳು ಓದುಗನನ್ನು ಒಪ್ಪಿಸಿಬಿಟ್ಟಿರುತ್ತವೆ. ವಿಜ್ಞಾನಕ್ಕಿಂತ ಹೊಳೆಯುವ ಸತ್ಯ ಬೇರೆ ಯಾವುದಿದೆ ? ಹಾಗಾಗಿಯೇ ಶೆರ್ಲಾಕ್ ಹೋಮ್ಸ್ ಒಮ್ಮೊಮ್ಮೆ ವಿಜ್ಞಾನಿಯಂತೆ ಕಂಡುಬರುತ್ತಾನೆ. ಆತ ಅಪರಾಧಿ ಬಿಟ್ಟುಹೋದ ಯಾವುದೋ ಸಣ್ಣ ತುಣುಕನ್ನು ದೂರದರ್ಶಕದಲ್ಲಿ ಹಿಗ್ಗಲಿಸಿ, ಅದನ್ನು ಬಗೆಬಗೆಯಾಗಿ ಅಭ್ಯಸಿಸಿ ಅಪರಾಧವನ್ನು ವಿಜ್ಞಾನದ ಒರೆಗಲ್ಲಿಗೆ ಹಚ್ಚುವುದು ಓದುಗನ ಮನಸ್ಸಿನಲ್ಲಿ ಎಂತಹ ಸಂಶಯಕ್ಕೂ ಎಡೆಕೊಡುವುದಿಲ್ಲ. ಯಾವುದೇ ರಾಜೀಸೂ ಬೇಕಾಗುವುದಿಲ್ಲ. ಆದರೆ ನಮ್ಮ ನಾಡಿನ ಪತ್ತೇದಾರಿ ಕಾದಂಬರಿಗಳು ಏತಕ್ಕೆ ಅಷ್ಟೊಂದು ಪರಿಪೂರ್ಣಯೆನಿಸುವುದಿಲ್ಲ ಎನ್ನುವುದಕ್ಕೆ, ಸಮುದ್ರದಾಚೆ ವಿಜ್ಞಾನ ಅರಳಿ, ನಳನಳಿಸಿ ನಕ್ಕಿದ್ದೇ ಕಾರಣ ವಿರಬೇಕು. ಈ ನಿಟ್ಟಿನಲ್ಲಿ ಯೋಚಿಸಿದಾಗ ಎಂ. ಕೆ. ಇಂದಿರಾ ಅವರು ಬರೆದ "ನೂರೊಂದು ಬಾಗಿಲು" ಪತ್ತೇದಾರಿ ಎನ್ನುವ ಪದಕ್ಕೆ ಹತ್ತಿರ ಬಂದು ನಿಲ್ಲುತ್ತದೆ. ಕಾದಂಬರಿಯಲ್ಲಿ ಪತ್ತೇದಾರಿ ಅಂಶಗಳನ್ನು ನಾವು ಗುರುತಿಸಬಹುದು. ಕಾದಂಬರಿಯ ಹೆಸರಿನಲ್ಲೇ ಅಗಾಧವಾದ ನಿಗೂಢತೆ ಅಡಗಿದೆ. ಏನದು ನೂರೊಂದು ಬಾಗಿಲು ?

ನೂರೊಂದು ಬಾಗಿಲಿನ ಮನೆ-ಅಲ್ಲ-ಬಂಗಲೆಯಿರುವುದು ಸಾಧ್ಯವೆ? ಎಂದು ಮನಸ್ಸಿನಲ್ಲಿ ಪ್ರಶ್ನೆಯ ತರಂಗಗಳು ಏಳುತ್ತವೆ. ಈವತ್ತಿನ ಮಟ್ಟಿಗೆ ಹೇಳುವುದಾದರೆ, ನಾವು ನೂರೊಂದು ಅಂತಸ್ತುಗಳ ಬಹು ಮಹಡಿ ಕಟ್ಟಡಗಳನ್ನು ಹೇರಳವಾಗಿ ನೋಡಬಹುದು, ಓದಬಹುದು. ಆ ಕಟ್ಟಡಗಳು ಅನೇಕ ಕತೆಗಳಿಗೆ, ಚಲನಚಿತ್ರಗಳಿಗೆ ವಸ್ತುಗಳಾಗಿದ್ದಿರಬಹುದು. ಈಗಿನವರಿಗೇನೋ ಬಹು ಅಂತಸ್ತಿನ ಕಟ್ಟಡಗಳ ಹುಚ್ಚು ಇದೆಯಾದರೂ, "ನೂರೊಂದು ಬಾಗಿಲಿ"ನ ಕಾದಂಬರಿ ಕಾಲದ ಜನರಿಗೂ ವಿಶಾಲ ಮನೆಗಳನ್ನು ಕಟ್ಟಿಸಿಕೊಳ್ಳುವ ತೆವಲಿದ್ದಿತೆ? ಎಂಬುದು ಮೊದಲು ಮನಸ್ಸು ಎದುರಿಸುವ ಸಮಸ್ಯೆ. ಆದರೆ ಕಾದಂಬರಿಯ ಹೆಬ್ಬಾಗಿಲಿನಲ್ಲಿ ನಿಂತು ಸ್ವಾಗತಿಸುವ ಲೇಖಕ ಹೇಳುವಂತೆ ಇಂತಹ ನೂರೊಂದು ಬಾಗಿಲಿನ ಮನೆ ಮಲೆನಾಡ ಹಳ್ಳಿಯೊಂದರಲ್ಲಿ ಇದೆಯೆಂದೂ, ಆ ಮನೆಗೆ ಮತ್ತೊಂದು ಮನೆಯ ಕತೆಯನ್ನು ಒತ್ತುಹಾಕಿದ್ದಾರೆ ಎನ್ನುವ ಮಾತುಗಳು ಓದುಗನಲ್ಲಿ ಮತ್ತಷ್ಟು ಆಸಕ್ತಿ ಕೆರಳಿಸುತ್ತದೆ. ಈಗಾದರೂ ಕಾಂಕ್ರೀಟ್ ಕಟ್ಟಡಗಳ ಪಾರ್ಥೇನಿಯಂ ಅಷ್ಟೇ ತೀವ್ರವಾಗಿ ಹರಡುತ್ತಿದೆ. ಆದರೆ ಆ ಕಾಲಕ್ಕೆ ಸುತ್ತಲೂ ಹೊಲ ಗದ್ದೆಗಳ ಮಧ್ಯೆ, ಅದೂ ಈ ಭೀಮಾಕಾರದ ಮನೆ ಕಟ್ಟಿದವರ ಎದೆಗಾರಿಕೆ ಮೆಚ್ಚಬೇಕು. ಈ ಮನೆಯಲ್ಲಿ ಒಂದು ಕೊಲೆ, ಅದೂ ಕತ್ತಲ ರೂಮಿನಲ್ಲಿ, ಲಾಟೀನು ಹಿಡಿದಾಗ ಮಡುಗಟ್ಟಿದ ರಕ್ತದ ಮಡಿಲಲ್ಲಿ ವಿಕಾರವಾಗಿ 'ಬಾಯಿ ತೆರೆದ ಹೆಣ, ಈ ವಿವರಣೆ ಓದುತ್ತಿದ್ದಂತೆ ಓದುಗ ಓದುತ್ತಿರುವ ಕಾದಂಬರಿಯನ್ನೇ ಬಿಗಿಯಾಗಿ ಅಮುಕಿ ಮುಷ್ಟಿ ಬಿಗಿಗೊಳಿಸುತ್ತಾನೆ. "ನೂರೊಂದು ಬಾಗಿಲು" ಬಿಚ್ಚಿಕೊಳ್ಳುವುದೇ ಹೀಗೆ. ಕಾದಂಬರಿಯು ಪ್ರಾರಂಭಿಕ ಪುಟಗಳಲ್ಲಿ ಮುಖ್ಯ ಪಾತ್ರಗಳನ್ನು, ಪರಿಸರವನ್ನು ಮತ್ತು ಮನೆಯ ಭೀಮತೆಯನ್ನು ಓದುಗರಿಗೆ ಬೇಗನೆ ಪರಿಚಯ ಮಾಡುತ್ತದೆ. ಕತೆಯ ನಿಜವಾದ ಸುತ್ತು ಆರಂಭವಾಗುವುದು ಕಿಟ್ಟ ಕಿಟಾರನೆ ಕಿರುಚಿದಾಗ, "ಅನಂತಪ್ನೋರು ಕೌಚಿ ಬಿದ್ದು ಸತ್ತೋಗಿದ್ದಾರೆ, ತಲೆ ಒಡೆದು ರಕ್ತ ಬಂದಿದೆ" ಎಂದಾಗ. ಹೌದು, ಈ ಅನಂತ ಯಾರು ? ನೂರೊಂದು ಬಾಗಿಲ ಹೆಬ್ಬಟ್ಟೆಯಲ್ಲಿ ಸತ್ತಿದ್ದೇಕೆ ? ಸಾವಿಗೆ ಯಾರು ಕಾರಣ ? – ಈ ರೀತಿ ಹಲವು ಹತ್ತು ಪ್ರಶ್ನೆಗಳು ಮನದಲ್ಲಿ ಮೂಡಿ ನಿಲ್ಲುವುದರಿಂದ, ಓದುಗ ಪುಟದಿಂದ ಪುಟಕ್ಕೆ ಕಣ್ಣರಳಿಸಿ ಮನಬಿಚ್ಚಿ ಓದುತ್ತಾನೆ. ಕನಸಿನಲ್ಲೂ ಕೊಲೆ ಮಾಡಲೊಲ್ಲದಷ್ಟು ಸಾಧು ಸ್ವಭಾವದ ಜನ ವಾಸಿಸುವ ವಿಶಾಲ ಮನೆಯಲ್ಲಿ, ಮನುಷ್ಯನೊಬ್ಬ ಕೊಲೆಯಾದನೆಂದರೆ ಯಾರಿಗೂ ನಂಬುವುದೇ ಸಾಧ್ಯವಾಗುವುದಿಲ್ಲ. ಅವರ ಮನೆಗೆ ಪೊಲೀಸರು ಬರುವುದೆಂದರೆ ಬೇಡದ ವಿಷಯ. ಪೊಲೀಸರ ಬರುವಿಕೆಯ ಗಡಿಬಿಡಿಯಲ್ಲಿ ಓದುಗರಿಗೆ ನೂರೊಂದು ಬಾಗಿಲಿನ ಕೋಣೆಗಳಲ್ಲಿ ವಾಸಿಸುತ್ತಿರುವವರ ಸೂಕ್ಷ್ಮ ಪರಿಚಯವಾಗುತ್ತದೆ. ಹೀಗೆ ಕುತೂಹಲದ ರೆಕ್ಕೆ ಬಿಚ್ಚಿಕೊಳ್ಳುತ್ತಲೇ ಕಾದಂಬರಿಯ ಹಲವು ಪುಟಗಳು ಕೊಲೆಯ ತನಿಖೆಗೆ

ಮೀಸಲಾಗಿಟ್ಟಿದ್ದರೂ ಮಧ್ಯೆ-ಮಧ್ಯೆ ನುಸುಳುವ ರಾಮೇಶ್ವರಿ, ಜಗದೀಶರ ಪರಿಚಯ ವರದೆ ಮತ್ತು ಆಕೆಯ ತಾಯಿಗೆ ಯಾವುದೋ ಆಶ್ರಯ ಇದೆಯೆಂಬ ನಂಬುಗೆಯನ್ನು ಓದುಗರ ಮನದಲ್ಲಿ ಸ್ಥಿರಪಡಿಸುತ್ತದೆ. ಆದರೆ ಕಾದಂಬರಿ ಗಾತ್ರದಲ್ಲಿ ಬೆಳೆಯುತ್ತಾ ಹೋದರೂ ಇವರ ದರ್ಶನ ಓದುಗನಿಗೆ ಬೇಗ ದಕ್ಕದೆಯಿರುವುದು. ಅವರನ್ನು ಕುತೂಹಲದ ಮುಸುಕಿನಿಂದ ಹೊರತರಲು ಲೇಖಕಿಗೆ ಇಷ್ಟವಿಲ್ಲದೆ ಹೋಯಿತೇನೋ ? ಆದರೆ ಇಲ್ಲಿ ಪ್ರಶ್ನೆಯೆಂದರೆ ಕೊಲೆಯಾಕಾಯಿತು ಎನ್ನುವುದು. ಕತೆಯು ಸುತ್ತ ಹಬ್ಬಿಕೊಂಡಿರುವ ಪಾತ್ರಗಳು, ಅದಿರಲಿ, ತನಿಖಾಧಿಕಾರಿಗಳಾಗಿ ಬರುವ ಪೊಲೀಸ್ ಇಲಾಖೆಯ ಅಧಿಕಾರಿಗಳು ಬಹಳ ಸಾವಧಾನ ಚಿತ್ತರಾಗಿ ಮಾತನಾಡುವುದು ಸ್ವಲ್ಪ ಮಟ್ಟಿಗೆ ಕುತೂಹಲವನ್ನು ಸವಕಳಿಸುತ್ತದೆ. ಈ ಅಂಶವನ್ನು "ನೂರೊಂದು ಬಾಗಿಲು" ಪತ್ತೇದಾರಿ ಕಾದಂಬರಿಯಲ್ಲ ಎಂದು ತಿಳಿದೂ ಬರೆಯ ಬೇಕಾದ ವಿಷಯ. ತನಿಖೆಗೆ ಹೋಗುವ ಇನ್ಸ್ಪೆಕ್ಟರನ ಮನಸ್ಸು, ಮಾತು ಕೊಲೆಯಾದ ಸ್ಥಳದ ಸುತ್ತಲ ಜನರನ್ನು ಕೆಣಕಿ, ಕೆದಕಿ ಕಾರಣ ತಡಕುವುದಕ್ಕಾಗಿ ತವಕಿಸಬೇಕು. ಆದರೆ ಹಾಗೆ ಮಾಡದೆ ರುಕ್ಮಿಣಮ್ಮನವರನ್ನು ಮಾತನಾಡಿಸಿದ ಇನ್ಸ್ಪೆಕ್ಟರ್ ಪಕ್ಕದಲ್ಲಿದ್ದ ವರದೆಯ ಸೌಂದರ್ಯವನ್ನು ಮನದಲ್ಲೆ ಮೆಚ್ಚಿ, ಕೆದರಿದ ತಲೆ, ಅವ್ಯವಸ್ಥೆಯ ವೇಷ ನೋಡಿ ಈಗ ಪ್ರಶ್ನಿಸುವುದು ಸಭ್ಯತೆಯಲ್ಲ ಎಂದು ಸುಮ್ಮನಿರುವುದು ಸೋಜಿಗವೆನಿಸುತ್ತದೆ. ಏಕೆಂದರೆ ಕೊಲೆಯಾಗಿದೆ ಎಂದು ಪೊಲೀಸರಿಗೆ ಸುದ್ದಿ ಬರುವುದರೊಳಗೆ ಹಲವು ರೀತಿಯ ಬಣ್ಣಗಳನ್ನು ಪ್ರಕರಣ ಪಡೆದುಕೊಂಡು, ಅಪರಾಧಿಯನ್ನು ಉಳಿಸುವ ಅಥವಾ ನಿರಪರಾಧಿಯನ್ನು ಅಪರಾಧಕ್ಕೆ ಸಿಕ್ಕಿಸುವ ಪ್ರಯತ್ನಗಳು ನಡೆದಿರುತ್ತವೆ. ಇಲ್ಲಿ ಇನ್ಸ್ಪೆಕ್ಟರನ ಮನಸ್ಸು ಸಭ್ಯತೆಯ ಹೆಸರಿನಿಂದ ಮುದುಡಿ ಕೊಡುತ್ತದೆ, ವರದೆಯನ್ನು ಪ್ರಶ್ನಿಸುವುದೇ ಇಲ್ಲ. ಹೌದು, ಇನ್ಸ್ಪೆಕ್ಟರ್ ಭಾರತೀಯ ಸಂಸ್ಕೃತಿಯ ಹೆಗ್ಗುರುತಾದ ಮಹಿಳೆಯರೊಡನೆ ಗೌರವದ ವರ್ತನೆ-ಭಾವನೆಯನ್ನೇ ಮೇಳೈಸಿದ್ದಾನೆ. ಆದರೆ ಇಲ್ಲಾಗುವುದೇ ಬೇರೆ. ಯಾವುದೇ ಸೂಕ್ಷ್ಮಸ್ವಭಾವದ ಓದುಗನೂ ಹೀಗೆ ತನಿಖಾಧಿಕಾರಿಗಳು ವರದೆಯನ್ನು ಹೊರತುಪಡಿಸಿ ತನಿಖೆ ನಡೆಸುವುದನ್ನು ಓದುವಾಗಲೇ ತಿಳಿದುಕೊಳ್ಳುತ್ತಾನೆ. ಈ ವರದೆಗೂ ಮತ್ತು ಅನಂತನ ಸಾವಿಗೂ ತಾಳೆಯಿದೆ ಎನ್ನುವುದನ್ನೂ. ಗಾಳಿತುಂಬಿದ ಬಲೂನಿನಲ್ಲಿ ಸಣ್ಣ ತೂತಾಯಿತು.

ಆದರೆ ಈ ತರಹದ ಕೊರತೆಯನ್ನು ಮುಂದಿನ ಪುಟಗಳಲ್ಲಿ ಕಂಡು ಬರುವ ಕತೆಯ ಓಟ ನಿವಾರಿಸಿ ಬಿಡುತ್ತದೆ. ಅನಂತನ ತಂದೆ ಸೂರಪ್ಪನ ಪ್ರವೇಶವಾಗುತ್ತದೆ. ಹೆತ್ತ ಕರುಳು ಬಾಧಿಸಿದ್ದಕ್ಕಾಗಿ ನಾಲ್ಕು ಕಣ್ಣೀರು ಹಾಕಿದರೂ, ಅನಂತು ಸೂರಪ್ಪನವರಿಗೆ ಸಮಸ್ಯಾತ್ಮಕ ಮಗನಾಗಿಯೇ ಇದ್ದನೆಂಬುದು ಅವರ ಮಾತುಗಳಲ್ಲೆ ವ್ಯಕ್ತ

ವಾಗುತ್ತದೆ. ಸೂಟ್‌ಕೇಸಿನಲ್ಲಿ ಕಂಡು ಬರುವ ಸಿಗರೇಟು ಪ್ಯಾಕು, ವಿಸ್ಕಿ, ಬೀರ್ ಬಾಟಲುಗಳು ಅನಂತನ 'Character certificate' ನೀಡುತ್ತವೆ. ಆದರೆ ಇಲ್ಲಿ ಸಿಕ್ಕಿಬಿಡುವ ಮಾಸಲು ಫೋಟೋ, ಅದರಲ್ಲಿ ಹುಡುಗಿಯ ಚಿತ್ರ, ಮುಖ ಕಾಣಿಸುವುದಿಲ್ಲ. ಹಿಂದೆಲೆ, ಜಡೆ, ಸೆರಗು ಕಾಣಿಸುತ್ತದೆ. ಎಲ್ಲವೂ ಮಸಕು–ಲೇಖಕಿ ಕತೆಯ ಜಾಡನ್ನೇ ಬದಲಾಯಿಸಿ, ಅದಕ್ಕೆ ನಿಜವಾಗಿ ಬೇಕಿದ್ದ ವೇಗವನ್ನು ಇಲ್ಲಿ ನೀಡುತ್ತಾರೆ. ಆದರೆ ತನಿಖಾಧಿಕಾರಿಗಳು ಇಲ್ಲಿಯೂ ಬುದ್ಧಿವಂತಿಕೆ ತೋರುವುದಿಲ್ಲ. ಏಕೆಂದರೆ ಛಾಯಾಚಿತ್ರವನ್ನು ವಿವರಿಸಿರುವ ಲೇಖಕಿ–ಹಿಂದೆಲೆ, ಜಡೆ, ಸೆರಗಿನ ವಿವರ ನೀಡುತ್ತಾರೆ. ಈ ತುಣುಕು ಆಧಾರದ ಮೇಲೆ ಅವರು ತನಿಖೆಯ ಜಾಡನ್ನು ಬೇರೆ ದಿಕ್ಕಿಗೆ ವಾಲಿಸಿಕೊಳ್ಳ ಬಹುದಾದ ಅವಕಾಶವನ್ನು, ಫೋಟೋವನ್ನು ಸುಮ್ಮನೆ ಎಲ್ಲರಿಗೂ ತೋರಿಸುವ ಶಾಸ್ತ್ರ ಮಾಡಿ ಮುಗಿಸುತ್ತಾರೆ. ಇಲ್ಲೂ ವರದೆಯನ್ನು ಬಿಟ್ಟು ಎಲ್ಲರಿಗೂ ಫೋಟೋವಿನ ದರ್ಶನವಾಗುತ್ತದೆ. ಹೀಗೆ ಸನ್ನಿವೇಶಗಳು ಸಾಗುತ್ತಿರುವಂತೆ ಆಶ್ಚರ್ಯಕರವಾಗಿ, ನಿಗೂಢತೆಯನ್ನು ಪಸರಿಸುತ್ತಲೇ ಇರುವ ನೂರೊಂದು ಬಾಗಿಲಿನ ವರ್ಣನೆ ಉತ್ತಮವಾಗಿ ಮೂಡಿ ಬರುತ್ತದೆ. ನೂರೊಂದು ಬಾಗಿಲಿನ ಚೌಕಟ್ಟಿನಲ್ಲಿ ಅನಂತನ ಸಾವು ಕತೆಯ ಹುಟ್ಟಾದರೂ, ಅದಕ್ಕಿಂತ ಇಷ್ಟವಾಗುವುದು ಈ ಮನೆಯ ವಿವರಣೆ, ವರದೆಯು ಜಗದೀಶನ ಕುರಿತು ಹೆಣೆಯುವ ಸಕ್ಕರೆ ಸ್ವಪ್ನದಷ್ಟೇ ಸುಂದರವಾದದ್ದು.

ಇನಸ್ಪೆಕ್ಟರರು ನಾಗೇಶರಾಯರ ಒಕ್ಕಲು ಮನೆಯ ಆಳುಗಳನ್ನೆಲ್ಲಾ ಮಾತನಾಡಿಸುತ್ತಾರೆ. ಇಲ್ಲಿಯೇ ಲೇಖಕಿಯ ಅಮೋಘ ಅನುಭವದ ಗಟ್ಟಿಯನ್ನು ವಾಚಕ ಸವಿಯಬಹುದು. ಮಲೆನಾಡಿನ ಒಕ್ಕಲು ಮನೆಯೊಂದರ ಆಳುಗಳು, ಅವರ ಉಡುಪು, ಚಟುವಟಿಕೆ ಎಲ್ಲವನ್ನು ಸವಿಸ್ತಾರವಾಗಿ ವರ್ಣಿಸುವ ಇಂದಿರಾ ಅವರು ಮಲೆನಾಡನ್ನು ಇನ್ನಿತರ ಸೀಮೆಯ ಜನರ ಬಳಿಗೇ ತಂದಿದ್ದಾರೆ ಎನಿಸುತ್ತದೆ. ನಾಗಿ, ಲಕ್ಕಿ, ಮೋಟ ಮತ್ತು ಕ್ಷಣಾರ್ಧದಲ್ಲಿ ಎಳನೀರು ಉದುರಿಸಿದ ಕರಿಯಮನುಷ್ಯ ಮನಸ್ಸಿನಲ್ಲೇ ಉಳಿಯುತ್ತಾರೆ. ಕತೆ ಓಡುತ್ತದೆ, ಪುಟಗಳು ಹಾರುತ್ತವೆ. ತನಿಖೆಯ ಇನ್‌ಸ್ಪೆಕ್ಟರು ಯೋಚಿಸುತ್ತಾರೆ : "ಮನೆಯಲ್ಲಿ ಏನೋ ಒಂದು ರಹಸ್ಯವಿದೆ, ನಾಲ್ಕು ದಿನ ಅಲೆದರೂ ಪರವಾಗಿಲ್ಲ, ಮನೆಯನ್ನು ಪೂರ ನೋಡಬೇಕು. ಮನೆಯನ್ನೇ ಏಕೆ ಪೂರ ಹಳ್ಳಿಯನ್ನೇ ನೋಡಬೇಕು." ಇಲ್ಲಿಯೂ ಅಷ್ಟೇ ಹಳ್ಳಿಯನ್ನು, ಹಳ್ಳಿಗರನ್ನು ವಿಚಾರಿಸುವ ಯೋಜನೆ ಮಾಡುವ ಅಧಿಕಾರಿ ಕೊಲೆಗೆ ಸಂಭವವಾದ ವಿವರಗಳು ಕೈನಲ್ಲಿದ್ದರೂ, (ಹುಡುಗಿಯ ಛಾಯಾಚಿತ್ರ) ಮನೆಯಲ್ಲಿದ್ದವರನ್ನು ಪೂರ್ಣ ಪ್ರಮಾಣದ ತನಿಖೆಗೆ ಒಳಪಡಿಸುವುದೇ ಇಲ್ಲ. ಕಾದಂಬರಿಯ ಮುಂದಿನ ಪುಟಗಳಲ್ಲಿ ಮುರುಳಿಯ ಸ್ಥಾನ ಭದ್ರವಾಗುತ್ತಾ ಹೋಗುತ್ತದೆ. ಮನಸಾರೆ ಜಗದೀಶನನ್ನು ಮೆಚ್ಚಿದ ವರದೆಯ ಮನಸ್ಸು ಮುರುಳಿಯ ರೂಪಕ್ಕೆ ತಳಮಳಿಸುತ್ತದೆ.

ಮುರುಳಿ, ವರದೆ ಮತ್ತು ವಿಶಾಲಿಯರ ಎದೆಯಲ್ಲಿ ಪ್ರೇಮದ ಕೊಳಲು ನುಡಿಸುತ್ತಾನೆ. ಆದರೆ ಯಾರು ಈ ಮುರುಳಿ ? ಕಾದಂಬರಿ ಓದುಗನನ್ನು ಕುತೂಹಲದ ಸರಪಳಿಯಲ್ಲಿ ಬಂಧಿಸಿ ಓದಿಸುತ್ತದೆ. ಹೀಗೆ ಸಾಗುತ್ತದೆ ಕಾದಂಬರಿಯ ಓಟ. ಒಂದೆಡೆ ಪೊಲೀಸ್ ಅಧಿಕಾರಿಯ ಪೂರ್ಣ ಪ್ರಮಾಣದ ತನಿಖೆ, ಮತ್ತೊಂದೆಡೆ ಮುರುಳಿಯ ಚಟುವಟಿಕೆ ಮತ್ತು ಮನಸ್ಸುಗಳ ಹೊಯ್ದಾಟ. ಹೆಚ್ಚು ಕಡಿಮೆ ಓದುಗನಿಗೆ ಮುರುಳಿಯೆಂಬ ವ್ಯಕ್ತಿ ಕಾದಂಬರಿಯ ಕಾಲುಭಾಗದ 'ಹೀರೋ' ಎಂದು ಗೊತ್ತಾದೊಡನೆಯೇ ಪೊಲೀಸು ಇನ್‌ಸ್ಪೆಕ್ಟರನ ಬಗ್ಗೆ ಮನದಲ್ಲಿ ಬೇಸರ ಮೂಡುತ್ತದೆ, "ಏನಪ್ಪಾ ಇದು ? ಎಷ್ಟು ಸಾರಿ ನೂರೊಂದು ಬಾಗಿಲಿಗೆ ಭೇಟಿ ನೀಡಿದ ಇನ್‌ಸ್ಪೆಕ್ಟರ್ ಚೆನ್ನಾಗಿ ಉಂಡುಟ್ಟು ಹೋದನೇ ಹೊರತು ತನಿಖೆಗೆ ಬೆಳಕೇ ಚೆಲ್ಲಲಿಲ್ಲವಲ್ಲ ? ಪ್ರತಿಸಾರಿಯೂ ಅಡುಗೆಯನ್ನು ಹೊಗಳಿ ಅಟ್ಟಕ್ಕೇರಿಸುತ್ತಾ ಓಡಾಡಿಬಿಟ್ಟನಲ್ಲಾ" ಎಂದು. ಕೊಲೆಯಾದ ಸ್ಥಳದಲ್ಲಿ ಕೂಲಂಕಷವಾಗಿ ಪತ್ತೇದಾರಿಕೆಯನ್ನು ಅಳವಡಿಸಿದವನೆಂದರೆ ಮುರುಳಿಯೊಬ್ಬನೆ ಸಿಕ್ಕ ಸಣ್ಣ ಬಳೆ ಚೂರೊಂದನ್ನು ಎತ್ತಿಕೊಳ್ಳುತ್ತಾನೆ. ಅವನ ಕಂಗಳು ಹೆಂಗಳೆಯರ ತುಂಬು ಬಳೆಗಳ ಕೈಗಳನ್ನು ದಿಟ್ಟಿಸುತ್ತವೆ. ಸಿಕ್ಕ ಬಳೆಚೂರಿನ ಸಣ್ಣ ತುಣುಕಿನಿಂದ ಘಟನೆಯ ಪೂರ್ಣ ವೃತ್ತಾಂತವನ್ನು ಅರಿಯುವ ತವಕ, ಸಾಮಾನ್ಯವಾಗಿ ಓದುಗರೆಲ್ಲರಿಗೂ ಮುರುಳಿಯಿಂದ ಈ ಜಟಿಲ ಸಮಸ್ಯೆ ಬಗೆಹರಿಯುತ್ತದೆ ಎನಿಸಿಬಿಟ್ಟಿರುತ್ತದೆ.

"ಹೋಗ್ಲಿ ಬಿಡಿ ಅಮ್ಮ, ನಿಮಗೆ ಯಾವ ವಿಷಯಾನೂ ಗೊತ್ತಿಲ್ಲ. ನೀವೇನು ಈ ರೂಮು ಬಿಟ್ಟು ಹೊರಗೆ ಬರೋರಲ್ಲ. ಕೊಪ್ಪದಲ್ಲಿ ಯಾರೋ ಹಾಗಂದ್ರು, ಈ ಮಧ್ಯೆ ಹುಡುಗ ಒಂಥರಾ ಇದ್ದ ಅಂತ. ಅಷ್ಟೇ ಸಾಕ್ಷಿ ಸಾಕು ನಮಗೆ. ಕೇಸನ್ನ ಯಾವುದಾದರೂ ರೀತೀಲಿ ಇತ್ಯರ್ಥ ಮಾಡ್ತೀವಿ. ನಿಮಗೆ ಏನೂ ತೊಂದರೆ ಆಗೋಲ್ಲ. ಹುಡುಗನ ತಂದೆಗೆ ಯಾವ ಥರದ ಸಮಜಾಯಿಷಿ ಕೊಡಬೇಕು ಅನ್ನೋದು ನಮಗೆ ಗೊತ್ತಿದೆ. ಆ ಬಗ್ಗೆ ನೀವೇನೂ ಚಿಂತೆ ಮಾಡಬೇಡಿ. ಇನ್ನೊಂದು ಆರ್ತಿಂಗ್ಳು, ವರ್ಷಕಾಲ ಆ ಕೋಣೆ ಬಾಗ್ಲಿಗೆ ಬೀಗ ಹಾಕಿಸಿಬಿಡಿ. ಆಮೇಲೆ ತೊಳ್ಕೊಳ್ಳೋರಂತೆ"–ಇನ್‌ಸ್ಪೆಕ್ಟರ್ ಪರಶುರಾಮ ಈ ಮೇಲಿನ ಮಾತುಗಳನ್ನು ಹೇಳಿದಾಗಲಂತೂ, ಅಯ್ಯೋ, ಪ್ರಕರಣದ ತನಿಖೆಯೆಲ್ಲಾ ನೀರಿನಲ್ಲಿ ಹುಣಿಸೆ ತೇಯ್ದ ಹಾಗಾಯಿತಲ್ಲ ಎಂದು ಪತ್ತೇದಾರಿಕೆ ಮನಸ್ಸಿನ ಓದುಗ ತಳಮಳಿಸುತ್ತಾನೆ. ಕೇಸೆಲ್ಲವನ್ನೂ ಸಮ ಮಾಡುತ್ತೇನೆ ಎನ್ನುವ ಇನ್‌ಸ್ಪೆಕ್ಟರಿಗೆ, ಹುಡುಗನ ತಂದೆಯನ್ನು ನಿಭಾಯಿಸುತ್ತೇನೆ ಎಂದು ನೀಡುವ ಅಭಯ ಬೆಚ್ಚಿ ಬೀಳಿಸುತ್ತದೆ. ತನಿಖೆಯ ವರದಿಗಳು ಕೈಸೇರುವ ಮುಂಚೆಯೆ ಎಂತಹ ನಿರ್ಧಾರ. ಆದರೆ ಲೇಖಕಿಗೆ ಓದುಗನ ಮನಸ್ಸನ್ನು ಹೊಯ್ದಾಟಕ್ಕೆ ಸಿಲುಕಿಸಿ ಕಾದಂಬರಿಯ ಓಟವನ್ನು ಯಾವುದೇ ರೀತಿ

ತಗ್ಗಿಸಬಾರದೆಂಬುದು ಉದ್ದೇಶ. ಅದಕ್ಕಾಗಿ ಕೊನೆ ಕೊನೆಯಲ್ಲಿ ಪ್ರಕರಣಕ್ಕೆ ಜೀವ ಕೊಡುತ್ತಾ ಮುರುಳಿ ನಿಲ್ಲುತ್ತಾನೆ. ಸಣ್ಣ ಬಳೆ ಚೂರು ಯಾರ ಪಾಲಿಗೆ ಖಡ್ಗ ವಾಗುತ್ತದೋ ಎಂದು ಉಸಿರು ಬಿಗಿಹಿಡಿದು ಪುಟಗಳನ್ನು ತಿರುವುತ್ತಾ ಹೋದರೆ...

ಅಂತಹದ್ದೇನೂ ಸಂಭವಿಸುವುದಿಲ್ಲ. ಸಾಮಾಜಿಕ ಕಾದಂಬರಿಗಳ ಸಾಮ್ರಾಜ್ಯ ವನ್ನೇ ಸೃಷ್ಟಿಸಿದ ಇಂದಿರಾರವರು ಸಹಜ ಶೈಲಿಯಲ್ಲಿ ಹೆಣ್ಣಿನ ಮನಸ್ಸಿನ ಬೇಕು, ಬೇಡಗಳ ಚಿತ್ರಣ ನೀಡುತ್ತಾರೆ. ಮುದವಾದ ಬರವಣಿಗೆ, ಮೆದು ಭಾವನೆಗಳ ಮಧುರ ಚಿತ್ರಣ, ಕೊಂಚಕಾಲ "ಕೊಲೆ"ಯಂತಹ ಭಯಂಕರವನ್ನು ಮರೆಸಿ ಬಿಟ್ಟಿರುತ್ತದೆ. ಆದರೆ ಮುರುಳಿಯ ಪತ್ತೇದಾರಿಕೆ ಮಧ್ಯೆ ಮಧ್ಯೆ ನುಸುಳಿದರೂ ರಸಭಂಗ ಮಾಡುವುದಿಲ್ಲ. "ಓದುಗ, ಎಚ್ಚರ, ಮೈಮರೆಯಬೇಡ, ಕೊಲೆಯೇ ಕಾದಂಬರಿಯ ವಸ್ತು, ಕೊಲೆಗಾರ ಯಾರು ಎಂಬ ಪತ್ತೆಯಿನ್ನೂ ಆಗಬೇಕಿದೆ." –ಎನ್ನುವಂತಿದೆ ಲೇಖಕಿ ಹೆಣೆಯುವ ಘಟನೆಗಳು. ಆಟವಾಡುತ್ತಿದ್ದ ಬಾಲಕಿಯ ಬಳಿಯಿದ್ದ ಮುರಿದ ಬಳೆಗೆ ತನ್ನ ಬಳೆ ತಾಳ ಹಾಕುವುದು, ಇವೆಲ್ಲಾ ಮೆಚ್ಚುಗೆ ಯಾದರೂ, ಮನೆಗೆ ಬಂದಿದ್ದ ಅತಿಥಿ ರಾಮೇಶ್ವರಿ ವರದೆಗೆ ಮುರುಳಿ ಅಧಿಕೃತ ಪತ್ತೇದಾರ ಎಂದಾಗ ಎಲ್ಲಿ ಕೇಸು ಟುಸ್ಸೆನ್ನುತ್ತೋ ಎನಿಸುತ್ತದೆ. ಏಕೆಂದರೆ ಸೂಕ್ಷ್ಮ ಓದುಗನಿಗೆ ಕೊಲೆ ಯಾರು ಮಾಡಿರಬಹುದು ಎನ್ನುವುದು ಕಾದಂಬರಿಯ ಮೊದಲ ಕೆಲವು ಪುಟಗಳಲ್ಲಿಯೇ ಎಳೆ ಸಿಕ್ಕಿರುತ್ತದೆ. ವರದೆಗೆ ರಾಮೇಶ್ವರಿ ಅವನು ಬಂದಿರು ವುದೇ ಅನಂತು ಕೇಸಿನಲ್ಲಿ ಅಪರಾಧಿ ಹಿಡಿಯಲು ಎಂದರೆ ವರದೆ ಹೇಗೆ ಬಾಯಿ ಬಿಟ್ಟಾಳು ಎನ್ನುವ ಸಂದೇಹ ಬರುತ್ತದೆ. ಆದರೆ ವರದೆ ಬಾಯಿ ಬಿಡುವ ಮೂಲಕ ಓದುಗನ ಕುತೂಹಲ ಹೆಚ್ಚುತ್ತದೆ. ಕಾದಂಬರಿಯ ಓಟ ದ್ವಿಗುಣಗೊಳ್ಳುತ್ತದೆ. "ಹೌದು ಬಳೆ ಚೂರು ನಂದೆ, ಚಿನ್ನದ ಬಳೆಗಳ ನಡುವೆ ಹಾಕಿಕೊಳ್ಳುತ್ತಿದ್ದುದು, ಆದರೆ ನಡೆದದ್ದೇನೆಂದು ನಾನು ಬರೆದಿಡುತ್ತೇನೆ, ಅದನ್ನು ಓದಿ ತಿಳಿದುಕೋ" –ವರದೆಯ ಕೈಯ್ಯಲ್ಲಿ ಈ ಮಾತಾಡಿಸಿ ಕುತೂಹಲ ಕೆರಳಿಸುತ್ತಾ ಹೋಗುವ ಲೇಖಕಿ ಅಲ್ಲಲ್ಲಿ ಮದುವೆಯ ಮಾತುಗಳನ್ನು ಆಡಿಸುತ್ತಾರೆ. ಜಗದೀಶ ವರದೆಯನ್ನು ಮದುವೆಯಾಗುತ್ತೇನೆ ಎಂದು ಘೋಷಿಸುತ್ತಾನೆ. ಆಕೆಗೋಸ್ಕರ ತನ್ನ ಪೊಲೀಸು ಕೆಲಸ ಬಿಟ್ಟು ಮನೆ ಅಳಿಯನಾಗಿ ಇರುತ್ತೇನೆ ಎಂದು ನಿರ್ಧರಿಸುತ್ತಾನೆ. ಇಂತಹ ಸಮಯದಲ್ಲಿ ಯಾಕಾದರೂ ವರದೆ ಒಡೆದ ಬಳೆ ಚೂರನ್ನು ತನ್ನದು ಎಂದಳೋ, ಯಾಕಾದರೂ ಪತ್ರ ಬರೆದು ತಿಳಿಸುತ್ತೇನೆ ಎಂದಳೋ ಎಂದು ಮನಸ್ಸು ವಿಲವಿಲ ಒದ್ದಾಡುತ್ತಿರುತ್ತದೆ. ಇದು ಕಾದಂಬರಿಗಾರ್ತಿ ಸನ್ನಿವೇಶ ಹೆಣೆಯುವಲ್ಲಿ ತೋರಿರುವ ಚಾಕಚಕ್ಯತೆ ತಂದುಕೊಟ್ಟ ಯಶಸ್ಸು. ಓದುಗ ಏನಾಗುತ್ತದೋ ಎನ್ನುವುದನ್ನು ತಿಳಿಯಲು ಬಿರಬಿರನೆ ಓದುತ್ತಾನೆ. ವರದೆ ಪತ್ರ ಬರೆದೇಬಿಡು

ತ್ತಾಳೆ. ಮೊದಲು ರಾಮೇಶ್ವರಿ ಓದಿ ಮುರುಳಿಗೆ ತೋರಿಸಿ ಮತ್ತೆ ಜಗದೀಶನಿಗೂ ಕಾಗದ ಮುಟ್ಟುತ್ತದೆ. ಸುದೀರ್ಘವಾದ ಪತ್ರ, ಕಾದಂಬರಿಯನ್ನು ಇಲ್ಲಿಯವರೆಗೆ ಓದಿಸಿಕೊಂಡು ಬಂದ ಪತ್ರ, ಪುಸ್ತಕದ ಕೊನೆಯ ಪುಟಗಳಲ್ಲಿ ಅಡಗಿದೆ. ಅನಂತುವಿನ ಕಾಮುಕತನ ವರದೆಯನ್ನು ಕಬಳಿಸಲು ಯತ್ನಿಸಿದಾಗ, ಕೈಗೆಸಿಕ್ಕಿದ ಪೋಟು ಒನಕೆಯಿಂದ ಪೆಟ್ಟುತಿಂದು ಸತ್ತ ಅನಂತು, ಮೊದಲು "ಅಯ್ಯೋ ಸತ್ತಿದ್ದಾನಲ್ಲ" ಎಂದು ಓದುಗನ ಕನಿಕರ ಗಳಿಸಿಕೊಂಡಿದ್ದವನು ಈಗ ಕಳೆದುಕೊಳ್ಳುತ್ತಾನೆ, ಹೆಣವಾಗಿ. ಹೆಣ್ಣೊಬ್ಬಳು ಮಾನರಕ್ಷಣೆಗೆ ಕೈಗೊಂಡ ಕೊನೆಗಳಿಗೆಯ ಅನಿವಾರ್ಯ ಕಾರ್ಯ. ಮತ್ತೊಮ್ಮೆ ಬಳೆಯ ಚೂರು ನನ್ನ ಕೈಬಳೆಗಳದೇ ಎಂದು ವರದೆ ಒಪ್ಪಿಕೊಳ್ಳುತ್ತಾಳೆ, ಫೋಟೊ ತೆಗೆದದ್ದು ತನಗೆ ತಿಳಿಯದು ಎನ್ನುತ್ತಾ ತನ್ನನ್ನು ಸ್ವೀಕರಿಸುವ ಅಥವಾ ಬಿಡುವ ವಿಚಾರವನ್ನು ಜಗದೀಶನಿಗೇ ಬಿಡುವುದರ ಮೂಲಕ ಓದುಗನಿಗೆ ಮತ್ತೊಂದು ಕುತೂಹಲದ "ಗೂಸಾ" ಕೊಡುತ್ತಾಳೆ. ಆದರೆ ಒಂದೆರಡು ಪ್ಯಾರಗಳಲ್ಲಿಯೇ ಜಗದೀಶ—ವರದೆಯ 'ಪ್ಯಾರ್' ಗಟ್ಟಿಯಾಯಿತು ಎನ್ನುವುದರೊಡನೆ ಕಾದಂಬರಿ ಮುಗಿದೇ ಹೋಗಿ ಬಿಡುತ್ತದೆ. ಮುಗಿದ ತಕ್ಷಣ ಅನ್ನಿಸುವುದು "ಯಾಕೆ ಮುಗಿಯಿತಪ್ಪ"?—ಎಂದು. ಕುತೂಹಲದ ಅಂಶಗಳನ್ನು, ಹಂತಗಳನ್ನು ಹೆಚ್ಚಿಸುತ್ತಾ ಹೋಗುವ ಕಾದಂಬರಿಯ ಅರ್ಧಭಾಗ ನಿಜಕ್ಕೂ 'ಪತ್ತೇದಾರಿ' ತನಕ್ಕೆ ತೀರಾ ಹತ್ತಿರವೆನಿಸುತ್ತದೆ. ಕೊಲೆಯ ವಿಷಯದಲ್ಲಿ ಈ ರಾಜಿ ಅಗತ್ಯವೇ ಎಂದೂ ಅನಿಸುತ್ತದೆ. ಮುಖ್ಯವಾಗಿ ಜಗದೀಶ ಹೇಳಿ ಕೇಳಿ ಪೊಲೀಸ್ ಇನ್‌ಸ್ಪೆಕ್ಟರ್, ಪತ್ತೇದಾರ ಮುರುಳಿ ಇವರಿಬ್ಬರಿಗೂ ರಾಮೇಶ್ವರಿ ವರದೆಯ ಪತ್ರವನ್ನು ತೋರಿಸುತ್ತಾಳೆ. ಆದರೆ ಇಬ್ಬರೂ ನಿಷ್ಕ್ರಿಯರಾಗುತ್ತಾರೆ. ಹೋಗಲಿ ಜಗದೀಶನಿಗೆ ವರದೆ ಸತಿಯಾಗುವವಳು ಎನ್ನುವುದಿದ್ದರೆ ಮುರುಳಿಯೇನು ಮಾಡುತ್ತಿದ್ದ? ಮುರುಳಿಯ ಬಗ್ಗೆ ಓದುಗನ ಮನಸ್ಸಿನಲ್ಲಿ ಮೆಚ್ಚುಗೆ ಇದ್ದೇ ಇರುತ್ತದೆ. ಆತ ನೈಜ ಪತ್ತೇದಾರ ಎಂಬುದಕ್ಕೆ. ಆದರೆ ವಿಷಯ ತಿಳಿದ ಮೇಲೂ ಆತ ಏನೂ ಮಾಡುವುದಿಲ್ಲ. ಕೇಸು ವಜಾ ಆಯಿತೆಂದು ಆತನೂ ಸುಮ್ಮನಿದ್ದಿರ ಬಹುದೇನೋ ಎಂದು ಅನಿಸಿದರೂ, ಮತ್ತೆ ಕೇಸಿಗೆ ಜೀವಕೊಟ್ಟು, ಕೊಲೆಗೆ ಕಾರಣ ಬಹಿರಂಗ ಪಡಿಸಿದ್ದರೆ, ಅಂದರೆ ನ್ಯಾಯಾಲಯಕ್ಕೆ ಒಪ್ಪಿಸಿದ್ದರೆ ಚೆನ್ನಿತ್ತು ಎನಿಸುತ್ತದೆ. ವರದೆಗೆ. ಮಾನರಕ್ಷಣೆಗಾಗಿ ಮಾಡಲೇ ಬೇಕಾದ ಕೊಲೆಯೆಂದು ಕಾನೂನಿನ ನೆರವು ಪಡೆಯಬಹುದಿತ್ತೇನೋ. ಆದರೆ ಇದಾವುದೂ ಸಂಭವಿಸದೆ ಸುಖಾಂತದಲ್ಲಿ ಕಾದಂಬರಿಯ ಕೊನೆಪುಟ ಓದುಗನಿಗೆ ವಿದಾಯ ಹೇಳುತ್ತದೆ.

ಹೀಗೀಗೆ ಆಗಬೇಕಿತ್ತು ಎಂದು ಹೇಳುವುದೂ ತಪ್ಪಾಗುತ್ತದೆ. ಕಾದಂಬರಿ ಬರೆದ ಕಾಲ, ಸನ್ನಿವೇಶಗಳನ್ನು ವಾಚಕ ಅರಿತಿರಬೇಕು. ಇವತ್ತಿನ ಮಟ್ಟದ ಮೇಲೆ

ನಿಂತು. ಮೊನ್ನೆಯ ಮೆಟ್ಟಲು ಎತ್ತರದಲ್ಲಿ ಕಡಿಮೆಯೆನ್ನಲಾಗದು. ಆದರೆ ಇಂದಿರಾ ಅವರ ಕಾದಂಬರಿ "ನೂರೊಂದು ಬಾಗಿಲು" ಎತ್ತರದಲ್ಲಿ ಯಾವ ಕೊರತೆಯೂ ಕಾಣಿಸದು. ಆದರೆ ಒಂದು ವ್ಯಥೆಯೆನಿಸುತ್ತದೆ. ಒಂದು ಉತ್ತಮ ಕತೆಯ ಸರಕನ್ನು ಲೇಖಕಿ ಕೊಂಚ ಪತ್ತೇದಾರಿ ತಂತ್ರಗಳನ್ನು, ಅಂಗಗಳನ್ನು ಪರಿಣಾಮಕಾರಿಯಾಗಿ ಬಳಸಿದ್ದರೆ "ನೂರೊಂದು ಬಾಗಿಲು" ಕನ್ನಡ ಪತ್ತೇದಾರಿ ಲೋಕಕ್ಕೆ ಅಪೂರ್ವ ಕೊಡುಗೆಯಾಗುತ್ತಿತ್ತು. ಆದರೆ ಕಾದಂಬರಿಗಾರ್ತಿಯೇ ಹೇಳುವಂತೆ ಇದನ್ನು ಪತ್ತೇದಾರಿಯಾಗಿಸುವುದು ಅವರ ಉದ್ದೇಶವಾಗಿರಲಿಲ್ಲವಂತೆ. ಈ ದೃಷ್ಟಿಯಿಂದ "ನೂರೊಂದು ಬಾಗಿಲು", ಇಂದಿರಾ ಅವರಿಗೂ ತಿಳಿದೋ, ತಿಳಿಯದೆಯೋ ಪತ್ತೇದಾರಿಗೆ ಹತ್ತಿರ ಬಂದು ನಿಂತಿದೆ. ಇದನ್ನು ಗಂಭೀರವಾಗಿ ಪತ್ತೇದಾರಿ ಪುಸ್ತಕವೆಂದು ಓದುವುದೂ ಸಲ್ಲ, ಭಾವಿಸುವುದೂ ಅಲ್ಲ. ಓದಿದವನಿಗೆ 'ಹೌದು ಇದು ಪತ್ತೇದಾರಿ' ಎನಿಸಿದ್ದರೆ ಅದು ಪತ್ತೇದಾರಿಯೇ, ಸಾಮಾಜಿಕವೆನಿಸಿದರೆ ಸಾಮಾಜಿಕವೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಾಮಾಣಿಕ ಓದುಗನಾಗಿ ನಾನು ಇದನ್ನು ಪೂರ್ಣವಾಗಿ ಪತ್ತೇದಾರಿ ಎನ್ನದಿದ್ದರೂ, ಪತ್ತೇದಾರಿ ಕುಲಕ್ಕೆ ಸೇರುವ ಅರ್ಹತೆಗಳನ್ನು ಗುರುತಿಸುವ ಪ್ರಯತ್ನ ಪಟ್ಟಿದ್ದೇನೆ. ತುಂಬಾ ಸವಕಳಿಯಾಗಿರುವ ಕನ್ನಡ ಪತ್ತೇದಾರಿ ಕಾದಂಬರಿ ಪ್ರಪಂಚಕ್ಕೆ ಇಂದಿರಾ ಅವರು ಮನಸ್ಸು ಮಾಡಿದ್ದರೆ ನೂರೊಂದು ಬಾಗಿಲಲ್ಲ ನೂರೊಂದು ಹೆಬ್ಬಾಗಿಲನ್ನೇ ನಿರ್ಮಿಸಬಹುದಿತ್ತು.

ಪತ್ತೇದಾರಿ ಕಾದಂಬರಿ ಬರೆಯುವುದು ದರ್ಜೆಗೆ ಕಡಿಮೆಯಾದ ವಿಚಾರ ಎಂದು ಭಾವಿಸಿರುವ ಲೇಖಕ ಮಿತ್ರರಿದ್ದಾರೆ. ಆ ಭಾವನೆಗೆ ಕಾರಣ ಉತ್ತಮ ಲೇಖಕರು ಈ ಪ್ರಕಾರದಲ್ಲಿ ಕೈಯಾಡಿಸ ಬಲ್ಲರು. ಗುಣ ಮಟ್ಟದಲ್ಲಿ ಕಡಿತ ಇದರಿಂದ ಕಂಡು ಬರುವುದು ಸಾಮಾನ್ಯ. ಪತ್ತೇದಾರಿ ಕಾದಂಬರಿಕಾರ ವೈಜ್ಞಾನಿಕ ಮನೋಭಾವನೆ ಉಳ್ಳವನಾಗಿರಬೇಕು, ಸಂಶೋಧಕತನ ಎದ್ದು ಕಾಣಬೇಕು. ಪರಿಣಾಮಕಾರಿ ಭಾಷೆಯಿರಬೇಕು—ಇಷ್ಟಿದ್ದರೆ ಸಾಕು, ಓದುಗನ ಮನಸ್ಸಿಗೆ ತುಂಬಿದ ಮಸಾಲೆ ದಕ್ಕುತ್ತದೆ. ಇಂದಿರಾರವರ ಈ ಕಾದಂಬರಿಯಲ್ಲಿ ಕಂಡು ಬರುವ ಪೊಲೀಸ್ ಇನ್‌ಸ್ಪೆಕ್ಟರನ ಭೋಳೆ ನಡವಳಿಕೆಗೆ ಕಾರಣ ಆತ ಆ ಕಾಲದ ಪೊಲೀಸ. ಆ ಕಾಲದಲ್ಲಿ "ಅಪರಾಧ ಶಾಸ್ತ್ರ" ಪೂರ್ಣವಾಗಿ ಬೆಳೆದು ಬೆಳಕು ಕಂಡಿರಲಿಲ್ಲ. ಆದಕ್ಕಾಗಿಯೇ ಆತನಲ್ಲಿ ವೈಜ್ಞಾನಿಕ ಮನೋಭಾವದ ತೀವ್ರ ಕೊರತೆ ಕಂಡು ಬರುವುದು. ತನಿಖೆಗೆ ಬೇಕಾದ ತನಿಖಾ ಮನೋಭಾವ ದುರ್ಲಭವಾಗುವುದು. ಆತನ ಚಟುವಟಿಕೆಯಲ್ಲಿ ಕಾದಂಬರಿಯಲ್ಲಿ ಸಾಮಾನ್ಯವಾಗಿ ಮೂಡಿ ಬಂದಿರುವುದಕ್ಕೂ, ಕಾದಂಬರಿಯ ಪುಟಗಳು ಹೆಚ್ಚಿರುವುದಕ್ಕೂ ಸಂಬಂಧವಿದೆಯೇ ಎನಿಸುತ್ತದೆ. ಆದರೆ ಮಲೆನಾಡಿನ ರಮ್ಯ ನಿಸರ್ಗದ

ವಿವರಣೆ. ವಿಶೇಷವಾಗಿ ಭಕ್ಷ್ಯಗಳ ಪರಿಚಯ ನಾಲಗೆಯ ತೇವವನ್ನು ಜಾಸ್ತಿ ಮಾಡುತ್ತವೆ. ಹೀಗೆ ಕತೆಗೂ, ಓದುಗನಿಗೂ ನಿರಾಶೆಯ ಛಾಯೆ ತಾಕದಂತೆ ಕಾದಂಬರಿಯ ಸಮತೋಲವನ್ನು ಅದ್ಭುತವಾಗಿ ಕಾಪಾಡಿಕೊಂಡಿರುವ ಇಂದಿರಾ ನನಗೂ, ನಿಮಗೂ, ಕಾದಂಬರಿ ಪ್ರಿಯರಿಗೂ ಇಷ್ಟವಾಗುತ್ತಾರೆ.

ವಿಜ್ಞಾನ ಬೆಳೆಯುತ್ತಿದೆ. ಇಂದಿನ ಕತೆಗಾರರಿಗೆ ಮತ್ತು ಕಾದಂಬರಿಕಾರರಿಗೆ "ವಿಜ್ಞಾನ"ವೇ ವಸ್ತುವಾಗುತ್ತಿದೆ. ಮನುಷ್ಯನ ಮಿದುಳು ಹಲವು ಸಾವಿರ ವರ್ಷಗಳ ಮುಂದಿನ ದಿವಸಗಳ ಬಗ್ಗೆ ಯೋಚಿಸುತ್ತಿದೆ. ಇಂತಹ ಸನ್ನಿವೇಶದಲ್ಲೂ ಕಾದಂಬರಿಯಲ್ಲಿ ಕಂಡುಬರುವ "ನೂರೊಂದು ಬಾಗಿಲಿ"ನ ಭೀಮತೆ, ವೈಶಾಲ್ಯತೆ, ಸುಂದರತೆ ಇಂದಿನ ವಾಸ್ತುಶಿಲ್ಪಿಗಳಿಗೆ ಸವಾಲೆನಿಸುವುದಿಲ್ಲವೇ ? ಖಂಡಿತಾ ಹೌದು. ಈ ರೀತಿ ವಿಜ್ಞಾನ-ತಂತ್ರಜ್ಞಾನಗಳ ಮಿಳಿತವಾಗದೆ ಯಾವುದೇ ಕುತೂಹಲಕಾರಿ ಕಥೆ, ಕಾದಂಬರಿ ರುಚಿಸುವುದಿಲ್ಲ. ಇಂತಹವೆಲ್ಲವನ್ನೂ ತಲೆಯಲ್ಲಿ ತುಂಬಿಕೊಂಡು ಯೋಚಿಸಿದಾಗ ಸ್ಪಷ್ಟವಾಗಿ ತಿಳಿದು ಬರುತ್ತದೆ "ಇಂದಿರಾರವರು ನಮಗೆ ಮಲೆನಾಡಿನ ವಿಶಿಷ್ಟ ಭೋಜನವನ್ನೇ ಇತ್ತಿದ್ದಾರೆ" ಎಂಬುದು.

ಇತ್ತೀಚೆಗೆ ಕನ್ನಡ ಚಲನಚಿತ್ರಗಳನ್ನು ಗಮನಿಸಿದರೆ ಬೇಸರವೇನಿಸುತ್ತದೆ. ಅದರಲ್ಲೂ ಪತ್ತೇದಾರಿ ಹೆಸರಲ್ಲಿ ಬರುವ, Suspence ಸಿನಿಮಾಗಳೆಂದು ಫಲಕ ಹೊತ್ತ ಚಿತ್ರಗಳು ಪ್ರೇಕ್ಷಕನ ತಲೆಯಲ್ಲಿ ಧೂಳೆಬ್ಬಿಸುತ್ತವೆ. ಇದು ನಿಜವಾಗಿಯೂ ಆಶ್ಚರ್ಯವೆನಿಸುತ್ತದೆ. ತರಕಲು ಕತೆಗಳನ್ನ ಚಿತ್ರವಾಗಿಸುವ ಕನ್ನಡ ಸಿನಿಮಾ ನಿರ್ಮಾಪಕರ ಕಣ್ಣಿಗೆ "ನೂರೊಂದು ಬಾಗಿಲು" ಏಕೆ ಬಿದ್ದಿಲ್ಲವೋ ? ಈಗ ಇದನ್ನು ಎತ್ತಿಕೊಂಡು ಚಿತ್ರವಾಗಿಸುವುದಕ್ಕಿಂತ ಹತ್ತೊ, ಹದಿನೈದುವರ್ಷದ ಹಿಂದೆ ಮಾಡಿದ್ದರೆ 'ಸೆಲುಲಾಯಿಡ್ ದಾಖಲೆ' ಖಂಡಿತಾ ಆಗುತ್ತಿತ್ತು. ಕಾದಂಬರಿ, ಕಾದಂಬರಿಗಾರ್ತಿ ಇದನ್ನು 'ಪತ್ತೇದಾರಿ' ಮಾಡದಿದ್ದರೂ, ಉತ್ತಮ ನಿರ್ದೇಶಕನೊಬ್ಬ 'ನೂರೊಂದು ಬಾಗಿಲ'ನ್ನು ಪೂರ್ಣ ಪತ್ತೇದಾರಿ ಚಿತ್ರವಾಗಿಸಬಹುದಿತ್ತು. ಅದಕ್ಕೆ ಬೇಕಾದ ಸರಕು ಸವಲತ್ತು ನೂರೊಂದರಲ್ಲಿತ್ತು, ಇದೆ.

ಇಂದಿರಾರವರು ಕನ್ನಡ ಸಾರಸ್ವತ ಲೋಕಕ್ಕೆ ನೀಡಿರುವ ಕಾಣಿಕೆಗಳು ಅಪಾರ ಮತ್ತು ಅಪೂರ್ವ. ಶ್ರೀಮತಿಯವರ ಲೇಖನದಿಂದ ಮತ್ತಷ್ಟು ಮಗದಷ್ಟು ಅಮೋಘಗಳ ರಚನೆಯಾಗಲಿ. ಸೃಜನಶೀಲತೆ ಆರದೆ, ಕ್ರಿಯಾಶೀಲತೆ ಬತ್ತದೆ ಬದುಕ

ಬಲ್ಲ ಕೆಲವೇ ಲೇಖಕಿ, ಲೇಖಕರಲ್ಲಿ ಅವರೂ ಒಬ್ಬರಾಗಲಿ, ಸಾಹಿತ್ಯಕ್ಷೇತ್ರದ ಸೇವೆಯಲ್ಲಿ ನೂರೊಂದು ಬಾಗಿಲನ್ನಲ್ಲ, ಸಾವಿರದೊಂದು ಬಾಗಿಲನ್ನು ದಾಟುವ ಶಕ್ತಿ ಅವರದಾಗಲಿ.

ನಮ್ಮ ನಮ್ಮ ಮಕ್ಕಳನ್ನ ನಾವು ಸಾಕದೆ ಬೀದಿಯೋರು ಒಂದು ಸಾಕ್ತಾರ ? ನಮ್ಮ ಪಾಲಿನ ಕರ್ತವ್ಯ ನಾವು ಮಾಡೋದು ಮುಂದೆ ಅವರ ಹಣೆಬರ. ಎಲ್ಲೋ ಒಂದು ಕಡೆ ಆಯಸ್ಸು ತುಂಬ್ಕೊಂಡು ಆರೋಗ್ಯವಾಗಿ ಇದ್ದರಾಯ್ತು. ಅವನು ನಮಸ್ಕಾರ ಮಾಡಲಿಲ್ಲಾಂತ ಯಾವ ದೇವರು ಅಳ್ತಾ ಇದ್ದಾನೆ ಈಗ ? ಅವನು ನಿಮಗೆ ನಮಸ್ಕಾರ ಮಾಡಿದ್ರೆ ಏನು ಕೋಡು ಬರ್ತಿತ್ತೆ ?

(ಅನುಭವ ಕುಂಜ-ಪುಟ-22)

ಇಂದಿರಾರ ಬರವಣಿಗೆಯಲ್ಲಿ ಹಾಸ್ಯ

○
○
○ **ಭುವನೇಶ್ವರಿ ಹೆಗಡೆ**

ಎಂ. ಕೆ. ಇಂದಿರಾರಂಥ ಸರಳ ಸಂಪನ್ನ ಮನಸ್ಸಿನ ಲೇಖಿಸಿಯೊಂದು ಹಾಸ್ಯದ ಕಚಗುಳಿಯಾಟದಲ್ಲಿ ಹೇಗೆ ತೊಡಗಿಕೊಳ್ಳಬಹುದು ? ಕುಚೋದ್ಯದ ಅಲೆಗಳನ್ನು ಹೇಗೆ ಎಬ್ಬಿಸಬಹುದು ? ಎಂಬ ಅನುಮಾನ ಕುತೂಹಲಗಳಿದ್ದವರು ಅವರ 'ನಗಬೇಕು' ಲೇಖನ ಸಂಗ್ರಹವನ್ನು ಓದಬೇಕು. ಹದಿನಾರು ಹರಟೆಗಳ ಈ ಸಂಕಲನ ಒಂದು ಪಕ್ವವಾದ ಆರೋಗ್ಯಕರ ಯೋಜನಾಲಹರಿಯ ಬೆನ್ನೇರಿ ಬಂದ ವಿನೋದ ಲಹರಿ. ಇದರೊಳಗಿನ ಹೂರಣವನ್ನು ಸವಿಯುತ್ತ ಹೋದಂತೆ ಇಂದಿರಾರಂಥ ವಿಶಾಲ ಅನುಭವದಿಂದ ಹದಗೊಂಡ ಮನಸ್ಸೊಂದು ವ್ಯಂಗ್ಯ ಕಟಕಿಗಳಿಲ್ಲದ ತಿಳಿ ಹಾಸ್ಯವನ್ನು ಹೇಗೆ ಚಿಮ್ಮಿಸಬಲ್ಲದೆಂಬ ಸೋಜಿಗವೂ ಸಂತೋಷವೂ ಆಗುತ್ತಲೇ ಹೋಗುತ್ತವೆ, ಪುಸ್ತಕ ಕೆಳಗಿಡುವ ತನಕವೂ.

ಹಾಸ್ಯ ಬರಹಗಳೆಂದಾಕ್ಷಣ ಓದೋದುಪವರಲ್ಲಿ ಬಿದ್ದು ಬಿದ್ದು ನಗುವಂಥ ನಗೆಬಾಂಬನ್ನು ಸಿಡಿಸಬೇಕು ಎಂದು ನಿರೀಕ್ಷಿಸುವದು ತಪ್ಪು. ಆ ಕೆಲಸವನ್ನು ರೆಡಿಮೇಡ್ ಜೋಕ್‌ಗಳು ಮಾಡುತ್ತವೆ. ಎಲ್ಲರ ಅನುಭವಕ್ಕೂ ಬಂದಿರಬಹುದಾದ ಸಂಗತಿಯೊಂದನ್ನೇ ಹಾಸ್ಯ ಸಾಹಿತಿ ತನ್ನ ನಿಯಂತ್ರಣಕ್ಕೆ ತಂದುಕೊಂಡು ಓದುಗನೊಂದಿಗೆ ಆತ್ಮೀಯವಾಗಿ ಹರಟುತ್ತ ಲೇವಡಿ ಎಬ್ಬಿಸುತ್ತ ತುಟಿಯರಳುವಂತೆ ಮಾಡಿ ಒಟ್ಟು ಪರಿಣಾಮದಲ್ಲಿ ಒಂದು ಲಲಿತವಾದ ಮೋಡಿಯನ್ನು ಹಾಕುತ್ತಾನೆ. ಓದುಗ ತನಗೂ ಆದ ಅದೇ ಅನುಭವವನ್ನು 'ಹೌದಲ್ವೆ ?' ಎಂಬ ಅಚ್ಚರಿಯೊಂದಿಗೆ ಸಂತೋಷವನ್ನೂ ಪಡೆಯುತ್ತಾನೆ. ಹಾಸ್ಯದ

ಉದ್ದೇಶ ಲೋಕದ ಡೊಂಕನ್ನು ತಿದ್ದುವುದಲ್ಲ ಎತ್ತಿತೋರಿಸುವದು ಮಾತ್ರ. ಯಶಸ್ವೀ ಹಾಸ್ಯ ಲೇಖಕ ಸೊಗಸಿಗೆ ಧಕ್ಕೆ ತಾರದ ಉತ್ಪ್ರೇಕ್ಷೆ, ಓದುಗರ ಬುದ್ಧಿವಂತಿಕೆಗೆ ಗ್ರಾಸ ವೊದಗಿಸುವ ರಂಜನೆ, ಕಲಾತ್ಮಕತೆಗೆ ಭಂಗ ಬಾರದಂತೆ ವಿವರಗಳ ನೀಡುವಿಕೆ ಇವೆಲ್ಲ ವನ್ನೂ ಹದವಾಗಿ ಬಳಸಿಕೊಳ್ಳುತ್ತಾನೆ.

ಈ ಎಲ್ಲ ಗುಣಗಳನ್ನೂ ಇಂದಿರಾರ ಹಾಸ್ಯ ಬರಹಗಳಲ್ಲಿ ನಾವು ಕಾಣ ಬಹುದು. ಅವರ ಲೋಕವಿವರಗಳಲ್ಲಿಯ ಸೂಕ್ಷ್ಮಗ್ರಾಹಿತನ ಸಿನಿಕತನವೆನ್ನಿಸುವದಿಲ್ಲ, ಬದಲು ಸ್ವಾರಸ್ಯವನ್ನು ಗುರುತಿಸುವ ವಿಶೇಷ ಕಲೆಯೆನ್ನಿಸುತ್ತವೆ.

'ನನ್ನ ಪ್ರೀತಿ ಪಾತ್ರರು' ಲೇಖನದಲ್ಲಿ ಅವರು ನಮ್ಮ ಸಾಮಾನ್ಯ ನಿರೀಕ್ಷೆಯ, ಪ್ರೀತಿ ಪಾತ್ರರೆಂದುಕೊಳ್ಳುವ, ಕೈ ತುಂಬ ಸಂಬಳ ತರುವ, ಗಂಡ ಹೊಗಳುವ, ಗೆಳತಿ ಯರು ಸ್ತೋತ್ರ ಮಾಡುವ, ಬಂಧು ಬಳಗ....ಗಳ ಟೊಳ್ಳುತನವನ್ನು ಬಯಲು ಮಾಡುತ್ತಾರೆ. ಬಂಧುಗಳೊಬ್ಬರ ಮನೆಗೆ ಹೋದಾಗ ಹೆಚ್ಚಿನವರಿಗಾಗುವ ಅನುಭವ ವನ್ನು ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ.

"ಮನೆಯೊಡೆಯ/ತಿಯರು ತಮ್ಮ ಹೊಸ ಮನೆಯ ಇಂಚಿಂಚನ್ನೂ ವಿವರವಾಗಿ ತೋರಿಸುತ್ತ ಮನೆ ಕಟ್ಟಿಸಿದ ಮಹಾ ಇತಿಹಾಸ ಬಿಚ್ಚಿಟ್ಟು ನಮ್ಮ ತಲೆ ತಿನ್ನುತ್ತಾರೆ. ತಮ್ಮ ಮಕ್ಕಳ ಮೇಧಾವಿತ್ವ, ಬಹುಮಾನ ಗಳಿಕೆ, ತಮ್ಮ ಒಡವೆ, ಸೀರೆ, ಅದರ ಕುಲಗೋತ್ರ ಬಣ್ಣ ವಾಸನೆಗಳ ವರ್ಣನೆ, ಅದನ್ನು ಕೊಳ್ಳುವಾಗ ತಾವು ಗಂಡ ಹೆಂಡಿರಲ್ಲಾದ ಸಂವಾದ/ಪ್ರೇಮ ಕಲಹಗಳ ವಿಸ್ತಾರ ವಿವರ....ಮನೆಯವರೆಲ್ಲರ ಅಭಿರುಚಿ, ಪುಟ್ಟ ಮಕ್ಕಳಿಗೂ ಸಹ ಸಂಗೀತ ಸಾಹಿತ್ಯಗಳಲ್ಲಿರುವ ಅಭಿಮಾನ, ಕಡೆಯ ತುಂಟ ಮಗು ಮಾಡುವ ಚೇಷ್ಟೆಗಳ ಮಹಾ ವಿವರ...."

ಸಾಧ್ಯವಾದಷ್ಟು ಜಾಗ್ರತೆ ಈ ಸ್ನೇಹ ಸಂಕೋಲೆಯಿಂದ ಬಿಡುಗಡೆ ಹೊಂದೋಣವೆಂದರೆ ಶತಗತಾಯ ಅದು ಸಾಧ್ಯವಾಗುವುದಿಲ್ಲ. ಒಂದು ಲೋಟ ಕಾಫಿ ಕೊಡುವ ಮಹಾ ಉಪಚಾರದಿಂದ ಮತ್ತೊಂದು ಭೈರಿಗೆ. ಪೇಟೆಧಾರಣೆ, ಆಕಾಶವಾಣಿ, ಚಿತ್ರಪ್ರಪಂಚ ಎಲ್ಲದರಲ್ಲೂ ನಮ್ಮನ್ನ ಅಂಡಲೆಸಿ ಕೊನೆಗೆ ಕೈಗೆ ಒಂದು ಲೋಟ ಕಾಫಿ ನೀರು ಕೊಟ್ಟು,

'ಹಾಳಾದ್ದು ಒಳ್ಳೇ ಕಾಫಿ ಪುಡೀನೇ ಸಿಗಲ್ಲ ನೋಡಿ ಆ ಹಾಲೋ ಅಧ್ವಾನ ಏನು ಮಾಡೋದು ಹೇಳಿ....'ಅನ್ನುತ್ತ ತಾವೇ ಮುಖ ಸೊಟ್ಟ ಮಾಡಿ ಹಲ್ಲು ಕಿರಿದಾಗ

ನಮಗೆ ಅವರೆದುರೇ ಆತ್ಮಹತ್ಯೆ ಮಾಡಿಕೊಳ್ಳಬೇಕೆನಿಸುವಷ್ಟು ಜೀವನದಲ್ಲಿ ಜಿಗುಪ್ಸೆ ಬರುತ್ತದೆ.

ಹೀಗೆ ಸಾಗುವ ಹರಟೆ ನಿಜ ನಿಜ ಎನಿಸುತ್ತ ಸಾಗಿ ಬುದ್ಧಿವಂತರೆನ್ನಿಸಿಕೊಂಡ ಕಪಟಿಗಳು, ಸೌಂದರ್ಯದ ಮದವೇರಿ ಗೌರಿಶಂಕರ ಏರಿರುವವರುಗಳೆಲ್ಲರ ಹುಳುಕು ಗಳನ್ನು ಸ್ವಾರಸ್ಯಕರವಾಗಿ ಬಿಚ್ಚಿಡುತ್ತಾರೆ.

'ಹಸಿರು ಗಾಜಿನ ಹಿಂದೆ' ನಂಜಿಲ್ಲದ ಕುಹಕವಿಲ್ಲದ ಲಘು ವಿಡಂಬನೆಗೆ ಮಾದರಿ ಯಾಗಬಲ್ಲ ಇನ್ನೊಂದು ಲೇಖನ. ಕೇವಲ ಫಲ ಆಹಾರಗಳಿಂದಲೇ ಕೆಂಪಗೆ ಸಿಡಿ ದೊಡೆಯುವಂತಿರುವ, ಜಟಾಜೂಟ ಇಲ್ಲದ ಸುಂದರ ಸುರುಳಿಗೂದಲಿನ ಬಾಬ್‌ನಿಂದ ಶೋಭಿಸುವ ಸರ್ವಸಂಗ ಪರಿತ್ಯಾಗಿಗಳೆಂದೂ, ಲೋಕೋದ್ಧಾರದ ನಿಮಿತ್ತ ಅವತರಿಸಿ ಬಂದಿರುವರೆಂದೂ ಕೀರ್ತಿಸಿಕೊಳ್ಳುವ ಸ್ವಾಮಿಗಳೋರ್ವರು ಸದಾಕಾಲ ತಂಪು ಕನ್ನಡಕಧಾರಿಗಳಾಗಿ ಭಕ್ತಾಗ್ರಣಿಯರ ಸೌಂದರ್ಯ ಹೀರುವ ಪರಿ. ಸಮಾರಂಭ ವೊಂದರಲ್ಲಿ ಶೋಭನಾಂಗಿಯರ ಅವರ್ಣನೀಯ ಶೃಂಗಾರವೈವಿಧ್ಯ–ಪುರುಷರನ್ನೆಲ್ಲ ಹಿಂದಿನ ಕುರ್ಚಿಗಳಿಗೆತಳ್ಳಿ ಮುಂದಿನ ಸಾಲುಗಳಲ್ಲಿ ವಿರಾಜಮಾನರಾದ ಕಾಮಿನಿಯರು, ಈ ಪ್ರಮತಿಯರ ಸೌಂದರ್ಯವನ್ನು ಕನ್ನಡಕದೆಡೆಯಲ್ಲಿ ಸೂರೆ ಹೊಡೆಯುವ ಮಂತ್ರಿ ಮಹೋದಯರು....ಇವೆಲ್ಲವನ್ನೂ ಸ್ವಾರಸ್ಯಕರವಾಗಿ ವಿಡಂಬಿಸುತ್ತ ಕೊನೆ ಯಲ್ಲಿ 'ಈ ಹಸಿರು ಗಾಜಿನ ಹಿಂದೆ ಎಂತೆಂತಹ ಭಯಂಕರ ಸಮಾಜವಿದೆ' ಎಂಬ ಉದ್ಗಾರವೆತ್ತುತ್ತಾರೆ.

'ಸ್ಥೂಲ ಪುರಾಣ'ವೆಂಬುದು ಶುದ್ಧ ಹಾಸ್ಯವನ್ನು ಮೈಗೂಡಿಸಿಕೊಂಡು ಬಂದ ಬರಹ. ಅವರ ಮಾತಿನಲ್ಲೇ ಹೇಳುವುದಾದರೆ 'ಲಾಯರು ಡಾಕ್ಟರು ಇಂಜಿನಿಯರು ಗಳಿಗೆ ಒಂದು ಬಲವಾದ ಶರೀರವಿಲ್ಲದಿದ್ದರೆ ಮೂರು ಕಾಸಿನ ಪ್ರಯೋಜನವಿಲ್ಲ. ಸಾಮಾನ್ಯವಾಗಿ ಸೊಣಕಲರನ್ನು ಕಂಡರೆ ಎಲ್ಲರಿಗೂ ನಿರ್ಲಕ್ಷ್ಯ ದುರ್ಲಕ್ಷ್ಯ. ಅದೇ ಒಬ್ಬ ತೀರಾಸಾಮಾನ್ಯ ಧಾಂಡಿಗನನ್ನು ಕಂಡರೆ ಎಲ್ಲರಿಗೂ ಒಳಗೊಳಗೇ ದಿಗಿಲು ಇರು ತ್ತದೆ.' ಎನ್ನುವ ಈ ಲೇಖನದಲ್ಲಿ ಪ್ರಯೋಗಿಸಲ್ಪಟ್ಟ 'ಕಡ್ಡಿ ಕಾಮಣ್ಣ' 'ಕದಿರು ಕಡ್ಡಿ' 'ತುಂಬಿಗರು' 'ಕೋಲಾಂಗೆಯರು' ಮೊದಲಾದ ಶಬ್ದಗಳು ಖುಶಿ ಕೊಡುತ್ತವೆ. ಹೆಣ್ಣು ಮಕ್ಕಳಿಗೆ ಒಂದು ದೊಡ್ಡ ಗಂಟಲು, ದೊಡ್ಡ ಶರೀರ ಇಲ್ಲದಾದ ಮೇಲೆ ಅವರ ಜನ್ಮ ಬೇಡವೆನ್ನುವ ಲೇಖಕಿ ಕೊನೆಯಲ್ಲಿ ಕನ್ಯಾಮಣಿಗಳಿಗೆ–ಉಲ್ಲನ್ ಸೂಟಿನೊಳಗೆ ಊದು ಕಡ್ಡಿಯಂತಿರುವ ಕೈಕಾಲುಗಳನ್ನು ತುರುಕಿರುವ ಪ್ಯಾತರಟೆಗಳನ್ನು ಖಂಡಿತಾ ಮದುವೆ ಯಾಗಬೇಡಿ ಎಂದುಪದೇಶಿಸುತ್ತಾರೆ.

'ಗೊರಕೆ' ಎಂಬುದು ತಲತಲಾಂತರದಿಂದ ಒಂದು ಮನುಷ್ಯವರ್ಗ ಹೊಡೆಯು ತ್ತಲೂ ಇನ್ನೊಂದು ವರ್ಗ ಅನುಭವಿಸುತ್ತಲೂ ಬಂದ ಒಂದು ಸಿದ್ಧಾಂತಿಕ ಪೀಡೆ. ಇದರ ಮೇಲೆ ಸಾಕಷ್ಟು ನಗೆ ಬರಹಗಳು ಕನ್ನಡದಲ್ಲಿ ರಚಿತವಾಗಿವೆ. ಆದರೂ ಎಂ. ಕೆ. ಇಂದಿರಾರ ಸಣ್ಣಯ್ಯನವರ ಗೊರಕೆ ಸಮಸ್ಯೆ ಹೊಸದಾಗಿಯೆಂಬಂತೆ ರಂಜಿಸುತ್ತದೆ. ಗೊರಕೆಯ ಪರಿಯನ್ನು ವರ್ಣಿಸಲು ಅವರು ಬಳಸಿರುವ ಗೊರಕೆಯ ವಿವಿಧ ಮಜಲು ಗಳಲ್ಲಿನ, ಸಂಗೀತ (!) ವೈವಿಧ್ಯವೇ ಇದಕ್ಕೆ ಕಾರಣವೆನ್ನಿಸುತ್ತದೆ. ಗೊರೆಯುವ ಘೋರ ಪ್ರಾಣಿಯನ್ನು ಹತ್ತಿರದಿಂದ ನೋಡುತ್ತ ಅದರ ಸ್ವರದ ಪರಿಮಿತ ವೈವಿಧ್ಯ ಗಳನ್ನು ಆಲಿಸಿದರೂ ಅದರ ವೈವಿಧ್ಯಮಯ ಸೊಮ್ಮುಪಿಕೆಯನ್ನು ಶಬ್ದಗಳಲ್ಲಿ ಹಿಡಿ ದಿಡುವುದಾಗಲೀ, ನಿಶ್ಚಿತ ಸ್ವರಕ್ಕೆ ಪರಿವರ್ತಿಸಿ ಹೇಳುವುದಾಗಲಿ ಬಲು ಕಷ್ಟ. ಆದರೆ ಇಂದಿರಾರ ಲೇಖನಿ ಅದನ್ನು ನಗೆಯುಕ್ಕಿಸುವ ರೀತಿಯಲ್ಲಿ ಹಿಡಿದಿಟ್ಟಿದೆ !

ಘ್ರಾಂ.... ಫ್ರ್ಹಾಂ ಫಟ್ ! ಘ್ರಾಂ ಫ್ರಾ ಫಟ್ ಘ್ರಾಂ.... ಇದು ಪ್ರಾರಂಭದ ತಾನವಾದರೆ

ಕೊ...ಕೊ...ಕೊ....ಕೊಕೋಸ್–ಇದು ಇನ್ನೊಂದು ಸ್ವರ ವಿನ್ಯಾಸ. ಒಂದು ಫ್ಲೋರ್ ಮಿಲ್ಲು, ಒಂದು ರೋಡ್ ಇಂಜಿನ್ನು, ಒಂದು ಮೋಟರ್ ಸೈಕಲ್ ಒಂದೇ ಬಾರಿಗೆ ಕೆಲಸ ಮಾಡಿದರೆ ಮಾಡಬಹುದಾದ ಇಂಚರ ಸಣ್ಣಯ್ಯನವರ ಗೊರಕೆ ಹೀಗೆ ಬದಲಾಗುತ್ತಲೇ ಹೋದ ಸಣ್ಣಯ್ಯನವರ ಗೊರಕೆಯನ್ನು ಸರಿಗಮದಂತೆ ಜೋಡಿ ಸಿಡಲೂ ಬಹುದು.

ಸ ರಿ ಗ ಮ ಪ ದ ನಿ ಸ
ಸು ನೊ ನೊ ನೊ ನೊ ನೊ ನೊ
ಸ ನಿ ದ ಪ ಮ ಗ ರಿ ಸ
ಫಿ ರಿ ರಿ ರಿ ರಿ ರಿ ರಿ ರಿ ರಿ !

ಗೊರಕೇಶ್ವರರ ಹಾವಳಿಗೆ ತುತ್ತಾಗಿ ಮಧ್ಯರಾತ್ರಿಯಾದರೂ ನಿದ್ರಿಸಲಾಗದೆ ಕಣ್ಣುರಿಯುವ ನಾವು, ರಕ್ತ ಕುದಿಯುವ ನಾವು ಆ ಸ್ಥಿತಿಗೆ ಕಾರಣವಾದ ಪ್ರಾಣಿಯ ಗೊರಕೆಯನ್ನು ಆಲಿಸಿ ಆಸ್ವಾದಿಸುವ ಮನಃಸ್ಥಿತಿಯಲ್ಲಿ ಖಂಡಿತ ಇರಲಾರೆವು, ಗೊತ್ತು. ಆದರೆ ಹಾಗೆ ಮಾಡದೇ ನಮಗೆ ಅನ್ಯಮಾರ್ಗವೇ ಉಳಿದಿಲ್ಲ. ಈ ಲೇಖನದಲ್ಲಿ ಗೊರೆಯುವ ಸಣ್ಣಯ್ಯನನ್ನು ಎಚ್ಚರಿಸಿಯಾದರೂ ಗೊರಕೆ ನಿಲ್ಲಿಸುವಂತೆ ಮಾಡಲು ಮಕ್ಕಳು ಏನೇನೋ ಪ್ರಯತ್ನ ಮಾಡುತ್ತಾರೆ. [ನಾವೂ ನೀವೂ ಹಾಗೆಲ್ಲ ಮಾಡಿ

ನೋಡಿದ್ದೇವೆ] ಆದರೂ ಪ್ರಯೋಜನವಾಗಿಲ್ಲ. ಮೂಗಲ್ಲಿ ಹುಲ್ಲುಗರಿಕೆ ಹಾಕಿ ತಿರುವಿದರೆ ಹೆ ಹೆ ಹೆ ಹ ಹೆ ಹೇಂ ಂ.... ಎಂದೊಂದು ಹೇಷಾರವ ಹೊಡುತ್ತದೆ ಅಷ್ಟೆ, ಗೊರಕೆ ನಿಲ್ಲುವುದಿಲ್ಲ. ಅಂದ ಬಳಿಕ ಒಹುಶಃ ನಮಗೆ ಉಳಿದಿರುವ ಏಕೈಕ ಮಾರ್ಗ ಈ ಘೋರ ಗೊರಕೆಯನ್ನು ಮನರಂಜನೆಯ ದೃಷ್ಟಿಯಿಂದ ನೋಡುತ್ತ ಎಂಜಾಯ್ ಮಾಡುವದು ಮಾತ್ರ. ಈ ಲೇಖನ ಓದಿದ ಬಳಿಕ ನಾನಂತೂ ನಮ್ಮ ಮನೆಯಲ್ಲಿ ಗೊರಕೇಶ್ವರರ ಆಗಮನವಾದಾಗೆಲ್ಲ ಮೊದಲಿನ ಹಾಗೆ ಅವರ ಮೇಲೆ ಸಿಡಿಮಿಡಿಗೊಳ್ಳುವುದಿಲ್ಲ, ಬದಲು ಅರ್ಧ ಕನಿಕರ ಅರ್ಧ ರಂಜನೆ ಸೇರಿಸಿ ಆಸ್ವಾದಿಸುತ್ತೇನೆ.

ಸಂಕಲನದ ಉದ್ದಕ್ಕೂ ಸೊಗಸಾಗಿ ಅರಳಿರುವ ಇಂದಿರಾರ ವಿಶಿಷ್ಟ ಛಾಪಿನ ಭಾಷೆಯಲ್ಲಿ ಕಾಣಸಿಗುವ ಅನೇಕ ವಾಕ್ಯಗಳು ಗಮನಾರ್ಹವಾಗಿವೆ.

"ಹಾಳಾಗಿ ಹೋಗಲಿ ಎಂಬ ಆಶೀರ್ವಾದದೊಂದಿಗೆ ನಗರದ ಅಷ್ಟು ಮೂಲೆಯ ಕಾಲೇಜುಗಳಿಗೆ ಅಪ್ಲಿಕೇಶನ್ ಕೊಟ್ಟದ್ದಾಯ್ತು" (ಎನ್. ಸಿ. ಸಿ.) "ಎರಡು ರಾಜ್ಯಗಳು ಬಡದಾಡಿ ಉರಿದು ಉಪ್ಪಾಗುತ್ತವೆ. ಕಡೆಗೆ ಆ ಪ್ರೇಮಿಗಳನ್ನು ಒಂದುಗೂಡಿಸಿ ತಾನು ತಣ್ಣಗೆ ಅವಲಕ್ಕಿ ಮೊಸರು ಹೊಡೆಯುತ್ತದೆ ಈ ಅಡುಗೂಲಿ," [ಅಡುಗೂಲಜ್ಜಿ.] "ಹಾಲು ಮೊಸರು ಉಂಡು ಇಬ್ಬರಿಗೂ ಹಾಲು ಕಂಡರೆ ಹಾಗಿರಲಿ ಎಮ್ಮೆ ಕಂಡರೆ ಓಕರಿಕೆ ಬರುವಂತಾಯ್ತು" [ಹಾಲುಹೋವ] "ಗೌರಮ್ಮ ಅಪ್ಪಣ್ಣ ಪಂಡಿತರ ಮಗಳು. ಹದಿಮೂರು ಹದಿನಾಲ್ಕು ವರ್ಷಗಳವರೆಗೆ ತಂದೆಯ ಆಳಲೇ ಕಾಯಿ ಕಾರ್ಖಾನೆಯಲ್ಲಿ ಬೆಳೆದು ಅರೆವಾಸಿ ಡಾಕ್ಟರಿಣಿ ಆಗಿದ್ದಳು. ಆಕೆಯ ಇಂಗು ಮೆಣಸು ಶುಂಠಿಗಳನ್ನು ಕಂಡೇ ಕೆಲವು ಸಣ್ಣ ಪುಟ್ಟ ಕಾಯಿಲೆಗಳು ಓಡಿ ಹೋಗುತ್ತಿದ್ದವು" [ಆಮಶಂಕೆಗೆ ಔಷಧಿ]

"ಆ ಶ್ರೀಹರಿಯಾದರೂ ಆ ಪರಂಧಾಮ ಬಿಟ್ಟು ಒಂದು ಹೆಜ್ಜೆ ನಡೆಯುವುದಿಲ್ಲ, ಅದೆಲ್ಲಿರುತ್ತದೆಯೋ ಆ ಕಾಲು ನೋವು ಆತನಿಗೇ ಗೊತ್ತು. ಮಹತಾಯಿ ಇಂದಿರೆಗಾದರೂ ಮೂರು ಕಾಸಿನ ಗೃಹಕೃತ್ಯವಿಲ್ಲ. ಅಮೃತದ ಕಡಲಿನ ಮಧ್ಯೆ ಹಸಿವು ನೀರಡಿಕೆಗಳಿಲ್ಲ. ಅಪರೂಪಕ್ಕೆ ಬರುವ ಅತಿಥಿಗಳೆಂದರೆ ದೇವತೆಗಳು, ನಾರದರು. ಅವರನ್ನೂ ವೈಕುಂಠದ ಬಾಗಿಲಲ್ಲೇ ನಿಲ್ಲಿಸಿ ಮಾತಾಡಿಸಿ ಕಳಿಸಿಬಿಟ್ಟರೆ ಮುಗಿಯಿತು. ಮೈಗಳ್ಳಿ ಇಂದಿರೆ ಗಂಡನ ನೋವಿಲ್ಲದ ಕಾಲೊತ್ತುವ ನೆವದಲ್ಲಿ ಇಬ್ಬರೂ ಹರಟುತ್ತ ಕುಳಿತರೆ ನಾಲ್ಕು ಯುಗಗಳೂ ಕಳೆಯಬಹುದು"[ಬಾಳ ಸಂಜೀವಿನಿ-ಹರಟೆ]

"ಅಧ್ಯಕ್ಷರು ಮುಖ್ಯ ಅತಿಥಿಗಳು ಏನೇನೋ ಭಾಷಣ ಕುಟ್ಟಿದರು ಬೀಸಿದರು, ಕೇರಿದರು ತೂರಿದರು !" [ಹಸಿರು ಗಾಜಿನ ಹಿಂದೆ]

ಇಂಥ ವಿಶಿಷ್ಟ ವಿನೋದವನ್ನು ಸೂಸುವ ವಾಕ್ಯಗಳು ಇಂದಿರಾರ ಬರವಣಿಗೆಯಲ್ಲಿ ನಮಗೆ ಹೇರಳವಾಗಿ ಸಿಗುತ್ತವೆ. ನಗಬೇಕು ಹರಟೆಗಳ ಸಂಕಲನವನ್ನು ಬಿಟ್ಟರೆ ಹಾಸ್ಯ ಕಾದಂಬರಿ ಎಂದೇ ಕರೆಯಬಹುದಾದ 'ಕೂಚುಭಟ್ಟ' ಇಂದಿರಾರ ಇನ್ನೊಂದು ಹಾಸ್ಯ ಕೃತಿ. ಕಾವ್ಯದಲ್ಲಿ ವರ್ಣಿತವಾಗುವ ಸೌಂದರ್ಯವನ್ನುಳ್ಳ ಯುವತಿಯರು ಈಗಲೂ ಇದ್ದಾರೆಂಬ ಭ್ರಮೆಯನ್ನು ಇರಿಸಿಕೊಂಡ ಕಥಾನಾಯಕ ಅಂಥ ಹೆಣ್ಣಿಗಳಿಗಾಗಿ ಅರಸ ತೊಡಗಿ ತುಸು ಹುಚ್ಚು ಎಂಬ ಹೆರವರ ಅನುಮಾನಕ್ಕೂ ತುತ್ತಾಗುತ್ತಾನೆ. ನಾಗವೇಣಿ ಕುಂಭಕುಚೆ ದಾಳಿಂಬದ ಹಲ್ಲುಗಳು ತೊಂಡೆ ತುಟಿ....ಗಳನ್ನು ಅಕ್ಷರಶಃ ಸೇರಿಸಿ ತಯಾರಿಸಿದ ಹೆಣ್ಣೊಂದನ್ನು ತೋರಿಸಿ ನಾಯಕನ ಬಂಧುಗಳು ಆತನ ಕಾವ್ಯ ಸೌಂದರ್ಯದ ಭೂತ ಬಿಡಿಸುವ ವಸ್ತುವಿನ ಈ ಕಾದಂಬರಿಯಲ್ಲಿ ಓದಿ ಮರುಳಾದ ಕೂಚುಭಟ್ಟನ ಪೇಚಾಟದ ಚಿತ್ರಣ ನಗು ತರಿಸುತ್ತದೆ. ಆದರೂ ಇಲ್ಲಿನ ಉತ್ಪ್ರೇಕ್ಷಿತ ಕಥಾವಸ್ತು ಸಹಜತೆಯ ಸೊಗಸನ್ನು ಅಷ್ಟಾಗಿ ಪಡೆದಿಲ್ಲವಾದ್ದರಿಂದ ಇದು ಉಳಿದ ಕೃತಿಗಳ ಸಾಲಿನಲ್ಲಿ ಸೇರಿಸಲಾಗದೇನೋ ಎಂದೆನ್ನಿಸುವ ಕೃತಿಯಾಗಿದೆ.

ವಿಡಂಬನೆಯು ಮೊನಚು ಇಂದಿರಾರ ಲೇಖನಿಯಲ್ಲಿ ಸಾಕಷ್ಟು ಪ್ರಭಾವಶಾಲಿಯಾಗಿಯೇ ಇರುತ್ತದೆ. ಅವರ 'ಟು ಲೆಟ್' ಕಾದಂಬರಿ ಈ ಸಾಮಾಜಿಕ ವಿಡಂಬನೆಯನ್ನೆ ಸೊಗಸಾಗಿ ಹಿಡಿದಿಟ್ಟಿದೆ.

ಶಿವಮೊಗ್ಗದಲ್ಲಿ ಸ್ವಂತ ಮನೆಯಿಂದ ಕುಟುಂಬವೊಂದು ಬೆಂಗಳೂರೆಂಬ ಮಹಾನಗರಕ್ಕೆ ವರ್ಗವಾಗಿ ಬಂದು, ಬಾಡಿಗೆ ಮನೆ ಹೂಡುವ ಕಥಾವಸ್ತುವನ್ನು ಹೊಂದಿದ ಈ ಕಾದಂಬರಿ ನಗರದ ಮಧ್ಯಮವರ್ಗದವರ ಜೀವನಕ್ರಮದ ಪರಿಪಾಟಲುಗಳನ್ನು ವಿಡಂಬಿಸುತ್ತದೆ. ಇಡೀ ಕಾದಂಬರಿಯಲ್ಲಿ ವರ್ಣಿತವಾಗುವ ವಠಾರ ಜೀವನದ ದಿನಚರಿ ವಠಾರವೊಂವರ ನೈಜ ಚಿತ್ರಣವನ್ನು ಹಾಸ್ಯದ ಜತೆಗೇ ಯಶಸ್ವಿಯಾಗಿ ನೀಡಿದೆ.

ವಠಾರದ ಪೀಡೆಗಳಿಗೆ ಹೊಂದಿಕೊಳ್ಳಲಾರದ ರುಕ್ಕಮ್ಮ ಅವುಗಳನ್ನು ಕಂಡು ರೋಸಿ ಹೋಗಿ ಪಟಕ್ಕೆಂದು ಉತ್ತರ ಸಿಡಿಸುವುದನ್ನು ಕಲಿತಿದ್ದಾಳೆ. ಹಾಗಾಗೇ ಬದುಕಿದ್ದಾಳೆ. ಒಂದು ಸ್ಯಾಂಪಲ್ ನೀಡುವುದಾದರೆ :

"....ಊಟಕ್ಕೆ ಕುಳಿತಾಗ ಗೋಡೆ ತೂತನ್ನು ಮುಚ್ಚಿದ್ದ ಚಾಪೆ ಧೊಪ್ಪನೆ ಕೆಳಗೆ ಬಿದ್ದು ಆ ತೂತಿನಿಂದ ಸ್ಟೀಲಿನ ಸೌಟು ಹೊರಕ್ಕೆ ಬರುತ್ತದೆ. ಮತ್ತು ತೂತು ಮಾತಾಡುತ್ತದೆ :

"ರುಕ್ಕಮ್ನೋರೆ ಇವತ್ತಲ್ಲಿ ಒಂದು ಚಮಚ ಕಾಫಿಪುಡಿ ಕೊಡ್ರಿ. ನಮ್ಮ ಶಾಂತ ಬಂದ್ಕೂಡ್ಲೆ ತರ್ಸಿಕೊಡ್ತೀನಿ" ಎಂಬ ಬಿನ್ನಹ. ರುಕ್ಕಮ್ಮ ದಬಾಯಿಸುತ್ತಾಳೆ.

"ನಮ್ಮನೇಲೂ ಕಾಫಿ ಪುಡಿ ಮುಗಿದಿದೇರಿ ನೀವು ಮುಂಚೆ ಮೂರು ಸರ್ತಿ ಇಸ್ಕೊಂಡಿದ್ದೂ ಕೊಟ್ಟಿಲ್ಲ, ಇವತ್ತು ತರಿಸಿದರೆ ನಮ್ಮನೇ ಪುಡಿ ಎಲ್ಲಾ ಕೊಟ್ಬಿಡಿ" ಅನ್ನುತ್ತಾರೆ.

"ತೂತು : ರೀ ರುಕ್ಕಮ್ಮ ನಿಮ್ಮ ದಮ್ಮಯ್ಯ ಒಂದು ಚಮಚಾನಾದ್ರೂ ಕೊಡ್ರಿ ಸದ್ಯಕ್ಕೆ ಯಾರೋ ಅಪರೂಪದ ನೆಂಟರು ಬಂದಿದಾರೆ."

"ರುಕ್ಕಮ್ಮ : ನಮ್ಮನೆಗೂ ಅಪರೂಪದ ನೆಂಟರು ಬಂದಿದಾರೆ ನನಗೂ ಕಾಫಿಪುಡಿ ಬೇಕು ನೀವೇ ತರಿಸಿಕೊಡಿ"

ಈಗ ತೂತಿನ ಧ್ವನಿ ಮೆತ್ತಗಾಗಿ ನಿಜ ಹೊರಬೀಳುತ್ತದೆ.

"ಒಂದು ಎಂಟಾಣೆನಾದ್ರೂ ಇದ್ರೆ ಕೊಡಿ ಅವ್ರು ಬಂದ ಕೂಡ್ಲೆ ಕೊಡ್ತೀನಿ." ವಠಾರದಲ್ಲಿ ಇರೋರೆಲ್ಲ ಇಂಥವರೇ. ಒಂದು ಬಟ್ಟಲು ಅನ್ನ ಕೇಳೋರು ಒಂದು ಬೆಂಕಿ ಕಡ್ಡಿ ಕೇಳೋರು, ಅನ್ನಕ್ಕೆ ಚೂರು, ಸಾರೂ ಕೊಡಿ ಅಂತ ಬೇಡೋರು, ಪ್ರತಿ ಸಲ ಮಗಳನ್ನು ನೋಡಲು ಬಂದಾಗಲೂ ಸ್ಟೀಲ್ ಲೋಟ ಚಾಪೆ ಕಡ ಕೇಳೋರು, ಬಂದ ಗಂಡುಗಳು ಹುಡುಗಿಯ

'ಚಲುವಾಂತ ಚೆನ್ನಿಗನೆ ನಲಿದಾಡು ಬಾ' ಎಂಬ ಹಾಡು ಕೇಳಿಯೋ ಅಥವಾ ಅವಳ ರೂಪವನ್ನೋ ಸಂಕಟಕರವಾದ ಕೇಶಾಲಂಕಾರವನ್ನೋ ನೋಡಿ ಅರಬ್ಬೀ ಕುದುರೆಗಳಂತೆ ಬೂಟಿನ ಸದ್ದು ಮಾಡುತ್ತ ನಿರ್ಗಮಿಸುತ್ತಾರೆ.

ವಠಾರದ ಹುಳುಕುಗಳು, ಮನೆ ಮಾಲೀಕರೆನಿಸಿಕೊಂಡವರು ಜಬರು. ಗರತಿಯರ ಪಾಡು....ಎಲ್ಲವನ್ನೂ ಈ ಕಾದಂಬರಿಯಲ್ಲಿ ಸೊಗಸಾಗಿ ವಿಡಂಬಿಸಿದ್ದಾರೆ.

ಇಂದಿರಾರ ಕಾದಂಬರಿ ಕಥೆಗಳಿಗಿಂತ ಭಿನ್ನವಾದ ನೆಲೆಯಲ್ಲಿ ರಚಿತವಾಗಿರುವ ಆದರೆ ಅವರದೇ ಆದ ಹೃದ್ಯ ಶೈಲಿಯಿಂದಾಗಿ ಓದುಗರ ಮೆಚ್ಚುಗೆಗೆ ಪಾತ್ರವಾಗುವ 'ಚಿತ್ರಭಾರತ' ಕೃತಿಯಲ್ಲೂ ನವಿರಾದ ಹಾಸ್ಯ ಉದ್ದಕ್ಕೂ ಪರಿಮಳಿಸಿದೆ. ಚಿತ್ರ

ಜಗತ್ತಿನ ಅತಿರೇಕಗಳನ್ನು, ವಿಕಾರಗಳನ್ನು, ಪ್ರಸ್ತಾಪಿಸುವಾಗೆಲ್ಲ ತೀರ ಮೆಲು ಹಾಸ್ಯವನ್ನೇ ಅಂತರ್ಯದಲ್ಲಿ ಕಾಣಬಹುದು.

ಅನುಭವ ಶ್ರೀಮಂತವಾದ ಸುಸಂಸ್ಕೃತ ಅಭಿವ್ಯಕ್ತಿಯಿಂದ ಆತ್ಮೀಯವಾಗುವ ಇಂದಿರಾರ ಬರಹಗಳಲ್ಲಿ ಹಾಸ್ಯವನ್ನು 'ಹುಡುಕ'ಬೇಕಾದ ಅಗತ್ಯವಿಲ್ಲ. 'ಸವಿಯುವ', ಅಭಿರುಚಿ ಇದ್ದರೆ ಸಾಕು. ತಿಳಿಹಾಸ್ಯದ ಒರತೆಯೇ ಅವರ ಲೇಖನಿಯಲ್ಲಿದೆ.

ಗಿಡಗಳ ನಡುವೆ ಒಂದು ಪುಟ್ಟ ಮಸೀದಿ ಇತ್ತು. ಡ್ರೈವರು ಅದರ ಮುಂದೆ ಮಂಡಿಯೂರಿ ಕುಳಿತು ಅಂಗೈ ಜೋಡಿಸಿ ಕಣ್ಣು ಮುಚ್ಚಿ ನಮಾಜ್ ಮಾಡಿದರು. ಆಗಲೇ ನನಗೆ ತಿಳಿದಿದ್ದು, ಅವರು ಮಹಮ್ಮದೀಯರೆಂದು. ಕಂಡಕ್ಟರು ಹಿಂದುವಾದರೂ ಆತನೂ ಕರ ಜೋಡಿಸಿ ಕಣ್ಮುಚ್ಚಿ ಪ್ರಾರ್ಥನೆ ಮಾಡಿದ. ಇದನ್ನು ನಿಜವಾದ ಮಾನವೀಯತೆ ಅನ್ನುವುದಕ್ಕಿಂತ ದೈವಿಕತೆ ಅನ್ನಬಹುದು. ಅವರ ಪೂಜೆ ಪ್ರಾರ್ಥನೆಗೆ ನಮ್ಮಂತೆ ದೈಹಿಕ ಶುದ್ಧಿ, ಮಡಿ ಮುಖ್ಯವಲ್ಲ ಆತ್ಮಶುದ್ಧಿ ಮಾತ್ರ ಮುಖ್ಯ. ಕೇವಲ ಐದು ನಿಮಿಷಗಳಲ್ಲಿ ಅವರ ಪ್ರಾರ್ಥನೆ ಮುಗಿಯಿತು. ಮತ್ತೆ ತಮ್ಮ ಕರ್ತವ್ಯದ ದೇವರನ್ನು ಪೂಜಿಸಲು ಸರಸರ ಬಂದು ಬಸ್ಸನ್ನೇರಿದರು.

ಪುಟ-52 (ಅನುಭವ ಕುಂಬ)

‘ಇಂದಿರಾ’—ನನ್ನ ಜೀವನದ ಅಮೃತಕ್ಷಣ !

○

○

○ ಮಂದಾಕಿನೀ ಪುರೋಹಿತ

೧೯೮೧ನೆಯ ಇಸ್ವಿ ಆಗಸ್ಟ್ ತಿಂಗಳು. ಆದೇ ಆಗ ಎಂ.ಎ. ಪರೀಕ್ಷೆಯ ಫಲಿತಾಂಶ ಪ್ರಕಟವಾಗಿತ್ತು. ಎಂ.ಎ. ಮುಗಿದ ನಂತರ ಮುಂದೇನು? ಎಂಬ ಪ್ರಶ್ನೆಗೆ ಸುಲಭವಾಗಿ ದೊರೆಯಬಹುದಾದ ಉತ್ತರ ಯಾವುದಾದರೂ ಕಾಲೇಜಿನಲ್ಲಿ ಉಪನ್ಯಾಸಕರ ಕೆಲಸಕ್ಕೆ ಪ್ರಯತ್ನಿಸುವದು. ಸಾಹಿತ್ಯಾಭ್ಯಾಸಿಯಾಗಿ ಬೆಳೆಯುತ್ತಿದ್ದ ನನ್ನ ಮನಸ್ಸು ಈ (ಸೀಮಿತ) ವಿಚಾರವನ್ನು ಒಪ್ಪಿಕೊಳ್ಳಲಿಲ್ಲ. ಸಂಶೋಧನೆ ಹಾಗೂ ವಿಮರ್ಶೆಯತ್ತ ನನ್ನ ಮನಸ್ಸು ಹೊರಳಿತು. ಸಂಶೋಧನೆ—ಅಧ್ಯಯನ ಪ್ರಾರಂಭಿಸಿದ ನಂತರ ಕೆಲಸಕ್ಕಾಗಿ ಪ್ರಯತ್ನಿಸಿದರಾಯಿತು ಎಂದುಕೊಂಡೆ.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ನನ್ನ ವಿದ್ಯಾಗುರುಗಳಾದ ಡಾ. ಬಿ. ಸಿ. ಜವಳಿ ಹಾಗೂ ಡಾ. ದೇವೇಂದ್ರ ಕುಮಾರ ಹಕಾರಿಯವರೊಡನೆ ಮಾತನಾಡುತ್ತ ಸಂಶೋಧನೆ ಕೈಗೊಳ್ಳುವ ವಿಚಾರವನ್ನು ವ್ಯಕ್ತಪಡಿಸಿದಾಗ ಡಾ. ಹಕಾರಿಯವರು “ಎಂ. ಕೆ. ಇಂದಿರಾ ಅವರ ಕಾದಂಬರಿಗಳನ್ನು ಕುರಿತು ನೀವು ಅಧ್ಯಯನ ಮಾಡಬಾರದೇಕೆ ?” ಎಂದು ನನ್ನನ್ನು ಪ್ರಶ್ನಿಸಿ “ಅವರ ‘ಫಣಿಯಮ್ಮ’ ‘ಸದಾನಂದ’, ಈ ಕಾದಂಬರಿಗಳನ್ನು ಓದಿದ್ದೀರಾ ? ಸ್ತ್ರೀಯ ಮನಸ್ಸಿನ ಸೂಕ್ಷ್ಮ ಸಂವೇದನೆಗಳನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಿರಿ.” ಎಂದರು. ತಟ್ಟನೆ ಆಗ ಕೆಲವು ದಿನಗಳ ಹಿಂದೆ ನಾನು ಓದಿದ ‘ಗೆಜ್ಜೆ ಪೂಜೆ’ ಕಾದಂಬರಿ ನೆನಪಾಯಿತು. ಕಾದಂಬರಿಯ ನಾಯಕಿ ಚಂದ್ರಳ ಪಾತ್ರ ನನ್ನ ಕಣ್ಮುಂದೆ ಸುಳಿದು ಹೋಯಿತು. ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ಅವಳ ತಾಯಿ ಅಪರ್ಣ ಅನುಭವಿಸಿದ ಮೂಕ ವ್ಯಥೆ

ಪುಟ್ಟಣ್ಣ ಶೆಟ್ಟರೊಡನೆ ಹೆಂಡತಿಯಂತೆ ಬಾಳುತ್ತಿದ್ದರೂ ಅವಳಿಗೆ ಸಮಾಜದಲ್ಲಿ ದೊರೆತದ್ದು ವೇಶ್ಯೆಯ ಪಟ್ಟ. ಅವಳ ಕರುಳಿನ ಕುಡಿ 'ಚಂದ್ರ' ವೇಶ್ಯೆಯ ಮಗಳೆಂಬ ಅಭಿದಾನ ಹೊತ್ತು ಎದುರು ಮನೆಯ ಯುವಕನನ್ನು ಮನಸಾರ ಪ್ರೀತಿಸಿಯೂ ಅವನ ಬಾಳ ಸಂಗಾತಿಯಾಗಲು ಅವಕಾಶ ಸಿಗದೇ ದುರಂತವಾಗಿ ಬಾಳನ್ನು ಕೊನೆಗಾಣಿಸಿಕೊಂಡ ರೀತಿ ನನ್ನ ಮೈ ನಡುಗಿಸಿತ್ತು. ಕಾದಂಬರಿಯಲ್ಲಿ ಚಿತ್ರಿತವಾದ ಜ್ವಲಂತ ಸಮಸ್ಯೆ ನನ್ನ ಮನಸ್ಸನ್ನಾವರಿಸಿತು. ಮುಂದೆ ಕೆಲವು ದಿನಗಳಲ್ಲಿಯೇ ನನ್ನ ಅಧ್ಯಯನ ಪ್ರಾರಂಭವಾಯಿತು. ಡಾ. ಬಿ. ಸಿ. ಜವಳಿಯವರು ಮಾರ್ಗದರ್ಶಕರಾದರು.

ಅವರ ಮೊದಲ ಕಾದಂಬರಿ 'ತುಂಗ-ಭದ್ರ' ಓದಲು ಕೈಗೆತ್ತಿಕೊಂಡೆ.

"ಕೃಷ್ಣೀ ; ಏ ಕೃಷ್ಣೀ, ಬರ್ತೀ ಇಲ್ಲೇ ಮನಿಗೇ, ಹೇಳ್ತಿನಿ ತಡೀ ಅಪ್ಪಯ್ಯಗೆ ಉರಿಬಿಸ್ಲಾಗೆ ಅಲೀತೀದೀಯಾ ? ಹೇಳ್ತೆನಿ ಇರು"

ನದಿಯ ದಂಡೆಯ ಬಿಲ್ವ ಪತ್ರೆಯ ಮರದಡಿಯಲ್ಲಿ ನಿಂತು ಮುದ್ದು ರಾಮ ಕೂಗಿದ. ಜಾರುಬಂಡೆಯಲ್ಲಿ ಜಾರಿ ಮರಳಿನ ಮೇಲೆ ನಿಂತ ಕೃಷ್ಣವೇಣಿ ತಲೆ ಎತ್ತಿ ಮೇಲೆ ನೋಡಿದಳು. ಮುದ್ದುರಾಮ, ರಾಘು ಇಬ್ಬರೂ ನಿಂತಿದ್ದರು. ಮುಖ ಗಂಟು ಹಾಕಿಕೊಂಡು ಅವಳು ಗೊಣಗುತ್ತ—"ಬರ್ತನಿ ನಡೆಯಾ, ತುಂಗ-ಭದ್ರ ಪಾತ್ರೆ ತೊಳೀತದಾರೆ ನಾನೂ ಅವರ್ಜೊತೆ ಬರ್ತನಿ ನೀ ಹೋಗಾ' "ಏನು ನಿಂತಲೆ ನೀ ಬರಾದು, ಅಲ್ನೋಡು ತುಂಗ-ಭದ್ರಾ, ಶಂಭು ಎಲ್ಲ ಅಲ್ಲಿ ಹೋಗ್ತದಾರೆ—ನಿನ್ನ ಮೂತಿ ನೋಡು ಮಂಗನ ಹಾಗೆ ಕೆಂಪ್ಗಾಗದೆ."

ಕೃಷ್ಣಿ ತುಂಗಾನದಿಯ ವಿಶಾಲ ಪಾತ್ರದೆಡೆಗೆ ಕಣ್ಣು ಹಾಯಿಸಿದಳು. ಏಳು ವರ್ಷದ ತುಂಗ-ಭದ್ರೆಯರು ತಲೆಯ ಮೇಲೆ ಪಾತ್ರೆಯ, ಬಟ್ಟೆಯ ಕುಕ್ಕೆಗಳನ್ನು ಹೊತ್ತು, ಅಣ್ಣ ಶಂಭುವಿನ ಕೈಹಿಡಿದು ದಂಡೆಯ ಮೇಲಿನ ಮರದ ನೆರಳಿನಲ್ಲಿ ಸರಸರನೆ ದಾರಿ ಹಿಡಿದಿದ್ದರು. ಬೇಸಗೆಯ ನದಿ ಬಹಳ ತಗ್ಗಿನಲ್ಲಿ ಹರಿಯುತ್ತಿತ್ತು. ಆಗಲೇ ಗಂಟೆ ಹನ್ನೆರಡಾಗಿತ್ತು. ನದಿಯ ಪಾತ್ರವೆಲ್ಲ ಖಾಲಿಯಾಗಿತ್ತು. ಬಂದವರೆಲ್ಲ ಬಟ್ಟೆ, ಪಾತ್ರೆ, ಸ್ನಾನ ಮುಗಿಸಿ ಮನೆಗೆ ನಡೆದಿದ್ದರು. ಕೆಲವು ಲಂಗೋಟಿ ಗೆಳೆಯರು ಮಾತ್ರ ರಾಮತೀರ್ಥದೆಡೆಯಲ್ಲಿ ಕಲ್ಲು ಸಾರದಿಂದ ನೀರಿಗೆ ಹಾರಿ ಬಿದ್ದು ಈಸುತ್ತಿದ್ದರು. ಈಗ ಮುದ್ದುರಾಮ, ರಾಘು ಇಬ್ಬರೂ ಬೇಲದ ಹಣ್ಣಿಗಾಗಿ ಕುರುವಳ್ಳಿಗೆ ಹೋದವರು ಅದೇ ಮಾರ್ಗವಾಗಿ ಹಿಂದಿರುಗಿದ್ದರು.

ಸುತ್ತಲೂ ನೋಡಿದೊಡನೆ ಕೃಷ್ಣಿಗೆ ಗೊತ್ತಾಯಿತು ಹೊತ್ತು ಎಷ್ಟಾಗಿದೆ ಯೆಂದು. ಮರದ ನೆರಳು ಮರದ ಬುಡ ಸೇರಿತ್ತು, ಬಿಸಿಲು ಬಾವಲಿಗಳು ರಪರಪ ರೆಕ್ಕೆ ಬಡಿಯುತ್ತಿದ್ದವು. ಒಂಬತ್ತು ಗಂಟೆಯಿಂದ ಒಂದೇ ಸಮ ಅವಳು ಜಾರು ಬಂಡೆ ಆಡಿದ್ದಳು. ಶಂಭು ಬಂದು ಕರೆದಾಗ, "ನೀವೆಲ್ಲ ನಡೀರಿ ಬರ್ತನಿ"—ಎಂದು ಹೇಳಿದ್ದ ವಿಷಯ ಅವಳಿಗೆ ಮರೆತು ಹೋಗಿತ್ತು. ಮತ್ತೆ ಅಲ್ಲಿಯೇ ನಿಂತು ಮೇಲೆ ನೋಡಿದಳು. ಮುದ್ದುರಾಮ ಮತ್ತೆ ಕೂಗಿದ "ಬರಲ್ಲನೆ ಮನೀಗೇ" ?

"ಬರ್ತನಿ ನಡಿಯಾ" ಎನ್ನುತ್ತ ಅವಳು ಮೆಲ್ಲಮೆಲ್ಲನೆ ಮೇಲೇರಿ ಬರುತ್ತಿದ್ದಳು. ಮುದ್ದುರಾಮನ ಕೈಲಿದ್ದ ಗಂಟು ಅವಳನ್ನು ಆಕರ್ಷಿಸಿತು. ಅದರಲ್ಲಿ ಬೇಲದ ಹಣ್ಣು ಗಳಿದ್ದವು. ಮತ್ತೇನೋ ಇತ್ತು....ಮುದ್ದುರಾಮ ಕೃಷ್ಣಿಗೆ ಗಂಟು ತೋರಿಸಿ ಕೈ ಗೊರಟು ಹಾಕಿ ಹಲ್ಲು ಕಿರಿದು ಮುಂದೆ ಸಾಗಿದ. ಕೃಷ್ಣಿ ಮೂತಿ ಸೊಟ್ಟು ಮಾಡಿ 'ಮಂಗ' ಎಂದಳು ದೂರದ ತಿರುವಿನಲ್ಲಿ ತಿರುಗುವಾಗ ಮುದ್ದುರಾಮ "ಬಿಸ್ಲಮಾರಿ ಬಂತು ಕಣೇ" ಎಂದು ಕೂಗಿ ಕಣ್ಮರೆಯಾದ, ವೇಣಿ ತಟ್ಟನೆ ಹಿಂದಿರುಗಿ ನೋಡಿದಳು. ಬಿಸಿಲು ರಣಗುಡುತ್ತಿತ್ತು. ಪ್ರದೇಶವೆಲ್ಲ ನಿರ್ಜನವಾಗಿತ್ತು. ರಾಮಮಂಟಪದ ಬಂಡೆಯ ಮೇಲೆ ಅಲ್ಲಲ್ಲಿ ಬೆಳ್ಳಗೆ ಒಣಗಿದ ಬಟ್ಟೆಗಳು ಹರವಿದ್ದವು. ಜನರು ಎಲ್ಲಿದ್ದರೊ ಗೊತ್ತಾಗುತ್ತಿರಲಿಲ್ಲ. ನಿಜವಾಗಿಯೂ ಕೃಷ್ಣವೇಣಿಗೆ ಹೆದರಿಕೆಯಾಯಿತು. ಬೆದರು ಮುಖದಿಂದ ಬೇಗ ಬೇಗ ಮನೆಗೆ ನಡೆದಳು..."

ಎಂದು ಆರಂಭವಾಗುವ ಕಾದಂಬರಿಯ ಕೆಲವು ಪುಟಗಳನ್ನೋದುತ್ತಿದ್ದಂತೆ ನಾನೂ ಆ ಮಲೆನಾಡಿನ ಮುಗ್ಧ ಪ್ರಪಂಚದಲ್ಲಿ ಒಂದಾಗಿ ಹೋದೆ. ರಾಮಮಂಟಪ, ಕಲ್ಲುಸಾರ, ರಾಮೇಶ್ವರ ದೇವಸ್ಥಾನ, ತುಂಗಾನದಿ, ಹನುಮನಕೊಂಡ ಹಾಗೂ ಕುರುವಳ್ಳಿಯ ದಂಡೆಯ ಬೇಲದ ಹಣ್ಣುಗಳನ್ನು ಆಯುವ ಮುಗ್ಧರೊಡನೆ ನಾನೂ ಅಲ್ಲಿ ವಿಹರಿಸಿದೆ. ಕಾದಂಬರಿ ಬೆಳೆದಂತೆ ಆ ಪ್ರಪಂಚದ ಪಾತ್ರಗಳೆಲ್ಲ ಕೊನೆಗೆ ಪ್ರಬುದ್ಧ ವ್ಯಕ್ತಿಗಳಾಗಿ ಬಿಟ್ಟಿದ್ದರು.

ನಾನು 'ತುಂಗ-ಭದ್ರ' ಓದುತ್ತಿದ್ದ ಸಂದರ್ಭದಲ್ಲಿ 'ವನಿತಾ' ಮಾಸ ಪತ್ರಿಕೆ ಯಲ್ಲಿ ಅವರ ಮತ್ತೊಂದು ಕಾದಂಬರಿ 'ತೆಗ್ಗಿನ ಮನೆ ಸೀತೆ' ಧಾರಾವಾಹಿಯಾಗಿ ಬರುತ್ತಿತ್ತು. ಅಲ್ಲಿಯೂ ಎಳೆಯ ಬಾಲಕಿಯರ ಮುಗ್ಧ ಪ್ರಪಂಚ. ಈ ಎರಡೂ ಕಾದಂಬರಿಗಳು ನನಗೆ ಗುಂಗು ಹಿಡಿಸಿಬಿಟ್ಟವು. ಹಳ್ಳಿಯಲ್ಲಿ ಕಳೆದ ನನ್ನ ಬಾಲ್ಯ ಜೀವನದ (ಕೋಳಿವಾಡ ಗ್ರಾಮ) ಸವಿಯನ್ನು ಮತ್ತೊಮ್ಮೆ ಸವಿಯುವಂತಾಯಿತು.

ಹೀಗೆ ಇಂದಿರಾ ತಮ್ಮ ಕಾದಂಬರಿಗಳ ಮೂಲಕ ನನ್ನ ಬದುಕಿಗೆ ಆತ್ಮೀಯರಾದರು. ನನ್ನ ಸಂಶೋಧನ ಅಧ್ಯಯನಕ್ಕೆ ಹೊಸ ಬಾಗಿಲು ತೆರೆದಂತಾಯಿತು.

ಇಂದಿರಾ ಅವರ ಕೃತಿಗಳನ್ನು ಕುರಿತು ಕಾಲಾನುಕ್ರಮದಲ್ಲಿ ಅವುಗಳ ಪಟ್ಟಿ ಮಾಡುತ್ತಾ ಹೋದೆ. ಹಾಗೆಯೇ ಅವರ ಸಾಹಿತ್ಯವನ್ನು ಕುರಿತು ಯಾವುದಾದರೂ ಅಭ್ಯಾಸಪೂರ್ಣವಾದ ಗ್ರಂಥ ಪ್ರಕಟವಾಗಿದೆಯೇ ಹೇಗೆ? ಎಂಬುದನ್ನು ಶೋಧಿಸಿದೆ. ಒಂದೆರಡು ಸಂದರ್ಶನ ಲೇಖನ ಹಾಗೂ ಅಲ್ಲಲ್ಲಿ ಬಂದ ಒಂದೆರಡು ಬಿಡಿ ವಿಮರ್ಶಾ ಲೇಖನಗಳನ್ನು ಬಿಟ್ಟರೆ ಅವರ ಸಾಹಿತ್ಯ ಕೃತಿಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ ಎಂಬುದು ಮನವರಿಕೆಯಾಯಿತು. ನಾಲ್ಕು ವರ್ಷಗಳ ಕಾಲ ನನ್ನೆಲ್ಲ ವೇಳೆಯನ್ನು ಇಂದಿರಾರ ಬದುಕು - ಬರಹಗಳ ಅಧ್ಯಯನಕ್ಕಾಗಿಯೇ ಮೀಸಲಿಟ್ಟೆ. ಅವರ ಕಾದಂಬರಿಗಳನ್ನು, ಕಥೆಗಳನ್ನು ಮೊದಲು ಒಬ್ಬ ಸಹೃದಯಳಾಗಿ ಓದಿದೆ. ನಂತರ ಅಧ್ಯಯನ ಮಾಡಿ ವಿಮರ್ಶಕಿಯಾಗಿ ಸಂಶೋಧನೆಯ ಕಾರ್ಯವನ್ನು ಮುಂದು ವರಿಸಿದೆ.

೧೯೮೨ರಲ್ಲಿ ಇಂದಿರಾ ಅವರನ್ನು ಕಾಣುವ ಕುತೂಹಲದಿಂದ ಬೆಂಗಳೂರಿಗೆ ಪ್ರಯಾಣ ಮಾಡಿದೆ. ವಿಲ್ಸನ್‌ಗಾರ್ಡನ್ನಿನ ಪುಟ್ಟ ಕೋಣೆಯೊಂದರಲ್ಲಿ ವಾಸವಾ ಗಿದ್ದರು. ಯಾವುದೋ ಬರವಣಿಗೆಯಲ್ಲಿ ತೊಡಗಿದ್ದರು. ನಾನು ಭೇಟಿಯ ಉದ್ದೇಶ ತಿಳಿಸಿದೆ. ತಮ್ಮೆಲ್ಲ ವ್ಯಥೆಯ ಕಥೆ ಹೇಳಿದರು. ನನ್ನ ಸಂಶೋಧನೆ ಪ್ರಾರಂಭವಾದಾಗಿನಿಂದ ಮುಗಿಯುವವರೆಗೂ ಅವರು ನೀಡಿದ ಸಹಕಾರ ; ಅಂದಿನಿಂದ ಇಂದಿನವರೆಗೂ ನನ್ನ ಮೇಲೆ ಹರಿಸುತ್ತ ಬಂದ ಅಂತಃಕರಣ - ಪ್ರೀತಿ - ವಾತ್ಸಲ್ಯ ತುಂಬ ಪವಿತ್ರ. ಅವರು ಜೀವನದುದ್ದಕ್ಕೂ ಹೋರಾಡಿದ ರೀತಿ - ಅವರ ಸಾಧನೆ ನೆನೆದಾಗ ಸಾಹಿತ್ಯ ಕ್ಷೇತ್ರದಲ್ಲಿ ಅವರೊಬ್ಬ ಆಶ್ಚರ್ಯದ ವ್ಯಕ್ತಿ, ಅಪರೂಪದ ವ್ಯಕ್ತಿ ಎನಿಸುತ್ತದೆ.

ಅವರ ಕೃತಿಗಳಲ್ಲಿ ಚಿತ್ರಿತವಾಗಿರುವ ಮಲೆನಾಡಿನ ನಿಸರ್ಗದಂತೆಯೇ ಅವರ ಮನಸ್ಸು ಮುಗ್ಧ. ತುಂಗಾ ನದಿಯ ನೀರಿನಂತೆ ನಿರ್ಮಲ. ಅವರು ಸ್ನೇಹಮಯಿ - ವಾತ್ಸಲ್ಯಮಯಿ.

೧೯೬೯ರಲ್ಲಿ ಅವರ ಪತಿ ಕೃಷ್ಣರಾಯರು ತೀರಿಕೊಂಡಮೇಲೆ ಏಕಾಂಗಿಯಾಗಿ ಹೋರಾಟ ನಡೆಸಿ ಮಕ್ಕಳನ್ನು ದಡಕ್ಕೆ ತಲುಪಿಸಿದ್ದಾರೆ. (ಅವರಿಗೆ ಎಂಟು ಜನ ಮಕ್ಕಳು. ಈಗ ಇರುವವರು ಸುಬ್ಬರಾವ್, ಶಂಕರ್, ಮಂಜುನಾಥ್ ಹಾಗೂ

ಮಗಳು ಅನ್ನಪೂರ್ಣ. ಅವರೆಲ್ಲರೂ ಸಂಸಾರಿಗಳಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.) ಎಂಟು ಮಕ್ಕಳಿಗೆ ಜನ್ಮವಿತ್ತ ತಾಯೊಡಲು ನಾಲ್ಕು ಮಕ್ಕಳನ್ನು ಕಳೆದುಕೊಂಡು ನೊಂದಿದೆ, ಬೆಂದಿದೆ. ಅವರ ಒಬ್ಬ ಮಗ ನಾಗೇಂದ್ರ ೨೪ರ ತರುಣ. ಆಕಸ್ಮಿಕವಾಗಿ ತೀರಿಕೊಂಡ. (೧೯೭೪) ಇದೊಂದು ಮರೆಯಲಾಗದ ದೊಡ್ಡ ಆಘಾತ. ಆ ನೋವಿನ ಒದ್ದಾಟದಲ್ಲೇ (೧೯೭೬)ರಲ್ಲಿ 'ಫಣಿಯಮ್ಮ' ನಂತಹ ಅಪೂರ್ವ ಕಾದಂಬರಿ ಸೃಷ್ಟಿಯಾದದ್ದು.

ಇಂದಿರಾ ಅವರ ಕೃತಿಗಳನ್ನು ಕುರಿತು ನಾನು ಸಂಶೋಧನೆಯನ್ನು ಪ್ರಾರಂಭಿಸಿದನಂತರ ಅವರ ಬದುಕನ್ನು ಕುರಿತು 'ಇನ್ನೂ ತಿಳಿಯಬೇಕು' ಎನಿಸಿದಾಗಲೆಲ್ಲಾ ನಾಲ್ಕೈದು ಬಾರಿ ಬೆಂಗಳೂರಿಗೆ ಹೋಗಿ ಬಂದೆ. ಅವರೊಡನೆ ಅನೇಕ ವಿಷಯಗಳನ್ನು ಕುರಿತು ಮುಂಜಾನೆಯಿಂದ ಸಂಜೆಯವರೆಗೂ ಚರ್ಚಿಸುತ್ತಿದ್ದೆ. ಅವರು ಜೀವನದಲ್ಲಿ ಕಂಡುಂಡ ಒಂದೊಂದು ಅನುಭವವೂ ಕಾದಂಬರಿಗಳಲ್ಲಿ ಮೂರ್ತರೂಪವನ್ನು ತಾಳಿದೆ. ಜೀವನದಲ್ಲಿ ಸುತ್ತಮುತ್ತಲಿನ ಸಮಾಜದಲ್ಲಿ ನಡೆದ ವಾಸ್ತವ ಘಟನೆಗಳು ಕಾದಂಬರಿಗಳಾಗಿವೆ. 'ಗೆಜ್ಜೆಪೂಜೆ'ಯ ಕಥೆ ಮೈಸೂರಿನಲ್ಲಿದ್ದಾಗ ನೋಡಿದ್ದು. 'ತೆಗ್ಗಿನ ಮನೆ ಸೀತೆ'ಯ ನಾಯಕಿ 'ಸೀತೆ', 'ಫಣಿಯಮ್ಮ' 'ಆತ್ಮಸಖಿ'ಯ ಅನಂತಶರ್ಮರು, 'ಗಿರಿಬಾಲೆ'ಯ ಶಂಕರಿ, 'ತುಂಗಭದ್ರೆ' ಇನ್ನೂ ಮುಂತಾದವರು ಮಲೆನಾಡಿನಲ್ಲಿ ಇವರಿಗೆ ಹತ್ತಿರದವರು.

ಇಂದಿರಾ ಅವರ ಕೃತಿಗಳನ್ನು ಕುರಿತು ನಾನು ಅಧ್ಯಯನ ಮಾಡುತ್ತಿದ್ದ ಸಂದರ್ಭದಲ್ಲಿ ಅವರ ಕಾದಂಬರಿಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ತೀರ್ಥಹಳ್ಳಿ, ತುಂಗಾನದಿ, ರಾಮಮಂಟಪ, ರಾಮೇಶ್ವರ ದೇವಸ್ಥಾನ, ಕಲ್ಲು ಸಾರ, ಪಕ್ಕದ 'ಕುರುವಳ್ಳಿ', 'ಹಿರೇತೋಟ', 'ಗುಡ್ಡದ ಮಠ', ಶೀಗವಾನಿ ಈ ಎಲ್ಲಾ ಹಳ್ಳಿಗಳನ್ನು ಸುತ್ತಬೇಕು. ಅಲ್ಲಿಯ ನಿಸರ್ಗ ಸೌಂದರ್ಯವನ್ನೊಮ್ಮೆ ಕಣ್ಣಾರೆ ನೋಡಬೇಕು. ಮನಸ್ಸಿನಲ್ಲಿ ತುಂಬಿಕೊಳ್ಳಬೇಕು ಎನಿಸುತ್ತಿತ್ತು. ಕಾದಂಬರಿಯಲ್ಲಿ ಚಿತ್ರಿತವಾದ ಮುಗ್ಧ ಪ್ರಪಂಚಕ್ಕೆ ಓಡಿಹೋಗಬೇಕು ಎನಿಸುತ್ತಿತ್ತು. ತಿಂಡಿ ತಿನಿಸುಗಳ ವರ್ಣನೆ ಬಾಯಲ್ಲಿ ನೀರೂರಿಸುತ್ತಿತ್ತು. ಅವರ ವೇಷ ಭೂಷಣಗಳು, ಅವರ ನಡೆನುಡಿಗಳು - ನಂಬಿಕೆಗಳು, ಕಾದಂಬರಿಗಳಲ್ಲಿ ಚಿತ್ರಿತವಾದ ಹಿರಿಯ ಪಾತ್ರಗಳು ತೋರುವ ಪ್ರೀತಿ-ವಾತ್ಸಲ್ಯಗಳು ನಮ್ಮ ಹಳ್ಳಿಯ ಮನೆಯ ಹಿರಿಯರನ್ನು ನೆನಪಿಗೆ ತಂದುಕೊಡುತ್ತಿದ್ದವು. ಹೀಗಾಗಿ ಮಲೆನಾಡನ್ನು ಸುತ್ತಿಬರಲು ನಿರ್ಧರಿಸಿದಾಗ ಇಂದಿರಾ ಅವರು ತಮ್ಮ ಅನಾರೋಗ್ಯವನ್ನು ಲೆಕ್ಕಿಸದೇ ನನ್ನೊಡನೆ ಪ್ರವಾಸಕ್ಕೆ ಬಂದರು.

ನಾನು ನನ್ನ ಪತಿ ಶ್ರೀಕಾಂತ ಹಾಗೂ ಇಂದಿರಾ ಮೂವರೂ ಸೇರಿ ಬೆಂಗಳೂರಿನಿಂದ ಶಿವಮೊಗ್ಗಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದೆವು. ಬಸ್ಸು, ರಿಕ್ಷಾಗಳಲ್ಲಿ ಪ್ರವಾಸ ಮಾಡಕೂಡದೆಂದು ಇಂದಿರಾ ಅವರಿಗೆ ವೈದ್ಯರು ಸಲಹೆ ಮಾಡಿದ್ದರಿಂದ ಶಿವಮೊಗ್ಗೆಯಲ್ಲಿ ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿಕೊಂಡು ಮಲೆನಾಡನ್ನು ಸುತ್ತಲು ಹೊರಟೆವು. ಇಂದಿರಾ ಅವರ ಊರಾದ ಮಂಡಗದ್ದೆಯಲ್ಲಿ ಅವರ ಭಾವನವರ ಮಗನ ಸಂಸಾರವನ್ನು ಕಾಣಬೇಕಿತ್ತು. ಭಾವನವರ ಮಗ ಆ ದಿನ ತೀರ್ಥಹಳ್ಳಿಗೆ ಹೋಗಿದ್ದನು. ಅವನ ಹೆಂಡತಿ ಶಾರದೆ ಇಂದಿರಾ ಅವರನ್ನು ಕಂಡಕೂಡಲೇ ಪರಮಾನಂದದಿಂದ ತಬ್ಬಿಕೊಂಡಳು. ತಂಪಾದ ಟೊಮೇಟೋ ಪಾನಕವನ್ನು ಕೊಟ್ಟು ನಮ್ಮ ಬಾಯಾರಿಕೆಯನ್ನು ತಣಿಸಿ ನಮ್ಮೆಲ್ಲರನ್ನು ಉಪಚರಿಸಿದರು. ಇಂದಿರಾ ಅವರೊಡನೆ ಎಷ್ಟೋ ವರ್ಷದ ಮಾತುಕತೆಗಳನ್ನು ಆಡುವ ಉತ್ಸಾಹ, ಕಾತರ ಅವರಿಗಿದ್ದರೂ ನಮ್ಮ ಸಮಯಾಭಾವದ ಮೂಲಕ ಸಾಧ್ಯವಾಗಲಿಲ್ಲ. ಅಲ್ಲಿಂದ ನಾವು ಸುಡು ಬಿಸಿಲಲ್ಲಿ ಮಾಳೂರಿನ ಕಡೆಗೆ ಪ್ರಯಾಣವನ್ನು ಮುಂದುವರೆಸಿದೆವು. ಇಂದಿರಾ ಅವರು ಎಂಟು ವರ್ಷದವರಿದ್ದಾಗ ಮಾಳೂರು ಹತ್ತಿರದ ಹಿರೇತೋಟ, ಗುಡ್ಡದಮಠ ಇವುಗಳನ್ನೂ ನೋಡಿದ್ದರಂತೆ. ಈಗ ದಾರಿಯೆಲ್ಲ ಬದಲಾಗಿದೆ. ಎಲ್ಲಿ ನೋಡಿದರೂ ಕಾಡು-ಮೇಡು, ತೋಟ-ಪಟ್ಟಿ, ಹೀಗಾಗಿ, 'ಹಿರೇತೋಟ' ಇಂದಿರಾ ಅವರಿಗೆ ಎಲ್ಲಿದೆ ಎಂಬುದು ತಿಳಿಯದಂತಾಯಿತು. ಹೇಗೆ ಹೋಗುವುದು, ಯಾವ ದಾರಿಯಿಂದ ಹೋಗುವುದು ಎಂದು ಯೋಚಿಸುತ್ತಿದ್ದಾಗ ಸುಮಾರು ಹದಿನೈದು ವರ್ಷದ ಹುಡುಗಿಯೊಬ್ಬಳು ಬಿಸಿಲಿನಲ್ಲಿ ಬರಿಗಾಲಿನಲ್ಲಿ ನಡೆದು ಬರುತ್ತಿದ್ದಳು. ಆ ಹುಡುಗಿ ಹಿರೇತೋಟದವಳೇ ಇರಬೇಕು ಎಂದು ಇಂದಿರಾ ಅವರು ಊಹಿಸಿದರು. ಕಾರನ್ನು ನಿಲ್ಲಿಸಿ 'ಹಿರೇತೋಟಕ್ಕೆ ದಾರಿ ಎಲ್ಲಮ್ಮ' ಎಂದು ಕೇಳಿದಾಗ ಬೆವರು ಒರೆಸಿಕೊಳ್ಳುತ್ತ ತುಂಬ ಮೃದುವಾದ ದನಿಯಲ್ಲಿ ಅವಳು "ಹಿರೇತೋಟದ ಹಳೇ ಮನೆ ಈಗ ಇಲ್ಲ. ಹಳೇ ಮನೆ ಪೂರಾ ಬಿದ್ದು ಹೋಗಿದೆ" ಎಂದು ಹೇಳಿದಳು. "ನಮ್ಮ ಮನೆ ಗುಡ್ಡದಮಠದಲ್ಲಿದೆ. ನಮ್ಮ ಮನೆಯವರೆಗೂ ಒಳ್ಳೇ ರಸ್ತೆ ಇದೆ ಬನ್ನಿ" ಎಂದಳು. ಕಲ್ಲು ಮುಳ್ಳು ದಾಟುತ್ತಾ ಅವಳು ಸಲೀಸಾಗಿ ಬರಿಗಾಲಿನಲ್ಲಿ ಉರಿಬಿಸಿಲಿನಲ್ಲಿ ಹೆಜ್ಜೆ ಹಾಕತೊಡಗಿದಳು. ಹಿರೇತೋಟದ ಮನೆ ತೋರಿಸಿ 'ನಾ ಇನ್ನು ಮನೆಗೆ ಹೋಗಲಾ?' ಎಂದಳು. 'ನಾವು ಹಿರೇತೋಟದಿಂದ ಗುಡ್ಡದಮಠಕ್ಕೂ ಬರ್ತೇವೆ' ಎಂದಾಗ ಆ ಹುಡುಗಿಗೆ ಬಹಳ ಹಿಗ್ಗಾಯಿತು. ನಾನು "ಇಂದಿರಾ ಅವರು ನಿಮ್ಮೂರವರು, ಕಥೆ ಕಾದಂಬರಿ ಬರೀತಾರಲ್ಲಾ 'ಗೆಜ್ಜೆಪೂಜೆ' ಕಾದಂಬರಿ ಬರೆದಿದ್ದಾರಲ್ಲಾ ಅವರೇ ಇವರು" ಎಂದು ಹೇಳಿದಾಗ ಆ ಹುಡುಗಿಗೆ ಆದ ಆನಂದವನ್ನು ಇಲ್ಲಿ ವರ್ಣಿಸಲು ಸಾಧ್ಯವಿಲ್ಲ. ಹಿರೇತೋಟ ಬಹಳ ಸುಂದರವಾದ ನಿಸರ್ಗರಮ್ಯವಾದ ಹಳ್ಳಿ. ಅಲ್ಲಿ ಮಂಜಪ್ಪಯ್ಯ ಎನ್ನುವವರು ಊರಿಗೆ ಕಾಮಧೇನುವಿನಂತೆ

ಇದ್ದರಂತೆ. ಇಂದಿರಾ ಅವರನ್ನು ತುಂಬಾ ನೆನಸಿಕೊಳ್ಳುತ್ತಿದ್ದರು. ಈಗ ಆ ಮನೆಯಲ್ಲಿ ಅವರ ಮಗಳು, ಅಳಿಯ, ಮೊಮ್ಮಕ್ಕಳು ಇರುತ್ತಾರೆ. ಅವರಿಗೆ ಅಪರಿಚಿತರಾದ ನಮ್ಮನ್ನು ನೋಡಿ ಒಂದು ಕ್ಷಣ ಏನೂ ತೋಚದಂತಾಯಿತು. ಇಂದಿರಾ ಅವರೇ ತಮ್ಮನ್ನು ಅವರಿಗೆ ಪರಿಚಯಿಸಿಕೊಂಡರು. ಮನೆಯ ಹೆಂಗಸರು ಆನಂದ ಆಶ್ಚರ್ಯ ದಿಂದ "ನೀವು ಗುಂಡಮ್ಮನ ಮಗಳಾ ತುಂಬಾ ಕಥೆ ಬರೀತೀರಂತೆ, ಸಿನಿಮಾ ಮಾಡ ತೀರಂತೆ, ನಮಗೆ ಈ ಹಳ್ಳಿ ಕೊಂಪೇಲಿ ಏನೂ ತಿಳಿಯೋಲ್ಲಾ" ಎಂದರು. "ಬಿಸಿಲಾಗೆ ಬಂದಿದ್ದೀರಿ. ಬಾಯಾರಿಕೆಗೆ ಎಂಥದ್ದಾದರೂ ಕೊಡ್ತೀನಿ," ಎಂದು ಒಳಗೆ ನಡೆದರು. ನಾವು ಮನೆಯನ್ನು ಸುತ್ತುಮುತ್ತಲೂ ನೋಡಿದೆವು. ಬಿಸಿಲಲ್ಲಿ ಹೋದ ನಮಗೆ ಆ ಮನೆಯಿಂದ ಹೊರಬೀಳುವ ಮನಸ್ಸೇ ಬಾರದು. ಒಂದೊಂದು ಲೋಟ ನೀರು ಮಜ್ಜಿಗೆ ಕುಡಿದು ಅಲ್ಲಿಂದ ಹೊರಟೆವು. ಒಂದು ಫರ್ಲಾಂಗ್ ಹೋಗುವಷ್ಟರಲ್ಲಿ ವಿಸ್ತಾರವಾದ ಅಡಿಕೆ ಚಪ್ಪರ ಕಾಣಿಸಿತು. ಮನೆಯ ಅಂಗಳದಲ್ಲಿ ಓಡಾಡುತ್ತಿದ್ದ ಆಳೊಬ್ಬ ನಾವು 'ಗೇಟು' ಎನ್ನಬಹುದಾದ 'ಉಣುಗೋಲ'ನ್ನು ತೆಗೆದ. ನಾಲ್ಕೈದು ಜನ ಹೆಣ್ಣು ಮಕ್ಕಳು, ಗಂಡಸರು, ಮಕ್ಕಳು ಅಂಗಳಕ್ಕೆ ಬಂದರು. ಕಾರನ್ನು ಚಪ್ಪರ ದಲ್ಲಿ ನಿಲ್ಲಿಸಲಾಯಿತು. ಆ ಹುಡುಗಿ ನಮ್ಮ ಪರಿಚಯವನ್ನು ಮನೆಯವರಿಗ ಸಂಕ್ಷಿಪ್ತ ವಾಗಿ ತಿಳಿಸಿದಳು. ತುಂಬ ಆತ್ಮೀಯವಾದ ಸರಳವಾದ ಉಪಚಾರದಿಂದ ಆ ಮನೆ ಯವರು ನಮಗೆ ಎಷ್ಟೋ ವರ್ಷದಿಂದ ಪರಿಚಯದವರಂತೆ ಆದರು. ಭವ್ಯವಾದ ಮನೆ. ಆ ಮನೆಯಲ್ಲಿ ಎಲ್ಲಿಯೂ ಒಂದು ಕಸ ಕಡ್ಡಿಯೂ ಇರಲಿಲ್ಲ. ಆ ಅಚ್ಚುಕಟ್ಟುತನ, ಶುಭ್ರತೆ ನಮಗೆ ಬಹಳ ಹಿಡಿಸಿತು. ನಾನಂತೂ ಅವರ ಬಚ್ಚಲಮನೆಯಲ್ಲಿ ನೀರು ಕಾಯಿಸುವ ಹಂಡೆಯನ್ನು ನೋಡಿ 'ದೋಣಿ ಮೀಯಾ' ಮಾಡಿಸುವುದಕ್ಕೆ ಇಂತಹ ಹಂಡೆಗಳಲ್ಲಿ ನೀರು ಕಾಯಿಸುತ್ತಾರೆಯೇ ? ಎಂದು ಕೇಳಿ ತಿಳಿದೆ. ಮನೆತುಂಬ ಜನರಿದ್ದರು. ಅವಿಭಕ್ತ ಕುಟುಂಬ. ಹಾಲು ಹೈನು ದವಸ-ಧಾನ್ಯಗಳಿಗೆ ಏನೇನೂ ಕೊರತೆಯೆಂಬುದು ಆ ಮನೆಯಲ್ಲಿ ಇರಲಿಲ್ಲ. ಅವರ ಊಟದ ಮನೆಯಲ್ಲಿಯೇ ಸುಮಾರು ಮುನ್ನೂರು ಜನ ಒಟ್ಟಿಗೆ ಊಟ ಮಾಡಬಹುದು. ಚಪ್ಪರದ ಅಂಗಳದಲ್ಲಿ ಸಮೀಪವೇ ಅಡಿಕೆ ಬೇಯಿಸುವುದಕ್ಕಾಗಿ ದೊಡ್ಡ ದೊಡ್ಡ ಹಂಡೆಗಳನ್ನು ಹುಗಿದಿದ್ದರು. ಅವರಿಂದ ಅಡಿಕೆ ಬೇಯಿಸುವ ಒಣಗಿಸುವ ವಿಧಾನವನ್ನು ಕೇಳಿ ತಿಳಿದೆ. ಇಂದಿರಾ ಅವರ ಅನೇಕ ಕಾದಂಬರಿಗಳಲ್ಲಿ ಅಡಿಕೆ ಕೊಯಲು, ಭತ್ತದ ಕೊಯಲು ಈ ಸಂದರ್ಭ ಗಳಲ್ಲಿ ನಡೆಯುವ ಭಾಗವತರ ಆಟ, ಯಕ್ಷಗಾನ ಪ್ರಸಂಗದ ವರ್ಣನೆಗಳು ಮೇಲಿಂದ ಮೇಲೆ ಬಂದೇ ಬರುತ್ತವೆ. ಆ ಮನೆಯ ಜನರಿಗೆ ನಗರ ಜೀವನದ ಬಿಂಕ-ಬಿಗುಮಾನ ಗಳು ಹತ್ತಿರವೂ ಸುಳಿದಿಲ್ಲ. ರುಚಿಕಟ್ಟಾದ ಮಜ್ಜಿಗೆಯನ್ನು ಕುಡಿದು ನಾವು ತೀರ್ಥಹಳ್ಳಿಗೆ ಹೊರಡಬೇಕಾಯಿತು. (ಗುಡ್ಡದಮಠ, ಹಿರೇತೋಟ ಇವು ನನ್ನ ಮನಃಪಟಲದಲ್ಲಿ ಅಚ್ಚೊತ್ತಿವೆ.) ನಾವು ಹೋದಲ್ಲೆಲ್ಲ ಮಲೆನಾಡಿನ ಜನರು ನಮಗೆ

ತೋರಿದ ಪ್ರೀತಿ, ಅತಿಥಿ ಸತ್ಕಾರ ಇವುಗಳಿಂದಾಗಿ ಇಂದಿರಾ ಅವರ ಕಾದಂಬರಿಗಳಲ್ಲಿ ಚಿತ್ರಿತರಾದ ವ್ಯಕ್ತಿಗಳಂತೆ ನಮಗೆ ಹತ್ತಿರದವರಾಗುತ್ತಿದ್ದರು. ತೀರ್ಥಹಳ್ಳಿಯಲ್ಲಿ ಇಂದಿರಾ ಅವರು ಹುಟ್ಟಿದ ಮನೆ ರಾಮ ಮಂಟಪ, 'ತುಂಗಭದ್ರಾ' ಕಾದಂಬರಿಯ 'ಕೃಷ್ಣೆ'ಯ ಜಾರುಬಂಡೆ ಹನುಮನಕೊಂಡ, ಕಲ್ಲುಸಾರ, ಇವುಗಳನ್ನು ನೋಡ ಬೇಕೆಂದು ನನ್ನ ಮನಸ್ಸು ಹಂಬಲಿಸುತ್ತಿತ್ತು. ಆ ದಿನ ಮಧ್ಯಾಹ್ನ ನಾವು ಟಿ.ಬಿ. ಯಲ್ಲಿ ಊಟ ಮಾಡಲು ನಿರ್ಧರಿಸಿದೆವು. ಊರ ಹೊರಗೆ ಎತ್ತರವಾದ ಪ್ರದೇಶದಲ್ಲಿ ಪ್ರಶಾಂತ ಪರಿಸರದಲ್ಲಿ ಇರುವ ಟಿ.ಬಿ.ಯನ್ನು ನೋಡಿ ಮನಸ್ಸಿಗೆ ಬಹಳ ಆನಂದ ವಾಯಿತು. ಬಂಗಲೆಯ ಹೊರಗಡೆ ನಿಂತರೆ ತೀರ್ಥಹಳ್ಳಿಯ ತುಂಗಾನದಿ, ರಾಮ ಮಂಟಪ, ಕಲ್ಲುಸಾರ,ಹನುಮನಕೊಂಡ, ಕುರುವಳ್ಳಿಯ ಅಗ್ರಹಾರ ಎಲ್ಲವೂ ಕಾಣಿಸು ವುದು. ಸುತ್ತಮುತ್ತಲೆಲ್ಲಾ ಹಚ್ಚಹಸಿರು, ಗುಡ್ಡಬೆಟ್ಟಗಳ ಸಾಲು ಸಾಲು. ಆ ರಮ್ಯ ಮನೋಹರ ದೃಶ್ಯವನ್ನು ನೋಡುತ್ತ ಕುಳಿತರೇ ಸಮಯ ಸರಿದುದೆ ತಿಳಿಯಲಿಲ್ಲ. ಭಟ್ಟರು ಇಂದಿರಾ ಅವರನ್ನು ಮಾತನಾಡಿಸಿ ಅವರು ತಮ್ಮೂರವರೇ ಎಂದು ತಿಳಿ ದಾಗ ಅವರಿಗಾದ ಆನಂದ ಆಶ್ಚರ್ಯ ಅಷ್ಟಿಷ್ಟಲ್ಲ. ಬಹಳ ಸಂಭ್ರಮದಿಂದ ನಮಗೆಲ್ಲರಿಗೂ ಅನ್ನ, ಹುಳಿ, ಸಾರು, ಚಪಾತಿ, ಪಲ್ಯ, ಮೊಸರುಬಜ್ಜಿ, ಹಪ್ಪಳದ ರುಚಿಯಾದ ಊಟವನ್ನು ಆಧರಿಸಿ ಬಡಿಸಿದರು. ಮೇಲೆ ಗಟ್ಟಿಯಾದ ಮಜ್ಜಿಗೆಯನ್ನು ಕುಡಿಯಲು ತಂದು ಕೊಟ್ಟರು. ಹಿತಕರವಾದ ಮಲೆನಾಡಿನ ಊಟ ಮಾಡಿ ಅಲ್ಲಿಯೇ ಇದ್ದ ದೊಡ್ಡ ದೊಡ್ಡ ಮಂಚಗಳಲ್ಲಿ ಉರುಳಿ ವಿಶ್ರಾಂತಿಯನ್ನು ಮುಗಿಸಿಕೊಂಡು ತುಂಗಾ ನದಿಯ ಕಡೆಗೆ ಹೊರಟೆವು. ಅರಳೀಮರಗಳ ನೆರಳಿನಲ್ಲಿ ನಡೆದು ಜಾರುಬಂಡೆ ನೋಡುತ್ತ ಶಾಂತವಾಗಿ ಹರಿಯುವ ತುಂಗಾನದಿಯ ಕಡೆಗೆ ಹೊರಟೆವು. ರಾಮಮಂಟಪದಲ್ಲಿ ಕುಳಿತುಕೊಂಡಾಗ ಅಲ್ಲಿಂದ ಕಾಣುವ ತುಂಗಾನದಿಯ ಭೋರ್ಗರೆತ ಅಲ್ಲಿ ಈಸುತ್ತಿದ್ದ ಮಕ್ಕಳ ಚೆಲ್ಲಾಟ ಇವುಗಳನ್ನು ನೋಡುತ್ತಾ ಇದ್ದರೆ ಮನಸ್ಸು ಅಲ್ಲಿಂದ ಹೊರಡಲು ಒಪ್ಪಲಿಲ್ಲ. ಕುವೆಂಪು ಅವರು ಇಂತಹ ನಿಸರ್ಗದ ತೊಟ್ಟಿಲಲ್ಲಿ ಹುಟ್ಟಿ ಬೆಳೆದವರು. ಪ್ರಕೃತಿ ವರ್ಣನೆ ಮಾಡಿದಂತಹ ಸುಂದರ ಕವನಗಳು ನನ್ನ ನೆನಪಿಗೆ ಬಂದವು. ನಾನು ಇಲ್ಲಿ ಹುಟ್ಟಬೇಕಾಗಿತ್ತು. ಜೀವನದಲ್ಲಿ ಮುಂದೆ ಕೆಲವು ವರ್ಷಗಳಾದರೂ ಇಲ್ಲಿ ನೆಲಸುವ ಭಾಗ್ಯ ನನಗೆ ಸಿಗಬೇಕು ಎಂದು ನನ್ನ ಮನಸ್ಸು ಯೋಚಿಸುತ್ತಿತ್ತು. ಇಂದಿರಾ ಅವರಂತೂ "ಮಂದಾಕಿನಿ ಇಲ್ಲಿಯೇ ಒಂದು ಗುಡಸ್ಲ ಹಾಕ್ಕೊಂಡು ಇದ್ದುಬಿಡೋಣ ಅನಿಸ್ತಾ ಇದೆ" ಎಂದು ಹೇಳುತ್ತಿದ್ದರು. ಅಲ್ಲೆಲ್ಲ ಅವರು ತಮ್ಮ ವಯಸ್ಸು ಅನಾರೋಗ್ಯವನ್ನು ಮರೆತು ಪುಟ್ಟ ಹುಡುಗಿಯಂತೆ ಓಡಾಡುತ್ತಿದ್ದುದನ್ನು ನೋಡಿ ನಾನು, ನನ್ನ ಪತಿ ಮನಸ್ಸಿನಲ್ಲಿಯೇ ಆನಂದ ಪಡುತ್ತಿದ್ದೆವು.

ಅವರು ಹುಟ್ಟಿದ ಮನೆ, ತೇರು, ಕೊಟ್ಟಿಗೆ, ರಾಮೇಶ್ವರ ದೇವಸ್ಥಾನ, ಎಲ್ಲ ವನ್ನೂ ತೋರಿಸಿದರು. ಅಂತೂ ಬಿಡಲಾರದೆ ತೀರ್ಥಹಳ್ಳಿಯನ್ನು ಬಿಟ್ಟು ಆಗುಂಬೆಯ ಸೂರ್ಯಾಸ್ತವನ್ನು ನೋಡುವ ಸಲುವಾಗಿ ನಮ್ಮ ಪ್ರಯಾಣವನ್ನು ಆಗುಂಬೆಗೆ ಮುಂದುವರೆಸಿದೆವು. ಆಗುಂಬೆಯ ಸೂರ್ಯಾಸ್ತವನ್ನು ನೋಡಿ ಶೃಂಗೇರಿಯಲ್ಲಿ ಆ ರಾತ್ರಿ 'ವಸ್ತಿ' ಮಾಡಲು ಯೋಚಿಸಿದೆವು. ಶೃಂಗೇರಿ ತಲುಪಿದಾಗ ಎಂಟು ಗಂಟೆ ಯಾಗಿತ್ತು. ನಮ್ಮ ಟ್ಯಾಕ್ಸಿಯ ಡ್ರೈವರ್‌ನ ಊರು ಶೃಂಗೇರಿಯೇ ಆಗಿತ್ತು. ದೇವಾಲಯದ ಆವರಣದಲ್ಲಿ ಕಾಲಿಟ್ಟಾಗ ಮೊದಲು 'ರೂಮು ಸಿಗುವುದು ದುಸ್ತರ" ಎಂದು ಹೇಳಿದರೂ 'ಗೆಜ್ಜೆ ಪೂಜೆ'ಯ ಲೇಖಕಿ ಇಂದಿರಾ ಅವರು ಬಂದಿದ್ದಾರೆ, ಎಂದು ತಿಳಿದೊಡನೆ ಸುಸಜ್ಜಿತವಾದ ರೂಮು ಸಿಕ್ಕಿತು. ರಾತ್ರಿ ಶಾರದಾಂಬೆಯ ದರ್ಶನ ಮಾಡಿ ಊಟ ಮುಗಿಸಿಕೊಂಡು ಮಲಗಿದೆವು. ಮರುದಿನ ಸ್ನಾನ ಮುಗಿಸಿ ಶಾರದಾಂಬೆಗೆ ವಂದಿಸಿ ನರಸಿಂಹರಾಜಪುರದ ಕಡೆಗೆ ಹೊರಟೆವು.

ನರಸಿಂಹರಾಜಪುರ ತಲುಪಿದಾಗ ಹನ್ನೆರಡು ಗಂಟೆ ಸಮಯ. ತಾಲೂಕು ಕಚೇರಿಯ ಪಕ್ಕದಲ್ಲೆ ಇಂದಿರಾ ಅವರ ಬಂಧುಗಳ ಮನೆ. ಇಂದಿರಾ ಅವರನ್ನು ಕಂಡ ತಕ್ಷಣ ಅವರು ತೋರಿದ ಪ್ರೀತಿ-ವಿಶ್ವಾಸ-ಆನಂದದ ಪರಮಾವಧಿಯನ್ನು ನೋಡಬೇಕು. ವಾಮನಮೂರ್ತಿ-ಸುಶೀಲಮ್ಮ ದಂಪತಿಗಳಿಗೆ ನಾವು ಮಧ್ಯಾಹ್ನ ಇಲ್ಲಿಯೇ ಊಟ ಮಾಡುತ್ತೇವೆ. ಸ್ವಲ್ಪ ಹೊತ್ತಿನಲ್ಲಿ ಶೀಗವಾನಿಗೆ (ಇಂದಿರಾ ಅವರ ತವರುಮನೆ) ಹೋಗಿ ಬರುತ್ತೇವೆ ಎಂದು ಹೇಳಿ ಅಲ್ಲಿಗೆ ಹೊರಟೆವು. ಇಂದಿರಾ ರವರು ಆ ನಿಸರ್ಗದ ತೊಟ್ಟಿಲಲ್ಲಿ ಕುಣಿದು ಕುಪ್ಪಳಿಸಿದವರು. "ಶೀಗವಾನಿಯ ಮನೆಯ ಹತ್ತಿರದ ಮಾವಿನ ತೋಪು, ಹುಣಿಸೆಮರ, ತೆಂಗಿನಮರ, ನಾಗಸಂಪಿಗೆ ಮರ, ಸಂಪಿಗೆ ಮರ, ಅಡಿಕೆ ತೋಟ ಈಗಲೂ ಹಾಗೆಯೇ ಇವೆ. ಮನೆಯ ಸ್ವರೂಪ ಮಾತ್ರ ಬದಲಾಗಿದೆ ಎಂದು" ಇಂದಿರಾರವರು ಹೇಳುತ್ತಿದ್ದರು. ಅಲ್ಲಿಯೇ ಕೆಲವು ಫೋಟೋ ತೆಗೆದುಕೊಂಡು ನರಸಿಂಹರಾಜಪುರಕ್ಕೆ ಹಿಂದಿರುಗಿದೆವು. ನರಸಿಂಹರಾಜ ಪುರದಲ್ಲಿ ಸುಶೀಲಮ್ಮನವರು ಹಲಸಿನಕಾಯಿ ಹುಳಿ, ಪಲ್ಯ ಗಮ್ಮೆನ್ನುವ ಪಾಯಸದ ಅಡಿಗೆ ಮಾಡಿದ್ದರು. ರುಚಿಯಾದ ಊಟ ಮಾಡಿ ಪ್ರೀತಿಯ ಉಡುಗೊರೆ ಪಡೆದು ಬೆಂಗಳೂರಿಗೆ ಹಿಂತಿರುಗಿದೆವು.

ನಾವು ಬೆಂಗಳೂರಿಗೆ ಹಿಂತಿರುಗಿದ ಕೂಡಲೇ ನನಗೊಂದು ಅಪೂರ್ವವಾದ ಅವಕಾಶ ಕಾದಿತ್ತು. ಅದೇ ಇಂದಿರಾ ಅವರೊಡನೆ ಸಂದರ್ಶನ ದೂರದರ್ಶನದಲ್ಲಿ. ದೂರದರ್ಶನ ಕೇಂದ್ರದವರು ಇಂದಿರಾ ಅವರ ಮನೆಗೆ ಬಂದು, ನಿಮ್ಮ ಕಾದಂಬರಿಗಳ ಕುರಿತು ಯಾರಾದರೂ ಚೆನ್ನಾಗಿ ಅಧ್ಯಯನ ಮಾಡಿದ್ದಾರೆಯೇ ಎಂದು ಕೇಳಿದರು.

ನಾನು ಅಲ್ಲಿಗೆ ಹೋಗುವಷ್ಟರಲ್ಲಿ ದೂರದರ್ಶನ ಕೇಂದ್ರದವರು ಬಂದಿದ್ದರು. ಇಂದಿರಾ ಅವರು ನನ್ನನ್ನು ಪರಿಚಯಿಸಿದರು. ಟಿ.ವಿ. ಎಂದರೆ ಹೇಗಿರುತ್ತದೆಯೋ ಅದನ್ನು ನಾನು ನೋಡಿರಲಿಲ್ಲ. ಹೇಗಿದ್ದರೂ ಕಾದಂಬರಿಗಳನ್ನು ಓದಿದ್ದೇನಲ್ಲಾ ಪ್ರಶ್ನೆಗಳನ್ನು ಸಿದ್ಧ ಪಡಿಸಿ ಅವರೊಡನೆ ಚರ್ಚಿಸುವುದು ಅಷ್ಟೆ ಎಂದು ನಿರ್ಧರಿಸಿದೆ. ಸಂದಶನನವು ಆಯಿತು. ನೋಡಿದವರೇನೋ ಸಂದರ್ಶನ ಚೆನ್ನಾಗಿತ್ತು ಎಂದು ಹೇಳಿದರು. ಟಿ.ವಿ.ಯನ್ನೇ ನೋಡದ ನಾನು ಸಂದರ್ಶನ ಕಾರ್ಯಕ್ರಮ ನೋಡಿಕೊಂಡು ಧಾರವಾಡಕ್ಕೆ ಹಿಂತಿರುಗಿದೆನು. ಇದೊಂದು ಸಂಶೋಧನೆಯಲ್ಲಿ ತೊಡಗಿದಾಗ ಆದಂತಹ ಹೊಸ ಅನುಭವ.

●

●

ಇಂದಿರಾ ಅವರ ಸಾಹಿತ್ಯವನ್ನು ಕುರಿತು ಸಂಶೋಧನೆ ಆರಂಭಿಸಿದಾಗ ನನಗೆ ತುಂಬ ಸಂತೋಷ ಕೊಟ್ಟ 'ತುಂಗ ಭದ್ರಾ' ಕಾದಂಬರಿಯ ಇನ್ನು ಒಂದೆರಡು ಸನ್ನಿವೇಶ ಗಳನ್ನು ಕುರಿತು ಇಲ್ಲಿ ಹೇಳಬೇಕೆನಿಸುತ್ತದೆ. ಈ ಕಾದಂಬರಿಯಲ್ಲಿ ಬರುವ 'ಫಣಿಯಮ್ಮ'ನ ಪಾತ್ರ ಗಂಡು ಮಕ್ಕಳನ್ನೇ ಕಾಣದ ಆಕೆಗೆ ಮುದ್ದುರಾಮು, ಶಂಭು ಎಂದರೆ ಬಹಳ ಪ್ರೀತಿ. ಬಾಲಕರಾಗಿದ್ದ ಮುದ್ದುರಾಮು, ಶಂಭು ಮೇಲಿಂದ ಮೇಲೆ ಫಣಿಯಮ್ಮನ ಮನೆಗೆ ಹೋಗುತ್ತಿದ್ದರು. ಅತಿಥಿ ಸತ್ಕಾರದಲ್ಲಿ ಆಕೆಯದು ಮೊದಲಗೈ. (ಪುಟ 80ರಲ್ಲಿ ನೋಡಬಹುದು) "ಅರಳು ಅವಲಕ್ಕಿ, ಹುರಿ ಹಿಟ್ಟು, ಹಪ್ಪಳ, ಸಂಡಿಗೆ ಇವುಗಳಿಗೆ ಫಣಿಯಮ್ಮನಲ್ಲಿ ಬರಗಾಲವಿಲ್ಲ. ಮನೆಯೊಳಗೆ ಕಾಲಿಟ್ಟ ಗಳಿಗೆಯಲ್ಲಿ ತಾಲಿಪಿಟ್ಟು, ಕೆಂಡರೊಟ್ಟಿ, ಅವಲಕ್ಕಿ ಮೊಸರು, ಹುರಿ ಹಿಟ್ಟು ಇವುಗಳು ಎದುರು ಬಂದು ಕುಳಿತುಕೊಳ್ಳುವವು. ಬೆಲ್ಲದ್ದಾದರೂ ಕಾಫಿಯ ಕಲಶ ಸದಾ ಒಲೆಯ ಮೇಲೆ ಇರುತ್ತಿತ್ತು. ದುಗ್ಗಾಭಟ್ಟರ ನೆಂಟರು, ಉಡುಪರ ನೆಂಟರು, ಗೌಡರು ಗಳು ಸದಾ ಇದ್ದೇ ಇರುತ್ತಿದ್ದರು. ನಾಗಾಭಟ್ಟರು ಶಂಭು, ಮುದ್ದುರಾಮು ಮನೆ ಯವರಾಯ್ತು, ಹೋದವರ ಕೈ ಬಾಯಿ ಹೊಟ್ಟೆ ಭರ್ತಿಮಾಡಿ ಕಳಿಸುವಳು.

ಮೈತುಂಬ ಎಣ್ಣೆ ಹೊಯ್ದು 'ಮೀಯಾ' ಮಾಡಿಸುವುದು ಅವಳಿಗೆ ಪ್ರಿಯ ವಾದ ಕೆಲಸ. ಫಣಿಯಕ್ಕನೆಂದರೆ ಮುದ್ದು ರಾಮುನಿಗೆ ಅತೀ ಸಲಿಗೆ. ಅನೇಕ ಬಾರಿ ಆಕೆಗೆ ಹೊಡೆದುದು ಉಂಟು. ಸ್ಕೂಲಿನ ದಿನಗಳಲ್ಲಿ ಭಾನುವಾರ ಅವನು ಹುಣಿಸೆ ಕೊಪ್ಪಲಿಗೆ ಹೋಗುತ್ತಿದ್ದನು. ಅವನು ಹೋಗುತ್ತಿದ್ದುದು ಹಣ್ಣು ಹಂಪಲುಗಳಿಗಾಗಿ. ಅವೆಲ್ಲ ಧಾರಾಳವಾಗಿ ಸಿಗುತ್ತಿತ್ತು. ಜೊತೆಗೆ ಫಣಿಯಕ್ಕನ 'ಮೀಯಾ'ಕಾದಿರುತ್ತಿತ್ತು. "ಆ ಬಾವಿ ನೀರಾಗೆ ಬಾಗಮ್ಮ ಎಂಥ ಮೀಯಾ ಮಾಡಿಸ್ತಾಳೆ. ಬಾರ ಮುದ್ದು ತುಸ

ಎಣ್ಣೆ ಸ್ನಾನ ಮಾಡಿಸ್ತೇನಿ" ಎನ್ನುತ್ತ ಆಕೆ ಮುದ್ದುರಾಮನ ರಟ್ಟೆ ಹಿಡಿದು ತಲೆ ಮೈತುಂಬ ಎಣ್ಣೆ, ಹಂಡೆ ಹಂಡೆ ಕುದಿ ನೀರು ಸುರಿದು 'ಮೀಯೂ' ಮಾಡಿಸುವಳು."

ಈ ಕಾದಂಬರಿಯ ಫಣಿಯಕ್ಕ ನಮ್ಮ ಊರಿನಲ್ಲಿದ್ದ ಹಿರಿಯರನ್ನು, ಅವರು ತೋರುತ್ತಿದ್ದ ಪ್ರೀತಿ ವಾತ್ಸಲ್ಯವನ್ನು ನೆನಪಿಗೆ ತಂದು ಕೊಡುತ್ತವೆ. ಫಣಿಯಮ್ಮ ನಮಗೆ ತಾಯಿಯಾಗಿ ಹತ್ತಿರದವಳಾಗುತ್ತಾಳೆ.

ಈ ಕಾದಂಬರಿಯಲ್ಲಿ ಬರುವ ತುಂಗಾನದಿಯ ಮಹಾಪೂರದ ವರ್ಣನೆ ಹೀಗಿದೆ: "ಶ್ರಾವಣ ಮಾಸದ ದಿನಗಳು, ಹದಿನೈದು ದಿನಗಳಿಂದ ಮುಸಲಧಾರೆ ಕಣ್ಣು ಮುಚ್ಚಿಕೊಂಡು ಸುರಿಯುತ್ತಿದೆ, ಸಾಮಾನ್ಯವಾಗಿ ಪ್ರತಿ ವರ್ಷವೂ ಮಳೆಗಾಲದಲ್ಲಿ ತೀರ್ಥಹಳ್ಳಿಯ ನದಿ ತುಂಬಿ ಹರಿಯುತ್ತದೆ. ರಾಮ ಮಂಟಪದ ಗೋಪುರ ಮುಳುಗಿತೆಂದರೆ ಜನ ಹೆದರುತ್ತಿದ್ದರು. ಶಿವಮೊಗ್ಗೆಯಲ್ಲಿ ನೆರೆಯ ಹಾವಳಿಯಿಂದ ದೊಡ್ಡ ಬ್ರಾಹ್ಮಣರ ಕೇರಿ ಚಿಕ್ಕ ಬ್ರಾಹ್ಮಣರ ಕೇರಿ ಮನೆಗಳೆಲ್ಲ ಕೊಚ್ಚಿ ಹೋಗಿ ಜನರೆಲ್ಲ ದುರ್ಗಿ ಗುಡಿಗೆ ಬಂದು ತುಂಬಿಕೊಂಡು ಕಂಗೆಡುತ್ತಿದ್ದಾರೆಂಬ ವರ್ತಮಾನ ಬಂದಿತು. ಸುಮಾರು ಹದಿಮೂರು ವರ್ಷಗಳಿಗೆ ಮೊದಲು ಇಂತಹ ಪ್ರವಾಹ ಬಂದಿತ್ತೆಂದು ಜನರು ಆಡಿಕೊಂಡರು. ತೀರ್ಥಹಳ್ಳಿಗೂ ಈ ಗಂಡಾಂತರ ತಪ್ಪಿದ್ದಲ್ಲವೆಂದು ಖಚಿತವಾಯಿತು. ಪ್ರವಾಹ ಜಾರುಬಂಡೆಯನ್ನು ಮೀರಿ, ಅರಳಿಕಟ್ಟೆಯನ್ನು ದಾಟಿ ಮೇಲಿನ ರಸ್ತೆಯನ್ನು ಮುಳುಗಿಸಿತು. ರಾಮಮಂಟಪ ಎಂದೋ ಮುಳುಗಿ ಹೋಗಿತ್ತು. ಬೆಳಗಿನಿಂದ ಪ್ರವಾಹ ಏರುತ್ತಲೇಬಂದಿತು. ಕುರುವಳ್ಳಿ ಮೈಲಾರೇಶ್ವರನ ಪಾದ ತೊಳೆದಳು ತುಂಗೆ. ಕಾರ್ಮೋಡ ಕವಿದೇ ಇತ್ತು. ಮಳೆ ಧಾರಾಕಾರವಾಗಿ ಸುರಿದೆ ಸುರಿಯಿತು. ಈ ಅವಸ್ಥೆಯಲ್ಲಿಯೂ ಊರ ಜನವೆಲ್ಲ ನದಿಯ ದಂಡೆಯಲ್ಲಿ ನೆರೆಯಿತು. ತುಂಗೆ ತುಂಬಿ ಬಂದಿದ್ದಾಳೆ ಎಂದು ಊರಿನ ಹಿರಿಯ ಮುತ್ತೈದೆಯರೆಲ್ಲ ಮೊರದ ಬಾಗಿನಗಳನ್ನು ಪ್ರವಾಹದಲ್ಲಿ ತೇಲಿಬಿಟ್ಟರು, ಮಡಿಲು ತುಂಬಿದರು. ಮುದುಕರು ತೆಂಗಿನಕಾಯಿ ಒಡೆದು ತುಂಗೆಯನ್ನು ಪೂಜಿಸಿ ಕರ್ಪೂರವನ್ನು ನೀರಿನ ಮೇಲೆ ತೇಲಿಸಿದರು. ಮತ್ತೆ ಕೆಲವರು ಪರಮಾನ್ನದ ಅಡಿಗೆ ಮಾಡಿ ಎಡೆ ಬಿಟ್ಟರು. ಹೊಸ ಸೀರೆ ಖಣಗಳನ್ನು ಹೊಳೆಗೆ ಎಸೆದರು.

ಊರೂರುಗಳನ್ನು ಕೊಚ್ಚಿಕೊಂಡು ಹೋಗಲು ಬಂದ ಭಾಗೀರಥಿಗೆ ಜನರು ಹೆಚ್ಚು ಭಕ್ತಿಯನ್ನು ತೋರಿಸಿದರು. ದೇವಸ್ಥಾನದ ದುಗ್ಗಜ್ಜಿಯ ಮನೆಯ ಹೊಸಲಿಗೆ ಬಂದಿತು ಪ್ರವಾಹ. ಮೇಲಿನಿಂದ ಎಂಜಲೆಲೆ ಕಸಕಡ್ಡಿಗಳು ತೆರೆಯಾಗಿ ಬರುತ್ತಿತ್ತು.

“ಮನೆ ಬಾಗ್ಲಿಗೆ ಅನಾಯಾಸ ಭಾಗೀರ್ತಿ ಬಂದಿದಾಳೆ, ನೂರೆಂಟು ಮುಳುಗಾರ ಹಾಕ್ಬೆಕು” ಎನ್ನುತ್ತಾ ದುಗ್ಗಜ್ಜಿ ಬಂದು ಮನೆಯ ಬಾಗಿಲಲ್ಲೆ ಡುಬುಡುಬು ಮುಳುಗು ಹಾಕತೊಡಗಿತು. ಹೊಸಿಲ ಮೇಲೆ ನಿಂತ ಮೊಮ್ಮಗಳು ಪದ್ದಿ ಕೂಗಿಕೊಂಡಿತು.

“ಅಯ್ಯೊ, ಬ್ಯಾಡ ಕಣಜ್ಜೀ, ಯಂಜಲೆಲೆ. ದ್ವನ್ನೆ, ಕಸಯಲ್ಲ ತೇಲ್ಬರ್ತದೇ ನೀರ ಬಂದಾಗಿಲ್ಲಾ ;”– ದುಗ್ಗಜ್ಜಿ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ “ಹೋಗೇ ಹುಚ್ಗ್ಲನೆ. ಅಚ್ಚಂದಿ ಕರೆಯೆ ಬ್ಯಾಗ. ಮುಳಗ ಹಾಕ್ಲಿ. ಹೊಗೇ ಪಂಚ್ಪಾಳ ತಗಂಬಾರೆಬ್ಯಾಗ” ಎಂದು ಪುತ್ತೆ ಡುಬುಡುಬು ಮುಳುಗಿತು.

ಮಧ್ಯಾಹ್ನ ಊಟವಾಗಿತ್ತು. ಮುದ್ದುರಾಮ ಮೈತುಂಬ ಶಾಲು ಹೊದ್ದು ಮಹಡಿಯ ಕಿಟಕಿಯಲ್ಲಿ ಪ್ರವಾಹ ನೋಡುತ್ತಾ ಕುಳಿತ. ಕಣ್ಣು ಕಾಣುವವರೆಗೂ ಪ್ರವಾಹವೇ ಪ್ರವಾಹ. ಕಿವಿ ಸೆಡೆಯುವಂತೆ ತುಂಗೆಯ ಭೋರ್ಗರೆತ ಕೇಳಿಬರುತ್ತಿತ್ತು. ಮಳೆ ಸುರಿಯುತ್ತಲೇ ಇತ್ತು. ಪ್ರವಾಹ ಈಗ ಅರಳೀಕಟ್ಟೆಯಿಂದ ಸ್ವಲ್ಪ ಕೆಳಗೆ ಹರಿಯುತ್ತಿತ್ತು. ನಾಗಾಭಟ್ಟರ ಮನೆ ತನ್ನ ವಿಕಟ ಸ್ವರೂಪವನ್ನು ಪ್ರದರ್ಶಿಸಿತು. ಗೋಡೆಗಳೆಲ್ಲ ಕರಗಿಹೋಗಿದ್ದವು. ಹೆಂಚುಗಳೆಲ್ಲ ತೇಲಿ ಹೋಗಿದ್ದವು. (ಪುಟ 141 ರಿಂದ 144ರವರೆಗೆ)

ತೀರ್ಥಹಳ್ಳಿಗೆ ಬಂದ ಈ ಮಹಾಪೂರದ ಸನ್ನಿವೇಶದ ವರ್ಣನೆ ನನಗೆ ಬಾಲ್ಯದಲ್ಲಿ ನಮ್ಮೂರಿಗೆ ಹಳ್ಳ ತುಂಬಿ ಬಂದಾಗಿನ ದೃಶ್ಯವನ್ನು ನೆನಪಿಗೆ ತಂದುಕೊಟ್ಟಿತು. ನಮ್ಮೂರಿಗೆ ಹಳ್ಳ ತುಂಬಿ ಬಂದರೆ ಮೂರು ದಿವಸಗಳವರೆಗೂ ಇಳಿಯುವುದಿಲ್ಲ. ಹಳ್ಳ ನಿಧಾನವಾಗಿ ಏರುತ್ತಾ ಕ್ರಮೇಣ ತುಂಬಿ ಆಚೆಯ ದಂಡೆಯಲ್ಲಿದ್ದ ಚೆನ್ನಪ್ಪನ ಬಾವಿ ಈಚೆಯ ದಂಡೆಯಲ್ಲಿದ್ದ ಹೊಸ ಬಾವಿಯನ್ನು ಮುಳುಗಿಸಿ ಬಿಡುತ್ತದೆ. ಆ ಹಳ್ಳ ಊರಲ್ಲಿನ ಹರಿಜನ ಕೇರಿಯನ್ನು ಕೊಚ್ಚಿಕೊಂಡು ‘ಹೊಳಗಟ್ಟೆ’ಯನ್ನು ದಾಟಿ ಚಾವಡಿಯ ಮೆಟ್ಟಿಲನ್ನು ಮುಳುಗಿಸಿ ಬಿಡುತ್ತದೆ. ಬಾಲ್ಯದಲ್ಲಿ ನಾವು ಈ ಹಳ್ಳ ಬರುವ ದೃಶ್ಯವನ್ನು ನೋಡಲು ಬಹಳ ಉತ್ಸುಕತೆಯಿಂದ ಕಾಯುತ್ತಿದ್ದೆವು. ಅದನ್ನು ನೋಡುವುದೇ ನಮಗೆ ಸಂಭ್ರಮ. ಇಂತಹ ಅನೇಕ ಸನ್ನಿವೇಶಗಳು ನನಗೆ ನಮ್ಮೂರನ್ನು ನನ್ನ ಬಾಲ್ಯ ಜೀವನದ ಸವಿನೆನಹುಗಳನ್ನು ಮೆಲುಕು ಹಾಕುವಂತೆ ಮಾಡಿವೆ.

ಇಂದಿರಾ ಅವರ ಈ ಕಾದಂಬರಿ ಪ್ರಕಟವಾದದ್ದು (೧೯೬೩)ರಲ್ಲಿ. ಇಂದಿರಾ

ಅವರಿಗೆ ಪರಿಚಯದವರಾದ 'ರಾಧಮ್ಮ' ಎಂಬುವವರು (೧೯೫೮ ರಲ್ಲಿ) ಇಂದಿರಾ ಅವರ ಮನೆಗೆ ಬಂದಾಗ ತಮ್ಮ ಮನೆತನದ ಕತೆಯನ್ನೆಲ್ಲ ಹೇಳಿ ಬರೆದರೆ ಅದೊಂದು ದೊಡ್ಡ ಕತೆಯೇ ಆಗುತ್ತದೆ ಎಂದಾಗ, ಇಂದಿರಾ ಅವರು ತಟ್ಟನೆ 'ನಾನು ಬರೆಯಲಾ' ಎಂದು ಕೇಳಿದರಂತೆ. ಆಗ ರಾಧಮ್ಮ ' ಅವಶ್ಯ ಬರೀರಿ ' ಎಂದರಂತೆ. ಇಂದಿರಾ ಅವರು 'ತುಂಗಭದ್ರ' ಬರೆದರು. ಮುಂದೆ ರಾಧಮ್ಮ ಕಾಶಿಯಲ್ಲಿ ತೀರಿಕೊಂಡರು. 'ಕಾದಂಬರಿಯಲ್ಲಿ ಬರುವ 'ಮಂದಾಕಿನ' ಪಾತ್ರ ನಿಜವಾಗಿ ಅವರೇ. 'ತುಂಗಭದ್ರ' ದ ಸತ್ಯ ಘಟನೆಯನ್ನು ಇಂದಿರಾ ಅವರು ಕಂಡು ಕೇಳಿದ್ದರು. ಹವ್ಯಕರ ಕುಟುಂಬದಲ್ಲಿ ಜನಿಸಿದ 'ಗಂಗೆ-ಗೌರಿ' ಎಂಬ ಅವಳಿ ಹುಟ್ಟು ಕುರುಡಿಯರು ಮಾನಸಿಕ ಯಾತನೆಯನ್ನು ಅನುಭವಿಸಿ, ಹೊಳೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದರು. 1958 ರಲ್ಲಿ ಇಂದಿರಾ ಈ ಕತೆಯನ್ನು ಬರೆದು ಇಟ್ಟಿದ್ದರು.

'ತುಂಗ-ಭದ್ರ' ದ ಹಸ್ತಪ್ರತಿ ರಾಮಸ್ವಾಮಿ ಹಾಗೂ ಎಚ್.ಕೆ. ರಂಗನಾಥ್ ಇವರಿಂದಾಗಿ ಧಾರವಾಡದ ಸುಪ್ರಸಿದ್ಧ ಮನೋಹರ ಗ್ರಂಥಮಾಲೆಯ ಸಲಹಗಾರರೂ ಹೆಸರಾಂತ ವಿಮರ್ಶಕರೂ ಆದ ಶ್ರೀ ಕೆ.ಡಿ. ಕುರ್ತಕೋಟಿಯವರ ಕೈಸೇರಿತು.

ಶ್ರೀ ಕೆ.ಡಿ. ಕುರ್ತಕೋಟಿಯವರು ಒಂದು ಕಾರ್ಯಕ್ರಮ ನಿಮಿತ್ತ ಮುಂಬಯಿಗೆ ಹೋಗುವವರಿದ್ದರು. ಹಸ್ತಪ್ರತಿಯನ್ನು ಜೊತೆಗೆ ಒಂದು ಸಾವಿರ ರೂಪಾಯಿಗಳನ್ನು "ಪ್ಲೀಡರ್ಸ್ ಲೆದರ್ ಬ್ಯಾಗ' ನಲ್ಲಿ ಹಾಕಿ ಇಟ್ಟರು. ಮುಂಬಯಿಯ ವಿಪರೀತ ಗದ್ದಲದಲ್ಲಿ ಹಸ್ತಪ್ರತಿ ಇದ್ದ ಚೀಲ ನಾಪತ್ತೆಯಾಗಿತ್ತು. ಹಣವಂತೂ ಹೋಯಿತು. ಜೊತೆಗೆ ಶ್ರಮವಹಿಸಿ ಬರೆದ ಕಾದಂಬರಿಯ ಹಸ್ತಪ್ರತಿಯೂ ಕಳೆದುದಕ್ಕೆ ಕುರ್ತಕೋಟಿಯವರಿಗೆ ಅತೀವ ದುಃಖವೂ, ನಿರಾಶೆಯೂ ಆಯಿತು. ಇಂದಿರಾ ಅವರ ಮನಸ್ಸಿಗೆ ನೋವು ಕೊಡಬಾರದೆಂದು ಜೋಶಿಯವರ ಆಸೆ. ವಿಧಿಯಿಲ್ಲದೆ ಅನಿವಾರ್ಯವಾಗಿ ಎಚ್.ಕೆ. ರಂಗನಾಥ್‌ರಿಗೆ ವಿಷಯ ತಿಳಿಸಿ, ಕೈಮೀರಿ ನಡೆದ ಘಟನೆಯ ಬಗ್ಗೆ ನೊಂದ ಮನದಿಂದ ಪತ್ರ ಬರೆದು ಕ್ಷಮೆ ಕೇಳಿದರು. ಅದು ಪ್ರಕಟವಾಗಿದ್ದರೆ ಸಲ್ಲಬಹುದಾಗಿದ್ದ ಗೌರವಧನವನ್ನು ತಾವೇ ಕೊಡುವದಾಗಿ ಕೆ.ಡಿ. ಕುರ್ತಕೋಟಿಯವರು ತಿಳಿಸಿದ್ದರು. ಇದು ಕೈಮೀರಿ, ನಡೆದ ಘಟನೆಯಾದ್ದರಿಂದ ತಾವೇ ಕೊಡುವುದಾಗಿ ಶ್ರೀ ಜಿ.ಬಿ. ಜೋಶಿಯವರು ತಿಳಿಸಿದರು.

" ನೀವೇ ಈ ದುರ್ದೈವದ ಪ್ರಸಂಗದೊಳಗಿಂದ ನನ್ನನ್ನು ಪಾರು ಮಾಡಬೇಕು. ಉಪಾಯ ಏನೆಂಬುದನ್ನು ತಿಳಿಸಬೇಕು "

" ಇಡೀ ಮೂವತ್ತು ವರ್ಷದ ಗ್ರಂಥಮಾಲೆಯ ಆಯುಷ್ಯದಲ್ಲಿ ಹೀಗಾಗಿದ್ದು ಇದೇ ಮೊದಲು. ಈ ಅನಿರೀಕ್ಷಿತ ಘಟನೆ ನನ್ನನ್ನೂ, ಕೀರ್ತಿಯವರನ್ನೂ ಮಣ್ಣು ಮಾಡಿದೆ. ನೀವು ನಿಮ್ಮ ತಂಗಿಯವರಿಗೆ ಭೆಟ್ಟಿಯಾಗಿ ತಿಳಿಸಿ. ಏನಾದರೂ ಉಪಾಯ ಇದ್ದರೆ ಇದ್ದ ಬಿದ್ದ ಟಿಪ್ಪಣಿಗಳಿಂದ ಅದನ್ನೇ ಇನ್ನೊಮ್ಮೆ ಬರೆದರೆ ಸಮಾಧಾನವಾಗುತ್ತದೆ. "[1] ಎಂದು ರಂಗನಾಥ ಅವರಿಗೂ ಕುರ್ತಕೋಟಿಯವರು ಪತ್ರ ಬರೆದರು. ಅದೇ ಎಂ.ಕೆ. ಇಂದಿರಾ ಅವರಿಗೂ ಪತ್ರ ಬರೆದು ಕ್ಷಮೆ ಕೇಳಿದರು.

ಈ ಘಟನೆಯಿಂದ ಇಂದಿರಾ ಅವರಿಗೆ ಹೇಗಾಗಿರಬೇಡ ? ಆ ನಿರಾಶೆ ದುಃಖ ಅನುಭವವೇದ್ಯ. ಎಷ್ಟೋ ವರ್ಷಗಳಿಂದ ಬರೆಯುವ ಹಂಬಲವನ್ನಿಟ್ಟುಕೊಂಡಿದ್ದರು. ಮನದ ಒತ್ತಡ ತಾಳಲಾಗದೇ ಬರೆದು ಇಟ್ಟಿದ್ದರು. ತಾಯಿಯಾಗುವವಳು ತನ್ನ ಚೊಚ್ಚಲು ಮಗುವನ್ನು ಕಾಣಲು ತಾಳ್ಮೆ ಸಂಭ್ರಮ ಹೊಂದುವಂತೆ ತಮ್ಮ ಪ್ರಥಮ ಕೃತಿಗಾಗಿ ನಿರೀಕ್ಷಿಸಿದ್ದರು. ಆದರೆ ಅವರಿಗೆ ಹೆತ್ತ ಕೂಸೊಂದನ್ನು ಕಳೆದುಕೊಂಡಂತೆ ನೋವಾಗಿತ್ತು. ಆದರೂ ಇಂದಿರಾ ಅವರು ಧೃತಿಗೆಡಲಿಲ್ಲ. ಅಂದೆ ಜಿ.ಬಿ. ಜೋಶಿಯವರಿಗೂ, ಕೆ.ಡಿ. ಕುರ್ತಕೋಟಿಯವರಿಗೂ ಸಮಾಧಾನದ ಉತ್ತರ ಬರೆದು ಕೃತಿಯನ್ನು ಪುನರ್ ಸೃಷ್ಟಿಸುವುದಾಗಿ ತಿಳಿಸಿದರು.

ಹದಿನೈದು ದಿನದಲ್ಲಿ ಪ್ರಕಾಶಕರಿಗೆ "ತುಂಗಭದ್ರ" ಕೃತಿಯನ್ನು ಕಳಿಸಿದರು.

ಇಂದಿರಾ ಅವರ ಪತ್ರವನ್ನೂ ಕೃತಿಯನ್ನೂ ನೋಡಿ. ಕೆ.ಡಿ. ಕುರ್ತಕೋಟಿಯವರಿಗೂ ಆಶ್ಚರ್ಯವಾಯಿತು.

" ಕಾದಂಬರಿಯ ಬರವಣಿಗೆಯನ್ನು ಇಷ್ಟು ಬೇಗ ನೀವು ಮುಗಿಸಿದ್ದಕ್ಕೆ ಸಂತೋಷವಾಯಿತಲ್ಲದೆ ಆಶ್ಚರ್ಯವೂ ಆಯಿತು. ನೀವು ಮಾಡಲಾರಿರೆಂದಲ್ಲ. ಆದರೆ ಕೃತಿ ಕಳೆದು ಹೋದ ಮೇಲೆ ಅದರ ಪುನರ್ರಚನೆ ಎಷ್ಟು ಕಷ್ಟವೆಂಬುದನ್ನು ನಾನು ಊಹಿಸಬಲ್ಲೆ. ಅಂತೂ ಬರೆದು ಮುಗಿಸಿ ನೀವು ಗೆದ್ದುದ್ದಲ್ಲದೆ ನಮ್ಮನ್ನೂ ಪಾರು ಮಾಡಿದಿರಿ. ಅದಕ್ಕಾಗಿ ನಿಮಗೆ ಎಷ್ಟು ಕೃತಜ್ಞನಾಗಿದ್ದರೂ ಸಾಲದು. " ಎಂದು ಬರೆದು ಕೃತಿಯ ವಿವರಗಳು ಮೊದಲಿಗಿಂತ ಹೆಚ್ಚು ಜೀವಂತವಾಗಿ ಮೂಡಿರುವುದನ್ನು ಕಂಡು ವಿಸ್ಮಯವಾಯಿತು.

---

1) 20-12-1962 ರಂದು ಜಿ.ಬಿ. ಜೋಶಿಯವರು ಎಚ್.ಕೆ. ರಂಗನಾಥ್‌ರಿಗೆ ಬರೆದ ಪತ್ರ

" ಆದನ್ನೋದಿದಂತೆ ಏನೇನೋ ಸಮ್ಮಿಶ್ರ ಭಾವನೆಗಳು ಮನಸ್ಸಿನಲ್ಲಿ ಮೂಡಿದವು. ನಿಮ್ಮನ್ನು ಎಂಥ ತೊಂದರೆಗೆ ಗುರಿಮಾಡಿದೆನಲ್ಲ ಎಂದು ಸಂಕಟವಾಯಿತು. ಆದರೆ ಎಂಥ ಪ್ರಳಯ ಕಾಲದಲ್ಲೂ ಇನ್ನೊಂದು ಕೃತಿ ಸೃಷ್ಟಿಯಾಯಿತಲ್ಲ ಎಂದು ಸಂತೋಷವೂ ಆಯಿತು."[1]

ಇದೆ ರೀತಿಯ ಪತ್ರವನ್ನು ಇಂದಿರಾ ಅವರಿಗೆ ಜಿ.ಬಿ. ಜೋಶಿಯವರೂ ಬರೆದರು.

" ನಿಮ್ಮ 25-12-62ರ ಪತ್ರ ನಿನ್ನೆ ಸಾಯಿಂಕಾಲ ಬಂದು ತಲುಪಿತು. ಕುದಿಯುತ್ತಿರುವ ಮನಸ್ಸಿಗೆ ತಂಪುಕೊಟ್ಟಿತು. ನನಗೆ ದುಃಖ ಉಂಡುಂಡು ಸ್ಥಿಮಿತ ಪಡೆದ ಮನಸ್ಸಿನ ನಿಮ್ಮ ಬರವಣಿಗೆ ಎಲ್ಲಿಲ್ಲದ ಸಮಾಧಾನ ಕೊಟ್ಟಿತು. ನೀವು ಕೂಸನ್ನು ಕಳೆದುಕೊಂಡ ದುಃಖವನ್ನೇ ಅನುಭವಿಸಿರಬೇಕು. ಈ ಅಘಟಿತ ಘಟನೆ ನಮ್ಮೆಲ್ಲರ ಮನಸ್ಸುಗಳನ್ನು ವಿಚಲಿತ ಮಾಡಿತ್ತು. ಪತ್ರ ಬರೆಯುವಾಗಿನ ನನ್ನ ಉಮ್ಮಳವನ್ನು ಅಯ್ಯೋ, ನೆನೆಯುವುದೇ ಬೇಡ. ನೀವೇ ಅದಕ್ಕೆ ಪರಿಹಾರ ಒದಗಿಸಿ ಉಮ್ಮಳ ಕಡಿಮೆ ಮಾಡಿದ್ದೀರಿ. ಮನೆಯ ಇಂತಹ ಪರಿಸ್ಥಿತಿಯಲ್ಲೂ ನೀವು ಮತ್ತೆ ಬರೆದುಕೊಟ್ಟು ಮನೋಸ್ಥೈರ್ಯ ತೋರಿಸಿದ್ದು ನನಗಂತೂ ಬಹು ವಿಸ್ಮಯವನ್ನುಂಟು ಮಾಡಿದೆ. ನೀವು ನಂಬಿದ ಕೃಷ್ಣ ನಿಮ್ಮನ್ನು ಯಾವಾಗಲೂ ಕಾಯುತ್ತಾನೆ. ನಿಮ್ಮ ಉದಾರ ಅಂತಃಕರಣಕ್ಕೆ ನಮಸ್ಕಾರ ಮಾಡುತ್ತೇನೆ....[2]

"ನಿಮ್ಮ ಪತ್ರ, ನಮ್ಮೆಲ್ಲರ ಸಮಸ್ಯೆಯನ್ನು ಎದೆ ದುಗುಡವನ್ನು ಪರಿತಾಪವನ್ನು ಒಮ್ಮೆಲೇ ಕಡಿಮೆ ಮಾಡಿತು. ಆದರೂ ಅದಕ್ಕಾಗಿ ನೀವು ಸೂಚಿಸಿರುವ ಪರಿಹಾರ ಮತ್ತು ಮಾಡುತ್ತಿರುವ ಪ್ರಯತ್ನ ಇವೆಲ್ಲ ನಿಮ್ಮ ಮನೋಧೈರ್ಯವನ್ನು ಹೆಚ್ಚಿಸಿವೆ. ನಿಮ್ಮ ಹೃದಯ ವೈಶಾಲ್ಯಕ್ಕಾಗಿ, ಧೈರ್ಯಕ್ಕಾಗಿ, ನಿಮ್ಮ ದೃಷ್ಟಿಯಲ್ಲಿಯ ವಿವೇಕಕ್ಕಾಗಿ, ನಿಮಗೆ ನನ್ನ "ತಲೆ ತಾನಾಗಿ ಬಾಗುತ್ತದೆ."[3] ಎಂದು ಬರೆದರು. ಜೀವನದಲ್ಲಿಯಂತೆ ಸಾಹಿತ್ಯದಲ್ಲಿಯೂ ಇದ್ದ ಇಂದಿರಾ ಅವರ ಶ್ರದ್ಧೆಗೆ ಕೆ.ಡಿ. ಕುರ್ತ

---

1. ಪ್ರೊ. ಕೆ. ಡಿ. ಕುರ್ತಕೋಟಿಯವರು 13-3-1963 ರಂದು ಇಂದಿರಾ ಅವರಿಗೆ ಬರೆದ ಪತ್ರ
2. ಶ್ರೀ ಜಿ. ಬಿ. ಜೋಶಿಯವರು ಎಂ. ಕೆ. ಇಂದಿರಾ ಅವರಿಗೆ 28-12-1962 ರಂದು ಬರೆದ ಪತ್ರ.
3. ಶ್ರೀಯುತ ಪ್ರೋ. ಕೆ. ಡಿ. ಕುರ್ತಕೋಟಿಯವರ ಕೃತಿ ಡಿಸೆಂಬರ್ 1962 ರಂದು ಬರೆದ ಪತ್ರ.

ಕೋಟಿಯವರು, ಮೆಚ್ಚಿ ತುಂಗಭದ್ರದ ಮುನ್ನುಡಿಯಲ್ಲಿ "ಶ್ರೀಮತಿ ಇಂದಿರಾ ಅವರ ಈ ಕಾದಂಬರಿ, ಅವರ ಜೀವನ ಶ್ರದ್ಧೆಯ ಫಲವಾಗಿದೆ" ಎಂದು ಬರೆದಿದ್ದಾರೆ.

ಇಂದಿರಾ ಅವರು ಸತ್ವಪರೀಕ್ಷೆಯಲ್ಲಿ ಗೆದ್ದರು. 1963ರಲ್ಲಿ ತುಂಗಭದ್ರೆಯರು (ಗಂಗೆ–ಗೌರಿ) ಮತ್ತೆ ಹುಟ್ಟಿ ಬಂದರು. ಇಂದಿರಾ ಅವರ ಈ ಪ್ರಥಮ ಕೃತಿ ವಿದ್ವಾಂಸರ–ವಿಮರ್ಶಕರ ಗಮನ ಸೆಳೆಯಿತು. ಜನಮನಕ್ಕೆ ಹತ್ತಿರವಾಯಿತು.

●

●

ಅಚಾತುರ್ಯದಿಂದ ಹಸ್ತಪ್ರತಿ ಕಳೆದುಹೋದಾಗ ಕೇವಲ ನೆನಪಿನ ಆಧಾರದ ಮೇಲೆ ಕಾದಂಬರಿಯನ್ನು ಪುನಃ ಸೃಷ್ಟಿಸಿದ್ದು ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗ ಬೇಕಾದ ಮಹತ್ವದ ಘಟನೆಯಾಗಿದೆ. 'ತುಂಗಭದ್ರ'ದ ನಂತರ ಪ್ರಕಟವಾದ ಅವರ 'ಸದಾನಂದ' ಕಾದಂಬರಿ ಮನೋಹರ ಗ್ರಂಥಮಾಲೆಯಿಂದ (1965) ಬೆಳಕಿಗೆ ಬಂದಿತು. ಈ ಕಾದಂಬರಿಯೂ ವಿಮರ್ಶಕರ ಮೆಚ್ಚುಗೆ ಗಳಿಸಿತು. ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿತು.

ಅವರ 'ಗೆಜ್ಜೆಪೂಜೆ' ಕಾದಂಬರಿ ಚಲನಚಿತ್ರವಾಗಿ ರಾಷ್ಟ್ರಪ್ರಶಸ್ತಿಯನ್ನು ಗಳಿಸಿತು. ಹೀಗೆ ಒಂದಾದ ಮೇಲೊಂದು ಕಾದಂಬರಿಯನ್ನು ಇಂದಿರಾ ಕನ್ನಡಿಗರಿಗೆ ಕೊಡತೊಡಗಿದರು.

ಅವರ ಕೃತಿಗಳಲ್ಲಿ ಬಾಲ್ಯವಿವಾಹದ ಅನರ್ಥ, ವೇಶ್ಯಾಪದ್ಧತಿ, ವಿಧವಾವಿವಾಹ ಸಮಸ್ಯೆ, ಬಡತನ, ವರದಕ್ಷಿಣೆ ಸಮಸ್ಯೆ, ಕಪಟ ಸನ್ಯಾಸಿಗಳ ವಂಚನೆ, ನಗರ ಜೀವನದ ಸಮಸ್ಯೆಗಳು ಮುಖ್ಯವಾಗಿ ಚಿತ್ರಿತವಾಗಿವೆ.

ಹಿರಿಯ ಲೇಖಕಿಯಾದ ಇಂದಿರಾ ಅವರು ಸ್ತ್ರೀಯ ಅಂತರಂಗವನ್ನು ಒಳಹೊಕ್ಕು ನೋಡಿದ್ದಾರೆ. ಆವಳ ಬದುಕಿನ ಸಮಸ್ಯೆಗಳನ್ನು ನೋವು ನಲಿವುಗಳನ್ನು ಎಳೆಎಳೆಯಾಗಿ ಚಿತ್ರಿಸಿದ್ದಾರೆ.

ಮೂಢನಂಬಿಕೆ, ಅವೈಚಾರಿಕತೆ, ಅಂಧಶ್ರದ್ಧೆ ಇವುಗಳನ್ನು ತಮ್ಮ ಕಾದಂಬರಿ ಗಳಲ್ಲಿ (ಇಂದಿರಾ ಅವರು ಬಾಲ್ಯದಲ್ಲಿ ತಾವು ನೋಡಿದ ಮಲೆನಾಡಿನ ಸಾಮಾಜಿಕ ಜೀವನದಲ್ಲಿ ತುಂಬಿದ್ದ ಅಜ್ಞಾನ) ದಟ್ಟವಾಗಿ ಚಿತ್ರಿಸಿದ್ದಾರೆ. ಫಣಿಯಮ್ಮ ಕಾದಂಬರಿ ಯಲ್ಲಿ ಸ್ತ್ರೀ ಶೋಷಣೆಯನ್ನು ದಿಟ್ಟತನದಿಂದ ಪ್ರಶ್ನಿಸಿದ್ದಾರೆ. ಪುರುಷ ಪ್ರಧಾನ

ಸಮಾಜದ ಟೊಳ್ಳು ಪ್ರತಿಷ್ಠೆಯನ್ನು ಬಯಲಿಗೆಳೆದಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಸಂದ ಒಂದು ಅಪೂರ್ವ ಕೊಡುಗೆ 'ಫಣಿಯಮ್ಮ' ಕಾದಂಬರಿ.

ಮಲೆನಾಡಿನ ಜನಜೀವನ, ಅವರ ನಂಬಿಕೆ, ಆಚಾರ–ವಿಚಾರಗಳು, ಆಟಪಾಠಗಳು, ವೇಷಭೂಷಣ, ತಿಂಡಿ–ತಿನಿಸು, ಅತಿಥಿ ಸತ್ಕಾರ, ಇವೆಲ್ಲ ಅತ್ಯಂತ ಸ್ವಾಭಾವಿಕವಾಗಿ ಅವರ ಕಾದಂಬರಿಗಳಲ್ಲಿ ಮೂಡಿವೆ.

ಇಂದಿರಾ ಅವರ ಕಾದಂಬರಿಗಳ ಕೀರ್ತಿ ಕನ್ನಡಕ್ಕೆ ಮಾತ್ರವಲ್ಲದೆ ಭಾರತೀಯ ಇತರ ಭಾಷೆಗಳಿಗೂ ಪಸರಿಸಿದೆ. 'ತುಂಗಭದ್ರಾ' ಕಾದಂಬರಿ ತೆಲುಗಿಗೆ, 'ಗೆಜ್ಜೆಪೂಜೆ' ಕಾದಂಬರಿ ತೆಲುಗು,ಗುಜರಾತಿ ಭಾಷೆಗಳಿಗೂ, 'ಫಣಿಯಮ್ಮ' ಕಾದಂಬರಿ ಮಲೆಯಾಳಿ ಹಾಗೂ ಇಂಗ್ಲಿಷ್ ಭಾಷೆಗೂ ಅನುವಾದವಾಗಿವೆ. ಫಣಿಯಮ್ಮ ಕಾದಂಬರಿ ಮೂರು ವರ್ಷಗಳವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗೆ (ಬಿ.ಎ.) ಪಠ್ಯಪುಸ್ತಕವಾಗಿತ್ತು. ಈ ಕಾದಂಬರಿ ಪ್ರೇಮಾಕಾರಂತರ ನಿರ್ದೇಶನದಲ್ಲಿ ಚಲನಚಿತ್ರವಾಗಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿದ್ದು ಮಹತ್ವದ್ದಾಗಿದೆ. 1976ರ ಶ್ರೇಷ್ಠ ಕೃತಿಯೆಂದು ಕರ್ನಾಟಕ ಸಾಹಿತ್ಯ ಅಕಾದೆಮಿಯ ಗೌರವ—ಪುರಸ್ಕಾರವನ್ನು ಇಂದಿರಾ ಅವರಿಗೆ ತಂದುಕೊಟ್ಟಿತು.

ಪ್ರಗತಿಪರ ಧೋರಣೆಯ ಇಂದಿರಾ ತಮ್ಮ ಕೃತಿಗಳ ಮೂಲಕ ಆರೋಗ್ಯಕರ ಸಮಾಜದ ಒಳಗುಟ್ಟನ್ನು ಅರುಹಿದ್ದಾರೆ. ಮಾನವೀಯ ಮೌಲ್ಯಗಳನ್ನು ತಮ್ಮ ಕೃತಿಗಳ ಮೂಲಕ ಬಿಂಬಿಸಿದ್ದಾರೆ. ತಮ್ಮ ಕೃತಿಗಳ ಮೂಲಕ ಇಂದಿರಾ ಅವರು ನೀಡಿದ ಕೊಡುಗೆ ಮಹತ್ವದ್ದಾಗಿದೆ.

ಕೇವಲ ಮಾಧ್ಯಮಿಕ ಎರಡನೆ ತರಗತಿಯವರೆಗೆ ಶಿಕ್ಷಣ ಪಡೆದ ಇಂದಿರಾ ಅವರು ತಮ್ಮ ಬದುಕನ್ನೇ ಶಿಕ್ಷಣ ರಂಗವನ್ನಾಗಿ ಮಾಡಿಕೊಂಡು, ಜೀವನದುದ್ದಕ್ಕೂ ಹೋರಾಡಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ್ದು ಅಪೂರ್ವ.

74ನೇಯ ವಯಸ್ಸಿನಲ್ಲಿ ಇಂದಿರಾ ಅವರಿಗೆ ಈಗ ಮೇಲಿಂದ ಮೇಲೆ ಅನಾರೋಗ್ಯ. ಅವರ ಮನಸ್ಸು–ದೇಹ ವಿಶ್ರಾಂತಿಯನ್ನು ಬಯಸುತ್ತಿದೆ. ಆದರೂ ಅವರಿಗೆ ಮಲೆನಾಡಿನ ಸಮಗ್ರ ಜೀವನವನ್ನು ಚಿತ್ರಿಸುವ 'ಬಿಂದು' ಎಂಬ ಬೃಹತ್ ಕಾದಂಬರಿಯನ್ನು ಬರೆಯುವ ಸಂಕಲ್ಪವಿದೆ. ಕೆಲವು ಪುಟಗಳನ್ನು ಅವರು ಬರೆದೂ

ಇಟ್ಟಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಆ ಕಾದಂಬರಿ ಬೇಗ ಸಿಗುವಂತಾಗಬೇಕು. ಅಂದರೆ ಕನ್ನಡ ಸಾಹಿತ್ಯಕ್ಕೆ ಒಬ್ಬ ಮಹಿಳೆಯಿಂದ ಒಂದು ಅದ್ಭುತವಾದ ಕಾದಂಬರಿ ದೊರೆ ತಂತಾಗುತ್ತದೆ.

●
●

ನಾಲ್ಕು ವರ್ಷಗಳವರೆಗಿನ ನನ್ನ ಸತತ ಅಧ್ಯಯನದಿಂದ ಇಂದಿರಾ ಅವರ ಪ್ರೀತಿಯ ಸಹಕಾರದಿಂದ ಕನ್ನಡದ ಅನೇಕ ಹಿರಿಯ ವಿದ್ವಾಂಸರಿಂದ ವಿಮರ್ಶಕರಿಂದ ಸಹಕಾರವು ಲಭಿಸಿ 1985ರಲ್ಲಿ ನನ್ನ ಪಿಎಚ್.ಡಿ ಪ್ರಬಂಧದ ಬರೆವಣಿಗೆ ಕೊನೆಗೊಂಡಿತು. 1986ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು "ಎಂ.ಕೆ. ಇಂದಿರಾ ಅವರ ಕಾದಂಬರಿಗಳು" ಎಂಬ ನನ್ನ ಪ್ರಬಂಧವನ್ನು ಮನ್ನಿಸಿ ನನಗೆ ಡಾಕ್ಟರೇಟ್ ಪದವಿಯನ್ನಿತ್ತಿದೆ. (ನನ್ನ ಪ್ರಬಂಧದ ವಿಷಯ ಎಂ.ಕೆ. ಇಂದಿರಾ ಅವರ ಕಾದಂಬರಿಗಳು ಎಂದಿದ್ದರೂ ಒಟ್ಟಾರೆ ಅವರ ಬದುಕು-ಬರಹಗಳ ಸಮಗ್ರ ಅಧ್ಯಯನ ಅದರಲ್ಲಿದೆ.)

ಮಲೆನಾಡಿನ ಲತೆಯಲ್ಲಿ ಅರಳಿದ ಮಲ್ಲಿಗೆಹೂವು ಎಂ. ಕೆ. ಇಂದಿರಾ, ಆ ಹೂವಿನ ಪರಿಮಳ ಕರ್ನಾಟಕದ ಮೂಲೆ ಮೂಲೆಗೂ ಹರಡಿದೆ. ಈ ಹಿರಿಯ ಲೇಖಕಿಗೆ ವಾತ್ಸಲ್ಯಮಯಿಗೆ ಈ ಸಂದರ್ಭದಲ್ಲಿ ಕನ್ನಡಿಗರೆಲ್ಲರ ಅಭಿನಂದನೆಗಳು ಸಲ್ಲುತ್ತವೆ.

ಇಂದಿರಾ ಅವರ ಸಾಧನೆ

○
○
○ ಶೇಷನಾರಾಯಣ

ಸಾಹಿತ್ಯವೆಂದರೆ ನಿಜ ಜೀವನದ ಪ್ರತಿಬಿಂಬ ಎನ್ನುವ ತೀರಾ ಸುಲಭವಾದ ಸಿದ್ಧಾಂತವೊಂದು ನಮ್ಮ ಕೆಲವು ಲೇಖಕರಿಗೆ ಪ್ರತಿಜ್ಞೆಯಾಗಿದ್ದರೆ, ಮತ್ತೆ ಕೆಲವರಿಗೆ ಅಂಧವಿಶ್ವಾಸವೂ ಆಗಿದೆ. ಆದರೆ ಹುಟ್ಟು, ಬದುಕು, ಸಾವುಗಳಿಂದ ಸುಖ ದುಃಖಗಳಿಂದ ಕೂಡಿದ ಜೀವನದ ಬುಡಕ್ಕಿರುವ ತಾತ್ವಿಕ ಅರ್ಥಪೂರ್ಣತೆಯನ್ನು ಆರಾಧಿಸುವ ಶ್ರದ್ಧೆಯುಳ್ಳ ಲೇಖಕರು ಅಪರೂಪವಾಗಿದ್ದಾರೆ.... ಈ ಬಗೆಯ ಜೀವನಶ್ರದ್ಧೆ (ತುಂಗಭದ್ರ) ಈ ಕಾದಂಬರಿಗೆ ಪ್ರೇರಕ ಶಕ್ತಿಯಾಗಿದೆ.

ಈ ಕಾದಂಬರಿಯು ತುಂಬಾ ಹೆಣ್ಣುಮಕ್ಕಳಿಗೆ ಮಾತ್ರ ವೇದ್ಯವಾಗಿರುವ ಜೀವನ ದರ್ಶನ ಹರಡಿದೆ. ಜೀವನದ ಬಗೆಗೆ ಇರುವ ಸೌರಭವೇ ಅದರ ಮೂಲಸೂತ್ರವಾಗಿದೆ.

ಈ ಕಾದಂಬರಿಯ ಬರವಣಿಗೆಯು ರೀತಿಯೂ ಇದೇ. ಕಥನ ಮಾರ್ಗ ತೀರಾ ಸರಳವಾದದ್ದು. ಆದರೆ ಯಾವ ಘಟನೆಯೂ ಅನವಶ್ಯಕವಾಗಿಲ್ಲ. ನಡೆಯುವ ಘಟನೆಗಳು ಎಲ್ಲವೂ ಈ ಕಾದಂಬರಿಯ ಪಾತ್ರಗಳ ಮೇಲೆ ಒಂದಿಲ್ಲೊಂದು ರೀತಿಯಿಂದ ಪ್ರಭಾವವನ್ನು ಬೀರುತ್ತಲೇ ಇವೆ. ಆಯಾ ಘಟನೆಗಳಲ್ಲಿ ಆ ವ್ಯಕ್ತಿಗಳ ಅಂತರಂಗ ಒಂದಿಲ್ಲೊಂದು ರೀತಿಯಿಂದ ಬೆಳಗುತ್ತದೆ.

—ಬರೆದದ್ದು ಮೊದಲನೆಯ ಕಾದಂಬರಿ. ಆ ಕಾದಂಬರಿ ಸುಮಾರು ಇನ್ನೂರೈವತ್ತು ಪುಟಗಳು. ಅದನ್ನು ಬರೆದಾಗ ಅವರಿಗೆ ವಯಸ್ಸು ನಾಲ್ವತ್ತ ನಾಲ್ಕು. ಇಂದಿರಾ ಅವರು ಆಗ ಅಜ್ಜಿಯೂ ಆಗಿಬಿಟ್ಟಿದ್ದರು. ಹೌದು, ಅವರಿಗೆ ಒಂದು ಮೊಮ್ಮಗು ಆದಮೇಲೆಯೇ ಅವರು ಬರವಣಿಗೆ ಪ್ರಾರಂಭಿಸಿದ್ದು.

ಹಾಗೆ ಅವರು ಬರೆದ ಮೊದಲ ಬರಹಕ್ಕೆ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರ ಪ್ರಶಂಸೆಯ ಮುನ್ನುಡಿ. ಪ್ರಕಟವಾದದ್ದು ಪ್ರಸಿದ್ಧ ಪ್ರಕಟಣಾ ಸಂಸ್ಥೆ, ಧಾರವಾಡದ ಮನೋಹರ ಗ್ರಂಥಮಾಲೆಯಿಂದ ; ಜಿ. ಬಿ. ಜೋಶಿ ಯವರಿಂದ.

ಹೀಗೆ ಮೊದಲ ಬರವಣಿಗೆಯಲ್ಲಿಯೇ ಖ್ಯಾತಿಯನ್ನು ಗಳಿಸಿದ ಲೇಖಕಿಯೇ ಎಂ.ಕೆ. ಇಂದಿರಾ. ಕನ್ನಡದ ಲೇಖಕ ಲೇಖಕಿಯರಲ್ಲಿ ಇಷ್ಟು ವಿಳಂಬವಾಗಿ ಬರವಣಿಗೆಯನ್ನು ಪ್ರಾರಂಭಿಸಿ, ಬಹಳ ಬೇಗ ಪ್ರಸಿದ್ಧಿಯನ್ನು ಪಡೆದದ್ದು ಇಂದಿರಾ ಅವರೊಬ್ಬರೇ ಎಂದು ಧಾರಾಳವಾಗಿ ಹೇಳಬಹುದು.

ಲೇಖಕಿಯರಲ್ಲಿ ಇನ್ನೂ ಹೆಚ್ಚಿನ ಕಾದಂಬರಿಗಳನ್ನು ಬರೆದವರು ಇದ್ದಾರು— ನಮ್ಮಲ್ಲಿ, ಈಗಿನ ಪೀಳಿಗೆಯವರಲ್ಲಿ. ಆದರೆ ಇಂದಿರಾ, ತ್ರಿವೇಣಿ, ಅನುಪಮಾ ರವರ ಹಾಗೆ ಮೌಲ್ಯವುಳ್ಳ ಬರಹಗಳನ್ನು ಬರೆದಿರುವವರು ಮಾತ್ರ ತೀರಾ ವಿರಳ.

ಇನ್ನೊಂದು ವಿಶೇಷವೆಂದರೆ ಇಂದಿರಾ ಅವರ ಮೊದಲನೆಯ ಕಾದಂಬರಿ 'ತುಂಗಭದ್ರ' ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ., ಬಿ.ಎಸ್‌ಸಿ. ಮತ್ತು ಬಿ.ಕಾಂ. ತರಗತಿಗಳಿಗೆ ಪಠ್ಯ ಪುಸ್ತಕವೂ ಆಗಿತ್ತು. ಇಂಗ್ಲಿಷ್ ಬಾರದೆ ಇಂಗ್ಲಿಷ್ ವಿದ್ಯಾಭ್ಯಾಸ ಮಾಡದೆ ಕೇವಲ ಪ್ರಾಥಮಿಕ ವಿದ್ಯಾಭ್ಯಾಸವನ್ನಷ್ಟೆ ಪೂರೈಸಿರುವ ಒಬ್ಬ ಲೇಖಕಿಯ ಒಂದು ಕೃತಿ ಪಠ್ಯಪುಸ್ತಕವಾಗಿರುವುದು ಇಂದಿರಾ ಅವರೊಬ್ಬರದೇ.

ನಮ್ಮ ಯಾವ ಲೇಖಕನ ಅಥವಾ ಲೇಖಕಿಯ ಮೊದಲ ಕಾದಂಬರಿ ವಿಶ್ವ ವಿದ್ಯಾನಿಲಯದ ಪಠ್ಯವಾಗಿದೆ ? ಇದರಿಂದಲೇ ಅವರ ಕೃತಿಯನ್ನು ಕೃತಿಯ ಮಹತ್ವ ವನ್ನು ನಾವು ತಿಳಿದುಕೊಳ್ಳಬಹುದಾಗಿದೆ.

ಐವತ್ತು ಕಾದಂಬರಿಗಳು, ಹತ್ತು ಹನ್ನೆರಡು ಕಥಾ ಸಂಕಲನಗಳು, ನೂರಾರು ಕಥೆಗಳ ಕರ್ತೃವಾದ ಇಂದಿರಾ ಜನಪ್ರಿಯರ ಸಾಲಿನಲ್ಲಿ ಮುಖ್ಯರಾದವರು. ಪಠ್ಯ

ಪುಸ್ತಕವಲ್ಲದೆ ಫಣಿಯಮ್ಮ, ಗೆಜ್ಜೆಪೂಜೆ—ಮುಂತಾದ ಅವರ ಕಾದಂಬರಿಗಳು ಚಲನಚಿತ್ರಗಳಾಗಿಯೂ ಪ್ರಸಿದ್ಧಿಯನ್ನು ಪಡೆದಿವೆ. ಅವರ ಕೆಲವು ಕೃತಿಗಳು ತೆಲುಗು, ಮಲೆಯಾಳ, ಇಂಗ್ಲಿಷ್ ಭಾಷೆಗಳಿಗೂ ಅನುವಾದಗೊಂಡಿವೆ.

ಇಂದಿರಾ ಅವರಿಗೆ ಈಗ ಇಳಿವಯಸ್ಸು, ಆ ಕಾಲದ ಹೆಣ್ಣು ಮಕ್ಕಳ ರೀತಿ ನೀತಿ, ಸಂಪ್ರದಾಯಗಳಿಗೆ ಅನುಗುಣವಾಗಿ ಹನ್ನೆರಡನೆಯ ವಯಸ್ಸಿಗೇ ಮದುವೆಯಾದವರು. ಹೆಚ್ಚು ಕಡಿಮೆ ಅದು ಬಾಲ್ಯ ವಿವಾಹವೇ. ತಮ್ಮ ಹದಿನೇಳನೆಯ ವಯಸ್ಸಿಗೆ ಗಂಡನ ಮನೆಗೆ ಹೋದವರು. ಪತಿಯ ಮನೆಗೆ ಕಾಲಿಟ್ಟ ಒಡನೆಯೇ ಒಂದು ಮಗುವಿನ ತಾಯಿ. ಎಂದರೆ ಆಗ ಅವರಿಗೆ ವಯಸ್ಸು ಹದಿನೆಂಟು. ಒಟ್ಟು ಅವರು ಎಂಟು ಮಕ್ಕಳ ತಾಯಿ ; ಗೃಹಿಣಿ.

ಹೀಗೆ ಅವರು ತುಂಬಿದ ಸಂಸಾರದಲ್ಲಿ, ವಾತಾವರಣದಲ್ಲಿ ಬೆಳೆದು ಇಷ್ಟೊಂದು ಸಂಖ್ಯೆಯಲ್ಲಿ ಕೃತಿರಚನೆ ಮಾಡಿದ್ದಾರೆಂದರೆ ಅವರ ಸಾಧನೆಗೆ ಯಾರೂ ಬೆರಗಾಗಬೇಕಾದದ್ದೇ ; ಮಣಿಯ ಬೇಕಾದದ್ದೇ.

ಶಾಲಾ ವಿದ್ಯಾಭ್ಯಾಸ ಹೆಚ್ಚಿಗೆ ಇಲ್ಲದಿದ್ದರೂ ಇಂಥ ದೈತ್ಯ ಬರವಣಿಗೆಯ ರಚನೆ ಇಂದಿರಾ ಅವರಿಗೆ ಹೇಗೆ ಸಾಧ್ಯವಾಯಿತು ? ಸ್ಫೂರ್ತಿ ಎಲ್ಲಿಂದ ಬಂತು ?

ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡಬಹುದು.

ಮಗು–ಅಕ್ಷರ–ವ್ಯಾಕರಣ ಕಲಿಯುವುದಕ್ಕೆ ಮೊದಲು ತನ್ನ ಭಾಷೆಯನ್ನು ಕಲಿತು ಬಿಡುತ್ತದೆ, ಯಾರೂ ಹೇಳಿಕೊಡದೆ. ಅದು ಶಾಲೆಗೆ ಹೋಗುವುದರೊಳಗಾಗಿ ಚೆನ್ನಾಗಿ ಮಾತಾಡಲು ಕಲಿತು ಆಮೇಲಷ್ಟೆ ಅಕ್ಷರಗಳ ಕಸರತ್ತಿಗೆ ತೊಡಗುತ್ತದೆ.

ಇಂದಿರಾ ಅವರ ವಿಷಯವೂ ಹಾಗೆಯೇ. ಅವರಲ್ಲಿ ಮೂಲ ಪ್ರತಿಭೆ ಎನ್ನುವುದು ಯಥೇಚ್ಛವಾಗಿತ್ತು. ನದಿಗಳ ಉಗಮದ ಹಾಗೆ. ಈ ಪ್ರತಿಭೆಯನ್ನು ಬಹಿರಂಗಗೊಳಿಸಲು ನನ್ನಿಂದ ಸಾಧ್ಯವಿದೆ ಎಂದು ಅವರು ಧೈರ್ಯಮಾಡಿದಾಗ ಕೃತಿರಚನೆ ಪ್ರಾರಂಭವಾಯಿತು. ವ್ಯಾಕರಣ, ಬರೆಯುವ ರೀತಿನೀತಿಗಳು, ಚಮತ್ಕಾರಗಳು ಮುಂತಾದವು ಬರೆಯುತ್ತ ಬರೆಯುತ್ತ, ಪಕ್ವಗೊಳ್ಳುತ್ತದಷ್ಟೆ. 'ನಾನು ಬರೆಯಬಲ್ಲೆ ಬರೆಯುತ್ತೇನೆ' ಎನ್ನುವ ಹಟ ಸಾಧನೆಯನ್ನು ಮನಸ್ಸಿಗೆ ತುಂಬಿಕೊಂಡರೆ, ಮೂಲ ಪ್ರತಿಭೆ ಇದ್ದರೆ ಮಾತ್ರ ಸಾಧನೆಯನ್ನು ಸಾಧಿಸಬಹುದು.

ಇಂದಿರಾ ಅವರ ಬರವಣಿಗೆಯ ಯಶಸ್ಸಿನ ಗುಟ್ಟು - ಈ ಛಲದ್ದು. ಅದ ರೊಳಗೆ ಅದ್ಭುತವೂ ಅಗಾಧವೂ ಆದ ಪ್ರತಿಭೆಯ ಸೆಲೆ. ಅದನ್ನು ಅವರು ಧೈರ್ಯ ಮಾಡಿ ಸಾರ್ಥಕವಾಗಿ ಬಳಸಿಕೊಂಡರು.

ನನಗೆ ಶಾಲಾ ವಿದ್ಯಾಭ್ಯಾಸವಿಲ್ಲ, ಬರೆದರೆ ಹೇಗೋ ಏನೋ ಎನ್ನುವ ಅಳುಕು, ಕೀಳರಿಮೆಗಳಿಗೆ ಅವರು ಕೊಡಲಿ ಪೆಟ್ಟು ಹಾಕಿದರು. ಎಲ್ಲರ ಸಮಸಮ ನಾನು ಬರೆಯಬಲ್ಲೆ ಎಂದು ಧೈರ್ಯ ತುಂಬಿಕೊಂಡರು; ಬರವಣಿಗೆ ಪ್ರಾರಂಭಿ ಸಿದರು. ಇದೇ ಅವರ ಯಶಸ್ಸಿನ ಗುಟ್ಟು.

ಆದರೆ ಬರವಣಿಗೆಗೆ ಮೂಲ ಪ್ರತಿಭೆ ಒಂದಿದ್ದರೆ ಸಾಲದು! ವಾತಾವರಣವೂ ಅನುಕೂಲವಾಗಿರಬೇಕು. ಪ್ರೋತ್ಸಾಹವೂ ಸಿಗಬೇಕು.

ತ್ರಿವೇಣಿಯವರ ಹಾಗೆಯೇ ಇಂದಿರಾ ಅವರ ಪತಿ ಕೃಷ್ಣರಾವ್ ಸಹ 'ನನ್ನ ಹೆಂಡತಿ ಬರೆಯುತ್ತಾಳೆ' ಎನ್ನುವ ಅಭಿಮಾನದಿಂದ ಸತತ ಪ್ರೋತ್ಸಾಹ ನೀಡಿದರು. ಇದು ಬಹಳ ಮುಖ್ಯವಾದದ್ದು. ಹೀಗಾಗಿ ಅವರ ಪ್ರತಿಭೆ ತಾನೇ ತಾನಾಗಿ ಅರಳಿ ಹರಡಿಕೊಂಡಿತು.

ಬರವಣಿಗೆಯನ್ನು ಇಂದಿರಾ ವಿಳಂಬವಾಗಿ ಪ್ರಾರಂಭಿಸಿದರೂ ಅವರ ಮನೆ ಯಲ್ಲಿ ಸಾಹಿತ್ಯದ ವಾತಾವರಣ ಇದ್ದೇ ಇತ್ತು. ಬಾಲ್ಯದಲ್ಲಿ ಯಕ್ಷಗಾನ, ನಾಟಕ - ಇಂಥವುಗಳ ಪ್ರಭಾವ: ಮಲೆನಾಡಿನ ತೀರ್ಥಹಳ್ಳಿಯಲ್ಲಿ ಜನಿಸಿದ್ದರಿಂದ ನಿಸರ್ಗ ದೊಂದಿಗೆ ಬಾಂಧವ್ಯ; ಒಡನಾಟ ಇವುಗಳೆಲ್ಲವೂ ಅವರ ಬರವಣಿಗೆಗೆ ಪ್ರೇರಕ. ಅಷ್ಟೇ ಅಲ್ಲ. ಹೊಯ್ಸಳ, ಡಾ. ಎಚ್. ಕೆ. ರಂಗನಾಥ್ ಮುಂತಾದವರು ಅವರ ಬಂಧುಗಳು. 'ಪ್ರಜಾವಾಣಿ'ಯ ಸಂಪಾದಕ ಟಿ.ಎಸ್. ರಾಮಚಂದ್ರರಾವ್ ಅವರ ಒಬ್ಬ ತಮ್ಮ. ಹೀಗೆ ಅವರದು ಪ್ರತಿಭಾವಂತ ಮನೆತನ.

ಅಷ್ಟಲ್ಲದೆ ಇಂದಿರಾ ಮಂಡ್ಯದಲ್ಲಿ ಇದ್ದಾಗ ತ್ರಿವೇಣಿಯವರು 'ನೀನೂ ಕಾದಂಬರಿ ಬರೆ' ಎಂದು ಅವರನ್ನು ಹುರಿದುಂಬಿಸಿದರು. ಹೀಗಾಗಿ ಅವರಿಗೆ ಕ್ರಮೇಣ ಧೈರ್ಯ ಬಂದು ಬರವಣಿಗೆ ಪ್ರಾರಂಭಿಸಿಬಿಟ್ಟರು.

ಇಂದಿರಾ ಅವರು ಬರೆದದ್ದೆಲ್ಲವೂ ಗಟ್ಟಿ ಅಲ್ಲ – ನಿಜ. ಹಾಗೆ ಹೇಳಿದರೆ ಅದು ಉತ್ಪ್ರೇಕ್ಷೆಯೂ ಆಗುತ್ತದೆ. ಜನಪ್ರಿಯ ಎನಿಸಿಕೊಳ್ಳುವವರು ವೇಗದ

ಬರವಣಿಗೆಯನ್ನು ಬರೆಯಬೇಕಾಗುತ್ತದೆ. ಒಂದರಮೇಲೆ ಒಂದರಂತೆ ಬರೆಯುವವನೇ ಜನಪ್ರಿಯ ಆಗುತ್ತಾನೆ ಅಥವಾ ಆಗುತ್ತಾಳೆ. ಹಾಗೆ ಬರವಣಿಗೆಯಲ್ಲಿ 'ವೇಗ' ಹೆಚ್ಚಿದೊಡನೆ ಮೌಲ್ಯ ಕಡಿಮೆಯಾಗುವುದು ಸಹಜ. ಇದು ಜಗತ್ತಿನ ಎಲ್ಲ ಭಾಷೆಗಳ ಲೇಖಕ ಲೇಖಕಿಯರಿಗೂ ಅನ್ವಯಿಸುವ ಮಾತು.

ಆದರೆ ಇಂದಿರಾ ಅವರು ಮೌಲ್ಯವುಳ್ಳ ಕಾದಂಬರಿಗಳನ್ನೂ ಬರೆದಿದ್ದಾರೆ. ತುಂಗಭದ್ರ ಅಲ್ಲದೆ ಸದಾನಂದ, ಗಿರಿಬಾಲೆ, ಫಣಿಯಮ್ಮ, ಗೆಜ್ಜೆಪೂಜೆ-ಮುಂತಾದವು ಶ್ರೇಷ್ಠ ಕಾದಂಬರಿಗಳೇ ಆಗಿವೆ. ಕುರ್ತಕೋಟಿಯವರು ಹೇಳುವಂತೆ ಕಥನಮಾರ್ಗ ತೀರಾ ಸರಳವಾಗಿ, ಯಾವ ಘಟನೆಯೂ ಅನವಶ್ಯಕವಾಗಿ ಬೆಳೆಯದೆ, ನಡೆಯುವ ಘಟನೆಗಳು ಎಲ್ಲವೂ ಆಯಾ ಕಾದಂಬರಿಗಳ ಪಾತ್ರಗಳ ಮೇಲೆ ಒಂದಿಲ್ಲೊಂದು ರೀತಿಯಿಂದ ಪ್ರಭಾವವನ್ನು ಬೀರಿ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತವೆ.

ಆದರೂ ಇಂಥ ಕೃತಿಗಳ ಬಗ್ಗೆ ಸಾಹಿತ್ಯಿಕ ಚರ್ಚೆಗಳಲ್ಲಿ ನಮ್ಮ ವಿಮರ್ಶಕರು ಯಾಕೆ ಒಂದು ಒಳ್ಳೆಯ ಮಾತು ಆಡುವುದಿಲ್ಲ ? ತಮ್ಮವರದನ್ನೇ ಹೊಗಳಿ ಹೊಗಳಿ ಹೊನ್ನಶೂಲಕ್ಕೆ ಏರಿಸಲಿ ಅಡ್ಡಿಯಿಲ್ಲ. ಆದರೆ ಬೇರೆಯವರು ಮಾಡಿದ ಒಳ್ಳೆಯ ಕೆಲಸಗಳಿಗೂ ಒಂದು ಮೆಚ್ಚಿಕೆಯ ಮಾತು ಆಡಬಾರದೆ ? ಔದಾರ್ಯಕ್ಕೂ ಬರವೆ ?

ಇಂದಿರಾ ಅವರ ಕೆಲವು ಕೃತಿಗಳಲ್ಲಿ ಯಾರೂ ಮೆಚ್ಚಬೇಕಾದ ಅಂಶಗಳಿವೆ. ಇದು ಸತ್ಯ.

ಯಾರು ಮೆಚ್ಚಲಿ ಮೆಚ್ಚದಿರಲಿ ಹೊಗಳಲಿ ಬಿಡಲಿ, ಇಂದಿರಾ ಅವರು ಒಬ್ಬ ಗೃಹಿಣಿಯಾಗಿ, ಮಧ್ಯ ವಯಸ್ಸಿನಲ್ಲಿ ಬರವಣಿಗೆಯನ್ನು ಪ್ರಾರಂಭಿಸಿ, ಅಗಾಧ ಸಾಧನೆ ಮಾಡಿದ್ದಾರೆ. ಇದು ನಿಜ. ಅವರ ಕಾದಂಬರಿಗಳು ಚಲನಚಿತ್ರಗಳಾಗಿವೆ. ಪಠ್ಯ ಪುಸ್ತಕವಾಗಿವೆ. ಬೇರೆ ಭಾಷೆಗಳಿಗೆ ಭಾಷಾಂತರಗೊಂಡಿವೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಪುರಸ್ಕಾರವೂ ಲಭಿಸಿದೆ. ಸಂಘ ಸಂಸ್ಥೆಗಳು ಅವರನ್ನು ಗೌರವಿಸಿದೆ. ನಮ್ಮ ಜನ ತಮ್ಮ ಪ್ರೀತಿಯನ್ನೂ ಅಭಿಮಾನವನ್ನೂ ಅವರಲ್ಲಿ ವ್ಯಕ್ತಪಡಿಸಿದ್ದಾರೆ.

ಎಲ್ಲರ ಬಾಳಿನಲ್ಲಿ ಬದುಕಿನಲ್ಲಿ ಸುಖದುಃಖಗಳು ಇದ್ದೇ ಇರುತ್ತವೆ. ಕೌಟುಂಬಿಕ ವಾಗಿ ; ಆರ್ಥಿಕವಾಗಿ ; ಇನ್ನೇನೋ ಕಾರಣಗಳಿಗಾಗಿ. ಆದರೆ ಅದು ಮುಖ್ಯ ಅಲ್ಲ.

ಕನ್ನಡದ ಪ್ರತಿಷ್ಠಿತರ ಸಾಲಿನಲ್ಲಿ ಲೇಖಕ ವೃಂದದಲ್ಲಿ ಅವರೂ ಒಂದು ನಕ್ಷತ್ರ

ವಾಗಿ ಮಿಂಚಿದ್ದಾರೆ. ಅದಕ್ಕಾಗಿ ತುಂಬಾ ಶ್ರಮಿಸಿದ್ದಾರೆ. ಇದೇ ಅವರ ಸಾಧನೆ; ಗೆಲುವು-ಯಶಸ್ಸು.

ಈಗ ಇಂದಿರಾ ತಮ್ಮ ಆತ್ಮ ಚರಿತ್ರೆಯ ಬರಹದಲ್ಲಿ ತೊಡಗಿದ್ದಾರೆ. ಅದಕ್ಕೆ 'ಬಿಂದು' ಎಂದು ಹೆಸರಿಟ್ಟಿದ್ದಾರೆ. ಈ ಬರಹ ಸಾವಿರ ಪುಟಗಳಾಗುತ್ತದಂತೆ. ಆ ಕೃತಿ ಸಮರ್ಥವಾಗಿ ಹೊರಬರಲಿ ಎಂದು ನಾವು ಆಶಿಸೋಣ.

"ನಮ್ಮ ಫಣಿ ಅಂತ ಹೆಣ್ಣು ಕಲಿಯುಗದಾಗೆ ಸುಮಾರು ಬ್ಯಾರೆ ಎಲ್ಲೂ ಹುಟ್ಟಿರೂಕಿಲ್ಲ, ಅವಳಂಥ ಬಾಳು ಯಾರಿಗೂ ಬಂದಿರೂಕೂ ಇಲ್ಲ. ಕಲಿಯುಗದಾಗೇನು ಪುರಾಣ ಕಾಲದಾಗೂ ಇರೂಕೆ ಸಾಧ್ಯ ಇಲ್ಲ. ರಾಮಾಯಣ, ಮಹಾಭಾರತ, ಭಾಗವತ ಯಾವುದರಾಗೆ ಇಂಥ ಒಂದು ಹೆಣ್ಣಿನ ಕಥೆ ಇದೆ ? ಯಾರಾದ್ರೂ ಋಷಿಯ ಶಾಪದಿಂದ ಹುಟ್ಟಿ ಬಂದಿದಾಳೋ ಏನೋ - ಅದನ್ನೇ ಸವಸ್ತಾ ಅದಾಳೆ."

(ಫಣಿಯಮ್ಮ - ಪುಟ-112)

ಜನಸಾಮಾನ್ಯರ ಲೇಖಕಿ

○

○

○ ಜ್ಯೋತ್ಸ್ನಾ ಕಾಮತ್

ಬಡವರ ಸಾಹಿತ್ಯವನ್ನು ಬಡವರೇ ಬರೆಯಬೇಕು ಎಂಬ ವಾದವನ್ನು ಒಪ್ಪಿಕೊಳ್ಳಲಾಗದಿದ್ದರೂ, ಅವರ ನೋವು, ಕಷ್ಟಗಳನ್ನು ಕೆಲಮಟ್ಟಿಗೆ ಅನುಭವಿಸಿದವರು, ಇಲ್ಲವೇ ಅದನ್ನು ನಿಕಟವಾಗಿ ಪರಿಚಯಿಸಿ ಕೊಂಡಾಗಲೇ ಬರೆದ ಕೃತಿಗಳು ಗಟ್ಟಿಯಾಗಬಲ್ಲವು, ಎಂಬ ಮಾತು ನಿಜ. ಆದರೆ ಜೀವನದ ನಿಕಟತೆಯನ್ನು ಅರಗಿಸಿಕೊಂಡು ತೂಕದ ಸಾಹಿತ್ಯ ರಚಿಸಿದ ಲೇಖಕಿಯರು ಕನ್ನಡದಲ್ಲಿ ವಿರಳರಾಗಿರುವದು ಶೋಚನೀಯ. ಹೆಚ್ಚಿನ ಬರಹಗಾರ್ತಿಯರ ಸಮಯ ಮನೆ-ಮಕ್ಕಳು ಊಟ-ಉಪಚಾರ, ಮುಂಜಿ-ಮದುವೆ ಉಡುಗೊರೆ-ಭೇಟಿ, ಸಾಮಾಜಿಕ ಜೀವನ, ದೂರದರ್ಶನ-ಚಲಚ್ಚಿತ್ರ ವೀಕ್ಷಣೆಗಳಂತಹ ಚಟುವಟಿಕೆಗಳಲ್ಲಿ ಕಳೆಯುವುರಿಂದ ಚಿಂತನಕ್ಕೆ ಅವಕಾಶವೆಲ್ಲಿ ? ನಮ್ಮಲ್ಲಿ ಬಹುಸಂಖ್ಯಾತ ಲೇಖಕಿಯರು ನಗರವಾಸಿಗಳು. ಕೆಲವರಿಗಂತೂ ಕೊಡವರು, ಕೊಂಕಣಿಗರು, ಘಟ್ಟದ ಮೇಲಿನವರು ಮತ್ತು ಕೆಳಗಿನ ವರು, ವನವಾಸಿಗಳು, ನಾಗರಿಕ ಗಿರಿಜನರಲ್ಲಿ ಇರುವ ಅಂತರವನ್ನು ಗುರುತಿಸಲಾಗುವದಿಲ್ಲ. ಇಂಥವರಿಗೆ ನದಿ, ಹೊಳೆ-ಕೊಳ್ಳ, ಜಲಪಾತ, ಕಾಡು, ಪರಿಸರ, ಶಿಲ್ಪ-ಕಲೆಯ ತಾಣಗಳು ಬರೇ ಪಿಕ್‌ನಿಕ್ ಮತ್ತು ಮೋಜಿನ ತಾಣಗಳು. ಜನಸಾಮಾನ್ಯರ ಆಸೆ-ಆಕಾಂಕ್ಷೆಗಳು, ವೇಷ-ಭೂಷಣ- ಸಂಪ್ರದಾಯಗಳು, ಮೂಢ ನಂಬಿಕೆಗಳು, ಜೀವನಕ್ರಮ ಮೊದಲಾದವು ಹೆಚ್ಚಿನವರಿಗೆ ಅನಾಕರ್ಷಕ. ಜೀವನಾನುಭವಗಳ ಕೊರತೆಯಿದ್ದಲ್ಲಿ ವ್ಯಾಪಕ ಓದು, ಆಳವಾದ ಅಧ್ಯಯನವಾದರೂ ಇರ ಬೇಕು. ಆದರೆ ಔಪಚಾರಿಕ ಕಾಲೇಜು ಶಿಕ್ಷಣ, ಪರೀಕ್ಷೆಗೆ ಓದು-ಡಿಗ್ರಿ ಪಡೆದವರಿಗೆ ಸಾಹಿತ್ಯಾಭ್ಯಾಸ ಅನವಶ್ಯಕವೆನಿಸುವದೂ ಉಂಟು.

ಅಂತೆಯೇ ಚಲಚ್ಚಿತ್ರಗಳ ಕಥಾಲೋಕ, ಫ್ಯಾಶನ್ ಸಂಚಿಕೆಗಳು, ನಿಯತಕಾಲಿಕಗಳ ಕಥೆ ಧಾರಾವಾಹಿಗಳೇ ಅವರ ಬರವಣಿಗೆಗೆ ಸ್ಫೂರ್ತಿ ಹಾಗೂ ಮೂಲ ಸಾಮಗ್ರಿಯಾಗಿದ್ದರೆ ಆಶ್ಚರ್ಯವಿಲ್ಲ. ಚಲಚ್ಚಿತ್ರಕ್ಕಾಗಿಯೇ ಕಥೆ-ಕಾದಂಬರಿ ಬರೆದ ಪರಿಪ್ಟಾರೆ. ಸ್ವಾಭಾವಿಕವಾಗಿಯೇ ಪರಿಮಿತಿಗಳ ನಡುವೆ ಇದ್ದವರು, ಮಾನಸಿಕವಾಗಿ ಬೆಳೆಯುವುದಕ್ಕಾಗಿ ಹೆಚ್ಚಿನ ಶ್ರಮ ಮಾಡಬೇಕಾಗುತ್ತದೆ. ದಿಡೀರ್ ಖ್ಯಾತಿ, ಬರೆಹದ ಜಗತ್ತಿನಲ್ಲಿ ಸಹಸಾ ಬರಲಾರದು.

ಕೇವಲ ಕಲ್ಪನಾಶಕ್ತಿಯಿಂದಲೇ ನೋಡದ ಜೀವನ, ಅರಿಯದ ಪರಿಸರವನ್ನು ಚಿತ್ರಿಸುವುದು ಅಸಾಧ್ಯ. ಆದರೆ ತುಂಗಭದ್ರಾ ನದಿಯನ್ನು ಒಮ್ಮೆಯೂ ನೋಡದದವರು, ಅದನ್ನು ಕಾದಂಬರಿಯಲ್ಲಿ ವರ್ಣಿಸಿದವರು, ಕಾರಿನಲ್ಲಿ ಕೊಳಚೆ ಪ್ರದೇಶ ಮುಖಾಂತರ ಹಾದುಹೋಗಿಯೇ ಅವರ ಜೀವನ ಕುರಿತು ಕಾದಂಬರಿಯನ್ನು ಬರೆದವರು ನಮ್ಮಲ್ಲಿ ಇಲ್ಲದಿಲ್ಲ. ಅದೇ ಯೇಸುಕ್ರಿಸ್ತನ ನಿಕಟ ಶಿಷ್ಯ ಸಂತ ಜಾನನ ಕುರಿತು ಪ್ರಸಿದ್ಧ ಕಾದಂಬರಿ ಬರೆದ ಅಮೇರಿಕನ್ ಲೇಖಕಿಯೊಬ್ಬಳು, ಸುಮಾರು 1000 ಪುಸ್ತಕಗಳನ್ನು, ಲೆಕ್ಕವಿಲ್ಲದಷ್ಟು ಲೇಖನಗಳನ್ನು ಕಾದಂಬರಿ ಬರವಣಿಗೆಗೆ ಪೂರ್ವಭಾವಿಯಾಗಿ ಅಧ್ಯಯನ ಮಾಡಿದ್ದಾಗಿ ಹೇಳಿಕೊಂಡಿದ್ದಾಳೆ. ಸರ್ವಕಾಲೀನ ಶ್ರೇಷ್ಠ ಶಿಲ್ಪಿಯೆಂದು ಹೆಸರುವಾಸಿಯಾದ ಮೈಕೇಲ್ ಏಂಜೆಲೊನ ಜೀವನ ಚರಿತ್ರೆಯ ಆಧಾರಿತ ಕಾದಂಬರಿ ಬರೆಯಲು ಅಮೇರಿಕನ್ ಕಾದಂಬರಿಕಾರ ಇರ್ವಿನ್ ಸ್ಟೋನ್ ಅವರು ಇಟಾಲಿಯನ್ ಕಲಿತು, 6 ವರ್ಷಕಾಲ ಇಟಲಿಯಲ್ಲಿ ಸಂಚರಿಸಿ ಸಂಗಮರವರಿ ಕಲ್ಲಿನ ಗಣಿಗಳಲ್ಲಿ ಕೂಲಿಕಾರರೊಡನೆ ಜೀವಿಸಿ ಅನುಭವ ಪಡೆದಿದ್ದರು. ಅವರೇ ಡಚ್ ಚಿತ್ರಕಾರ ವಿನ್ಸೆಂಟ್ ವ್ಯಾನಗೋನ ಜೀವನಚರಿತ್ರೆ ಆಧರಿಸಿ ಬರೆದ ಕಾದಂಬರಿಗೂ ಅಷ್ಟೇ ಕಷ್ಟಪಟ್ಟಿದ್ದಾರೆ. ಇಂಥ ಸಾಹಸ ನಮ್ಮನಾಡಿನ ಬರಹಗಾರರಲ್ಲಿ ಇಲ್ಲವೇ ಇಲ್ಲವೆಂದರೆ ಅಚ್ಚರಿಪಡಬೇಕಾಗಿಲ್ಲ. ಬರಹಕ್ಕೆ ಮೂಲ ಸಾಮಗ್ರಿ ಅಧ್ಯಯನವೆಂದರೆ ಎಷ್ಟೋ ಲೇಖಕಿಯರು ಒಪ್ಪುತ್ತಾರೋ ಇಲ್ಲವೋ !

ಶಿವರಾಮ ಕಾರಂತ, ಕುವೆಂಪು, ಮಾಸ್ತಿ, ಚದುರಂಗ, ಭೈರಪ್ಪ ಮೊದಲಾದವರು ಜನಸಾಮಾನ್ಯರ ಜೀವನ ಆಧರಿಸಿ ಸಮರ್ಪಕ ಸಾಹಿತ್ಯ ಸೃಷ್ಟಿಸಿದ್ದಾರೆ. ಲೇಖಕಿಯರಲ್ಲಿ ಎಂ. ಕೆ. ಇಂದಿರಾ ಈ ಸಾಲಿಗೆ ಬರುತ್ತಾರೆ. ಅವರು ಹುಟ್ಟಿದ್ದು ಶಿವಮೊಗ್ಗ ಜಿಲ್ಲೆಯ ಸಣ್ಣ ಹಳ್ಳಿಯೊಂದರಲ್ಲಿ. ಜೀವನದ ಉದ್ದಕ್ಕೂ ಬಡತನ ಕಂಡಿದ್ದಾರೆ. ಅದರ ನೋವು–ನಲಿವಿಗೆ ಮಿಡಿದಿದ್ದಾರೆ. ಜನಸಾಮಾನ್ಯರೊಂದಿಗೆ ಬೆರೆತಿದ್ದಾರೆ. ತಾವು ಕಂಡದ್ದನ್ನು ಅನುಭವಿಸಿದ್ದನ್ನು ಓದುಗರಿಗೆ ಸಾಹಿತ್ಯ ರೂಪದಲ್ಲಿ ಕೊಡಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ. ಸಾಮಾನ್ಯರ ಸಾಹಿತ್ಯವನ್ನೇ

ಸೃಷ್ಟಿಸಿದ್ದಾರೆ. ಅವರ ಪ್ರಥಮ ಕಾದಂಬರಿಯೇ ಮಲೆನಾಡಿನ ಜೀವಾಳದಂತಿದ್ದ 'ತುಂಗ-ಭದ್ರ'. ಈ ಕೃತಿಯಲ್ಲಿಯೇ ಓದುಗ–ವಿಮರ್ಶಕರಿಗೆ ಬರೆಹಗಾತಿ ಮುಂದೆ ಹೆಮ್ಮರವಾಗಿ ಬೆಳೆಯಲಿರುವ ಸಂಕೇತ ಸಿಕ್ಕಂತಾಯಿತು. ಕಲ್ಪನಾಲೋಕದ ಪಾತ್ರಗಳನ್ನು ಸೃಷ್ಟಿಸದೇ ಪ್ರತಿದಿನವೂ ಯಾರಾದರೂ ನೋಡಬಹುದಾದ, ವ್ಯವಹರಿಸಬಹುದಾದ ವ್ಯಕ್ತಿಗಳನ್ನೇ ತೂಗಿ ನೋಡಿ, ಮಾನವ ಸ್ವಭಾವವನ್ನು ಆಳವಾಗಿ ಅರಿತುಕೊಂಡು ಆಕರ್ಷಕವಾಗಿ ಮೂಡಿಸಲು ಯತ್ನಿಸಿದ್ದಾರೆ. ವಾಸ್ತವಿಕ ವ್ಯಕ್ತಿ, ಘಟನೆಗಳನ್ನು ಹೆಣೆಯಲು ಕಲ್ಪನೆಯ ಸೇತು ನಿರ್ಮಿಸುವುದು ಅವರ ವೈಶಿಷ್ಟ್ಯ. ಹೀಗಾಗಿ ನಡೆದ ಘಟನೆಗಳನ್ನೇ ವಿವರಿಸುತ್ತಾರೆಯೇ ! ಎಂದು ಅನಿಸುವದು ಸಹಜ. ಫಣಿಯಮ್ಮ ಈ ಭೂಮಿಯ ಮೇಲೆ ಬಾಳಿ ಬದುಕಿ ಅವರು ಅತ್ಯಂತ ಸಮೀಪದಿಂದ ಕಂಡ ವ್ಯಕ್ತಿಯೇ. ಆದರೆ ತಮ್ಮ ಕಲಾಕೌಶಲ್ಯದಿಂದ ಓದುಗರ ಮನಸ್ಸಿನಲ್ಲಿ ಸದಾ ಬೇರೂರಿ ನಿಲ್ಲುವಂತೆ ಚಿತ್ರಣ ಮಾಡಿದ್ದಾರೆ. ಇನ್ನಿತರ ಖ್ಯಾತ ಬರಹಗಾರರಂತೆ ಇಂದಿರಾ ಕೂಡ ಓದುಗರ, ಪ್ರಕಾಶಕರ ಒತ್ತಾಯಕ್ಕೆ ಮಣಿದು ಕೆಲವು ಕೃತಿಗಳನ್ನು ರಚಿಸಿದರೂ ಅವು ಟೊಳ್ಳು ಎನ್ನುವಂತಿಲ್ಲ. ಹೋಟೆಲ್ ಊಟದಂತೆ ಎಲ್ಲದಕ್ಕೂ ಒಂದೇ ರುಚಿ ಬಾರದಂತೆ ಎಚ್ಚರವಹಿಸಿ ಪ್ರತಿಯೊಂದು ಕೃತಿಗೂ ಮಲೆನಾಡಿನ ಮನೆಯೂಟದ ರುಚಿ ಬರುವಂತೆ ಶ್ರಮ ಪಟ್ಟಿದ್ದಾರೆ.

ಅರಿತೋ ಅರಿಯದೆಯೋ ಇಂದಿರಾ ಅವರು ಕಥೆ-ಕಾದಂಬರಿಗಳನ್ನು ಹೆಣೆಯುತ್ತ ಹೊರಟಂತೆ, ಸಮಕಾಲೀನ ಜೀವನವನ್ನು ದಾಖಲಿಸುತ್ತ ಹೋಗುತ್ತಾರೆ. ಅರೆ-ಮುಕ್ಕಾಲು ಶತಕದ ಹಿಂದೆ ಎಲ್ಲೆಲ್ಲಿಯೂ ಅವಿಭಾಜ್ಯ ಕುಟುಂಬಗಳೇ ಇದ್ದವು. ಅವುಗಳ ಮುಖ್ಯಸ್ಥರು ಸರ್ವಾಧಿಕಾರಿಯಂತಿರುತ್ತಿದ್ದರು. ಆದರೆ ಈ ಇಡೀಮನೆತನದ ಹೊಣೆಯನ್ನು ನಿಃಸ್ವಾರ್ಥ, ನಿಷ್ಪಕ್ಷಪಾತದಿಂದ ನೋಡಿಕೊಳ್ಳುತ್ತಿದ್ದರಿಂದ, ಮನೆ-ಮಠ-ಗ್ರಾಮಗಳಲ್ಲಿ ಕೂಡ ಅವರಿಗೆ ಹೆಚ್ಚಿನ ಗೌರವ. ಕೆಲವೊಮ್ಮೆ ಹೆಚ್ಚಿನ ಅಧಿಕಾರಗಳು ಸಲ್ಲುತ್ತಿದ್ದವು. ಅಂತೆಯೇ ಪ್ರತಿಯೊಂದು ಮನೆಯಲ್ಲಿ ಅಜ್ಜಿಯಂದಿರು, ಚಿಕ್ಕಮ್ಮ, ದೊಡ್ಡಮ್ಮ, ಸೋದರತ್ತೆಯರು, ಅತ್ತಿಗೆಯರು, ಸೊಸೆಯಂದಿರು, ವಿಧವೆಯಾಗಿ ತವರು ಸೇರಿದವರು ಇರುತ್ತಿದ್ದರು. ದುಡಿತದಲ್ಲಿ ತಾರತಮ್ಯ ತರುವಂತಿರಲಿಲ್ಲ. ಎಣೆಯಿಲ್ಲದೆ ಮನೆಗೆಲಸಗಳನ್ನು ತೂಗಿಸಿಕೊಂಡು ಹೋಗುವದರಲ್ಲಿ ಪರಸ್ಪರ ಸಹಕಾರ ಅತ್ಯಗತ್ಯ. ಪ್ರತಿ ಮನೆಯೂ ಸಂಸಾರ ನಡೆಸುವ ತರಬೇತಿ ಕೇಂದ್ರವಾಗಿ ಮಾರ್ಪಡುತ್ತಿತ್ತು. ಪ್ರತಿಯೊಬ್ಬರಿಗೂ ಅವರವರ ವಯಸ್ಸು, ಯೋಗ್ಯತೆಗನುಸಾರವಾಗಿ ಬೇರೆ ಬೇರೆ ಕೆಲಸ, ಜವಾಬ್ದಾರಿಗಳು. ಹಿರಿಯ ಹೆಂಗಸರು ಮನೆಯ ಎಲ್ಲ ಸದಸ್ಯರಿಗೆ, ಮತ್ತು ಕಾಯಂ ಉಪಸ್ಥಿತರಿರುತ್ತಿದ್ದ ಅತಿಥಿಗಳಿಗೆ ಅಡಿಗೆಯ ನಿರಂತರ ಜವಾಬ್ದಾರಿ ವಹಿಸಿದರೆ ಇಳಿವಯಸ್ಸಿನವರು ತರಕಾರಿ ಹೆಚ್ಚು

ವದು, ತಂಗಿನಕಾಯಿ ತುರಿಯುವುದು, ಮೇಲುಗೆಲಸಗಳಲ್ಲಿ ಸಹಾಯಮಾಡುತ್ತಿದ್ದರು. ಚಿಕ್ಕವಯಸ್ಸಿನವರು ನೀರು ಸೇದುವದು, ಬಟ್ಟೆ ಬರೆ ಸ್ವಚ್ಛಗೊಳಿಸುವದು, ಹಾಲು ಹಿಂಡುವದು, ಮೊಸರು ಕಡೆಯುವದು, ಕೊಟ್ಟಿಗೆಯ ಕೆಲಸ ಮಾಡಿ, ಸಮಯ ದೊರೆತರೆ ಹೂಕಟ್ಟುತ್ತಿದ್ದರು. ಗಂಡಸರು ಹೊಲ-ತೋಟಗಳಲ್ಲಿ ದುಡಿಯುವರು. ಗೃಹ ಕೃತ್ಯಕ್ಕೆ ಸಾಮಾನು ಒದಗಿಸುವರು. ಸಮಯ ಬಂದಾಗ ಕೋರ್ಟು ಕಛೇರಿ ಗಳಿಗೆ ಎಡತಾಕ ಬೇಕಾಗುತ್ತಿತ್ತು.

ಹಬ್ಬ ಹರಿದಿನಗಳಲ್ಲಿ, ಮದುವೆ, ಮುಂಜಿಯ ದಿನಗಳಲ್ಲಿ ಇಡೀ ಹಳ್ಳಿಯೇ ಒಂದು ಕುಟುಂಬವಾಗಿ ಬಿಡುತ್ತದೆ. ಆಗ ಎಲ್ಲವೂ ಸಾಮೂಹಿಕವಾಗಿ ಆಚರಿಸಲ್ಪಡುತ್ತದೆ. ಬಾಳೆ ಎಲೆ ತರುವವರೊಬ್ಬರು, ಬಾಳೇಗೊನೆ ಒದಗಿಸುವವರು ಇನ್ನೊಬ್ಬರು. ತೆಂಗಿನಕಾಯಿ, ಸೌತೆಕಾಯಿ ಮಾವಿನಕಾಯಿಗಳ ರಾಶಿ ಬರುವವು. ಉಪ್ಪಿನಕಾಯಿ, ಹಪ್ಪಳ-ಸಂಡಿಗೆಗಳ ಕಾರ್ಖಾನೆ ಎದ್ದು ಬಿಡುವದು ! ಅಡಿಕೆ ಸುಗ್ಗಿಯ ಕಾಲದಲ್ಲಿ ಗಂಡು ಹೆಣ್ಣೆಂಬ, ಬಡವ ಬಲ್ಲಿದರೆಂಬ ಭೇದಭಾವವಿಲ್ಲದೇ ಮೆಟ್ಟುಗತ್ತಿ ಹಿಡಿದು ಅಡಿಕೆ ಸುಲಿಯಲು ಕುಳಿತು ಬಿಡುವರು. ಕೈಗಳು ಕೆಲಸ ಮಾಡುತ್ತಿದ್ದಂತೆ ಬಾಯಿಗೂ ಬರವಿಲ್ಲ. ಒಗಟು-ಹಾಡುಗಳಿಗೆ ಸದವಕಾಶ. ಕತೆ-ಹಾಸ್ಯಗಳ ಹೊಳೆ. ಆಗಾಗ ಯಕ್ಷಗಾನ ಪ್ರಸಂಗಗಳನ್ನು ಹೊಂದಿಸುವರು. ಅವೇ ಕತೆ-ಅವೇ ಪಾತ್ರಗಳು. ಆಡುವವರಿಗೂ ಬೇಸರವಿಲ್ಲ. ಕೇಳುವವರಿಗೂ ಬೇಸರವಿಲ್ಲ. ಪಾತ್ರಗಳ ಜೊತೆಗೇ ಪ್ರೇಕ್ಷಕಗಣ ಹಾಡಲಾರಂಭಿಸುವದು.

ಕಾಶೀಯಾತ್ರೆ ಅಂದಿನವರ ಜೀವನದ ಅಮೋಘ ಸಾಧನೆ. ಪಾದಯಾತ್ರೆಯೇ ಗತಿ. ವಯೋವೃದ್ಧರೆಲ್ಲ ಹಳ್ಳಿ ಹಳ್ಳಿಗಳಿಂದ ಒಂದೆಡೆ ಒಟ್ಟಾಗುವರು. ವರ್ಷದ ತಯಾರಿಯೇ ಬೇಕಾಗುತ್ತಿತ್ತು. ಅನ್ನಧಾನ್ಯ ಸಮೃದ್ಧವಾಗಿದ್ದರೂ ಹಣದ ಕೊರತೆ ಹೆಚ್ಚು. ಹುಗಿದಿಟ್ಟ ನಾಣ್ಯಗಳು, ಕಷ್ಟಪಟ್ಟು ಶೇಖರಿಸಿದ ಪವನು, ಬೆಳ್ಳಿ ರೂಪಾಯಿ ಗಳು ಹೊರಬರಬೇಕು. ಕಾಶೀಯಾತ್ರೆ ಮುಗಿಸಿ ಬಂದು ಬದುಕಿರುವ ಹಿರಿಯರ ಸಲಹೆಗಳನ್ನು ಬಾರಿಬಾರಿಗೂ ಪಡೆಯಬೇಕು. ಕಳ್ಳಕಾಕರಿಂದ ಹಣ ಬಚ್ಚಿಡಲು, ಗಂಡಸರು ಹೆಂಗಸರು ಒಳ-ಉಡಿಗೆಯಲ್ಲಿ, ಸೀರೆಯ ಬಾಳೆಕಾಯಲ್ಲಿ ಅಡಗಿಸಿ ಇಡ ಬೇಕಾಗುತ್ತಿತ್ತು. ಯುವ ಪೀಳಿಗೆಯವರಿಗೆಲ್ಲ ಇದು ತಮಾಷೆಯ ವಿಷಯವೇ !

ದಾರಿಯುದ್ದಕ್ಕೂ ಬೇಕಾಗುವ ಅಕ್ಕಿ, ಅವಲಕ್ಕಿ, ಬೇಳೆ, ಅರಳು, ಹುರಿಹಿಟ್ಟು, ಉಪ್ಪಿನಕಾಯಿ, ಹಪ್ಪಳ, ಪಾತ್ರೆಗಳು, ಬಟ್ಟೆಗಳು ಎಂದು ದೊಡ್ಡ ಹೊರೆಯೇ ಆಗುತ್ತಿತ್ತು. ವ್ಯಕ್ತಿಗಳೆಲ್ಲ ಯಥಾಶಕ್ತಿ ಅವನ್ನು ಹೊರುವರು. ಹುಲಿ ಕರಡಿಗಳಂತೆ

ಕಾಡು-ಪ್ರಾಣಿಗಳ ಭಯ ಸದಾ ಇರುವುದರಿಂದ ಎಲ್ಲರ ಕೈಗಳಲ್ಲೂ ಒಂದೊಂದು ದೊಣ್ಣೆ ಇದ್ದೇ ಇರುವದು. ಹರಿನೀರು ಇರುವಲ್ಲಿ ಠಾಣ್ಯ ಹಾಕಿ, ಉರುವಲು ಒಟ್ಟು ಮಾಡಿ ಮೂರು ಕಲ್ಲಿನ ಒಲೆ ಹೂಡುವರು. ಗಂಡಸರು-ಹೆಂಗಸರು ಸ್ನಾನ ಮುಗಿಸುವರು. ಹಸಿದ ಹೊಟ್ಟೆಗೆ ಬಿಸಿಯೂಟ, ದಣಿದ ದೇಹಕ್ಕೆ ವಿಶ್ರಾಂತಿ ದೊರೆತ ನಂತರ ಪಯಣ ಮುಂದರಿಸುವರು. ಸಂಜೆಯಾಗುತ್ತ ಬಂದಂತೆ ಹತ್ತಿರದ ಹಳ್ಳಿಯ ದೇವಸ್ಥಾನ, ಧರ್ಮಶಾಲೆಗಳಲ್ಲಿ ರಾತ್ರಿಯ ಠಾಣ್ಯ, ಫಲಾಹಾರ, ಊಟ. ನಿದ್ರೆ ಬರುವತನಕ ಧ್ಯಾನವೋ, ಭಜನೆಯೋ ನಡೆಯುವುವು. ಯಾತ್ರಾರ್ಥಿಗಳ ಗೌರವಾರ್ಥ ಆಯಾ ಗ್ರಾಮ-ಊರವರು ಸಹಾಯಕ್ಕೆ ನಿಲ್ಲುವದೂ ಇತ್ತು. ಮರುದಿನ ಯಥಾವತ್ ಪಯಣ ಮುಂದುವರಿಯುವದು. ಮೂರು ತಿಂಗಳಲ್ಲಿ ನಡೆಯುತ್ತ ಊರಿನಿಂದ ಮುಂಬೈ ಸೇರಿದರೆ ಅದೇ ಮಹಾಸಾಧನೆಯಾಗಿತ್ತು. ಅಲ್ಲಿಂದ ಕಾಶಿ ಕೇವಲ ಮೂರೇ ದಿನಗಳಲ್ಲಿ ರೇಲ್ವೆ ಮೂಲಕ ಮುಟ್ಟಿದಾಗ ಅದೊಂದು ಪವಾಡದಂತೆ ತೋರಿದರೆ ಆಶ್ಚರ್ಯವಿಲ್ಲ. ರೇಲ್ವೆ ಬರುವ ಮೊದಲ ದಿನಗಳಲ್ಲಿ ಕಾಶಿ ಒಂದೂವರೆ ವರ್ಷದ ಹಾದಿಯಾಗಿತ್ತು. ಈ ಅವಧಿಯಲ್ಲಿ ಊರವರೊಡನೆ ಸಂಪರ್ಕವಿಟ್ಟು ಕೊಳ್ಳಲು ಬಲು ಕಷ್ಟ. ಅಂಚೆ ವ್ಯವಸ್ಥೆಯಿದ್ದರೂ ಅಪಾರ ವಿಳಂಬ.

ಈ ಶತಕದ ಆದಿಯ ಅಂಚೆ ವ್ಯವಸ್ಥೆಯೂ ಇಂದಿರಾ ಅವರ ಕೃತಿಯಲ್ಲಿ ಯಥಾವತ್ ವರ್ಣಿತವಾಗಿದೆ. ಹಳ್ಳಿಗಳಲ್ಲಿ ಅಂಚೆ–ಬಟವಡೆ (ಹಂಚುವಿಕೆ) ರನ್ನರ್‌ಗಳ ಕೈಯಲ್ಲಿ. ಕಾಲಿಗೆ ಜಿರಕಿ ಮೆಟ್ಟು, ಖಾಕಿ ಸಮವಸ್ತ್ರ, ಗೆಜ್ಜೆಕಟ್ಟಿದ ಕೋಲು ಹಿಡಿದು ಹಳ್ಳಿ ಹಳ್ಳಿಗಳಿಗೆ ಅಂಚೆಯಾಳುಗಳು ಓಡುತ್ತ ಹೋಗುವರು. ಸಾಯಂಕಾಲ ದಲ್ಲಿ ದೊಣ್ಣೆ–ಹಿಲಾಲುಗಳು ರಕ್ಷಣೆಗೆ ಬರುವವು. ವೃತ್ತಪತ್ರಿಕೆ ಇಲ್ಲದ ದಿನಗಳಲ್ಲಿ ಈ ಅಂಚೆಯವರೇ ಸ್ಥಳೀಯ ಸಮಾಚಾರಗಳನ್ನು ಹಳ್ಳಿ ಹಳ್ಳಿಗಳಿಗೆ ವಿತರಿಸುತ್ತಿದ್ದರು. ಕಾಶಿಗೆ ಹೋದವರು ಯಶಸ್ವಿಯಾಗಿ ಹಿಂದಿರುಗುವದೇ ಮಹಾಸಾಧನೆಯಾದಾಗ ಬಹುಶಃ ಅಂಚೆಯಾಳಿನ ಮೂಲಕವೇ ದೂರದ ಹಳ್ಳಿಯವರಿಗೆಲ್ಲ ಸುದ್ದಿ ತಲುಪಿ, ಯಾತ್ರೆ ನೆರವೇರಿಸಿದವರ ದರ್ಶನಾರ್ಥವಾಗಿ ಬರುತ್ತಿದ್ದರು. ಕಾಶೀ ಸಮಾರಾಧನೆ ಯಲ್ಲಿ ಪಾಲುಗೊಂಡು ಕೃತಾರ್ಥರಾಗುತ್ತಿದ್ದರು. ಯಾತ್ರೆ ಸಂಪನ್ನವಾದಾಗ ಏರ್ಪಡುತ್ತಿದ್ದ ಈ ಸಮಾರಾಧನೆಯಲ್ಲಿ ಊರವರೆಲ್ಲ ಪಾಲುಗೊಳ್ಳುತ್ತಿದ್ದುದು ವಿಶೇಷ.

ಇಂಥ ಅನೇಕಾನೇಕ ವಿವರಗಳು, ಇಂದಿರಾ ಅವರ ಕಾದಂಬರಿಗಳಲ್ಲಿ ವ್ಯಕ್ತಿಗಳ ಸುತ್ತ ಹರಡಿಕೊಂಡಿರುತ್ತವೆ. ಪ್ರಕೃತಿಯೊಂದಿಗೆ ಹಾಸು ಹೊಕ್ಕಾಗಿ ಬಾಳುವ ಹುಣಸೆಕೊಪ್ಪಲ ಫಣಿಯಮ್ಮಳ ವ್ಯಕ್ತಿ ಚಿತ್ರಣಕ್ಕೆ ಇಂದಿರಾ ಅವರು ಬಳಸಿದ ತಂತ್ರ

ಭಿನ್ನವಾಗಿದೆ. ಅವಳ ಪಟ್ಟಿಗೆ ಹೊಳೆ, ಹೊಲ, ತೋಟ, ಗಿಡ-ಬಳ್ಳಿ ದನಕರುಗಳೆಲ್ಲ ಮಾನವ ರೂಪ ತಾಳಿವೆ. ಅವುಗಳ ಸಹವಾಸ ಸುಖದಲ್ಲಿ ಆಕೆಗೆ ಇನ್ನೇನೂ ಬೇಕಿಲ್ಲ. ಸಹವಾಸ ಸುಖಕ್ಕಾಗಿಯೇ ಎಂಬಂತೆ ಹಲವಾರು ದನಗಳನ್ನು ಸಾಕಿ ಸ್ನಾನ ಹಾಕಿ, ಮೇವು ಉಣಿಸಿ... ಪ್ರೀತಿ ಅಕ್ಕರೆಗಳನ್ನು ಎರೆದು ಹಾಲು ಹಿಂಡಿ, ಕೆನೆ ತೆಗೆದು, ಮೊಸರು ಕಡೆದು ಬೆಣ್ಣೆ ತೆಗೆದು ಕಾಸಿ ಮೂರಾರು ಸಂಸಾರಗಳಿಗೆ ಪೂರೈಸುವಳು. ಮನೆಕೆಲಸ ಸಾಲದೆಂಬಂತೆ ಹಿತ್ತಿಲಲ್ಲಿ ಹತ್ತಾರು ಬಗೆಯ ತರಕಾರಿ ಬೆಳೆದು ಪರಿಚಿತರಿಗೆ ಹಂಚುವಳು. ಅದರಂತೆ ಕನಕಾಂಬರ, ಮಲ್ಲಿಗೆ, ಜಾಜಿ, ಸೇವಂತಿಗೆ ಹೂಗಳನ್ನು ಬೆಳೆಸಿ ಅರಳಿಸಿ ಬಾಳೆನಾರಿನಿಂದ ದಂಡೆಕಟ್ಟಿ ಹೆಂಗೆಳೆಯರಿಗೆ ಹಂಚಿದಾಗಲೇ ಅವಳಿಗೆ ಗೆಲುವು. ಯಾರ ಮಕ್ಕಳೇ ಇರಲಿ ಮುದ್ದಾಡಿದಷ್ಟೂ ಕಡಿಮೆ. ಅವರಿಗೆ ಹರಳೆಣ್ಣೆ ಬಳಿದು ತೀಡಿ, ಹಂಡೆತುಂಬ ಕಾದ ನೀರಿನಿಂದ 'ಮೀಯಾಣ' ಮಾಡಿಸಿದಾಗಲೇ ಖುಷಿ. ಇಂಥವಳಿಗೆ ತನ್ನದೆಂಬ ಸಂತಾನವಿಲ್ಲವೆಂಬ ದುಃಖವಿಲ್ಲ. ವಿನೋದಾವಳಿಗಳ ಆವಶ್ಯಕತೆಯಿಲ್ಲ. ಆಪ್ತರಾದವರು ವರದಾಚಾರರ ನಾಟಕ ಕಂಪನಿ ಊರಿಗೆ ಬಂದಾಗ ಬಲವಂತ ಮಾಡಿ ನಾಟಕ ನೋಡಲು ಕರೆದೊಯ್ದಾಗ, ಗಣಪತಿ ಸ್ತುತಿ ಪ್ರಾರಂಭವಾಗುವ ಮೊದಲೇ ಫಣಿಯಮ್ಮ ಚಾಪೆಯ ಮೇಲೆ ಒರಗಿ ಸುಖವಾಗಿ ಗೊರಕೆ ಹೊಡೆಯುತ್ತಾಳೆ. ಅದ್ದರಿಂದ ನಂತರದ ದಿನಗಳಲ್ಲಿ ಆಕೆಯ 'ಸುಖನಿದ್ರಾ ಪರಿಣಯ' ನಾಟಕ ಶಾಲೆಯ ತಿಗಣೆ ಕಾಟದ ಸುಖನಿದ್ರೆಗಳು ಪರಿಚಿತರಿಗೆಲ್ಲ ತಮಾಷೆಯ ವಿಷಯವಾಗಿ ಪರಿಣಮಿಸುತ್ತದೆ.

ನಗರವಾಸಿಗಳ, ಆಧುನಿಕರ ಅನೇಕಾನೇಕ ಸಮಸ್ಯೆಗಳಿಗೆ ಇಂದಿರಾರ ಕೃತಿಗಳಲ್ಲಿ ಪರೋಕ್ಷ ಪರಿಹಾರ ಕಾಣಬಹುದಾಗಿದೆ. ಅಂದಿನ ಶ್ರೀಮಂತರು ಕೂಡ ಕುಳಿತು ಉಣ್ಣುವ ಪರಿಪಾಠವಿಡದೇ ಜನಸಾಮಾನ್ಯರಂತೆ ದುಡಿಯುವದರಲ್ಲಿ ಸಾರ್ಥಕತೆ ಕಾಣುತ್ತಿದ್ದರು. ಒಣ ಆಡಂಬರದಲ್ಲಿ ವಿಶ್ವಾಸವಿಟ್ಟವರಲ್ಲ. ವರದಕ್ಷಿಣೆಯ ಪಿಡುಗು ನರಭಕ್ಷಕವಾಗಿ ಹರಡಿಕೊಂಡಿರಲಿಲ್ಲ. ಆಗರ್ಭ ಶ್ರೀಮಂತರು ಕೂಡ ಮದುವೆಯಲ್ಲಿ ಅಳಿಯನಿಗೆ ಕೊಡ ಮಾಡುತ್ತಿದ್ದುದು ತಾಮ್ರದ ತಟ್ಟೆ, ಪಂಚಪಾತ್ರೆ, ಸಂಕಲ್ಕೆ ಪಂಚೆ, ಪೇಟ, ಕಾಶೀಯಾತ್ರೆ ಕೋಲು, ಛತ್ರಿ, ಮೆಟ್ಟುಗಳು. ಮದುವೆಗಾಗಿ ವಿಪರೀತ ಖರ್ಚು ಮಾಡಿ, ಮೈತುಂಬ ಸಾಲ ಮಾಡಿಕೊಳ್ಳುವ ಪರಿಪಾಠವಿರಲಿಲ್ಲ. ಇದ್ದ ಸಾಮಗ್ರಿಯಲ್ಲಿ ಚಪ್ಪರ ನಿಲ್ಲಿಸಿ, ಅಡಿಗೆ ಮಾಡಿ ಆಪ್ತೇಷ್ಟರಿಗೆಲ್ಲ ಊಟ ಹಾಕಿ ಸಂತೋಷ ಪಡಿಸುತ್ತಿದ್ದರು. ಇದ್ದುದರಲ್ಲಿಯೇ ಉಂಡುಟ್ಟು ತೃಪ್ತಿಯಿಂದಿರುವದನ್ನು ಜನ ರೂಢಿಸಿಕೊಂಡವರು. ಕಾಲಹರಣಕ್ಕಾಗಿ ಯುವಜನರು ಕ್ಲಬ್-ಕ್ಯಾಬರೆ ವಿಡಿಯೋಗಳ ಮೊರೆ ಹೋಗಬೇಕಾಗಿರಲಿಲ್ಲ. ಹುಡುಗಿಯರೂ ತಮ್ಮದೇ ರಂಜನಾ ಲೋಕ ಹೊಂದಿದ್ದರು. ಉರುಟಣೆ-ಉಯ್ಯಾಲೆ ಹಾಡು ಹೇಳುವದು, ಹೇಳಿಸಿ

ಕೊಳ್ಳುವದು. ಕಸೂತಿ, ಮಣಿಗೆಲಸ, ಕ್ರೋಷಾ, ಮಣಿತೋರಣ, ಗುಳೋಪ್ರ ಮಾಡುವದು. ಗಜ್ಜುಗದಾಟ, ಚನ್ನೆಮಣೆ, ಬಗೆಬಗೆಯ ಹೂ ಕಟ್ಟುವದರಲ್ಲಿ ಆನಂದಿಸುತ್ತಿದ್ದರು. ಹುಡುಗರು ಮುಟ್ಟಾಟ, ಚಿಣಿಫಣಿ ಆಡುತ್ತ ಮರ ಹತ್ತುವರು. ಈಜು ಬೀಳುವರು. ಎಲ್ಲ ವಯಸ್ಸಿನವರಿಗೂ ಹೆಚ್ಚಿನ ಆಕರ್ಷಣೆಯ ಸ್ಥಳ, ಊರ ಹೊಳೆ-ದೇವಸ್ಥಾನಗಳು. ದೀಪ ಹತ್ತಿದ ಮೇಲೆ ಒಲೆಯ ಸ್ಥಳ ಹುಡಿಗೆಯರ ಕಲರವದಿಂದ ತುಂಬುತ್ತಿತ್ತು. ಹಳಬರಿಂದ ಹಾಡು ಕತೆ ಹೇಳಿಸಿಕೊಳ್ಳುವರು, ತಾವೂ ಹೇಳುವರು. ಪಟ್ಟಣಕ್ಕೆ ಓದಲು ಹೋದ ಗಂಡುಮಕ್ಕಳು ರಜೆಯಲ್ಲಿ ಊರಿಗೆ ಬಂದಾಗ ಈ ಅಡಿಗೆ ಮನೆ ಕೂಟಗಳಿಗೆ ವಿಶೇಷಕಳೆ ಏರುತ್ತಿತ್ತು. ನಾಗರಿಕ ಜೀವನದ ವಿವರಗಳು, ಹೊಸ ಹೊಸ ಕತೆಗಳು ಜ್ಞಾನ ಭಂಡಾರಕ್ಕೆ ಸೇರ್ಪಡೆ ಯಾಗುತ್ತಿದ್ದವು.

ಹಿರಿಯರಲ್ಲಿ, ಸಮ ವಯಸ್ಕರೆಲ್ಲ ನದೀತೀರ - ದೇವಸ್ಥಾನದ ಪೌಳಿಗಳಲ್ಲಿ ಸಭೆ ನಡೆಸುವರು. ಊರ ಆಗು-ಹೋಗುಗಳನ್ನು ಚರ್ಚಿಸುವರು. ಆಗಾಗ ಏರ್ಪಡು ತ್ತಿದ್ದ ಹರಿಕಥೆ - ಕಥಾ ಕಾಲಕ್ಷೇಪಗಳಲ್ಲಿ ಎಲ್ಲರೂ ಭಾಗವಹಿಸುವರು. ಊರ ಹೊಳೆಗೆ ನೆರೆ ಬಂದಾಗಲೋ ಇನ್ನಿತರ ಕಷ್ಟದ ಸಮಯಗಳಲ್ಲೋ ಒಬ್ಬರ ಸಹಾಯಕ್ಕೆ ಇನ್ನೊಬ್ಬರು ಧಾವಿಸುವರು. ವೈಯಕ್ತಿಕ ಸ್ವಾರ್ಥ-ಸುಖಲೋಲುಪತೆಗೆ ಹೆಚ್ಚಿನ ಅವಕಾಶಗಳಿರುತ್ತಿರಲಿಲ್ಲ. ಇಂಥ ಸಮಾಜದಲ್ಲಿ ಆಧುನಿಕರ ಸಮಸ್ಯೆಗಳಾದ ಏಕಾಂಗಿತನ, ಮಾನಸಿಕ ತೊಂದರೆ, ಕುಸಿತ (Depression), ಒತ್ತಡಗಳು ಮತ್ತು ಅವುಗಳ ಪರಿಹಾರಕ್ಕೆಂದು ಮೊರೆ ಹೋಗುವ ಕುಡಿತ, ಡ್ರಗ್ ಸೇವನೆಗಳಿಗೆ ಅವಕಾಶ ವಾದರೂ ಎಲ್ಲಿ ?

ವೀರಗಲ್ಲು, ನಿಷದಿಗಲ್ಲು, ಸ್ಮಾರಕಗಳಂತೆ, ಸಮಕಾಲೀನ ಜೀವನವನ್ನು ಸಾಂದ್ರವಾಗಿ ಚಿತ್ರಿಸುವ ಕಾದಂಬರಿಗಳೂ, ಐತಿಹಾಸಿಕ ದಾಖಲೆಗಳು. ಮರಳಿ ಮಣ್ಣಿಗೆ, ಕಾನೂರು ಸುಬ್ಬಮ್ಮಗಳಂಥವು ಈ ವರ್ಗಕ್ಕೆ ಸೇರಿವೆ. ಆ ಜೀವನ ಇಂದು ಬಹುಮಟ್ಟಿಗೆ ಕಣ್ಮರೆಯಾಗಿದೆ. ಇಂದಿರಾ ಅವರ ಕೆಲ ಕೃತಿಗಳಲ್ಲೂ ಅಂದಿನವರ ಜನಜೀವನದ ಮುಖ್ಯವಾದ ವಿವರಗಳನ್ನು ಪಡೆಯಬಹುದಾಗಿದೆ. ವೇಷ ಭೂಷಣ ಗಳು, ಆಭರಣಗಳು, ಉಡಿಗೆ-ತೊಡಿಗೆ, ಊಟ-ಉಪಚಾರದ ಪದ್ಧತಿಗಳು ಬಹಳಷ್ಟು ಬದಲಾಗಿವೆ. ಈಗ ಕೇವಲ ಶಿಲ್ಪಗಳಲ್ಲಿ, ಇಲ್ಲವೇ ವಿಗ್ರಹಗಳ ಮೈಮೇಲೆ ಮಾತ್ರ ಕಾಣಸಿಗುವ ಆಭರಣಗಳ ಹೆಸರುಗಳು ಇಂದಿರಾರ ಕೃತಿಗಳಲ್ಲಿ ಕಂಡುಬರುತ್ತವೆ. ಅವುಗಳ ವೈವಿಧ್ಯ ವಿಸ್ಮಯ ತರಿಸುವಂಥದು. ಅಡ್ಡಿಗೆ, ಸರಿಗೆ, ಚಂದ್ರಹಾರ, ಜಡೆ ಬಂಗಾರ, ರಾಗಟೆ, ನಾಗರ, ತಿರುಪಿನ ಹೂ, ಕುಚ್ಚು, ಮಲ್ಲಿಗೆ ಮೊಗ್ಗು, ಬುಗುರಿ,

ಚಳತುಂಬು, ಚಂದ್ರಮುರು, ತೋಳಬಂದಿ, ಗುಂಡಿನ ಸರ, ಕಾಸಿನ ಸರ, ಕಾಲಸರ, ಹಾಡಗ, ಗಗ್ಗರ ಮೊದಲಾದುವನ್ನು ಇಂದಿನವರು ನೋಡುವದಿರಲಿ, ಹೆಸರು ಕೂಡ ಕೇಳಿರಲಿಕ್ಕಿಲ್ಲ! ಸಂಶೋಧಕರು ಇಂಥ ಆಭರಣಗಳನ್ನು ಅಭ್ಯಸಿಸಬೇಕಾದರೆ ಶೃಂಗೇರಿಯ ಶಾರದಮ್ಮ, ಕೊಲ್ಲೂರಿನ ಮೂಕಾಂಬಿಕ, ಸಿರ್ಸಿಯ ಮಾರಿಕಾಂಬೆಯ ಆಭರಣಗಳಿಗೆ ಶರಣು ಹೋಗಬೇಕು. ಮಲೆನಾಡಿನ ಕೆಲವು ಸಿರಿವಂತ ಮನೆಗಳಲ್ಲಿ ಅಲ್ಲೊಂದು ಇಲ್ಲೊಂದು ಕಾಣಸಿಗಬಹುದೇನೋ! ಹಾಗೆಯೇ ಅಂದಿನವರು ಇಂದಿನ ಆಧುನಿಕರು ಫ್ಯಾಷನ್ ಹೆಸರಿನಲ್ಲಿ ಧರಿಸುವ ಸಫಾರಿಯಂತಹ ಸೈನಿಕ ಶಿಸ್ತಿನ ಸಮವಸ್ತ್ರದಲ್ಲಿ ವಿಶ್ವಾಸವಿಟ್ಟವರಲ್ಲ. ತಂತಮ್ಮ ಅಭಿರುಚಿಗನುಸಾರವಾಗಿ ಅಲಂಕರಿಸಿ ಕೊಳ್ಳುತ್ತಿದ್ದರು. ಮಂಡಿ ಸಾಹುಕಾರರು ಕಿವಿಗೆ ವಂಟಿ, ಶರ್ಟಿಗೆ ಹರಳಿನ ಗುಂಡಿ, ಕಪ್ಪುಟೋಪಿ, ಕೋಟಿಗೆ ಸಿಕ್ಕಿಸಿದ ಫೌಂಟನ್‌ಪೆನ್, ಕಾಲಿಗೆ ಮೆಟ್ಟು, ಬೆರಳಿಗೆ ಅಂತಸ್ತಿನ ಪ್ರಕಾರ ಉಂಗುರಗಳು ಧರಿಸಿದರೆ, ಸದಾಕಾಲ ದೇವರ ಸೇವೆಯ ಮೂಲಕ ಸ್ವಸೇವೆಯನ್ನೂ ಕೈಕೊಳ್ಳುತ್ತಿದ್ದ ಪುರೋಹಿತರು ಒಬ್ಬೆಟ್ಟಂಚಿನ ಕಚ್ಚೆ ಪಂಚೆ, ಎದ್ದುತೋರುವ ಯಜ್ಞೋಪವೀತ, ನುಣ್ಣಗಿನ ತಲೆ, ಪೊದೆಯಾದ ಜುಟ್ಟಿನಿಂದ ಶೋಭಿಸಿದರೆ, ಹಿರಿಯರು ತುಂಬು ತೋಳಿನ ಅಂಗಿ, ಅಂಚಿನ ಧೋತ್ರ, ಅಂಗವಸ್ತ್ರ ಗಳನ್ನು ವಿಶೇಷ ಸಂದರ್ಭಗಳಲ್ಲಿ ಧರಿಸುತ್ತಿದ್ದರು. ಹುಡುಗಿಯರು ಚಿಕ್ಕ ವಯಸ್ಸಿನ್ಗೇ ಕಿರಿಗೆ, ನಂತರ ಹದಿನಾರು ಮೊಳದ ಸೀರೆಯುಟ್ಟು ಕೈಯ್ಯಲ್ಲಿ ದಪ್ಪ ಕರಿಬಳೆ, ಕತ್ತಿನಲ್ಲಿ ಮಣಿಸರ, ಮುಖದ ತುಂಬ ಅರಿಸಿಣ ಲೇಪಿಸಿಕೊಂಡು, ಕಾಸಿನಗಲ ಕುಂಕುಮ ಇಟ್ಟುಕೊಳ್ಳುವುದು ವಾಡಿಕೆ. ಉಳ್ಳವರ ಮಕ್ಕಳು ಖಣದ ಲಂಗ, ಸಿಲ್ಕಿನ ಜಂಪರ್, ಜಡೆಗೆ ಉಲ್ಲನ್ ಟೇಪು, ಕಾಲಿಗೆ ಬೆಳ್ಳಿಯ ಚೈನು ಧರಿಸುತ್ತಿದ್ದರು. ವಿವಾಹಿತರು, ವಿಲಾಸಿನಿಯರನ್ನು ಅವರ ಪೋಷಾಕಿನಿಂದಲೇ ಗುರುತಿಸಲಾಗುತ್ತಿತ್ತು.

ಜನಸಾಮಾನ್ಯರಂತೆ ಬಾಳು ನಡೆಸಿ, ಅವರ ಜೀವನವನ್ನು ಅಭ್ಯಸಿಸಿ, ತಡವಾಗಿ ಯಾದರೂ ಬರವಣಿಗೆಗೆ ಜೀವನ ಮುಡುಪಿಟ್ಟರೆ, ಅಸಾಧಾರಣವಾದುದನ್ನು ಸಾಧಿಸ ಬಹುದೆಂದು ಇಂದಿರಾ ಅವರು ಸಾಧಿಸಿ ತೋರಿಸಿದ್ದಾರೆ. ಇಂಗ್ಲೀಷ್ ಶಿಕ್ಷಣ, ನಗರ ಜೀವನದ ಸೌಕರ್ಯಗಳಿಂದ ಅವರು ವಂಚಿತರಾದರೂ, ಅಸಾಧಾರಣ ಜ್ಞಾಪಕ ಶಕ್ತಿ, ಗ್ರಹಣ ಸಾಮರ್ಥ್ಯವನ್ನು ಪಡೆದಿದ್ದಾರೆ. ನಗರವಾಸಿಗಳಿಗೆ ಅಪರೂಪ ವಾದ ಮಲೆನಾಡಿನ ನಿಸರ್ಗ ಸಂಪದ (ಕೆಲವೊಮ್ಮೆ ಪ್ರಕೋಪ ಕೂಡ)ವನ್ನು ಕಂಡು ಅನುಭವಿಸಿ, ಮೈಗೂಡಿಸಿಕೊಂಡದ್ದರಿಂದಲೊ ಏನೋ, ಹಲವಾರು ಸತ್ಯಶಿಲ್ಪಗಳನ್ನು ಕನ್ನಡಕ್ಕೆ ಕೊಡಮಾಡಿದ್ದಾರೆ. ಗ್ರಾಮಜೀವನದ ಹರಹು - ಆಳಗಳ ಚಿತ್ರಣದಲ್ಲಿ ಕನ್ನಡದ ಬರಹಗಾತಿಯರಲ್ಲಿ ಇಂದಿರಾರಂಥವರು ವಿರಳರೇ! ಓದುಗರ ಅಂತರಾಳ ವನ್ನು ಆಕ್ರಮಿಸುವುದಲ್ಲದೇ ಕೆಲವೊಮ್ಮೆ ವಿಮರ್ಶಕರಿಗೂ ಸವಾಲಾಗಿ ನಿಲ್ಲುತ್ತಾರೆ.

ಸ್ತ್ರೀ ಸಾಹಿತ್ಯವೆಂದರೆ ಮಡುಗಟ್ಟಿದ ನೀರು ಎಂದು ಮೂಗು ಮುರಿಯುವವರಿಗೆ, ಪಾಶ್ಚಾತ್ಯ ಪದ್ಧತಿಯ ಶಿಕ್ಷಣ, ಇಂಗ್ಲೀಷ್ ಓದಿನ ಪರಿಕರಗಳು, ತಂತ್ರ-ಶಿಲ್ಪ ಚಾತುರ್ಯಗಳ ದೊಂಬರಾಟಗಳಿಲ್ಲದೇ, ವಿಮರ್ಶಾ ಸಿದ್ಧಾಂತಗಳ ಗೊಡವೆಯೇ ಬೇಕಿಲ್ಲದೇ ಉತ್ತಮ ಸಾಹಿತ್ಯ ನಿರ್ಮಿಸಲು ಸಾಧ್ಯ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.

> ನನ್ನ ಪಾಲಿಗಿದ್ದ ಮುಖ್ಯ ಕೊರತೆ ಪ್ರೀತಿಯದು. ಪ್ರೀತಿ ವಾತ್ಸಲ್ಯ ಎಂಬುದು ನನ್ನ ತಾಯಿಯಿಂದಲೇ ನನಗೆ ಲಭಿಸಲಿಲ್ಲ. ಕರುಣೆ ಅನುಕಂಪವೆಂಬುದನ್ನು, ನೋಡಲು ಅಸಂಸ್ಕೃತರೆನಿಸಿದಂತಿದ್ದ ಪದ್ದಮ್ಮನೇ ತುಂಬಿಕೊಟ್ಟಿದ್ದರು. ಒಂದು ಕಾಲು ಸ್ವಲ್ಪ ಊನವಾಗಿಹುಟ್ಟಿದ್ದು ನನ್ನದೇ ಅಪರಾಧ ಎಂದು ಅಮ್ಮ ಭಾವಿಸಿದಂತಿತ್ತು. ತಾಯಿಯ ಮಮತೆಯ ಬಗ್ಗೆ ಸಾವಿರಾರು ಕಥೆ - ಕಾದಂಬರಿಗಳಿವೆ, ಗಾದೆ - ಉಕ್ತಿಗಳಿವೆ. ಆದರೆ ನನ್ನಂಥ ನತದೃಷ್ಟೆಯ ಪಾಲಿಗೆ ಆ ಪುಣ್ಯವಿರಲಿಲ್ಲ.
>
> (ಹಸಿವು - ಪುಟ-24)

‘ಫಣಿಯಮ್ಮ’ದಲ್ಲೊಂದು ಬಂಡಾಯದ ಮಿಂಚು

○

○

○ ಬಿ. ಟಿ. ಲಲಿತಾ ನಾಯಕ್

ಕಳೆದ ಶತಮಾನದಲ್ಲಿ ಮಲೆನಾಡಿನ ಬ್ರಾಹ್ಮಣರು ಅನುಸರಿಸುತ್ತಿದ್ದ ಜೀವನ ವಿಧಾನ, ಪಾಲಿಸುತ್ತಿದ್ದ ಕಟ್ಟು ಕರಾರು, ಸಂಪ್ರದಾಯ ಗಳು, ನಂಬಿಕೆಗಳು ಮೌಲ್ಯಗಳೆಲ್ಲವನ್ನು ಎಂ. ಕೆ. ಇಂದಿರಾರವರು ಅತ್ಯಂತ ಪ್ರಾಮಾಣಿಕವಾಗಿ, ಸ್ವಾರಸ್ಯವಾಗಿ ‘ಫಣಿಯಮ್ಮ’ ಕಾದಂಬರಿ ಯಲ್ಲಿ ನಿರೂಪಿಸಿದ್ದಾರೆ.

ಬ್ರಾಹ್ಮಣ ಬಾಲವಿಧವೆಯೊಬ್ಬಳ ಬದುಕಿನ ಬವಣೆಯನ್ನು ಚಿತ್ರಿಸು ವುದರ ಜೊತೆಗೇ, ಶೋಷಣೆಯ ಆಗರವಾಗಿದ್ದ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಹೆಜ್ಜೆ ಹೆಜ್ಜೆಗೂ ಹೇಗೆ ಪೀಡನೆಗೊಳಪಡಿಸುತ್ತಿತ್ತು ಎಂಬುದನ್ನು ಮಲೆನಾಡಿನ ಅದೇ ಪರಿಸರದಲ್ಲಿ ಹುಟ್ಟಿ ಬೆಳೆದ ಲೇಖಕಿ, ತಾವು ಕಂಡಿದ್ದನ್ನು, ಕೇಳಿದ್ದನ್ನು ಅನುಭವದ ಹದ ಬೆರೆಸಿ ಇಳಿಸಿದ್ದಾರೆ.

ಬ್ರಾಹ್ಮಣ ಸಮಾಜ--ಅದರಲ್ಲೂ ಮಲೆನಾಡಿನ ಅಂಚೆಮನೆತನದವರ ಜಿಡ್ಡುಗಟ್ಟಿದ ಮೌಲ್ಯಗಳ ಬಗ್ಗೆ, ಮೂಢನಂಬಿಕೆಗಳ ಬಗ್ಗೆ ಲೇಖಕಿ ವ್ಯಂಗ್ಯವಾಗಿ, ಕೆಲವೊಮ್ಮೆ ಲೇವಡಿ ಮಾಡುವುದರ ಮೂಲಕ ಅಪಾರ ಸಿಟ್ಟು, ಕಳವಳ, ವಿಷಾದ, ಬೇಸರ ವ್ಯಕ್ತಪಡಿಸುತ್ತಾರೆ :

“ತಾವು ಮಾಡಿದ್ದೆಲ್ಲಾ ಸರಿ ಎಂದೇ ಅವರ ಕಡ್ಡಾಯವಾದ ನಂಬಿಕೆ. ಅದಕ್ಕೆ ಎದುರಾಡುವ ಮನುಷ್ಯರೇ ಇರಲಿಲ್ಲ. ಎಲ್ಲರೂ ಒಂದೇ ಬಾವಿಯ ಕಪ್ಪೆಗಳು. ಹೆಂಗಸರಿಗಂತೂ ಹೊರಗಿನ ಪ್ರಪಂಚವೇ ತಿಳಿ ಯದು ಸದಾಕಾಲ ಅಡಿಗೆ ಕೆಲಸ, ಮದುವೆ-ಮುಂಜಿ, ಬಸಿರು

ಬಾಣಂತನಗಳು ಗಂಡ ಸತ್ತಕೂಡಲೇ ತಲೆ ಬೋಳಿಸಿಕೊಂಡು ಒಪ್ಪತ್ತೂಟ ಹಿಡಿದ ರೆಂದರೆ ಅವರ ಜನ್ಮಪೂರ ಅಡಿಗೆ ಮನೆಯಲ್ಲೇ.

"ಅಪ್ಪಿತಪ್ಪಿ ಯಾರಾದರೂ ಪ್ರಾಯದ ವಿಧವೆ ಬಸಿರಾದಳೆಂದರೆ ಮುಗಿಯಿತು. ಹಾಹಾಕಾರ, ಗದ್ದಲ, ಸಂಪೂರ್ಣ ಅಪರಾಧ ಅವಳದೇ ಅನ್ನುವ ಕಡ್ಡಾಯವಾದ ಅಂತಿಮ ತೀರ್ಮಾನ. ಶೃಂಗೇರಿ ಮಠದಿಂದ ಬಹಿಷ್ಕಾರ. ಮುಂದೆ ಅವಳು ಊರವರ ಬಿಟ್ಟಿ ಸ್ವತ್ತು. ಎಲ್ಲರ ಮನೆಯ ಚಾಕರಿ ಮಾಡಬೇಕು. ಅವರು ಕೊಟ್ಟಿದ್ದನ್ನು ತಿನ್ನಬೇಕು. ಅವಳ ಸಂತಾನ ಮಾಲೇರ ಜಾತಿಗೆ ಸೇರಿದ್ದಾಗುತ್ತಿತ್ತು."

ಎಂದು ಮುಂತಾಗಿ ಅಂದಿನ ಸಮಾಜ-ವರ್ಗ, ವರ್ಣ, ಲಿಂಗ ಅಸಮಾನತೆಗಳ ರೂಪದಲ್ಲಿ ಬಿದ್ದು ಹೊರಳಾಡುತ್ತಿದ್ದ ಪರಿಯನ್ನು ವಿವರಿಸುತ್ತಾರೆ.

ಐಗಳ ಮಠದಲ್ಲಿ ವಿದ್ಯೆ ಕಲಿಸಲಾಗುತ್ತಿತ್ತಾದರೂ ಹೆಣ್ಣು ಮಕ್ಕಳಿಗೆ ಅಲ್ಲಿ ಸ್ಥಾನವಿರಲಿಲ್ಲ. ಜೊತೆಗೆ ಬಾಲ್ಯವಿವಾಹ ಮಾಡಲಾಗುತ್ತಿತ್ತು. ಹೆಣ್ಣಿನ ಮೇಲೆ ಇತಿ ಮಿತಿ ಇಲ್ಲದ ದರ್ಪ–ದಬ್ಬಾಳಿಕೆ ನಡೆಸಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಫಣಿಯಮ್ಮ ಬಾಲವಿಧವೆಯಾಗುತ್ತಾಳೆ.

ಗಂಡನ ಚಿತೆಯಲ್ಲಿ ಸುಟ್ಟು 'ಸತಿ'ಯಾಗುವ ಬದಲಾಗಿ, ಬದುಕಿನ ಚಿತೆಯಲ್ಲೇ ಬೆಂದು ಬೂದಿಯಾಗಿ ಜೀವನಪೂರ್ತಿ ಸಂಕಟ ಉಂಡ ಆಕೆ ತನ್ನ ದೀರ್ಘಕಾಲಿಕ ಬದುಕಿನ ನಂತರ, ಆ ಒಂದು ವ್ಯವಸ್ಥೆಯ ಬಗ್ಗೆ ತೋರಿದ ಪ್ರತಿಕ್ರಿಯೆ ಎಂಥದ್ದು ? ಎಂಬು ದನ್ನು ನಾವಿಲ್ಲಿ ಅತ್ಯಂತ ಕುತೂಹಲದಿಂದ ಗಮನಿಸುತ್ತೇವೆ.

ಯಾವುದೇ ಜೀವಿ ತುಳಿತಕ್ಕೊಳಗಾದಾಗ, ನೋವಿನಿಂದ, ಸಿಟ್ಟಿನಿಂದ ಚೀರಾಡು ವುದು, ಆ ಸಂಕಟದಿಂದ ಪಾರಾಗಿ ಹೊರಬರಲು ಹಾತೊರೆಯುವುದು ಸಹಜ.

ಫಣಿಯಮ್ಮ ಸಹ ಜೀವವಿರೋಧಿ ವ್ಯವಸ್ಥೆಯನ್ನು ತಿರಸ್ಕರಿಸುತ್ತಾಳೆ. ಅಸಹ್ಯಸುತ್ತಾಳೆ. ಆದರೆ ಅದು ಸಿಟ್ಟಿನ ರೂಪ ತಾಳುವುದಿಲ್ಲವಾದ್ದರಿಂದ ಸಾಮಾಜಿಕ ಕ್ರಾಂತಿಯ ಮಟ್ಟಕ್ಕೇರದೆ ಗುಟ್ಟಾಗಿ ಬುಸುಗುಡುವಷ್ಟಕ್ಕೆ ಮಾತ್ರ ಸೀಮಿತವಾಗಿ ಬಿಡುತ್ತದೆ.

ಲೈಂಗಿಕ ಸುಖ–ದುಃಖಗಳ ಅನುಭವವನ್ನೇ ಪಡೆಯದ ಆಕೆ 'ತನ್ನ ಗಂಡ

ಸತ್ತುಹೋಗಿದ್ದೇ ಒಳಿತಾಯಿತು. ಇಲ್ಲವಾದರೆ ಎಲ್ಲಾ ಹೆಂಗಸರಂತೆ ನಾನೂ ಗಂಡಸಿಗೆ ಮೈ ಒಡ್ಡುವ, ಮಕ್ಕಳನ್ನು ಹೆರುವ ಕ್ರಿಯೆಗೆ ಒಳಗಾಗಬೇಕಾಗುತ್ತಿತ್ತು !' ಎಂದು ಕೆಲವೊಮ್ಮೆ ಅಂದುಕೊಳ್ಳುತ್ತಾಳೆ. ಆದರೆ ಅದು ಅವಳ ಖಾಯಂ ಅನಿಸಿಕೆಯಲ್ಲ, ತೀರ ತಾತ್ಕಾಲಿಕವಾದದ್ದು.

ತಾನು ಕಾಣದ ಆ ಒಂದು ದಾಂಪತ್ಯ ಬದುಕು ಸುಂದರವಿದ್ದೀತು, ಆದರೆ ಅದು ತನ್ನ ಪಾಲಿಗೆ ದಕ್ಕದೆ ಹೋಯಿತು ಎಂಬ ನೋವು ಅವಳನ್ನು ಹೆಚ್ಚು ಹೆಚ್ಚಾಗಿ ಕಾಡುತ್ತಿರುತ್ತದೆ : "ನಾ ಎಷ್ಟು ದಿನ ಬದುಕಿದ್ರೂ ಇಷ್ಟೇ ಸೈಯಲ್ಲ-ಚಟ್ಟ ಕಟ್ಟುವಕೂ ಬರದು, ಬುಟ್ಟಿ ಹೆಣೆಯುಕೂ ಬರದು. ಅಂಥ ಗೆದ್ಲ ತಿಂದ ಗಳು ನಾನು !"

"ಅಂಚಿ ಅತ್ತೆ, ಈಗ ನಿಮಗೆ ಎಷ್ಟು ವರ್ಷ ?" ಎಂಬ ಪ್ರಶ್ನೆಗೆ "ಅಯ್ಯೋ, ನಾಯಿಗೆ ವಯಸ್ಸಾದ್ರೆ ಅಜ್ಜ ಅನ್ನಿಸಿಕೊಳ್ಳುತ್ತೇನ್ರೋ ?" ನಂಗೇನು ಮದುವೆಯಾ ? ಮುಂಜಿಯಾ ? ಹುಟ್ಟಿದ ಹಬ್ಬವಾ ? ಆಗಿದ್ದೀತು ಹೊಳೆ ದಂಡೆ ಅರಳೀಮರಕ್ಕಾದಷ್ಟು ವಯಸ್ಸು. ಹೂವು ಹಣ್ಣು ಕಾಯಿ ಕೊಡದೆ ಇರೋ ಮರದ ಹಂಗೆ ನಾನು !" ಎಂಬಂತಹ ಮಾತುಗಳು ಅವಳ ಮನೋವೇದನೆಗೆ ಸಾಕ್ಷಿಯಾಗುತ್ತವೆ.

ತನ್ನ ಇಡೀ ಬದುಕನ್ನು ಯಾವ ಮುಲಾಜು ತೋರದೇ ಹೊಸಕಿ ಹಾಕಿದ ಕ್ರೂರ ಸಂಪ್ರದಾಯದ ಬಗ್ಗೆ ಫಣಿಯಮ್ಮನಿಗೆ ಮಿತಿಮೀರಿದ ತಿರಸ್ಕಾರವಿದೆ. ಆದ್ದರಿಂದಲೇ ಅವಳು ಹೊಲೆಗೇರಿಗೆ ಹೋಗುವುದರ ಮೂಲಕ, ಸಿಂಕಿಯ ಹೆರಿಗೆ ಮಾಡಿಸುವುದರ ಮೂಲಕ ಸಂಪ್ರದಾಯವನ್ನು ಮುರಿದು ಮಾನವತೆಯಲ್ಲಿ ನೆಮ್ಮದಿ ಕಾಣಲು ಪ್ರಯತ್ನಿಸುತ್ತಾಳೆ.

ಆದರೆ ತನ್ನ ಸುತ್ತ ಮುತ್ತಣ ಮೂಢ ಸಮಾಜಕ್ಕೆ ಉಪದೇಶ ನೀಡುವ ಧೈರ್ಯವಾಗದೆ, 'ಸತ್ಯ'ವನ್ನೂ 'ಅನಾಚಾರ'ವೆಂಬಂತೆ ಮುಚ್ಚಿಡುವ ಸ್ಥಿತಿ ಅವಳದ್ದಾಗುತ್ತದೆ.

ಆದರೂ ಕೆಲವೊಮ್ಮೆ ತನ್ನ ಮನದಭಿಪ್ರಾಯವನ್ನು ಧೈರ್ಯದಿಂದ ಬಿಚ್ಚಿಡುವ ಪ್ರಯತ್ನವನ್ನು ಮಾಡುತ್ತಾಳೆ. ಹದಿನಾರರ ಹರೆಯದ ದಾಕ್ಷಾಯಿಣಿ ವಿಧವೆಯಾಗಿ ತಲೆ ಬೋಳಿಸಿಕೊಳ್ಳಲು ಒಪ್ಪದೆ ರಂಪ ಮಾಡಿದಾಗ, ಅತ್ತೆಮನೆಯವರೆಲ್ಲಾ ಅವಳನ್ನು ನಿಂದಿಸಿ 'ಮಡಿ' ಮಾಡಿಸಿಕೊಳ್ಳಲೇಬೇಕೆಂದು ಹಟಹಿಡಿಯುತ್ತಾರೆ. ಆಗ ಫಣಿಯಮ್ಮ "ನಮ್ಮ ಕಾಲಂತು ಹಾಂಗಾತು. ಈಗ ಕಾಲ ಬದಲಾದ್ದಲ್ವ ?.... ತಲೆ ಕೂದ್ಲಿದ್ರೆ

ನಷ್ಟೆಂತದು ?.... ಪ್ಯೆಲಿಗೆಯೆಲ್ಲ ಅದರಾಗೇ ಕೂತದಯ ? ಈಗಿನ್ನೂ ಕಣ್ಬಿಡು ಮಗೀಗೆ ಇದೆಂತ ಶಿಕ್ಷೆ ಹೇಳಿ ಮತ್ತೆ...." ಎಂದು ಕಂದಾಚಾರಿಗಳ ವಿರುದ್ಧ ದನಿ ಎತ್ತುತ್ತಾಳೆ. ಆದರೆ ಆ ಕ್ಷೀಣ ಧ್ವನಿ ಬಲು ಸುಲಭದಲ್ಲಿ ಅದುಮಲ್ಪಡುತ್ತದೆ. ಮೇಲಾಗಿ ,ತನ್ನ ಹಣೆ ಬರಹವಿದ್ದಂತೆ ಅನುಭವಿಸಿದ್ದಾಯ್ತು....ಯಾರಿಂದ ತನಗೇನಾಗ ಬೇಕು. ಹೇಗೋ ಒಂದು ಸಾಯುವವರೆಗೆ ದಿನದೂಡಿದರಾಯ್ತು ಎಂಬ ನಿರ್ಲಿಪ್ತತೆ ಅವಳನ್ನು ಬಂಡಾಯದ ಹಾದಿಯಿಂದ ಹಿಂಜರಿಯುವಂತೆ ಮಾಡಿ, ಅದೇ ಗಾಣದೆತ್ತಿನ ಸ್ಥಾನದಲ್ಲಿ ಉಳಿಸಿಬಿಡುತ್ತದೆ.

ಆದರೆ ಅಂತಹ ದುಃಸ್ಥಿತಿಯಿಂದ ಪಾರಾಗಿ. ಮಾನವ ಹಕ್ಕಿಗಾಗಿ ಹೋರಾಡುವ, ಬದುಕಿಗೆ ಅರ್ಥಕಂಡುಕೊಳ್ಳುವ ದಿಸೆಯಲ್ಲಿ ಧಾಪುಗಾಲಿಕ್ಕುವ ದಾಕ್ಷಾಯಿಣಿ ಸಾಮಾಜಿಕ ಕ್ರಾಂತಿಗೆ ಸ್ಫೂರ್ತಿಯಾಗುತ್ತಾಳೆ.

"ನಾನಂತೂ ಮಡಿ ಮಾಡಿಸ್ಕಳ್ಳೂದಿಲ್ಲ. ಹಾಂಗೆ ಬಲವಂತ ಮಾಡಿದ್ರೂ ನಾನು ಅವರ ಮನಿಗೆ ಹೋಗೂದಿಲ್ಲ. ಗಂಡಿಲ್ಲದ ಮ್ಯಾಲೆ ನಂಗೇನ್ಕೆಲಸ ಅವರ ಮನೇಲಿ ? ಅವರ ಮನೆ ಚಾಕ್ರಿ ಬಡಿಯುದಕನು ನಾನು ಹುಟ್ಟಿರೂದು ? ನಾ ಇಲ್ಲೆ ಇರ್ತನಿ" ಎಂದು ವಿರೋಧಿಸುವ ದಾಕ್ಷಾಯಿಣಿಯ ದಿಟ್ಟ ನುಡಿಯನ್ನು ಲೆಕ್ಕಿಸದೆ, ಅವಳ ತಲೆ ಬೋಳಿಸಿ ಅತ್ತೆ ಮನೆಯ ಚಾಕರಿಗೆ ಕಳಿಸಲಾಗುತ್ತದೆ.

ಅಲ್ಲಿ ದಾಕ್ಷಾಯಿಣಿ ಮೈದುನನಿಂದ ಗರ್ಭ ಧರಿಸುತ್ತಾಳೆ. ಅತ್ತೆ ಮನೆಯವರು ಆಗ ಅವಳನ್ನು ತೌರುಮನೆಗೆ ಅಟ್ಟಲು ಮುಂದಾಗುತ್ತಾರೆ. ಆಕೆ ಖಡಾಖಂಡಿತ ವಾಗಿ ಅವರ ಮಾತನ್ನೂ ತಳ್ಳಿ ಹಾಕುತ್ತಾಳೆ : "ನಿಮ್ಮ ಮಗನೇ ಬಸಿರು ತುಂಬಿದವನು ನಾಯಾಕೆ ತೌರಿಗೆ ಹೋಗ್ಲಿ ? ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ ಅಷ್ಟೇ ಸೈಯಲ್ಲ !"

ಹೆಣ್ಣನ್ನು ಒಂದು ನಿರ್ಜೀವ ಆಟಿಕೆ ಎಂಬಂತೆ ಬಳಕೆಮಾಡಲಿಚ್ಛಿಸುವ ಅಂಥ ಸಂಪ್ರದಾಯಸ್ಥರ ಬೆನ್ನಿಗೆ ಬಂಡಾಯದ ಚಾಟಿ ಬೀಸಿ ಬೆಚ್ಚಿ ಬೀಳಿಸುವ ಆಕೆ ಅತ್ತೆಯ ಮನೆಯಲ್ಲೇ ಗಂಡು ಮಗುವಿನ ತಾಯಿಯಾಗುತ್ತಾಳೆ.

"ನಿನಗೆ ಬಹಿಷ್ಕಾರ ಹಾಕಸ್ತಿವಿ" ಎನ್ನುವ ಗೊಡ್ಡುಗಳಿಗೆ "ನಡೀರಿ ನಾನು ಬರ್ತನಿ...ಅದು ಹ್ಯಾಂಗ ಬಹಿಷ್ಕಾರ ಹಾಕ್ತಾರೋ ನಾ ನೋಡ್ತನಿ !...." ಎಂದು ಅವರ ಎದೆ ಮೆಟ್ಟಿನಿಂತ ಮಹಿಷಮರ್ಧಿನಿಯಂತೆ ಗುಡುಗುತ್ತಾಳೆ.

ಬಾಯಿ ಸತ್ತ ಸಹಸ್ರಾರು ಫಣಿಯಮ್ಮಂದಿರುಗಳ ಸಮಾಧಿಯಿಂದ ಎದ್ದು ಬಂದ ಜೀವಂತಿಕೆಯ ಪ್ರತೀಕವಾದ ದಾಕ್ಷಾಯಿಣಿ, ಹೆಣ್ಣಿನ ಧೈರ್ಯ, ಸ್ಥೈರ್ಯ, ಶಕ್ತಿ, ಸಾಹಸಗಳ ಉತ್ತುಂಗತೆಯ ದರ್ಶನ ಮಾಡಿಸುತ್ತಾಳೆ.

'ಫಣಿಯಮ್ಮ' ಕೃತಿಯಲ್ಲಿ ವಿವರಿಸಲಾಗುವ 'ಹೊಲತಿ–ಹೊಲೆಗೇರಿ' ಎಂಬ ಶಬ್ದಗಳಿಗಿಂತಲೂ ಸಾವಿರ ಪಟ್ಟು ಮೈಲಿಗೆಯಾಗಿ ಮೂಡಿ ಬಂದಿರುವ ಬ್ರಾಹ್ಮಣ ವಿಧವೆಯರ ಕರಾಳ ಬದುಕು, ಇಂದಿನ ಶತಮಾನಕ್ಕೆ ಮುಕ್ತಾಯಗೊಂಡು, ಅವರಿಗೂ ಸಹ ಈ ಭೂಮಿಯ ಮೇಲೆ ಎಲ್ಲರಂತೆ ಬದುಕುವ ಹಕ್ಕಿದೆ ಎಂದು ಪರಿಗಣಿಸುವ ಹಂತಕ್ಕೆ ಮುಟ್ಟಿರುವುದು ಸಮಾಧಾನಕರ ಅಂಶ.

"ಈಗಿನ ಕಾಲದಾಗೆ ಮುದುಕೀರೇ 'ಮಡಿ'ಯಾಗುಲ್ಲ. ಸಮಾ ಮಾಡ್ತು ಹುಡುಗಿ. ಮಗು ಅವರ ಮನೇದೇ ಸೈಯಲ್ಲ. ಆಸ್ತಿ ಹಕ್ಕುದಾರ ಏನಾದ್ದೀಗ ?"

ಕಿಟ್ಟಪ್ಪನ ಈ ಮಾತು ಕತ್ತಲೆಯ ಸಮಾಜಕ್ಕೊಂದು ಮಿನುಗುವ ದೀಪವಾಗಿ ಶೋಭಿಸುತ್ತದೆ.

ಇಂದಿರಾರವರ ಕೆಲವು ಕಾದಂಬರಿಗಳು

○
○
○ ಕೆ. ವಿಜಯಶ್ರೀ

"ಬರಿ ಅನುಭವದಿಂದಲೇ ಪಡೆಯಲಾಗದ ಶೈಲಿಯನ್ನು ಶ್ರೀಮತಿ ಇಂದಿರಾ ಅವರು ಮೊದಲು ಪಡೆದುಕೊಂಡೇ ಕಾದಂಬರಿ ಲೇಖನಕ್ಕೆ ತೊಡಗಿದ್ದು ಅವರ ಪ್ರಗತಿಪರ ಬೆಳವಣಿಗೆಯ ಸೂಚಕವಾಗಿದೆ. ಪಾತ್ರಗಳ ಪರಿಸರಕ್ಕೆ ತಕ್ಕುದಾದ ಆಡು ನುಡಿಯನ್ನು ಬಳಸಿ ಶ್ರೀಮತಿ ಇಂದಿರಾ ಅವರು ಸಾಹಿತ್ಯದ ದೃಷ್ಟಿಯಿಂದ ಒಂದು ವಿಶಿಷ್ಟ ಯಶಸ್ಸನ್ನು ಗಳಿಸಿದ್ದಾರೆ. ಅದೆಂದರೆ ವಾತಾವರಣದ ನಿರ್ಮಾಣ, ಆ ವಾತಾವರಣಕ್ಕಾಗಿ ಶ್ರೀಮತಿಯವರು ಚಿತ್ರಿಸಿದ ಆಕಸ್ಮಿಕ ಘಟನೆಗಳು ಕೂಡ ಆ ಕ್ಷಣಕ್ಕೆ ಅತ್ಯಂತ ಸಹಜವೆನ್ನಿಸುವುವು." ಶ್ರೀರಂಗರ ಈ ಮಾತು ಇಂದಿರಾರವರ ಯಶಸ್ಸಿನ ರಹಸ್ಯವನ್ನು ಬಿಚ್ಚಿಡುತ್ತದೆ. ಇತ್ತೀಚೆಗೆ ಕನ್ನಡ ಕಾದಂಬರೀ ಪ್ರಪಂಚಕ್ಕೆ ಪರಿಚಿತರಾದ ಅವರ ಖ್ಯಾತಿ, ಹಾಗೂ ಅವರ ಇಳಿವಯಸ್ಸಿನ ಈ ಸಾಧನೆ ಆಶ್ಚರ್ಯಕರ. ಬರವಣಿಗೆಯ ಕಲೆ ಅವರಿಗೆ ನಿಸರ್ಗದತ್ತ ಕಾಣಿಕೆ. ಬೇಸರ ಹುಟ್ಟಿಸದಂತೆ ಕಥೆ ಹೇಳಬಲ್ಲರು, ಓದುಗರ ಆತ್ಮೀಯತೆಯನ್ನು ಸೆರೆಹಿಡಿಯಬಲ್ಲರು. ಬರವಣಿಗೆಯ ಸುಗಮತೆ, ಕಥಾನಕದ ಚೆಲುವಾದ ಹಬ್ಬುಗೆ, ಲಲಿತಶೈಲಿ, ಉತ್ತಮ ವರ್ಣನೆ, ಚತುರ ಸಂಭಾಷಣೆ ಅವರ ಬರವಣಿಗೆಯನ್ನು ಓದುಗರಿಗೆ ಆತ್ಮೀಯವನ್ನಾಗಿ ಮಾಡಲು ಸಹಕಾರಿಯಾಗಿದೆ. ಈ ಗುಣಗಳು ಅವರ ಕಾದಂಬರಿಗಳ ಅನೇಕ ಕುಂದುಗಳನ್ನೂ, ದೌರ್ಬಲ್ಯಗಳನ್ನೂ, ಸಪ್ಪೆತನವನ್ನೂ ಮರೆಮಾಡಿಬಿಡುತ್ತವೆ. ಇವರ ಹನ್ನೊಂದು ಕಾದಂಬರಿಗಳ ಸ್ಥೂಲ ಸಮೀಕ್ಷೆ ನಡೆಸಿದಾಗ ಕಂಡುಬರುವ ಅರಕೆಯೆಂದರೆ ಲೇಖಕಿ

ಜೀವನದ ಬಾಹ್ಯಸ್ತರವನ್ನು ಮಾತ್ರ ಚಿತ್ರಿಸಿ ತೃಪ್ತರಾಗುವುದು. ಇವುಗಳಲ್ಲಿ ಪ್ರಣಯ ಇಲ್ಲವೆ ಆದರ್ಶವನ್ನು ಜೀವನದ ವಿವಿಧ ಪರಿಸರದಲ್ಲಿ ಚಿತ್ರಿಸುವ ಕಾದಂಬರಿಗಳೇ ಹೆಚ್ಚು. ಈ ಪರಂಪರೆಯಿಂದ ದೂರ ಸಿಡಿದ ಕೃತಿಗಳು ಇವರ 'ಟು-ಲೆಟ್' ಮತ್ತು 'ತಪೋವನದಲ್ಲಿ'. ಇವರ ಮೊದಲ ಕಾದಂಬರಿ ತುಂಗಭದ್ರದಲ್ಲಿ ಅವರು ಹುಟ್ಟಿ ಬೆಳೆದ ಮಲೆನಾಡ ಪರಿಸರ, ಅಲ್ಲಿನ ಕಥೆ ಲೇಖಕಿಯಿಂದ ಉತ್ತಮ ಕಾದಂಬರಿಯಾಗಿ ಮಾರ್ಪಟ್ಟಿದೆ. ಕಂಡುಂಡ ಅನುಭವವಿಲ್ಲಿ ಜೀವಂತವಾಗಿ ಮೈತಳೆದಿದೆ. ಆದರೆ ಕಾದಂಬರಿಯ ವಸ್ತುವಿನ ಆಯ್ಕೆ ಉತ್ತಮವಿದ್ದರೂ ಅದರ ಬೆಳವಣಿಗೆ ಪೂರ್ಣವಾಗಿ ಕಾಣಬರುವುದಿಲ್ಲ. ನಗರ ಜೀವನದ ಚೌಕಟ್ಟಿನಲ್ಲಿ ಇಂತಹ ವಸ್ತುವೊಂದನ್ನು ನಿರ್ವಹಿಸ ಹೊರಟಿದ್ದಲ್ಲಿ ಅವಳ ಬದುಕು ಇನ್ನಷ್ಟು ಸಮಸ್ಯಾ ಪೂರ್ಣವೂ ಸಂಕೀರ್ಣವೂ ಆಗಿ ಪರಿಣಮಿಸಿ ವಸ್ತುವಿನಲ್ಲಿ ಹೆಚ್ಚಿನ ಆಳ ಬರುತ್ತಿತ್ತು. ಅಲ್ಲದೆ ಹಳ್ಳಿಯ ವಾತಾವರಣದಲ್ಲಿ ಕೂಡ ಈ ಸಮಸ್ಯೆ ಇನ್ನಷ್ಟು ದುರ್ಭರರೂಪ ತಾಳಬಹುದಿತ್ತು. ಆದರೆ ಕಾದಂಬರಿಗಾರ್ತಿ ವಸ್ತುವನ್ನು ಬೆಳೆಯುಗೊಡುವುದಿಲ್ಲ. ವಸ್ತು ತನ್ನ ಸಂಕೀರ್ಣತೆಯೊಡನೆ ಬೆಳೆಯುಲು ಅವಕಾಶಕೊಟ್ಟು ಅದು ತನಗೆ ನೀಡುವ ಸವಾಲುಗಳನ್ನು ಕೃತಿಕಾರ ಸಮರ್ಥವಾಗಿ ಎದುರಿಸುತ್ತಾ ಹೋದಾಗ ಕಾದಂಬರಿ ಹೆಚ್ಚು, ಹೆಚ್ಚು ಗಂಭೀರವೂ, ವರ್ಣಪೂರ್ಣವೂ, ಕ್ರಿಯಾಮಯವೂ ಆಗುತ್ತದೆ. ಆದರೆ ಇಂದಿರಾ ಇಂಥ ಧೈರ್ಯ ತೋರುವುದಿಲ್ಲ, ತುಂಗಭದ್ರೆಯರ ಕುರುಡು ಒಂದು ಸಮಸ್ಯೆಯೇ ಅಲ್ಲ ಎನ್ನುವಂತೆ ವರ್ತಿಸಿದ್ದಾರೆ. ಆಗೊಮ್ಮೆ, ಈಗೊಮ್ಮೆ ಕೇಳಿಬರುವ ಮೂಕಮ್ಮನವರ ಸೊಲ್ಲುಬಿಟ್ಟರೆ ಕೃಷ್ಣಾ, ಮಂದಾರಿಗಿಂತ ಈ ಸೋದರಿಯರು ಯಾವ ರೀತಿಯಲ್ಲೂ ಭಿನ್ನವಾಗಿ ತೋರುವುದಿಲ್ಲ, ಮಾತ್ರವಲ್ಲ ಶೀರ್ಷಿಕೆಯಾಗುವ ಮಟ್ಟಿನ ಪ್ರಾಮುಖ್ಯವೂ ಅವರದಾಗಿಲ್ಲ. ಆದರೂ ಕೆಲವೇ ಸಂದರ್ಭಗಳ ನಿರೂಪಣೆಯಲ್ಲಿಯೇ ಅವರ ಮನದ ಆಂದೋಲನವನ್ನು ತಿಳಿಸುವಲ್ಲಿ ಸ್ವಲ್ಪ ಯಶಸ್ವಿಯಾಗಿದ್ದಾರೆ. ತಮ್ಮ ಅಂಗವಿಕಲತೆಯ ಬಗೆಗೆ ಅವರೀರ್ವರ ಮುಗ್ಧ ಆಲೋಚನೆಗಳು, ಅವರ ಕೊರಗಿನ ನಿರೂಪಣೆ ಮನಕರಗಿಸುತ್ತದೆ. ಅವರ ಪ್ರತಿಮಾತಿನಲ್ಲೂ ಈ ಭಾವ ಧ್ವನಿತವಾಗುತ್ತದೆ. ಮಂದಾಳ ಗೊಂಬೆಯ ಬಗೆಗೆ ಅಲ್ಲಾವುದೀನನ ಕಥೆಗೆ ಅವರು ತೋರುವ ಪ್ರತಿಕ್ರಿಯೆಯಲ್ಲಿ ಅವರ ಆಕಾಂಕ್ಷೆಯ ತ್ರೀವ್ರತೆ ಕಾಣಬರುತ್ತದೆ. ಇವರ ಮದುವೆ ಮನೆಯವರಿಗೆ ಸಮಸ್ಯೆಯಾದಾಗ ಮುದ್ದು ರಾಮನೊಡನೆ ಇವರಾಡುವ ಮಾತು ಕನಿಕರ ಹುಟ್ಟಿಸುತ್ತದೆ. ಈ ಹಲವು ಸನ್ನಿವೇಶಗಳಿಂದ ಅವರ ಮಾನಸಿಕ ತುಮುಲದರಿವಾದರೂ ಅವರ ಬಾಳಿನ ಎಡರು ತೊಡರಿನ ಪೂರ್ಣ ಕಲ್ಪನೆ ನಮ್ಮದಾಗುವುದಿಲ್ಲ.

ಈ ಪಾತ್ರ ಮಾತ್ರವಲ್ಲ, ಬಹುಮಟ್ಟಿಗೆ ಕಾದಂಬರಿಯ ಯಾವ ಪಾತ್ರವೂ ಪೂರ್ಣ ಚಿತ್ರಣ ಪಡೆದಿಲ್ಲ. ಅಲ್ಲದೆ ರಾಘುವಿನ ಸ್ವಭಾವಕ್ಕೂ ಅವನ ನಡವಳಿಕೆಗೂ

ಸಾಮರಸ್ಯವಿಲ್ಲ. ಪಾತ್ರ ರಚನೆಯಲ್ಲಿ ತೋರಿ ಬರುವ ಈ ಶಿಥಿಲತೆ ಕೃತಿಯ ಅಪೂರ್ಣತೆಗೆ ಕಾರಣವಾಗಿದೆ.

ಕಾದಂಬರಿಯುದ್ದಕ್ಕೂ ಕಾಣಬರುತ್ತಾ ಮಾತಿಲ್ಲದ ಮೂಕಶೋಕದಿಂದಲೇ ನಾಗಭಟ್ಟರು ಕಣ್ಸೆಳೆಯುತ್ತಾರೆ. ಕಾದಂಬರಿಯ ಎಲ್ಲ ಘಟನೆಗಳಿಗೆ ಮೂಕಸಾಕ್ಷಿ ಅವರು. "ಮನೆಯ ಕಷ್ಟಗಳಿಗೆ ನೋವು ಯಾತನೆಗಳಿಗೆ ಮೈಯೊಡ್ಡಿ ಪೆಟ್ಟು ತಿಂದು, ತಮ್ಮ ಅಂತರಂಗದ ನೋವನ್ನು ಬೈತಿಟ್ಟು ಸಂತೈಸಲು, ಉಪಚರಿಸಲು, ಚೇತನ ತುಂಬಲು ಅಹರ್ನಿಶೆ ಹೆಣಗಾಡುತ್ತಿದ್ದ ಆ ನೊಂದಜೀವ ಮನೆಯ ನಿಷ್ಠಾವಂತ ಜೀತದಾಳಿನಂತೆ ವಿಧೇಯತೆ ತೋರುತ್ತಾರೆ ಮುದ್ದರಾಮನಿಗೆ". ಈ ಪಾತ್ರದ ನಡೆಯಲ್ಲಿ ಲೇಖಕಿಯ ನೈಪುಣ್ಯ ಕಾಣಬರುತ್ತದೆ.

ಇಂತಹ ಉತ್ತಮ ವಿಷಯದಾಯ್ಕೆ, ಈ ಸುಂದರ ನಿರೂಪಣಾ ಶಕ್ತಿ, ಆಡು ಮಾತಿನ ಕಸುವಿನೊಡನೆ ಮೇಳವಿಸಿರುವಾಗ ಪ್ರಯತ್ನಿಸಿದ್ದಲ್ಲಿ ಕೃತಿ ಮತ್ತೂ ಸುಂದರ ವಾಗುವ ಸಾಧ್ಯತೆಯಿತ್ತು. ಆದರೂ ಇದು ಅವರ ಮೊದಲ ಪ್ರಯತ್ನ ಎಂದರಿತಾಗ ಕೃತಿ ಲಕ್ಷ್ಯಾರ್ಹವೆನಿಸುತ್ತದೆ.

ತುಂಗಭದ್ರದಿಂದ ಸದಾನಂದಕ್ಕೆ ಲೇಖಕಿಯ ಬೆಳವಣಿಗೆ ಆಶ್ಚರ್ಯಕರ. ಇದು ಅವರ ಪ್ರಮುಖ ಮಾತ್ರವಲ್ಲ ಪ್ರಾತಿನಿಧಿಕ ಕೃತಿ ಕೂಡ. ಮಲೆನಾಡ ಹಿನ್ನೆಲೆ, ಅಲ್ಲಿನ ಆಡುಮಾತಿನ ಬಳಕೆ ಕಾದಂಬರಿಗೆ ಹೆಚ್ಚಿನ ಶೋಭೆಯಿತ್ತಿದೆ. ಮಾತ್ರವಲ್ಲ ಮಂಗಳೂರು, ಪುಣೆ ಕನ್ನಡದ ಬಳಕೆ ಅಭಿವ್ಯಕ್ತಿಯ ಸತ್ವವನ್ನು ಬೆಳಸಿದೆ. ಅಂದ ಮಾತ್ರಕ್ಕೆ ಈ ಕೃತಿ, ಇವರ ಮಿಕ್ಕ ಕಾದಂಬರಿಗಳು ಕಾಣಬರುವ ದೋಷಗಳಿಂದ ಮುಕ್ತವೆಂದಲ್ಲ. ಸದಾನಂದನ ಆಗಮನದವರೆಗಿನ ಸ್ವಜತೆ ಮುಂದೆ ಕಾಣದಾಗುತ್ತದೆ.

ರಾಮಣ್ಣನವರ ಜೀವನವೃಕ್ಷದಲ್ಲಿ ಮೂಡಿದ ಮೂರು ಹಣ್ಣುಗಳ ಕಟು–ಮಧುರ ಇತಿಹಾಸ ಇಲ್ಲಿನ ಕಥಾವಸ್ತು. ಚಿಕ್ಕಮಂಗಳೂರು, ದುಂಡು ಮಲ್ಲಿಗೆಯ ಆತ್ಮೀಯ ಸಂಸಾರವೆರಡರ ನೋವು, ನಲಿವಿನ ಚಿತ್ರಣ ಕಾದಂಬರಿ. ದುಂಡು ಮಲ್ಲಿಗೆಯ ವರ್ಣನೆ, ಅಲ್ಲಿನ ಗುಡ್ಡ, ನದಿ ಎಲ್ಲಕಿಂತ ಹೆಚ್ಚಾಗಿ ಅವೆರಡರ ನಡುವೆ ಓಡಾಡುತ್ತಿದ್ದ ' ನೂಕೋ ನರಸಿಂಹ ' ಹೆಸರಿಗ ತಕ್ಕಂತೆ ನೂಕಿಸಿಕೊಳ್ಳುವ ಅದರ ವೈಭವ ನಿಜಕ್ಕೂ ಅಪೂರ್ವ. ' ಯಥಾಪ್ರಕಾರ ನಿತ್ಯದ ರಥೋತ್ಸವ ನಡೆದಿತ್ತು. ಅದು ಯಾರಿಗೂ ಹೊಸ ವಿಷಯವಲ್ಲ. ನೂಕಿಸಿಕೊಳ್ಳದೆ ಎಂದೂ ಹೊರಟ ಅಭ್ಯಾಸವೇ ಅದಕ್ಕಿಲ್ಲ ' ಎಂದು ಕಾದಂಬರಿಯ ಮೊದಲಲ್ಲೆ ಪರಿಚಯವಾಗುತ್ತ ಈ ಕಾದಂಬರಿಯುದ್ದಕ್ಕೂ ಈ ವಿಶೇಷಣದಿಂದಲೇ ಎಲ್ಲರ ಗಮನ ಸೆಳೆಯುತ್ತದೆ.

ಲೇಖಕಿಯ ಅನುಭವದ ಪಾತ್ರಗಳೊಡನೆ, ಹಲವು ಪ್ರಭಾವಗಳಿಂದ ಚಿತ್ರಿತವಾದ ಪಾತ್ರಗಳನ್ನೂ ನಾವಿಲ್ಲಿ ಗುರುತಿಸಬಹುದು. ಕೈಲಾಸಂರವರ ಟೊಳ್ಳುಗಟ್ಟಿಯ ನಂತರದ ಅನೇಕ ಕಾದಂಬರಿಗಳಂತೆ ಇಲ್ಲಿಯೂ ಓದಿ ಪಾಸು ಮಾಡುವ ಮೂರ್ತಿ ಶಿಸ್ತುಗಾರ ಪುಟ್ಟಸ್ವಾಮಿ. ಬುದ್ಧಿವಂತನಲ್ಲದ ರಾಜು, ಸರಿ ಎಂದಿನಂತೆ, ಎಲ್ಲರ ಮೆಚ್ಚಿನ ಹೆಂಗರುಳ ಉಪಕಾರಿ. ಯಂಟತ್ತೆ, ಅಜ್ಜಮ್ಮನ ಪಾತ್ರದ ಸಹಜತೆ ರಾಜುವಿನಲ್ಲಿಲ್ಲ. ಅಂತರಂಗದ ಭಾವನೆ ಮುಖದ ಚಲುವಿನ ಪ್ರತಿಬಿಂಬ ಎನ್ನುವಂತೆ ಚಿತ್ರಿಸುತ್ತಾರೆ. ರಾಜುವಿನ ಪಾತ್ರದ ಬಗೆಗಿನ ಮಮತೆ ಅವನಲ್ಲಿ ಅತಿ ವಿಶೇಷತೆಯನ್ನು ಕಾಣುವಂತೆ ಮಾಡಿದೆ. ಅವನ ನಿಲುವು ವಿವೇಕಾನಂದರದಾದರೆ, ಅವನ ಸೌಮ್ಯತೆ, ಗೌತಮ ಶಾಂತಿ. ಅಲ್ಲದೆ ಅವನ ಕೊನೆಯ ನಾಟಕವಂತೂ ಅತಿ ಅಸಹಜ.

ಸದಾನಂದನ ಪಾತ್ರ ಲೇಖಕಿ ಕಂಡುದು ಎಂದರೂ ಅವನ ಆ ವಿಶ್ವರೂಪ ಕಾದಂಬರಿಯ ಸಹಜತೆಗೆ ಧಕ್ಕೆ ತಂದಿದೆ. ಅವರೇ ಕೊಡುವ ಪಟ್ಟಿಯಂತೆ ತಂತ್ರಿಯನ್ನು ಕೀಟಲೆ ಮಾಡುವ, ತೋತಾನಿಗೆ ನೆಲಗಡಲೆ ಕೊಡುವ, ಭೀಮಸೇನನನ್ನು ಮುದ್ದಾಡುವ, ರಾತ್ರಿ ಸರಿಹೊತ್ತಿನಲ್ಲಿ ಪಶುವೈದ್ಯನಾಗುವ, ಸಂಗೀತಗಾರ, ಚಿತ್ರಕಲಾವಿದ, ಪಾಕಶಾಸ್ತ್ರಿ, ಕಾಫಿ ಪ್ಲಾಂಟರ್ ಎಲ್ಲಕ್ಕಿಂತ ಹೆಚ್ಚಾಗಿ ಕಾದಂಬರಿಕಾರ ರಮಾನಂದನೇ ಈ ಸದಾನಂದ. ಈ ಎಲ್ಲದರಲ್ಲಿ ಪರಿಣತ ಮಾತ್ರವಲ್ಲ, ಇಷ್ಟು ವಿಭಿನ್ನ ವ್ಯಕ್ತಿತ್ವಗಳ ಸಮರಸವಾದ ಈ ವ್ಯಕ್ತಿಯಲ್ಲಿ ಯಾವ ದೌರ್ಬಲ್ಯವೂ ಇಲ್ಲದುದು ಮತ್ತೊಂದು ವೈಶಿಷ್ಟ್ಯ. ಅದರಲ್ಲೂ ರಾಜುವನ್ನು ಬಾಂಬೆಗೆ ಕರೆದೊಯ್ದು ತಾನೆ ರಮಾನಂದ ಎಂದು ತೋರುವುದಂತು ಅತಿ ವಿಚಿತ್ರ. ತನ್ನನ್ನು ತಾನೇ ಹೀಗೆ 'ಅನಾವರಣ' ಮಾಡಿಕೊಳ್ಳುವ ರಮ್ಯ ನಾಟಕೀಯ ಘಟನೆ ಅವನ ಸ್ವಭಾವಕ್ಕೆ ತೀರ ವಿರುದ್ಧ. ಪಾತ್ರದ ಈ ಅತಿಮಾನವತೆಯು ಚಿತ್ರಣ ಯಾವ ಘಟ್ಟಕ್ಕೆ ಮುಟ್ಟಿದೆ ಎಂದರೆ "ಅವರ ಸ್ಪರ್ಶ, ರಾಜುವಿನ ಶರೀರಕ್ಕೆ ಮಂತ್ರದಂಡ ಒಂದು ಸೋಂಕಿದ ಅನುಭವವಾಯ್ತು" ಅಂತೂ ಈ ಮಂತ್ರದಂಡದ ಸಹವಾಸದಿಂದ ರಾಜು ಮಲರೋಗಿಯಾಗಿ ಜಾನಕಿಯನ್ನು ಅಮೇರಿಕೆಗೆ ಕಳಿಸಿ, ಗೌರಿಯನ್ನು ತನ್ನವಳಾಗಿಸಿಕೊಂಡು, ಕಮಲಳಿಗೆ ಮರುವಿವಾಹ ಮಾಡುವ ಚೈತನ್ಯ ಪಡೆಯುತ್ತಾನೆ. !

ಹೀಗೆಂದಾಕ್ಷಣಕ್ಕೆ ಎಲ್ಲ ಪಾತ್ರಗಳೂ ಈ ದೋಷಕ್ಕೆ ಪಕ್ಕಾಗಿಲ್ಲ. ಈ ಎರಡು ಪಾತ್ರ ಬಿಟ್ಟರೆ ಮಿಕ್ಕೆಲ್ಲ ಪಾತ್ರಗಳೂ ಸಹಜ ಮಾನವರಾಗಿ ನಮ್ಮವರಾಗುತ್ತಾರೆ. ಬಚ್ಚನಂತಹ ಸಣ್ಣ ಪಾತ್ರ ಕೂಡ ಲೇಖಕಿಯ ಪೂರ್ಣ ಗಮನ ಪಡೆದಿದೆ.

ಇಲ್ಲಿನ ಸನ್ನಿವೇಶ ನಿರ್ವಹಣೆ ಲೇಖಕಿಯ ವೈಶಿಷ್ಟ್ಯ. ಆದರಲ್ಲೂ ಆತ್ಮೀಯ ಸಂಸಾರವೆರಡರ ನಡುವಿನ ಮಧುರ ಬಾಂಧವ್ಯ ತಿಳಿಸುವಲ್ಲಿ ಲೇಖಕಿಯ ಅನುಭವದ ಪೂರ್ಣ ಪರಿಚಯವಾಗುತ್ತದೆ. ಇಲ್ಲಿನ ಹಿರಿಯ ಜೀವಗಳು ಸಹ ಮಕ್ಕಳೊಂದಿಗೆ ಮಕ್ಕಳಾಗಿ ಬೆರೆಯುವವರು. ಆದರಲ್ಲೂ ಯಂಟತ್ತೆ ಚಿರಕಾಲ ನಿಲ್ಲಬಲ್ಲ ಪಾತ್ರ. ಕಾದಂಬರಿಯ ನಡೆಯಲ್ಲಿ ಅಂತಹ ಮುಖ್ಯ ಪಾತ್ರವಲ್ಲದಿದ್ದರೂ ಬರುವ ಸನ್ನಿವೇಶ ಗಳಲ್ಲೇ ಎಲ್ಲರ ಆತ್ಮೀಯರಾಗುತ್ತಾರೆ. ಈ ಬಗೆಯ ಬಾಳ ಸಂಜೆಯ, ಸರಳ ಮನದ ಪಾತ್ರಗಳು ಲೇಖಕಿಯ ಎಲ್ಲ ಕಾದಂಬರಿಗಳಲ್ಲಿ ಬಂದಿರುವುದು ಮಾತ್ರವಲ್ಲ, ಎಲ್ಲರ ಕಣ್ಸೆಳೆಯುತ್ತಾರೆ. ಇಲ್ಲಿನ ಯಂಟತ್ತೆ, ಗೆಜ್ಜೆಪೂಜೆಯ ಗುಂಡಮ್ಮ, ಹೆಣ್ಣಿನ ಆಕಾಂಕ್ಷೆಯ ಅಜ್ಜ, ಅನಂತರಾಯರು ಇವರೆಲ್ಲ ಬಾಳಿನಲ್ಲಿ ನೊಂದು ಬೆಂದವರು. ಅವರ ಆ ಅನುಭವವನ್ನು, ಹೃದಯವಂತಿಕೆಯನ್ನು ಅವರ ನಡೆ ನುಡಿಗಳಲ್ಲಿ ಬಿಂಬಿ-ಸಿದ್ದಾರೆ. ಈ ಬಗೆಯ ಜೀವಗಳ ಅಭ್ಯಾಸ ಅವರಿಂದ ಪೂರ್ಣ ನಡೆದಿದೆ ಅವರ ಈ ಅರಿವಿನ ಸಾಫಲ್ಯ ಈ ಪಾತ್ರ ಚಿತ್ರಣದಲ್ಲಿ ಕಾಣಬರುತ್ತದೆ.

ಕಮಲಳ ಪಾತ್ರದಲ್ಲಿ ಪೂರ್ಣವಾಗಿಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ಕಂಗಾಲಿನಿ ಯೊಬ್ಬಳ ಅಂತಃಕರಣದ ಹೊಯ್ದಾಟವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಕಾಣಬರುತ್ತದೆ. ಅವಳ ನೊಂದ ಮನದ ನೂರು ಆಲೋಚನೆ, ಅದರ ಪರಿಣಾಮ ತಿಳಿಸುವಲ್ಲಿ ಲೇಖಕಿಯ ಮುನ್ನಡೆ ಕಾಣುತ್ತದೆ. ತುಂಗ-ಭದ್ರದಲ್ಲಿ ಕೇವಲ ಒಂದೇ ಒಂದು ಸಂದರ್ಭದಲ್ಲಿ ಹಣಕುವ ಈ ಅಂತರಂಗದ ಅಭ್ಯಾಸ ಇಲ್ಲಿ ಹಲವೆಡೆಗಳಲ್ಲಿ ಕಾಣುತ್ತದೆ.

ಇಲ್ಲಿನ ತಮ್ಮಯ್ಯ, ತುಂಗ-ಭದ್ರದ ನಾಗಾಭಟ್ಟರು, ಕಲಾದರ್ಶಿಯ ನಾಗಪ್ಪಯ್ಯ ಗೆಜ್ಜೆ ಪೂಜೆಯ ಶಾಸ್ತ್ರಿಗಳು ಇವರೆಲ್ಲ ಚೆಲುವಿನಂತರಂಗದ, ಸರಳಮನದ ಮಿತ ಭಾಷಿಗಳು. ಎಲ್ಲ ಸಂದರ್ಭದಲ್ಲಿ ಮನದ ತುಮುಲವನ್ನು ಹತ್ತಿಕ್ಕುವ ಸಮ ಮನೋಭಾವದ ವ್ಯಕ್ತಿಗಳು. ಇವರ ಸಂದರ್ಭಗಳು ಬೇರೆಯಾದರೂ ಸಮಸ್ಯೆಗೆ ಇವರು ತೋರುವ ಪ್ರತಿಕ್ರಿಯೆ ಒಂದೇ. ಇವೂ ಲೇಖಕಿಯ ನಿರಂತರ ಅಭ್ಯಾಸ, ಅನುಭವದ ಪರಿಪಾಕ.

ಮಲೆನಾಡ ಸಂಭಾಷಣೆ ಕಾದಂಬರಿಯ ಚೆಲುವಿಕೆಯ ಮತ್ತೊಂದು ಅಂಶ. ಒಂದೆರಡು ಸಂಭಾಷಣೆಯನ್ನು ಮೆಲುಕಾಡಿಸಿದರೆ ಸಾಕು ಭಾಷೆ ಕಾದಂಬರಿಗಿತ್ತಿರುವ ಕಸುವಿನರಿವಾಗುತ್ತದೆ. ಮೂರ್ತಿಯ ರಿಸೆಪ್ಷನ್‌ಕಂಡು ಪುಟ್ಟಮ್ಮನಾಡುವ ಮಾತು:

'ಇದ್ಯಾವ ಸೀಮೆ ಸಂಪ್ರದಾಯವೇ ಅತ್ಗಮ್ಮ. ಮದುಮಕ್ಳ ಸ್ವಂಟ ಕಾಲು ಮುರದ್ ಹೋಗಾದೆ ಸೈ ಈ ಪಾಟಿ ಕುಣದ್ರೆ. ಕೂತಲ್ಲೆ ಕೈ ಮುಗದ್ರೆ ಆಗ್ದ ?"

ಮದುವೆಗೆ ಮುನ್ನ ಯಂಟತ್ತೆಯ ಪ್ರಶ್ನೆ ;

'ಜಾತ್ಕ, ಪಾತ್ಕ ಒಂದೂ ನೋಡೋ ತಂಟಿಲ್ವೇಸೋ ರಾಮು? ಇದ್ಯಾವ್ಸೀಮೆ ಮದುವೆನೋ ?'

'ಯಂಟಿ ನೀ ಇನ್ನೂ ಕೃತಯುಗದಾಗೇ ಇದ್ದಿ ಕಣೆ. ಇದು ಕಲಿಯುಗದ ಕೊನೆ. ದನ ತಿನ್ನೋರ್ಗೆ ಗೊಬ್ಬರದಾಣೇಂತ ಇದೆ. ಶಾಸ್ತ್ರ ಸಂಪ್ರದಾಯ ಯಲ್ಲ ಬಿಟ್ಟೋರ್ಗೆ ಅದೆಲ್ಲ ಯಾತ್ಗೆ?'

ಹುಟ್ಟ ಬೆಳೆದ ಮಲೆನಾಡ ಕನ್ನಡದಷ್ಟೇ ಸೊಗಸಾಗಿ ಪುಣೆ ಕನ್ನಡವನ್ನೂ ಕಾದಂಬರಿಯುದ್ದಕ್ಕೂ ತಂದಿರುವುದು ಅದರ ಸೊಗಸನ್ನು ಮತ್ತೂ ಹೆಚ್ಚಿಸಿದೆ. ಅದ ನ್ನೋದಿದಾಗ ಗೌರಿಯಂತೆ ನಮಗೂ ನೆನಸಿ ನಗುವ ಮನವಾಗುತ್ತದೆ.

'ಅಜ್ಜಮ್ಮನೋರೇ ನಿಮ್ಮ ಇಡ್ಲಿ ದುಂಡು ಮಲ್ಗೆ ದಂಡಿ ಇದ್ದಂಗದೆ. ನಿಮ್ಮ ತಿಂಡಿಗೆ ನಾವು ಏನು ಕೊಟ್ಟರೆ ಮುಗದೀತು. ನಮ್ಮ ಅಡಿಗೆಯಾಕಿ ಇಡ್ಲಿ ಮಾಡ್ತಾಳ ನೋಡಿ ಫೋಟ್ ಕೊಕ್ರೆ ಪಿಷ್ಠ ಇದ್ದಾಂಗ ಇರತದ. ನಮ್ಮ ಕರ್ಮ ಏನೆಂಬೋಣ ಆಕಿ ಕೊಟ್ಟದ್ದು ನಾವು ತಿಂದದ್ದು.'

ಆದರೂ ಕೃತಿಯದು ಸಾರ್ಥಕ ಶೀರ್ಷಿಕೆಯಲ್ಲ. ಕಾದಂಬರಿಯ ಅರ್ಧದಲ್ಲಿ ಪ್ರವೇಶಿಸುವ ಸದಾನಂದನ ಹೆಸರು ಕಾದಂಬರಿಯ ಶಿರೋನಾಮೆಯಾಗುವುದರ ಔಚಿತ್ಯ, ಅರಿವಾಗುವುದಿಲ್ಲ.

ಒಟ್ಟನಲ್ಲಿ ಕಾದಂಬರಿ ಓದಿಸಿಕೊಂಡು ಹೋಗುತ್ತದೆ, ಮಾತ್ರವಲ್ಲ ಮೆಚ್ಚುಗೆ ಮೂಡಿಸುತ್ತದೆ. ಸದಾನಂದನ ಅತಿ ಮಾನವತೆಯ ಚಿತ್ರಣ ಬಿಟ್ಟಲ್ಲಿ ಕಾದಂಬರಿ ನಿಜಕ್ಕೂ ಕಾದಂಬರಿಗಳೆಲ್ಲಕ್ಕಿಂತ ಉತ್ತಮ ರಂಜನೀಯ ಕೃತಿ !

ಈಗಾಗಲೇ ವೇಶ್ಯಾಸಮಸ್ಯೆಯ ಬಗೆಗೆ ಕನ್ನಡದಲ್ಲಿ ಸಾಕಷ್ಟು ಸಾಹಿತ್ಯ ಬಂದಿದೆ. ಈ ದಿಶೆಯಲ್ಲಿ ಕಾದಂಬರಿಯ ಕೊಡುಗೆಯೂ ಅಲ್ಪವಲ್ಲ.

ಅ.ನ.ಕೃ. ನಂತರದ ಅನೇಕ ಕಾದಂಬರಿಗಳು ಈ ವಿಷಯದ ಬಗೆಗೆ ವಿವೇಚಿಸಿವೆ. ಅ.ನ.ಕೃ. ಅವರ ಕಾದಂಬರಿಗಳು ಕೇವಲ ಆ ಬಗೆಯ ಜೀವನವನ್ನು ತೆರೆದು ತೋರಿಸಿದರೆ, ಈಗಿನ ಕಾದಂಬರಿಗಳು ಅನಾಥ ಹೆಣ್ಣಿಗೆ ಅದೊಂದು ಅನಿವಾರ್ಯ ಶಾಪ ಎಂದು ಎತ್ತಿ ತೋರಿದೆ. ಸಮಾಜ ಆ ಹೆಣ್ಣಿಟ್ಟ ಎಲ್ಲ ಹೆಜ್ಜೆಯನ್ನು ಟೀಕಿಸಿ, ಅವಳು ವಿಧಿಯಿಲ್ಲದ ಆ ಸ್ಥಿತಿಗಿಳಿಯಬೇಕಾಗುತ್ತದೆ. ಆ ಸ್ಥಿತಿಗೆ ತಂದ ಸಮಾಜವೇ ಮತ್ತೆ ಅವಳನ್ನು ನಿಂದಿಸುತ್ತದೆ. ಹೀಗೆ ವ್ಯಕ್ತಿ ಜೀವನದಲ್ಲಿ ಸಮಾಜದ ಪ್ರಭಾವ. ಕೈವಾಡದ ಫಲ ಈ ಬಗೆಯ ಜೀವನ. ಹೆಣ್ಣಾಗಿ ಹೆಣ್ಣಿನ ಈ ಸಮಸ್ಯೆಯನ್ನು ತ್ರಿವೇಣಿ, ಇಂದಿರಾ ಕಂಡಿದ್ದಾರೆ. ತ್ರಿವೇಣಿಯವರ ಹೂ-ಹಣ್ಣಿನ ರಮೆ ಸಮಾಜದ ಚುಚ್ಚುಗಣ್ಣು, ಕರುಳ ಕುಡಿಯ ಬದುಕಿಗಾಗಿ ಈ ಜೀವನ ಅವಲಂಬಿಸಿದರೆ, ಗೆಜ್ಜೆಪೂಜೆಯ ಅಪರ್ಣಾ ಬೆಳೆದ ವಾತಾವರಣದಿಂದ ಅದಕ್ಕಿಂತ ಹೆಚ್ಚಾಗಿ ಸಂಗವ್ವನ ಆಶಾಪೂರ್ತಿಗೆ ವೇಶ್ಯೆಯಾಗುತ್ತಾಳೆ. ಮನವನ್ನು ಚಂದ್ರಶೇಖರನಿಗಿತ್ತು ಶೆಟ್ಟರ ಮೂಲಕ ತಾಯಿಯ ಬಯಕೆ ತೀರಿಸುತ್ತಾಳೆ. ಇಂತಹ ವಾತಾವರಣದಲ್ಲಿ ಬೆಳೆದ ಚಂದ್ರಿ ತನ್ನ ಸುತ್ತಲ ಸಮಾಜದ ಚುಚ್ಚುಗಣ್ಣು, ಪಿಸುಮಾತಿಗೆ ಬೇಸರಿಸುತ್ತಾಳೆ. ಚಿಕ್ಕಂದಿನಲ್ಲಿ ಸೂಳೆ ಎಂದರೇನು ಎಂದರಿವ ಮೊದಲೆ ಆ ಎಳೆ ಮನಕ್ಕೆ ಘಾಸಿಯಾಗುತ್ತದೆ. ಅವಳ ವಿವೇಚನಾಶಕ್ತಿ ಬೆಳೆದಂತೆ ಎಲ್ಲೆಡೆ ಅಪಹಾಸ್ಯವನ್ನೇ ಗುರುತಿಸಲೆತ್ನಿಸುತ್ತಾಳೆ. ಗೆಳತಿಯರ ವಿವಾಹ ಇವಳ ಮನದಲ್ಲಿ ಬಯಕೆ ಬಿತ್ತುತ್ತದೆ. ತಾ ಬಯಸಿದ ಸೋಮು ತನ್ನ ತಂಗಿಯ ವಸ್ತುವಾದಾಗ ಅವಳ ಮನ ಆ ಕುದಿಯೊಂದಿಗೆ ತಂದೆಯನ್ನುಳಿಸುವ ಭಾರವನ್ನೂ ಹೊರಬೇಕಾಗುತ್ತದೆ. ಈ ಎಲ್ಲ ಭಾರಕ್ಕೆ ಕುಸಿದ ಚಂದ್ರಿಗೆ ತಂದೆಯಿತ್ತ ವಜ್ರದುಂಗುರ ಅಮೃತವಾಗಿ ಪರಿಣಮಿಸುತ್ತದೆ. ಈ ಪಾತ್ರ ನಿರ್ವಹಣೆ ಕಂಡಾಗ ಅಚ್ಚರಿಯಾಗುತ್ತದೆ. ಮೊದಲ ಕಾದಂಬರಿಯಲ್ಲಿನ ಶಿಥಿಲತೆ ಇಲ್ಲಿ ತುಂಬಿ ಬಂದಿದೆ. ಚಂದ್ರಿಯ ಮನದ ಬೆಳವಣಿಗೆ ಪೂರ್ಣವಾಗಿ ಚಿತ್ರಿತವಾಗಿದೆ. ಆದರೆ ಲೇಖಕಿ ಹೆಣ್ಣಿನ ಜೀವನದ ಪರಮೋದ್ದೇಶ ವಿವಾಹ ಎನ್ನುವಂತೆ ಮಾಡಿದ್ದಾರೆ. ಚಂದ್ರಿ, ವಿದ್ಯಾವತಿ. ತನ್ನ ಕೈಹಿಡಿವ ಧೈರ್ಯ ಗಂಡಿಗಿಲ್ಲ ಎಂದರಿತಾಗ ತನ್ನ ಶಿಕ್ಷಣದ ಸದುಪಯೋಗ ಸಾಧ್ಯವಿತ್ತು. ಅವಳ ಪ್ರಭಾವಿ ವ್ಯಕ್ತಿತ್ವ ಸುತ್ತಲು ನಂಬಿಕೆ ಗಳಿಸಲು ಸಮರ್ಥವಿತ್ತು. ಸಂಗವ್ವನನ್ನೆದುರಿಸುವ ಧೈರ್ಯವಿದೆ. ತಾಯಿಯ ಮನ ಪರಿಚಯವಿದೆ. ಮಾನಸಿಕವಾಗಿ ಎಂದೆಂದೂ ಸೋಮುವಿನವಳಾಗಿ ತನ್ನ ಭಾವನೆಗೂ ಬೆಲೆಕೊಡಬಹುದಿತ್ತು. ಈ ಎಲ್ಲ ಸಾಧ್ಯತೆಯನ್ನು ತಿರಸ್ಕರಿಸಿ ಮದುವೆಯೇ ಜೀವನದ ಮುಖ್ಯ ಧ್ಯೇಯ ಎನ್ನುವಂತೆ ಮಾಡಿದ್ದಾರೆ. ಅಲ್ಲದೆ ಗಂಗಯ್ಯನನ್ನು ವಂಚಿಸಿ ಚಂದ್ರಿ ಹಿಂದಿನ ಘನತೆ ಉಳಿಸಿಕೊಳ್ಳದಾಗುತ್ತಾಳೆ. ಅವಳ ಸಾವಿನಿಂದ ಓದುಗರ ಸಹಾನುಭೂತಿ ಗಳಿಸುವ ಭರದಲ್ಲಿ ತಮ್ಮರಿವಿಲ್ಲದೇ ಪಾತ್ರವನ್ನು ಕಳೆಗೆಡಿಸಿದ್ದಾರೆ. ಅವಳ ಸಾವು ಅವಳ ವ್ಯಕ್ತಿತ್ವದ ಹಿರಿಮೆಯನ್ನಾಗಲೀ, ಅವಳ ಆದರ್ಶವನ್ನಾಗಲೀ, ಬಿಂಬಿಸಲಸಮರ್ಥ

ವಾಗಿದೆ. ಒಟ್ಟಿನಲ್ಲಿ ಸರಿಯಾದ ವೈಚಾರಿಕ ಹಿನ್ನೆಲೆಯಿಲ್ಲದೆ ಸಮಸ್ಯೆಯನ್ನು ಚರ್ಚಿಸ ಹೋಗಿ ಕೊನೆಗೆ ಭಾವನಾವಶತೆಯಲ್ಲಿ ತೇಲಿಸಿಬಿಡುತ್ತಾರೆ.

ಅಪರ್ಣಾಳ ವ್ಯಕ್ತಿತ್ವ, ಹಿರಿತನ, ಎದೆಗುದಿ ಸುಂದರ ನಿರೂಪಣೆ ಪಡೆದಿದೆ. ಮಾಲತಿ ಹೆಣ್ಣಿನ ಆಕಾಂಕ್ಷೆಯ ಪಾರ್ವತಿಯ ಪಡಿಯಚ್ಚು. ಈ ಒಂದೇ ಬಗೆಯ ಎರಕ ಇವರ ಕಾದಂಬರಿಗಳಲ್ಲಿ ಕಾಣಬರುತ್ತದೆ.

ಇಲ್ಲಿನ ಸೋಮು ರಾಘುವಿನ ಮತ್ತೊಂದು ಮುಖ. ಇವರ ಕಾದಂಬರಿಯ ಸ್ತ್ರೀ ಪಾತ್ರಗಳಲ್ಲಿ ಕಾಣಬರುವ ಕೆಚ್ಚು ಇವರ ಯಾವ ಪುರುಷ ಪಾತ್ರದಲ್ಲೂ ಕಾಣ ಬರುವುದಿಲ್ಲ. ಎಲ್ಲ ದೌರ್ಬಲ್ಯದ ಮುದ್ದೆಗಳು. ಇವರ ಗಂಡು ಪಾತ್ರಗಳು ಪ್ರೀತಿಸ ಬಲ್ಲರು ಮಾತ್ರ. ಅದನ್ನು ಳಿಸಿಕೊಳ್ಳುವ ಚೈತನ್ಯವಿಲ್ಲ. ಸೋಮುವೂ ಇದಕ್ಕೆ ಹೊರತಲ್ಲ. ಚಂದ್ರಳ ಸೌಂದರ್ಯ ತನ್ನದಾಗಬೇಕು. ಅವಳಿಂದ ಸುಖ ಬೇಕು. ಆದರೆ ಹಿರಿಯರನ್ನೆದುರಿಸಲಾರ. ವಿದ್ಯಾವಂತ, ವಿವೇಚನಾಶಕ್ತಿಯಿದ್ದೂ ಈ ಬಗೆಯ ದೌರ್ಬಲ್ಯಕ್ಕೆ ಒಳಗಾಗಬಲ್ಲನೆ ?

ಸನ್ನಿವೇಶದ ನಡೆಯಲ್ಲಿ, ಪಾತ್ರ ಚಿತ್ರಣದಲ್ಲಿ ಲೇಖಕಿಯ ಪಳಗಿದ ಕೈ ಕಾಣ ಬರುತ್ತದೆ. ಅಪರ್ಣಾ ಅಗ್ರಹಾರಕ್ಕೆ ಬಂದಾಗ ಅಲ್ಲಿನ ಪ್ರತಿಕ್ರಿಯೆ ಸಹಜವಾಗಿ ಚಿತ್ರಿತವಾಗಿದೆ. ಕಾದಂಬರಿಯ ಮೊದಲಲ್ಲಿ ಸೋಮುವಿನ ಮನಸೆಳೆದು ಹಿರಿಯರಿಂದ ತಿಪ್ಪೆಯಲ್ಲೆಸೆಯಬೇಕಾಗಿ ಬಂದ ಕಮಲದ ಚಿತ್ರ ಕಾದಂಬರಿಯಲ್ಲಿ ನಡೆಯಲಿರುವ ಪ್ರಧಾನ ಘಟನೆಗಳ ಒಂದು ಸಂಕ್ಷಿಪ್ತ ಸಾಂಪ್ರದಾಯಿಕ ಸಂಕೇತ.

ಇವರ 'ಕಲಾದರ್ಶಿ'ಯಲ್ಲಿ ಮಲೆನಾಡ ಪೂರ್ಣ ಚಿತ್ರಣ ದೊರೆಯುತ್ತದೆ. ಮಲೆನಾಡ ಕುಗ್ರಾಮ ಒಂದರಲ್ಲಿ ಕಲಾವಿದ ಕೃಷ್ಣಮೂರ್ತಿ ತನ್ನ ಚಿತ್ರಕಲೆಯ ಸ್ಫೂರ್ತಿದಾಯಿನಿ, ಕಲಾದರ್ಶಿಯನ್ನು ಕಾಣುತ್ತಾನೆ. ಕರಡು, ಮುರುಡಾಗಿದ್ದ ಅವಳ ಮೈಮನಸಗಳನ್ನು ತಿದ್ದಿ ಆ ಗಂಧದ ಕೊರಡನ್ನು ಸುಂದರ ವಿಗ್ರಹವಾಗಿಸಿ ತನ್ನ ಬಾಳ ಸಂಗಾತಿಯಾಗಿ, ತನ್ನ ಕಲಾದರ್ಶಿಯಾಗಿ ಸ್ವೀಕರಿಸುತ್ತಾನೆ. ಹೀರೆಹಳ್ಳಿಯಲ್ಲಿ ಕೃಷ್ಣಮೂರ್ತಿ ಕಳೆದ ಹದಿನೈದು ದಿನಗಳು ಅಲ್ಲಿನ ಅವನ ಅನುಭವ ನಂತರದ ಪ್ರಯತ್ನ ಕಾದಂಬರಿ.

ಇಲ್ಲಿ ಮಲೆನಾಡಿನ ರಮ್ಯ ಪ್ರಕೃತಿಯೊಡನೆ ಕೃತಿ-ಕರ್ತೃವಿಗಿರುವ ನಿಕಟ ಸಂಪರ್ಕ

ಕಾದಂಬರಿಗೆ ಜರತಾರಿ ಅಂಚಾಗಿ ಕಳೆಗಟ್ಟಿದೆ. ಎಂದಿನಂತೆ ಆಡುನುಡಿ ಸೊಬಗನ್ನು ಹೆಚ್ಚಿಸಿದೆ. ಇವರ ಉತ್ತಮ ಕಾದಂಬರಿಗಳಲ್ಲಿ ಇದೂ ಒಂದು.

ಯಾವ ಹೆಚ್ಚುಗಳಿಕೆಯೂ ಇಲ್ಲದ ಅದೇ ಹಳೆಯ ರಾಗದ ಸಪ್ಪೆ ಕೃತಿ ಇವರ 'ಗಿರಿಬಾಲೆ'. ತಾನು ಹುಟ್ಟಿ ಬೆಳೆದ ಪರಿಸರ; ತನ್ನ ಹಿರಿಯರ ಆಚಾರ-ವಿಚಾರಗಳು, ಶೀಲ ಸಂಪ್ರದಾಯಗಳು, ಸತ್ಯ, ಧರ್ಮ, ಕರ್ತವ್ಯನಿಷ್ಠೆ ಇವೇ ಜೀವಿತದ ಉಸಿರು-ನಾಡಿ–ಧನ್ಯತೆ. ಅದೇ ತನ್ನ ಮುಕ್ತಿ ಎಂದು ನಂಬಿದ ಮುಗ್ಧೆ ಶಂಕರಿಗೆ ಜೀವನದ ನೋವಿತ್ತ ಅನುಭವ, ಹಿರಿತನ ಕಥಾವಸ್ತು. ಶಂಕರಿಯ ಅತಿ ಸೌಮ್ಯತೆ, ಶಾಂತಿ ಬೇಸರ ತರಿಸುತ್ತದೆ. ವೆಂಕಟೇಶನ ಅನಾಗರಿಕ ಪಶುತ್ವ, ಚೆಲ್ಲಾಟದ ನಂತರದ ಪರಿವರ್ತನೆಯ ಹಂತಗಳ ಪರಿಚಯವಿಲ್ಲ. ಯಾವ ವಿಶೇಷವೂ ಇಲ್ಲದೆ ಇಂತಹ ಹತ್ತಾರು ಕಾದಂಬರಿಗಳ ಸಾಲಿಗೆ ಇದು ಮತ್ತೊಂದು ಕೊಡುಗೆ. 'ಅಪಜಯ' 'ಸವತಿ ಗಂಧವಾರಣೆಯ' ಪ್ರಭಾವವಿಲ್ಲಿ ಕಾಣಬರುತ್ತದೆ.

ಸಮಸ್ಯೆಯೇ ಇಲ್ಲದ ಸರಳ ಸ್ವಾಭಾವಿಕ ಕೌಟುಂಬಿಕ ಚಿತ್ರಣ 'ಮನತುಂಬಿದ ಮಡದಿ'. ಅತಿ ತೆಳು ಹಂದರದ ಚಲುವಾದ ಹಬ್ಬುಗೆ ಇಲ್ಲಿನ ಕೌಶಲ. ತಪಸ್ವೀ ಕುಮಾರ್ ಅವರೆನ್ನುವಂತೆ "ಕಾದಂಬರಿಯಲ್ಲಿ ಯಾವುದೊಂದು ಘರ್ಷಣೆ, ಚಿಂತೆ, ಸಮಸ್ಯೆಯೇ ಇರದೆ, ಎಲ್ಲವೂ ಮಂಗಳಾಂತವಾಗಬೇಕೆಂಬುದು ಯೋಜನೆ. ಪುಸ್ತಕ ದಪ್ಪವಾಗಿರಬೇಕು, ಸರಿ ಒಂದೇ ಭಾವದ ವಿವರಣೆಯ ವಾಕ್ಯಗಳನ್ನು ಬೇರೆ ಬೇರೆ ಸಾಲಾಗಿ ಬಿಡಿಬಿಡಿಯಾಗಿ ಬರೆದರಾಯ್ತು."

ಇಂತಹದೇ ಮತ್ತೊಂದು ಸಾಧಾರಣ ಕೃತಿ 'ಹೆಣ್ಣಿನ ಆಕಾಂಕ್ಷೆ' ಕೂಡ. ಇಲ್ಲಿ ಹೇಳುವಂತಹ ವಿಶೇಷವಿಲ್ಲ. ಯಾವುದೋ ನಾಲ್ಕು ಪಾತ್ರಗಳ ಮೇಲೆ ಗಮನವೆಲ್ಲ ಕೇಂದ್ರೀಕರಿಸಿ ಇತರ ಪಾತ್ರಗಳನ್ನು ಕೈಬಿಡುವುದು ಕಾದಂಬರಿಯ ಸಹಜತೆಗೆ ಭಂಗ ತಂದಿದೆ.

ಹೊಸತನವೇನೂ ಇಲ್ಲದ ಇವೆಲ್ಲ ವೈಶಿಷ್ಟ್ಯಗಳಿಂದ ವಂಚಿತವಾದ ಕಾದಂಬರಿ 'ತಾಪದಿಂದ ತಂಪಿಗೆ.' ಚಿತ್ರಳಿಂದ ತಿರಸ್ಕೃತನಾಗಿ ತಪ್ತನಾದ ಬಾಲುವಿಗೆ ಮಲೆನಾಡಿತ್ತ ತಂಪು ಕಾದಂಬರಿಯ ವಸ್ತು. ಈ ತೆಳುವಾದ ತಡಿಕೆ ಇವರ ಎಂದಿನ ಸಂಭಾಷಣೆಯ ಬಲವೂ ಇಲ್ಲದೆ ಕುಸಿದಿದೆ. ಸಂಘರ್ಷದ ಮೂಲಕ ಪಾತ್ರದ ಬೆಳವಣಿಗೆಯಿಲ್ಲ. ಪತ್ರಕರ್ತನ ವರದಿಯಂತಹ ನೀರಸ ಹೇಳಿಕೆಯಿಂದ ಕೃತಿ ಸೊರಗಿದೆ. ಮಲೆನಾಡ

ವರ್ಣನೆ ಕಲಾದರ್ಶಿಯ ಪುನರಾವೃತ್ತಿ. ಸಣ್ಣ ಕಥೆಯೊಂದರ ಮಿತಿಯಲ್ಲಿ ಸಹಜವಾಗಿ ಅರಳಿಕೊಳ್ಳುತ್ತಿದ್ದ ಮಿತಸ್ವರೂಪದ ವಸ್ತುವನ್ನು ಕಾದಂಬರಿಯ ವಿಸ್ತಾರಕ್ಕೆ ಬಲಾತ್ಕಾರವಾಗಿ ಹಿಂಜಿ ಅದು ಜಾಳುಜಾಳಾಗಿ ಹೋಗಿದೆ.

'ಸದಾನಂದ' ಕೃತಿ ರಚಿಸಿದ ಕಲಾವಿದೆಯಿಂದ ಬಂದ ಕಾದಂಬರಿಗಳಿವು ಎಂದರಿತಾಗ ನಿರಾಶೆಯಾಗುತ್ತದೆ. ಒಟ್ಟಿನಲ್ಲಿ ಈ ನಾಲ್ಕು ಕಾದಂಬರಿಗಳು ಯಾವ ರೀತಿಯಲ್ಲೂ ತಮ್ಮ ಅನನ್ಯತೆಯನ್ನು ಪ್ರಕಟಿಸದೆ ಇಂತಹ ಹೇರಳ ಕಾದಂಬರಿಯಲ್ಲಿ ಸೇರಿಹೋಗುತ್ತವೆ.

'ನನ್ನ ಬರವಣಿಗೆಯೆಲ್ಲ ನನ್ನ ಅನುಭವವನ್ನಾಧರಿಸಿದೆ, ಯಾವುದೂ ಕಾಲ್ಪನಿಕ ವಲ್ಲ' ಎನ್ನುವ ಇಂದಿರಾರವರು ಭೂಗರ್ಭದಲ್ಲಿ ಅಡಗಿಹೋಗಿದ್ದ ಸಣ್ಣ ಸತ್ಯಕ್ಕೆ ತಮ್ಮ ಕಲ್ಪನೆಯ ಮೆರುಗನ್ನಿತ್ತು 'ಬ್ರಹ್ಮಚಾರಿ'ಯಾಗಿಸಿದ್ದಾರೆ. ಗೋಸಾಯಿ ಓರ್ವ ನಿಂದ ವಂಚಿತಳಾದ ಅತ್ತಿಗೆ ಮನೆಬಿಟ್ಟು ಹೊರಟುದನ್ನು ಕಂಡು ಶಿವನ ಎಳೆಮನಸ್ಸು ಘಾಸಿಯಾಗುತ್ತದೆ. ಆ ಆವೇಶದ ಭರದಲ್ಲಿ ಬ್ರಹ್ಮಚಾರಿಯಾಗಿರುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಆದರೆ ಅವನ ಮನ ಆ ಎಲ್ಲ ಅಡೆತಡೆಗಳನ್ನು ಅಲಕ್ಷಿಸಿ ಗಿರಿಜೆಯನ್ನು ಬಯಸುತ್ತದೆ. ಅವನ ಪ್ರತಿಜ್ಞೆಗೆ ಭಂಗ ಬರುವ ಮುನ್ನ ಅವನೇ ಅಸುನೀಗುತ್ತಾನೆ. ವಿಷಯ ಬದಲಾವಣೆಯಿದ್ದರೂ ಪರಿಣಾಮಕಾರಿ ಬರವಣಿಗೆಯಲ್ಲ. ವಾತಾವರಣ ನಿರ್ಮಿತಿಯಲ್ಲಾಗಲೀ ಯಾವ ಹೊಸತನವೂ ಕಾಣಬರುವುದಿಲ್ಲ. ಕಾದಂಬರಿಗೆ ಕಾರಣವಾದ ತಂಗಮ್ಮನ ಪ್ರಸಂಗದ ನಡವಳಿಕೆ ಘಟನೆಗೆ ಮತ್ತೊಂದು ಮುಖವಿದೆ ಎನ್ನುವ ಸಂಶಯಕ್ಕೆಡೆಯಾಗುತ್ತದೆ.

ಕಾದಂಬರಿಯಲ್ಲೆಲ್ಲ ಎದ್ದು ಕಾಣುವುದು ಗಿರಿಜೆಯ ವ್ಯಕ್ತಿತ್ವ. ಅವಳ ಧೀರ ನಿಲುವು, ಸಹಿಷ್ಣುತೆ ಮೆಚ್ಚುಗೆ ಮೂಡಿಸುತ್ತದೆ. ಇವರೆಲ್ಲ ಕಾದಂಬರಿಗಳಲ್ಲಿ ಚಿತ್ರಿತ ವಾಗಿರುವ ಈ ಬಗೆಯ ಪಾತ್ರಗಳಲ್ಲಿ ಎದ್ದು ಕಾಣುವ ವಿಶಿಷ್ಟ ಪಾತ್ರವಿದು. ಇವಳ ಪಾತ್ರದ ದಟ್ಟವಾದ ನೆರಳಿನಲ್ಲಿ ಮತ್ತಾವ ಪಾತ್ರವೂ ವಿಕಸನವಾಗಿಲ್ಲ.

ಈ ಪರಂಪರೆಯಿಂದ ಬೇರೆಯಾದ ಕೃತಿ 'ತಪೋವನದಲ್ಲಿ'. ಇವರ ಕಾದಂಬರಿ ಮಾಲಿಕೆಯಲ್ಲಿ ಇದಕ್ಕೊಂದು ಮಹತ್ವದ ಸ್ಥಾನವುಂಟು. ಅವರ ಎಂದಿನ ಸರಳ ಸಾಮಾಜಿಕ ಚಿತ್ರಣವಲ್ಲ. ಪ್ರಸ್ತುತ ವಿಷಯವನ್ನಾಧರಿಸಿ ಹಲವಾರು ಕಾದಂಬರಿಗಳು ಬೆಳಕು ಕಂಡಿದ್ದರೂ ಈ ಪ್ರಯತ್ನ ಮಾಡಿದ ಲೇಖಕಿಯರಲ್ಲಿ ಮೊದಲಿಗರಿವರು.

ಇಂದಿನ ಸಮಾಜದ ಅಂಧ ಶ್ರದ್ಧೆ, ಮೂಢ ನಂಬಿಕೆಗೆ ಬೆರಳು ಮಾಡಿದೆ. ಅವರೇ ಹೇಳುವಂತೆ ಸಣ್ಣ ಸತ್ಯಕ್ಕೆ ಭೂತ ಕನ್ನಡಿ ಹಿಡಿದು ತೋರಿದ್ದಾರೆ. ನೋಡಿದ, ಕೇಳಿದ ಹತ್ತಾರು ಘಟನೆಗಳ ಸುಂದರ ಹೊಂದಿಕೆ 'ತಪೋವನದಲ್ಲಿ' ನಡೆದಿದೆ. ತಪೋವನದ ಪರಿಸರ, ಜನರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದ ಸ್ವಾಮೀಜಿಯ ಪವಾಡ, ಇವುಗಳ ವಿವರ ಚಿತ್ರಣ ಸಹಜವಾಗಿ ಬಂದಿದೆ. ತಮಗೆ ಮಕ್ಕಳಾಗುವ ಸಂಭವವಿಲ್ಲ ಎಂದರಿತೂ ಗಾಯಿತ್ರಿಯ ಬಲಿಯಿತ್ತ ರಂಗರಾಯ, ಅವನ ಮನೆಯವರು ಇಂದಿನ ಅಂಧ ಶ್ರದ್ಧೆ, ಮೂಢನಂಬಿಕೆಯ ಸಮಾಜದ ಪ್ರತಿನಿಧಿಗಳು. ಕಾದಂಬರಿಯ ಅಂತ್ಯದಲ್ಲಿ ಅಭಯಾನಂದ ದಂಡ ಕದ್ದೊಯ್ವ ಪ್ರಸಂಗ ಮಾತ್ರ ವಿಚಿತ್ರ. ಅಂತು ಅಲ್ಲಿನ ಎಲ್ಲರನ್ನೂ ಪೆದ್ದರನ್ನಾಗಿಸಿ ಸ್ವಾಮೀಜಿಗೆ ದಂಡ ಹಿಂದಿರುಗಿಸುವಲ್ಲಿ ಲೇಖಿಕಿ ಯಶಸ್ವಿಯಾಗಿದ್ದಾರೆ. ಇದು ಬಿಟ್ಟಲ್ಲಿ ಕಾದಂಬರಿಯ ಉದ್ದಿಷ್ಟ ಪರಿಣಾಮ ಸಿದ್ಧಿಸಿದೆ ಎನ್ನಬಹುದು.

ಇವರ ಎಂದಿನ ಕಾದಂಬರಿಗಳಿಂದ ಬೇರೆಯಾದ ತನ್ನತನವನ್ನುಳಿಸಿಕೊಂಡಿರುವ ಕೃತಿ 'ಟು-ಲೆಟ್'. ಅದರಲ್ಲೂ ಶೀರ್ಷಿಕೆ ಇದರ ವೈಶಿಷ್ಟ್ಯ.

ಬಾಡಿಗೆ ಮನೆಗಾಗಿ ಪಡುವ ಬವಣೆ, ಸಿಕ್ಕ ಮನೆಗಳ ಅವಾಂತರ, ಬಗೆ ಬಗೆಯ ವಠಾರಗಳ, ಮನೆಯ, ಮನೆಯೊಡೆಯರ ಸಂದರ್ಶನ, ರುಕ್ಕಮ್ಮನ ವಠಾರದ ವೈಖರಿ, ಅವಳ ಬಾಯಾಳಿತನ, ಪ್ರತಿಯೊಂದೂ ಕಾದಂಬರಿಗೆ ಮೆರುಗಿತ್ತಿದೆ. ಕೆಲವು ವಿವರಗಳು ಮಾತ್ರ 'ಅತಿ' ಎನಿಸುವಷ್ಟು ಹೆಚ್ಚು. ಪುಟ ಹೆಚ್ಚಿಸುವ ಕಡೆ ಗಮನವಿಲ್ಲದಿದ್ದಲ್ಲಿ ಕೃತಿ ಹೆಚ್ಚು ಸತ್ವಪೂರ್ಣವಾಗುತ್ತಿತ್ತು. ಹೇಗೇ ಆದರೂ ಇಂದಿನ ಒಂದೇ ಬಗೆಯ ಕಾದಂಬರಿಗಳನ್ನೋದಿ ಬೇಸತ್ತವರಿಗೆ ಇದೊಂದು ಉತ್ತಮ ಬದಲಾವಣೆ.

ಈ ಹನ್ನೊಂದೂ ಕಾದಂಬರಿಗಳಲ್ಲಿ ಕಾಣಬರುವುದು ಲೇಖಕಿಯ ಸಂಭಾಷಣಾ ಕೌಶಲ, ಬಳಕೆ ಮಾತಿನ ಸೊಗಡು, ವಾಚನೀಯ ಗುಣ. ಆದರೆ "ಉತ್ತಮ ಕಾದಂಬರಿಯ ಅನುಭವ ಪ್ರಪಂಚ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿವರಿಸಬೇಕು, ಹೊಸದೊಂದು ದೃಷ್ಟಿಕೋನವೊಂದರ ಸಾಧ್ಯತೆಯನ್ನು ಬಿಂಬಿಸಬೇಕು! ಈ ದೃಷ್ಟಿಯಿಂದ ಇವರ ಕಾದಂಬರಿಗಳನ್ನು ಸಮೀಕ್ಷಿಸಿದಾಗ ನಿರಾಸೆಯಾಗುತ್ತದೆ. ಅಲ್ಲದೆ 'ನನ್ನ ಬರಹಗಳೆಲ್ಲ ನನ್ನ ಅನುಭವವನ್ನಾಧರಿಸಿದೆ. ಯಾವುದೂ ಕಾಲ್ಪನಿಕವಲ್ಲ. ಅಲಂಕಾರಕ್ಕೆ ಕಲ್ಪನೆ ಇದ್ದರೂ ಅದೇ ಆದಿ ಅಂತ್ಯವಲ್ಲ. ಅನುಭವಕ್ಕೆ ಬಂದ ಸಂಗತಿ

ಗಳು ಕಾದಂಬರಿಯ ಜೀವಾಳ' ಎಂದು ಲೇಖಕಿ ಹೇಳಿದ್ದಾರೆ. ಆದರೆ ಈ ಅನುಭವ ದಲ್ಲಿ ಜೀವನದ ಆಳವನ್ನೂ ಗೂಢವನ್ನೂ ಸಮಗ್ರವಾಗಿ ಅರಿತುಕೊಳ್ಳಬಲ್ಲ ಬಲ ಅವರಲ್ಲಿಲ್ಲವೆಂದು ಹೇಳದೆ ವಿಧಿಯಿಲ್ಲ ಎನ್ನುವ" ಡಾ॥ ಹಾ.ಮಾ. ನಾಯಕರ ಮಾತಿಗೆ ಈ ಕಾದಂಬರಿಗಳಲ್ಲಿ ಮತ್ತೂ ಸ್ಪಷ್ಟನೆ ದೊರೆಯುತ್ತದೆ.

ನಮ್ಮ ಮನೆಯಲ್ಲಿ ಎಲ್ಲಾ ಬಡತನಕ್ಕಿಂತ ಪ್ರೀತಿಯ ಬಡತನ ಬಹಳ ವಾಗಿತ್ತು. ಅಪ್ಪ ಇದ್ದಾಗ ಅವರು ಮಕ್ಕಳನ್ನಾಗಲೀ, ಹೆಂಡತಿಯ ನ್ನಾಗಲೀ ಬೈದಿದ್ದು ನನಗೆ ನೆನಪೇ ಇರಲಿಲ್ಲ. ನಾನು ಒಂಭತ್ತು ವರ್ಷ ದವಳಾಗಿದ್ದಾಗಲೇ ಅಪ್ಪ ತೀರಿಕೊಂಡದ್ದು.

(ಹಸಿವು–ಪುಟ 17)

ಎಂ. ಕೆ. ಇಂದಿರಾರವರ ಕಾದಂಬರಿಗಳಲ್ಲಿ ಮಲೆನಾಡಿನ ಊಟ-ತಿಂಡಿಗಳು

○

○

○ ಕೆ. ಉಷಾ ಪಿ. ರೈ

ಶ್ರೀಮತಿ ಎಂ. ಕೆ. ಇಂದಿರಾರವರು ಮಲೆನಾಡಿನ ಮಗಳು. ಅವರ ಕಥೆಗಳೊಡನೆ ತೆರೆದುಕೊಳ್ಳುವ ಮಲೆನಾಡಿನ ಪ್ರಕೃತಿ, ಪರಿಸರ, ಅವರ ಕಾದಂಬರಿಗಳ ಒಂದು ಮುಖ್ಯ ವೈಶಿಷ್ಟ್ಯ. ಅವರು ಬರೆಯಲು ಕುಳಿತರೆ ಮಲೆನಾಡಿನ ಸಮಗ್ರ ಚೆಲುವು, ಜೀವನ, ನಡೆ-ನುಡಿ, ಆಟ-ಪಾಠ-ಊಟ, ಉಡುಗೆ-ತೊಡುಗೆ ಎಲ್ಲವೂ ಒಂದಕ್ಕೊಂದರಂತೆ ಸ್ವಾಭಾವಿಕವಾಗಿ, ಸಹಜವಾಗಿ ಅವರ ಕಾದಂಬರಿಗಳಲ್ಲಿ ಹೆಣೆದುಕೊಂಡು ಹೋಗುತ್ತವೆ. ಈ ಸಮಗ್ರ ಚಿತ್ರಣದಿಂದ ಓದುಗರಿಗೆ ತಾವು ಮಲೆನಾಡಿನಲ್ಲಿ ಬದುಕಿದ್ದೇವೇನೋ ಎಂಬ ಭ್ರಮೆಯಾವರಿಸಿದರೆ ವಿಚಿತ್ರ ವಿಲ್ಲ. ಅವರ ಫಣಿಯಮ್ಮ ಯಶಸ್ವೀ ಚಿತ್ರವಾಗಲು ಅವರ ಈ ರೀತಿಯ ವರ್ಣನೆ ಕಾರಣವೆನ್ನುವುದು ನಿಸ್ಸಂಶಯ.

ಮನುಷ್ಯನಿಗೆ ಉಸಿರಾಟದಷ್ಟೇ ಮುಖ್ಯ ಹಸಿವು. ಉಸಿರಾಡುವ ಗಾಳಿ ಪ್ರಕೃತಿಯ ಕೊಡುಗೆ. ಆದರೆ ಹಸಿವು ತಣಿಸಲು ಬಾಯಲ್ಲಿ ಬಾಯ್ದೆರೆದು ಕುಳಿತಿರುವ ರುಚಿಗ್ರಂಥಿಗಳನ್ನು ತೃಪ್ತಿಪಡಿಸಬೇಕಾಗುತ್ತದೆ. ಹೀಗಾಗಿ ಪಾಕ ಶಾಸ್ತ್ರ ವೈವಿಧ್ಯವಾಗಿ ಬೆಳೆಯಿತು. ಆಯಾ ದೇಶಗಳ, ಆಯಾ ಪ್ರದೇಶಗಳ ಹವಾಮಾನ ಹಾಗೂ ಪ್ರಾಕೃತಿಕ ಹಿನ್ನೆಲೆಗೆ ತಕ್ಕಂತೆ ಅಡುಗೆಯಲ್ಲೂ ವೈವಿಧ್ಯ ಕಂಡು ಬಂತು. ಇಂದು ಎಲ್ಲಾ ರಂಗಗಳ ಮಿಶ್ರ ತಳಿಗಳಂತೆ, ಅಡಿಗೆಯಲ್ಲೂ ಹಲವಾರು ಪಾಕಶಾಸ್ತ್ರಗಳ ಮಿಶ್ರಣವಾಗಿ ' ಹಿಂದಿನ "Typical" ಅನ್ನುತ್ತಾರಲ್ಲ ಆ ರುಚಿಯೇ ಮಾಯವಾಗುತ್ತಾ ಬಂದಿದೆ ಎನ್ನುವುದು ಸುಳ್ಳಲ್ಲ.

ಮಲೆನಾಡೇ ಹಿನ್ನೆಲೆಯಾಗಿರುವ ಶ್ರೀಮತಿ ಎಂ. ಕೆ. ಇಂದಿರಾರವರ ಕಾದಂಬರಿಗಳಲ್ಲಿ ಮುಖ್ಯವಾಗಿ ಫಣಿಯಮ್ಮ, ತುಂಗಭದ್ರಾ, ಸದಾನಂದ, ನೂರೊಂದು ಬಾಗಿಲು, ಇವುಗಳಲ್ಲಿ ಮಲೆನಾಡಿನ ಜನಜೀವನದ ಬಗ್ಗೆ ಸಮಗ್ರವಾಗಿ ಚಿತ್ರಿಸುತ್ತಾ, ಅಲ್ಲಿಯ ಊಟ ತಿಂಡಿಯ ಬಗ್ಗೆಯೂ ಸಾಕಷ್ಟು ಮಾಹಿತಿ ಒದಗಿಸಿದ್ದಾರೆಂಬುದನ್ನು ಗಮನಿಸಬಹುದು. ಅಲ್ಲಿಯ ತಿಂಡಿ ತಿನಸು ತೀರ್ಥಗಳಿಗೂ ಕಾದಂಬರಿಯಲ್ಲಿನ ಘಟನೆಗಳಿಗೂ ಏನೋ ಅನಿವಾರ್ಯ ಸಂಬಂಧವಿದೆಯೆಂಬಷ್ಟು ಸಹಜವಾಗಿ ಆ ತಿನಿಸುಗಳ ಉಲ್ಲೇಖವನ್ನು ತಮ್ಮ ಕಾದಂಬರಿಗಳಲ್ಲಿ ತಂದುಬಿಡುತ್ತಾರೆ ಶ್ರೀಮತಿ ಎಂ.ಕೆ. ಇಂದಿರಾ. ಯಾವುದೇ ಸಾಹಿತಿಗೆ ಸಾಧ್ಯವಾಗದಷ್ಟು ಸಹಜತೆಯಿಂದ ಊಟ ತಿಂಡಿಗಳು ಅವರ ಕಾದಂಬರಿಯಲ್ಲಿ ಹೆಣೆದುಕೊಳ್ಳುತ್ತವೆ ; ಅವಿಭಾಜ್ಯ ಅಂಗವಾಗುತ್ತವೆ.

ತಿಂಡಿ, ತಿನಿಸು, ಊಟಗಳ ವೈವಿಧ್ಯವನ್ನು ಕಾದಂಬರಿಗಳಲ್ಲಿ ದಾಖಲು ಮಾಡುತ್ತ ಹೋಗುವಾಗ ಜನಜೀವನದ ಮಾಹಿತಿ ಒದಗಿಸುತ್ತಾ ಹೋಗುವುದು ಅವರ ಇನ್ನೊಂದು ಕಲೆಗಾರಿಕೆ! ಹಬ್ಬ ಹರಿದಿನಗಳಲ್ಲಿ ಮಾಡುವ ತಿಂಡಿಗಳು, ವಿಧವೆಯರಿಗೆ ಇರುವ ಕಟ್ಟುನಿಟ್ಟುಗಳು, ಅತಿಥಿ ಸತ್ಕಾರದ ಕ್ರಮ, ಬಡಿಸುವ ರೀತಿ, ಉಣ್ಣುವ ರೀತಿ ಎಲ್ಲವನ್ನೂ ಅಚ್ಚುಕಟ್ಟಾಗಿ ಎಲ್ಲೂ ಅಸಹಜವೆನಿಸದಂತೆ ದಾಖಲು ಮಾಡುತ್ತಾ ಹೋಗುವ ಅವರ ಕಲಾವಂತಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಲೇಬೇಕು.

'ಫಣಿಯಮ್ಮ' ಕಾದಂಬರಿಯನ್ನೇ ತೆಗೆದುಕೊಳ್ಳೋಣ. ಅದು ತುಂಬಾ ಹಳೆಯ ಕಾಲದ ಕಥೆ. ಫಣಿಯಮ್ಮನ ಕಾಲದಲ್ಲಿ ಕಾಫಿ ಎಂಬ ಪಾನೀಯ ಆ ಊರಿಗೇ ಅಪರಿಚಿತವಾಗಿತ್ತಂತೆ. ಮಕ್ಕಳಿಗೆ ಬೇಕಷ್ಟು ಹಾಲು, ಮುದುಕರಿಗೆ ಶುಂಠಿ ಮೆಣಸಿನ ಕಷಾಯ, ಅತಿಥಿಗಳಿಗೆ ಊಟದ ನಂತರ ಮೇಯುವಷ್ಟು ತಾಂಬೂಲ. ಅದು ಆ ಕಾಲದ ಕ್ರಮ. ಆದರೆ ಮುಂದಿನ ಅವರ ಕಾದಂಬರಿಗಳಲ್ಲಿ—(ನೂರೊಂದು ಬಾಗಿಲು, ಸದಾನಂದ) ಕಾಫಿಯಿಲ್ಲದೇ ದಿನವೇ ಮೊದಲಾಗುತ್ತಿರಲಿಲ್ಲ. ಗಟ್ಟಿಯಾದ ಆಕಳ ಹಾಲು ಬೆರೆಸಿದ ಕಾಫಿಯನ್ನು ಹಿತ್ತಾಳೆ ಗಿಂಡಿಗಳಲ್ಲಿ ಹಾಕಿ ಕುಡಿದರೆ ಇಡೀ ದಿನದ ಕತ್ತೆ ದುಡಿತಕ್ಕೆ ಪೆಟ್ರೋಲು ಹಾಕಿದಂತೆ ! ಫಣಿಯಮ್ಮನ ಕಾಲದಲ್ಲಿ ಮದುವೆ ಮನೆ ಭಕ್ಷ್ಯಗಳಲ್ಲಿ ಒಬ್ಬಟ್ಟು, ಪಾಯಸದ ಮುಂದಿನ ಭಕ್ಷ್ಯ ಜಾರಿಯಲ್ಲಿರಲಿಲ್ಲ. ಲಾಡು, ಚಿರೋಟಿ, ಫೇಣಿ, ಮಂಡಿಗೆಗಳ ಹೆಸರು ಕೇಳಿದ್ದರು, ಬೇರೆ ಕಡೆ ಮದುವೆಗೆ ಹೋದಾಗ ರುಚಿ ನೋಡಿದ್ದರು. ಆದರೆ ಮಾಡಲು ಗೊತ್ತಿರಲಿಲ್ಲ. ಹೋಳಿಗೆಗಳು, ಸಜ್ಜಪ್ಪ, ಅತಿರಸ, ಅನ್ನಾರಸ ಇವೆಲ್ಲಾ ರೂಢಿಯಲ್ಲಿತ್ತು (ಈಗ ಇವೆಲ್ಲಾ ಏನೆಂದು ಗೊತ್ತೇ ಇಲ್ಲ)

ವಿಧವೆಯರಾದ ಮಡಿ ಹೆಂಗಸರು ರಾತ್ರಿ ಹೊತ್ತು ಮಾಡುತ್ತಿದ್ದ ಫಲಾಹಾರ ಗಳು ಅವಲಕ್ಕಿ, ರೊಟ್ಟಿ, ದೋಸೆ, ಹುರಿಹಿಟ್ಟು. ಆದರೆ ಬೇರೆಯವರ ಬಾಯಿಗೆ ರುಚಿಕೊಡುವ ಹಪ್ಪಳ, ಸಂಡಿಗೆ, ಬಾಳಕ, ಹುರಿಗಾಳು, ಉಪ್ಪಿನಕಾಯಿ, ಹಣಚಿಟ್ಟು ಎಲ್ಲಾ ಮಾಡುವ ಕೆಲಸ ಅವರ ಪಾಲಿಗೆ, ತಿನ್ನಲೂ ಹಣೆಯಲ್ಲಿ ಬರೆದಿರಬೇಕು ಎನ್ನುವಂತೆ.

ಇಲ್ಲಿ 'ಫಣಿಯಮ್ಮ'ದ ಒಂದು ಘಟನೆ ನೆನಪಿಗೆ ಬರುತ್ತದೆ. (58ನೇಪುಟ) ಫಣಿಯಮ್ಮನ ಪಾತ್ರಕ್ಕೆ ತೂಕ ಕೊಡುವ ಘಟನೆಯಲ್ಲಿ ನಾಗರಪಂಚಮಿಯಂದು ಮಾಡಿದ ರಾಶಿ ರಾಶಿ ಉದ್ದಿನ ಕಡುಬು, ಸೀಕಡುಬು ಹೇಗೆ ಸೇರಿಕೊಂಡಿದೆಯೆಂದು ಕಾಣಬಹುದು. ಫಣಿಯಮ್ಮ ರಾಶಿ ರಾಶಿ ಕಡಬು ಮಾಡಿ ಎಲ್ಲರಿಗೂ ಬಡಿಸಿ ಊಟಕ್ಕೆ ಕುಳಿತಾಗ ಹೊತ್ತು ಇಳಿದಿತ್ತು. ಒಂದು ತುತ್ತು ತೊವ್ವೆ ಅನ್ನ ಬಾಯಿಗೆ ಇಟ್ಟಿದ್ದಾರೋ ಇಲ್ಲವೋ "ಅಜ್ಜೀ, ನನಗೊಂದು ಸೀ ಕಡುಬು ಕೊಡು" ಎಂದು ಹಿಂದಿನಿಂದ ಬಂದು ಮಗುವೊಂದು ಫಣಿಯಮ್ಮನ ಬೆನ್ನಿಗೊರಗುತ್ತದೆ. ಇದನ್ನು ನೋಡಿದ ಮಗುವಿನ ತಾಯಿ ಮಹಾಲಕ್ಷ್ಮಿಗೆ ವಿಪರೀತ ಸಿಟ್ಟು ಬಂದು, ದಿನವಿಡೀ ದುಡಿದ ಫಣಿಯಮ್ಮ ಊಟಕ್ಕೆ ಕುಳಿತಾಗ ಮೈಲಿಗೆಯಾಯಿತಲ್ಲ ಎಂಬ ನೋವಿನಿಂದ ಮಗುವಿಗೆ ನಾಲ್ಕು ಗುದ್ದುತ್ತಾಳೆ. ಗುದ್ದಿದ ರಭಸಕ್ಕೆ ಮಗು ಕಂಗಾಲಾಗುತ್ತದೆ, ಕಣ್ಣು ಮೇಲೆ ಹೋಗುತ್ತದೆ, ತಿಂದ ಸೀ ಕಡುಬೆಲ್ಲಾ ವಾಂತಿಯಾಗುತ್ತದೆ, ಕೈಕಾಲು ಚಾಚಿ ಬೀಳುತ್ತದೆ. ಮತ್ತೆ ಫಣಿಯಮ್ಮ ಹಣೆಗೆ ನೀರು ತಟ್ಟಿ, ಕಿವಿಗೆ ಗಾಳಿ ಊದಿದಾಗಲೇ ಮಗು ಚೇತರಿಸಿಕೊಂಡುದು. ಮತ್ತೆ ಮಡಿಯುಟ್ಟು ಊಟ ಮಾಡಲು ಫಣಿಯಮ್ಮನನ್ನು ಮಹಾಲಕ್ಷ್ಮಿ ಒತ್ತಾಯಿಸುತ್ತಾಳೆ. ಆಗ ಫಣಿಯಮ್ಮ ಹೇಳುತ್ತಾಳೆ. "ಉಣ್ಣೋದು ತಿನ್ನೋದು ಎಲ್ಹೋಗುತ್ತೆ ಮಹಾಲಕ್ಷ್ಮಿ. ಒಂದವ ಎಂಜಲ ಶಾಸ್ತ್ರ ಮಾಡಿ ಕೈ ತೊಳೆದಾತು. ಇನ್ನು ನಮ್ಮಂಥಾವರು ಎರಡನೆ ದಪ ಉಣಬಾರ್ದು ಕಣೆ." ಊಟಕ್ಕೂ ಜೀವನಕ್ಕೂ ಎಂಥಾ ಸಂಬಂಧ ! ಈ ಘಟನೆಯ ನಂತರವೇ ಫಣಿಯಮ್ಮ ಮಧ್ಯಾಹ್ನದ ಊಟವನ್ನುಬಿಟ್ಟುದು. ಎರಡು ಬಾಳೆಹಣ್ಣು ಒಂದು ಲೋಟ ಮಜ್ಜಿಗೆಯಷ್ಟೇ ಅವರ ಆಹಾರ. ಆದರೆ ಬೇರೆಯವರಿಗೆ ಅಟ್ಟು ಬಡಿಸುವುದು ಬಾಯಲ್ಲಿ ನೀರು ಸಿಡಿಸುವ ರಸಕವಳ !

"ನೂರೊಂದು ಬಾಗಿಲು" ಕಾದಂಬರಿಯಲ್ಲಿ ಊಟತಿಂಡಿಯದೇ ಒಂದು ಸಂಭ್ರಮ. ಮಲೆನಾಡಿನಲ್ಲಿ ನೂರಾರು ವರುಷಗಳ ಹಿಂದೆ ಕಟ್ಟಿರುವ ಅಪ್ಪಟ ಮಲೆನಾಡಿನ ನೂರೊಂದು ಬಾಗಿಲಿರುವ ಮನೆ ಕಾದಂಬರಿಯ ಕೇಂದ್ರ ಬಿಂದು. ಅಲ್ಲಿ ನಡೆದ ಒಂದು ಕೊಲೆಯ ವಿಚಾರಣೆಗೆ ಬಂದ ಇನ್ಸ್‌ಪೆಕ್ಟರ್, ಪತ್ತೇದಾರಿ,

ಕಾನ್ಸ್ಟೇಬಲ್‌ಗಳಿಗೆ ಆ ಮನೆಯಲ್ಲಿ ಸಂಪ್ರದಾಯದ ಅತಿಥಿ ಸತ್ಕಾರ. "ಊಟ ತಿಂಡಿ ಹಾಕೋದು ಈ ಮನೆಗೆ ಒಂದು ಖರ್ಚಲ್ಲ. ಕಷ್ಟವೂ ಅಲ್ಲ. ಅದಕ್ಕೆಲ್ಲಾ ಏನೂ ದಾಕ್ಷಿಣ್ಯ ಬ್ಯಾಡ. ಪುಣ್ಯಾತ್ಮರು ಹಿರಿಯರು ಬೇಕಾದ ಹಾಗೆ ಆಸ್ತಿ ಮಾಡಿಟ್ಟು ಹೋಗಿದ್ದಾರೆ...." ಎನ್ನುತ್ತಾ ತೋರುವ ಸತ್ಕಾರ. ತನಿಖೆ ನಡೆಸಲು ಬಂದವರಿಗೂ "ತಾವಿಲ್ಲಿ ಬಂದಿರುವುದು ಕೊಲೆಗಾರರನ್ನು ಪತ್ತೆ ಮಾಡೋಕೋ ಹೊಸ ಹೊಸ ಥರ ತಿಂಡಿ ತಿನ್ನೋಕೋ" ಎಂಬ ಸಂಶಯ ಕಾಡಿಸುವುದನ್ನು ಕಾಣಬಹುದು. ಮರತೇ ಹೋಗುತ್ತಿರುವ ತಿಂಡಿ ತಿನಸುಗಳನ್ನು ರುಚಿಕಟ್ಟಾಗಿ ಅಟ್ಟು ಬಡಿಸಿದರೆ ಪೇಟೆಯ ತಿಂಡಿ ತಿಂದು ಬೇಸತ್ತ ನಾಲಗೆಗೆ ಚಪಲ ಹುಟ್ಟುವುದರಲ್ಲಿ ವಿಚಿತ್ರವೇನಿಲ್ಲ.

ನೂರೊಂದು ಬಾಗಿಲಿನ ಮನೆಯಲ್ಲಿ ಬಡಿಸುವ ತಿಂಡಿ ತಿನಸುಗಳು, ಊಟ ಅಪ್ಪಟ ಮಲೆನಾಡಿನ ಪಾಕವೆನ್ನಬಹುದು. ಹುಳಿಯವಲಕ್ಕಿ-ಕೋಡುಬಳೆ ; ಉಪ್ಪಿಟ್ಟು, ಮೊಸರವಲಕ್ಕಿ, ಕೆಂಡದ ರೊಟ್ಟಿ ಒಟ್ಟಿಗೇ ಬೆಣ್ಣೆ, ಮೊಸರು, ತುಪ್ಪ, ಉಪ್ಪಿನಕಾಯಿ ರಸ, (ಆಗಿನವರಿಗೆ ಯಾವ ಕಾಯಿಲೆಗಳೂ ಇರಲಿಲ್ಲವೇನೋ ?) ಹಿಟ್ಟು ಕುಟ್ಟಿ ಮಾಡಿದ ಒತ್ತು ಶ್ಯಾವಿಗೆ ಎಂಥಾ ವೈವಿಧ್ಯ ! ಕೆಂಡದ ರೊಟ್ಟಿ ತಿನ್ನುತ್ತಾ, ಜಗದೀಶ ನೆನ್ನುತ್ತಾನೆ, "ಅಕ್ಕಮ್ನೋರೆ ಬೆಂಗ್ಳೂರಲ್ಲಿ ಸಾವಿರಾರು ಹೋಟ್ಲಿದೆ. ಬೇಕಾದಷ್ಟು ತಿಂಡೀನೂ ಸಿಗುತ್ತೆ. ಆದರೆ ಕೆಂಡದರೊಟ್ಟಿ ಮಾತ್ರ ಯಾವ ಹೋಟ್ಲಲ್ಲೂ ಸಿಕ್ಕೋಲ್ಲ." ಈ ಮಾತಲ್ಲಿ ಹಳೆ ತಿಂಡಿಗಳತ್ತ ಎಂ. ಕೆ. ಇಂದಿರರವರಿಗಿದ್ದ ಒಲವು ಸ್ಪಷ್ಟವಾಗುತ್ತದೆ. ಕೆಂಡವೇ ಕಾಣ ಸಿಗದ ಇಂದಿನ ಅಡುಗೆ ಮನೆಗಳಲ್ಲಿ ಕೆಂಡದ ರೊಟ್ಟಿ ಮಾಡುವುದಾದರೂ ಹೇಗೆ ? 'ನೂರೊಂದು ಬಾಗಿಲು' ಕಾದಂಬರಿ ಓದುತ್ತಾ ಮೆಲುಕು ಹಾಕಬೇಕಷ್ಟೆ.

ಅಕ್ಕಮ್ಮ ಬಡಿಸುವ ಊಟವೂ ಅಷ್ಟೇ ಭರ್ಜರಿಯಾದದ್ದು, ರುಚಿಕರ ವಾದದ್ದು. ಒಮ್ಮೆ ಬಡಿಸಿದ ಊಟವನ್ನು ಇನ್ನೊಮ್ಮೆ ಬಡಿಸಗೊಡುವುದಿಲ್ಲ ಎಂ.ಕೆ. ಇಂದಿರಾರವರು. 'ನಮ್ಮನೆ ಅಡಿಗೆ ನಿಮಗೆ ಸೇರುತ್ತೋ ಇಲ್ವೋ, ದಾಕ್ಷಿಣ್ಯ ಮಾಡ್ಬ್ಯಾಡಿ." ಎಂದು ಹೇಳುತ್ತಾ ಬಡಿಸುವ ಅಕ್ಕಮ್ಮನದು ಮಾಮೂಲಿನ ಮಾತಾದರೂ ಅದರಲ್ಲಿ ತುಂಬಿರುವ ಆತ್ಮೀಯತೆ, ಆದರ, ಶ್ರದ್ಧೆ, ಅಪಾರ. ಕೊಲೆ ಪತ್ತೆ ಮಾಡಲು ಬಂದವರು ಅಕ್ಕಮ್ಮನ ಕೈಯಡುಗೆ ಚಪ್ಪರಿಸಿದ್ದೇ ಚಪ್ಪರಿಸಿದ್ದು. ಜತೆಗೆ ಓದುಗರ ಬಾಯಲ್ಲೂ ನೀರೂರಿಸಿದ್ದು. ಸಾರು, ಹುಳಿ, ಮೊಸರುಬಜ್ಜಿ, ಅರಳು ಸಂಡಿಗೆ, ಬಾಳಕ, ಮಾವಿನ ಮಿಡಿ ಉಪ್ಪಿನಕಾಯಿ, ಸೊಗಸಾದ ಅನ್ನ, ಹಾಲು ಮೊಸರು, ತುಪ್ಪಗಳ ಸ್ವಾದ, ಒಮ್ಮೆ ಬಡಿಸಿದರೆ, ಮತ್ತೊಮ್ಮೆ ಹೊನಗನ್ನೆ ಸೊಪ್ಪಿನ ಹುಳಿ (ಈಗೆಲ್ಲಿ ಮಾಡ್ತಾರೆ) ತೊಂಡೆ ಪಲ್ಯ (ಆಗಿನ ರುಚಿ ಈಗಿಲ್ಲ),

ಬಾಳೆಕಾಯಿ ಹಪ್ಪಳ, ಅರವಾರಲ ಉಪ್ಪಿನಕಾಯಿ (ಈಗ ಬಳಕೆಯಲ್ಲಿ ಇಲ್ಲವೇನೋ ?) ಗರಿಗರಿ ಅಂಬೊಡೆ (ಎಣ್ಣೆಯ ಕ್ರಿಯಕ್ಕೆ ಅಡುಗೆಯಲ್ಲಿ ಅಂಬೊಡೆ ಮಾಯ) ಮಜ್ಜಿಗೆ ಹುಳಿಗಳು, ಎಲ್ಲರ ರುಚಿಗ್ರಂಥಿಗಳನ್ನು ಕೆರಳಿಸುವಂಥವುಗಳು. ಎಂ. ಕೆ. ಇಂದಿರಾ ರವರೇ ಒಂದು ಕಡೆ ಹೇಳುತ್ತಾರೆ. (ನೂರೊಂದು ಬಾಗಿಲು) ಅಂತಹ ಊಟವನ್ನು ಅಲ್ಲಿ ಬಂದವರು ಬೇರೆಲ್ಲಿಯೂ ಉಂಡಿರಲಿಲ್ಲ. ರುಚಿ, ವಾಸನೆ, ಬಣ್ಣ ಎಲ್ಲವೂ ನೆನಪಿನಲ್ಲಿ ಉಳಿಯುವಂಥದ್ದು. ಎಲ್ಲರೂ ಬೇಡ ಬೇಡವೆಂದರೂ ಎರಡೆರಡು ಸಾರಿ ಹಾಕಿಸಿಕೊಂಡು ಹೊಡೆಯುತ್ತಿದ್ದರು.

'ಊಟ ಇಕ್ಕಿ ಹೃದಯ ಗೆಲ್ಲು' ಎನ್ನುವ ಮಾತಿಗೆ ಸರಿಯಾಗಿ ಮಲೆನಾಡಿನ ಜನರ ಅತಿಥಿ ಸತ್ಕಾರ. ಊಟವಷ್ಟೇ ಏನು ಎಳನೀರು ಕುಡಿಯುವುದರಲ್ಲೂ, ಹಲಸಿನ ಹಣ್ಣು, ಮಾವಿನಹಣ್ಣು ತಿನ್ನುವುದರಲ್ಲೂ ಪ್ರತ್ಯೇಕ ವೈಶಿಷ್ಟ್ಯವಿದೆಯೆಂದು ಈ ಕಾದಂಬರಿಯಲ್ಲಿ ತಿಳಿಯುತ್ತದೆ. ಆಗ ತಾನೇ ಮರದಿಂದ ಇಳಿಸಿದ ಸೀಯಾಳಕ್ಕೆ, ಕೆಂಪು ಕಲ್ಸಕ್ರೆ ಪುಡಿ, ಯಾಲಕ್ಕಿ, ಒಳ್ಳೇ ಕೇಸರಿ, ಜೇನುತುಪ್ಪ ಸೇರಿಸಿ ಕುಡಿದರೆ ಹೇಗಿರುತ್ತೆ ಎಂದು ನಮ್ಮಲ್ಲಿ ಕಂಡವರೆಷ್ಟು ? ಇನ್ನು ಮಾವಿನ ಹಣ್ಣು, ಹಲಸಿನ ಹಣ್ಣಿನ ಕಾಲದಲ್ಲಿ ಮಲೆನಾಡಿನ ಜನರಿಗೆ ಬೇರೆ ತಿಂಡಿಯ ಅಗತ್ಯವಿರಲಿಲ್ಲ. ಅದೊಂದು ಸಂಭ್ರಮದ ಕಾಲ. ಆಗ ಮನೆಯಿಡೀ ಹಣ್ಣುಗಳದೇ ವಾಸನೆ. ಹಲಸಿನ ಹಣ್ಣು ಮಾವಿನ ಹಣ್ಣು ತಿನ್ನುವುದರಲ್ಲೂ ಮಲೆನಾಡಿನ ರೀತಿಯೇ ಬೇರೆ. ಹಲಸಿನಹಣ್ಣನ್ನು ಇಡಿಯಾಗಿ ಹಿಸಿದು ಬಿಚ್ಚಿ ತೊಳೆ ಬಿಡಿಸಿ ಜೇನುತುಪ್ಪದಲ್ಲಿ ಅದ್ದಿ ತಿಂದರೆ ಅದರ ರುಚಿಯೇ ರುಚಿ. ಮಾವಿನಹಣ್ಣನ್ನು ಹಾಗೇ ಇಡೀ ಹಣ್ಣನ್ನು ಕಚ್ಚಿ ರಸ ಎಳೆದು ತಿಂದರೆ ಅದಕ್ಕೆ ಅಮೃತ ಸವಿ. ಈಗ ಹಲಸಿನ ಹಣ್ಣುಗಳೇ ಅಪರೂಪ. ಮಾವಿನ ಹಣ್ಣು ಒಬ್ಬನೇ ಚೀಪಿ ತಿನ್ನುವ ಕಾಲವೂ ಹೊರಟು ಹೋಯಿತು. ಆಗಿನ ಕೆನೆ ಮೊಸರಲ್ಲಿ ಊಟ ಮಾಡಿದರೆ ಕೈಯೆಲ್ಲಾ ಜಿಡ್ಡು ಜಿಡ್ಡು. ಬೆಣ್ಣೆ ತುಪ್ಪವಿಲ್ಲದೇ ಊಟ ತಿಂಡಿಯಿರಲಿಲ್ಲ. (ಆಗಿನವರಿಗೆ ಕೊಲೆಸ್ಟರಾಲ್‌ನ ಕಾಟವಿರಲಿಲ್ಲವೇನೋ ! ಈಗ ಡೈರಿ ಹಾಲಲ್ಲಿ ಕೆನೆ ಕಟ್ಟಿದರೂ ಜಿಡ್ಡು ಇಲ್ಲ).

ಇನ್ನು 'ಸದಾನಂದ' ದಲ್ಲಿ ಬರುವ ತಿಂಡಿಗಳ ಪಟ್ಟಿ ಮಾಡಬೇಕೇ ? ಕೆಂಪಗೆ ಗರಿಗರಿಯಾದ ತಾಳಿಪಿಟ್ಟು, ನೆಂಚಿಕೊಳ್ಳಲು ಆಕಳಬೆಣ್ಣೆ, ಉಪ್ಪಿನಕಾಯಿ, (ಹೇಗಿರುತ್ತೆ ಎಂದು ಈಗ ಯೋಚಿಸಬೇಕಷ್ಟೇ) ಮೆಂತ್ಯ ದೋಸೆ ಜತೆಗೆ ಆಕಳ ಬೆಣ್ಣೆ ಮಾವಿನಕಾಯ ಚಟ್ನಿ, ಉಪ್ಪಿಟ್ಟು, ಚಕ್ಕುಲಿ, ಹೆಸರುಂಡೆ, ಕೋಡ್ಬಳೆ, ಹಾಲುಬಾಯಿ, ಕುಟ್ಟವಲಕ್ಕಿ, ಹುರಿಗಾಳು, ಬಿಳಿದಾವರೆಯಂಥಾ ಇಡ್ಲಿ ಜತೆಗೆ ಸಿಹಿ ಚಟ್ನಿ, ಖಾರದ ಚಟ್ನಿ, ಬೆಣ್ಣೆ, ತುಪ್ಪ, ಕೆನೆ ಮೊಸರು, ಲಕೋಟೆ ಹೋಳಿಗೆ, ಹೂರಣ ಹೋಳಿಗೆ,

ಅಪ್ಪೆ ಪಾಯಸ, ಶಾವಿಗೆ ಪಾಯಸ (ಈಗ ಪಾಯಸದ ಬದಲು ಐಸ್‌ಕ್ರೀಂ, ಕಸ್ಟರ್ಡ್ ಜಾಸ್ತಿ) : ವಾಂಗೀಭಾತು, ಮೊಸರನ್ನ (ಯಾತ್ರೆ ಹೊರಟಾಗ) ಕೇಸರಿ ಭಾತು, ನೇಂದ್ರ ಬಾಳೆ ಉಪ್ಪೇರಿ, ಒಂದೇ ಎರಡೇ, ಬಗೆಬಗೆಯ ತಿಂಡಿಗಳ ಉಲ್ಲೇಖ. ಕೆಲವಂತೂ ಈಗ ಬಳಕೆಯಲ್ಲೇ ಇಲ್ಲ. ಇನ್ನು ಹಪ್ಪಳ ಸಂಡಿಗೆ, ಬಾಳಕ ಹುರಿಗಾಳಾದ ಹಣಚಿಟ್ಟೆ ಬೇಕೇಬೇಕು. ಹಣಚಿಟ್ಟ ನೋಡಲು ಕಾಯಿಹೋಳಿಗೆಯಂತೆ. ಅಡಿಕೆ ಮಾವಿನ ರಸ ಹಿಂಡಿ ಬಿಸ್ಲಲ್ಲಿ ಒಣಗ್ಸಿ ಇಟ್ಟರೆ ಮೇಲೆ ಮೇಲೆ ರಸ ಹಿಂಡಿದಾಗ ಪದರ ಪದರದಂತೆ ಬರುತ್ತದೆ. ಒಣಗ್ಸಿ ಇಟ್ಟರೆ ವರ್ಷಾನುಗಟ್ಲೆ ಇರುತ್ತದೆಯಂತೆ.

ಸದಾನಂದನಲ್ಲಿ ಬರುವ ತಂಬುಳಿ ಸಾರು, ಹುಳಿ, ಕುರಾಸಣೆ ಚಟ್ನಿ (ಏನೆಂದು ಶ್ರೀಮತಿ ಎಂ.ಕೆ ಇಂದಿರಾರವರನ್ನೇ ಕೇಳಬೇಕೇನೋ ?) ಹುರುಳಿಸಾರು ಸಾಮಾನ್ಯ ದ್ದಾದರೂ ತುಂಬಾ ರುಚಿ ತುಂಬಿದ್ದು. ಸದಾನಂದನಿಗೆಂದು ಅಡುಗೆಯ ತಂತ್ರಿ ಯವರ ಹೆಂಡತಿ ಕಳುಹಿಸಿಕೊಡುವ ತಿಂಡಿ ತಿನಸುಗಳ–ಕ್ವಟ್ಟೆ ಕಡುಬು, ಉಪ್ಪಿನಕಾಯಿ, ಹಣಚಟ್ಟು, ಹುರಿಯಿಟ್ಟು, ಹಲಸಿನ ಹಪ್ಳ—ಅವರ ಜತೆಗೆ ಅಳಿಯಲಾರದ ಪ್ರೀತಿ. ಮನುಷ್ಯ ಮನುಷ್ಯರೊಳಗಿನ ಸಂಬಂಧದ ಬಿಗಿಯಾಗಿಸುವ ಕೊಂಡಿಗಳೇ ಈ ತಿಂಡಿತಿನಸುಗಳೇನೋ ಎನ್ನುವ ಭಾವ ಬರುವಂತೆ ವರ್ಣನೆ. ಕಳಲೆ-ಅರಮಾರಲ, ಮೆಣಸಿನ ಕರೆ ಉಪ್ಪಿನಕಾಯಿ (ಈಗ ಪತ್ತೆಯೇ ಇಲ್ಲ) ಇವೆಲ್ಲಾ ಎಂ. ಕೆ. ಇಂದಿರಾ ರವರ ಕಾದಂಬರಿಗಳಲ್ಲಿ ದಾಖಲಾದುದೇ ಉಳಿಯಿತು. ನಮಗೆಲ್ಲಾ ಅದೇನೆಂದೇ ಗೊತ್ತಿಲ್ಲ.

ಅಡಿಗೆ ಮಾತ್ರವಲ್ಲ ಮಾಡಿದ ಅಡುಗೆಯನ್ನು ತಿನ್ನುವುದಕ್ಕೂ ಒಂದು ರೀತಿ ಯಿದೆಯೆಂದೂ ತಿಳಿದು ಹೇಳುತ್ತಾರೆ. ಎಂ.ಕೆ. ಇಂದಿರಾರವರು. ಸಕ್ಕರೆ, ಆಕಳ ತುಪ್ಪ ಕೇಸರಿಹೂವು, ಬೆರೆಸದ ಹಾಲು ಕುಡಿದು ನಾಲಗೆ ಚಪ್ಪರಿಸುವಾಗ ಬರೇ ಡೈರಿ ಹಾಲು ಕುಡಿದ ಓದುಗರ ಬಾಯಲ್ಲೂ ನೀರು ಬರಬೇಕು. ಬೆಲ್ಲ, ಏಲಕ್ಕಿ, ಹೆಸರು ಹಿಟ್ಟು ಹಾಕಿ ಮಾಡಿದ ಪಾನಕವನ್ನು ಹಿತ್ತಾಳೆ ಗಿಂಡಿಗಳಲ್ಲಿ ಎತ್ತಿ ಕುಡಿದರೆ ರುಚಿಯೊಡನೆ ಮನಸ್ಸಿಗೂ ದೇಹಕ್ಕೂ ತಂಪು."

"ಚಕ್ಕನೆ ಮಾವಿನ ಮಿಡಿ ಕಡಿದರು, ಸಂಬರ ಸಾರು ಸುರಿದರು, ಹಂಚುತ್ತಾ ಕರಿಗಡುಬು ತಿಂದರು." 'ಬಾಳೆ ಎಲೆಯ ಮೇಲೆ ಬಿಸಿಬಿಸಿಯಾಗಿ ಹಾಕಿದ ಮೆಂತ್ಯದ ದೋಸೆ, ಅದರ ಮೇಲೆ ಮಾವಿನಕಾಯಿ ಚಟ್ನಿ, ಮೇಲೆ ಬೆಣ್ಣೆ" (ಬಡಿಸುವ ರೀತಿಯೂ ರುಚಿಗೆ ಪೂರಕ) ಮುರಹತ್ತುತ್ತಾ ತಿನ್ನುವ ಕೋಡ್ಬಳೆ, ಮುರಹತ್ತಿ ಕೊಯ್ದು ತಿನ್ನುವ ಪೇರಳೆ ಚಮ್ಮಾರಲ ಹಣ್ಣುಗಳು, ತಿನ್ನುವ ರೀತಿಯಲ್ಲಿ ಅದ್ಭುತ ರುಚಿ ! ಉಪಾಹಾರದ

ವೈಖರಿಯು, ವೈವಿಧ್ಯತೆಯುಲ್ಲಿ ಪುನಃ ಪುನಃ ಉಣಬೇಕೆನ್ನುವ ಬಯಕೆ ಹತ್ತಿದರೆ ವಿಚಿತ್ರವಿಲ್ಲ.

ಸದಾನಂದದಲ್ಲಿ ಒಂದು ಗಾದೆ ಮಾತಿನ ಉಲ್ಲೇಖವಿದೆ." ನಮ್ಮಲ್ಲಿ ಒಂದು ಗಾದೆ ಉಂಟು ಗೊತ್ತುಂಟಲ್ಲ ನಿಮಗೆ ? ಇಂಗು-ಪಂಗು ಇದ್ದರೆ ಮಂಗವಾಳಿ ಅಟ್ಟಾಳೂಂತ ಹಾಕುವುದು ಹಾಕಿದರೆ ಆಯಿತು ರುಚಿ ತಾನಾಗಿ ಬರುತ್ತದೆ." ಈ ಮಾತು ಹೇಳಿಕೆಯ ಮಾತು. ಹಾಕುವ ಸಾಮಾನಿನ ಜತೆಗೆ ಕೈಗುಣವೂ ಬೇಕು. ಹಾಗೇ ಈ ಪಾಕಗಳನ್ನು ಕಾದಂಬರಿಯಲ್ಲಿ ಅಳವಡಿಸುವ ಕೈಚಳಕ ಶ್ರೀಮತಿ ಎಂ. ಕೆ. ಇಂದಿರಾರವರಿಗಷ್ಟೇ ಸೀಮಿತ.

ಶ್ರೀಮತಿ ಎಂ. ಕೆ. ಇಂದಿರಾರವರ ಅಪ್ಪಟ ಅಭಿಮಾನಿಯಾದ ನನ್ನ ಒಂದು ಚಿಕ್ಕ ಲೇಖನವೂ ಅವರ ಅಭಿನಂದನಾ ಗ್ರಂಥದಲ್ಲಿರಲಿ ಎಂದು ನಮಗೆ ಅನಿಸಿದಾಗ ಶ್ರೀಮತಿ ಎಚ್. ಎಸ್. ಪಾರ್ವತಿಯವರು, "ಸಾಮಾನ್ಯ ಎಲ್ಲಾ ಕಾದಂಬರಿಗಳ ಬಗ್ಗೆಯೂ, ಅವರ ಕಾದಂಬರಿಗಳಲ್ಲಿ ಕಂಡು ಬರುವ ವಿಶೇಷತೆಗಳ ಬಗ್ಗೆಯೂ ಈಗಾಗಲೇ ಬೇಕಷ್ಟು ಲೇಖನಗಳು ಬಂದಿವೆ. ಆದರೂ ಅವರು ಆರಿಸಕೊಳ್ಳದಿರುವಂಥಾ ವಿಷಯದ ಬಗ್ಗೆ ಬರೆಯುವಿರಾ ಎಂದಾಗ ನಾನವರ ಮುಖ ಮಿಕಿ ಮಿಕಿ ನೋಡಿದೆ. ಮತ್ತೆ ಅವರೇ ಹೇಳಿದರು. ಅವರ ಕಾದಂಬರಿಗಳಲ್ಲಿ ಬರುವ ಮಲೆನಾಡಿನ ತಿಂಡಿಗಳ ಬಗ್ಗೆ ಯಾರೂ ಬರೆದೇ ಇಲ್ಲ. ಅದರ ಮೇಲೇ ಬರೆದು ಕೊಡಿ ಅಂದಾಗ ನನಗೆ ಪಿಚ್ಚೆನಿಸಿದ್ದು ನಿಜ. ತಿಂಡಿ ತೀರ್ಥಗಳ ಬಗ್ಗೆ ಏನಂತ ಬರೆಯೋದು ಎಂಬ ಯೋಚನೆ ಯಲ್ಲೇ ಮನೆಗೆ ಬಂದು ಅವರ ಕಾದಂಬರಿಗಳಲ್ಲಿ ಕೆಲವನ್ನು ಕೈಗೆ ತಗೊಂಡು, ತಿಂಡಿಪೋತಿಯಂತೆ, ತಿಂಡಿ ತೀರ್ಥಗಳನ್ನು ಮನದಲ್ಲಿಟ್ಟುಕೊಂಡು ಪುಟ ತಿರುಗಿಸಿದಾಗ ನನಗನಿಸಿತು, ಎಚ್.ಎಸ್. ಪಾರ್ವತಿಯರಂದಂತೆ ಎಂ.ಕೆ. ಇಂದಿರಾರವರ ಅಭಿನಂದನಾ ಗ್ರಂಥದಲ್ಲಿ ಮಲೆನಾಡಿನ ತಿಂಡಿ ತೀರ್ಥಗಳ ಬಗ್ಗೆ ಒಂದು ಲೇಖನ ಬರೆದರೆ ಉತ್ಕೃಷ್ಟ ಭೋಜನದಲ್ಲಿ ಉಪ್ಪಿನಕಾಯಿಯಿದ್ದಂತೆ ಆಗಬಹುದಲ್ಲ ಎಂದು. ಶ್ರೀಮತಿ ಎಚ್.ಎಸ್. ಪಾರ್ವತಿಯವರ ಸಲಹೆಗೆ ರೂಪುಕೊಟ್ಟು ಬರೆದು ಉಪ್ಪಿನಕಾಯಿ ಹಾಕಿದ್ದೇನೆ. ಶ್ರೀಮತಿ ಎಂ.ಕೆ. ಇಂದಿರಾರವರು ಅವರ ಕಾದಂಬರಿಗಳಲ್ಲಿ ಕಲಾತ್ಮಕವಾಗಿ ತುಂಬಿಸಿಟ್ಟ ರಸದೂಟದ ಸವಿಯನ್ನು ಮನದಲ್ಲೇ ಸವಿಯುತ್ತಿರುವಾಗ ನನ್ನ ರುಚಿಗ್ರಂಥಿಗಳು ಕೆರಳಿ, ಆ ತಿಂಡಿ ತಿನಸುಗಳನ್ನು ತಿನ್ನುವ ಆಸೆಯಾದದ್ದಂತೂ ನಿಜ.

ಮರತೇ ಹೋಗುತ್ತಿರುವ ಅಪ್ಪಟ ಮಲೆನಾಡಿನ ತಿಂಡಿ, ತಿನಿಸು, ಊಟ, ತೀರ್ಥಗಳ ಬಗ್ಗೆ ತಮ್ಮ ಕಾದಂಬರಿಗಳಲ್ಲಿ ಕಲಾತ್ಮಕವಾಗಿ ದಾಖಲಾಗಿಸಿರುವ ಶ್ರೀಮತಿ ಎಂ. ಕೆ. ಇಂದಿರಾರವರಿಗೆ ಆತ್ಮೀಯ ಅಭಿನಂದನೆಗಳು.

'ಫಣಿಯಮ್ಮ' ಕೃತಿಯಲ್ಲಿ ವ್ಯಂಗ್ಯ, ವಿಡಂಬನೆ

○

○

○ ನಾ. ಡಿಸೋಜ

ಶ್ರೀಮತಿ ಎಂ.ಕೆ. ಇಂದಿರಾ ಅವರು ತಮ್ಮ ಪ್ರಖ್ಯಾತ ಕೃತಿ "ಫಣಿಯಮ್ಮ" ದಲ್ಲಿ ಬಾಲ ವಿಧವೆಯಾಗಿ ನೂರಹನ್ನೆರಡು ವರ್ಷ ಬದುಕಿ ಬಾಳಿದ ಅಂಚೆ ಅತ್ತೆ. ಸುಖವನ್ನು ಎಂದೂ ಕಾಣದ ಫಣಿಯಮ್ಮ ಹೆರಿಗೆ ಮಾಡಿಸಿದ್ದು, ಹಲವರ ಬದುಕಿಗೆ ಆಧಾರವಾಗಿ ನಿಂತದ್ದು, ಆಕೆ ಸತ್ತಾಗ "ಊರಿನ ಹೊಲೆ ಹದಿನೆಂಟು ಜಾತಿಯವರೂ ಅಳುತ್ತಾ ರುದ್ರ-ಭೂಮಿಗೆ" ಹೋಗಿದ್ದು. ಶ್ಯಾನುಭೋಗ ಕಿಟ್ಟಪ್ಪನವರು "ನಮ್ಮ ಫಣಿ ಅಂಥ ಹೆಂಗ್ಸು ಹಿಂದೆ ಹುಟ್ಟಿಲ್ಲ ಮುಂದೆ ಹುಟ್ಟುಲ್ಲ" ಎಂದು ಹೇಳಿದ್ದು, ಇವೆಲ್ಲ ಕಥಾನಾಯಕಿ ಫಣಿಯಮ್ಮನ ವ್ಯಕ್ತಿತ್ವದ ಆಳ ಎತ್ತರವನ್ನು ನಮಗೆ ಪರಿಚಯ ಮಾಡಿಕೊಡುತ್ತದೆ.

ಲೇಖಕಿ "ನನ್ನಿಂಗಿತದಲ್ಲಿ ನೂರೈವತ್ತು ವರ್ಷಗಳ ಹಿಂದಿನಕಾಲದ ಒಂದು ಜೀವನಕ್ರಮವನ್ನು ತಾವಿಲ್ಲಿ ಚಿತ್ರೀಕರಿಸಿರುವುದಾಗಿ ಹೇಳುತ್ತಾರೆ." ದೀರ್ಘ ಜೀವನ, ಜೀವನವನ್ನು ನಿಷ್ಕಲಂಕ ರೀತಿಯಲ್ಲಿ ನಡೆಸಿದ ಆ ಪುಣ್ಯಜೀವವನ್ನು ಕಣ್ಣಾರೆ ಕಂಡ ಧನ್ಯತಾ ಭಾವಕ್ಕೆ ಲೇಖಕಿ ಒಳಗಾಗಿರುವುದು ಸುಳ್ಳಲ್ಲ. ಆದರೆ ಈ ಬದುಕಿನ ಚಿತ್ರಣ ನೀಡುವಾಗ ಲೇಖಕಿಯ ಒಲವು ಫಣಿಯಮ್ಮನ ಬಗೆಗಿದ್ದರೂ, ಫಣಿಯಮ್ಮನ ವೈಧವ್ಯದ ಬದುಕನ್ನು ಮನಕರಗಿಸುವ ರೀತಿಯಲ್ಲಿ ಅವರು ಬರೆದಿದ್ದರೂ ಅವಳ ಬದುಕಿಗೆ ಕಾರಣವಾದ ಅಂದಿನ ಸಾಮಾಜಿಕ ರೀತಿ ನೀತಿ ಪರಿಸರಗಳನ್ನು ಇಂದಿರಾ ಅವರು ವ್ಯಂಗ್ಯವಾಗಿ ಚಿತ್ರಿಸುತ್ತಾರೆ. ಈ ವ್ಯಂಗ್ಯ ದನಿ ಕಾದಂಬರಿಯ ಉದ್ದಕ್ಕೂ ಕಟಕಿಯಾಡುತ್ತ ಲೇಖಕಿಯ ಒಲವು ಎತ್ತ ಕಡೆ ಇದೆ ಎಂಬುದನ್ನು

ವ್ಯಕ್ತಪಡಿಸುತ್ತಾ ಸಾಗುತ್ತದೆ. ಜೊತೆಗೆ ಫಣಿಯಮ್ಮನ ದುರಂತ ಬದುಕಿಗೆ ಓದುಗರ ಅನುಕಂಪವನ್ನು ತಂದುಕೊಡುತ್ತದೆ.

ಕಾದಂಬರಿಯ ಎರಡನೇ ಪುಟದಲ್ಲಿಯೇ ಲೇಖಕಿ 1840ನೇ ಇಸವಿಯಲ್ಲಿ ಮಲೆನಾಡ ಬ್ರಾಹ್ಮಣ ಬದುಕು ವಿಪರೀತ ಮಡಿವಂತಿಕೆ, ಸಂಪ್ರದಾಯ, ಶಾಸ್ತ್ರಗಳ ಕೂಪ ಮಂಡೂಕತ್ವಗಳಲ್ಲಿ ಬಳಲುತ್ತಿದ್ದುದನ್ನು ಹೇಳುತ್ತಾರೆ. ಧರ್ಮ ಸಂಪ್ರದಾಯ ತಂದು ಹಾಕಿದ ಒಂದು ದುರಂತ ಚಿತ್ರಣವನ್ನು ತಾವು ಮುಂದಿನ ಪುಟಗಳಲ್ಲಿ ನೀಡಲಿರುವ ಸೂಚನೆಯನ್ನು ಎರಡನೇ ಪುಟದಲ್ಲಿ ಹೀಗೆ ನೀಡುತ್ತಾರೆ ಲೇಖಕಿ–

"....ಸುತ್ತಮುತ್ತಲಿನ ಹಳ್ಳಿಗಳಲ್ಲಿ ಏನಾದರೂ ಹೆಚ್ಚು ಕಡಿಮೆ ಆಯಿತೆಂದರೆ ಮುಗಿಯಿತು. ದೊಡ್ಡ ಹಾಹಾಕಾರ. ಅಂಚೆ ಮನೆಯವರಿಂದ ಅದು ಹದಿನೈದು ದಿನಗಳಲ್ಲಿ ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ಹರಡಿತೆಂದೇ ಲೆಕ್ಕ. ಆಯ್ತು; ಬ್ರಾಹ್ಮಣರೆಲ್ಲ ಕಚ್ಚೆ ಕಟ್ಟಿಕೊಂಡು ಮೂವತ್ತು ಮೈಲಿ ದೂರದ ಶೃಂಗೇರಿಗೆ ಕಾಲುನಡಿಗೆಯಲ್ಲಿ ನಡೆದರೆಂದೇ ತಿಳಿಯಬೇಕು. ಆಗ ಶ್ರೀ ಶ್ರೀ ಶ್ರೀ ನರಸಿಂಹ ಭಾರತಿ ಸ್ವಾಮಿಗಳವರು ಪಟ್ಟಕ್ಕೆ ಬಂದ ಕಾಲ. ಮಾತು ಎತ್ತಿದರೆ ಬಹಿಷ್ಕಾರ ಇಂಥದ್ದು ದಿನವೂ ಇರುವುದೇ. ಯಾವಳಾದರೂ ಬಾಲ ವಿಧವೆ ಬಸಿರಾದಳೆಂದರೆ ಮುಗಿಯಿತು. ಆಕೆಯನ್ನು ಬಸಿರು ಮಾಡಿದವರೇ ಶೃಂಗೇರಿಗೆ ಹೋಗಿ ಆಕೆಯ ಬಗ್ಗೆ ಸ್ವಾಮಿಗಳಲ್ಲಿ ದೂರು ಹೇಳಿ ಆಕೆಯನ್ನು ಜಾತಿಯಿಂದ ಹೊರಗೆ ಹಾಕಿಸಿ ಬರುತ್ತಿದ್ದರು. ಸ್ವಾಮಿಗಳಾದರೂ ಹೇಳಿ ಕೇಳಿ ಸಂನ್ಯಾಸಿ. ಸದಾ ಈ ವ್ಯಭಿಚಾರದ ಪುರಾಣ ಕೇಳುವುದು ತಮ್ಮ ಬ್ರಹ್ಮಚರ್ಯಕ್ಕೆ ಕುಂದು ಎಂದು ತಿಳಿಯರು. ಅವರು ಕೇಳಿ ಕೈ ಸನ್ನೆಯಿಂದಲೇ ಅದನ್ನು ಮಠದ ಧರ್ಮಾಧಿಕಾರಿಗಳಿಗೆ ವಹಿಸುತ್ತಿದ್ದರು. ಕೇಳಬೇಕೆ ? ತೋಳನಿಗೆ ಕುರಿ ಕಾಯಲು ಬಿಟ್ಟಂತೆ. ಅವರ ಸೊಂಟಕ್ಕೆ, ಕೆಲವು ಅಪ್ಪಟ ಬೆಳ್ಳಿಯ ರೂಪಾಯಿಗಳು ಸೇರಿದ ಕೂಡಲೇ ಬಡಪಾಯಿ ಮಡಿ ಹೆಂಗಸಿಗೆ ಬಹಿಷ್ಕಾರ ಇದ್ದಂತೆಯೇ" (ಪುಟ–2)

ಈ ಬಗೆಯ ಧಾರ್ಮಿಕ ಬಿಗಿ ಹಿಡಿತವಿದ್ದ ದಿನಗಳಲ್ಲಿ ಫಣಿಯಮ್ಮನ ಜನ್ಮ. ಈ ಮಗುವಿನ ನಾಮಕರಣದ ದಿನ ಇದರ ಜಾತಕವೂ ಸಿದ್ಧ. "ಹುಡುಗಿಗೆ ಪೂರ್ಣಾಯಸ್ಸು ಅಖಂಡ ಸೌಭಾಗ್ಯವತಿ. ಶ್ರೀಮಂತ ಗಂಡನ ಕೈ ಹಿಡೀತಾಳೆ...." ಇತ್ಯಾದಿ (ಪುಟ–3) ಇದು ಅವಳ ಭವಿಷ್ಯ.

"ಫಣಿಯಮ್ಮ ಸಂಪ್ರದಾಯದ ಸಂಕೋಲೆಯೊಂದಿಗೆ ಶಾಂತವಾಗಿ ಬೆಳೆದಳು" (ಪುಟ-14) "ಮೇಳಿಗೆ ನೀಲಕಂಠ ಭಟ್ಟರ ಮಗ ಹದಿನೈದು ವರ್ಷದ ನಂಜುಂಡನ

ಜಾತಕ ಫಣಿಯಮ್ಮನ ಜಾತಕಕ್ಕೆ ಸರಿಯಾಗಿ ಹೊಂದಿತು. ಹುಡುಗನಿಗೆ ಪೂರ್ಣಾಯಸ್ಸು. ಮಾಂಗಲ್ಯ ಕೂಟ, ದಾಂಪತ್ಯ ಕೂಟ, ನಕ್ಷತ್ರ ಗೋತ್ರ–ಸೂತ್ರಗಳು ಹದವಾಗಿ ಕೂಡಿ ಬಂದವು" (ಪುಟ-18).

"ಅಂತೂ, ಸಾರೋದ್ಧಾರವಾಗಿ, ಸಾಂಗೋಪಾಂಗವಾಗಿ ಅಂಜೆ ತಮ್ಮಯ್ಯನವರ ಮಗಳ ಮದುವೆ ನಡೆಯಿತು" (ಪುಟ-21). ವರ ಮದುವೆಯಲ್ಲಿ ತಿನ್ನಲಾಗದ ಉಂಡೆ ಚಕ್ಕುಲಿಗಳನ್ನು ಗಾಡಿಯಲ್ಲಿ ಪ್ರಯಾಣ ಮಾಡುವಾಗ ತಿನ್ನುತ್ತಾರೆ. ಚಕ್ಕುಲಿ ತಿನ್ನುವಾಗ ಆ ಹುಡುಗನಿಗೆ ಒಂದೆರಡು ಸಮಸ್ಯೆಗಳು ತಲೆದೋರುತ್ತವೆ.

ಈ ಹಿಂದೆ ಮಾಡಿದ ಹಾಗೆ ಹವನ ಹೋಮ ಮತ್ತೆ ಮಾಡುತ್ತಾರೆಯೇ ?

ಪ್ರಸ್ತ ಎಂದರೆ ಏನು ?

ಹೆಣ್ಣು ಮೈನೆರಿಯೋದು ಅಂದರೆ ಏನು ?

ಸಹಜವಾಗಿ ಆತ ಹಿರಿಯರ ಮುಂದೆ ಈ ಪ್ರಶ್ನೆ ಇಡುತ್ತಾನೆ. ಅವರು ನಗುತ್ತಾರೆ. ಏನೋ ಉತ್ತರ ಕೊಡುತ್ತಾರೆ.

ಹದಿನೈದು ವರ್ಷದ ಗಂಡು, ಒಂಬತ್ತು ವರ್ಷದ ಹೆಣ್ಣು, ಇವರಿಬ್ಬರ ಮದುವೆಯ ಸಡಗರ ಸಂಭ್ರಮದ ವರ್ಣನೆಯ ನಡುವೆ ಈ ವ್ಯಂಗ್ಯ ಮಾತುಗಳು ಓದುಗರನ್ನು ಬೆಚ್ಚಿ ಬೀಳಿಸುತ್ತವೆ.

ಕತೆ ಮುಂದೆ ಸಾಗುತ್ತದೆ.

ತೀರ್ಥಹಳ್ಳಿಯ ಜಾತ್ರೆಗೆ ಹೋದಾಗ ಫಣಿಯಮ್ಮನ ಜಡೆಯನ್ನು ಬಂಗಾರದ ಆಸೆಗೆ ಕಳ್ಳರು ಕತ್ತರಿಸಿಕೊಂಡು ಹೋಗುತ್ತಾರೆ. ಹೀಗೆಯೇ ಮತ್ತೊಂದು ಅಪಶಕುನ ನಡೆದು ಇದರ ಹಿಂದೆಯೇ ಫಣಿಯಮ್ಮನ ಗಂಡ ಸತ್ತ ಸುದ್ದಿ ಬರುತ್ತದೆ. "ಫಣಿಯಮ್ಮನ ಜಾತಕದ ಅಖಂಡ ಸೌಭಾಗ್ಯ, ಹದಿನಾರು ಗುಣಗಳು, ದೀರ್ಘ ಸೌಮಂಗಲ್ಯ, ಮಾಂಗಲ್ಯ ಕೂಟ, ಅಷ್ಟ ಪುತ್ರ ಸಂತಾನ ಎಲ್ಲಾ ನುಣ್ಣಗೆ ಅಳಿಸಿ ತೊಳೆದು ಈಗ ಅವಳು ಮೊದಲಿನ ಕನ್ಯಾಕುಮಾರಿಯೇ ಆಗಿದ್ದಳು" (ಪುಟ-35) "....ದಿಕ್ಕು ತೋರದೆ ಒಂದು ತೊಟ್ಟು ಕಣ್ಣೀರಿಡದೆ ಕುಳಿತವಳೆಂದರೆ ಫಣಿಯಮ್ಮ. ತನ್ನ ಗಂಡ ಸತ್ತ. ಎಲ್ಲರೂ ಸಾಯುವಂತೆ ಅವನೂ ಸತ್ತ. ಅವನ ಮುಖವನ್ನು ತಾನು ನೋಡಿರಲಿಲ್ಲ. ಮದುವೆಯಲ್ಲಿ ಅವನ ಹದಿನೈದು ವರ್ಷದ ಪುಟ್ಟ ಪಾದಗಳು ಕಂಡಿದ್ದವು. ಅಗ್ನಿ ಪ್ರದಕ್ಷಿಣೆ ಮಾಡುವಾಗ ತುದಿ ಬೆರಳಿನಲ್ಲಿ ಅವಳ ಕೈಹಿಡಿದಿದ್ದ.

ಆದರಿಂದ ಅವಳಿಗೆ ಏನೂ ಅನಿಸಿರಲಿಲ್ಲ. ಈಗಲೂ ಅವಳಿಗೆ ಅಳು ಬರಲಿಲ್ಲ. ಮನೆಯವರೆಲ್ಲ ಅಳುವಾಗ ತಾನೂ ಕಣ್ಣೊರೆಸಿಕೊಂಡಳು ಅಷ್ಟೆ" (ಪುಟ. 35)

ಮುಂದೆ ? ಶೃಂಗೇರಿಯಿಂದ ಆಜ್ಞೆ ಬಂದಿತು.

"ಹುಡುಗಿ ಇನ್ನೂ ಕನ್ಯೆಯಾಗಿರುವುದರಿಂದ ಹನ್ನೊಂದನೇ ದಿನ ಸೌಮಂಗಲ್ಯದ ಚಿನ್ಹೆಗಳನ್ನೆಲ್ಲಾ ತೆಗೆದು ತಲೆ ಗೂದಲನ್ನು ಮಾತ್ರ ಹಾಗೇ ಬಿಟ್ಟಿರಬೇಕು. ಮತ್ತು ಬಿಳಿ ಸೀರೆ ಉಡಿಸಬೇಕು. ಮೈನೆರೆಯುವವರೆಗೆ ಯಾರಿಗೂ ಮುಖ ತೋರಿಸಬಾರದು. ಯಾವ ಮಡಿ ಕೆಲಸವನ್ನು ಮಾಡಿಸಕೂಡದು. ಮೈನೆರೆದ ನಾಲ್ಕನೇ ದಿನವೇ ಶಿರೋಮುಂಡನ ಮಾಡಿಸಿ ಆಜನ್ಮ ಮಡಿ ಹಿಡಿಸಬೇಕು. ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಇಡೀ ಮನೆತನಕ್ಕೇ ಬಹಿಷ್ಕಾರ" (ಪು. 36)

ಇದೂ ಆಯಿತು.

ಮೈನೆರೆದ ಮೇಲೆ ಅವಳ ಕೇಶ ಮುಂಡನವೂ ಆಯಿತು. "ಈಗ ಮಾತ್ರ ಫಣಿಯಮ್ಮ ಕುರಿಯಂತೆ ತಲೆ ಬಗ್ಗಿಸಿ" ಅತ್ತಳಂತೆ.

ಫಣಿಯಮ್ಮ ಮಡಿ ಹೆಂಗಸಾದಳು. ಮನೆ ಮಂದಿಗೆಲ್ಲ ಬೇಕಾದ್ದನ್ನು ಮಾಡಿ ಬಡಿಸಿಯೂ ಈಕೆ ಹಣ್ಣು ನೀರು ಎಂದು ತನ್ನ ಆಹಾರವನ್ನು ಮಿತಿಗೊಳಿಸಿದಳು. ತನಗೇನೆ ಒಂದು ರೀತಿಯ ಶಿಕ್ಷೆ ವಿಧಿಸಿಕೊಂಡಳು. ಎಪ್ಪತ್ತನೇ ವಯಸ್ಸಿನಲ್ಲಿ ಆಕೆ ಒಪ್ಪತ್ತಿನ ಊಟವನ್ನೂ ಬಿಟ್ಟಳು. ಕ್ರಮೇಣ ಇದು ಎರಡು ಬಾಳೆಹಣ್ಣು ಒಂದು ಲೋಟ ಮಜ್ಜಿಗೆಗೆ ಬಂದು ನಿಲ್ಲುತ್ತದೆ.

ಫಣಿಯಮ್ಮನ ಕಟ್ಟುನಿಟ್ಟಿನ ಜೀವನ ವಿಧಾನ, ಅವಳು ತನಗೆ ತಾನೇ ವಿಧಿಸಿಕೊಂಡ ಹಲವಾರು ಮಿತಿಗಳ ವಿವರ ಓದಿದಾಗ ಲೇಖಕಿಯ ನೋವು ಸಿಟ್ಟು ಅರ್ಥವಾಗುತ್ತದೆ. ಫಣಿಯಮ್ಮನನ್ನು ಸಾಲುಸಾಲಾಗಿ ಹಲವಾರು ಪರೀಕ್ಷೆಗಳಿಗೆ ಒಡ್ಡಿದ ಧರ್ಮ ಸಂಪ್ರದಾಯಗಳ ಬಗ್ಗೆ ಲೇಖಕಿಗೆ ಗೌರವವಿಲ್ಲ ಎಂಬ ಅಂಶವೂ ಸ್ಪಷ್ಟವಾಗುತ್ತದೆ.

"...ಜೀವನದಲ್ಲಿ ನಡೆದ ನೂರಾರು ಸಂಕಟದ, ಸಂತಸದ, ಕ್ರೂರ, ಭೀಕರ ಭೀಭತ್ಸ, ಅಸಹ್ಯಕರ ಹಾಗೂ ಕರುಣಾ ಜನಕ ಘಟನೆಗಳಿಂದ" ಫಣಿಯಮ್ಮ ನಿರ್ಲಿಪ್ತ

ಪರಿಸ್ಥಿತಿಗೆ ಬಂದು ಮುಟ್ಟಿದ್ದಳು. ಆಕೆ ಕಾಶಿಯಾತ್ರೆಯನ್ನು ಮಾಡಿ ಮುಗಿಸಿದಳು. ಬದುಕಿರುವಾಗಲೇ ಗಯೆಯಲ್ಲಿ ಆತ್ಮಶ್ರಾದ್ಧ ಮಾಡಿಸಿಕೊಂಡಳು.

"ವಿಧವೆಯರು ಮಾಡಬೇಕಾದ ಮಾಡಬಹುದಾದ ವ್ರತ ನಿಯಮಗಳನ್ನೆಲ್ಲ ಮಾಡಿಮುಗಿಸಿದ್ದರು. ಫಣಿಯಮ್ಮ. ಮುಟ್ಟು ನಿಂತ ಮೇಲೆ ಸೋಮವಾರ, ಅಮವಾಸ್ಯೆ ವ್ರತ, ಋಷಿಪಂಚಮಿ, ವೈಕಂಠ ಚತುರ್ದಶಿ ಇತ್ಯಾದಿ. ತಣ್ಣೀರುಸ್ನಾನ ಕೇವಲ ಫಲಹಾರ ಆಕೆಯ ಜನ್ಮವ್ರತವಾಗಿತ್ತು. ಆಕೆಯ ಒಂಬತ್ತನೆಯ ವರ್ಷಕ್ಕೆ ಹಾಸಿಗೆಯ ಶಯನ ರದ್ದಾಯ್ತಲ್ಲ. ಮಲಗಲು ಒಂದು ವಾಲೆಗರಿಚಾಪೆ, ತಲೆಯಡಿಗೆ ಹಳೆಯದೊಂದು ಸೀರೆ, ಹೊದೆಯಲು ಹಳೀ ಸೀರೆಯ ದಟ್ಟಿ. ಅಂದಿನಿಂದ ಆಜನ್ಮ ಪರ್ಯಂತ ಅದೇ ಆಕೆಯ ಶಯನೋತ್ಸವ. ರಾತ್ರಿ ಪೂರಾ ಕಣ್ಣು ಎಳೆಯುವವರೆಗೂ ತೂಕಡಿಸಿ ಬೀಳುವಂತಾದಾಗ ಹಾಗೇ ತಲೆ ಕೊಡುವುದು. ನಂತರ ಬೆಳಗಿನ ಜಾವ ನಾಲ್ಕು ಗಂಟೆಗೇ ಎಚ್ಚರ. ಮನೆಯವರಿಗೆ ಎಚ್ಚರವಾಗದಂತೆ ಸದ್ದಿಲ್ಲದೆ ಎದ್ದು ಒಂದೊಂದೇ ಕೆಲಸ ನಡೆಸುವುದು." (ಪುಟ. 63)

—ಇದು ಫಣಿಯಮ್ಮನ ಬದುಕಾಯಿತು. ಲೇಖಕಿ ಹೇಳುವ ಹಾಗೆ ಆಕೆಯ ಸುದೀರ್ಘ ಜೀವನದಲ್ಲಿ ಆಕೆ ಎಂದೂ ಕಾಹಿಲೆ ಮಲಗಲಿಲ್ಲ. ಕೆಲಸಕ್ಕೆ ಬೇಸರಪಡಲಿಲ್ಲ; ಅವನಿವನೆಂಬ ಬೇಧವಿಲ್ಲದೆ ಕೆಲಸ. ಸೇವೆ ಮಾಡಿದರು. ಬೇಕು ಎಂಬ ಸೊಲ್ಲೇ ಆಕೆಯ ಜೀವನದಲ್ಲಿ ಬರಲಿಲ್ಲ. ಒಬ್ಬರನ್ನ ಕಾಡಲಿಲ್ಲ. ಬೇಡಲಿಲ್ಲ. ಅನವಶ್ಯಕ ಮಾತು, ಒಲ್ಲದ ಕೆಲಸ ಎರಡೂ ಆಕೆಗೆ ಆಗದು. (ಪುಟ. 103)

ಹೀಗೆ ಬದುಕಿದ ಫಣಿಯಮ್ಮ ತುಳಸಿ ಕಟ್ಟಿಗೆ ತಲೆಕೊಟ್ಟು ಕೊನೆಯುಸಿರೆಳೆದಳು.

ಫಣಿಯಮ್ಮನ ಕತೆ ಓದುತ್ತಾ ಹೋದಹಾಗೆ ನನಗೆ ಲೇಖಕಿಯ ವ್ಯಂಗ್ಯ ಸಿಟ್ಟು ತಟ್ಟುತ್ತಾ ಹೋಗುತ್ತದೆ. ಧರ್ಮ, ಸಂಪ್ರದಾಯ, ಮಡಿ, ಮಠ, ಧರ್ಮಲಂಡರಾದ ಜನ ಇಷ್ಟೆಲ್ಲ ಹಿಂಸೆ ಕೊಟ್ಟರೂ ಈ ಹಿಂಸೆಯ ನಡುವಿನಿಂದ ಹೀಗೊಂದು ವ್ಯಕ್ತಿ ಹುಟ್ಟಿದ ಮನೆಗೆ ಸಮಾಜಕ್ಕೆ ಬೇಕಾದವಳಾಗಿ ಬದುಕಿದಳಲ್ಲ....ಇಲ್ಲಿ ಸಂಪ್ರದಾಯಗಳ, ಮಠದ ಬಿಗಿನಿಯಮಕ್ಕಿಂತ ಮಾನವೀಯ ಅಂತಃಕರಣ ಮಾನವೀಯ ಚೇತನವೇ ದೊಡ್ಡದೆಂದು ಲೇಖಕಿ ಹೇಳುತ್ತಿದ್ದಾರೆಯೆ ?

ಈ ಕಾದಂಬರಿಯಲ್ಲಿ ಮತ್ತೂ ಒಂದು ಕತೆ ಬರುತ್ತದೆ.

ಫಣಿಯಮ್ಮನ ಸೋದರ ಮಾವನ ಮೊಮ್ಮಗ ಸೀತಾರಾಮು. ಇವನ ಮಗಳು ದಾಕ್ಷಾಯಿಣಿ. ಹದಿನಾರು ವರ್ಷದ ತುಂಬು ಪ್ರಾಯದ ಹುಡುಗಿ ಮದುವೆಯಾಗಿ ನಾಲ್ಕು ವರ್ಷಗಳಾಗಿವೆ. ಮಕ್ಕಳಾಗಿಲ್ಲ. ಇವಳ ಗಂಡ ಸಾಯುತ್ತಾನೆ. ಸಂಪ್ರದಾಯಸ್ಥರಾದ ಹುಡುಗಿಯ ಅತ್ತೆಯ ಮನೆಯವರು ಹುಡುಗಿಗೆ ಮಡಿ ಮಾಡಿಸಬೇಕೆಂದು ಹಟಹಿಡಿಯುತ್ತಾರೆ. ದಾಕ್ಷಾಯಿಣಿ ಒಪ್ಪುವುದಿಲ್ಲ. ಈ ವಿಷಯ ಫಣಿಯಮ್ಮನಲ್ಲಿಗೆ ಬಂದಾಗ ಆಕೆಯೂ ದಾಕ್ಷಾಯಿಣಿಯ ಪರ ವಹಿಸುತ್ತಾಳೆ. "ಮುಂದೆ ಜೀವಮಾನವೆಲ್ಲ ನನ್ನ ಹಾಗೆ ಇರೋದು ಇದ್ದೇ ಇದೆ. ಇನ್ನೊಂದು ನಾಕ್ವರ್ಷ ಕಳೀಲಿ ಬಿಡಿ. ಇಪ್ಪತ್ತು ತುಂಬಿದ ಮ್ಯಾಲ ಏನಾರ ಮಾಡಿ. ನೀವೇ ತುಸು ಸಮಾಧಾನ ಹೇಳಿ ಅದರ ಅತ್ತೆ ಮಾವಂಗೆ" ಎಂದು ಹೇಳುತ್ತಾಳೆ ಫಣಿಯಮ್ಮ. ವಿಧವೆಯಾದ ನಿನಗೆ ಈ ಬಗ್ಗೆ ಮಾತನಾಡುವ ತೀರ್ಪುಕೊಡುವ ಅಧಿಕಾರ ಇಲ್ಲ ಎಂಬಂತಹಾ ಮಾತುಗಳು ಕೇಳಿ ಬಂದು ಫಣಿಯಮ್ಮ ಅವಮಾನಿತಳಾಗುತ್ತಾಳೆ. ಸಂಪ್ರದಾಯದ ಕೈ ಮೇಲಾಗಿ ದಾಕ್ಷಾಯಿಣಿಯ ತಲೆ ಬೋಳಾಗುತ್ತದೆ. ಹೀಗಾಯಿತಲ್ಲ ಎಂದು ಫಣಿಯಮ್ಮ ತುಂಬಾ ನೊಂದುಕೊಳ್ಳುತ್ತಾಳೆ. ಹಣ್ಣು ನೀರು ಬಿಟ್ಟು ಎಲ್ಲೆಲ್ಲೋ ತಿರುಗಿ ಬರುತ್ತಾಳೆ.

ದಾಕ್ಷಾಯಿಣಿಯ ಕತೆ ಮಾತ್ರ ಬೇರೆಯಾಗುತ್ತದೆ.

ಕೇಶ ಮುಂಡನ ಮಾಡಿಕೊಂಡೂ ಆಕೆ ತನ್ನ ಮೈದುನನಿಂದಲೇ ಬಸಿರಾಗುತ್ತಾಳೆ. ಬಹಿಷ್ಕಾರದ ಬೆದರಿಕೆಗೆ ಜಗ್ಗುವುದಿಲ್ಲ. ಅತ್ತೆಯೇ ಅವಳ ಬಾಣಂತನ ಮಾಡುತ್ತಾಳೆ. ಸೊಸೆಯ ಚಿಗುರಿದ ತಲೆಯನ್ನು ಬೋಳಿಸಲೆಂದು ಅತ್ತೆ ಓರ್ವ ಹಜಾಮನನ್ನು ಕರೆ ತಂದಾಗ, ಸೊಸೆ ತನ್ನತ್ತೆಯನ್ನೇ ದಬ್ಬಿಕೊಂಡು ಹೋಗಿ ಹಜಾಮನ ಮುಂದೆ ಕೂರಿಸಿ.

"ಇವರಿಗೆ ತಲೆ ಬೋಳ್ಸು" ಎಂದು ಹೇಳುತ್ತಾಳೆ.

ದಾಕ್ಷಾಯಿಣಿಯ ಪ್ರಸಂಗವನ್ನು ತರುವುದರ ಮೂಲಕ ಮೂಲ ವಸ್ತುವಿನ ಮತ್ತೊಂದು ಮುಖವನ್ನು ಲೇಖಕಿ ತೋರಿಸಿದ್ದಾರೆ. ಸೌಮ್ಯ ಶಾಂತ ಸ್ವರೂಪದ ಫಣಿಯಮ್ಮ ವೈಧವ್ಯವನ್ನು ಸ್ವೀಕರಿಸಿದ ರೀತಿ, ಅದೇ ದಾಕ್ಷಾಯಿಣಿ ಅದನ್ನು ತಿರಸ್ಕರಿಸಿದ ರೀತಿ ವಿಡಂಬನಾತ್ಮಕವಾಗಿ ಚಿತ್ರಿಸಲ್ಪಟ್ಟಿದೆ. ಸಂಪ್ರದಾಯ ಪದ್ಧತಿ ಪರಂಪರೆಯನ್ನು ಒಪ್ಪಿಕೊಂಡ ಫಣಿಯಮ್ಮನ ಬದುಕು ಒಂದು ರೀತಿಯಲ್ಲಿ ನಮ್ಮನ್ನು ವಿಚಾರ ಮಾಡಲು ಹಚ್ಚಿದರೆ, ಅದೇ ಪದ್ಧತಿ ಪರಂಪರೆಯನ್ನು ಧಿಕ್ಕರಿಸಿ ಒಂದು

ಪರಿಹಾರ ಕಂಡ ದಾಕ್ಷಾಯಿಣಿ ಬೇರೊಂದು ದಿಕ್ಕಿನಲ್ಲಿ ಓದುಗರ ಗಮನ ಸೆಳೆಯುತ್ತಾಳೆ ದಾಕ್ಷಾಯಿಣಿಯ ಆಟಾಟೋಪದೆದುರು ಧರ್ಮ ಸಂಪ್ರದಾಯವೆಲ್ಲದರ ಸದ್ದು ಅಡಗಿ ಹೋಗುವುದು ಕೂಡ ಒಂದು ಮುಖ್ಯ ವಿಷಯವಾಗುತ್ತದೆ.

ಸರಿದು ಹೋದ ಬದುಕಿನ ವಿವರಗಳನ್ನು, ರೀತಿ ನೀತಿ ಪದ್ಧತಿಗಳನ್ನು ಎಂ.ಕೆ. ಇಂದಿರಾ ಈ ಕೃತಿಯಲ್ಲಿ ನೀಡಿದರೂ ಅವುಗಳನ್ನು ಬರಿದೇ ಹೊಗಳದೆ, ವೈಭವೀಕರಿಸದೆ, ಅದರಲ್ಲಿರುವ ದೋಷಗಳನ್ನು ತಪ್ಪುಗಳನ್ನು ತಿಳಿಸಿಕೊಡುತ್ತಾ ಹೋಗುತ್ತಾರೆ.

ಬಾಣಂತಿ ಕೋಣೆ ಎದುರು ಗಳಿಗೆ ಬಟ್ಟಲು ಇರಿಸಿಕೊಂಡು ಕುಳಿತ ಮುದುಕರು ಮೇಲಿನ ಬಟ್ಟಲು ಖಾಲಿಯಾದರೂ, ಬಟ್ಟಲನ್ನು ತಿರುಗಿಸಿ ಇಡದೆ ತೂಕಡಿಸುತ್ತ ಕುಳಿತುಕೊಳ್ಳುವ ಪ್ರಸಂಗ, ಬಾಲ್ಯವಿವಾಹ, ಮಠ ಪಾರುಪತ್ತೇಗಾರರ ವಿಷಯ ಇಂತಹಾ ಹಲವು ಸಂದರ್ಭಗಳಲ್ಲಿ ಲೇಖಕಿಯ ಭಕ್ತಿ, ಗೌರವ, ಪೂಜ್ಯಭಾವನೆ ಕಾಣೆಯಾಗಿ ಮೊನಚು ವ್ಯಂಗ್ಯ ತೀಕ್ಷ್ಣ ವಿಮರ್ಶೆ ತಲೆ ಹಾಕುತ್ತದೆ.

ಫಣಿಯಮ್ಮನ ನಿಷ್ಕಲಂಕ ವ್ಯಕ್ತಿತ್ವದ ಬಗ್ಗೆ ಲೇಖಕಿಗಿದ್ದ ಅಪಾರ ಗೌರವ, ಇದರ ಜೊತೆಗೇನೆ ಸಂಪ್ರದಾಯ ಪದ್ಧತಿಗಳಿಂದ ಈ ನಿಷ್ಕಲಂಕ ವ್ಯಕ್ತಿಗೆ ಆದ ಅನ್ಯಾಯ ನೋವಿನ ಬಗ್ಗೆ ಅವರಿಗಿರುವ ಸಿಟ್ಟು ಈ ಎರಡನ್ನೂ ನಾವು "ಫಣಿಯಮ್ಮ" ದಲ್ಲಿ ಕಾಣಬಹುದಾಗಿದೆ. ಈ ಕಾರಣದಿಂದಲೇ ಈ ಕೃತಿಯಲ್ಲಿ ವ್ಯಂಗ್ಯವಿಡಂಬನೆಯೂ ಪ್ರಧಾನ ಅಂಶವಾಗಿ ಬಂದಿದೆ.

ಇಂದಿರಾ ಕೃತಿಗಳು : ವಸ್ತು–ಶೈಲಿ

○
○
○ ನೀಳಾದೇವಿ

ಯಾವ ಸೃಜನಾತ್ಮಕ ಕೃತಿಗಳನ್ನೂ ಮೆಚ್ಚಿಕೊಳ್ಳಬೇಕಾದರೆ ಮುಖ್ಯವಾದದ್ದು ವಸ್ತು ಮತ್ತು ಶೈಲಿ. ಇವೆರಡರ ಪ್ರತಿಭೆಯೂ ಇಂದಿರಾ ಅವರ ಕರಗತ. ಬರೆದು ಪ್ರಕಟಿಸಲು ಪ್ರಾರಂಭಿಸಿದ್ದು ಅವರ ನಲವತ್ತೈದನೇ ವರ್ಷದಲ್ಲಾದರೂ ಆ ಮನೋಧರ್ಮ ಅವರಿಗೆ ಬಾಲೆಯಾಗಿ, ತೀರ್ಥಹಳ್ಳಿಯಲ್ಲಿ, ತುಂಗೆ ನೀರಲ್ಲಿ ಚೆಲ್ಲಾಟವಾಡಿ, ಸಹ್ಯಾದ್ರಿ ಮರ ಹತ್ತುವಾಗಲೇ ಆರಂಭವಾಗಿ ಬಿಟ್ಟಿರಬೇಕು. 'ತುಂಗಭದ್ರ', 'ಸದಾನಂದ', 'ಫಣಿಯಮ್ಮ'ನ ಪಾತ್ರಗಳು ಅಂದಿನಿಂದಲೇ ಅವರ ಚಿತ್ತದಲ್ಲಿ ಭಿತ್ತಿಯಾಗಿ ಹೋಗಿದ್ದಿರಬೇಕು.

ರಾಜ್ಯ ಅಕಾಡೆಮಿ ಪ್ರಶಸ್ತಿ ಪಡೆದ, ಮನೋಹರ ಗ್ರಂಥಮಾಲೆಯಲ್ಲಿ ಮೊದಲು ಪ್ರಕಟವಾದ 'ಸದಾನಂದ' ಅವರ ನೈಜ ಕಲೆಗಾರಿಕೆಗೆ, ಹುಟ್ಟು ಪ್ರತಿಭೆಗೆ ಸಾಕ್ಷಿಯಾಯಿತು. ಮಲೆನಾಡಿನ ಚಿತ್ರವದು. ಇದರಲ್ಲಿನ ಗೌರಿ, ರಾಜು, ಕಮಲಿ ಎಲ್ಲರೂ ಸಹ್ಯಾದ್ರಿ ಮಡಿಲಲ್ಲಿ ಹುಟ್ಟಿ, ಬೆಳೆದು, ಬಾಳಿದ ಮುಗ್ಧ ಜೀವಿಗಳು. ಸ್ವಲ್ಪ ಪಟ್ಟಣದ ಗಾಳಿ ಕುಡಿದದ್ದಕ್ಕೇ ಮೂರ್ತಿ ಅವರ ಜೀವನ ಚಿತ್ರದಿಂದ ಹೊರಗಾಗಿ ಹೋದ. ಅವನ ಮದುವೆ ಲಗ್ನಪತ್ರಿಕೆ ಬಂದಾಗ "ಇಶ್ಶಿ, ಇದೇನ್ ಈರಾಪಿನ್ರ ಮನೆ ಮದಿವ್ಯಾನಾ ? ಇಂಗ್ಲಿಷ್ ಲಗ್ನ ಪತ್ರಿಕೆ ಮಾಡಾಕೆ ?...." ಕಮಲ, ರಾಜ ಬಾಯಿ ಮುಚ್ಚಿ ನಗತೊಡಗುತ್ತಾರೆ. ಹೃದಯದ ಮೂಲೆಯಲ್ಲಿ ಮೂರ್ತಿ ಗೌರಿಯನ್ನು ಮೆಚ್ಚಿದ್ದರೂ ಬೇರೆ ಜಾತಿ ಮುಕ್ತಾಳನ್ನು ಮದುವೆಯಾಗಿ ಹೋಗುತ್ತಾನೆ. ಗೌರಿಗೆ ನಂತರ ಮೂರ್ತಿಯ ಮೈದುನನೇ ಮದುವೆಯಾಗಲು ಮುಂದೆ ಬರುತ್ತಾನೆ.

ಲಗ್ನಪತ್ರಿಕೆಗೆಂದು ಹೊರಟಾಗ ಅಪಘಾತಕ್ಕೆ ಸಿಕ್ಕಿ ಕುಂಟಿಯಾಗಿ, ಆ ಮದುವೆಯೂ ಮುರಿದುಬೀಳುತ್ತದೆ. ಕೊನೆಗೆ ಅಂಗವಿಕಲಳನ್ನು ಮದುವೆಯಾಗಲು ಸದಾನಂದರ ಪ್ರಭಾವದಿಂದ ರಾಜು ಮುಂದೆ ಬರುತ್ತಾನೆ. ವಿಧವೆ ಕಮಲೆಯನ್ನು ಕತೆಗಾರ ಆದರ್ಶವಾದಿ ರಮಾನಂದ (ಸದಾನಂದ) ಮದುವೆಯಾಗುತ್ತಾರೆ. ವಿಧವಾ ವಿವಾಹದ ಬಗ್ಗೆ ಸದಾನಂದರಿಂದ ಈ ಮಾತು ಇಂದಿರಾ ಅವರು ಹೊರಡಿಸುತ್ತಾರೆ "ಸತ್ತವರು ಮತ್ತೆ ಬರುವಂತಿಲ್ಲ. ಇದ್ದವರು ಮತ್ತೆ ಲಗ್ನವಾಗುವಂತಿಲ್ಲ. ಹೆತ್ತವರು ಸೊರಗುವುದು ಬಿಡುವಂತಿಲ್ಲ. ಇದೊಂದು ನಮ್ಮ ಜನರ ಖಾಹಿಲೆ..." ಈ ಮಲೆನಾಡ ಕಾದಂಬರಿಗಳನ್ನು ಬರೆಯುವಾಗ ಅವರ ಶೈಲಿ, ವರ್ಣನೆ ತೀರ ಸಹಜ. 'ಸದಾನಂದ'ದಲ್ಲಿ ಮನೆಯಂಗಳ–'ಬೆಳ್ಳಿ ತಲೆ ಎತ್ತಿ ನೋಡಿದಳು. ರಾಜ ಹೊರಕೊಟ್ಟಿಗೆ ಅಂಗಳಕ್ಕಿಳಿದ. ಹದಿನೈದು ದಿನಗಳ ಮುನ್ನ ಕರು ಹಾಕಿದ ಗೋಪಿಗೆ ಬಿಸಿ ತಳಿ ಕುಡಿಸುತ್ತಿದ್ದರು. ಎಳೆಗರು ಅಲ್ಲೇ ಅಂಗಳದ ಗೂಟಕ್ಕೆ ಕಟ್ಟಿದೆ. ಎದುರಿಗೆ ಬಿಸಿಲಲ್ಲಿ ರೇಶ್ಮೆಬಟ್ಟೆಯಂತೆ ಹೊಳೆಯುತ್ತಿತ್ತು ಎಳೆಗರುವಿನ ಚರ್ಮ. ಮುಟ್ಟಬೇಕೆಂದು ಅವನಿಗನ್ನಿಸಿತು....' ಬಳಸಿದ ಉಪಮೆಗಳೂ ಅವರ ಅನುಭವಕ್ಕೆ ಸೀಮಿತ. 'ಯಾವುದೋ ಸಿಹಿ ಭಕ್ಷ್ಯ ಹದಗೆಟ್ಟು ಪುಡಿಯಾದಂತೆ ಅವನ ಚಿತ್ತ ವಿಕ್ಕೆಟ್ಟು ಕಸಿವಿಸಿಯಾಯಿತು...' 'ನನ್ನ ಹೊಟ್ಟೆ ಇಡ್ಲಿ ಬೆಂದ ಹಾಗೆ ಬೆಯ್ತುದೆ ನೋಡಿ....'

ಅದೇ ಅವರ ಲೇಖನಿ ಬೆಂಗಳೂರು ನಗರ ವಠಾರದ ಅಂಗಳವನ್ನ ಹೀಗೆ ವರ್ಣಿಸುತ್ತದೆ. ಕಾದಂಬರಿ 'ಟು-ಲೆಟ್'–'ಎಡ ಬಲಗಳಲ್ಲಿ ಎರಡು ಪೆಟ್ಟಿಗೆ ಅಂಗಡಿಗಳು. ಅಂಗಳದ ತುಂಬಾ ಕಬ್ಬಿನಸಿಪ್ಪೆ, ಎಳನೀರು ಕೆತ್ತಿದ ಸಿಪ್ಪೆ, ಕಡಲೆಕಾಯಿಸಿಪ್ಪೆ, ಬೀಡಿ ಸಿಗರೇಟು, ಬೆಂಕಿಕಡ್ಡಿ ರಂಪ. ಕಾಲಿಟ್ಟಲ್ಲಿ ಕ್ಯಾಕರಿಸಿ ಉಗಿದ ಕಫ ಎಂಜಲು...." ಪಟ್ಟಣ ವಾಸಕ್ಕೆ ಅವರು ಕಾಲೂರಿನಿಂತ ಮೇಲೆ ಬರೆದಾಗ ಅವರ ವಸ್ತುಗಳು, ಶೈಲಿಯೂ ಹೊರ ಪ್ರಭಾವಕ್ಕೆ ಬಲಿಬಿದ್ದು ಬದಲಾಯಿಸಿತು. ಬೆಂಗಳೂರಿನ ಕೆಳ ಮಧ್ಯಮ ವರ್ಗದ ನೀರ ಸಂಚಯನದ ದೃಶ್ಯ. 'ನಾನಾ ಭಾಷೆಯ ಹೆಂಗಸರು ತಮ್ಮ ಗುಂಡಿ, ಬಿಂದಿಗೆ, ಬಕೀಟುಗಳನ್ನಿಟ್ಟುಕೊಂಡು ಕವಕವ ಒಬ್ಬರಿಗೊಬ್ಬರು ಜಗಳ ವಾಡುತ್ತಿದ್ದರು. ಮೊಳಕೈವರೆಗೆ ಬಳೆ ತೊಟ್ಟ ರೂಪಾಯಗಲ ಕುಂಕುಮವಿಟ್ಟ ಮಧ್ಯವಯಸ್ಸಿನ ಮರಾಠಿ ಹೆಂಗಸೊಬ್ಬಳು ತನ್ನ ದೊಡ್ಡ ಗುಂಡಿಯನ್ನೆತ್ತಿ ಒಂದು ಪ್ರಾಯದ ಹುಡುಗಿ ಮೇಲೆ ಕುಕ್ಕಲು ಹೋದಳು, ಲಂಗ ದಾವಣಿ ತೊಟ್ಟ ಆ ಸೊಕ್ಕಿನ ಹುಡುಗಿ ತಮಿಳಿನಲ್ಲಿ ಥೂಕರಿಸಿ ಬೈಯುತ್ತ ಆ ಹೆಂಗಸಿನ ಮೇಲೆ ಕುಸ್ತಿಗೆ ಹೊರಟಿತ್ತು....ಮುದುಕಿಯೊಬ್ಬಳು ಇಷ್ಟಗಲ ಕಲ್ಲಿನ ಮೇಲೆ ಕ್ಕೊಳಕು ಬಟ್ಟೆ ಕಸಕುತ್ತಿದ್ದಳು. ಸುತ್ತಲು ಎಂಜಲು ಮುಸುರೆ....'ಇನ್ನು ವಾಸಕ್ಕೆ ಮನೆ ಹುಡುಕುತ್ತಿದ್ದಾಗ ಮನೆ ಮಾಲೀಕನ ಧೋರಣೆ, 'ಮನೆ ಮನೆಗೂ ಒಂದು ಬಚ್ಚಲು ಯಾಕೆ?

ನಾಕು ನಾಕು ಮನೆಯಿಂದ ಒಂದೊಂದು ಬಚ್ಚಲು ಮಾಡಿವ್ನಿ. ಅವರೆಲ್ಲ ಏನೂ ದಿನಾ ತಾನಾ ಮಾಡೋರಲ್ಲ, ವಾರಕ್ಕೊಂದಪ ನೀರು ಕಾಸ್ಕೋತಾರೆ. ಸಲ್ಲಿ ಮಾತ್ರಾ ಒಂದೇ ತಾಯಿೊ ಇರೋದು. ಅದು ಸಾಕಾಗದೇತಾಯೀ....'

'ದೀಪಾ ? .. '

'ದೀಪ ನಾನು ಆಕಸೇ ಇಲ್ಲ ತಾಯಿ. ದಿನಬೆಳಗಾಗುತ್ಲೂ ನಲ್ಲಿ ಕಂದಾಯ, ದೀಪದ ಕಂದಾಯ, ಮನೆ ಕಂದಾಯ, ತಲೆಮೇಲೆ ತಂದು ಹಾಕ್ತಾನೇ ಇರ್ತಾರೆ. ಏನೋ ನಾಲಕ್ ಜನ ಬಡವರಿಗೆ ಅನ್ಕೂಲ ಆಗ್ಲೀಂತ ಮನೆ ಕಟ್ಟಿಸ್ದೆ ತಾಯಿ. ಈ ಸೂಳೆ ಮಗಂದು ಲೈಟಿನ ಎಚ್ಚಾಗ್ರಕ್ಕೆ ಏನದೆ ಹೇಳಿ ? ಅಗ್ಲು ಹನ್ನೆರಡು ಗಂಟೆ ಸಾಲ್ದಾ ನಮ್ ಕೆಲಸಕ್ಕೆ ?..."

ಮತ್ತೊಂದು ತುಣುಕು ಬೆಂಗಳೂರಿನ ಮನೆ ಬವಣೆಗೆ— 'ಮನೆ ಬಚ್ಚಲು ಮನೆಗಳ ಸಾಲಿನಲ್ಲಿ ಸೀಮೆಸುಣ್ಣದಲ್ಲಿ ಬರೆದಿತ್ತು. "ಇದು ನಮ್ಮ ಮನೆ ಬಚ್ಚಲು–" ಕೆಳಗೆ ಮೂರು ಜನ ಹುಡುಗರ ಸಹಿ ಇತ್ತು. ನಂಜುಂಡ, ಸುರೇಶ, ಪ್ರಹ್ಲಾದ. "ಇದು ಮೂರು ಮನೆಯವರಿಗೆ ಬಚ್ಚಲು ಮನೆ. ಆದಕ್ಕೇ ಮೂರೂ ಜನರೂ ಬರೆದಿದ್ದಾರೆ."– ವಠಾರದ ಬೇರೆ ಮನೆಯವರಿಗೆ ಅದೊಂದು ಎಚ್ಚರಿಕೆ. !

ಊಟ ಉಪಚಾರದ ವೈಖರಿ 'ಸದಾನಂದ'ದ ಮಲೆನಾಡಿನಲ್ಲಿ '.... ಮಲೆನಾಡಿನ ಧಾರಾಳ ಊಟ ಉಪಚಾರ, ಮದುವೆ, ಮುಂಜಿ, ಶ್ರೀಮಂತ, ಬಾಣಂತನ, ಇವುಗಳಲ್ಲಿ ಯಾವುದಾದರೂ ಪ್ರತಿತಿಂಗಳೂ ಇರುತ್ತಿತ್ತು....ಸಂತೆಗೆ ಹೋಗಿ ಅತ್ಯಗತ್ಯ ಸಾಮಾನು ಹೇರಿಕೊಂಡು ಬಂದರಾಯಿತು. ಮಿಕ್ಕದ್ದೆಲ್ಲಾ ಮನೆಯಲ್ಲೇ ಬೆಳೆಯುತ್ತೆ. ಹರಿಕಥೆದಾಸರು ಬಂದು ಠಿಕಾಣಿ ಹಾಕಿದರೆ ಅಡಿಕೆ ಕೊಯ್ಲು ಮುಗಿಯೋತನಕ ದಿನಾ ಹರಿಕಥೆ ಮಾಡಿ ಉಂಡು, ತಿಂದು ಹೊರುವಷ್ಟು ಬೆಲ್ಲ, ಅಕ್ಕಿ, ಬಾಳೆ, ದೊನ್ನೆ ಹೊತ್ತು ನಡೆಯುವರು. ಭಾಗವತದಾಟ ಕೂಡಿತೆಂದರೆ ಹತ್ತಿಪ್ಪತ್ತು ಹಳ್ಳಿ ಜನರು ಬಂದು ಜಮಾಯಿಸುವರು. ಬಂದ ಅತಿಥಿಗಳಿಗೆ, ಭಾಗವತದಾಟದ ಗುಂಪಿಗೆ ಎರಡು ನಾಲ್ಕು ದಿನ ಇವರ ಮನೆದೇ ಆಗಬೇಕು. ಅಕ್ಕಿ, ಬೆಲ್ಲ, ಹಾಲು, ಮೊಸರು, ತರಕಾರಿ ಸಂವೃದ್ಧಿ. ಹೆಂಗಸರು ಮಾಡಿ ಚಾಚಿದ್ದೇ ; ಬಂದವರು ಪಗಡಸ್ತಾಗಿ ಹೊಡೆದದ್ದೇ....

ಬೆಂಗಳೂರಿನ ಅದೇ ವಠಾರದ ಮನೇಲಿ ಊಟಕ್ಕೆ ಕುಳಿತಾಗ 'ನಾನು ಕುಳಿತ ಬಲಭಾಗದ ಗೋಡೆಗೆ ಸಿಕ್ಕಿಸಿದ್ದ ಒಂದು ಊಟದ ಚಾಪೆ ತೊಪ್ಪನೆ ಬಿದ್ದು ಆ

ಜಾಗದಲ್ಲಿದ್ದ ಒಂದು ತೂತಿನಿಂದ ಒಂದು ಸ್ಟೀಲಿನ ಸೌಟು ಹೊರಕ್ಕೆ ಬಂದಿತು-ಪಾಪ ನೆರೆಮನೆಯ ಸೌಟು ಸಾಲ !' ಈ ರೀತಿ ಪಟ್ಟಣ ಪರಿಸ್ಥಿತಿ ಅವರು ಬರೆದಾಗ ವಾಚಕರು ಹೇಳುತ್ತಾರೆ "ಕಹಿಯಾದಕಟುಸತ್ಯವನ್ನೇ ಓದುತ್ತಿದ್ದರೂ ಉದ್ದಕ್ಕೂ ನಗುವೇ ಎದ್ದು ಕುಣಿದಿದೆ !"

ನೂರೈವತ್ತು ವರ್ಷ ಹಿಂದಿನ 'ಫಣಿಯಮ್ಮ' ಅವರ ಮನೆತನದಲ್ಲಿದ್ದ ಜೀವಂತ ವ್ಯಕ್ತಿಯದ್ದೇ ದರ್ಶನ. ಹದಿನೆಂಟು, ಇಪ್ಪತ್ತು ಮಕ್ಕಳು ಹುಟ್ಟುತ್ತಿದ್ದ ಕಾಲ. ಗಳಿಗೆ-ಬಟ್ಟಲಲ್ಲಿ ವೇಳೆ ನಿರ್ಧರಿಸುತ್ತಿದ್ದ ಕಾಲ. 'ಹೆರಿಗೇ-ಕ್ವಾಣೆ'ಲಿ ಗೋಣಿಚೀಲ, ಕಂಬಳಿ, 'ಕಸ' ಹಾಕಲು ಮಡಿಕೆ, ವಿಳ್ಳೆದೆಲೆ-ಅಡಿಕೆ-ಕಸ್ತೂರಿ, ಬಾಣಂತಿ ಟೋಪಿ, ಮಗು ಮಲಗಿಸುವ ಮರ ಇತ್ಯಾದಿ ಇರುತ್ತಿದ್ದ ಕಾಲ. ಬೆಳಗಿನ ಜಾವದಿಂದಲೇ ಮನೆ ಮುದುಕಿಯರು ಪದ್ಯರೂಪದ ರಾಮಾಯಣ, ಮಹಾಭಾರತ, ಭಾಗವತ ಶ್ಲೋಕ ಗಳನ್ನು ಹೇಳುತ್ತಾ ಕೆಲಸ ಮಾಡುವಾಗ ಅದು ಬಾಯಿಪಾಠವಾಗಿ ಹೋಗುತ್ತಿತ್ತು.... ಅಡಿಕೆ ಬೇಯಿಸಿ, ಒಣಗಿಸುವಾಗ ಬೇಸರ ಕಳೆಯಲು 'ಪ್ರಸಂಗ' ಹೂಡುವರು. ನಂಜುಂಡನು ಒಂಭತ್ತು ವರ್ಷದ ಹೆಂಡತಿ ಫಣಿಯಮ್ಮನ ಮುಖ ಸರಿಯಾಗಿ ನೋಡಲೇ ಇಲ್ಲ. ನಲ್ವತ್ತು ಜನ ಪುರೋಹಿತರು. ಹದಿನೈದರ ನಂಜುಂಡ 'ಪ್ರಸ್ತಾಂದ್ರೆ ಯಂತದದು ? ಆಗ್ಲೂ ಎಂಟು ದಿನ ಹೋಮ ಮಾಡ್ಬೇಕಾ ? ಆಗ್ಲೂ ಕಚ್ಚೆ ಪಂಚೆ ಉಡ್ಬಕಾ ?'....ಎನ್ನುತ್ತಾನೆ.

ಫಣಿಯಮ್ಮನ ಜಡೆ ಬಂಗಾರಕ್ಕಾಗಿ ಸಂತೇಲಿ ಕಳ್ಳರು ಕೂದಲು ಕತ್ತರಿಸಿದಾಗ ಕೂದಲು ಬೆಳೆಯೋತನಕ ಅತ್ತೆ ಮನೆಗೆ ಅವಳು ಹೋಗಲೇ ಇಲ್ಲ. ಆ ಕೂದಲು ಬೆಳೆಯೋದರಲ್ಲಿ ನಂಜುಂಡ 'ನಾಗರಬಳ್ಳಿ' ಕಚ್ಚಿ ತೀರಿಕೊಂಡ. ಫಣಿಯಮ್ಮನ ಜಾತಕದ ಅಖಂಡ ಸೌಭಾಗ್ಯ, ಹದಿನಾರು ಗುಣಗಳು, ದೀರ್ಘ ಸೌಮಂಗಲ್ಯ, ಮಾಂಗಲ್ಯಕೂಟ, ಅಷ್ಟಪುತ್ರ ಸಂತಾನ ಎಲ್ಲಾ ನುಣ್ಣಗೆ ಅಳಿಸಿದ್ದಳು. ಯಥಾ ಪ್ರಕಾರ ಅವಳಿಗೆ ಅದೇ ಕತ್ತಲ ಕೋಣೆ ವಾಸ. ಯಾರಾದರೊಬ್ಬರು ಬಾಣಂತಿಯ ರಿರುತ್ತಿದ್ದರು. ಸರಿ, ಕಳ್ಳ ದನಿಯಲ್ಲಿ ಹಾಡುಹೇಳಿ ತೊಟ್ಟಿಲು ತೂಗುವುದು, ಬಾಣಂತಿ ತಲೆ ಕಾಸುವುದು, ಹೂವು ಕಟ್ಟುವುದು ಇತ್ಯಾದಿ ಕೋಣೆಯಲ್ಲೇ ಕೂತು ಮಾಡುವ ಕೆಲಸ ಅವಳ ಪಾಲಿಗಿರುತ್ತಿತ್ತು. ಅತ್ತೆ ಮನೆಯವರು ಇತ್ತ ತಿರುಗಿಯೂ ನೋಡ ಲಿಲ್ಲ. 'ಹುಡುಗಿ ಕಾಲ್ಗುಣ ಒಳ್ಳೇದಲ್ಲ, ಮದುವೆಯಾಗಿ ಎರಡು ತಿಂಗಳೊಳಗೆ ಗಂಡನನ್ನು ನುಂಗಿತು !'

ಹದಿಮೂರರ ಫಣಿಯಮ್ಮ ಮೈನೆರೆತಾಗ ಹಲಸಿನ ಮರದ ಕೆಳಗೆ ಕೂರಿಸಿ ಸ್ವಲ್ಪ ಉದ್ದವಾಗಿ ಬೆಳೆದಿದ್ದ ಕೂದಲನ್ನು ದಯೆ-ದಾಕ್ಷಿಣ್ಯವಿಲ್ಲದೆ ಕರಕ್ಕನೆ ಕತ್ತರಿಸಿ

ನುಣ್ಣಗೆ ಬೋಳಿಸಿದರು. ಕರ್ಮಯೋಗಿಯಂತಿದ್ದ ಫಣಿಯಮ್ಮನನ್ನು ಈ ಕೊಳಚೆ ಪ್ರಪಂಚದಿಂದ ತಪಸ್ವೀ ಜೀವನಕ್ಕೆ ಕೊಂಡೊಯ್ದಿದ್ದು ಮೂರು ಪ್ರಸಂಗಗಳು. ಒಂದು ಎಳ್ಳಮಾಸ್ಸೆ ದಿನ ಜಡೆ ಕತ್ತರಿಸಲ್ಪಟ್ಟಿದ್ದು, ಎರಡನೆಯದು ತಾನು ಮೈನೆರೆದ ನಾಲ್ಕನೇ ದಿನವೇ ತಲೆ ಬೋಳಾದದ್ದು, ಮೂರನೆಯದು ಗಂಡ ಬಿಟ್ಟ ಸುಬ್ಬಿ-ಪುಟ್ಟಾ ಜೋಯಿಸರ ಜೀವನ ಪ್ರಸಂಗ. ವಯಸ್ಸು ಹಣ್ಣಾದಂತೆಲ್ಲಾ ಬರುಬರುತ್ತಾ ಒಪ್ಪತ್ತೂಟ, ವಾಲೆಗರಿ ಮೇಲೆ ಶಯನ. ಇಷ್ಟಾದರೂ ಫಣಿಯಮ್ಮನ ಪರಿಪಕ್ವತೆಯ ಸತ್ವ ಪರೀಕ್ಷೆ ನಡೆಸಬೇಕೆಂದು ಭಗವದಿಚ್ಛೆ ಇತ್ತೇನೊ.ಒಂದುಬಾರಿ ಅದೂ ನಡೆಯಿತು. ಹಸಲರ ಬೈರನ ಮಗಳು ಸಿಂಕಿಗೆ ಬ್ಯಾನೆ ಸಂಕಟ. ಬೂಬಿ, ಗೌಡಿತ್ತಿಯರು ಮಗುವನ್ನು ಎಳೆದು ಹಾಕಲು ಯತ್ನಿಸಿ ಅದರಲ್ಲೇ ಸೋತಿದ್ದರು. ಅವರ ಕೈ ದಪ್ಪ, ಎಲ್ಲರೂ ಹುಡುಗಿ ಆಸೆ ಕೈಬಿಟ್ಟು ಅಳುತ್ತಾ ಕೂತರು. ಮನೆಯವರ ಅಸಮಾಧಾನ ಸಹಿಸಿ ಫಣಿಯಮ್ಮ ಹಸಲರ ಕೇರಿಗೆ ಹೋಗಿ ಹೆರಿಗೆ ಮಾಡಿದಳು. ಫಣಿಯಮ್ಮನ ಮೆತ್ತಗಿನ ಪುಟ್ಟ ಕೈ ಸಿಂಕಿ ಗರ್ಭದೊಳಗೆ ನುಸುಳಿ ಮತ್ತೆರಡು ನಿಮಿಷದಲ್ಲಿ ಮಗುವಿನ ಸಮೇತ ಹೊರಬಂದಿತು. ಹಿಂದೆಯೇ ರಕ್ತ ಪ್ರವಾಹ. ಫಣಿಯಮ್ಮನ ಮೈ ಜುಂ ಎಂದಿತು. 'ಭಗವಂತ ಇದೆಂತಹ ಹೊಲಸು ನಿನ್ನ ಸೃಷ್ಟಿ. ನನಗೆ ಮುಂಡೆತನವಾದರೂ ಅಡ್ಡಿ ಇಲ್ಲ. ಈ ಹೊಲಸಿನಿಂದ ಪಾರು ಮಾಡಿದೆಯಲ್ಲ!' ಮಾನವೀಯತೆಯಿಂದ ಹಸಲರ ಹುಡುಗಿ ಹೆರಿಗೆ ಮಾಡಿ ಮುಗಿಸಿದರೂ, ಸಮಾಜದ ಭಯ '...ನಾನು ಹೆರಿಗೆ ಮಾಡೆ ಅಂತ ಬಾಯಿ ಬಿಡಕೂಡ್ದು ತಿಳೀತಾ. ಹುಶಾರು. ನಾನು ಹೋಗೋ ಹೊತ್ಗೆ ಸಿಂಕಿ ಹಡೆದಿತ್ತು ಅಂತ ಹೇಳ್ತೀನಿ!' ಎಂದು ಎಚ್ಚರಿಸಿದರು. ಅದೇ ರೀತಿ ಅನುಕಂಪ ದಿಂದ ಮನೆತನದ ದಾಕ್ಷಾಯಿಣಿ ಹದಿನಾರು ವರ್ಷಕ್ಕೆ ವಿಧವೆಯಾದಾಗ ಮಡಿ ಹಿಡಿಸಲು ಈ ಅಜ್ಜಿಯೇ ಅಡ್ಡ ಬಂದಿತು. 'ಓಹೊ! ಫಣಿಯಮ್ನೋರೇ ನೀವು ಭಾಳ ಭಾಳ ನಾಗರೀಕತೆ ಕಲ್ತುಬಿಟ್ರಿ ಈಚೀಚೆಗೆ!....' ಎಂದು ನಿಂದೆಗೆ ಒಳಗಾದರೂ ಸಹಿಸಿಕೊಂಡರು. ಜಾತಕದಲ್ಲೂ ನಂಬಿಕೆ ಇರಲಿಲ್ಲ 'ನಮ್ಮಪ್ಪ ನನ್ನ ಜಾತಕ ನೋಡಿ ಹೇಳಿದ್ದೇ ಹೇಳಿದ್ದು ಅಖಂಡ ಮುತ್ತೈದೆತನ ಅಂತ. ನೀವೆಲ್ಲಾ ಕಾಣ್ತಾ ಇದೀರಲ್ಲ ನನ್ನ ಬಾಳ್ನ. ಹುಡುಗ ಆರೋಗ್ಯವಂತ, ಲಕ್ಷಣವಾಗಿ ಇದ್ರಾತು ಸುಮ್ಮನೆ ಲಗ್ನ ಮಾಡಿ....'

'ಫಣಿಯಮ್ಮ'ನಲ್ಲಿ ಇಂದಿರಾ ಅವರು ಬಳಸುವ ಭಾಷೆಯೇ ಆ ಪ್ರಾಂತ್ಯಕ್ಕೆ, ಆ ಕಾಲಕ್ಕೆ ಒಗ್ಗುವಂತದ್ದು, 'ಮಾತನಾಡಬಕೂಂತ' 'ಬಿಡಪಲ್ತು' 'ಯಂತದ ಇದು' 'ಯಂಟಣ್ಣ ಶಿರೋದಯ ಆತೂ' 'ಗ್ವಾಡೆ ಬಿಸ್ಲು ವ್ಯಾಲಕ್ಬಂತು. ಎರಡು ತಾಸು ಕಳೆದೀತು. ಇನ್ನಾದ್ರೂ ಬಳ್ಳಿ ಹಾಕ್ರೆ'...ಈ ರೀತಿ.

ಇದೇ ರೀತಿ ವೇಷಭೂಷಣಗಳ ರೀತಿ'....ಗಂಡಸರು ಪೇಟೆ ಊರಿಗೆ ಹೋದಾಗ ಸಣ್ಣ ಮಕ್ಕಳ ಪರಕಾರ ಹೊಲಿಸಿ ತರುವುದು. ಶತಾಯುಗತಾಯ ಎಂಟು ವರ್ಷಕ್ಕೆ ಹದಿನೆಂಟು ಮೊಳದ ಕೇರನಾಡು ಕಿರಿಗೆ ಉಡಿಸುತ್ತಿದ್ದರು. ದಿಂಬಿನ ಗಾತ್ರದ ಬಾಳೆಕಾಯಿ ಹಾಕಿ ಸೀರೆಯುಟ್ಟು, ಸೊಂಟಕ್ಕೆ ಕಣಿಕೆಯ ಬೆಳ್ಳಿ ಡಾಬು ಹಾಕಿಬಿಟ್ಟರೆ ಮುಗಿಯಿತು. ತರಕಾರಿ ಹೆಚ್ಚುವ ಈಳಿಗೆಮಣೆಯಲ್ಲಿ ಒಂಭತ್ತು ತುಂಡಿನ ರವಿಕೆಯನ್ನು ಮನೆಯ ಮುದುಕಿಯರು ಕತ್ತರಿಸಿಕೊಟ್ಟರು. ಅದನ್ನು ಹುಡುಗಿಯರು ತಾವು ಬಂದ ಹಾಗೆ ಹೊಲಿದುಕೊಳ್ಳಬೇಕು. ಅಂದ–ಚೆಂದ ಅಳತೆ ಕೇಳುವವರು ಯಾರು ?...'

ಇಂದಿರಾ ಅವರ ಪಟ್ಟಣದ ಹುಡುಗಿಯರು'...ಮುಖದ ತುಂಬಾ ಪೌಡರ್, ಕವಲು ಜಡೆ, ನೈಲಾನ್ ಸೀರೆ, ಕಣ್ಣಿಗೆ ಎಳೆದ ಕಪ್ಪಿನ ಸೋಗೆ ರಾಡಾಗಿ ಕಾಣಿಸಿತು.... ಸಿನಿಮಾಗೆ ಹೊರಟ ಆ ಹುಡುಗಿ ಕೈಲಿ ರಿಷ್ಟ್‌ವಾಚ್. ಹೂಂ...ಹೂಂ....ವಾಚು ಎಲ್ಲಾ ಹುಡುಗರ ಕೈಲೂ ಒಂದೊಂದಿದೆ. ಅದ್ರೆ ಒಬ್ರದ್ದೂ ನಡೆಯೋಲ್ಲ....ಒಳಗೆ ಮಿಷನ್ನೇ ಇಲ್ಲ!.... ಅವ್ಯಾತಕ್ಕೆ ಅಂದ್ರೆ ಷೋಕಿಗೆ!....ಭೂಷಣಕ್ಕೆ ಇರಲೇಬೇಕಂತೆ ಅದು...."

/

ಚಿಕ್ಕಂದಿನಲ್ಲಿ ಮಲೆನಾಡಿನಲ್ಲಿ ಬೆಳೆದ ಇಂದಿರಾ ಆಗಾಗ್ಗೆ ಪಟ್ಟಣಕ್ಕೆ ಎಂದರೆ ಮೈಸೂರಿಗೆ ಬಂದು ಚಿಕ್ಕಮ್ಮನ ಮನೆಯಲ್ಲಿ ತಂಗುವುದಿತ್ತು. ಆಗ ಒಮ್ಮೆ ಒಬ್ಬಳು ವೇಶ್ಯಾ ಹುಡುಗಿ ಆತ್ಮಹತ್ಯೆ ಮಾಡಿಕೊಂಡದ್ದು ಆಗಿತ್ತು. ಆ ಪ್ರಕರಣ 'ಗೆಜ್ಜೆಪೂಜೆ'ಗೆ ಪ್ರೇರಣೆ. 'ಗೆಜ್ಜೆಪೂಜೆ'ಯ ಚಂದ್ರಾಗೆ ಮದುವೆ ಹಂಬಲ ತೀವ್ರವಾಗಿರುತ್ತೆ. ಆದರೆ ಅವಳ ಪರಿಸ್ಥಿತಿ 'ತಾಯಿ ಬ್ರಾಹ್ಮಣಳು. ಹೆಸರು ಸೂಳೆ. ತಂದೆ ಬ್ರಾಹ್ಮಣ. ಹೇಳಬಾರದು. ಹೇಳಿದರೆ ಅವರ ಹೆಸರಿಗೆ ಮಸಿ ಬಳಿದಂತೆ !....

ಕಸುಬಿಗೆ ಚಂದ್ರಾ ಬಾರದಿದ್ದಾಗ ಸಂಗವ್ವ ಸಿಟ್ಟಾಗುತ್ತಾಳೆ'ಈ ರೋಷದ ರಭಸದಲ್ಲೇ ಹಿಟ್ಟು ಬೊಟ್ಟಾಯಿತು. ಬೊಟ್ಟು ಹಪ್ಪಳವಾಯಿತು. ಹಪ್ಪಳ ಸುಟ್ಟು ಕೊಡುವಾಗ ಮುದುಕಿ ಗಿಲೀಟು ಮಾಡಿತು. 'ಯಾಕವ್ವಾ ಚಂದ್ರಿ ಮಾತೇ ಆಡವಲಿ? ಮೈ ಚಂದಾಕಿಲ್ಲವ ?....' ಮೊಮ್ಮಗಳು ಸಿಡುಕಿದಳು' ಚಂದಾಗಿರ್ದ್ರೆ ನಂಗೇನು ಗೂದೆ–ಅಮ್ಮಂಗೆ ಇಬ್ರಾದ್ರೆ ನಂಗೆ ನಾಲಕ್ಜನ ಸಾಹುಕಾರ್ನು ಕರಕೊಂಬಾ ಅಜ್ಜೀ, ಸುಧಾರಿಸ್ತೀನಿ...' ಮುದುಕಿ ಬೆಚ್ಚಿತು. ....ಎದುರಿನ ಕಿಟಕಿಯಲ್ಲಿ ಸೋಮು! ಮನಸ್ಸು ಹೂವಾಯಿತು....ಆದರೇನು ಸೋಮುವಿಗೆ 'ತನ್ನದಲ್ಲದ ಆದರ್ಶ ಅವನನ್ನು ಕಾಡಿತು, ಅವಳ ಮೇಲೆ ಒಲವಿದ್ದೂ ಬೇರೆ ಮದುವೆಗೆ ಒಪ್ಪಿದ. ಆ ಹುಡುಗಿ ಬೇರೆ ಯಾರೂ ಅಲ್ಲ. ಅರ್ಧ ತಂಗಿ. ತಂದೆಗೆ ಧರ್ಮಪತ್ನಿಯಲ್ಲಿ ಹುಟ್ಟಿದ ಮಗಳು. ಆ ತಂದೆ

ಚಂದ್ರಳಿಗೆ ವಜ್ರದುಂಗುರ ಕೊಟ್ಟು ವಾತ್ಸಲ್ಯ ತೋರಿದರೂ, ಅದೇ ಬೀದಿಗೆ ಬೀಗರ ಮನೆಗೆ ಮದುವೆಯಾದ ಮಗಳನ್ನು ನೋಡಲು ಬಂದರೂ ಈ ಮಗಳನ್ನು ನೋಡಲುಬಾರದಾದ–ಸಮಾಜದ ಭೀತಿ.

ಚಂದ್ರಾಳ 'ಗೆಜ್ಜೆಪೂಜೆ' ನಿಶ್ಚಯವಾಯಿತು. ಸಾಲಂಕೃತಳಾದಾಗ ತಾಯಿ ಅಪರ್ಣಾಗೆ ದಿಗಿಲು. ಚಂದ್ರಾ ಗೆಜ್ಜೆಪೂಜೆಯಾದಮೇಲೆ ಫಲ ತಾಂಬೂಲ ಮುತ್ತೈದೆಗೆ ಕೊಡಲು ಸೋಮು ಮನೆಗೆ ಹೋಗುತ್ತಾಳೆ. ಹೆತ್ತ ತಂದೆ ಅಲ್ಲೇ ಇದ್ದರು. ನಮಿಸಿದಳು. ಸೋಮು ಬಂದು ಭ್ರಮಿಷ್ಟನಂತೆ ಸರಸರ ಮಹಡಿ ಏರಿದ. ಸೋಮು. ವಿನ ಹೆಂಡತಿಯಿಂದ ಮಡಿಲು ತುಂಬಿಸಿಕೊಂಡಳು. ಮಹಾರಾಣಿಯಂತೆ ಸೀರೆ ನೆರಿಗೆ ಚಿಮ್ಮುತ್ತಾ, ಗೆಜ್ಜೆ ಗಿಲ್ ಗಿಲ್ ನಾದದೊಂದಿಗೆ ಅವಳು ಹಿಂದಿರುಗಿದಳು. ಮನೆಯಲ್ಲಿ ಸಾಹುಕಾರನೊಂದಿಗೆ ಬೆಳ್ಳಿತಟ್ಟೆಯಲ್ಲಿ ಊಟ ಮಾಡಿ ಸಜ್ಜೆ ಮನೆಗೆ ನಡೆದಳು....ಅವಳ ತಲೆ ತಿರುಗಿತು. ಹೊಟ್ಟೆಯಲ್ಲಿ ಬುಗ್ಗನೆ ಉರಿಯಿತು. ಹೇಗೋ ತೂರಾಡುತ್ತಾ ಕುರ್ಚೀಲಿ ಕುಳಿತಳು. ಬಹಳ ಶ್ರಮದಿಂದ ಕಣ್ಣು ತೆರೆದು ಕಿಟಕಿಯನ್ನು ನೋಡಿದಳು. ನಂತರ ರತ್ನಗಂಬಳಿ ಮೇಲೆ ಬಿದ್ದು ಹೊರಳಾಡಿದಳು. ಮುಖವೆಲ್ಲ ನೀಲಿ. ಡಾಕ್ಟರು ಬಂದು ನೋಡಿದಾಗ ವಿಷಪ್ರಾಶನವಾದದ್ದು ತಿಳಿಯಿತು. ತಂದೆ ಇತ್ತ ವಜ್ರದುಂಗುರ ಅವಳ ಪಾಷಾಣ ಬದುಕಿಗೆ ಅಮೃತವಾಗಿತ್ತು!

ಸೋಮು ಬಾಣದಂತೆ ಓಡಿದ. ಚಂದ್ರಳ ಹೆತ್ತ ತಂದೆಯೂ ಅಳಿಯನ ಹಿಂದೆ ಚಂದ್ರಳ ಮನೆಗೋಡಿದರು. ಅವಳು ಕೊನೆಯ ಪತ್ರ ಬರೆದಿದ್ದಳು. ಮಾವ, ಅಳಿಯ ಇಬ್ಬರೂ ಚೀಟಿ ಓದಿದರು. 'ಅಪ್ಪ ನನಗೆ ಅಮೃತವಿತ್ತು ನನ್ನ ಬದುಕನ್ನು ಪಾವನ ಮಾಡಿದಿರಿ, ನಾನು ನಿಮಗೆ ಚಿರಋಣಿ'–ಮತ್ತೊಂದು ಚೀಟಿ ಸೋಮುವಿಗೆ 'ನನ್ನ ಏಳು ಜನ್ಮಕ್ಕೂ ನಾನು ನಿನ್ನವಳು'

ಇಂದಿರಾ ಅವರ ಮನೋಧರ್ಮ ಅನುಕಂಪ. 'ತುಂಗ-ಭದ್ರ'ದಲ್ಲಿ ಕುರುಡಿಯರು,ಸದಾನಂದದಲ್ಲಿ ಕುಂಟಿ ಮತ್ತು ವಿಧವೆ ವಿವಾಹ ಇವುಗಳನ್ನು ನೆರವೇರಿಸಿ ಬಿಡುತ್ತಾರೆ. ಈ ಮದುವೆಗಳಿಗೆ ಕಾರಣ ಪ್ರೇಮವೂ ಅಲ್ಲ. ಕಾಮವೂ ಅಲ್ಲ. ಹಿರಿಯರ ಒತ್ತಾಯವೂ ಅಲ್ಲ. ಗಂಡು ಹುಡುಗರೇ ಒಂದು ಒಪ್ಪಂದಕ್ಕೆ ಬಂದಂತೆ ಈ ಅಸಹಾಯಕ ಹೆಣ್ಣುಗಳನ್ನು ಮದುವೆಯಾಗಿ ಬಿಡುತ್ತಾರೆ. ಒಂದು ರೀತಿ ಉನ್ನತ ಆದರ್ಶ ತಮ್ಮ ಕತೆಗಳಲ್ಲಿ ಇಂದಿರಾ ಅವರು ತೋರುತ್ತಾರೆ. 'ಗೆಜ್ಜೆಪೂಜೆ'ಯಲ್ಲಿ ಮಾತ್ರ ವೇಶ್ಯಾವಿವಾಹ ಮಾಡಿ ಮುಗಿಸುವುದಿಲ್ಲ.

ಅವರ ಕಾದಂಬರಿಗಳು ಸಿನಿಮಾಗೆಂದೇ ಬರೆದಂತೆ ಕಂಡರೂ ಅವರ 'ಗೆಜ್ಜೆ ಪೂಜೆ' 'ಫಣಿಯಮ್ಮ' ಬರೆದಾಗ ಅವು ಸಿನಿಮಾ ಆಗಬಹುದೆಂದು ಆಲೋಚಿಸಿ ಕೂಡ ಇರಲಾರರು. ನಂತರ ಆದ ಜನಪ್ರಿಯತೆ ಫಲವಾಗಿ ಅವರಿಗೆ ಬರೆಯಲು ಬಹಳ ಒತ್ತಡ ಹೊರಗಿಂದ ಬಂದು ಬಿಟ್ಟಿತು. ಅದು ಅವರು ಕೊಡಬೇಕಾಗಿ ಬಂದ 'ಬೆಲೆ'! ಹಾಗೆ ಬಹಳಷ್ಟು ಕಾದಂಬರಿಗಳನ್ನು ಬರೆದು ಹಾಕಬೇಕಾಯಿತು. ಮೂಲತಃ ಎಂ. ಕೆ. ಇಂದಿರಾ ಅವರ ಸಾಹಿತ್ಯ ಬ್ರಾಂಟೆ ಸೋದರಿಯರಂತೆ ಶುದ್ಧ ಅನುಭವಗಳ ಸಾರ. ಮನೆ ನಾಲ್ಕು ಗೋಡೆ ಒಳಗಿದ್ದೇ, ಸಂಕೀರ್ಣ ಅನುಭವಗಳನ್ನು ಆಳವಾಗಿ ವರ್ಣಿಸಬಲ್ಲ ಕಲೆ ಸಿದ್ಧಿಸಿದೆ. ಯಾವ ಅನುಕರಣೆಯೂ ಇಲ್ಲದೆ ತಮ್ಮ ಸ್ವಂತಿಕೆಯಲ್ಲಿ ಮಲೆನಾಡ ವನಸಿರಿ ಬೆಳೆದಂತೆ ಬೆಳೆದ ಕೃತಿಗಳು! ನಮ್ಮೆಲ್ಲರಿಗೂ ಅಚ್ಚುಮೆಚ್ಚಾಗುವ ಅನೇಕ ಕೃತಿಗಳು ಅವರದ್ದು.

"ಜಕಣಾಚಾರಿ ತುಂಬ ಕಷ್ಟಪಟ್ ಈ ದೇವಸ್ಥಾನ ಕಟ್ಟಿದ್ದಾನೆ. ಅದು ಎಲ್ಲಾರ‍್ಗ ಗೊತ್ತೇ ಇದೆಯಪ್ಪ- ಆದ್ರೆ ಆ ಗೊಂಬೆಗಳು ಯಲ್ಲ ಒಂದೇ ಥರ. ಒಂದೇ ಥರ ಮೂತಿ ಮೂಗು! ಅಷ್ಟ್ ದಪ್ಪ ಎದೆ, ಅಷ್ಟು ಸಣ್ಣ ಸೊಂಟ ನಿಜವಾಗ್ಲೂ ಯಾರಿಗಾದ್ರೂ ಇರುತ್ತೇನೆ? ಆಹಾ! ಆ ಮೋಹಿನೀನೋ! ನಮ್ಮೂರ ಮಾಲೇರ ಸಣ್ಣಿ ಇದ್ದಾಗೇ ಇದೆ!"....

(ಸದಾನಂದ ಪುಟ–186)

ಎಂ. ಕೆ. ಇಂದಿರಾರವರ ಸೃಜನೇತರ ಕೃತಿಗಳ ಒಂದು ನೋಟ

○

○

○ ಶಾಂತಾ ನಾಗರಾಜ್

ಲಲಿತ ಪ್ರಬಂಧಗಳೆಂದರೇನು ಎನ್ನುವ ಬಗ್ಗೆ ಚರ್ಚಿಸುತ್ತಾ ಕನ್ನಡದ ಶ್ರೇಷ್ಠ ಪ್ರಬಂಧಕಾರರಲ್ಲಿ ಒಬ್ಬರಾದ ಶ್ರೀ ಎ. ಎನ್. ಮೂರ್ತಿ ರಾಯರು—"ಲಲಿತ ಪ್ರಬಂಧ ಒಂದು ಆತ್ಮೀಯ ಬಂಧ. ಲಗಾಮು ಗಳನ್ನು ಪೂರ್ತಿಯಾಗಿ ಕೈಯಿಂದ ಬಿಡದೆ, ಆದರೆ ಸಡಿಲವಾಗಿ ಹಿಡಿದು, ಮನಸ್ಸನ್ನು ಹರಿಯಬಿಟ್ಟು ಆತ್ಮೀಯನೊಬ್ಬನೊಡನೆ ಆಡಿದ ಮಾತಿ ನಂತಿರುತ್ತದೆ. ಭಾವಗೀತೆ ಹೊರಡುವುದೂ ಸಹ ಸಂಪೂರ್ಣವಾಗಿ ಯಲ್ಲದಿದ್ದರೂ ಬಹುಮಟ್ಟಿಗೆ ಇಂಥ ಮನೋಧರ್ಮದಿಂದಲೇ"— ಎನ್ನುತ್ತಾರೆ. ಅಂದರೆ ಕಥೆ, ಕಾದಂಬರಿಯಲ್ಲಿ ತೊಡಗಿಕೊಳ್ಳುವಾಗ ಲೇಖಕ ಕತೆಯ ಹಂದರಕ್ಕೆ, ಪಾತ್ರಗಳ ಸ್ವಭಾವಕ್ಕೆ ಬದ್ಧನಾಗಿ ಚೌಕಟ್ಟಿ ನೊಳಗೇ ಉಳಿದುಕೊಳ್ಳಬೇಕಾಗುತ್ತದೆ, ಲಲಿತ ಪ್ರಬಂಧಗಳು ಇಂಥ ಸೀಮಿತ ಚೌಕಟ್ಟಿಲ್ಲದ ವಿಸ್ತಾರದ ಹರಹುಳ್ಳದ್ದು. ಕತೆ ಕಾದಂಬರಿ ಗಳಲ್ಲಿ ಸಾಕಷ್ಟು ಜನಪ್ರಿಯರಾದ ಸಾಹಿತಿಗಳೂ ಆಗೊಮ್ಮೆ ಈಗೊಮ್ಮೆ ಲಲಿತ ಪ್ರಬಂಧವನ್ನು ಅರಸಿಕೊಂಡು ಹೋಗುವುದು ಈ ವಿಸ್ತಾರದ ಬಯಕೆಯಿಂದಲೇ. ಇಂಥ ಸಾಹಿತಿಗಳ ಸಾಲಿಗೆ ಎಂ. ಕೆ. ಇಂದಿರಾ ರವರೂ ಸೇರಿದ್ದಾರೆ.

ಕನ್ನಡ ಸಾರಸ್ವತ ಲೋಕದಲ್ಲಿ ಎಂ.ಕೆ. ಇಂದಿರಾ ಕಾದಂಬರಿಕಾರ್ತಿಯಾಗಿ ಜನಜನಿತವಾಗಿದ್ದಾರೆ. ಮಲೆನಾಡಿನ ಪರಿಸರ, ಅಲ್ಲಿಯ ಜನಜೀವನ, ನಡೆ-ನುಡಿಯ ಬಗ್ಗೆ ಒಂದೊಂದು ಸಣ್ಣ ವಿಚಾರಗಳನ್ನೂ ಒಂದೊಂದು ಕಾದಂಬರಿಯನ್ನಾಗಿಸುವುದು ಇಂದಿರಾರವರಿಗೆ ನೀರು ಕುಡಿದಷ್ಟು

ಸಲೀಸು. ಇಷ್ಟೆಲ್ಲ ವಿಚಾರಗಳನ್ನು ತಮ್ಮ ಕಾದಂಬರಿಗಳಲ್ಲಿ ಹೇಳಿದ್ದರೂ, ಅದರಾಚೆಯ ಅನೇಕ ಸಂಗತಿಗಳನ್ನು ಓದುಗರೊಂದಿಗೆ ಹಂಚಿಕೊಳ್ಳಬೇಕಾದ ಅನಿವಾರ್ಯತೆ ಒಂದಪ್ಪ ರಿಂದ ಪ್ರಬಂಧ ಪ್ರಕಾರಕ್ಕೆ ಪ್ರವೇಶಿಸುತ್ತಾರೆ.

ಇಂದಿರಾರವರ ಸೃಜನೇತರ ಕೃತಿಗಳು ಐದು. 1) ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್ ಮತ್ತು 2) ಆತ್ಮಸಖಿ (ಜೀವನ ಚಿತ್ರಗಳು) 3) ಚಿತ್ರ-ಭಾರತ 4) ಸಂದರ್ಶನ 5) ಅನುಭವ ಕುಂಜ(ಪ್ರವಾಸ ಸಾಹಿತ್ಯ). ಮೊದಲ ನಾಲ್ಕು ಪುಸ್ತಕಗಳು ದೊರೆತು, ಕೊನೆಯ ಪುಸ್ತಕ 'ಅನುಭವ ಕುಂಜ' ಅದರ ಪ್ರಕಾಶಕರಾದ 'ಹೇಮಂತ ಸಾಹಿತ್ಯ'ದಲ್ಲೇ ಲಭ್ಯವಾಗದ ಕಾರಣ ಈ ನಾಲ್ಕು ಕೃತಿಗೆ ಸಂಬಂಧ ಪಟ್ಟಂತೆ ಈ ಲೇಖನವನ್ನು ಸೀಮಿತಗೊಳಿಸಬೇಕಾಗಿದೆ.

ಪುಟ್ಟಣ್ಣ ಕಣಗಾಲ್‌ರ ಬಗ್ಗೆ ಬರೆದ ಕೃತಿ 'ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್' ಇದನ್ನು ಪೂರ್ಣಮಟ್ಟದ ಜೀವನ ಚರಿತ್ರೆ ಎನ್ನಲು ಹಲವು 'ಅಡ್ಡಿ'ಗಳು ಎದುರಾಗು ತ್ತವೆ. ಕಾರಣ ಒಬ್ಬ ವ್ಯಕ್ತಿಯ ಜೀವನ ಚರಿತ್ರೆ ಬರೆಯಬೇಕಾದರೆ ತಕ್ಕ ಪೂರ್ವ ಸಿದ್ಧತೆ ತೀರಾ ಅಗತ್ಯ. ಆ ವ್ಯಕ್ತಿಯ ಹುಟ್ಟು, ಬೆಳವಣಿಗೆ, ಬದುಕು, ಹವ್ಯಾಸ, ಎಲ್ಲಕ್ಕಿಂತ ಹೆಚ್ಚಾಗಿ ಜೀವನದೃಷ್ಟಿ-ಇವುಗಳ ಬಗ್ಗೆ ಸರಿಯಾದ ಮಾಹಿತಿ ಇಲ್ಲದೇ ಕೇವಲ ಪರಿಚಯದ ಮಾತ್ರದಿಂದ, ಹಲವಾರು ಬಾರಿ ಆಡಿದ ಮಾತುಗಳ ಆಧಾರದ ಮೇಲೆ ವ್ಯಕ್ತಿಯ ಬಗ್ಗೆ ಬರೆಯುವುದು ಸಾಧ್ಯವೂ ಅಲ್ಲ ಸಾಧುವೂ ಅಲ್ಲ. ಹಲವಾರು ವರ್ಷಗಳ ಪರಿಚಯದ ಸಹಜೀವನವಿದ್ದಾಗಲೋ, ಸಾಹಿತ್ಯಕ ಸಂದರ್ಭಗಳ ಒಡನಾಟ ವಿದ್ದಾಗಲೋ ಜೀವನ ಚರಿತ್ರೆಗಳನ್ನು ಬರೆಯುವುದು ಸುಲಭವೇನೋ ಅಥವಾ ಬರೆಯಬೇಕಾಗಿರುವ ವ್ಯಕ್ತಿಯ ಬಗ್ಗೆ ಸಂಶೋಧನೆ–ಅಧ್ಯಯನ ನಡೆಸಿ, ನಿರ್ದಿಷ್ಟ ಕೃತಿ ರಚಿಸಬೇಕಾಗುತ್ತದೆ. ಇದಾವ ಸಿದ್ಧತೆಯೇ ಇಲ್ಲದೆ ಬರೆಯುವುದು ಅರೆ-ಬರೆ ಸುದ್ದಿಯ ಸಂಗ್ರಹವಾಗುತ್ತದೆ ಅಷ್ಟೆ.

ಇಂದಿರಾರವರ ಕೈಯಲ್ಲಿ ಕಾದಂಬರಿಗಳ ಪಾತ್ರಗಳು ಸಹಜವಾಗಿ ಉಸಿರಾಡಿ ನಡೆದಾಡುವಂತೆ ಪ್ರಬಂಧದ ವಿಷಯಗಳು ಮುನ್ನಡೆಯುವುದಿಲ್ಲ. ಕಾದಂಬರಿಯ ಸಿದ್ಧತೆ, ಅಚ್ಚುಕಟ್ಟುತನಗಳು ಇಲ್ಲಿ ಮೈಗೂಡುವುದಿಲ್ಲ. "ಹರಟೆ ದ್ವಿಮುಖವಾಗಿದ್ದರೆ (ಅಂದರೆ ಓದುಗನಿಗೂ ಬುದ್ಧಿ ಇದೆ ಎಂದು ಗ್ರಹಿಸಿ ಬರೆದರೆ) ಅದು 'ಹರಟೆ'ಯಾಗು ತ್ತದೆ. ಇಲ್ಲದೆ ತಮಗೆ ತಿಳಿದದ್ದು ಮತ್ತಾರಿಗೂ ತಿಳಿದಿಲ್ಲ ಎಂದು ಭ್ರಮಿಸಿ, ಅಂದು ಕೊಂಡಿದ್ದನ್ನೆಲ್ಲಾ ಓದುಗನ ಪರಿವೆಯೇ ಇಲ್ಲದೆ ಕಕ್ಕುತ್ತಾ ಹೋದರೆ ಅದು ಭೈರಿಗೆ ಯಾಗುತ್ತದೆ" ಎನ್ನುತ್ತಾರೆ ಎ. ಎನ್. ಮೂರ್ತಿರಾಯರು ತಮ್ಮ 'ಹರಟೆ ಮತ್ತು

ಪ್ರಬಂಧ, ಲೇಖನದಲ್ಲಿ. 'ಪುಟ್ಟಣ್ಣ ಕಣಗಾಲ್' ಹೀಗೆ ಅಲ್ಲಲ್ಲಿ 'ಭೈರಿಗೆ'ಯಾಗುತ್ತಾ ಹೋಗುತ್ತದೆ.

ಪುಟ್ಟಣ್ಣ ಮತ್ತು ಇಂದಿರಾರವರ ಪರಿಚಯ ಮಾತುಕತೆ ಸಂದರ್ಭವನ್ನನುಸರಿಸಿ ಹಲವಾರು ಬಾರಿ ಆಗಿದೆ. ಇಂದಿರಾರವರ 'ಗೆಜ್ಜೆಪೂಜೆ'ಯನ್ನು ಬೆಳ್ಳಿತೆರೆಗೆ ತಂದವರು ಪುಟ್ಟಣ್ಣನವರೇ. ಕತೆಯ ಹಕ್ಕಿನ ಬಗ್ಗೆ ಒಪ್ಪಂದ ಮಾಡಿಕೊಂಡದ್ದು, ಒಮ್ಮೆ ಶೂಟಿಂಗ್ ನೋಡಿಬಂದದ್ದು ಇಂಥ ಒಂದೆರಡು ಘಟನೆಗಳನ್ನು ಬಿಟ್ಟರೆ ಚಿತ್ರ ನಿರ್ಮಾಣದ ಉದ್ದಕ್ಕೂ ಇಂದಿರಾರವರ ಪಾತ್ರ–ಪಾಲುದಾರಿಕೆ ಏನೂ ಇಲ್ಲ. ಆದರೆ ಪುಟ್ಟಣ್ಣನವರಿಗೆ ಇಂದಿರಾರವರ ಬಗ್ಗೆ ವಿಶೇಷ ಗೌರವ ಮಮತೆಗಳಿವೆ. ಆತ್ಮೀಯತೆ ಯಿಂದ ಅನೇಕ ಬಾರಿ ತಮ್ಮೆಲ್ಲ ಅಳಲುಗಳನ್ನು ಇಂದಿರಾರವರ ಮುಂದೆ ತೋಡಿ ಕೊಂಡಿದ್ದಾರೆ.

ಈ ಮೇಲಿನ ಇಷ್ಟೇ ಸಾರಸಂಗ್ರಹವೇ 'ಚಿತ್ರ ಶಿಲ್ಪಿ ಪುಟ್ಟಣ್ಣ ಕಣಗಾಲ್' ತನ್ನ 179 ಪುಟಗಳಲ್ಲಿ ಹೇಳುವುದು. ಪುಸ್ತಕ ಓದಿ ಮುಗಿಸಿದ ಮೇಲೆ ಓದುಗನ ಮೇಲೆ ಅನೇಕ ಪ್ರಶ್ನೆಗಳು ಧುತ್ತೆಂದು ಆವತರಿಸಿ ಬಿಡುತ್ತವೆ. ಈ ಪ್ರಶ್ನೆಗಳಿಗೆ ಈ 179 ಪುಟಗಳಲ್ಲಿ ಎಲ್ಲಿಯೂ ಉತ್ತರ ಸಿಗುವುದಿಲ್ಲ. ಪುಟ್ಟಣ್ಣನವರು ತುಂಬಾ ಏಳು ಬೀಳುಗಳನ್ನು ಕಂಡರು ಎನ್ನುತ್ತಾರೆ. ಎಂಥ ಏಳು ಬೀಳುಗಳು ? ವಿವರಿಸುವುದಿಲ್ಲ!! ಸೊರಗಿದ ಮುಖದ ಕುರುಚಲು ಗಡ್ಡದ ಪುಟ್ಟಣ್ಣ ತಮ್ಮೊಡನೆ ತಮ್ಮ ದುಃಖ ವನ್ನೆಲ್ಲಾ ತೋಡಿಕೊಂಡರು ಎನ್ನುತ್ತಾರೆ. ಅದೇನು ದುಃಖ? ಹೇಳುವುದಿಲ್ಲ!! ಹೀಗೆ ಕಣ್ಣು ಮುಚ್ಚಾಲೆಯೊಂದಿಗೇ ಪುಸ್ತಕ ಮುಗಿಯುತ್ತದೆ. ಇಂದಿರಾರವರನ್ನು ಆತ್ಮೀಯತೆಯಿಂದ ನಡೆಸಿಕೊಂಡ ಪುಟ್ಟಣ್ಣನವರ ವಿಚಾರಧಾರೆಗಳನ್ನು ಅದು ಏಕ ಪಕ್ಷೀಯವಾಗಿದ್ದರೂ ಸರಿ ತಮ್ಮ ಸಾಕ್ಷೀ ಪ್ರಜ್ಞೆಯಿಂದ ಸಾಹಿತ್ಯವಾಗಿಸಿದ್ದರೆ, ಆ ಅಗಲಿದ ಚೇತನಕ್ಕೆ ಒಂದು ಸಣ್ಣ ಋಣ ಸಂದಾಯವಾದಂತಾದರೂ ಆಗುತ್ತಿತ್ತು. ಆದರೆ ಆ ಹೊಣೆಯಿಂದ ಇಂದಿರಾರವರು ಜಾರಿಕೊಂಡಿದ್ದಾರೆ.

ಶ್ರೀಮತಿ ಇಂದಿರಾರವರ ಮತ್ತೊಂದು ಕೃತಿ 'ಆತ್ಮಸಖಿ'. ಈ ಶೀರ್ಷಿಕೆ ಕಾದಂಬರಿ ಇರಬಹುದು ಎನ್ನುವ ಊಹೆ ತರಿಸುತ್ತದೆ ಮತ್ತು ಇಂದಿರಾರವರೇ ತಮ್ಮ ಮುನ್ನುಡಿಯಲ್ಲಿ "ಹಿಂದೆ ಕೈಲಾಸ ಮಾಸಪತ್ರಿಕೆಯಲ್ಲಿ ಚಿಕ್ಕ ಧಾರಾವಾಹಿ ರೂಪದಲ್ಲಿ, ಅಂದರೆ ಐದು ತಿಂಗಳ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಹರಿದು ಬಂದ ಈ ಜೀವನ ಚಿತ್ರ ಈಗ ಕಾದಂಬರಿ ರೂಪ ತಾಳಿದೆ" ಎನ್ನುತ್ತಾರಾದರೂ ಇದು ಕಾದಂಬರಿಯಲ್ಲ. ವಸ್ತುವಿಗೆ ಕಾದಂಬರಿಯ ರೂಪ ಕೊಟ್ಟಿದ್ದಾರಷ್ಟೆ. ಇಂದಿರಾ ರವರ ದೃಷ್ಟಿಯಿಂದ

ಈ ವ್ಯವಸ್ಥೆ ಸಕಾರಣವೇ. ಏಕೆಂದರೆ ಮಲೆನಾಡಿನ, ತಮ್ಮ ಹತ್ತಿರದ ಸಂಬಂಧಿ ದಂಪತಿಗಳ ವಿಚಿತ್ರ ಬದುಕಿನ ಬಗ್ಗೆ ಹೇಳ ಹೊರಟಿರುವುದರಿಂದ ಕಾದಂಬರಿಯ ಕವಚ ಇಂದಿರಾರವರಿಗೆ ತೀರ ಅಗತ್ಯವಾಗಿದೆ.

ಇದು ಅನಂತಶರ್ಮ ಎನ್ನುವ ಉಪಾಧ್ಯಾಯರ ಹಾಗೂ ಅವರ ಪತ್ನಿ ಸಾವಿತ್ರಿಯ, ಸಂಪ್ರದಾಯ, ವ್ಯವಸ್ಥೆಗಳ ವಿರುದ್ಧದ ಹೋರಾಟದ ಚಿತ್ರಣ. ಅನಂತಶರ್ಮರಿಗೆ ಹಿಂದಿನ ಎಲ್ಲದರ ವಿರುದ್ಧ ನಿಲ್ಲುವ ಬಯಕೆ. ಆದರೆ ಹೊಸದೊಂದು ಉತ್ತಮ ಎನ್ನಬಹುದಾದ ಮಾರ್ಗ ತಿಳಿದಿಲ್ಲ. ಹೀಗಾಗಿ ಈ ದಂಪತಿಗಳ ಬದುಕು ಕೇವಲ ಪ್ರಯೋಗದ ಹಂತದಲ್ಲೇ ನಿಂತುಬಿಡುತ್ತದೆ. ಮನೆಯಲ್ಲಿ ಹೆಂಡತಿ ಅಡುಗೆ ಮಾಡುವಂತಿಲ್ಲ. ಯಾರಾದರೂ ಏನಾದರೂ ತಂದುಕೊಟ್ಟರೆ ತಿನ್ನುವುದು, ಇಲ್ಲದಿದ್ದರೆ ಉಪವಾಸ. ಗಂಡನಿಗೆ ತೀರ ಆಸೆಯಾದಾಗ ಅಥವಾ ಅನಿವಾರ್ಯವಾಗಿ ಅತಿಥಿಗಳು ಬಂದಾಗ ಮನೆಯಲ್ಲಿ ಅಡಿಗೆ. ಶರ್ಮರಿಗೆ ತಿಂಗಳಿಗೆ ಬರುವ ಸಂಬಳದ ಉಸ್ತುವಾರಿಯೂ ಅವರದ್ದಲ್ಲ. ಹೆಂಡತಿಯಂತೂ ಶ್ರೀಮಂತರ ಮನೆಯ ಮಗಳಾದರೂ ಈ ಗಂಡನನ್ನು ಪಡೆದ ಮೇಲೆ ಹಣವನ್ನು ಕಣ್ಣಿಂದಲೂ ಕಾಣಳು. ಶರ್ಮರ ಅಸಿಸ್ಟೆಂಟ್ ಮಾಸ್ಟರ್ ಅಥವಾ ವಿದ್ಯಾರ್ಥಿ ಇವರ ಸಂಬಳದ ವಿತರಕರು. ಬಂದದ್ದರಲ್ಲಿ ಅರ್ಧ ತಮ್ಮನ ವಿದ್ಯಾಭ್ಯಾಸಕ್ಕೆ. ಉಳಿದದ್ದು ದೀನ ದಲಿತರಿಗೆ!! ಮನೆಯಲ್ಲಿ ಪಾತ್ರೆ ಪರಡಿಗಳಿಲ್ಲ, ಬಟ್ಟೆ ಬರೆಗಳಿಲ್ಲ. ಒಂದು ರೀತಿ ಸನ್ಯಾಸಿಯ ಬದುಕು.

ಮುನ್ನುಡಿಯಲ್ಲಿ ಇಂದಿರಾರವರು "ಅನಂತಶರ್ಮರು ಅಪ್ಪಟ ಗಾಂಧೀವಾದಿಗಳು" ಎನ್ನುತ್ತಾರೆ. ಶರ್ಮರು ಹರಿಜನರ ಸೇವೆ ಮಾಡಿದ್ದು, ಖಾದಿ ನೂತದ್ದು, ಹೆಂಡತಿಗಾಗಿ ಸ್ವಾತಂತ್ರ್ಯಪೂರ್ವದ ಆ ಕಾಲಕ್ಕೇ ಅರಿಶಿನ ಕುಂಕುಮ ಆಭರಣಗಳಿಂದ ದೂರವಿರಿಸಿ ಖಾದಿ ಉಡುವಂತೆ ಪ್ರೇರೇಪಿಸಿದ್ದು, ಇತ್ಯಾದಿಗಳನ್ನು ಗಾಂಧಿಯವರಿಂದ ಪ್ರೇರಿತವಾಗಿ ಮಾಡಿದ್ದು ಎಂದು ಒಪ್ಪಬಹುದು. ಆದರೆ ಇಬ್ಬರ ಸಂಸಾರವನ್ನೂ ಅದು ಬಡತನದ್ದಾಗಿಯೇ ಸರಿ, ಅದನ್ನೂ ಒಪ್ಪವಾಗಿ ನಡೆಸದೇ ಊರವರ ಮೇಲೇ ಹೊಣೆ ಹೊರೆಸುವುದು ಒಂದು ರೀತಿಯ ಕರ್ತವ್ಯ ಪಲಾಯನವೇ ಅಲ್ಲವೇ ? ಗಾಂಧಿವಾದಕ್ಕೂ-ಇಂಥ ಹೊಣೆಗೇಡಿತನಕ್ಕೂ ಅರ್ಥಾರ್ಥ ಸಂಬಂಧವಿಲ್ಲ. ಶರ್ಮರ ಕೆಲವು ಗುಣಗಳು ಮೆಚ್ಚುಗೆಯಾದರೂ ಅವರ ಗುರಿ ನಿಚ್ಚಳವಾಗಿಲ್ಲದೇ ಗೋಜಲು ಗೋಜಲಾದ ಕಾರಣ ಅವರ ಬದುಕೇ ವ್ಯರ್ಥ ಪ್ರಯತ್ನ ಎನಿಸಿಬಿಡುತ್ತದೆ.

ಇಂದಿರಾರವರೇ ಕೃತಿಯಲ್ಲಿ ಪದೇ ಪದೇ ಹೇಳುವಂತೆ ಸಾವಿತ್ರಿಯಂಥಾ ಹೆಣ್ಣು ಮತ್ತೊಬ್ಬಳಿರಲಾರಳು. ಹದಿಮೂರು ವರ್ಷದ ಬಾಲೆ ಮದುವೆಗೆ ಮುಂಚೆ

ಗಂಡನಿಗೆ "ಹೇಳಿದಂತೆ ಕೇಳುತ್ತೇನೆ" ಎಂದು ಮಾತುಕೊಟ್ಟಿದ್ದನ್ನು ಜೀವನ ಪರ್ಯಂತ ನಡೆಸಿಕೊಂಡ ರೀತಿ ಮಾತ್ರ ನಿರುಪಮವಾದದ್ದು. ಗಂಡನ ಜೊತೆ ಉಪವಾಸ ವನವಾಸಗಳನ್ನನುಭವಿಸುತ್ತಾ ಊರೂರನ್ನು ಕಾಲ್ನಡಿಗೆಯಲ್ಲಿ ಸುತ್ತುತ್ತಾ, ತೌರಿನ ಸಂಬಂಧವನ್ನೂ ತೊರೆದು, ಸಂಪ್ರದಾಯದಿಂದ ತನ್ನನ್ನು ಸಂಪೂರ್ಣ ಮುಕ್ತಗೊಳಿಸಿ ಕೊಂಡು, ಬಾಳಿದ ಬಾಳು ಅತ್ಯಂತ ಘೋರ, ಆದರೆ ಅಷ್ಟೇ ಅದ್ಭುತ! ಅನಂತಶರ್ಮರಿ ಗಿಂತ ಸಾವಿತ್ರಿ ಹೆಚ್ಚು ವಿದ್ಯಾವಂತಳಲ್ಲದಿದ್ದರೂ ಹೆಚ್ಚು ವಾಸ್ತವಿಕ ಪ್ರಜ್ಞೆ ಉಳ್ಳವಳು. ಮದುವೆಯಾದ ಹಲವಾರು ವರ್ಷಗಳನಂತರ ಗರ್ಭಿಣಿಯಾಗಿ, ತುಂಬು ಗರ್ಭಿಣಿ, ಗಂಡನ ಆದೇಶದಂತೆ ಪ್ಲೇಗು ಬಂದ ಹರಿಜನರ ಸೇವೆ ಮಾಡಿ ತನಗೂ ಪ್ಲೇಗು ತಾಗಿ, ಗಂಡನ ಘೋರ ನಿಯಮದಂತೆ ಔಷಧಿ ತೆಗೆದುಕೊಳ್ಳದೆ ಶಾಲೆಯ ಕೋಣೆಯಲ್ಲಿ ಸಾಯುವುದು ನಿಜವಾಗಿ ಪ್ಲೇಗಿನಿಂದಲ್ಲ. ಆಡುಗೆಯನ್ನೇ ಮಾಡದ ತಮ್ಮ ವಿಚಿತ್ರ ಬಾಳಿನಲ್ಲಿ ಮೂರನೆಯ ಪುಟ್ಟಜೀವಿಯೊಂದು ಅವತರಿಸಿದರೆ, ತನ್ನ ಗಂಡನ ಆದರ್ಶದ ಮಹಾಪೂರದಲ್ಲಿ ಅದು ಹೇಗೆ ಬಾಳಬೇಕು ಎನ್ನುವ ಭಯದಲ್ಲಿ ಆ ಮಹಾ ತಾಯಿ ತನ್ನ ಕರುಳಿನ ಕುಡಿ ಹೊರಬರುವ ಮುನ್ನವೇ ತನ್ನೊಂದಿಗೆ ಅದನ್ನು ಪರ-ಲೋಕಕ್ಕೆ ಒಯ್ದಳೇನೋ ಅನ್ನಿಸುತ್ತದೆ. ಇದೊಂದು ಕೊಲೆಯೋ ? ಆತ್ಮ ಹತ್ಯೆಯೋ ? ಸಹಜ ಸಾವೇ ಎನ್ನಿಸುವ ಈ ಘಟ್ಟದಲ್ಲಿ ಶರ್ಮರನ್ನು ಕ್ಷಮಿಸಲು ಯಾವ ಓದುಗನಿಗೂ ಸಾಧ್ಯವಾಗುವುದಿಲ್ಲ.

ನಿಜವಾಗಲೂ ಶರ್ಮರು ಸಾಧಿಸಿದ್ದೇನು ? ಈ ಪ್ರಶ್ನೆ ಸ್ವತಃ ಶರ್ಮರನ್ನೂ, ಎಂ.ಕೆ. ಇಂದಿರಾರವರನ್ನೂ, ಓದುಗರನ್ನೂ ಕಾಡುತ್ತದೆ. ಶರ್ಮರ ಬಾಳಿನ ಕೊನೆಯ ದಿನಗಳಲ್ಲಿ ಇದೇ ಪ್ರಶ್ನೆ ಅಲ್ಲದೆ ಹೆಂಡತಿಯನ್ನು ಹೀನಾಯವಾಗಿ ನಡೆಸಿ ಕೊಂಡು ಅವಳ ಸಾವಿಗೆ ಕಾರಣನಾದೆ ಎನ್ನುವ ಪಾಪ ಪ್ರಜ್ಞೆಯೂ ಸೇರಿ ಅವರ ಮಾನಸಿಕ ಸಮತೋಲನ ತಪ್ಪುತ್ತದೆ. ಇಂದಿರಾರವರೂ ಅದನ್ನೇ ಹೇಳುತ್ತಾರೆ— "ಅನಂತಶರ್ಮರು ಜೀವನವಿಡೀ ಶ್ರಮಿಸಿದರೂ ಯಾವುದೇ ಒಂದು ಗುರಿ ಮುಟ್ಟದೇ ಇರಬಹುದು, ಆದರೆ ಅವರ ಬದುಕೇ ಒಂದು ವೈಶಿಷ್ಟ್ಯಪೂರ್ಣ."

'ಆತ್ಮಸಖಿ' ತುಂಬ ಒಪ್ಪವಾಗಿ ಓದಿಸಿಕೊಂಡು ಹೋಗುವ ಕೃತಿ. ಕತೆಯರೀತಿ ಯಲ್ಲೇ ಸಾಗಿದರೂ ಎಲ್ಲೂ ಅತಿರೇಕಕ್ಕೆ ಹೋಗದೆ ಪ್ರಾಮಾಣಿಕ ಸಾಕ್ಷಿ ಪ್ರಜ್ಞೆಯನ್ನು ಸಾಧಿಸಿದ್ದಾರೆ. ಆ ಸಂಪ್ರದಾಯ ಯುಗದಲ್ಲಿ ಇಂಥ ಬಾಳು ಹೇಗೆ ಸಾಗಿತು ? ಎನ್ನುವ ಕುತೂಹಲ, ಬೆರಗುಗಳೇ ಲೇಖಕಿಯಲ್ಲಿ ಒತ್ತಡದ ಬಂಡವಾಳಗಳಾಗಿ ಈ ಕೃತಿ ರಚನೆಗೆ ಮೂಲಧಾತುವಾಗುತ್ತದೆ. ಇಂಥ ಗಟ್ಟಿ ಜೀವಾಳ 'ಪುಟ್ಟಣ್ಣ' ಕೃತಿಗೆ ಇಲ್ಲದಿರುವುದರಿಂದಲೇ ಅದು ಜಾಳು ಜಾಳಾಗಿದೆ.

ತಮ್ಮ ಆರನೇ ವಯಸ್ಸಿನಿಂದ ಮೊನ್ನೆ ಮೊನ್ನೆಯ ತನಕ ಸುಮಾರು ಮೂರು ಸಾವಿರಕ್ಕೂ ಹೆಚ್ಚು-ಚಿತ್ರಗಳನ್ನು ನೋಡಿರುವುದೇ ಚಿತ್ರ ಭಾರತ ಕೃತಿಯ ಹುಟ್ಟಿಗೆ ಕಾರಣ ಎಂದು ಲೇಖಕಿ ಹೇಳಿ ಕೊಂಡಿದ್ದಾರೆ. ಚಲನಚಿತ್ರ ಬೃಹತ್ ಉದ್ಯಮವಾಗಿ ವಿಶ್ವದಲ್ಲೇ ಬೆಳೆದಿದೆ. ಇದು ಕಲೆಯೂ ಹೌದು; ತಂತ್ರಜ್ಞಾನವೂ ಹೌದು. ಜಾಹೀರಾತಿನ ದೇಣಿಗೆಯ ಮೇಲೆಯೇ ಬೆಳೆಯುವ ಈ ಉದ್ಯಮ, ಇಂದು ಮನೆ ಮನೆಯನ್ನೂ ಹಳ್ಳಿ ಹಳ್ಳಿಯನ್ನೂ ತಲುಪಿದೆ. ಪ್ರಚಾರ ಮಾಡುವುದಕ್ಕೆಂದೇ ಹುಟ್ಟಿರುವ ಚಲನ ಚಿತ್ರ ಪತ್ರಿಕೆಗಳು ಎಲ್ಲ ಭಾಷೆಯಲ್ಲೂ ಬೃಹತ್ತಾಗಿಯೇ ಬೆಳೆಯುತ್ತಿದೆ. ಜನಪ್ರಿಯತೆಯನ್ನೂ ಗಳಿಸುತ್ತಿದೆ. ಅಕ್ಷರಸ್ಥರಿಂದ ಹಿಡಿದು ಅನಕ್ಷರಸ್ಥರವರೆಗೂ ಮುದುಕರಿಂದ ಮಗುವಿನವರೆಗೂ ಚಲನ ಚಿತ್ರದ ಬಗ್ಗೆ ತಿಳಿಯದವರೇ ಇಲ್ಲವೆನ್ನಬಹುದು. ಪರಿಸ್ಥಿತಿ ಹೀಗಿರುವಾಗ, ಈ ವಿಷಯವನ್ನು ಆರಿಸಿಕೊಂಡು ಬರೆಯತೊಡಗಿದರೆ ಅದು ಎರಡು ಸಾಧ್ಯತೆಗಳಿದ್ದಾಗ ಮಾತ್ರ ಯಶಸ್ವಿಯಾಗುತ್ತದೆ. ಒಂದು ಆ ಕಲೆಯ ಬಗ್ಗೆ ವಿಶೇಷವಾದ ಜ್ಞಾನವಿರಬೇಕು, ಚಲನ ಚಿತ್ರದ ಕಲಾತ್ಮಕತೆಯ ಬಗ್ಗೆ ವಿಶೇಷ ಅರಿವನ್ನು ಮೂಡಿಸುವ ಪ್ರತಿಭೆಯಿರಬೇಕು. ಎರಡು-ತಾಂತ್ರಿಕವಾಗಿ ಚಲನ ಚಿತ್ರಗಳ ಬಗ್ಗೆ ಅಖಂಡ ತಿಳುವಳಿಕೆಯಿರಬೇಕು. ಆಗ ಮಾತ್ರ ಹೊಸದನ್ನು ಸಾಮಾನ್ಯನಿಗೆ ಮುಟ್ಟಿಸುವ ಕ್ರಿಯೆ ಸಾಧ್ಯ. ಇಂಥ ವಸ್ತುವನ್ನು ಹೊತ್ತ ಕನ್ನಡ ಕೃತಿಗಳು ತೀರ ಕಡಿಮೆ ಸಂಖ್ಯೆಯಲ್ಲಿ ಇವೆ. ಶ್ರೀ ಜಿ.ವಿ. ಅಯ್ಯರ್‌ರವರ 'ಮೂರು ಚಿತ್ರ ಮೂರುದಾರಿಗಳು' ಚಲನ ಚಿತ್ರದ ಕಲಾತ್ಮಕತೆಯನ್ನು ಅಭಿವ್ಯಕ್ತಿಸುವ ಕೃತಿ. ಅಲ್ಲಲ್ಲಿ ನಡೆಯುವ ಚಲನ ಚಿತ್ರ ಶಿಬಿರದ ಪ್ರೌಢ ಪ್ರಬಂಧಗಳ ಸಂಕಲನಗಳು ಕೆಲವು ಹೊರಬಿದ್ದಿವೆ. ಇವು ತಾಂತ್ರಿಕ ದೃಷ್ಟಿ, ನಟನೆ, ಇತ್ಯಾದಿಗಳ ಬಗ್ಗೆ ಒಳ್ಳೆಯ ತಿಳುವಳಿಕೆ ಮೂಡಿಸುವ ಕೃತಿಗಳು. ಚಲನ ಚಿತ್ರರಂಗದಲ್ಲೇ ಮುಳುಗೇಳುತ್ತಿರುವವರಿಗೆ ಮಾತ್ರ ಇಂಥ ವಸ್ತುವಿನ ಬಗ್ಗೆ ಏನಾದರೂ ಬರೆಯಲು ಸಾಧ್ಯ. ಇಲ್ಲದವರಿಗೆ ಅದೊಂದು ದೂರದ ಬೆಟ್ಟವೇ.

ಇಂದಿರಾರವರು ಮನಸ್ಸು ಮಾಡಿದ್ದರೆ ಈ ಕೃತಿಯನ್ನು ಉತ್ತಮ ಹಾಸ್ಯ ಸಾಹಿತ್ಯವನ್ನಾಗಿಸಬಹುದಿತ್ತು. ಅವರು ಕೊಟ್ಟಿರುವ ಉಪಶೀರ್ಷಿಕೆಗಳು ಮೊದಲು ಇದೇ ಗುಮಾನಿಯನ್ನು ತರುತ್ತದೆ. ಇಂದಿರಾರವರಲ್ಲಿ ಹಾಸ್ಯ ಪ್ರಜ್ಞೆ ಉತ್ತಮವಾಗಿಯೇ ಇದೆ. ಅದು ಅವರ ಕಾದಂಬರಿಗಳಲ್ಲಿ ಅಲ್ಲಲ್ಲಿ ಮಿಂಚುತ್ತದೆ. ಅವರ 'ಚಿತ್ರ ಭಾರತ'ದಲ್ಲೂ ಧಾರಾಳವಾಗಿಯೇ ಪ್ರಕಾಶಿಸುತ್ತದೆ. ಆದರೆ ವ್ಯಥೆ ತರುವ ಅಂಶವೆಂದರೆ ಈ ಹಾಸ್ಯವೇ ಪ್ರಧಾನವಾಗಿ ಅಲ್ಲಲ್ಲಿ ಮಿಂಚಿ ಕೊನೆಗೆ ಗೌಣವಾಗಿಯೇ ಬಿಡುವುದು.

ಚಲನಚಿತ್ರ ಯುವ ಪೀಳಿಗೆಯ ಮೇಲೆ ಬೀರುವ ಪ್ರಭಾವದ ಬಗ್ಗೆ ಸಾಮಾಜಿಕ ಕಳಕಳಿ, ವ್ಯಥೆ ಇರುವ ಇಂದಿರಾರವರ ನೋವು ತುಂಬಿದ ಮಾತುಗಳಿಗೆ ಉದಾ–"ಚಿತ್ರ ಕಥೆಗಗತ್ಯ–ಪೂರಕ ಎರಡೂ ಇಲ್ಲದಿದ್ದರೂ ಪ್ರಾಯದ ನಟಿಯರ ಬೆತ್ತಲೆ ಮೈ ತೋರಿಸುವ ದೃಶ್ಯ ಚಿತ್ರದಲ್ಲಿರುತ್ತದೆ. ಜಿಗುಪ್ಸೆ, ಅಸಹ್ಯ ಬರುವಷ್ಟೂ ಇರುತ್ತದೆ. ಇದು ಅನೇಕ ಪುರುಷರ ತಾತ್ಕಾಲಿಕ ತೃಪ್ತಿ ಇರಬಹುದು. ಆದರೆ ಒಂದು ಸಭ್ಯ ಸಮಾಜದ ಮೇಲೆ, ನವ ಜನಾಂಗದ ಮೇಲೆ ಇದರ ದುಷ್ಟ ಪರಿಣಾಮ ಎಷ್ಟಾಗಬಹುದು ಎಂಬುದನ್ನು ಯಾವ ನಿರ್ಮಾಪಕರಾಗಲೀ ನಿರ್ದೇಶಕ ರಾಗಲೀ, ಯೋಚಿಸುವುದಿಲ್ಲ. ಇದು ಚಿತ್ರರಂಗ ನವಪೀಳಿಗೆಯ ಮೇಲೆ ಸಿಂಪಡಿಸುವ ನಿಧಾನ ವಿಷ." "...... ಅನ್ನದಾರಿದ್ರ್ಯ, ಅರ್ಥ ದಾರಿದ್ರ್ಯ, ಸಂಸ್ಕೃತಿ ದ್ರಾರಿದ್ರ್ಯ ನಮ್ಮ ಭಾರತಕ್ಕೆ ಬಂದಿರುವುದು ನಿಜ. ಆದರೆ ವಸ್ತ್ರ ದಾರಿದ್ರ್ಯವೇನೂ ಇಲ್ಲ. ವಸ್ತ್ರ ದಾರಿದ್ರ್ಯ ಬಂದಿರುವುದು ಇತ್ತೀಚಿನ ಸಾಮಾಜಿಕ ಚಲನಚಿತ್ರಗಳಲ್ಲಿ ಮಾತ್ರ .... ಈಗೀಗ ಅಂತಹ ದೃಶ್ಯಗಳು ಇವೆಯೆಂದು ತಿಳಿದರೆ ನಾನು ಆ ಚಿತ್ರಕ್ಕೆ ಹೋಗುವುದೇ ಇಲ್ಲ. ಕಾರಣ ನನಗೆ ಅದು ಬೇಕಿಲ್ಲ. ಬೇಕಾದವರು ನೋಡಿಕೊಳ್ಳಲಿ. ಗೊತ್ತಿಲ್ಲದೇ ಅಂತಹ ಚಿತ್ರಕ್ಕೇನಾದರೂ ಹೋದರೆ ಆ ದೃಶ್ಯ ಮುಗಿಯುವವರೆಗೆ ಕಣ್ಣು ಮುಚ್ಚಿ ಕೂತು ಜಪ ಮಾಡುತ್ತಿರುತ್ತೇನೆ. ಇತ್ತೀಚೆಗೆ ನಿರ್ದೇಶಕರ ಹೆಸರು ಕೇಳಿ ಚಿತ್ರ ಉತ್ತಮವಿರಬಹುದೆಂದು ಹೋದೆ. ಪ್ರತಿ ದೃಶ್ಯದಲ್ಲೂ ನಾನು ಕಣ್ಣು ಮುಚ್ಚಲೇಬೇಕಾಯ್ತು".

ನಟ ನಟಿಯರ ಬಗ್ಗೆ, ಖಳನಾಯಕ, ನಾಯಕಿಯರ ಬಗ್ಗೆ, ಮಾನಭಂಗ ಮುಂತಾದವುಗಳ ಬಗ್ಗೆ ಚಿತ್ರದ ಎಲ್ಲ ವಿಚಾರಗಳ ಬಗ್ಗೆ ಇಂದಿರಾರವರು ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ಇಂದಿರಾರವರ ಈ ನಿಲುವುಗಳು ಹೆಚ್ಚು ಕಡಿಮೆ ಎಲ್ಲ ಜನರ ನಿಲುವುಗಳೇ ಆಗಿರುವುದರಿಂದ ಮತ್ತು ಇಂಥ ವಿಚಾರಗಳೆಲ್ಲಾ ಎಲ್ಲ ಪತ್ರಿಕೆಗಳಲ್ಲೂ ಆಗಾಗ್ಗೆ ಬರುತ್ತಲೇ ಇರುವುದರಿಂದಲೂ ಇಲ್ಲಿ ಏನು ಹೊಸತು ಎನಿಸುವುದಿಲ್ಲ. ಈ ಕೃತಿಯ ಮೆಚ್ಚುಗೆಯ ಅಂಶಗಳೆಂದರೆ, ಮೊದಲೇ ಹೇಳಿದಂತೆ ಅಲ್ಲಲ್ಲಿ ಮೂಡುವ ಸುಂದರ ಹಾಸ್ಯ ಹಾಗೂ ಇಂದಿರಾರವರ ಆಕರ್ಷಕ ಶೈಲಿ. ಇಂದಿರಾರವರು ತುಂಬ ಒಳ್ಳೆಯ ಭಾಷಾ ಸಂಪತ್ತು ಹೊಂದಿರುವವರು. ವಸ್ತುವಿನ ಗಾಢತೆಯೇ ಇಲ್ಲದಾಗ್ಯೂ ಸರಳ ಸುಲಲಿತವಾಗಿ ವಿಷಯವನ್ನು ನಿರೂಪಿಸಬಲ್ಲ ಸಾಧ್ಯತೆ ಇಂದಿರಾರವರಂತಹವರಿಗೆ ಮಾತ್ರ ಸಾಧ್ಯ. ಆದರೂ 'ಚಿತ್ರಭಾರತ'ದಲ್ಲಿ ತಲೆಚಿಟ್ಟು ಹಿಡಿಸುವ ಪುನರಾವರ್ತನೆಗಳನ್ನು ತೆಗೆದು ಹಾಕಿ ಹಾಸ್ಯರಸಘಟ್ಟ ಗಳನ್ನೂ ಚಿಂತನ–ಮಂಥನಗಳನ್ನು ಮಾತ್ರ ಉಳಿಸಿಕೊಂಡು ಪ್ರಕಟಿಸಿದ್ದರೆ ಇದು ಕನ್ನಡ ಸಾಹಿತ್ಯಕ್ಕೆ ಅಪರೂಪದ ಕೊಡುಗೆಯಾಗುತ್ತಿತ್ತು.

'ಆತ್ಮಸಖಿ'ಯಂತೆ 'ಸಂದರ್ಶನ'ವೂ ಕಾದಂಬರಿ ಎನ್ನುವ ತಲೆಪಟ್ಟಿಯನ್ನು ಹೊತ್ತುಕೊಂಡೇ ಹೊರಬಿದ್ದಿದೆ. 1991ರಲ್ಲಿ ಹೊರಬಂದಿರುವ ಈ ಕೃತಿ ಎರಡು ಕಾದಂಬರಿ(?)ಗಳನ್ನು ತುಂಬಿಕೊಂಡಿದೆ. ಮೊದಲನೆಯದು 'ಹಂಸಗಾನ' ಕಿರು ಕಾದಂಬರಿ. ಇದು ಕಾದಂಬರಿಯ ಎಲ್ಲ ಲಕ್ಷಣಗಳನ್ನೂ ಪ್ರಶಸ್ಥವಾಗಿ ಪಡೆದಿದೆ. ಆದರೆ 'ಸಂದರ್ಶನ' ತೀರ ಹರಟೆಯ ಮಟ್ಟದಲ್ಲೇ ನಿಲ್ಲುತ್ತದೆ. ಸುಮಾರು 200-250 ವರ್ಷಗಳ ಪ್ರಾಯದ ಒಬ್ಬನನ್ನು ನಗರದ ಪತ್ರಕರ್ತರು ಸಂದರ್ಶಿಸುವ ವಸ್ತುವಿದು. ಈ ಮುದುಕನಿಗೆ ತಂದೆಯಿದ್ದಾನೆ, ಆದರೆ ರೋಗಿ. ಅಜ್ಜಿಯಿದ್ದಾಳೆ ಗಟ್ಟಿ ಮುಟ್ಟಾಗಿ!! ಅಂದರೆ ಅವರುಗಳ ವಯಸ್ಸು ಓದುಗರ ಊಹೆಗೇ ಬಿಟ್ಟದ್ದು. ಈ ಕೆಂಪಜ್ಜ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮೈಸೂರಿನ ಅರಮನೆಯ ಕೋಲುಕಾರನಾಗಿದ್ದನಂತೆ. ಅವನಿಗೆ ಇಂದಿಗೂ ಐದು ರೂಪಾಯಿ ಅರಮನೆಯಿಂದ ಪಿಂಚಣಿ ಬರುತ್ತದಂತೆ.

ಇಂದಿರಾರವರಿಗೆ ಕರತಲಾಮಲಕವಾಗಿರುವ ಹಳ್ಳಿಯ ಪರಿಸರ, ಜನ ಜೀವನ ಇತ್ಯಾದಿಗಳ ವರ್ಣನೆ ವಿವರಣೆ ಈ ಕೃತಿಯಲ್ಲೂ ಸಹಜವಾಗಿವೆ. ಆದರೆ ಸಂದರ್ಶನದ ವಿಧಾನ ಮಾತ್ರ ತುಂಬ ಮಿತಿಯಲ್ಲೇ ನಿಲ್ಲುತ್ತದೆ. ಆದರೆ ರಾಜಕಾರಣಿಗಳ, ಸಾಹಿತಿಗಳ, ಚಲನಚಿತ್ರ ನಟ ನಟಿಯರ ಸಂದರ್ಶನಗಳು ಸಪಕಲು ಹಂತವನ್ನೂ ಮೀರಿ ನಿಂತಿದೆ. ಆದ್ದರಿಂದಲೇ ಪತ್ರಕರ್ತರ ಬಾಯಿಂದ ಹೊರಡಿಸುವ ಇಂದಿರಾರವರ ಪ್ರಶ್ನೆಗಳು ಪ್ರಶ್ನೆಗಳೆಂದೇ ಎನಿಸುವುದಿಲ್ಲ. "ಈ ವಯಸ್ನಲ್ಲಿ ಏನು ದುಡೀತಿ ಕೆಂಚಣ್ಣ?" "ನಿನಗೆ ನೆಗಡಿ-ಕೆಮ್ಮು ಬರೋಲ್ವೆ?" "ನಿಮ್ಮ ಹಟ್ಟೀಲಿ ಒಟ್ಟು ಎಷ್ಟು ಜನ ಇದೀರಿ"? ಇತ್ಯಾದಿ! ಆದರೆ ಉತ್ತರಗಳು ಮಾತ್ರ ತುಂಬ ಮಾರ್ಮಿಕ. ತೀರ ಕೆಳಹಂತದ, ಬದುಕಿನಲ್ಲಿ ಆಸೆ ಆಕಾಂಕ್ಷೆಗಳೇ ಚಿಗುರದ, ಬಂದದ್ದನ್ನು ಬಂದಂತೇಯೇ ಸ್ವೀಕರಿಸುವ ನಿರ್ಲಿಪ್ತ ಮನೋಭಾವದ ಕೆಂಚಣ್ಣ ತುಂಬ ಆತ್ಮೀಯನಾಗಿ ಬಿಡುತ್ತಾನೆ.

ಸಣ್ಣಪುಟ್ಟ ಕೊರತೆಗಳಿದ್ದರೂ 'ಸಂದರ್ಶನ' ಮೆಚ್ಚಲೇಬೇಕಾದ ಒಂದು ಕೃತಿ. ಹಳ್ಳಿಗರ ಬದುಕಿನ ಮರ್ಮವನ್ನು ಸಂದರ್ಶಿಸುವುದೇ ಲೇಖಕಿಯ ಮೂಲ ಆಶಯ. ಕಷ್ಟ ಸಹಿಷ್ಣುತೆ, ಸ್ಥಿತ ಪ್ರಜ್ಞತೆ ಎರಡೂ ಮನುಷ್ಯನಿಗೆ ಆರೋಗ್ಯ ಆಯುಸ್ಸುಗಳನ್ನು ತಂದು ಕೊಡುತ್ತದೆ ಎನ್ನುವ ಗಟ್ಟಿ ನಂಬಿಕೆಯನ್ನು ಎಪ್ಪತ್ತೈದರ ಇಂದಿರಾರವರು ನಮ್ಮ ಮುಂದಿಟ್ಟಿದ್ದಾರೆಂದರೆ ಇಂಥದ್ದಕ್ಕಲ್ಲದೇ ಮತ್ತ್ಯಾವುದಕ್ಕೆ ಮಾನ್ಯತೆ ಕೊಡಬೇಕು.

ಎಂ. ಕೆ. ಇಂದಿರಾವರ ಕೆಲವು ಕಾದಂಬರಿಗಳನ್ನು, ಅವರ ಸರಳ ಸುಂದರ ಶೈಲಿಯನ್ನು ತುಂಬ ಮೆಚ್ಚಿಕೊಂಡಂಥ ನನ್ನ ನಿಮ್ಮಂತಹ ಓದುಗರಿಗೆ ಅವರು ಕಾದಂಬರಿಯೇತರ ಪ್ರಕಾರಗಳಲ್ಲೂ ಕೈ ಆಡಿಸಿದ್ದಾರೆಂದರೆ ಸ್ವಲ್ಪ ಕುತೂಹಲವಾಗುವುದು ಸಹಜ. ಆದರೆ ಇಂದಿರಾರವರು ಆರಿಸಿಕೊಂಡ ಲಲಿತ ಪ್ರಬಂಧ, ಜೀವನ ಚಿತ್ರ, ಹರಟೆ ಇತ್ಯಾದಿ ಪ್ರಕಾರಗಳಲ್ಲಿ ಹಲವಾರು ಶ್ರೇಷ್ಠ ಲೇಖಕ-ಲೇಖಕಿಯರು ತುಂಬ ಉತ್ತಮ ಕೃತಿಗಳನ್ನು ನೀಡಿ ಬಿಟ್ಟಿರುವ ಕಾರಣ ಇಂದಿರಾರವರ ಕೃತಿಗಳು 'ಸಪ್ಪೆ' ಎನಿಸುವುದು ನಿಜ. ಅದಕ್ಕೆ ಇಂದಿರಾರವರ ಕೆಲವು 'ಮಿತಿ'ಗಳೂ ಕಾರಣ. ಏನೇ ಆದರೂ ಅವುಗಳಲ್ಲಿರುವ 'ಇಂದಿರಾ ತನ'ವನ್ನು ಮಾತ್ರ ಅವರ ಪ್ರಿಯ ಓದುಗರು ಗಮನಿಸದೇ ಇರುವುದು ಸಾಧ್ಯವೇ ಇಲ್ಲ.

"ಅಜ್ಜಮ್ಮನೋರೇ, ನಿಮ್ಮ ಇಡ್ಲಿ ದುಂಡು ಮಲ್ಗೆದಂಡೆ ಇದ್ದಂಗದೆ ನೋಡ್ರಿ. ನಿಮ್ಮ ತಿಂಡಿಗೆ ನಾವು ಏನು ಕೊಟ್ಟರೆ ಮುಗದೀತು? ನಮ್ಮ ಅಡಿಗೆಯಾಕಿ ಇಡ್ಲಿ ಮಾಡ್ತಳ ನೋಡ್ರಿ ಥೇಟ್ ಕೊಕ್ರೆ ಪಿಷ್ಟಿ ಇದ್ದಾಂಗ ಇರತದ! ನಮ್ಮ ಕರ್ಮ ಏನೆಂಬೋಣ ? ಆಕಿ ಕೊಟ್ಟದ್ದು ನಾವು ತಿಂದದ್ದು –"

(ಸದಾನಂದ ಪುಟ–122)

ಇಂದಿರಾ ಅವರ ಪ್ರಗತಿಪರ ನಿಲುವು

○

○

○ ಬಿ. ಎಸ್. ವೆಂಕಟಲಕ್ಷ್ಮಿ

ಕೃತಿಕಾರರ ಬದುಕಿಗೂ ಅವರ ಕೃತಿಗಳಿಗೂ ಸಂಬಂಧ ಏರ್ಪಡಿಸುವುದು ಅಸಮಂಜಸ ಎನ್ನಿಸಬಹುದಾದರೂ ಇತ್ತೀಚೆಗೆ ತಾನೆ ಎಂ.ಕೆ.ಇಂದಿರಾ ಅವರೊಡನೆ ಸುದೀರ್ಘವಾಗಿ ಮಾತನಾಡುವ ಅವಕಾಶ ನನಗೆ ದೊರೆತದ್ದು ನನ್ನೊಂದಿಗಿನ ಅವರ ಸಂಭಾಷಣೆಯಿಂದ ನಾನಿನ್ನೂ ಹೊರಬಂದಿಲ್ಲವಾದ ಕಾರಣ ಅವರ ಬಗ್ಗೆ ಬರೆಯುವಾಗ ಅವರ ವ್ಯಕ್ತಿತ್ವ ಕಣ್ಮುಂದೆ ನಿಲ್ಲುತ್ತದೆ. ಹೆಚ್ಚಿನ ಶಿಕ್ಷಣ ಹೊಂದಿರದಿದ್ದರೂ ಸಾರಸ್ವತ ವಲಯಗಳಲ್ಲಿ ಅಚ್ಚರಿಮೂಡಿಸುವಷ್ಟು ಜನಪ್ರಿಯರಾಗಿರುವ ಎಂ. ಕೆ. ಇಂದಿರಾ ಬರೆಯಲು ತೊಡಗಿದ್ದೇ 'ಅಜ್ಜಿ'ಯಾದ ನಂತರ. ಸಂಪ್ರದಾಯ ಕುಟುಂಬವೊಂದರಲ್ಲಿ ಹುಟ್ಟಿ ಬಾಲ್ಯ ಯೌವನದುದ್ದಕ್ಕೂ ಪೂಜೆ-ವ್ರತ ಇಂಥ ಕಾಲಕ್ಷೇಪಗಳಲ್ಲಿ ನಿರತರಾಗಿ, ಹಾಡು–ಹಸೆ ಕಲಿಯುವುದನ್ನೇ ಮನರಂಜನೆಯನ್ನಾಗಿಸಿಕೊಂಡು, ಬಸುರಿ–ಬಾಣಂತಿತನಗಳಲ್ಲಿ ಹಲವಾರು ವರ್ಷಗಳನ್ನು ಕಳೆದು ಸನಾತನ ಬದುಕೊಂದು ಯಾವ ಸೀಮಿತ ಅವಕಾಶಗಳನ್ನು ಒದಗಿಸುತ್ತದೋ ಆ ಚೌಕಟ್ಟಿಗೆ ಜೀವನವನ್ನು ಅಳವಡಿಸಿಕೊಂಡೂ ಪ್ರಗತಿಪರ ಧೋರಣೆಗಳನ್ನು ಬಿತ್ತರಿಸುವಂಥ ಕೃತಿಗಳನ್ನು ನೀಡಿದ ಅಪರೂಪದ ಲೇಖಕಿ. ಈ ದೃಷ್ಟಿಯಿಂದ ನನಗೆ ಇಂದಿರಾ ಅವರು ಅವರ ಪೀಳಿಗೆಯವರ ಪೈಕಿ ಮೇಲ್ಮಟ್ಟದಲ್ಲಿ ನಿಂತಿದ್ದಾರೆ ಎನಿಸುತ್ತದೆ.

ಸುಮಾರು 45ನೇ ವಯಸ್ಸಿನಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದ ಎಂ. ಕೆ. ಇಂದಿರಾ ಕಳೆದ ಸುಮಾರು ಮೂರು ದಶಕಗಳಲ್ಲಿ ಹೊರ ತಂದಿರುವ 60ಕ್ಕೂ ಹೆಚ್ಚು ಕೃತಿಗಳನ್ನು ಕುರಿತು ಇಲ್ಲಿ ಚರ್ಚಿಸುವುದು

ಅಸಾಧ್ಯ. ಯಾವುದೇ ಲೇಖಕಿ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ–ಸರಾಸರಿ ವರ್ಷಕ್ಕೆರಡು ಕೃತಿಗಳಂತೆ–ಪುಸ್ತಕ ರಚನೆ ಮಾಡಿದಾಗ ಅವುಗಳಲ್ಲಿ ಎಲ್ಲವೂ ಶ್ರೇಷ್ಠವೆನ್ನಿಸುವುದು ಅಸಂಭವ. ಇಂದಿರಾ ಅವರನ್ನೂ ಒಳಗೊಂಡಂತೆ ನಮ್ಮ ಅನೇಕ ಲೇಖಕಿಯರಲ್ಲಿ ಕಂಡುಬರುವುದು ಇಂಥ ಒಂದು ದೌರ್ಬಲ್ಯ. ಲೇಖಕಿಯೊಬ್ಬರು ತಮ್ಮ ಮೊದಲ ಒಂದೆರಡು ಕೃತಿಗಳಲ್ಲಿ ಯಶಸ್ಸನ್ನು ಸಾಧಿಸಿದರು ಎಂದರೆ ತೀರಿತು ; ಅವರ ಬೆನ್ನು ಹತ್ತುವ ಪ್ರಕಾಶಕರು, ಪತ್ರಿಕೆಯವರು ಅಧಿಕ ಸಂಖ್ಯೆಯಲ್ಲಿ ಹುಟ್ಟಿಕೊಳ್ಳುತ್ತಾರೆ. ಪತ್ರಿಕೆಗಳಲ್ಲಿ ನಿಯತಕಾಲಿಕೆಗಳಲ್ಲಿ ಒಬ್ಬ ನಿರ್ದಿಷ್ಟ ಲೇಖಕಿಯ ಕೃತಿ ಆಗ್ಗಿಂದಾಗ್ಗೆ ಕಣ್ಣಿಗೆ ಬೀಳ ತೊಡಗಿದೊಡನೆಯೇ, ಓದುಗರ ಗಮನ ಸಹಜವಾಗಿಯೇ ಅವರ ಮೇಲೆ ಕೇಂದ್ರೀಕೃತವಾಗುತ್ತದೆ. ಜನಮನ್ನಣೆ ಪತ್ರಿಕೆ-ಪ್ರಕಾಶಕರ ಪುರಸ್ಕಾರ ತಮ್ಮ ಪಾಲಿಗಿದೆ ಎಂದ ಕೂಡಲೆ ಸೃಜನಶೀಲ ಉದ್ದೇಶದಿಂದ ಅವರಲ್ಲಿ ಅಂಕುರಿಸಿದಂಥ ಬರವಣಿಗೆಯ ಹವ್ಯಾಸ, ವ್ಯಾಪಾರಿ ಮನೋಭಾವವನ್ನು ಕ್ರಮೇಣ ಲೇಪನ ಮಾಡಿ ಕೊಂಡು ಕೃತಿಗಳು 'ಉತ್ಪಾದನೆ'ಯಾಗತೊಡಗುತ್ತವೆ. ಪರಿಣಾಮ, ಕೆಲವೇ ವಿಶಿಷ್ಟ ಕೃತಿಗಳ ಜತೆಗೆ ಹಲವಾರು ಕಳಪೆ ಮಾಲಿನ ಸೃಷ್ಟಿ. ತಮ್ಮ ಪ್ರಾರಂಭದ ಕೃತಿಗಳಾದ ತುಂಗಭದ್ರ, ಸದಾನಂದ, ಗೆಜ್ಜೆಪೂಜೆ ಇವುಗಳ ಮೂಲಕ ಯಶಸ್ಸನ್ನು ಗಳಿಸಿದ ಎಂ. ಕೆ. ಇಂದಿರಾ ಅನಂತರ ಹಲವಾರು ಅಗ್ಗದ ಕೃತಿಗಳನ್ನು ಹೆಣೆಯತೊಡಗಿ, ಸಣ್ಣಕತೆಗಳು, ಪ್ರಬಂಧ, ಹರಟೆ, ಹಾಸ್ಯಬರಹ–ಹೀಗೆ ಅನೇಕ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬರವಣಿಗೆಯನ್ನು ಒಂದು ಉದ್ಯಮ ಮಟ್ಟಕ್ಕೆ ಕೊಂಡೊಯ್ದಿರುವುದರಿಂದ ಅವರ ಪುಸ್ತಕಗಳಲ್ಲಿ ಹೆಚ್ಚಿನವುಗಳ ಬಗ್ಗೆ ವಿಶೇಷ ವಿಮರ್ಶೆ ಅಗತ್ಯವಿಲ್ಲ ಎನ್ನಿಸುತ್ತದೆ.

ಎಂ. ಕೆ. ಇಂದಿರಾ ಅವರ ಕೃತಿಗಳು ಔನ್ನತ್ಯದಲ್ಲಿ ಕ್ರಮೇಣ ಹಾಗೆ ಕೆಳಗೆ ಜಾರಿರುವುದಕ್ಕೆ ಕಾರಣಗಳು ಹಲವಿರಬಹುದು. ಆದರೆ ನನ್ನ ವೈಯಕ್ತಿಕ ಅಭಿಪ್ರಾಯ ದಲ್ಲಿ ಇದಕ್ಕೆ ಮುಖ್ಯಕಾರಣ ಇಂದಿರಾ ಇನ್ನಿತರ ಲೇಖಕಿಯರಂತೆ ಸಣ್ಣ ವಯಸ್ಸಿನಲ್ಲಿ ಬರವಣಿಗೆಯಲ್ಲಿ ತೊಡಗದೆ ತಮ್ಮ ಅನುಭವವನ್ನು ಹಂತಹಂತವಾಗಿ ವಿಸ್ತರಿಸಿ ಕೊಳ್ಳದೇ ಇರುವುದು. ಅನುಭವ ರಸಗಟ್ಟಿನಿಂತು ಅದು ಪಕ್ವಗೊಂಡಾಗ ಬರೆಯಲು ಪ್ರಾರಂಭಿಸಿದ ಇವರಲ್ಲಿ ತುಂಬಿ ನಿಂತಿದ್ದ ಉತ್ಸಾಹದ ಬುಗ್ಗೆ ಮೊದಲ ಕಾದಂಬರಿ ಗಳಿಗೆ ವಿನಿಯೋಗವಾಗಿ ಆದನ್ನು ತುಂಬಿಕೊಳ್ಳುವ ಅವಕಾಶ ಅನಂತರದಲ್ಲಿ ಅವರಿಗೆ ದೊರೆಯದೇ ಹೋಗಿರಬಹುದು. ನಾನು ಪ್ರಾರಂಭದಲ್ಲೆ ಹೇಳಿದ ಹಾಗೆ ಲೇಖಕಿಯ ವೈಯಕ್ತಿಕ ಬದುಕನ್ನು ನಾವು ಪರಿಗಣಿಸಬಾರದು ಎನ್ನಿಸಿದರೂ ಇಂದಿರಾ ಅವರ ಖಾಸಗಿ ಬದುಕಿನಲ್ಲಿ ಸಂಭವಿಸಿದ ಹಲವಾರು ಘಟನೆಗಳೂ ಬರವಣಿಗೆಯ ಹಿಂದೆ ಕೆಲಸ ಮಾಡಿರಬಹುದು. ಇವರ ಬರವಣಿಗೆಗೆ ಒತ್ತಾಸೆಯಾಗಿದ್ದ ಪತಿಯ ಸಾವು ;

ಕೈಗೆ ಬಂದ ಮಗ ಅಕಾಲಿಕವಾಗಿ ಹಾಗೂ ವಿಚಿತ್ರ ಸನ್ನಿವೇಶದಲ್ಲಿ ನಿಧನವಾದ ಬಗೆ ; ಖಾಯಂ ನೆಲೆಯೊಂದಿಲ್ಲದೆ ಅದನ್ನು ದೊರಕಿಸಿಕೊಳ್ಳಲು ಇಂದಿಗೂ ಅವರು ನಡೆಸು ತ್ತಿರುವ ಪರದಾಟ ; ವಯೋಗುಣಕ್ಕೆ ಅನುಗುಣವಾಗಿ ತಲೆದೋರಿರುವ ಆಲಸ್ಯ ಹಾಗೂ ಮುಪ್ಪಿನ ಬಾಧೆಗಳು ; ಇಳಿ ವಯಸ್ಸಿನಲ್ಲಿ ಯಾರಿಗೂ ಭಾರವಾಗಬಾರದೆಂಬ ಸ್ವಾಭಿಮಾನವನ್ನು ಕಾಯ್ದುಕೊಳ್ಳುವಲ್ಲಿ ಆತಂಕ, ಇಂಥವು. ಇವೆಲ್ಲ ನಾನು ಅವರನ್ನು ಹತ್ತಿರದಿಂದ ಗಮನಿಸುವುದರ ಪರಿಣಾಮವಾಗಿ ಮೂಡಿರುವ ಅಭಿಪ್ರಾಯಗಳು.

ಇವೆಲ್ಲವನ್ನೂ ಬದಿಗಿಟ್ಟು ಸಾಹಿತ್ಯಿಕವಾಗಿ ಎಂ. ಕೆ. ಇಂದಿರಾ ಅವರ ಕೃತಿಗಳತ್ತ ವಿಸ್ತಾರ ನೋಟ ಹರಿಸಿ ಅವರ ಒಟ್ಟಾರೆ ದೃಷ್ಟಿಕೋನವನ್ನು ಗಮನಿಸಿದಾಗ ಈ ಕೆಳಗಿನ ಪ್ರಮುಖ ಅಂಶಗಳು ಬೆಳಕಿಗೆ ಬರುತ್ತವೆ :

1. ಇಂದಿರಾ ತಮ್ಮ ಸಮಕಾಲೀನ ಲೇಖಕಿಯರಂತಲ್ಲದೆ ಸಾಮಾನ್ಯ ವಿಷಯ ಗಳಿಂದ ಹೊರ ಸರಿದು ಹೆಣ್ಣಿನ ಅಳಲುಗಳಿಗೆ, ಆಕೆಯ ಹಿರಿಮೆಗೆ ಹಾಗೂ ಸಾಮಾಜಿಕವಾಗಿ ಆಕೆ ಎದುರಿಸಬಹುದಾದ ಸನ್ನಿವೇಶಗಳಿಗೆ ಗಮನ ನೀಡುತ್ತಾರೆ.

2. ಇವರ ಕೆಲವು ಕೃತಿಗಳು ವಿಚಾರಪ್ರಿಯರನ್ನೂ ಪ್ರಚೋದಿಸುವಷ್ಟು ವೈವಿಧ್ಯಮಯವಾಗಿದೆ.

3. ಮಲೆನಾಡ ಪ್ರಕೃತಿಯ ರಮ್ಯತೆಯನ್ನು ಸ್ವತಃ ಸವಿದಿರುವ ಇವರು ಸಾಧ್ಯವಾದೆಡೆಯಲ್ಲೆಲ್ಲ ಅದರ ಬಣ್ಣನೆಗೆ ಒತ್ತುಕೊಟ್ಟು ದೃಶ್ಯಾವಳಿ ಯನ್ನು ನಿರ್ಮಿಸುವ ಸಾಮರ್ಥ್ಯ ಪಡೆದಿದ್ದಾರೆ.

4. ಇವರು ಕೃತಿಗಳಲ್ಲಿ ಅನೇಕರನ್ನು ವಸ್ತು, ಭಾಷೆ, ಶೈಲಿಯ ಮೂಲಕ ರೋಚಕವಾಗಿಸುತ್ತಾರೆ ; ಮನಸ್ಸನ್ನು ತೀವ್ರವಾಗಿ ಮೊಟುತ್ತಾರೆ. ಸ್ತ್ರೀಯರ ಉನ್ನತಿ, ಸಮಾಜ ಸುಧಾರಣೆ ಇವುಗಳ ಬಗ್ಗೆ ಇವರಿಗೆ ಹೆಚ್ಚು ಕಾಳಜಿ ಇರುವುದು ಸ್ಪಷ್ಟವಾಗುತ್ತದೆ.

5. ಮಡಿವಂತಿಕೆಗೆ ಹೆಚ್ಚು ಪ್ರಾಶಸ್ತ್ಯ ನೀಡದೆ, ಆಚಾರ-ವಿಚಾರಗಳು ಹೇಗೆ ವ್ಯಕ್ತಿಯ ಬೆಳವಣಿಗೆಯನ್ನು ಕುಂಠಿತಗೊಳಿಸಬಲ್ಲವು ಎಂಬು ದನ್ನು ಇವರು ಎತ್ತಿಹಿಡಿಯುತ್ತಾರೆ. ಇವರ ಕೆಲವು ಪಾತ್ರಗಳು

ಪಿಥಿಗೆ ತಲೆಬಾಗಿಯೂ ಸುತ್ತಲಿನವರ ಬದುಕನ್ನ ಅರ್ಥಗರ್ಭಿತವಾಗಿಸುತ್ತವೆ.

ಇಷ್ಟನ್ನು ಹೇಳಿದ ನಂತರ ಇವರ ಅತ್ಯುತ್ತಮ ಕೃತಿಗಳು ಎನ್ನಿಸಿದವುಗಳ ಬಗ್ಗೆ ಕೆಲವು ಮಾತುಗಳು. ಮೊದಲು ಗಮನ ಸೆಳೆಯಬಹುದಾದ ಅವರ "ಫಣಿಯಮ್ಮ" ಕಾದಂಬರಿ. ಹಿಂದೆ ಆಗಿ ಹೋದವರ ಜೀವನದ ಇತಿಹಾಸ ಹಾಗೂ ಸಾಮಾಜಿಕ ಬೆಳವಣಿಗೆಯನ್ನು ತಿಳಿಸುವ ದೃಷ್ಟಿಯಿಂದ ಇದು ಮಹತ್ವದ್ದು ಎಂದು ನನಗನ್ನಿಸಿದೆ. ಸ್ತ್ರೀ ಜೀವನದ ದುಸ್ತರತೆ, ಅದು ದಾಟಿ ಬಂದ ಹಲವಾರು ಸಂಕಷ್ಟದ ಹಂತಗಳು ಇವನ್ನು ತಿಳಿಯಲು ಸಮಾಜ ಶಾಸ್ತ್ರಜ್ಞರ ದಾಖಲೆ ಕೂಡಿಟ್ಟಂಥ ಮಾಹಿತಿ ಮಾತ್ರ ಸಾಲದು, ಈ ಘಟ್ಟಗಳಲ್ಲಿ ಮಹಿಳೆಯರು ಬಾಳಿ ಬದುಕಿದ ರೀತಿಯನ್ನು ಯಥಾವತ್ತಾಗಿ ಚಿತ್ರಿಸುವಂಥ ಕಥೆ-ಕಾದಂಬರಿಗಳೂ ಬೇಕು. ಎಂ. ಕೆ. ಇಂದಿರಾ ಅವರ "ಫಣಿಯಮ್ಮ" ಇಂಥದೊಂದು ಮಹತ್ತರ ಕಾರ್ಯವನ್ನು ಯಶಸ್ವಿಯಾಗಿ ಪೂರೈಸುತ್ತದೆ.

ತಮ್ಮ ಅಜ್ಜನ ಸೋದರಿಯಾಗಿದ್ದ, 112 ವರ್ಷಗಳ ತುಂಬು ಜೀವನದುದ್ದಕ್ಕೂ ಪರರಿಗೆ ನೆರವಾಗುವುದರಲ್ಲೇ ಬಾಳಿನ ಕೃತಾರ್ಥತೆಯನ್ನು ಕಂಡುಕೊಂಡಿದ್ದಂಥ ವಯೋವೃದ್ಧೆ ಫಣಿಯಮ್ಮನ ಜೀವನವನ್ನು ಹತ್ತಿರದಿಂದ ಕಂಡು ಅದನ್ನು ಅತ್ಯಂತ ಸ್ವೈಜವಾಗಿ ನಿರೂಪಿಸಿರುವುದರಿಂದಲೇ 'ಫಣಿಯಮ್ಮ' ಉತ್ತಮ ಕೃತಿಗಳ ಸಾಲಿಗೆ ಸೇರುತ್ತದೆ. ಈ ಕಾದಂಬರಿಯ ಮೂಲಕ ಲೇಖಕಿ ಹೆಣ್ಣಿನ ಜೀವನದ ಅಸಂಗತ ಹಾಗೂ ಅನಿವಾರ್ಯ ಸನ್ನಿವೇಶಗಳನ್ನು ಚಿತ್ರಿಸುವುದಲ್ಲದೆ, ಸುಮಾರು 150 ವರ್ಷಗಳ ಕೆಳಗೆ ಇದೇ ಸಮಾಜದಲ್ಲಿ ರೂಢಿಯಲ್ಲಿದ್ದ ಹಾಗೂ ಈಗಲೂ ಅಲ್ಲಲ್ಲಿ ತಲೆ ಎತ್ತುತ್ತಿರುವ ಅನಿಷ್ಟ ಸಂಪ್ರದಾಯಗಳು, ಸಾಮಾಜಿಕ ಚೌಕಟ್ಟುಗಳು ಹಾಗೂ ಅರ್ಥಹೀನ ಕಂದಾಚಾರಗಳನ್ನು ಮನಮುಟ್ಟುವಂತೆ ತೆರೆದಿಡುತ್ತಾರೆ. ಅಂದಿನ ಮಹಿಳೆಯರು ಬದುಕಿಗೆ ತಮ್ಮನ್ನು ನೇರವಾಗಿ ಒಡ್ಡಿಕೊಂಡು ತಮ್ಮ ಮೇಲೆ ಹೇರಲ್ಪಟ್ಟ ದುಷ್ಟವಿಧಿಗಳನ್ನೆಲ್ಲ ತಲೆಬಾಗಿ ಸ್ವೀಕರಿಸುತ್ತಿದ್ದ ರೀತಿ ಓದುಗರ ಮನ ಕರಗಿಸುತ್ತದೆ. ಕಾದಂಬರಿಯ ಭಾಷೆ ಸೊಗಸಾಗಿದೆ, ಅದರಲ್ಲಿ ಸ್ವೈಜತೆಯಿದೆ. ಫಣಿಯಮ್ಮ ಹಾಗೂ ಅವಳ ಕಾಲದಲ್ಲೇ ಬದುಕಿದ್ದ ಶೇಷಮ್ಮ ಇವರ ದಾರುಣ ಜೀವನವನ್ನು ಚಿತ್ರಿಸಿರುವ ರೀತಿ ಈ ಇಬ್ಬರು ಮಹಿಳೆಯರ ಬಗ್ಗೆ ಅನುಕಂಪವೇ ಅಲ್ಲದೆ ಗೌರವವನ್ನೂ ಮೂಡಿಸುತ್ತದೆ. ಫಣಿಯಮ್ಮನ ಜೀವನ ಮತ್ತೆ ಮಹಿಳೆಯರ ಬದುಕಿನಲ್ಲಿ ಎಂದೂ ಪುನರಾವರ್ತನೆಗೊಳ್ಳಬಾರದೆಂಬ ಎಚ್ಚರಿಕೆಯ ದನಿ ಈ ಕಾದಂಬರಿಯಲ್ಲಿದೆ. ಈ ಕಾರಣಕ್ಕಾಗಿಯೇ ಅದು ಪ್ರಸ್ತುತವಾಗುತ್ತದೆ.

ಓದುಗರ ಮೆಚ್ಚುಗೆಯನ್ನು ಗಳಿಸಿಕೊಂಡಿರುವ ಎಂ. ಕೆ. ಇಂದಿರಾ ಅವರ ಮತ್ತೊಂದು ಕೃತಿ "ಗೆಜ್ಜೆಪೂಜೆ". ಇದಕ್ಕೆ ಆಯ್ದುಕೊಂಡಿರುವ ವಿಷಯ ಈಗಾಗಲೇ ಸವಕಲಾಗಿರುವ ವೇಶ್ಯಾಸಮಸ್ಯೆಯೇ ಆದರೂ ಅದರ ಸುತ್ತಲೂ ಸನ್ನಿವೇಶಗಳ ಜಾಲವನ್ನೇ ನಿರ್ಮಿಸಿ ಓದುಗರನ್ನು ತನ್ಮಯರಾಗಿಸುವಲ್ಲಿ ಇಂದಿರಾ ತೋರುವ ಜಾಣ್ಮೆ ಅವರನ್ನು ಅತ್ಯಂತ ಪ್ರಭಾವಶಾಲಿ ಬರಹಗಾರ್ತಿಯರ ಗುಂಪಿಗೆ ಸೇರಿಸುತ್ತದೆ.

ವೇಶ್ಯೆಯರಾಗಿ ಹುಟ್ಟದಿದ್ದರೂ ಆ ಮನೆತನದ ಹಣೆಪಟ್ಟಿಯನ್ನು ಅಂಟಿಸಿಕೊಂಡು ನಿಂದೆ ಅಪಮಾನಗಳ ಹೊರೆ ಹೊತ್ತು ತಮ್ಮ ಜೀವನವನ್ನೇ ತೆತ್ತ ಅಪರ್ಣಾ ಹಾಗೂ ಅವಳ ಮಗಳು ಚಂದ್ರ ಓದುಗರಲ್ಲಿ ಕನಿಕರವನ್ನು ತುಂಬಿಸುತ್ತಾರೆ. ಹೊಟ್ಟೆ ಹೊರೆಯೆ ಮನೆತನದ ಕಸುಬನ್ನೇ ಮುಂದುವರಿಸಬೇಕೆಂದು ಅವರಿಬ್ಬರಿಗೂ ಆಶ್ರಯ ಕೊಟ್ಟಿದ್ದ ವೇಶ್ಯೆ ಅವರನ್ನು ಒತ್ತಾಯಿಸಿದಾಗ, ಅವರ ಅಸಹಾಯಕ ಸ್ಥಿತಿಯನ್ನು ಕಂಡು ಓದುಗರ ಮನ ಮರುಗುತ್ತದೆ; ಸಾಮಾಜಿಕ ಪ್ರಜ್ಞೆ ಉದ್ರೇಕಗೊಳ್ಳುತ್ತದೆ. ಕಾದಂಬರಿ ಹಿಂದಿನ ನೀತಿಮಂಜರಿಗಳಿಗಿಂತಲೂ ಭಿನ್ನವಾಗಿದ್ದರೂ ಯಾವುದೋ ಒಂದು ನೀತಿಯ ಸುತ್ತಲೇ ತಿರುಗುತ್ತದೆ. ಉದಾಹರಣೆಗೆ, ಇಲ್ಲಿ ಲೇಖಕಿ ಎತ್ತಿ ಹಿಡಿಯಲು ಪ್ರಯತ್ನಿಸುವ ಸತ್ಯ—ಕ್ಷಣಿಕ ಸುಖಕ್ಕಾಗಿ ಹೆಣ್ಣು ದೇಹ ತೆತ್ತಾಗ ಅದರ ಫಲ ಉಣ್ಣುವುದು ಗಂಡಲ್ಲ, ಹೆಣ್ಣು ಮಾತ್ರ ಎಂಬುದು.

'ಸದಾನಂದ' ಮೂರನೇ ಮುದ್ರಣ ಕಂಡಿರುವ 971 ಪುಟಗಳ ಸುದೀರ್ಘ ಕಾದಂಬರಿ (ಇದರ ಮುಂದಿನ ಭಾಗ , 'ಮಧುವನ"). ಪ್ರೇಮ ವಿವಾಹ, ವಿಧವಾ ವಿವಾಹ ಇಲ್ಲಿನ ಪ್ರಮುಖ ವಸ್ತು. ವ್ಯಕ್ತಿಯೊಬ್ಬನನ್ನು ಸಕಲ ವಿದ್ಯಾಪಾರಂಗತನನ್ನಾಗಿ ಮಾಡಿ ಅವನ ಬಗ್ಗೆ ಓದುಗರಲ್ಲಿ ಅಭಿಮಾನ ಮೂಡಿಸುವುದು ಲೇಖಕಿಯ ಉದ್ದೇಶ. "ಬಯಲು ಸೀಮೆಯಲ್ಲಿ ಹೂಬಿಟ್ಟ ಮಲೆನಾಡ ಹೂಬಳ್ಳಿ" ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಇಂದಿರಾ ಈ ಕಾದಂಬರಿಯಲ್ಲಿ ಮಲೆನಾಡ ಪರಿಸರದಿಂದ ಹೊರಕ್ಕೂ ಸರಿಯುತ್ತಾರೆ.

'ತುಂಗ-ಭದ್ರ'ದಂತಹ ಮುಗ್ಧತೆಯೇ ಮೂರ್ತಿವೆತ್ತಂತಿರುವ ಸುಂದರ ಕೃತಿಯಲ್ಲಿ ಇಂದಿರಾ ಅವರಿಗೆ ಮಲೆನಾಡ ಪರಿಸರದಲ್ಲಿರುವ ತುಂಬು ಅಭಿಮಾನ, ಗ್ರಾಮ್ಯ ಭಾಷೆಯಲ್ಲಿನ ನಿಪುಣತೆ, ಪಾತ್ರ ಚಿತ್ರಣದಲ್ಲಿರುವ ಚಮತ್ಕಾರ ಹಾಗೂ ಸೀಮಿತ ಚೌಕಟ್ಟಿನಲ್ಲೇ ಕತೆಯನ್ನು ಹಂತಹಂತವಾಗಿ ಓದುಗರ ಹೃದಯಕ್ಕೆ ನೇರವಾಗಿ ಕೊಂಡೊಯ್ಯಬಲ್ಲ ಕಲೆ ಇವೆಲ್ಲವೂ ಮೈಗೂಡಿದೆ ಎನ್ನಿಸುತ್ತದೆ. ಹಟ್ಟುಕುರುಡಿಯರಾದ ಅವಳಿಗಳು ತುಂಗ ಭದ್ರರನ್ನು ಅನಕ್ಷರಸ್ಥರನ್ನಾಗಿಸಿಯೂ ಅವರಲ್ಲಿರುವ

ಸೂಕ್ಷ್ಮತೆ, ಜಾಣತನ, ಮಾನವೀಯತೆಯನ್ನು ಇಂದಿರಾ ಪ್ರಭಾವಶಾಲಿಯಾಗಿ ಸುತ್ತಾರೆ. ಇಂದಿನ ವಾತಾವರಣಕ್ಕೆ "ತುಂಗಭದ್ರ" ಕಾದಂಬರಿ ಅವಾಸ್ತವಿಕ ವೆನ್ನಿಸಬಹುದು. ಆದರೆ ಲೇಖಕಿ ಮುನ್ನುಡಿಯಲ್ಲಿ ಬರೆದಿರುವಂತೆ "ಮಲೆನಾಡಿನ ಹವ್ಯಕರ ಕುಟುಂಬಕ್ಕೆ ಸಂಬಂಧಿಸಿದಂತಿರುವ ಈ ಕತೆಯು ಸತ್ಯಕ್ಕೆ ಸಮೀಪವೆಂದು ಭಾವಿಸಿದರೂ ತಪ್ಪಿಲ್ಲ. ಈ ಸತ್ಯ ಶಿಲ್ಪಕ್ಕೆ ಹಿತಮಿತವಾಗಿ ಭೂಷಣವೆಂಬಂತೆ ನನ್ನ ಕಲ್ಪನೆಯ ಕವಚ ತೊಡಿಸಿದ್ದೇನೆ. ಕಾದಂಬರಿಯಲ್ಲಿ ನಡೆದ ಘಟನೆಗಳು ಸುಮಾರು ಮೂವತ್ತೈದು ವರ್ಷಗಳ ಹಿಂದಿನದಾದುದರಿಂದ ಭಾಷೆ ಭಾವನೆಗಳು ಅಂದಿನ ಸಮಕಾಲೀನತೆಗೆ ಹೊಂದಿಕೊಂಡಿದೆ."

ಇಂದಿರಾ ಅವರ ಮಿಕ್ಕ ಕಾದಂಬರಿಗಳು ಸಾಹಿತ್ಯಕ ಮಟ್ಟದ ಅಥವಾ ಭಾಷೆ, ಶೈಲಿಯ ದೃಷ್ಟಿಯಿಂದ ಅಷ್ಟೇನೂ ಮಹತ್ವವಲ್ಲದಿದ್ದರೂ 'ಕತೆಗಾರ'ದಲ್ಲಿ ಹೊಸ ರಚನಾ ತಂತ್ರವನ್ನು ಅಳವಡಿಸಿಕೊಂಡು ಕಾದಂಬರಿಯ ನಾಯಕ ತನ್ನ ಕಥೆಯನ್ನು ತಾನೇ ನಿರೂಪಿಸಿಕೊಳ್ಳುತ್ತಾನೆ. ಇದೇ ತಂತ್ರವನ್ನೊಳಗೊಂಡ ಮತ್ತೊಂದು ಕಾದಂಬರಿ "ಡಾಕ್ಟರ್" - ದೈಹಿಕ ಬಯಕೆಗೆ ಬಲಿಯಾಗಿ ಆ ಆಸೆಯನ್ನು ಪೂರೈಸಿ ಕೊಂಡನಂತರ ತಮ್ಮ ಪಾಪಕೃತ್ಯಗಳನ್ನು ಮತ್ತೊಬ್ಬರ ಮೇಲೆ ಹೇರುವ ಕಪಟಿಗಳ ವರ್ತನೆಯನ್ನು "ಜಾತಿ ಕೆಟ್ಟವರು" ಕಾದಂಬರಿಯಲ್ಲಿ ಬಯಲಿಗೆಳೆಯಲಾಗಿದೆ. "ಆತ್ಮ ಸಖಿ"ಯಲ್ಲಿ ಇಂದಿರಾ ಅವರ ಸಮೀಪ ಬಂಧುಗಳಾದ ಅನಂತಶರ್ಮ - ಸಾವಿತ್ರಿಯರ ವಿಲಕ್ಷಣ ಹಾಗೂ ಸಮಾಜಬಾಹಿರ ಬದುಕಿನ ಚಿತ್ರಣವಿದೆ.

ಎಂ. ಕೆ. ಇಂದಿರಾ ಅವರ "ಯಾರು ಹಿತವರು" ಮತ್ತು "ಸುಖಾಂತ"ದಲ್ಲಿ ಸರಳೀಕರಣ ಪ್ರವೃತ್ತಿ ಕಂಡುಬರುತ್ತದೆ. "ಹೂಬಾಣ" ಕಾದಂಬರಿಯನ್ನು ಡಾಕ್ಟರ ರೊಬ್ಬರ ಜೀವನವನ್ನು ಆಧರಿಸಿ ಬರೆದದ್ದು. ಸುಂದರ ಶೈಲಿಯ ಈ ಕೃತಿ ಲೇಖಕಿ ಭಾಷೆಯೊಡನೆ ಎಷ್ಟು ಲೀಲಾಜಾಲವಾಗಿ ವಿಹರಿಸಬಲ್ಲರು ಎಂಬುದನ್ನು ತೋರಿಸುವು ದಲ್ಲದೆ ಕಥಾರಚನ ಕೌಶಲವನ್ನು ಎತ್ತಿಹಿಡಿಯುತ್ತದೆ. "ಗಿರಿಬಾಲೆ"ಯಲ್ಲಿ ಬಲವಂತದ ಮದುವೆಯಿಂದಾಗುವ ಅನಾಹುತವಿದೆ. "ಶಾಂತಿಧಾಮ"ದಲ್ಲಿ ಆಶಾವಾದಿಯಾಗಿ ಜೀವನ ಪ್ರಾರಂಭಿಸಿ ತುಂಬು ಸಂಸಾರದ ಪ್ರತಿಯೊಬ್ಬನೂ ಒಂದೊಂದು ಹಾದಿ ಯನ್ನು ಹಿಡಿದಾಗ ಜೀವನದ ಬಗ್ಗೆ ಉತ್ಸಾಹವನ್ನು ಕಳೆದುಕೊಂಡು ಏಕಾಂಗಿಯಾಗಿ "ಶಾಂತಿಧಾಮ"ದೆಡೆಗೆ ಸಾಗುವ ಶ್ರೀನಿವಾಸರಾಯರ ಜೀವನ ವಸ್ತುವಾಗಿದೆ. "ಮುಸುಕು" ಆಕಸ್ಮಿಕಗಳ ಕಗ್ಗಂಟು. "ಹೆಣ್ಣಿನ ಆಕಾಂಕ್ಷೆ"ಯೂ ಇನ್ನಿತರ ಕೆಲವು ಕಾದಂಬರಿಗಳಂತೆಯೇ ಹಲವಾರು ಅಡೆತಡೆಗಳ ನಂತರ ಹೆಣ್ಣು-ಗಂಡುಗಳ ವಿವಾಹ ವನ್ನು ನೆರವೇರಿಸಲೆಂದೇ ಬರೆದಂತಿದೆ. ತಮ್ಮ "ನಾಗವೀಣಾ" ಕಾದಂಬರಿಗೆ ಇತ್ತ

ಸಾಮಾಜಿಕವೂ ಅಲ್ಲದ ಅತ್ತ ಐತಿಹಾಸಿಕವೂ ಅಲ್ಲದ ವಸ್ತುವನ್ನು ಆಯ್ದುಕೊಂಡಿರುವ ಇಂದಿರಾ ಅಂಥ ಶ್ರದ್ಧೆಯನ್ನು ಪ್ರತಿಪಾದಿಸಲು ಹೊರಟು ಕಾದಂಬರಿಯನ್ನು ಇಂದಿನ ಪರಿಸರಕ್ಕೆ ಹೊರತಾಗಿಯೇ ಉಳಿಸುತ್ತಾರೆ. ಹೆಣ್ಣಿನ ತ್ಯಾಗವನ್ನು ಚಿತ್ರಿಸ ಹೊರಟರೂ ಅದರ ಹಿಂದಿರುವುದು ಸದುದ್ದೇಶವಲ್ಲದ ಕಾರಣ ಕಾದಂಬರಿಯ ನಾಯಕಿ ಅನುಕಂಪವನ್ನು ಗಳಿಸಿಕೊಳ್ಳುವುದೇ ಇಲ್ಲ.

"ತಾಪದಿಂದ ತಂಪಿಗೆ" ಹಾಗೂ "ಟುಲೆಟ್" ಈ ಎರಡೂ ಕಾದಂಬರಿಗಳು ಅತ್ಯಂತ ಕಳಪೆ ಎನಿಸುವಂಥ ಕೃತಿಗಳು. ಸಾಮಾಜಿಕ ಸಮಸ್ಯೆಗಳಲ್ಲೊಂದಾದ ವರದಕ್ಷಿಣೆಯನ್ನೇ ಮೂಲವಾಗಿಟ್ಟುಕೊಂಡು "ಮನೆ ತುಂಬಿದ ಮಡದಿ" ಬರೆಯಲಾಗಿದೆ. ಆಕರ್ಷಕ ನಿರೂಪಣೆಯಿಂದಾಗಿ ಮನಸೆಳೆಯುವ ಇವರ ಕಾದಂಬರಿಯೆಂದರೆ "ಜಾತಿ ಕೆಟ್ಟವಳು." ಈ ಹಿಂದಿನ ಕೆಲವು ಕಾದಂಬರಿಗಳಂತೆಯೇ ಇಂದಿರಾ ಇಲ್ಲಿಯೂ ತಮ್ಮ ಪರಿಚಯವನ್ನು ಹೇಳಿಕೊಳ್ಳುವ ಜವಾಬ್ದಾರಿಯನ್ನು ಪಾತ್ರಗಳಿಗೇ ಒಪ್ಪಿಸುತ್ತಾರೆ. "ವರ್ಣಲೀಲೆ" ಯುವಕ ಯುವತಿಯರ ಪ್ರೇಮದ ಪರಿಣಾಮವಾಗಿ ಉಂಟಾಗುವ ಅಲ್ಲೋಲ ಕಲ್ಲೋಲಗಳನ್ನು ಚಿತ್ರಿಸುತ್ತದೆ. "ಹಸಿವು", "ಆಭರಣ", "ಒಂದೇ ನಿಮಿಷ", "ಗುಂಡ", "ಜಾಲ", "ಬಿದಿಗೆ ಚಂದ್ರಮ ಡೊಂಕು", "ಚಿದ್ವಿಲಾಸ" ಮುಂತಾದುವನ್ನು ಓದಿದಾಗ ಕಥಾವಸ್ತು ಹದವಾಗುವುದಕ್ಕೆ ಮೊದಲೇ ಅವಸರಪಟ್ಟು ಇಂದಿರಾ ಅದನ್ನು ಕೃತಿರೂಪಕ್ಕೆ ಇಳಿಸಿದ್ದಾರೆ ಎನ್ನಿಸುತ್ತದೆ.

ಎಂ.ಕೆ. ಇಂದಿರಾ ಅವರ ಕಥಾ ಸಂಕಲನಗಳಲ್ಲಿ ಅವರ ಇತ್ತೀಚಿನ "ಪವಾಡ"ದ ಕಥೆಗಳಲ್ಲಿ ಕೆಲವು ಚಿಂತನೆಗೆ ಯೋಗ್ಯವಾಗಿವೆ. "ಪವಾಡ"ದಲ್ಲಿ ಮೂಢ ನಂಬಿಕೆಗಳ ಬಗ್ಗೆ ಅಣಕವಾಡುವಂಥ ಸನ್ನಿವೇಶವನ್ನು ಕಲ್ಪಿಸುತ್ತಾರಾದರೂ ಪೇಲವ ಬರವಣಿಗೆಯಿಂದಾಗಿ ಅದು ತನ್ನ ಸ್ವಾರಸ್ಯವನ್ನು ಉಳಿಸಿಕೊಳ್ಳದೇ ಹೋಗುತ್ತದೆ. ಇದೇ ಸಂಕಲನದ "ಪೊಲೀಸ್ ಪುಟ್ಟಮ್ಮ" ಹೆಚ್ಚಿನ ಚಾತುರ್ಯ, ಬುದ್ಧಿಮತ್ತೆಯನ್ನು ಎತ್ತಿ ಹಿಡಿಯುವಂಥ ಕಥೆ. "ಸುಸ್ವಾಗತ" ಸಂಕಲನದ "ಒಂದು ಜೀವನ (ಪತ್ರ) ಚಿತ್ರ"ದಲ್ಲಿ ಹರಿಜನ ಸಮಸ್ಯೆಯನ್ನು ಆಯ್ದುಕೊಂಡೂ ಲೇಖಕಿ ಸೋಲುವಾಗ ಇವರ ಸಾಮಾಜಿಕ ಕಾಳಜಿಗಳಿಗೆ ಯಾವ ತಳಹದಿಯೂ ಇಲ್ಲದಿರುವುದು ಸ್ಪಷ್ಟವಾಗುತ್ತದೆ. "ನವಜೀವನ" ಸಂಕಲನದ "ನಾ ಒಲ್ಲೆ ಅಪ್ಪಯ್ಯ", "ದಯೆ ಎಲ್ಲುಂಟು ಗೊತ್ತುಂಟಾ" ; "ಗೆದ್ದಲು ತಿಂದ ಸಂಸ್ಥಾನ" ; "ದಶಾವತಾರ" ಸಂಕಲನದ "ಕಷ್ಟ ಸುಖ" ; "ಸ್ಫೂರ್ತಿ" ಸಂಕಲನದ "ವಧು ಬೇಕಾಗಿದೆ", "ಕೃತಜ್ಞತೆ", "ಮೌನ-ಗೌರಿ"; "ಅಂಬರದ ಅಪ್ಸರೆ" ಸಂಕಲನದ "ಮಲೆನಾಡು ಮಲ್ಲಿಗೆ"; "ನವರತ್ನ" ಸಂಕಲನದ "ಪಶ್ಚಿಮ

ಕರಾವಳಿ", "ನಾ ಕಂಡ ನರಕ" ಉತ್ತಮ ಕಥೆಗಳು. "ಕಲ್ಪನಾ ವಿಲಾಸ"ದ ಕಥೆಗಳಲ್ಲಿ ಪ್ರೇಮ ವಿವಾಹಗಳ ಜತೆಗೆ, ಉತ್ತಮ ಹಾಸ್ಯ ಪ್ರಸಂಗಗಳೂ ಇವೆ ; ಪರ್ವತಾರೋಹಣಕ್ಕೆ ಹೊರಟಿದ್ದ ಯುವಕನೊಬ್ಬನ ಪ್ರಾಣ ಉಳಿಸಿದ ಗುಡ್ಡಗಾಡು ಜನರ ಔದಾರ್ಯವನ್ನು ತೋರಿಸುವ "ಸತ್ಕಾರ" ಇಂದಿರಾ ಅವರ ಪ್ರಬುದ್ಧತೆಗೆ ಸಾಕ್ಷಿಯಾಗುತ್ತದೆ.

"ಕಂಬ ಇಲ್ಲದೆ ಮನೆ ಕಟ್ಟುವುದಿಲ್ಲ" ಎಂಬುದಾಗಿ ಎಂ. ಕೆ. ಇಂದಿರಾ ನನಗಿತ್ತ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ. "ಕಷ್ಟದ ಒದೆ ಬಿದ್ದಾಗ ನನಗೆ ತನ್ನಾನೇ ಸ್ಫೂರ್ತಿಯೊದಗುತ್ತದೆ. ಕಂಡು ಕೇಳಿದ ಘಟನೆಗಳನ್ನು ಆಧರಿಸಿ, ಅದಕ್ಕೊಂದಿಷ್ಟು ಕಲ್ಪನೆಯನ್ನು ಸೇರಿಸಿ ಅವನ್ನು ನೈಜವಾಗಿಸಲು ಪ್ರಯತ್ನಿಸುತ್ತೇನೆ" ಎಂಬುದೂ ಇವರ ವಿವರಣೆ. ಸಮಕಾಲೀನರಲ್ಲಿ ಅತ್ಯುತ್ತಮ ಲೇಖಕಿಯರ ಸಾಲಿಗೆ ಸೇರುವ ಎಂ. ಕೆ. ಇಂದಿರಾ ಬದುಕಿಗೆ ಈ ಬಗೆಯಾಗಿ ಸ್ಪಂದಿಸುವುದರಿಂದಾಗಿಯೇ ಅವರ ಕೆಲವು ಕೃತಿಗಳು ವಿಶಿಷ್ಟವೆನ್ನಿಸುತ್ತವೆ.

> ಗಿಡಗಳ ನಡುವೆ ಒಂದು ಪುಟ್ಟ ಮಸೀದಿಯಿತ್ತು. ಡ್ರೈವರು ಅದರ ಮುಂದೆ ಮಂಡಿಯೂರಿ ಕುಳಿತು ಅಂಗೈ ಜೋಡಿಸಿ ಕಣ್ಣು ಮುಚ್ಚಿ ನಮಾಜ್ ಮಾಡಿದರು. ಆಗಲೇ ನನಗೆ ತಿಳಿದಿದ್ದು-ಅವರು ಮಹಮ್ಮದೀಯರೆಂದು. ಕಂಡಕ್ಟರು ಹಿಂದುವಾದರೂ ಆತನೂ ಕರ ಜೋಡಿಸಿ ಕಣ್ಮುಚ್ಚಿ ಪ್ರಾರ್ಥನೆ ಮಾಡಿದ. ಇದನ್ನು ನಿಜವಾದ ಮಾನವೀಯತೆ ಅನ್ನುವುದಕ್ಕಿಂತ ದೈವಿಕತೆ ಅನ್ನಬಹುದು. ಅವರ ಪೂಜೆ ಪ್ರಾರ್ಥನೆಗೆ ನಮ್ಮಂತೆ ದೈಹಿಕ ಶುದ್ಧಿ, ಮಡಿ ಮುಖ್ಯವಲ್ಲ. ಆತ್ಮಶುದ್ಧಿ ಮಾತ್ರ ಮುಖ್ಯ. ಕೇವಲ ಐದು ನಿಮಿಷಗಳಲ್ಲಿ ಅವರ ಪ್ರಾರ್ಥನೆ ಮುಗಿಯಿತು. ಮತ್ತೆ ತಮ್ಮ ಕರ್ತವ್ಯದ ದೇವರನ್ನು ಪೂಜಿಸಲು ಸರಸರ ಬಂದು ಬಸ್ಸನ್ನೇರಿದರು.
>
> (ಅನುಭವ ಕುಂಜ – ಪುಟ-52)

‘ತಪೋವನದಲ್ಲಿ’ ಮತ್ತು ‘ಜರತಾರಿ ಜಗದ್ಗುರು’ : ಒಂದು ಅವಲೋಕನ

○
○
○ **ವಿಜಯಾ ಸುಬ್ಬರಾಜ್**

ಪ್ರತಿಯೊಬ್ಬ ಬರಹಗಾರನೂ ತಾನು ಬದುಕುತ್ತಿರುವ ಸಮಾಜವೊಂದರ ಅನಿವಾರ್ಯ ಘಟಕ. ಅವನ ಬರಹಕ್ಕೆ ಬೇಕಾದ ಅನುಭವ ಸಾಮಗ್ರಿ ಅವನು ಬದುಕುತ್ತಿರುವ ಸಮಾಜದೊಳಗಿಂದಲೇ ಒದಗಿಸಿಕೊಳ್ಳುತ್ತಾನೆ. ತನ್ನ ಸಮಕಾಲೀನ ಸಾಮಾಜಿಕ ಬದುಕಿನ ಅರಿವು ಪ್ರತಿಯೊಂದು ಕೃತಿಯಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಹಾಸು ಹೊಕ್ಕಂತೆ ಇದ್ದೇ ಇರುತ್ತದೆ.

ಬಹುಮುಖ ಸಮಾಜದ ಸಮಗ್ರ ಜೀವನ ದರ್ಶನದ ವಿಭಿನ್ನ ಮಜಲುಗಳು ವಿವಿಧ ಕಥಾನಕಗಳ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಪಡೆಯುತ್ತದೆ. ಪ್ರತಿ ಬರಹಗಾರನ ಬರಹಗಳ ಅಧಿಕೃತತೆ, ಆ ಕೃತಿಗಳಲ್ಲಿ ವಾಸ್ತವಾನುಭವಗಳು, ಸಾಮಾಜಿಕ ಪ್ರಜ್ಞೆ-ಎಷ್ಟರ ಮಟ್ಟಿಗೆ ಮೈ ಪಡೆದಿವೆ ಎನ್ನುವುದರ ಮೇಲೆ ನಿರ್ಧಾರವಾಗುತ್ತದೆ. ಬದುಕನ್ನು ನೋಡುವ, ಸಾಮಾಜಿಕ ಸಮಸ್ಯೆಗಳನ್ನು ಸ್ವೀಕರಿಸುವ ರೀತಿ ಒಬ್ಬರಿಂದ ಒಬ್ಬರಿಗೆ ಬೇರೆಯಾಗುತ್ತದೆಯೇ ಹೊರತು ಅವುಗಳಿಂದ ದೂರ ಸಿಡಿದು ನಿಲ್ಲುವುದು ಸಾಧ್ಯವಿಲ್ಲ. ಸಾಮಾಜಿಕ ಪರಿಸರವನ್ನು ಆರೋಗ್ಯವನ್ನು ಹದಗೆಡಿಸುವ ವ್ಯಕ್ತಿಗಳು ಬರಹಗಾರರ ಆಕ್ರೋಶಕ್ಕೋ, ವಿಡಂಬನೆಗೋ, ಭರ್ತ್ಸನೆಗೋ, ಇಲ್ಲವೇ ಟೀಕೆಗೋ, ವಿಶ್ಲೇಷಣೆಗೋ ಒಳಗಾಗುತ್ತಾರೆ. ಲೇಖಕನಾದವನು ತನ್ನ ಸುತ್ತಲಿನ ಭ್ರಷ್ಟ ಸಮಾಜವನ್ನು

ಮುಲಾಜಿಲ್ಲದೆ ಕೃತಿ ಮುಖೇನ ಖಂಡಿಸುತ್ತಾನೆ; ತನ್ನ ವಿಚಾರಗಳನ್ನೂ ಪ್ರತಿಕ್ರಿಯೆಯನ್ನೂ ಕಲಾತ್ಮಕವಾಗಿ ಅಭಿವ್ಯಕ್ತಿಸುವ ಪ್ರಯತ್ನಕ್ಕೆ ತೊಡಗುತ್ತಾನೆ.

ಹೀಗಾಗಿ ಸಾಮಾಜಿಕ ಎಚ್ಚರಿಕೆ ಲೇಖಕರಿಗೆ ಅನಿವಾರ್ಯ ಸ್ಥಿತಿಯಾಗಿದೆ. ಇಂತಹ ಸಮಾಜಿಕ ಪ್ರಜ್ಞೆಯನ್ನು ಬೆಳೆಸಿಕೊಂಡು ವ್ಯಕ್ತಿಗಳ, ಸಂಘ ಸಂಸ್ಥೆಗಳ ಪೊಳ್ಳುತನವನ್ನು, ಭ್ರಷ್ಟತೆಯನ್ನು ಸಾಹಿತ್ಯ ಮಾಧ್ಯಮದ ಮೂಲಕ ಬಹಿರಂಗ ಪಡಿಸುವುದರ ಜೊತೆಗೆ ನಿಷ್ಠುರ ವಿಮರ್ಶೆಗೆ, ವಿಡಂಬನೆಗೆ ತೊಡಗಿಸಿದ ಕೆಲವು ಬರಹಗಾರರಲ್ಲಿ ಕಾರಂತರು, ಬಸವರಾಜ ಕಟ್ಟೀಮನಿ, ಅ. ನ. ಕೃ. ಮೊದಲಾದವರನ್ನು ಹೆಸರಿಸಬಹುದು. ಇದೇ ಸಾಲಿನಲ್ಲಿ ಕಾದಂಬರಿಗಾರ್ತಿಯರಲ್ಲಿ ಪ್ರಮುಖರೆನಿಸಿದ ಎಂ. ಕೆ. ಇಂದಿರಾ ಅವರನ್ನು ಮರೆಯುವಂತಿಲ್ಲ.

ಎಂ. ಕೆ. ಇಂದಿರಾ ಕನ್ನಡದ ಕಾದಂಬರಿಗಾರ್ತಿಯರಲ್ಲಿಯೇ ವಿಶಿಷ್ಟವಾದ ಹೆಸರನ್ನು ಪಡೆದಿದ್ದಾರೆ. ಸಾಮಾನ್ಯವಾಗಿ ಮಹಿಳೆಯರ ಕಾದಂಬರಿಗಳೆಂದರೆ 'ಅಡುಗೆ ಮನೆಯ ಸಾಹಿತ್ಯ'ವೆಂದು ಸಾರಾಸಗಟಾಗಿ ಮೂಗು ಮುರಿಯುವ ಪ್ರವೃತ್ತಿ ಇದೆ. ಆದರೆ ಅಂತಹವರಿಗೆ ಇಂದಿರಾ ಅವರ ಕಾದಂಬರಿಗಳಲ್ಲಿನ ವಸ್ತು ವೈವಿಧ್ಯ ಒಂದು ಸವಾಲಾಗಬಲ್ಲದು. ಅರವತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾದಂಬರಿಗಳನ್ನು ರಚಿಸಿರುವ ಇಂದಿರಾ ಅವರ ಕಾದಂಬರಿಗಳಲ್ಲಿ ಮುಖ್ಯವಾಗಿ ಕಾಣುವುದು ನವೋದಯದ ಆಶಯಗಳನ್ನೇ ಬಿಂಬಿಸುವ ಮನುಷ್ಯ ಸಂಬಂಧಗಳು, ಆದರ್ಶಗಳು ಮನೆ, ಮನೆತನ, ಸಂಪ್ರದಾಯಗಳಲ್ಲಿನ ಶ್ರದ್ಧೆ-ಮುಂತಾದವುಗಳೇ ಆದರೂ, ಕೆಲವು ಕಾದಂಬರಿಗಳು ಇದಕ್ಕೆ ಅಪವಾದಗಳಂತಿವೆ. ಕೌಟುಂಬಿಕ ನೆಲೆಯಲ್ಲಿನ ಸಮಸ್ಯೆಗಳ ಗಾಢ ಪರಿಚಯವಿರುವಂತೆಯೇ, ಸಾಮಾಜಿಕ ಆಗುಹೋಗುಗಳ, ಸಮಸ್ಯೆಗಳ ಅರಿವೂ ಇದೆ. ಸಮಾಜದ ನೈತಿಕ ಪತನಕ್ಕೆ ಕುರುಡು ಸಂಪ್ರದಾಯ, ಸ್ವಾರ್ಥಪರರಾದ ವ್ಯಕ್ತಿಗಳು, ಸಂಘ ಸಂಸ್ಥೆಗಳು ಹೇಗೆ ಕಾರಣವಾಗಬಲ್ಲವು ಎನ್ನುವುದರ ಬಗೆಗಿನ ತಾತ್ವಿಕ ಚಿಂತನೆಗಳು 'ತಪೋವನದಲ್ಲಿ' ಯಂತಹ ಕಾದಂಬರಿಯ ರಚನೆಗೆ ಕಾರಣವಾಗಿದೆಯೆನ್ನುವುದು ಸ್ಪಷ್ಟವಾಗಿದೆ. ಧರ್ಮ, ದೇವರು, ಯಂತ್ರ, ಮಂತ್ರ, ತಂತ್ರ, ಮಾಯ, ಮಾಟ, ಇತ್ಯಾದಿಗಳ ಬಗೆಗಿನ, ಮುಗ್ಧ ಜನತೆಯ ಅಂಧ ವಿಶ್ವಾಸವನ್ನು ಬಂಡವಾಳವಾಗಿಸಿಕೊಂಡು ಭೌತಿಕವಾಗಿ, ಮಾನಸಿಕವಾಗಿ ಕೊಳ್ಳೆ ಹೊಡೆಯುವ ಸ್ವಾಮಿಗಳು, ಧರ್ಮಾಧಿಕಾರಿಗಳು, ಮಠಾಧಿಪತಿಗಳು, ಜ್ಯೋತಿಷಿಗಳು-ಮೊದಲಾದ ವ್ಯಕ್ತಿಗಳು ನಮ್ಮ ಸುತ್ತಲೂ ಕಿಕ್ಕಿರಿದು ತುಂಬಿದ್ದಾರೆ. ಇಂತಹವರನ್ನು ಸೂಕ್ಷ್ಮವಾಗಿ ಗಮನಿಸಿ, ಬಯಲಿಗೆಳೆದು ಸಾಮಾಜಿಕ ಜಾಗೃತಿಯನ್ನು ಉಂಟುಮಾಡುವುದು ಲೇಖಕರ ಪ್ರಮುಖ ಉದ್ದೇಶವಾಗಿರಬಲ್ಲದು. ಅನಕೃ ಬ್ರಾಹ್ಮಣ ಸಮಾಜದಲ್ಲಿನ

ಕಂದಾಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ ಬರೆದಿದ್ದರೆ, ಬಸವರಾಜ ಕಟ್ಟೀಮನಿಯವರು ವೀರಶೈವ ಸಮಾಜದಲ್ಲಿನ ಮಠಾಧಿಪತಿಗಳ ಮತ್ತು ಅವರ ಹಿಂಬಾಲಕರ ಸ್ವಾರ್ಥ, ಅನೈತಿಕ ವ್ಯವಹಾರಗಳು, ಕಾಮುಕ ಪ್ರವೃತ್ತಿಯನ್ನು ಬಯಲಿಗೆಳೆದಿದ್ದಾರೆ. ಹಾಗೆಯೇ ಕಾರಂತರು ಸಂನ್ಯಾಸಿ, ಸ್ವಾಮಿಗಳ ವರ್ತನೆಯನ್ನು ತಮ್ಮ ಕೃತಿಗಳಲ್ಲಿ ನಿರ್ಭೀತಿಯಿಂದ ಜಾಲಾಡಿ ಬಿಟ್ಟಿದ್ದಾರೆ. ಎಂ. ಕೆ. ಇಂದಿರಾ ಅವರು 'ತಪೋವನದಲ್ಲಿ' ಕಾದಂಬರಿಯಲ್ಲಿಯೂ ಇಂತಹದೇ ರೀತಿಯ ಕಾಮುಕ, ಕಳ್ಳಸಂತೆಕೋರ, ಬಹುರೂಪಿ ಸ್ವಾಮಿಗಳೊಬ್ಬರ ಅವ್ಯವಹಾರಗಳನ್ನು, ನೀತಿ ಭ್ರಷ್ಟತೆಯನ್ನು, ಅಡತಡೆಯಿಲ್ಲದ ಹಾದರವನ್ನು ಹೊರಗೆಡಹಲು ಪ್ರಯತ್ನಿಸಿದ್ದಾರೆ. ಸಮಾನೋದ್ದೇಶವನ್ನುಳ್ಳ ಕಟ್ಟೀಮನಿಯವರ 'ಜರತಾರಿ ಜಗದ್ಗುರು' ಮತ್ತು ಇಂದಿರಾ ಅವರ 'ತಪೋವನ'ದಲ್ಲಿ ಕಾದಂಬರಿಗಳ ಒಂದು ಅವಲೋಕನದ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. 'ಜರತಾರಿ ಜಗದ್ಗುರು' ಮತ್ತು 'ತಪೋವನದಲ್ಲಿ' ಕಾದಂಬರಿಗಳೆರಡರ ಆಶಯವೂ ಡೋಂಗಿ ಸ್ವಾಮಿಗಳ ವ್ಯಕ್ತಿತ್ವವನ್ನು ಸ್ಫೋಟಿಸಿ, ಸಾಮಾಜಿಕ ಎಚ್ಚರವನ್ನು ಸಾಧಿಸುವುದೇ ಆದರೂ ಎರಡರಲ್ಲಿನ ಕಥಾನಕಗಳ ಹರವು, ಸಂವಿಧಾನ, ಶೈಲಿಗಳು–ವಿಭಿನ್ನವಾಗಿವೆ. ಕಾದಂಬರಿ ತಂತ್ರದ ದೃಷ್ಟಿಯಿಂದಲೂ ಒಂದಕ್ಕಿಂತ ಒಂದು ಬೇರೆಯಾಗಿದೆ.

'ತಪೋವನ'ದಲ್ಲಿ ಕಾದಂಬರಿಯಲ್ಲಿ ಕಥಾಕೇಂದ್ರ ಬಹುಮುಖ ವ್ಯಕ್ತಿತ್ವದ,ಬಹುರೂಪಗಳಲ್ಲಿ ಚಲಾವಣೆ ಆಗುತ್ತಿರುವ 'ಅಭಯಾನಂದ'ರೇ ಆದರೂ, ಅಭಯಾನಂದ ಸ್ವಾಮಿಗಳು,ರಂಗರಾಯ ಗಾಯತ್ರಿ ದಂಪತಿಗಳಸುತ್ತ ನಡೆದ ಘಟನೆಯ ಮೂಲಕವಾಗಿ ಕಥೆಯ ಮುಖ್ಯ ಸ್ಥಾನಕ್ಕೆ ಬರುತ್ತಾರೆ. 'ಅಭಯಾನಂದ'ರ ಬಗ್ಗೆ ಅಭಯಾನಂದರ ಸುತ್ತ ಹೆಣೆದುಕೊಂಡಿರುವ ಅವರ ಖಾಸಾ ವ್ಯಕ್ತಿಗಳ ಜಾಲದಿಂದಲೇ ವಿವರಗಳು ತಿಳಿಯುವುದು. ಅಭಯಾನಂದರ ಜೀವನ ವಿವರಗಳು, ಅವರ ತಂದೆ ತಾಯಿ ಸಂಬಂಧಗಳು, ಸಮಾಜಘಾತಕ ಕೆಲಸಗಳಿಗೆ ತೊಡಗಲು ಪ್ರೇರೇಪಿಸಿದ ಕಾರಣಗಳು-ಇತ್ಯಾದಿಗಳ ಬಗ್ಗೆ ಹೆಚ್ಚಿಗೆ ಏನೂ ತಿಳಿಯುವುದಿಲ್ಲ. ಕಾದಂಬರಿಯ ಕಥಾನಕದಲ್ಲಿ ಯಾವುದೇ ಬೆಳವಣಿಗೆಯನ್ನು ಕಾಣುವುದಿಲ್ಲ. ಕಥೆಯ ಹಂದರವೂ ತೀರಾ ಜಾಳು ಜಾಳಾಗಿದೆ. 'ಅಭಯಾನಂದ'ರಾಗಿರುವ ವ್ಯಕ್ತಿಯ ವ್ಯಕ್ತಿತ್ವದ ಬಗ್ಗೆ ಎಲ್ಲಿಯೂ ಒಳನೋಟಗಳು ಸಿಗುವುದಿಲ್ಲ. ತಪೋವನದಲ್ಲಿ ಅಭಯಾನಂದರು ಮುಗ್ಧ ಜನತೆಯನ್ನು, ಅಂಧ ವಿಶ್ವಾಸಿಗಳನ್ನು, ತನಗೆ ಕರಗತವಾದ ಮಾಯಾ ಮಾಟಾ ತಂತ್ರ ಮಂತ್ರಗಳಿಂದ ಆಕರ್ಷಿಸಿ ಯಾವುದೋ ಒಂದು ಭ್ರಾಮಕ ಪರಿಸರವನ್ನು ನಿರ್ಮಿಸಿ ಸುಷುಪ್ತಾವಸ್ಥೆಗೆ ಒಳಗುಪಡಿಸಿ, ದೋಚುತ್ತಿದ್ದ ವ್ಯಕ್ತಿಯಂತೆ ಕಾಣಿಸಿಕೊಳ್ಳುತ್ತಾರೆ. ಅವರ ಪರವಾಗಿ ಅದ್ಭುತ ಕಥೆಗಳನ್ನು ಕಟ್ಟಿ, ಅವರ ಪವಾಡಗಳ ಬಗ್ಗೆ ಹಾಡಿ ಕೀರ್ತಿಸುವ,

ಅಭಯಾನಂದರ ಹೆಸರಿನ, ವ್ಯಕ್ತಿತ್ವದ ಮೋಡಿಗೆ ಮರುಳಾಗಿ ಬರುವ ಜನತೆಯನ್ನೂ, ಅವರೊಳಗಿನ ಮುಗ್ಧ ವಿಶ್ವಾಸ, ಅಚಲ ನಂಬಿಕೆಗಳನ್ನು ದುರುಪಯೋಗ ಪಡಿಸಲು ಟೊಂಕಕಟ್ಟಿ ನಿಂತ ಜನ ಅಭಯಾನಂದರ ಕಡೆಯವರೇ ಆಗಿ, ಅಲ್ಲಿಗೆ ಹೋದವರು ತಪ್ಪಿಸಿ ಕೊಂಡು ಬರಲಾಗದಂಥ ಒಂದು ಚಕ್ರವ್ಯೂಹವಾಗಿ ತಪೋವನ ಪರಿಣಮಿಸಿರುತ್ತದೆ.

ಆನಂದವನದ ನಿಗೂಢ ಪರಿಸರ, ಸಂಶಯಕ್ಕೆಡೆಯಾಗದಂತಹ ರೀತಿಯಲ್ಲಿ ವರ್ತಿಸುವ ಅಕ್ಕಮ್ಮ, ರಾಧೆ, ಪೂಜಾರಿ, ಹೊನ್ನಯ್ಯ ಮೊದಲಾದ ವ್ಯಕ್ತಿಗಳು, ಅಭಯಾನಂದರ ಸುತ್ತ ಪವಾಡಗಳ ಪ್ರಭಾವಳಿಯನ್ನು ನಿರ್ಮಿಸುವಲ್ಲಿ ಸಾರ್ಥಕ ವೆನಿಸುತ್ತವೆ. "ಚಂದ್ರಗಾವಿಯ ನಿಲುವಂಗಿ, ಗೌತಮ ಬುದ್ಧನ ಮುಂಗುರುಳು ; ತೇಜಸ್ವಿ ಮುಖಾರವಿಂದ ; ಗುಲಾಬಿ ವರ್ಣದ ತುಂಬು ತುಟಿಗಳು ; ನಿರರ್ಗಳ ವಾಗ್ಝರಿ ; ತತ್ವಜ್ಞಾನ, ವೇದಶಾಸ್ತ್ರ ಉಪನಿಷತ್ತುಗಳನ್ನು ಕುರಿತು ಹತ್ತೆಂಟು ಭಾಷೆ ಗಳಲ್ಲೂ ಅಸ್ಖಲಿತವಾಗಿ ಉಪನ್ಯಾಸಗಳನ್ನು ನೀಡಬಲ್ಲ ಸಾಮರ್ಥ್ಯ"—ಇವೆಲ್ಲವೂ ಒಟ್ಟಾರೆಯಾಗಿ, ಸುಲಭವಾಗಿ ಜನರನ್ನು ವಂಚಿಸುವ ಸಾಧನಗಳಾಗುತ್ತವೆ. ಅಭಯಾನಂದರ ರಹಸ್ಯ ಕಾಮಕೇಳಿಗೆ ಸಂತಾನಾರ್ಥಿಗಳಾಗಿ ಬರುವ ಹೆಣ್ಣು ಮಕ್ಕಳು ಬಲಿಯಾಗಿ, ಆಕಸ್ಮಿಕವಾಗಿ ಸಂತಾನಪ್ರಾಪ್ತಿಯಾದರೂ, ಅಭಯಾನಂದರ 'ವರ ಪ್ರಸಾದ'ವೆಂದು ತಿಳಿಯಲಾಗದೆ, ಅವರ ಮಂತ್ರಶಕ್ತಿಯ ಪ್ರಭಾವವೆಂದೇ ಭಾವಿಸುವ ಅಬೋಧ ಜನತೆಯ ಒತ್ತಾಸೆಯೇ ಅಭಯಾನಂದರ ಇಂತಹ ಸ್ವಚ್ಛಂದ ಬದುಕಿಗೆ, ಸ್ವೈರತೆಗೆ ದಾರಿ ಮಾಡುತ್ತದೆ. ಅಭಯಾನಂದರ ಕಾಮಾಸಕ್ತಿಗೆ ಬಲಿಯಾದ ಅಸಂಖ್ಯ ಹೆಣ್ಣುಮಕ್ಕಳಲ್ಲಿ ರಂಗರಾಯರ ಪತ್ನಿ ಗಾಯತ್ರಿ ಒಬ್ಬಳು. ಸುಷುಪ್ತಾ ವಸ್ಥೆಯಲ್ಲಿ ಅಭಯಾನಂದರಿಗೆ ಗ್ರಾಸವಾದ ಗಾಯತ್ರಿಗೆ ಅಭಯಾನಂದರನ್ನೇ ಹೋಲುವ ಮಗು ಹುಟ್ಟಿದಾಗ, ಗಾಯತ್ರಿ ಮಾನಸಿಕವಾಗಿ ಅಸ್ವಸ್ಥಳಾಗುತ್ತಾಳೆ. ಅರೆನಿದ್ರಾವಸ್ಥೆಯಲ್ಲಿ ತನಗಾದ ಅನುಭವಗಳನ್ನು ನೆನಪಿಸಿಕೊಳ್ಳುತ್ತಾಳೆ. ಜಾಗೃತ ಸ್ಥಿತಿಯಲ್ಲಿ ಅವೆಲ್ಲಕ್ಕೂ ಹೊಸ ಹೊಸ ಅರ್ಥಗಳು ಹೊಳೆದು, ಮನಸ್ಸು ಹಳಹಳಿಸು ತ್ತದೆ ; ನೆಮ್ಮದಿಯನ್ನು ಕಳೆದುಕೊಳ್ಳುತ್ತದೆ. ಪ್ರಜ್ಞಾಪೂರ್ವಕವಾಗಿ ತಾನೆಸಗಿದ ಅಪರಾಧವಲ್ಲವಾದರೂ, ರಂಗರಾಯರಂತಹ ಸಜ್ಜನ ಪತಿಯು ತನ್ನಿಂದಲೇ ಆದ ಸಂತಾನವೆಂದು ಹಿಗ್ಗಿ ನಲಿಯುತ್ತಿರುವ ಮುಗ್ಧ ಸಂತೋಷವನ್ನು ವಂಚಿಸುವುದಕ್ಕೆ ಎಳಸದ ಮನಸ್ಸು ಛಿದ್ರಗೊಳ್ಳುತ್ತದೆ, ವಿಕಾರಗೊಳ್ಳುತ್ತದೆ. ಕ್ಷಣಕ್ಷಣಕ್ಕೂ ತನ್ನನ್ನು ಕಾಡುತ್ತಿರುವ, ಹಿಂಸಿಸುತ್ತಿರುವ ಪಾಪಪ್ರಜ್ಞೆಯ, ಅಪರಾಧ ಪ್ರಜ್ಞೆಯ ಒತ್ತಡವನ್ನು ತಾಳಲಾರದೆ, ಅಭಯಾನಂದರ ದುಷ್ಟತನ, ದುಷ್ಕರ್ಮ, ದಗಲಬಾಜಿತನ, ಪಾಪಗಳ ಸಂಕೇತವಾದ ಮಗು, ಗಾಯತ್ರಿಯ ಅಂತಸ್ಸಾಕ್ಷಿಯನ್ನು ಅಲುಗಾಡಿಸುತ್ತದೆ. ಸಾವಿನ ಮೂಲಕವಾಗಿ ಗಾಯತ್ರಿ ತನ್ನ ಪಾಪಕ್ಕೆ ಪರಿಹಾರವನ್ನು ಕಾಣುತ್ತಾಳೆ. ಅನೇಕ

ಹೆಸರುಗಳಲ್ಲಿ ಚಲಾವಣೆಯಾಗುತ್ತಿದ್ದ ಅಭಯಾನಂದರನ್ನು ಸೆರೆ ಹಿಡಿಯಲು ಹೊಂಚಿ ಕಾಯುತ್ತಿದ್ದ ಪೋಲೀಸ್ ಇಲಾಖೆಯ ಜಗನ್ನಾಥ, ತನ್ನ ಅಕ್ಕ ಗಾಯತ್ರಿಯ ಮಾನಸಿಕ ಯಾತನೆಗೆ ಕಾರಣವನ್ನು ಸುಷುಪ್ತ ಸ್ಥಿತಿಯಲ್ಲಿ ತಿಳಿದು ಅಭಯಾನಂದರ ಬೇಟೆಗೆ ಹೊರಟು ಅವರ ಆ ತಪೋವನದ ರಹಸ್ಯವನ್ನು ಭೇದಿಸುತ್ತಾನೆ. ಅಲ್ಲದೆ ಅವನ ಖಾಸಾವಲಯದ ರಾಧೆ, ಅಕ್ಕಮ್ಮ, ಹೊನ್ನಯ್ಯರ ಪೂರ್ವೇತಿಹಾಸವನ್ನು ಅಗೆದು ತೆಗೆಯುತ್ತಾನಾದರೂ ಅಭಯಾನಂದರು ಪರಾರಿಯಾಗುತ್ತಾರೆ. ಜೊತೆಗೆ ನ್ಯಾಯಾಲಯದಲ್ಲಿಯೇ ಎಲ್ಲರ ಸಮಕ್ಷಮದಲ್ಲಿಯೇ, ಯಾರಿಗೂ ಸಂಶಯವಾಗದ ರೀತಿಯಲ್ಲಿ ವೇಷಾಂತರದಲ್ಲಿ ಬಂದು ಅವನಿಗೆ ಬೇಕಾದ ಮಂತ್ರದಂಡವನ್ನು ಹಾರಿಸಿ ಕೊಂಡು ಹೋಗುತ್ತಾರೆ. ಜನಕ್ಕೆ, ರಂಗರಾಯರಿಗೆ ಅಭಯಾನಂದರ ಭೂಗತ ಚಟುವಟಿಕೆಗಳ ಬಗ್ಗೆ, ಖೋಟಾನೋಟುಗಳನ್ನು ತಯಾರಿಸುವುದರ ಬಗ್ಗೆ, ವ್ಯಾಪಕ ವಾದ ಕಾರ್ಯ ಕ್ಷೇತ್ರಗಳ ಬಗ್ಗೆ ವಿವರಗಳು ತಿಳಿಯುವುದು, ತಾವು ಮೋಸ ಹೋದುದರ ಬಗ್ಗೆ ಪಶ್ಚಾತ್ತಾಪ ಪಡುವುದು–ಇವಿಷ್ಟೇ ಕಥೆಯ ಹಂದರ. ಎಲ್ಲವೂ ಸಿದ್ಧ ಪಾತ್ರಗಳು. ಸಮಸ್ಯೆಗಳು ಯಾವುವೂ ಗಾಢವಾಗಿ ಕಾಡುವುದಿಲ್ಲ. 'ತಪೋವನದಲ್ಲಿ' ಕಾದಂಬರಿಯಲ್ಲಿ ಯಾವುದೇ ಒಂದು ನಿರ್ದಿಷ್ಟ ಜಾತಿ, ಮತ ಸ್ವಾಮಿಗಳ ಪ್ರಸ್ತಾಪವಿಲ್ಲ. ಸ್ವಾಮಿಗಳೂ ಅಲ್ಲ; ಸ್ವಾಮಿಗಳ ಸೋಗಿನಲ್ಲಿನ ಒಬ್ಬ ಡೋಂಗಿ ವ್ಯಕ್ತಿಯಷ್ಟೇ ಕಾಣುತ್ತಾನೆ. ಅವನ ಹಲವು ಅವತಾರಗಳಲ್ಲಿ 'ಅಭಯಾನಂದ' ಅವತಾರವೂ ಒಂದು. ಆದರೆ ಜರತಾರಿ ಜಗದ್ಗುರು ಕಾದಂಬರಿಯಲ್ಲಿ ಕಟ್ಟೀಮನಿಯವರು ವೀರಶೈವ ಮಠಾಧಿಪತಿಗಳ ಕಚ್ಚೆ ಹರಕುತನವನ್ನೂ ಅನೈತಿಕ ವ್ಯವಹಾರಗಳನ್ನು ಬಯಲಿ ಗೆಳೆಯುತ್ತಾರೆ.

ತಾನು ಪ್ರತಿನಿಧಿಸುವ ಒಂದು ಧಾರ್ಮಿಕ ಸಂಸ್ಥೆ, ಒಂದು ಧರ್ಮ ಯಾವುದರ ಬಗ್ಗೆಯೂ ಸ್ವಲ್ಪವೂ ಕಾಳಜಿ ಇಲ್ಲದೆ, ಭಕ್ತಿ, ಶ್ರದ್ಧೆಗಳು ಲವಲೇಶವೂ ಇಲ್ಲದೆ, ಹೆಣ್ಣು-ಹೊನ್ನು-ಹೆಂಡಗಳಲ್ಲಿ ಕಾವಿ ಬಟ್ಟೆಯ ಮರೆಯಲ್ಲಿ ಮುಳುಗಿ ಹೋಗುತ್ತಾರೆ. ಸ್ವಾಮಿಗಳೆಂಬ ಹೆಸರಿನ ಮರೆಯಲ್ಲಿ ಭಕ್ತರನ್ನು ವಂಚಿಸುತ್ತಾರೆ. ದೊಡ್ಡ ದೊಡ್ಡ ಸಾಹುಕಾರರು, ಶೆಟ್ಟರು ಮೊದಲಾದವರಿಂದ ಜರತಾರಿ ಪೀಠದ ವಾರ್ಷಿಕ ಜಾತ್ರೆ, ಉತ್ಸವ, ಸಮಾಜ ಸೇವೆ, ಸಾಹಿತ್ಯ ಸೇವೆ, ದಲಿತೋದ್ಧಾರ ಇತ್ಯಾದಿ ಕಾರಣಗಳಿಗಾಗಿ ಸಾವಿರಾರು ರೂಪಾಯಿಗಳನ್ನು ಸಂಗ್ರಹಿಸಿ, ಸ್ವಾಮಿಗಳು ವಿಶೃಂಖಲ ಬದುಕನ್ನು ಬದುಕುತ್ತಾರೆ; ಸ್ವಲ್ಪವಾದರೂ ಪಾಪ ಪ್ರಜ್ಞೆಯ ಅರಿವಿಲ್ಲದೆ ಸ್ತ್ರೀಲಂಪಟರಾಗಿ ಪರಿಣಮಿಸುತ್ತಾರೆ. ಇಡೀ ಕಾದಂಬರಿಯ ಉದ್ದಕ್ಕೂ, ಜಗದ್ಗುರುಗಳ ಹಾದರದ ಸಂಗತಿಗಳೇ. 'ಮೋಹದ ಬಲೆಯಿಂದ'ಲೇ ಪ್ರಾರಂಭವಾದ ಸಿದ್ಧವೀರಸ್ವಾಮಿಗಳ ಕಾಮಾಸಕ್ತಿ, ಜಹಾನಾರಾ, ಪಾರ್ವತಿ, ಲಲಿತ, ಲೀಲಾವತಿ, ಗದಿಗೆಮ್ಮ,

ಮಹಾದೇವಿ, ಸರಸು-ಹೀಗೆ ಇನ್ನೂ ಎಷ್ಟೋ ಸ್ತ್ರೀಯರನ್ನು ಒಳಗೊಳ್ಳುತ್ತಾ ಮುಂದುವರಿಯುತ್ತದೆ. ನಾಚಿಕೆ ಹೇಚಿಕೆಯಿಲ್ಲದೆ ತಮ್ಮ ಕಾಮಭೋಗಗಳ ಬಗ್ಗೆ ಆಪ್ತ ವಲಯದವರ ಜೊತೆ ಚರ್ಚಿಸುತ್ತಾರೆ. ಬೇಕಾದ ಹೆಣ್ಣುಗಳನ್ನು ಕೇಳಿ ಪಡೆಯುತ್ತಾರೆ. ಕುಟಿಲೋಪಾಯಗಳಿಂದ 'ಜರತಾರಿ ಪೀಠ'ವನ್ನು ಗಿಟ್ಟಿಸಿಕೊಳ್ಳುವ ಸಿದ್ಧವೀರಸ್ವಾಮಿಗಳು, ಮಠವನ್ನು ಕಾರಸ್ಥಾನಿಗಳ ಕೇಂದ್ರವಾಗಿಸುತ್ತಾರೆ. ತಮ್ಮ ಸುತ್ತ ಗಂಗಾಧರಶಾಸ್ತ್ರಿ, ಖರೇಸೆಟ್ಟಿ ಕಾರಭಾರಿಕರಲಿಂಗಯ್ಯ, ಪುಟ್ಟಲಿಂಗಯ್ಯ ಗಡಬಡಯ್ಯ, ಗುಂಡಾಡಯ್ಯ ಇತ್ಯಾದಿಗಳಾಗಿ ಇನ್ನೂ ಅನೇಕ ಸ್ವಾರ್ಥಪರರ ಭದ್ರ ರಕ್ಷಣೆಯ ಕೋಟೆಯೊಳಗೆ ಸಿದ್ಧವೀರಸ್ವಾಮಿ ನಿರಾತಂಕವಾಗಿ ವಿಷಯ ಸುಖಗಳಲ್ಲಿ ವ್ಯಸ್ತ. ಭೋಗ ಜೀವನಕ್ಕೆ ಕಾವಿ ಬಟ್ಟೆ, ಜರತಾರಿ ಪೀಠ, ಕಿರೀಟಗಳು, ಪಾದುಕೆಗಳು ಪಾಪಕಾರ್ಯಗಳನ್ನು ಮರೆಸುವ ಪರದೆಗಳಾಗುತ್ತವೆ.

ಜರತಾರಿ ಜಗದ್ಗುರು ಸಿದ್ಧವೀರಸ್ವಾಮಿ ಮಠಾಧಿಪತಿಗಳಾದರೂ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಮುಕ್ತವಾಗಿ ಭಾಗವಹಿಸುತ್ತಾರೆ. ಸಮಾಜದ ಎಲ್ಲ ಒಗೆಯ ಜನರೊಂದಿಗೆ ಸಂಪರ್ಕವಿರಿಸಿಕೊಂಡು ಸಮಯಕ್ಕೆ ತಕ್ಕಂತೆ ವರ್ತಿಸುವ, ವೀರಶೈವ ಮತ ತತ್ವಗಳನ್ನು ಸರಳವಾಗಿ ತಿಳಿಸಿ ಹೇಳುವ ಬಸವಣ್ಣನವರ ವಚನಗಳನ್ನು ಉದಾರವಾಗಿ ಬಳಸುವ ಸಾಹಿತಿ, ಪತ್ರಕರ್ತ, ಸಮಾಜ ಸುಧಾರಕರ ಬಗ್ಗೆ ಗೌರವಾದರಗಳನ್ನು ತೋರಿ, ಸಾರ್ವಜನಿಕರಿಂದ ಹೊಗಳಿಸಿಕೊಳ್ಳುವ, ಶ್ರದ್ಧೆ ಭಕ್ತಿಗಳನ್ನು ಗಳಿಸುವ ಜಾಣ್ಮೆಯಿದ್ದರೂ, ಆಪ್ತ ವಲಯದಲ್ಲಿ, ತಮ್ಮ ಹಲ್ಕಾತನವನ್ನು ಒಪ್ಪಿಕೊಳ್ಳುವ, ಅದನ್ನೇ ಒಂದು ಹೆಮ್ಮೆಯ ವಿಷಯದಂತೆ ಬೀಗುವ ಪ್ರವೃತ್ತಿ ಸ್ವಾಮಿಯಾದವನ ಒಳಪೊರೆಗಳನ್ನು ಬಟಾ ಬಯಲಾಗಿ ತೆರೆದಿಡುತ್ತವೆ.

'ತಪೋವನದಲ್ಲಿ'ಯ 'ಅಭಯಾನಂದ'ರು ಜನರ ನಡುವೆ ಬರದೆ, ತಪೋವನವಾದ ಆನಂದವನದಲ್ಲಿ ಭೋಗ ಸಾಮಗ್ರಿಗಳನ್ನು ಗುಡ್ಡೆ ಹಾಕಿಕೊಂಡು, ತನ್ನ ಮಾಟ ಮಂತ್ರ ತಂತ್ರಗಳಿಂದಾಗಿ, ಸುಳ್ಳು ಪ್ರಚಾರಗಳಿಂದಾಗಿ ತನ್ನೆಡೆಗೇ ಭಕ್ತರು ಬರುವಂತೆ ಮಾಡುತ್ತಾರೆ. ತನ್ನ ಬಗ್ಗೆ ಯಾರೊಡನೆಯೂ ಸಂವಾದ ಮಾಡುವುದಿಲ್ಲ. ತಾನು ಮಾಡುವ ಅವ್ಯವಹಾರಗಳ ಬಗ್ಗೆ ಚಿಂತಿಸುವುದೂ ಇಲ್ಲ. ಒಂದು ಹಂತದಲ್ಲಿ ಅಭಯಾನಂದ ತಾಂತ್ರಿಕನೂ ಆಗಿರುತ್ತಾನೆ. ತನ್ನ ಕಾಮಕ್ಕೆ ಬಲಿಯಾಗುವ ಹೆಣ್ಣುಗಳಿಗೆ, ತಮ್ಮ ಮೇಲಾಗುವ ಅತ್ಯಾಚಾರದ ಪರಿವೆಯೂ ಇಲ್ಲದಂತಹ ರೀತಿಯಲ್ಲಿ ಅವರ ಅರಿವಳಿಸಿ, ಭ್ರಾಮಕ ಸ್ಥಿತಿಗೊಡ್ಡಿ, ಲೈಂಗಿಕ ಆಕ್ರಮಣಕ್ಕೆ ಅಣಿಗೊಳಿಸುತ್ತಾನೆ. ಸಿದ್ಧವೀರಸ್ವಾಮಿಗಳ ಸ್ವೇಚ್ಛೆಯ ಬದುಕು ಹಲವರಿಗಾದರೂ ತಿಳಿದಿರುತ್ತದೆ. ಸಿದ್ಧವೀರಸ್ವಾಮಿಗಳ ವ್ಯಕ್ತಿತ್ವಕ್ಕೆ ಮರುಳಾಗಿ, ಹೆಣ್ಣುಗಳು ತಾವೇ ಸ್ವಇಚ್ಛೆಯಿಂದ

ಒಳಗಾಗುತ್ತಾರೆ. ಪರಸ್ಪರ ಸಮ್ಮತಿಯಿಂದಲೇ ಸ್ವಾಮಿಗಳ ಮತ್ತು ಲಲಿತ, ಲೀಲಾವತಿ ಗದಿಗೆಮ್ಮ, ಮಹಾದೇವಿ, ಜಹಾನಾರಾ, ಪಾರ್ವತಿ ಮುಂತಾದವರ ನಡುವೆ ಲೈಂಗಿಕ ವ್ಯವಹಾರಗಳು ನಡೆಯುತ್ತವೆ. ಸಿದ್ಧವೀರಸ್ವಾಮಿಗೆ ಅನೀತಿ, ಅವ್ಯವಹಾರಗಳ ಅರಿವಿದೆ. ಅರಿವಿದ್ದೂ ಅವುಗಳಲ್ಲಿ ತೊಡಗಿಸಿಕೊಳ್ಳುವುದು ಪಾಪವೆನಿಸುವುದಿಲ್ಲ. ಕಾರಣ, ಮೂಲಭೂತವಾಗಿ ಸ್ವಾಮಿಗಳಾಗುವುದು ತಮ್ಮ ಸ್ವಭಾವಕ್ಕೆ ಸಲ್ಲುವ ವಿಷಯವಲ್ಲವಾದರೂ ಮಠಾಧಿಪತ್ಯ, ಜಗದ್ಗುರು ಪಟ್ಟಗಳು ವೈಭವದ ಜೀವನಕ್ಕೆ ಸಹಕಾರಿಯಾಗಬಲ್ಲವು ಎನ್ನುವ ಬಲವಾದ ನಂಬಿಕೆಯಾಗಿದೆ.

ಇಂತಹ ಸ್ವಾಮಿಗಳಾದವರ ಕಾಮುಕ ಪ್ರವೃತ್ತಿಗೆ ಸಮಾಜಕ್ಕಿಂತಲೂ ಅವರೊಳಗಿನ ದೌರ್ಬಲ್ಯವೇ ಕಾರಣವಾಗುತ್ತದೆ. ಅದನ್ನು ಒಪ್ಪಿಕೊಳ್ಳುವಲ್ಲಿ ಸ್ವಾಮಿಗಳಿಗೆ ಯಾವ ಸಂಕೋಚವೂ ಇಲ್ಲ. ಮರಿಸ್ವಾಮಿಗಳು, "ಇಷ್ಟೊಂದು ಹೆಣ್ಣಿನ ಹುಚ್ಚು ಇರಬಾರದು" ಎಂದು ಸ್ವಾಮಿಗಳ ನಡವಳಿಕೆಯನ್ನು ಟೀಕಿಸಿದಾಗ, "ಇರಬಾರದು ಇರಬಾರದು ನಾವಾದರೂ ಏನು ಮಾಡೋಣ ಮರಿ ? ಹೆಣ್ಣಿನ ಹುಚ್ಚು ಮನೆತನದ ರಕ್ತದಲ್ಲೇ ಬಂದು ಬಿಟ್ಟದೆ. ನಮ್ಮಪ್ಪ ಹಾಗಿದ್ದ. ಅವರಜ್ಜ ಹಾಗಿದ್ದ. ನಾವೂ ಅವರ ಹಾಗೆ ಆದೆವು" ಎಂದು ತಮ್ಮಲ್ಲಿನ ದೌರ್ಬಲ್ಯಗಳನ್ನು ಪೈತೃಕ ಆಸ್ತಿಯೆಂಬಂತೆ ಹೆಮ್ಮೆಯಿಂದ ಸ್ವೀಕರಿಸುವ ರೀತಿ ನಿಜಕ್ಕೂ ಆಶ್ಚರ್ಯವೆನಿಸುತ್ತದೆ.

'ತಪೋವನದಲ್ಲಿ'ನ ಅಭಯಾನಂದರ ನಡವಳಿಕೆಯ ಬಗ್ಗೆ, ವ್ಯಕ್ತಿತ್ವದ ಬಗ್ಗೆ ಹೆಚ್ಚಿಗೆ ತಿಳಿದುಬರುವ ಸನ್ನಿವೇಶಗಳೇ ಕಾಣುವುದಿಲ್ಲ. ಗಾಯತ್ರಿಯ ಮೂಲಕವಾಗಿ, ಗಾಯತ್ರಿಯಂತಹ ಅನೇಕ ಹೆಣ್ಣುಗಳು ಬಲಿಯಾಗಿರಬೇಕೆಂದಷ್ಟೆ ನಮಗೆ ತಿಳಿಯುತ್ತದೆ. ಮುಂಬೈ, ಕಲ್ಕತ್ತಾ ಮೊದಲಾದ ಕಡೆಗಳಲ್ಲೆಲ್ಲಾ ದತ್ತಾತ್ರೇಯ, ಅಶಿತ್ ಬಾಬು, ಮುರುಗಚೆಟ್ಟಿ ಮುಂತಾದ ಹೆಸರುಗಳಲ್ಲಿ ಚಲಾವಣೆ ಆಗುತ್ತಾ, ಅಲ್ಲಲ್ಲಿ ತಪೋವನದಂತಹ ರಹಸ್ಯ ನೆಲೆಗಳನ್ನು ಸೃಷ್ಟಿಸಿ ಜನರನ್ನು ಆಕರ್ಷಿಸುತ್ತಾ, ಅವರ ಮುಗ್ಧ ನಂಬಿಕೆಯ ದುರ್ಲಾಭ ಪಡೆಯುತ್ತಾ ಹೆಣ್ಣುಮಕ್ಕಳ ಶೀಲಹರಣಮಾಡುತ್ತಾ ಖೋಟಾ ನೋಟುಗಳ ವ್ಯವಹಾರ ನಡೆಸುತ್ತಾ, ರಾಧಾ, ಅಕ್ಕಮ್ಮ, ಹೊನ್ನಯ್ಯನಂತಹವರ ಒಂದು ಖಾಸಗಿ ಬಳಗವನ್ನು ನಿರ್ಮಿಸಿ ಅವರ ಕೈಯಿಂದ ತಮ್ಮ ಪ್ರಚಾರ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ.

ಸಿದ್ಧವೀರಸ್ವಾಮಿಗಳೂ ಏಕಾಕಿಯಲ್ಲ. ಅವರ ಎಲ್ಲಾ ಅವ್ಯವಹಾರಗಳಲ್ಲಿ ಪಾಲುದಾರರಾಗಿ ಗಂಗಾಧರಶಾಸ್ತ್ರಿ,ನರಿರಾಯ ಗುಂಡಾಡಯ್ಯ,ಗೊಬ್ಬಣ್ಣ,ಹೊಟ್ಟೆಪ್ಪ, ನಿರುದ್ಯೋಗಣ್ಣ-ಮುಂತಾದವರಿದ್ದಾರೆ. ಸ್ವಾಮಿಗಳ ಬಗ್ಗೆ ಪ್ರಚಾರ ಭಾಷಣ

ಗಳನ್ನು ಮಾಡಿ ಓರೆಕೋರೆ ನಗರ, ಗೊಬ್ಬೂರು - ಕೋಡಂಗಿಪುರ – ತುಮಕೂರು - ಕೋಲಾರ - ತಿಪಟೂರು - ಮಂಡ್ಯ - ಅರಸೀಕೆರೆ ಇತ್ಯಾದಿಯಾಗಿ ಮೈಸೂರು ಸಂಸ್ಥಾನದಲ್ಲೆಲ್ಲಾ ಸ್ವಾಮಿಗಳಿಗೆ ಭಕ್ತರನ್ನು ಸಂಪಾದಿಸಿಕೊಟ್ಟು, ಅವರ ಭಾಷಣ ಮತ್ತು ಅದ್ದೂರಿ ಮೆರವಣಿಗೆಗಳನ್ನು ಯೋಜಿಸಿ ಶ್ರೀಮಂತ ಭಕ್ತರಿಂದ ಕಾಣಿಕೆಯ ರೂಪದಲ್ಲಿ ಸಾವಿರಾರು ರೂಪಾಯಿಗಳನ್ನು ಗಳಿಸಿ, ಸ್ವಾಮಿಗಳ ಅನಿಯಂತ್ರಿತ ಬದುಕನ್ನು, ಅವ್ಯವಹಾರಗಳನ್ನು ಬಹಿರಂಗಪಡಿಸುವ ಬೆದರಿಕೆ ಹಾಕಿ ಸ್ವಾಮಿಗಳ ಹೆಸರಿನಲ್ಲಿ ಗಳಿಸಿದ ಹಣವನ್ನು ದೋಚುತ್ತಾರೆ.

ಕಪಟ ಸಂನ್ಯಾಸಿಗಳ, ಸ್ವಾಮಿಗಳ ಬದುಕೂ ಅಷ್ಟು ಸುರಕ್ಷಿತವಲ್ಲ. ತಮ್ಮ ಕೃಪಾಪೋಷಣೆಯಲ್ಲಿ, ತಮಗಾಗಿ ದುಡಿಯುವ ಜನ ಎಲ್ಲಿವರೆಗೆ ತಮಗೆ ಪ್ರಾಮಾಣಿಕರೋ ಅಲ್ಲಿಯವರೆಗೆ ಅವರೆಲ್ಲ ವ್ಯವಹಾರಗಳು ಮತ್ತು ಅವರು ನಿರಪಾಯ ಸ್ಥಿತಿಯಲ್ಲಿರಲು ಸಾಧ್ಯ. ರಾಧೆ, ಅಕ್ಕಮ್ಮ, ಹೊನ್ನಯ್ಯ, 'ಅಭಯಾನಂದರ' ಕೃಪಾಪೋಷಿತರು ; ಅವರ ಪರವಾಗಿ ದುಡಿಯುವವರು. ಆದರೆ ಪೋಲೀಸ್‌ಗೆ ಸೆರೆ ಸಿಕ್ಕಮೇಲೆ ಮತ್ತು ತಮ್ಮ ಅಪರಾಧಗಳಿಗೆ ದೊರೆಯುವ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅಸಾಧ್ಯವೆನಿಸಿದಾಗ, ಅಭಯಾನಂದರ ರಹಸ್ಯಗಳೆಲ್ಲ ಹೊರಬೀಳುತ್ತವೆ. ಜರತಾರಿ ಜಗದ್ಗುರು ಸಿದ್ಧವೀರಸ್ವಾಮಿಗಳಾದರೋ ತಮ್ಮ ಹಿಂಬಾಲಕರ ಕೈಗೊಂಬೆಯಾಗುತ್ತಾರೆ.

ಸಿದ್ಧವೀರ ಸ್ವಾಮಿಗಳ ಆಷಾಢಭೂತಿತನ ಪತ್ರಕರ್ತರ,-ಪುರೋಗಾಮಿಗಳ ಟೀಕೆಗೆ ಗುರಿಯಾದರೆ, ಸ್ವತಃ ಸ್ವಾಮಿಗಳೇ ಎಷ್ಟೋ ಬಾರಿ ತಮ್ಮ ಬಗ್ಗೆ, ತಮ್ಮ ಸಮಾಜದ ಬಗ್ಗೆ ತುಂಬಾ ಪ್ರಾಮಾಣಿಕವಾದ ರೀತಿಯಲ್ಲಿ ಚಿಂತನೆ ನಡೆಸುತ್ತಾರೆ. "ಇಷ್ಟೊಂದು ಹೆಣ್ಣಿನ ಚಟ ತನಗೊಬ್ಬನಿಗೇ ಏಕೆ ಬಂತು ?" ಎನ್ನುವ ಪ್ರಶ್ನೆಗೆ ಜಂಗಮರಲ್ಲಿ ಹುಟ್ಟಿದವನಾದರೂ ಜಂಗಮನ ಲಕ್ಷಣವೊಂದೂ ಇಲ್ಲದ, ಸದಾ ದುರಾಚಾರಗಳಲ್ಲೇ ಮುಳುಗೇಳುತ್ತಿದ್ದ ತನ್ನ ತಂದೆಯ ನೆನಪಾಗುತ್ತದೆ. ಇದೊಂದು ರೋಗಗ್ರಸ್ತ ಸಮಾಜ. ಇದರಲ್ಲಿ ಪ್ರಾಮಾಣಿಕರಾಗಿ ಬದುಕುವುದು ಅಸಾಧ್ಯ. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಜನರ ಮೂರ್ಖತೆಯ, ಅಜ್ಞಾನದ, ಅಂಧವಿಶ್ವಾಸಗಳ ಸ್ವಲಾಭ ಪಡೆಯಲು ಯೋಚಿಸುತ್ತಾರೆ. 'ಅಭಯಾನಂದರ' ವ್ಯವಹಾರ ಜಗತ್ತಿನ ವಿವರಗಳು ಎಲ್ಲೂ ಕಾಣುವುದಿಲ್ಲ. ಅಭಯಾನಂದರಲ್ಲಿ ಈ ಬಗೆಯ ಸಾಮಾಜಿಕ ಚಿಂತನೆಯಾಗಲಿ ಸ್ವವಿಶ್ಲೇಷಣೆಯಾಗಲೀ ಇಲ್ಲ. ಹೀಗಾಗಿ ಒಂದು ಪೂರ್ಣ ಪಾತ್ರ ಕಲ್ಪನೆ ಸಾಧ್ಯವಿಲ್ಲವಾಗಿದೆ. ತಪೋವನದಲ್ಲಿ ಕಾದಂಬರಿಯಲ್ಲಿ ಎರಡು ಘಟ್ಟಗಳನ್ನು ಗುರುತಿಸಬಹುದು. ರಂಗರಾಯ–ಗಾಯತ್ರಿಯರ ದಾಂಪತ್ಯ–ಅವರ ಸಂತಾನ

ಹೀನತೆ-ತಪೋವನಕ್ಕೆ ಪ್ರಯಾಣ-ಗಾಯತ್ರಿಗೆ ಅಭಯಾನಂದರ ಅನುಗ್ರಹ-ಪತ್ರ ವತಿಯಾಗುವುದು – ಮಾನಸಿಕ ಆಘಾತ, ಮರಣ ಇತ್ಯಾದಿ ವಿವರಗಳನ್ನು ಒಳಗೊಂಡರೆ ಎರಡನೇ ಘಟ್ಟದಲ್ಲಿ ಅಭಯಾನಂದರ ಪೂರ್ವೇತಿಹಾಸ ಬಿಚ್ಚಿಕೊಳ್ಳುತ್ತದೆ. ಆದರೆ ಆ ವಿವರಗಳು ಅಪೂರ್ಣವಾಗಿವೆ. ಹತ್ತುವರ್ಷಗಳಿಂದಲೂ ಬೇರೆ ಬೇರೆ ಹೆಸರುಗಳಲ್ಲಿ ದತ್ತಾತ್ರೇಯ ಅತ್ರಿ ಎನ್ನುವ ಕೇರಳ ದೇಶದ ವ್ಯಕ್ತಿಯೊಬ್ಬ ಭಾರತದ ಬೇರೆ ಬೇರೆ ಊರುಗಳಲ್ಲಿ ಕಳ್ಳ ವ್ಯವಹಾರಗಳನ್ನು ಮಾಡುತ್ತಿದ್ದುದೂ, ರಾಧೆಯು ಪ್ರಿಯಕರನಾಗಿದ್ದುದೂ, ಅಕ್ಕಮ್ಮ ಹೊನ್ನಯ್ಯ ಇವರೆಲ್ಲರನ್ನೂ ಬೇರೆ ಬೇರೆ ಪ್ರದೇಶಗಳಿಂದ, ಅವರ ಜೀವನ ಪೋಷಣೆಯ ಆಮಿಷಗಳೊಡ್ಡಿ ಕರೆತಂದುದನ್ನೂ, ಅಪರಾಧಿಗಳಾದ ಅಕ್ಕಮ್ಮ, ರಾಧ, ಹೊನ್ನಯ್ಯರು ಹೊರ ಹಾಕುತ್ತಾರೆ. ನೇರವಾಗಿ ಅಭಯಾನಂದರು ಕಾದಂಬರಿಯಲ್ಲಿನ ಸಜೀವ ಪಾತ್ರವಾಗುವುದೇ ಇಲ್ಲ. ಕಾದಂಬರಿಗಾರ್ತಿ ಇಂದಿರಾ ಅವರಿಗೆ, 'ಅಭಯಾನಂದ'ರ ಬದುಕಿನ ಬೇರುಗಳ ತನಕ ಹೋಗಿ ಅವರ ಜೀವನ ರಹಸ್ಯಗಳನ್ನು ಹೊರಗೆಡಹುವುದಕ್ಕಿಂತ, ಅಂತಹ ಕಳ್ಳ ಸ್ವಾಮಿಗಳಿಂದ, ನಿರಪರಾಧಿ ಮುಗ್ಧ ಹೆಣ್ಣೊಬ್ಬಳು ಬಲಿಯಾದುದರ ದುರಂತವನ್ನು ಚಿತ್ರಿಸುವುದರ ಮೂಲಕ, ಸಾಮಾಜಿಕ ಎಚ್ಚರಿಕೆಯನ್ನು ನೀಡುವುದು, ಮತ್ತು ಕಥಾನಾಯಕಿ ಗಾಯತ್ರಿಯ ಬಗ್ಗೆ ಸಹಾನುಭೂತಿಯನ್ನು ಮೂಡಿಸುವುದೂ ಮುಖ್ಯ ಉದ್ದೇಶವಾಗಿರ ಬೇಕೆನಿಸುತ್ತದೆ.

ಸಿದ್ಧವೀರ ಸ್ವಾಮಿಗಳು ಕೂಡಾ, ಸಂಘಸಂಸ್ಥೆಗಳಿಂದ ಹಾರ ತುರಾಯಿ ಗೌರವ ಪಡೆದು, ವೈಭವದ ಸತ್ಕಾರಗಳಿಸಿ, ತಬ್ಬಿಬ್ಬಾಗಿ, ತಮಗೆ ಈ ಗೌರವಕ್ಕೆ ಕಾರಣವೇನೆಂದು ಹೊಳೆಯದೆ "ಆ ಹಾರಗಳು, ಆ ಬಿನ್ನವತ್ತಳೆ, ಆ ಹೊಗಳಿಕೆ, ಆ ಸತ್ಕಾರ ....ನನಗೆ ಒಳಗೊಳಗೇ ನಗೆಯುಕ್ಕಿ ಬರುತ್ತಿತ್ತು. ನನಗೆ ವಿದ್ಯೆಯಿಲ್ಲ, ಬುದ್ಧಿಯಿಲ್ಲ, ಪಾಂಡಿತ್ಯವಿಲ್ಲ. ಪ್ರತಿಭೆಯಿಲ್ಲ. ಸಚ್ಚಾರಿತ್ರ್ಯವಾದರೂ ಇದೆಯೇ ಅಂದರೆ ಅದೂ ಇಲ್ಲ. ಸಭೆಯಲ್ಲಿ ಉಚ್ಚಾಸನದ ಮೇಲೆ ಮಂಡಿಸಿ, ಎದುರಿಗೆ ಕಲೆತ ಜನವನ್ನು ನಿರೀಕ್ಷಿಸುತ್ತಿದ್ದ ಹಾಗೆ ಅದೊಂದು ಹುಚ್ಚರ ನೆರವಿಯೆಂದೇ ನನಗನ್ನಿಸಿತು" ಎಂದು ಸ್ವಗತ ಹೇಳಿಕೊಳ್ಳುವ ಮಾತುಗಳಲ್ಲಿ ಸಮಾಜ ವಿಡಂಬನೆಯ ಧ್ವನಿ ಕೇಳಿಬರುತ್ತದೆ. ಸ್ವವಿಡಂಬನೆ ಸಮಾಜ ವಿಡಂಬನೆ ಜೊತೆ ಜೊತೆಯಲ್ಲಿ ನಡೆಯುತ್ತದೆ.

ಎಂದಾದರೂ ತಮ್ಮ ಬಂಡವಾಳ ಬಯಲಾದೀತೆಂಬ ಭೀತಿಯ ಆವರಣದಲ್ಲೇ ಬದುಕುವ ಅನಿವಾರ್ಯತೆಗಳು 'ತಪೋವನದಲ್ಲಿ'ನ ಅಭಯಾನಂದರಿಗೆ ಒದಗುವುದಿಲ್ಲ. ಆತ ತನ್ನ ಕಳ್ಳವ್ಯವಹಾರ ಸಾಮ್ರಾಜ್ಯದ ಏಕೈಕ ಸಾಮ್ರಾಟ. ಅವನಿಗೆ ಎದುರಾಗುವ, ಹೆದರಿಸುವ, ಟೀಕಿಸುವ, ಲಾಭಗಳಿಕೆಯಲ್ಲಿ ಪಾಲುಕೇಳುವ ವ್ಯಕ್ತಿಗಳೇ ಇಲ್ಲ. ಹೀಗಾಗಿ

ಈ ಕಾದಂಬರಿ, ಡೋಂಗಿ ಸ್ವಾಮಿಗಳ ಒಂದು ಪಾರ್ಶ್ವ ಚಿತ್ರವನ್ನು ಮಾತ್ರವೇ ನೀಡುತ್ತದೆ. ಉಳಿದ ಪಾತ್ರಗಳ ವೈವಿಧ್ಯವಾಗಲೀ, ಬೆಳವಣಿಗೆಯಾಗಲೀ ಎ ಣುವುದಿಲ್ಲ. 'ಅಭಯಾನಂದ'ರು ಪೊಲೀಸ್ ಕೈಯಿಂದ ತಪ್ಪಿಸಿಕೊಂಡು ಮತ್ತೊಂದೆಡೆ ಕಾರ್ಯಾಚರಣೆಗೆ ಸಿದ್ಧವಾಗುತ್ತಾರೆ. ಸಿದ್ಧವೀರಸ್ವಾಮಿಗಳಂತೆ ಸಾರ್ವಜನಿಕವಾಗಿ ಅವಮಾನಕ್ಕೀಡಾಗುವುದಿಲ್ಲ. ವಂಚನೆಯ ಅಪರಾಧದ ಸಂಬಂಧದಲ್ಲಿ ಪೊಲೀಸರಿಗೆ ಬೇಕಾದ ವ್ಯಕ್ತಿಯಾಗಿದ್ದಾರೆ. ಸಿದ್ಧವೀರ ಸ್ವಾಮಿಗಳು, ತಾವು ನಂಬಿಕೊಂಡ ತಮ್ಮ ಆಪ್ತವಲಯದ ವ್ಯಕ್ತಿಗಳ ಒಳಸಂಚಿಗೆ ಒಳಗಾಗಿ, ಮಠದ ಆಸ್ತಿ ಪಾಸ್ತಿಯ ವಿಷಯದಲ್ಲಿ ಅವ್ಯವಹಾರಗಳ ಆರೋಪದ ಮೇಲೆ, ಟ್ರಸ್ಟ್ ಕಮಿಟಿಯ ಸದಸ್ಯರ ಅಸಮಾಧಾನದ ಜೊತೆಗೆ ತಮ್ಮ ಅಧಿಕಾರಕ್ಕೂ ಸಂಚಕಾರವನ್ನು ತಂದುಕೊಳ್ಳುತ್ತಾರೆ. ಸಿದ್ಧವೀರಸ್ವಾಮಿಗಳ ವ್ಯಕ್ತಿ ಪ್ರತಿಷ್ಠೆ, ಉದಾತ್ತ ಚಿತ್ರಕಲ್ಪನೆಗೆ ಎಡೆಮಾಡಿದ ಪತ್ರಿಕೆಗಳೇ, ಅವರ ಅವ್ಯವಹಾರವ್ಯಭಿಚಾರ ಗಳ ಸುದ್ದಿಯನ್ನು ವೈಭವೀಕರಿಸಿ ಬರೆದು, ಅವರ ವ್ಯಕ್ತಿತ್ವದ ಕೊಲೆಗೂ ಕಾರಣವಾಗುತ್ತವೆ.

ಹೀಗೆ, ಸ್ವಾಮಿಗಳು, ಜಗದ್ಗುರುಗಳೂ ಆದವರ ಆಷಾಢಭೂತಿತನ, ನಯವಂಚಕತನ, ವ್ಯಭಿಚಾರ, ಅವ್ಯವಹಾರಗಳನ್ನು ಬಯಲಿಗೆಳೆದು ಸಾಮಾಜಿಕ ಜಾಗೃತಿಯನ್ನುಂಟುಮಾಡುವ ಉದ್ದೇಶವೇ ಎರಡೂ ಕಾದಂಬರಿಗಳ ರಚನೆಯ ಹಿನ್ನೆಲೆಯ ಪ್ರಚೋದನೆಯಾದರೂ, ವಸ್ತು ನಿರ್ವಹಣೆಯ ರೀತಿಗಳು, ಕತೆಯ ಸಂವಿಧಾನ, ಶೈಲಿ ತಂತ್ರಗಳು ವಿಭಿನ್ನವಾಗಿವೆ. 'ಜರತಾರಿ ಜಗದ್ಗುರು' ಕಾದಂಬರಿಯಲ್ಲಿ ಸಿದ್ಧವೀರ ಸ್ವಾಮಿಯ ವ್ಯಕ್ತಿತ್ವ, ವ್ಯವಹಾರ ನಿರೂಪಣೆಯೇ ಕೇಂದ್ರ ಆಶಯವಾಗಿರುವುದಾದರೂ ಸಿದ್ಧವೀರ ಸ್ವಾಮಿಯ ಸುತ್ತಲಿನ ವ್ಯಕ್ತಿಗಳೂ ಸಜೀವ ಚಿತ್ರಣಗೊಂಡು ಸ್ವಾಮಿಗಳ ವ್ಯಕ್ತಿತ್ವ ಸ್ಫೋಟದೊಂದಿಗೆ, ತಮ್ಮದನ್ನೂ ಬಿಚ್ಚಿಕೊಳ್ಳುತ್ತಾ ಹೋಗುವಂತೆ ಕಾಣುತ್ತದೆ. 'ತಪೋವನದಲ್ಲಿ' ಕಾದಂಬರಿಯಲ್ಲಿ, 'ಅಭಯಾನಂದ'ರ ಪಾತ್ರವೇ ಮುಖ್ಯವಾಗಬಹುದಾಗಿದ್ದರೂ, 'ಗಾಯತ್ರಿ'ಯ ದುರಂತದ ಸಾವಿನಿಂದ, ಸಾವಿನ ಘಟನೆಯಿಂದ, ಗಾಯತ್ರಿ ಕೇಂದ್ರಪಾತ್ರವಾಗುತ್ತಾಳೆ. 'ಅಭಯಾನಂದ'ರ ಇತಿಹಾಸ ಶೋಧಕ್ಕೆ ಪ್ರೇರಕಳಾಗುತ್ತಾಳೆ. 'ತಪೋವನದಲ್ಲಿ' ಕಾದಂಬರಿಯಲ್ಲಿ ಕತೆಯ ಎಳೆಗಳು ಪ್ರಮುಖವೆನಿಸಿದರೆ, 'ಜರತಾರಿ ಜಗದ್ಗುರು' ಕಾದಂಬರಿಯಲ್ಲಿ, ವಿಭಿನ್ನ ವಿಚಾರ, ಸ್ವಭಾವ, ವಿರುದ್ಧ ಧ್ಯೇಯಾದರ್ಶಗಳುಳ್ಳ ವ್ಯಕ್ತಿಗಳ, ಅಂತಹ ವ್ಯಕ್ತಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗುವ ಸನ್ನಿವೇಶ ಸಂದರ್ಭಗಳ ಹಾಗೂಧರ್ಮ, ದೇವರು, ಸ್ವಾಮಿಗಳ ವಿಚಾರದಲ್ಲಿ ಸುಲಭವಾಗಿ ಮೋಸ ಹೋಗುವ ಹುಂಬ ಸಮಾಜದ ಸಮಗ್ರ ಚಿತ್ರವನ್ನು ಸೂಕ್ಷ್ಮ ವಿವರಗಳೊಂದಿಗೆ ಕಾಣುತ್ತೇವೆ. ಹೆಣ್ಣು, ಹೊನ್ನು, ಮಣ್ಣುಗಳ ಪ್ರಬಲ ಆಕರ್ಷಣೆಯಿಂದ ಮಠ ಮಾನ್ಯಗಳ ಸ್ವಾಮಿ ಸಂತರಂತಹ ಧಾರ್ಮಿಕ

ವ್ಯಕ್ತಿಗಳ ನೈತಿಕ ಪತನದ ದುರಂತವಾಗುವುದರ ನೈಜ ಚಿತ್ರಣ ಸಾರ್ಥಕವಾಗಿ ಮೂಡಿ ಬಂದಿದೆ. ಜೊತೆಗೆ ಲೇಖಕರ ವೈಯಕ್ತಿಕ ರೊಚ್ಚು, ರೋಷಗಳೂ ಅಂತರ್ವಾಹಿನಿಯಾಗಿ ಹರಿಯುತ್ತಿರುವುದು ಕೆಲವು ಪಾತ್ರಗಳ ಚರ್ಚೆ, ವಾದ ವಿವಾದ, ಸ್ವಗತ, ಸಂಭಾಷಣೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ಕೃತಿಯ ಕಲಾತ್ಮಕತೆಗೆ ಧಕ್ಕೆ ಉಂಟಾಗಿದೆ. ಆದರೂ 'ಜರತಾರಿ ಜಗದ್ಗುರು' 'ತಪೋವನದಲ್ಲಿ' ಕಾದಂಬರಿಗಿಂತಲೂ ಸಂಕೀರ್ಣವಾದ ಮತ್ತು ಮಹತ್ವಾಕಾಂಕ್ಷೆಯುಳ್ಳ ಕಾದಂಬರಿಯಾಗಿದೆಯೆನ್ನುವುದರಲ್ಲಿ ಸಂದೇಹವಿಲ್ಲ.

ಆರು ವರ್ಷಗಳಿಂದ ಕಾಗದವನ್ನೂ ಬರೆಯದೆ, ಹಣವನ್ನೂ ಕಳಿಸದೆ ನೀವು ಬದುಕಿದ್ದೀರಾ ಎಂದು ಸಹ ಕೇಳದೆ ಈಗ ಧುಪ್ಪೆಂದು ಬಂದಿಳಿದ ಮಗನ ಸರ್ವಾಪರಾಧವನ್ನು ಮನ್ನಿಸಿದಳು ಅಮ್ಮ. ಅಲ್ಲದೆ ಅವಳಿಗೆ ಮರೆತೇ ಹೋಗಿ ಈಗ ಈ ವಂಶೋದ್ಧಾರಕನ ಮೇಲೆ ವಾತ್ಸಲ್ಯದ ಮಳೆಗರೆಯುತ್ತಿದ್ದಾಳೆ. ಈ ಹೆಳವಿ ಹೆಣ್ಣು ಎಳೆತನದಿಂದಲೂ, ಪಟ್ಟ ಪಾಡು, ಕೇಳಿದ ನಿಂದೆ, ಭಂಗಭವಣೆ ಎಲ್ಲವೂ ಅಮ್ಮನ ಕಣ್ಣಿಂದ ಮರೆಯಾಗಿ ಹೋಗಿತ್ತು. ಈಗ ಅಮ್ಮನ ಕಣ್ಣಿನಲ್ಲಿ ನಾನು ವಾಮನಳಾಗಿದ್ದೆ. ಶ್ರೀನಾಥ ತ್ರಿವಿಕ್ರಮನಾಗಿದ್ದ.

(ಹಸಿವು - ಪುಟ-34)

ಇಂದಿರಾ ಕಾದಂಬರಿಗಳಲ್ಲಿ ಸ್ತ್ರೀಪರ ದೃಷ್ಟಿ

○
○
○ ಬಿ. ಎನ್. ಸುಮಿತ್ರಾಬಾಯಿ

ಕನ್ನಡದಲ್ಲಿ ಈಚೆಗೆ ರೂಢಿಸುತ್ತಿರುವ ಸ್ತ್ರೀಪರವಾದ ವಿಮರ್ಶೆ ಎರಡು ವಿಶಿಷ್ಟವಾದ ವಿಧಾನಗಳನ್ನು ಅನುಸರಿಸುತ್ತದೆ.

1) ಮಹಿಳೆಯರ ಬರಹಗಳ ಬಗೆಗಿನ ತೀವ್ರ ಆಸಕ್ತಿ ಮತ್ತು ಒಲವುಗಳಿಂದ ಅವುಗಳಲ್ಲಿ ಸ್ತ್ರೀಯರ ಸ್ವಂತಿಕೆ, ಸ್ವಾಯತ್ತತೆಗಳನ್ನು ಶೋಧಿಸುವ ದೃಷ್ಟಿಯುಳ್ಳದ್ದು ಒಂದು ವಿಧಾನ. ಗತಕಾಲದ ಸ್ತ್ರೀ ಬರಹಗಾರರ ನಷ್ಟ ಕೃತಿಗಳನ್ನು ಮತ್ತೆ ಶೋಧಿಸಿ ಹೊರತೆಗೆದು, ಅವರ ಸಾಧನೆಗಳ ವಿಶ್ಲೇಷಣೆಯ ಮೂಲಕ ನಮ್ಮದೇ ಆದ ಪರಂಪರೆಯನ್ನು, ಇತಿಹಾಸವನ್ನು ಪುನಾರಚಿಸುವುದು ಈ ವಿಧಾನದ ಮುಖ್ಯ ಕಾಳಜಿಯಾಗಿದೆ.[1]

2) ಪಿತೃಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ಸ್ತ್ರೀಯರ ಶೋಷಣೆಯ ನಾನಾಮುಖಗಳನ್ನು ಸ್ತ್ರೀ-ಪುರುಷರ ಬರಹಗಳಲ್ಲಿನ ಧೋರಣೆಗಳು, ಸ್ತ್ರೀ ಪ್ರತೀಕಗಳ ವಿಶ್ಲೇಷಣೆಯ ಮೂಲಕ ಎತ್ತಿ ತೋರಿಸುವುದು ಇನ್ನೊಂದು ವಿಧಾನ. ಸ್ತ್ರೀಯರ ಯಾತನೆಯ ಅರಿವು ಮತ್ತು ಕ್ರೋಧದ ನೆಲೆಯಿಂದ ಹೊರಟ ಪ್ರತಿಕ್ರಿಯೆ ಇದು.[2]

ಒಂದರಲ್ಲಿ ಒಲವೂ ಮತ್ತೊಂದರಲ್ಲಿ ಯಾತನೆ-ಕ್ರೋಧಗಳೂ ಪ್ರೇರಕ ಭಾವಗಳಾಗಿದ್ದರೂ ಈ ಎರಡೂ ವಿಧಾನಗಳು ಪರಸ್ಪರ ಪ್ರತ್ಯೇಕವಲ್ಲ. ಸ್ತ್ರೀ ವಿಮೋಚನಾ ಆಂದೋಲನದ ಒಂದು ಅಂಗವಾಗಿ ಭಾಷೆಯ ನೆಲೆಯಲ್ಲಿ (ಭಾಷೆ ಕೂಡ ರಾಜಕೀಯದ ವಿಷಯ, ಅಧಿಕಾರದ ಕೇಂದ್ರ ಶಕ್ತಿ ಆಗಿರುವುದರಿಂದ) ನಡೆಯುವ ಚಳುವಳಿಯ ಎರಡು ಅಂಗಗಳಿವು.

ಆದ್ದರಿಂದ ಪರಸ್ಪರ ಪೂರಕವಾಗಿ ಇವು ಒಂದು ಹಂತದಲ್ಲಿ ಒಗ್ಗೂಡಬಹುದು. ಉದಾ : ಲೇಖಕಿಯರ ಕೃತಿಗಳಲ್ಲಿ ಸ್ವಂತಿಕೆ, ಸ್ವಾಯತ್ತತೆಗಳ ಶೋಧನೆಗೆ ಹೊರ ಟಂತೆಯೇ ಸ್ತ್ರೀಯರ ಶೋಷಿತಾವಸ್ಥೆಯ ಪ್ರತಿಬಿಂಬಗಳನ್ನು ಗುರುತಿಸಿ ತೋರಿಸಲೂ ಸಾಧ್ಯ. ಹಾಗೆಯೇ ಒಬ್ಬ ಲೇಖಕಿಯಲ್ಲಿ ಸ್ವತಃ ಅಂತರ್ಗತವಾದ ಪಿತೃಪ್ರಾಧಾನ್ಯದ ಮೌಲ್ಯಗಳು ಆಕೆಯನ್ನು ಹೇಗೆ ಮತ್ತೆ ಮತ್ತೆ ಸಮಾಜದ ನಿರೀಕ್ಷಿತ ಸಿದ್ಧರೂಪಗಳನ್ನು ಸೃಷ್ಟಿಸಲು ಪ್ರೇರೇಪಿಸುತ್ತದೆಂಬುದನ್ನೂ ಗುರುತಿಸಬಹುದು.

ಈ ಹಿನ್ನೆಲೆಯಿಂದ ಇಂದಿರಾ ಅವರ ತುಂಗಭದ್ರ, ಸದಾನಂದ, ಚಿದ್ವಿಲಾಸ ಮತ್ತು ಫಣಿಯಮ್ಮ–ಈ ನಾಲ್ಕು ಕಾದಂಬರಿಗಳನ್ನು ಇಲ್ಲಿ ಅಧ್ಯಯನ ಮಾಡಲು ಯತ್ನಿಸಲಾಗಿದೆ. ಈ ಕಾದಂಬರಿಗಳು ಹಲವು ಬಾರಿ ಮುದ್ರಣಗೊಂಡಿದ್ದು ಅಪಾರ ಸಂಖ್ಯೆಯ ಓದುಗರನ್ನು ಪಡೆದಿವೆ. ಅಷ್ಟೇ ಅಲ್ಲದೆ, ಪ್ರಧಾನ ಸಾಹಿತ್ಯ ವಿಮರ್ಶಕ ರಲ್ಲಿ ಹಲವರು ಈ ಕೃತಿಗಳನ್ನು ಇಂದಿರಾ ಅವರ ಸತ್ವಪೂರ್ಣ ಕೃತಿಗಳೆಂದು ಗುರು ತಿಸುತ್ತಾ ಬಂದಿದ್ದಾರೆ. ಅಂದರೆ ವಿಮರ್ಶೆ–ಓದುಗರ ಪ್ರತಿಕ್ರಿಯೆಗಳು ಒಟ್ಟುಗೂಡಿ ರುವ ಈ ಕೃತಿಗಳನ್ನು ಸ್ತ್ರೀಪರವಾದ ದೃಷ್ಟಿಯಿಂದ ವಿಶ್ಲೇಷಿಸುವುದು ಇಂದು ಹೆಚ್ಚು ಯುಕ್ತವೆಂದು ತೋರುತ್ತದೆ. ಇಂದಿರಾ ಸ್ತ್ರೀ ಪಾತ್ರಗಳು ಹೇಗೆ ನಮ್ಮ ಬದುಕನ್ನು ಹಂಚಿಕೊಂಡಿವೆ ? ನಮ್ಮ ಸಾಧನೆಗಳಿಗೆ ಅವು ಒರೆಗಲ್ಲಾಗಬಲ್ಲವೆ ? ನಮ್ಮ ನಿರ್ಧಾರ ಗಳಿಗೆ ಪ್ರೇರಣೆ ನೀಡಬಲ್ಲವೆ ? ನಮ್ಮ ಸುಖ ಸಂತಾಪಗಳಿಗೆ ಕಿವಿಗೊಡಬಲ್ಲವೆ ? ಎಂಬಂಥ ಪ್ರಶ್ನೆಗಳಿಗೆ ಉತ್ತರ ಹುಡುಕುವ ಯತ್ನ ಇಲ್ಲಿದೆ.

ಇಂದಿರಾ ಅವರ ಬಹಳಷ್ಟು ಕಾದಂಬರಿಗಳಲ್ಲಿ ಅವರದೇ ಆದ ಕೆಲವು ವೈಲಕ್ಷಣ್ಯ ಗಳು ಬಿಡಿ ಬಿಡಿಯಾಗಿಯೂ, ಸಾಂದ್ರವಾಗಿಯೂ, ತೆಳುವಾಗಿಯೂ ಕಂಡುಬರುತ್ತವೆ. ಅವುಗಳನ್ನು ಹೀಗೆ ಕ್ರೋಢೀಕರಿಸಬಹುದು :

1] ಇಂದಿರಾ ಅವರಿಗಿಂತ ಮೊದಲು ತಿರುಮಲಾಂಬಾ, ಕಲ್ಯಾಣಮ್ಮ, ಶ್ಯಾಮಲಾದೇವಿ, ಸರಸ್ವತೀಬಾಯಿ ರಾಜವಾಡೆ ಮುಂತಾದವರು ವಿಶಿಷ್ಟ ಸ್ತ್ರೀ ಸಂವೇದನಾತ್ಮಕವಾದ ಸಾಹಿತ್ಯದ ಮಾರ್ಗವೊಂದನ್ನು ನಿರ್ಮಿಸಿದ್ದರು. ಇಂದಿರಾ ಅವರ ಸಮಕಾಲೀನ ಲೇಖಕಿಯರು ಸಾಮಾನ್ಯವಾಗಿ ತ್ರಿವೇಣಿಯವರನ್ನು ಅನುಸರಿಸಿ ಬಂದವರು. ಅವರಲ್ಲಿ ನಗರಗಳ ಸುಶಿಕ್ಷಿತ ಮಧ್ಯಮವರ್ಗದವರೇ ಹೆಚ್ಚಾಗಿದ್ದು, ವಿಸ್ತರಿಸಿದ ಶಿಕ್ಷಣ, ಜ್ಞಾನಪ್ರಸಾರ, ಉದ್ಯೋಗ, ಜೀವನ ಸಂಪರ್ಕಗಳ ಕಾರಣ ದಿಂದಲೂ, ಪ್ರಧಾನ ಸಾಹಿತ್ಯ ಪರಂಪರೆಯ ನವೋದಯ ಪ್ರಗತಿಶೀಲ ಆಂದೋಲನ ಗಳ ಪ್ರಭಾವದಿಂದಲೂ ತಮ್ಮ ಸಾಹಿತ್ಯ ಮಾದರಿಗಳನ್ನು ಸೃಷ್ಟಿಸಿಕೊಂಡವರು,

ನಗರಗಳ ಆಧುನಿಕ ಜಗತ್ತಿನ ಸಮಸ್ಯೆಗಳಾದ ಶಿಕ್ಷಣ-ವಿವಾಹ, ವರದಕ್ಷಿಣೆ, ಕೌಟುಂಬಿಕ ವಿರಸ, ಆರ್ಥಿಕ ವೈಷಮ್ಯದ ಪರಿಣಾಮುಗಳು, ವೇಶ್ಯಾ ಸಮಸ್ಯೆ, ಜಾತಿಪದ್ಧತಿ ಮುಂತಾದ ವಸ್ತುಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದರು.

ಆದರೆ ಶಿಕ್ಷಣ ಪದವಿಗಳಿಲ್ಲದೆ ಹೋದರೂ ತಮ್ಮ ದಟ್ಟವಾದ ಜೀವನಾನುಭವದ ಸಂಪತ್ತನ್ನೇ ಬರವಣಿಗೆಯ ಬಂಡವಾಳವಾಗಿ ಮಾಡಿಕೊಂಡ ಎಂ.ಕೆ. ಇಂದಿರಾ ಹಳ್ಳಿಯ ಸಾಂಪ್ರದಾಯಿಕ ಮೌಲ್ಯಗಳಲ್ಲಿ ಶ್ರದ್ಧೆಯುಳ್ಳ ಜನರ ಸರಳ-ಸಂಘಟಿತ ಬದುಕುಗಳನ್ನು ಕುರಿತು ಆಪ್ತಧಾಟಿಯಲ್ಲಿ ಬರೆಯತೊಡಗಿದರು. ಮಲೆನಾಡಿನ ದಟ್ಟವಾದ ಪ್ರಕೃತಿ ಸಂಪತ್ತಿನ ನಡುವೆ ನೆಲೆಸಿದ ಗ್ರಾಮೀಣ ಜನರ ಶ್ರಮಪೂರ್ಣ ವಾದ ಸತ್ವ ತುಂಬಿದ ಬದುಕು, ಅವರ ಸಂಸ್ಕೃತಿ, ಅವರ ಆಡುನುಡಿಯ ಸೊಗಡು ತುಂಬಿದ ಇಂದಿರಾ ಕೃತಿಗಳು ಅವರ ಜೊತೆಯಲ್ಲಿ ಗುರುತಿಸಲ್ಪಡುವ ವಾಣಿ, ಅನುಪಮಾ ನಿರಂಜನ, ನೀಳಾದೇವಿ, ಎಂ. ಕೆ. ಜಯಲಕ್ಷ್ಮಿ, ಎಚ್. ಎಸ್. ಕ್ಯಾತ್ಯಾಯಿನಿ, ಎಚ್. ಎಸ್. ಪಾರ್ವತಿ, ಉಷಾನವರತ್ನಾರಾಂ ಮುಂತಾದವರ ರಚನೆ ಗಳಿಗಿಂತ ವಿಭಿನ್ನವಾಗಿ ತೋರುತ್ತವೆ.

2) ಇಂದಿರಾ ಬರೆಯತೊಡಗಿದ ಕಾಲಕ್ಕೆ ಪ್ರಧಾನ ಸಾಹಿತ್ಯ ವಾಹಿನಿಯಲ್ಲಿ ವ್ಯಕ್ತಿವಾದ, ಮಾನವತಾವಾದ, ಸಮತಾವಾದ, ವಿಚಾರವಾದ, ಅಸ್ತಿತ್ವವಾದಗಳೂ ವ್ಯಾಪಕವಾಗಿ ಪ್ರಚಾರದಲ್ಲಿದ್ದವು. ಈ ಯಾವ ಬೌದ್ಧಿಕವಾದಗಳ ಸೆಳೆತವಿಲ್ಲದೆ, ಒಂದು ಸಾಮೂಹಿಕ ಬದುಕಿನ, ಜನಸಾಮಾನ್ಯರ ದಿನನಿತ್ಯದ ಆಗುಹೋಗುಗಳಲ್ಲಿ ಅವರ ಒಳಿತು/ಕೆಡಕು, ಉದಾತ್ತತೆ/ಪಾರ್ಥಿವತೆ, ಬದುಕಿನ ಸೌಂದರ್ಯ ಮತ್ತು ಕುರೂಪಗಳಂತಹ ದ್ವಂದ್ವಗಳನ್ನು ಹಾಸು ಹೊಕ್ಕಾಗಿ ನೇಯ್ದು, ಉದಾರವಾದ ಒಂದು ಮಾನವೀಯತೆಯ ನೆಲೆಯ ಬದುಕಿನ ಪಕ್ವತೆ, ಜೀವನಶ್ರದ್ಧೆಗಳನ್ನು ಎತ್ತಿ ಹಿಡಿಯುವ ಆಶಯವನ್ನು ಇಂದಿರಾ ಕೃತಿಗಳ ಒಟ್ಟಾರೆ ಜೀವನದರ್ಶನವೆಂದು ಕರೆಯ ಬಹುದು. ಇದು ನವೋದಯದ ಉದಾರ ಮಾನವತಾವಾದಿ ನೆಲೆಗೆ ಸಮೀಪ ದ್ದಾಗಿದ್ದು, ಇಂದಿರಾ ಈ ದೃಷ್ಟಿಯಲ್ಲಿ 60ರ ದಶಕದಲ್ಲಿ ನವೋದಯದ ಶೈಲಿಯಲ್ಲಿ ಅವೇ ಧೋರಣೆಗಳನ್ನು ಹೊಂದಿ ಬರೆಯತೊಡಗಿದರು ಎಂಬುದು ಗಮನಿಸಬೇಕಾದ ಸಂಗತಿ.

3) ಹಳೆಯ ಪಿತೃಪ್ರಧಾನ ಮೌಲ್ಯಗಳಡಿಯಲ್ಲಿ ಭದ್ರವಾಗಿದ್ದ (ಸ್ಥಗಿತ ವಾಗಿದ್ದ ?) ಬದುಕಿಗೆ ಹೊರಗಿನ ನಾಗರಿಕತೆಯ ಸಂಪರ್ಕದಿಂದ ಉಂಟಾಗುವ ಪಲ್ಲಟಗಳು (ಚಾಲನೆ ?), ನಗರೀಕರಣ, ಶಿಕ್ಷಣ, ಔದ್ಯೋಗೀಕರಣ ಮೊದಲಾದ

ಅರೆಬಂಡವಾಳಶಾಹಿ ಯುಗದ ಪ್ರಕ್ರಿಯೆಗಳು, ಅವುಗಳ ಮೂಲದಲ್ಲಿದ್ದ ಶತಮಾನದಷ್ಟು ದೀರ್ಘವಾದ ವಸಾಹತು ಶಾಹಿಯ ಪ್ರಕ್ರಿಯೆಗಳಿಂದ ಜನರ ಸ್ಥಿರ ಮೌಲ್ಯಗಳಲ್ಲಿ ಉಂಟಾದ ಪಲ್ಲಟಗಳು, ಸ್ಥಿತ್ಯಂತರಗಳು, ಗೊಂದಲಗಳು (ಪ್ರಗತಿ ?) ಮುಂತಾದವುಗಳು ಇಂದಿರಾ ಅವರ ಕೃತಿಗಳಲ್ಲಿ ಮತ್ತೆ ಮತ್ತೆ ಚಿತ್ರಿತವಾಗುತ್ತವೆ. ಆದರೆ ಈ ಎಲ್ಲ ಬದಲಾವಣೆಗಳ ಹಿನ್ನೆಲೆಯಾಗಲಿ, ಅವುಗಳನ್ನು ಆಗುಗೊಳಿಸುತ್ತಿರುವ ಸಾಮಾಜಿಕ ಶಕ್ತಿಗಳಾಗಲೀ ಇಂದಿರಾ ಅವರ ಗ್ರಹಿಕೆಗೆ ಸಿಗಲಾರದೆ ಉಳಿಯುತ್ತದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ ಆದಕ್ಕೆ ಇಷ್ಟವಿಲ್ಲದೆ ಬಲಿಯಾಗಬೇಕಾದ ಜನರ ತುಯ್ದಾಟಗಳ ಯಥಾರ್ಥ ವಿವರಗಳನ್ನು ರಂಜಿಸಿ ಹೇಳುತ್ತ, ಜನರ ಭಾವಸಾಸ್ತರ ವನ್ನು ಮಿಾಟುವಷ್ಟರಲ್ಲಿ ಇವರ ರಚನೆಗಳು ಕೊನೆಗೊಳ್ಳುತ್ತವೆ. ಎಲ್ಲ ಗೊಂದಲಗಳಿಗೆ ಸರಳ-ಸುಲಭ ಪರಿಹಾರಗಳು ಕೃತಿಯಲ್ಲಿ ಸಾಧ್ಯವಾಗುತ್ತವೆ. ಎಲ್ಲ ತಣ್ಣಗಾದ ಮೇಲೆ ಇವರ ಎಲ್ಲ ಬರಹಗಳ ಒಟ್ಟು ಸೆಳೆತ ಹಳೆಯ ಬದುಕಿನ ವಿಧಾನದಲ್ಲಿ ಅಡಗಿದ್ದ "ಒಳ್ಳೆಯ" ಅಂಶಗಳನ್ನು ಕುರಿತ ಹಳಹಳಿಕೆಯಾಗಿರುವಂತೆ ತೋರುತ್ತವೆ.

4) ದಟ್ಟವಾದ ಜೀವನಾನುಭವದ ದ್ರವ್ಯವಿದ್ದು, ಬದುಕಿನ ಹಲವು ಪದರಗಳ, ವಿವಿಧ ದೃಷ್ಟಿಗಳ ನೇಯ್ಗೆ ಇವರ ಕಾದಂಬರಿಗಳಿಗೆ ಒಂದು ವಿಧವಾದ ವಿವರಣಾತ್ಮಕ ಸಂಕೀರ್ಣತೆಯನ್ನು ನೀಡುತ್ತದೆ. ಕುರ್ತಕೋಟಿಯವರ ಪದಗಳಲ್ಲಿ ಹೇಳುವುದಾದರೆ "ಧೀರೋದಾತ್ತ ಚೇತನಗಳು, ವಾಸ್ತವಿಕ ಮರುಕ, ವಿನೋದ ನೈಜವಾದ ದುಃಖ ದುಗುಡಗಳು, ಅಸಹಜವಲ್ಲದ ನಡೆ ನುಡಿಗಳು ಮೊದಲಾದ ಮಣ್ಣಿಗೆ ಹತ್ತಿರದ ಅಂಶಗಳಿದ್ದು, 'ಅಜ್ಞಾನ, ದಾರಿದ್ರ್ಯ, ವ್ಯಂಗ್ಯ, ವಿಕೃತಿ, ದುರ್ದೈವಗಳ ಪ್ರತ್ಯಕ್ಷ ಪ್ರಪಂಚದಲ್ಲಿಯೇ ಪ್ರಕಟವಾಗುವ" ವಿಸ್ಮಯ ಲೋಕದ ಸರಳ ನಿರೂಪಣೆ ಇಂದಿರಾ ಕೃತಿಗಳ ವಿಶೇಷವೆಂದು ಗುರುತಿಸಲ್ಪಡುವುದುಂಟು. ಆದರೆ ಈ ವಿಸ್ತಾರ ವಿವರಗಳೆಲ್ಲ ಪರಂಪರಾಗತ ಪಿತೃಪ್ರಧಾನ ಮೌಲ್ಯಗಳ ಚೌಕಟ್ಟಿನಲ್ಲಿ ಬಂಧಿತವಾಗಿದ್ದು ಲೇಖಕಿ ಚಿತ್ರಿಸುವ ಸಮಸ್ಯೆ ಸ್ತ್ರೀಯರದೋ ಪುರುಷರದೋ ಯಾರದೇ ಆದರೂ, ಅವುಗಳ ವಿಶ್ಲೇಷಣೆ ಪಿತೃಪ್ರಾಧಾನ್ಯದ ಮಾನದಂಡದಿಂದಲೇ ನಡೆದು, ಪರಿಹಾರವೂ ಆ ಬಂಧ ದೊಳಗೇ ಅರಸಲ್ಪಡುತ್ತದೆ. ಈ ರೀತಿ ಇಂದಿರಾ ತಮ್ಮ ಜೊತೆಯ ಲೇಖಕಿಯರಿ ಗಿಂತಲೂ ಹೆಚ್ಚಾಗಿ ಲೇಖಕರ ಹಾಗೆ ತೋರುತ್ತಾರೆನ್ನಬಹುದು. ಈ ಮೇಲಿನ ಅಂಶಗಳನ್ನು ಇಂದಿರಾ ಕೃತಿಗಳ ಸಂದರ್ಭದಲ್ಲಿ ಖಚಿತಪಡಿಸಬಹುದು.

ಇಂದಿರಾ ಅವರ ಮೊದಲ ಕಾದಂಬರಿ "ತುಂಗಭದ್ರ" ಪ್ರಕಟವಾದ ಕಾಲಕ್ಕೆ (1963) ಅದರ ವಸ್ತು 35 ವರ್ಷಗಳಷ್ಟು ಹಳೆಯದೆಂದು ನಿವೇದನೆ ತಿಳಿಸುತ್ತದೆ. (ಈ ರೀತಿ ತಮ್ಮ ಕಾಲಕ್ಕೆ ಎಷ್ಟೋ ಹಿಂದಿನ ವಸ್ತುವನ್ನು ಆರಿಸಿಕೊಳ್ಳುವುದು

ಇಂದಿರಾ ಅವರಲ್ಲಿ ಪುನರಾವೃತ್ತಿಯಾಗುವ ಸಂಗತಿ. ಈ ಆಯ್ಕೆಯಿಂದ ಲೇಖಕಿಯು ಯಾವ ಹಿತಾಸಕ್ತಿ ಸಾಧಿತವಾಗುತ್ತವೆ ಎಂಬುದನ್ನು ಮುಂದೆ ಕಾಣುತ್ತೇವೆ.) ಈ ಶತಮಾನದ ಆದಿಯಲ್ಲಿ ತೀರ್ಥಹಳ್ಳಿಯಲ್ಲಿ ನೆಲೆಸಿದ್ದ ಮೂರು ಬ್ರಾಹ್ಮಣ ಕುಟುಂಬಗಳ ಜನರ ಬದುಕಿನ ಏರಿಳಿತಗಳು ಈ ಕಾದಂಬರಿಯ ವಸ್ತು. ಮುಖ್ಯ ಕಥೆ ಮುದ್ದುರಾಮು ಕೃಷ್ಣವೇಣಿಯರ ಬಾಲ್ಯದ ಹುಡುಗಾಟಿಕೆ, ಯೌವನದ ಪ್ರೇಮ, ದಾಂಪತ್ಯದ ಸರಸ, ಸಂತಾನದ ಸಂಭ್ರಮ ಮತ್ತು ಅಗಲಿಕೆಯ ದುಃಖಗಳ ಗಾಢವಾದ ನಿರೂಪಣೆಯನ್ನು ಹೊಂದಿದೆ. ಕೃತಿಯ ಹೆಸರು ಸೂಚಿಸುವ ತುಂಗೆ-ಭದ್ರೆಯರು ಅಸಹಾಯಕ ಹುಟ್ಟು ಗುರುಡಿಯರು. ಇವರ ಕರುಣಾಜನಕ ಕಥೆ ಮುದ್ದುರಾಮನ ಕಥೆಗೆ ಬಂದು ಬೆಸೆದುಕೊಳ್ಳುತ್ತದೆ.

ಮಲೆನಾಡ ಜನರ "ಬದುಕಿನ ಸತ್ವ"ವನ್ನು ಕುರಿತು ಹೇಳುವುದು ಕೃತಿಯ ಮುಖ್ಯ ಆಶಯವಾಗಿದೆ. ಈ ಸತ್ವಯುತ ಬದುಕೆಂದರೆ ವಿವಾಹ ಸಂಸ್ಕಾರದಿಂದ ಪರಿಪೂರ್ಣತೆಗೇರುವ 'ವಿವೇಕಯುತ' ಬದುಕು ಎಂಬುದು ಕೃತಿಯಲ್ಲಿ ಸಿದ್ಧವಾಗುವ ವಿಚಾರ. ಇಲ್ಲಿನ ವ್ಯಕ್ತಿಗಳ ಹಿರಿಮೆಯ ಮಾನದಂಡ ಈ ವೈವಾಹಿಕ ಬದುಕೇ ಆಗಿದೆ. ಹುಟ್ಟಿನಿಂದ ಕುಲೀನ ಸಂಸ್ಕಾರ ಪಡೆದ ಮುದ್ದುರಾಮು, ಸುಖದ ಬದುಕಿಗೆಂದೇ ಹುಟ್ಟಿದ ಕೃಷ್ಣವೇಣಿಯರು ಈ ಸಂಸ್ಕಾರದ ಮೂಲಕ ಮನಸ್ಸಿನ ಉನ್ನತಿ ಪಡೆದವರು. ಇತರರು-ರಾಘು, ಮಧುರಾ, ಮಂದಾಕಿನಿ, ಶಂಭು, ತುಂಗೆ, ಭದ್ರೆ ಮೊದಲಾದವರೆಲ್ಲ ಜಡತನ, ಮಲತಾಯಿ ಮಾತ್ಸರ್ಯ, ಹಿರಿಯರ ಜಡತೆ, ಅಜ್ಞಾನ, ದುರ್ದೈವ, ಅಂಗವೈಕಲ್ಯ ಮುಂತಾದವುಗಳಿಂದಾಗಿ ಮುದ್ದುರಾಮು-ಕೃಷ್ಣಿಯರಂತೆ ಪರಿಪಾಕವನ್ನು ಹೊಂದಲಾರದವರು. ಆದರೆ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆ ಸುಖದಲ್ಲಿ ಪಾಲು ಪಡೆವ ಅವಕಾಶ ಅವರಿಗುಂಟು.

ಈ ರೀತಿ ಪಿತೃಪ್ರಾಧಾನ್ಯ ಕೌಟುಂಬಿಕ ಮೌಲ್ಯದಡಿಯಲ್ಲಿ ಹೆಣ್ಣುಗಳ ಬದುಕನ್ನು ನಿರ್ಧರಿಸುವ ಸೂತ್ರಯಾವುದೆಂದು ಸ್ಪಷ್ಟವೇ ಇದೆ. ಹೆಣ್ಣಾದವಳು ಯಾರಾದರೊಬ್ಬ ಪುರುಷನ ಆಶ್ರಯ ಪಡೆಯಲೇಬೇಕು. ಅದೂ ಮೈನೆರೆವ ಮೊದಲೇ. ಇಲ್ಲದಿದ್ದರೆ ಆ ಕುಟುಂಬ ಶೃಂಗೇರಿಯ ಮಠಾಧೀಶರ ಬಹಿಷ್ಕಾರಕ್ಕೆ ಒಳಗಾಗಬೇಕು. ಇಂಥ ನಿರ್ಬಂಧದಲ್ಲಿ ಕೃಷ್ಣವೇಣಿಯಂಥವರಿಗೆ ಯಾತನೆಯಿಲ್ಲ. ಏಕೆಂದರೆ ಶ್ರೀಮಂತ ದುಗ್ಗಾಭಟ್ಟರ ಮೊಮ್ಮಗಳಾಗಿ, ತನ್ನ ಸೋದರಮಾವ ಮುದ್ದುರಾಮನಿಗೆಂದೇ ಅವಳು ನಿಶ್ಚಿತಳಾದವಳು. ಆದರೆ ಹುಟ್ಟುಗುರುಡಿಯರಾದ ತುಂಗ-ಭದ್ರೆಯರು, ಅವರ ತಂಗಿ ಮಂದಾಕಿನಿಯ ಸ್ಥಿತಿ ಹಾಗಲ್ಲ. ಅಕ್ಕಂದಿರಿಗೆ ಕುರುಡುತನ ಅಡ್ಡಿಯಾದರೆ, ತಂಗಿ ಎಲ್ಲ ರೀತಿ ಸಮರ್ಥಳಿದ್ದರೂ ತಂದೆ ತಾಯಿಗಳ ದಾರಿದ್ರ್ಯ,

ಅಕ್ಕಂದಿರ ಪರಿಹಾರ ಕಾಣದ ಅವಲಂಬಿತ ಸ್ಥಿತಿಗಳು ಹೇರಿದ ಒತ್ತಡದಲ್ಲಿ ಆಕೆ ತನ್ನ ಕೈಹಿಡಿದಾತ ಅಕ್ಕಂದಿರನ್ನೂ ಧಾರೆಎರೆಸಿ ಕೊಳ್ಳಬೇಕು ಎಂದು ಒತ್ತಾಯಿಸುತ್ತಾಳೆ. ಇವರ ಅವಿವಾಹಿತತನವೇ ಬಲು ದೊಡ್ಡ ಸಮಸ್ಯೆಯಾಗಿ ಬೆಳೆದು ಪರಾಕಾಷ್ಠೆ ತಲುಪುವ ವೇಳೆಗೆ ಕೃಷ್ಣ ವೇಣಿ ಮಗುವಿನ ತಾಯಾಗಿ, ತಾಯಿಯ ಮರಣದ ಆಘಾತ, ಟೈಫಾಯ್ಡ್ ಸೋಂಕಿನಿಂದ ಮರಣ ಹೊಂದುತ್ತಾಳೆ. ಸಾಯುವ ಮೊದಲು ತುಂಗ ಭದ್ರೆ, ಮಂದಾಕಿನಿಯರ ಕೈ ಹಿಡಿಯುವಂತೆ ಮುದ್ದುರಾಮನಿಂದ ಮಾತು ತೆಗೆದು ಕೊಳ್ಳುತ್ತಾಳೆ. ಬದುಕಿನ ಹೊಣೆಯನ್ನರಿತ ಮುದ್ದುರಾಮು ಆ ಮೂರು ಸೋದರಿಯರನ್ನು ಮದುವೆಯಾಗುವುದರ ಮೂಲಕ ಅವರಿಗೂ 'ವಿವೇಕಯುತ' ಬದುಕಿನ ದಾರಿ ತೋರಿಸುತ್ತಾನೆಂಬ ಉದಾರ ನೆಲೆಯಲ್ಲಿ ಅವನ ಕೃತಿಯು ಮಾನ್ಯತೆಯನ್ನು ಪಡೆದುಕೊಂಡಂತೆ ಕೃತಿ ಚಿತ್ರಿಸುತ್ತದೆ.

ಅರವತ್ತರ ದಶಕದಲ್ಲಿದ್ದರೂ ಹಳೆಯ ಕಾಲದಬದುಕಿನ ಯಥಾವತ್ತಾದ ಚಿತ್ರಣವಷ್ಟನ್ನೇ ಮುಖ್ಯವಾಗಿಟ್ಟುಕೊಂಡದ್ದರಿಂದ ಇಂದಿರಾ—ಆ ಹಳೆಯ ಮೌಲ್ಯಗಳಲ್ಲಿ ಇರಬಹುದಾದ ಮಾನವೀಯ ಅನುಕಂಪವನ್ನು ಗುರುತಿಸಲು ಬಯಸುತ್ತಾರೆಂಬುದು ಸ್ಪಷ್ಟ. ಆದರೆ ತುಂಗೆ ಭದ್ರೆಯರ, ಮಂದಾಕಿನಿಯಂಥವರ ಸಮಸ್ಯೆಗಳಿಗೆ ಈ ಪರಿಹಾರ ಪರಿಹಾರವೆ ? ಎಂಬ ಪ್ರಶ್ನೆ ಅವರಿಗೆ ಮುಖ್ಯವಾಗುವುದಿಲ್ಲ. ನಾಗರಿಕತೆ ಎಂಬುದು ಕ್ರಾಪುತಲೆ, ಹುಡುಗರ ನಗರ ಶಿಕ್ಷಣ, ಸುಗಂಧ ಕೇಶ ತೈಲ, ನವಿರು ಒಡವೆ ವಸ್ತ್ರಗಳು, ಗ್ರಾಮೋಫೋನು, ನಾಟಕ ಮಂಡಲಿಗಳ ರೂಪದಲ್ಲಿ ಈ ಹಳ್ಳಿಗೆ ಪ್ರವೇಶಿಸುತ್ತವೆಯೆಂಬುದು ನಿಜ. ಆದರೆ ಲೇಖಕಿಯ ಗ್ರಹಿಕೆಯಲ್ಲಿ ಈ ನಾಗರಿಕತೆಯು ಕೇವಲ ಬಾಹ್ಯ ಬದಲಾವಣೆಯಾಗಿ ಮಾತ್ರ ಉಳಿಯುತ್ತದೆ. ಹೊರಗಿನ ನಾಗರಿಕತೆ ಕಡೆಗೆ ಹೊರಟಿದ್ದವರೆಲ್ಲ-ಮುದ್ದುರಾಮು-ರಾಘು ಮುಂತಾದವರೆಲ್ಲ ಬದುಕಿಗಾಗಿ ಹಳ್ಳಿಗೇ ವಾಪಸ್ಸಾದಂತೆಯೇ ಬದುಕಿನ ಕಷ್ಟ ಕಾರ್ಪಣ್ಯಗಳು, ಬೇನೆ, ಬೇಸರ, ಸುಖ ಸಂತೋಷಗಳನ್ನು ಅನುಭವಿಸಿಯೇ ಅವರು ಪಕ್ವತೆಗೇರಬೇಕು ಎಂಬ ಅಂತರಂಗ ಪರಿಪಾಕದ ದೃಷ್ಟಿಯೇ ಮುಖ್ಯವಾಗುವುದರಿಂದ ಸ್ತ್ರೀ-ಪುರುಷ ಸಂಬಂಧಗಳಲ್ಲಿ ಮೈಗೂಡಿರುವ ವೈಷಮ್ಯ ಈ "ಪರಿಪಾಕ"ಕ್ಕೆ ಅಡ್ಡಿಯನ್ನು ತರಲಾರದು! ಆದ್ದರಿಂದ ಈ ಜನರ ಒಟ್ಟು ಧೋರಣೆ ಪ್ರಶ್ನಿತವಾಗದಿದ್ದರೂ ಅಲ್ಲಲ್ಲಿ ಹಾಸ್ಯವಾಗಿ ಚಿತ್ರತವಾಗುತ್ತದೆ. ಉದಾಹರಣೆಗೆ :

ತೀರ್ಥಹಳ್ಳಿಯಲ್ಲಿ ಹೆಣ್ಣು ಮಕ್ಕಳಿಗೆಂದೇ ಮೀಸಲಾದ ಮಾಧ್ಯಮಿಕ ಶಾಲೆಯಿದ್ದರೂ ಅದಕ್ಕೆ ಕೃಷ್ಣಿಯಂತಹ ನಿಶ್ಚಿತಭವಿಷ್ಯವುಳ್ಳವರು ಸೇರಬೇಕಾಗಿಲ್ಲ. 'ಅದಕ್ಯಾತಕ್ಕೆ ಇಸ್ಕೂಲು ದಂಡಕ್ಕೆ. ಇನ್ನಾಲ್ಕ್ದಿನಕ್ಕೆ ಮದಿವ್ಯಾಗ್ಬಕು. ಅದೇನ್ನೌಕ್ರಿ

ಮಾಡ್ಬೇಕನಾ" ?[4] ಎಂಬ ನಾಗಮ್ಮನ ನುಡಿ, ಅಲ್ಲಿನ ಜನರ ಧೋರಣೆಯನ್ನು ತಮಾಷೆಯಾಗಿ ಹೇಳುವ ಯತ್ನವಷ್ಟೇ. ವಿದ್ಯೆ ಬಡ ಹುಡುಗಿಯರಿಗೆ ನೌಕರಿಗಾಗಿ ಅವಶ್ಯಕವೆಂಬ ಧೋರಣೆ ಇಂದಿರಾ ಅವರ ಮುಂದಿನ ಎಷ್ಟೋ ಕಾದಂಬರಿಗಳಲ್ಲೂ ಜನರ ಧೋರಣೆಯಾಗಿ ವ್ಯಕ್ತವಾಗುತ್ತದೆ. ಮತ್ತು ಆ ಧೋರಣೆ ಪ್ರಶ್ನೆಗೆ ಒಳಗಾಗುವುದಿಲ್ಲ. 'ತುಂಗಭದ್ರ'ದಲ್ಲಿ ಬದುಕು ಎಲ್ಲಕ್ಕಿಂತ ಮುಖ್ಯವೆಂದು ತಿಳಿಯುವ ನೋಟವಿದೆಯೆಂದೂ, ಇದು "ಹೆಣ್ಣು ಮಕ್ಕಳಿಗೆ ಮಾತ್ರ ವೇದ್ಯವಾಗುವ ಜೀವನದರ್ಶನ"ವೆಂದೂ ಕುರ್ತಕೋಟಿ ಬರೆಯುತ್ತಾರೆ.[5] ಈ ಶತಮಾನದ ಆದಿಯಲ್ಲೇ ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮನಂಥವರು ಮಹಿಳೆಯರದೇ ದೃಷ್ಟಿಯಿಂದ ಸಾಮಾಜಿಕ ಆಗುಹೋಗುಗಳನ್ನು ವಿಮರ್ಶಿಸಿ, ಹೆಣ್ಣು ಮಕ್ಕಳ ಬದುಕಿನ ಪರಿವರ್ತನೆಗಾಗಿ ತುಡಿಯುತ್ತ ಬರೆದರು. ಅವರ ಕೃತಿಗಳಲ್ಲಿ ಅವರ ಸಮಕಾಲೀನರಾಗಲಿ ಮುಂದಿನ ವಿಮರ್ಶಕರಾಗಲಿ ಯಾವುದೇ "ಹೆಣ್ಣು ಮಕ್ಕಳ ಜೀವನದರ್ಶನ"ವನ್ನು ಕಾಣಲು ಸಮರ್ಥರಾಗಲಿಲ್ಲ. ಆದರೆ ಯಾವುದೇ ಪುರುಷ ವಿಚಾರಕ್ಕೆ ವಿರೋಧವಾಗದಂತೆಯೇ ಬರೆದ ಇಂದಿರಾರವರ ಜೀವನದರ್ಶನ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದದ್ದು ಅಚ್ಚರಿಯೇ ? "ಯುಗಧರ್ಮ"ದ ವಿಮರ್ಶಕ ಕುರ್ತಕೋಟಿಯವರು ಇಂದಿರಾ ಕಾದಂಬರಿಗಳಲ್ಲಿ ಯುಗಧರ್ಮದ ವೈರುಧ್ಯವನ್ನು ಕಾಣಲಿಲ್ಲವೆಂಬುದು ಗಮನಾರ್ಹ.

ಸಾವು ಬದುಕಿನ ಸಾರವೆಂದು ನಂಬಿದ ಅಥವಾ ನಂಬಿಸಲ್ಪಟ್ಟಿದ್ದರ ಆಚೆಗೆ ಏನಿದ್ದೀತೆಂದು ಕುತೂಹಲಗೊಳ್ಳಲಾರದ ಹೆಣ್ಣುಮಕ್ಕಳ ಸಾಂಸಾರಿಕ ಬದುಕಿನ ಸೀಮಿತ ವಿವರಗಳೇ ಮತ್ತೆ ಮತ್ತೆ ಹಡೆದ ಕೂಸು ಎಂದರೆ ತಾಳ್ಮೆ, ಸಹಿಷ್ಣುತೆಗಳ ಪ್ರತಿರೂಪವೆನಿಸಿದ ಸ್ತ್ರೀತ್ವದ ಪ್ರತೀಕಗಳು. ಇಂದಿರಾ "ತುಂಗಭದ್ರದಲ್ಲಿ" ಸೃಷ್ಟಿಸಿದ ಜಾನಪದ ಸದೃಶವಾದ ಲೋಕವು ವಿಘಟಿತವಾಗತೊಡಗಿದಾಗ, ಮತ್ತೆ ಬದಲಾಗುತ್ತಿರುವ ಸಮಾಜದತ್ತ ಗಮನ ಹರಿಸಿರುವುದನ್ನು ಅವರ "ಸದಾನಂದ"ದಲ್ಲಿ ಕಾಣುತ್ತೇವೆ. ಇಲ್ಲಿಯೂ ಮಲೆನಾಡಿನ ಜನರ ಬದುಕಿನ ಸತ್ವ ಸಂಪತ್ತಿನ ದರ್ಶನ ಮಾಡಿಸಲು ಕೃತಿಯುದ್ದಕ್ಕೂ ಯತ್ನಿಸಲಾಗಿದೆ. ಆದರೆ ನಗರೀಕರಣ, ಶಿಕ್ಷಣದ ಪ್ರಸಾರ, ಔದ್ಯೋಗೀಕರಣ ಮೊದಲಾದ ಪ್ರಕ್ರಿಯೆಗಳಿಂದ ಹಳೆಯ ಮೌಲ್ಯಕ್ಕಂಟಿದ ಸಮಾಜ ವಿಘಟಿತವಾಗ ತೊಡಗಿದ್ದರ ಜೊತೆಯಲ್ಲಿ ಈ ಜಾನಪದ ಲೋಕ ಚಿತ್ರಿತವಾಗುತ್ತದೆ. ಕಾಫಿ ಪ್ಲಾಂಟರ್ ರಾಮಣ್ಣನ ಹಿರಿಮಗಳು ಕಮಲೆ ಎಳೆ ವಯಸ್ಸಿನಲ್ಲೇ ವಿಧವೆಯಾದದ್ದು, ಕಮಲೆಯ ತಮ್ಮ ಮೂರ್ತಿ ಓದಲು ನಗರಕ್ಕೆ ಹೋದವನು ತನ್ನ ಸಹಪಾಠಿಯಾದ ಬೇರೆ ಜಾತಿಯ ಹುಡುಗಿಯ ಕೈ ಹಿಡಿಯಬಯಸಿ, ಮೊದಲಿನಿಂದ ತನಗೆ ನಿಶ್ಚಯವಾಗಿದ್ದ ಸೋದರತ್ತೆಯ ಮಗಳು ಗೌರಿಯ ಸಂಬಂಧ ಮುರಿ

ದದ್ದು, ಮುಂದೆ ಬೇರೊಬ್ಬ ವರನೊಂದಿಗೆ ಮದುವೆಗೆಂದು ಹೊರಟಿದ್ದ ಗೌರಿ ಅಪಘಾತದಲ್ಲಿ ಕಾಲು ಮುರಿದು ವಿಕಲಳಾಗಿದ್ದು-ಇವು ಈ ಗ್ರಾಮೀಣ ಸುಂದರ ಲೋಕಕ್ಕೆ ಬಂದೆರಗುವ ಆಘಾತಗಳು. ಈ ಸಂದರ್ಭಗಳನ್ನು ಇಂದಿರಾ ನಿರ್ವಹಿಸಿರುವ ಬಗೆ ಗಮನಿಸಬೇಕಾದದ್ದು.

ವೈಧವ್ಯಕ್ಕೊಳಗಾದ ಕಮಲೆಯ ದುಸ್ಥಿತಿ, ರಾಮಣ್ಣನ ಕುಟುಂಬವನ್ನೇ ಜರ್ಝರಿತಗೊಳಿಸಿದರೂ ಏನೂಮಾಡಲಾರದ ಅಸಹಾಯಕತೆಯಲ್ಲಿ ವಿಧವೆ ಕಮಲೆಯ ಮೇಲೆ ಸಮಾಜ ಹೇರುವ ನಿರ್ಬಂಧಗಳನ್ನು ಒಪ್ಪಿ, ತಂದೆ ತಾಯಿಯರ ಸೇವೆ, ಕತೆ ಪುಸ್ತಕಗಳ ಓದುಗಳಲ್ಲಿ ತನ್ನನ್ನು ಮರೆಯಲು ವ್ಯರ್ಥ ಪ್ರಯತ್ನ ನಡೆಸತೊಡಗುತ್ತಾಳೆ.

ಮೂರ್ತಿಯ ಪ್ರೇಮ ವಿವಾಹ. ಗ್ರಾಮೀಣ ಸಂಸ್ಕೃತಿಯ ಸಹಜತೆ/ನಗರ ಸಂಸ್ಕೃತಿಯ ಕೃತಕತೆ,ಗ್ರಾಮೀಣ ಜನರ ಹೃದಯವಂತಿಕೆ/ನಗರದ ಜನರ ಬಾಹ್ಯಾಡಂಬರ ಸ್ಮಾರ್ತ ದೇಶಸ್ಥ ಮರಾಠಿ ಬ್ರಾಹ್ಮಣರ ಜೀವನ ವಿಧಾನಗಳ ಹೋಲಿಕೆ/ವ್ಯತ್ಯಾಸಗಳು ಮುಂತಾದ ಸ್ತರಗಳಲ್ಲಿ ಚಿತ್ರಿತ ವಾಗುತ್ತದೆ. ಅದಕ್ಕಿಂತ ಮಿಗಿಲಾಗಿ ಮೂರ್ತಿಯ ಸ್ವಾರ್ಥ, ಹಣ, ಪ್ರತಿಷ್ಠೆ, ವಿದೇಶಿ ಶಿಕ್ಷಣಗಳ ಹಂಬಲಗಳು ಗೌರಿಯ ತಾಳ್ಮೆ, ವಿವೇಕ, ಸ್ಥಿರಬುದ್ಧಿ, ವಿಶಾಲ ಹೃದಯದ ತ್ಯಾಗಗಳಿಗೆ ಎದುರಾಗಿ ವಿಶ್ಲೇಷಣೆಗೆ ಒಳಗಾಗುತ್ತವೆ. ಈ ಮುಖಾಮುಖಿಯಲ್ಲಿ ತನ್ನ ನಿರ್ಮಲ ಮನಸ್ಸಿನ ತಾಳ್ಮೆ, ಕರುಣೆ ಸಹನೆಗಳಿಂದ ಕೊನೆಗಾದರೂ ಗೌರಿಯೇ ಗೆಲ್ಲುತ್ತಾಳೆ. ಬಯಸಿದ್ದನ್ನೆಲ್ಲ ಪಡೆದರೂ ಮೂರ್ತಿ ಅಂತರಂಗದಲ್ಲಿ ಅಪರಾಧಿ ಭಾವ ಹೊತ್ತು ಪಶ್ಚಾತ್ತಾಪದಲ್ಲಿ ಬೆಂದು ಗೌರಿಯ ಬಳಿ ರಹಸ್ಯವಾಗಿ ಕ್ಷಮೆ ಯಾಚಿಸುತ್ತಾನೆ. ಗ್ರಾಮೀಣ ಹೆಣ್ಣಾದ ಗೌರಿಯ ದುಡಿಮೆ, ಅಂತಃಕರಣ, ಸ್ನೇಹಲಸ್ವಭಾವ, ದಿಟ್ಟತನಗಳೆಲ್ಲ ಬಲವಾಗಿ ಪ್ರತಿಪಾದಿತವಾಗಿರುವುದಾದರೂ ಅಂತಿಮವಾಗಿ ಪರಂಪರೆಯಿಂದ ಸಮಾಜ ಸ್ತ್ರೀಯಿಂದ ನಿರೀಕ್ಷಿಸುತ್ತ ಬಂದಿರುವ ಮೌಲ್ಯಗಳನ್ನು ಆಕೆ ಅಂತರ್ಗತವಾಗಿಸಿಕೊಂಡಿದ್ದಾಳೆ ಎಂಬುದರಲ್ಲಿಯೇ ಆಕೆಯ ಸಮಗ್ರತೆಯ ಗುಟ್ಟು ಅಡಗಿದೆ.

"....ಆ ಹೆಣ್ಣುಮಕ್ಕಳ ನೋಡಲ್ಲ. ಎಂಥ ಚುಳು ಚುಳು ಇದ್ದಾರೆ. ಎಂಥ ತ್ರಾಸ ಇದ್ದರೂ ನುಂಗಿ ನೀರು ಕುಡೀತಾರ ಈ ಮಂದಿ.ರವಷ್ಟು ಕಹಿ ತಂದಾರ ಮಾರಿ ಮ್ಯಾಲ?" ಕಷ್ಟಗಳನ್ನು ನುಂಗಿ ನೀರು ಕುಡಿದೂ ನಗುನಗುತ್ತ ಬದುಕಬೇಕೆಂಬ ಸ್ಥಿತಪ್ರಜ್ಞೆಯರಾದ ಕಮಲೆ, ಗೌರಿಯಂಥವರೇ ಇಂದಿರಾ ಕಾದಂಬರಿಗಳಲ್ಲಿ ಅತ್ಯಂತ ಆದರ್ಶವಾಗಿ, ಅಭಿಮಾನದಿಂದ ಚಿತ್ರಿಸಲ್ಪಡುವ ಸ್ತ್ರೀಯರು.

ಮುಂದೆ ಸದಾನಂದನೆಂಬ ಆಧುನಿಕ ವಿಚಾರಪರ ಸಮಾಜ ಸುಧಾರಕನ ಪ್ರವೇಶ ದಿಂದ ಈ ಜನರ ಬದುಕಿನಲ್ಲಿ ಪ್ರಗತಿ ತಲೆ ಹಾಕುತ್ತದೆ. ಸದಾನಂದನ ಆದರ್ಶೀಕೃತ ಚಿತ್ರ ಬಹು ಅಪ್ಯಾಯಮಾನವಾದ 'ಪಿತೃರೂಪಿ' ವ್ಯಕ್ತಿಯ ಚಿತ್ರಣವಾಗಿದ್ದು ಲೇಖಕಿಯೇ ಸ್ವತಃ ಆರಾಧನಾ ಭಾವದಲ್ಲಿ ಮುಳುಗುತ್ತಾರೆ. ಇವನ ವಿಚಾರ.ವ್ಯಕ್ತಿತ್ವಗಳ ಪ್ರಭಾವ ದಿಂದ ಮೂರ್ತಿಯ ತಮ್ಮ ರಾಜು ತನ್ನ ಬಾಲಸಖಿ ಗೌರಿಯನ್ನು ಮದುವೆಯಾಗಲು ನಿರ್ಧರಿಸುತ್ತಾನೆ. ರಾಜುವಿನ ಅಕ್ಕ ಕಮಲೆ ಸದಾನಂದನ ಮಡದಿಯಾಗುತ್ತಾಳೆ. ಈ ಕಾದಂಬರಿಯ ಕಥಾವಸ್ತುವಿನಲ್ಲಿ ಏಕಸೂತ್ರತೆ ಇಲ್ಲ ಎಂಬುದನ್ನು ಪ್ರಸ್ತಾಪಿಸುತ್ತ ಗಿರಡ್ಡಿ ಗೋವಿಂದರಾಜು ಅವರು ಮದುವೆ ಸಂಬಂಧಗಳು, ಅಂಗವಿಕಲರ ಮದುವೆ ಬಾಲವಿಧವೆಯರ ಮದುವೆ ಸಮಸ್ಯೆ ಮುಂತಾಗಿ ಇದರ ವಸ್ತು ಹಲವು ಹಂತಗಳಲ್ಲಿ ಬೇರೆಬೇರೆ ಕೇಂದ್ರ ಹೊಂದಿರುವುದನ್ನು ಪ್ರಸ್ತಾಪಿಸಿ, "ನಮ್ಮ ಲೇಖಕಿಯರು ಸಮಸ್ಯೆಯ ಬಿಕ್ಕಟ್ಟನ್ನು ಸಲೀಸಾಗಿ ಬದಿಗೆ ಸರಿಸಿ, ಆದರ್ಶವಾದ ಭಾವನಾಪರವಶತೆಗಳಿಗೆ ಮಾರು ಹೋಗುವುದಕ್ಕೆ ಇದೊಂದು ನಿದರ್ಶನ" ಎಂದು ಭಾವಿಸುತ್ತಾರೆ.[7] ಆದರೆ ಇಂದಿರಾ ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುವ (ಈ ಹಿಂದೆ ಗುರುತಿಸಿರುವ) ಒಟ್ಟು ವಿಚಾರ, ಧೋರಣೆಗಳನ್ನು ಗಮನಿಸಿದಾಗ, "ಸದಾನಂದ"ದಲ್ಲಿ ಅವರು ಆರಿಸಿಕೊಂಡ ವಸ್ತು ಅವರ ಗ್ರಹಿಕೆಗೇ ಮೀರಿದ್ದಾಗಿರುವುದನ್ನು ಕಾಣಬಹುದು. ಸ್ಥಿರ ಮೌಲ್ಯ ಗಳಲ್ಲಿ ಬೇರು ಬಿಟ್ಟ ಜನರ ಬದುಕಿನ ನಲುಗಾಟ, ಯಾತನೆಗಳು ಅವರಿಗೆ ಸುಲಭವಾಗಿ ಗ್ರಾಹ್ಯವಾಗುತ್ತವೆ. ಯಾಕೆಂದರೆ ಹಳೆಯದರ ಹಳಹಳಿಕೆಯಾಗಿ ಈ ದುರಂತಗಳನ್ನು ಚಿತ್ರಿಸಿ ಭಾವದರ್ಶನ ಮಾಡಿಸುವುದು ಸುಲಭ. ಆದರೆ ಸ್ವತಃ ಲೇಖಕಿ ನಂಬಿರುವ ಮೌಲ್ಯಗಳಿಗಿಂತ ಭಿನ್ನವಾದೊಂದು ಸ್ಥಿತಿಯನ್ನು ಅದರ ಎಲ್ಲ ವಾಸ್ತವತೆಯಲ್ಲಿ ಗ್ರಹಿಸಲಿಕ್ಕೆ ಹೆಚ್ಚಿನ ವೈಚಾರಿಕ ವ್ಯಾಪ್ತಿಯು ಅಗತ್ಯವಾಗಿರುತ್ತದೆ. "ಸದಾನಂದ" ಕೃತಿಯಲ್ಲಿ ಪ್ರಗತಿ, ಬದಲಾವಣೆಗಳ ಹರಿಕಾರರಾಗಿ ಬರುವ "ಸದಾನಂದ" "ರಾಜು" ಅವರ ಕ್ರಿಯೆಯ ಸತ್ವವನ್ನು ಕೇವಲ ಭಾವನೆಯ ನೆಲೆಯಲ್ಲಿ ಗ್ರಹಿಸುವ ಯತ್ನವಿರು ವುದರಿಂದ, ಸದಾನಂದ ತಾನು ಕಣ್ಣಿಂದ ನೋಡಿರದ ಕಮಲೆಯನ್ನು ರಾಜುವಿನ ಸಲಹೆಯಿಂದ ವಿವಾಹವಾಗಲು ಒಪ್ಪುವುದು, ಆ ಮೊದಲು ವಿಧವೆಯರ ಉದ್ಧಾರ ಕ್ಕಾಗಿ ಕಾದಂಬರಿಗಳನ್ನು ಬರೆದು, ಆಶ್ರಮ ನಡೆಸುತ್ತಿದ್ದರೂ ಅವನು ಒಬ್ಬ ವಿಧವೆಯ ಕೈಹಿಡಿವ ಬಗ್ಗೆ ಸ್ವತಃ ನಿರ್ಧಾರ ಕೈಗೊಂಡಿರಲಿಲ್ಲವೆನ್ನುವುದು, ರಾಜು ಗೌರಿಯ ಕೈಹಿಡಿಯಲಿಕ್ಕಾಗಿ ತನಗೆ ಗೊತ್ತಾಗಿದ್ದ ಜಾನಕಿಯೊಂದಿಗಿನ ಮದುವೆ ಮುರಿಯಲು ಮೂರ್ಛೆ ರೋಗಿಯಂತೆ ನಾಟಕವಾಡುವುದು ಮುಂತಾದ ಕೃತಕ ಸನ್ನಿವೇಶಗಳು ಎದುರಾಗುತ್ತವೆ. ಗೌರಿ ಕಮಲೆಯರ ಬದುಕುಗಳಿಗೆ ಕೂಡ ವಿವಾಹ ವೊಂದೇ ಪರಿಹಾರವೆಂದು ಕಾಣಿಸುವುದರ ಹಿಂದಿರುವ ಶ್ರದ್ಧೆ ಯಾವುದೆಂಬುದನ್ನು ಗಮನಿಸಬೇಕು. ವೈವಾಹಿಕ ಬದುಕೇ ಹೆಣ್ಣಿನ ಅಸ್ತಿತ್ವದ ಸಾರ್ಥಕಸ್ಥಿತಿ ಎಂದು

ನಂಬಿರುವ ಸಮಾಜದಲ್ಲಿ ಇಂದಿರಾ ಅವರಂಥ ಲೇಖಕಿಯರು ಈ ಗುರಿಗೆ ಭಂಗ ಬರುವುದನ್ನು ದುರಂತವಾಗಿ ಚಿತ್ರಿಸುತ್ತಾರೆ. ಹಾಗೆಯೇ ಆ ದುರಂತವು ವಿವಾಹದ ಮೂಲಕ ಸರಿಯಾಗುತ್ತದೆ. ಕಮಲೆಗೆ ಸದಾನಂದನಂಥ ವ್ಯಕ್ತಿಯ ಕೈಹಿಡಿಯಲು, ಗೌರಿಗೆ ಮೂರ್ತಿಯನ್ನು ಬಿಟ್ಟು ಬೇರೊಬ್ಬನನ್ನು, ಆ ಬೇರೊಬ್ಬನನ್ನು ಬಿಟ್ಟು ರಾಜುವನ್ನು ಸ್ವೀಕರಿಸಲು ಮಾನಸಿಕ ಸಿದ್ಧತೆಗಳೇನೂ ಬೇಕಾಗುವುದಿಲ್ಲ. ಏಕೆಂದರೆ ಬದುಕನ್ನು ಬಂದಂತೆಯೇ ಸ್ವೀಕರಿಸುವುದೇ ಅವರ ಗುಣವಾಗಿದೆ. ಇಂಥವರು ಸದಾನಂದ ರಾಜುವಿನಂಥ ಪಿತೃರೂಪಿ ಸುಧಾರಕರ ಪ್ರಗತಿ ಕಾರ್ಯಗಳಿಗೆ ಸಾಧನಗಳಾಗಿ ಒದಗುವ ಸ್ತ್ರೀಯರು. ಸ್ವತಃ ಕಾರ್ಯಸಾಧನೆಗೆ ತೊಡಗಬಲ್ಲ ಕ್ರಿಯಾಶೀಲ ವ್ಯಕ್ತಿತ್ವ ಇವರದಲ್ಲ. ಈ ರೀತಿಯಲ್ಲಿ ಗೌರಿ–ಕಮಲೆ, ಹಿಂದಿನ ಕೃಷ್ಣಿ, ತುಂಗೆ, ಭದ್ರೆ, ಮಂದಾಕಿನಿಯರ ಮುಂದುವರೆದ ರೂಪಗಳಾಗುತ್ತವೆ. ಸ್ವತಂತ್ರರಲ್ಲ. ಇವರೆಲ್ಲ ಬದುಕು ತಂದೊಡ್ಡುವ ದುಃಖ, ದುಗುಡ, ವ್ಯಂಗ್ಯ, ವಿಕೃತಿ, ದುರ್ದೈವಗಳೆದುರು ತಮ್ಮ ಕರುಳ ತುಡಿತ, ಸ್ನೇಹ, ಪ್ರೇಮ, ಸ್ಥೈರಣೆ, ಕರುಣೆಗಳನ್ನು ಪಣವೊಡ್ಡಿ ಗೆದ್ದಂತೆ ಚಿತ್ರಿತರಾಗುತ್ತಾರೆ. ಇವರ ನಿತ್ಯ ಸ್ಥಿರತೆಯ ಆಳದಲ್ಲಿ ಸಾಂಪ್ರದಾಯಿಕ ಸ್ತ್ರೀ ಮೌಲ್ಯಗಳು ಕೆಲಸ ಮಾಡುತ್ತವೆ. ಇಡೀ ಹಳ್ಳಿ ಅಥವಾ ಸಮುದಾಯ ಅಥವಾ ಕುಟುಂಬ, ತಲೆಮಾರುಗಳಲ್ಲಿ ಸ್ಥಿತ್ಯಂತರದಿಂದಾಗಿ ತುಮುಲ ಗೊಂದಲಗಳಿಗೆ ಒಳಗಾಗಬಹುದು. ಆದರೆ ಈ ಹೆಂಗಸರು ಮಾತ್ರ ಆ ಎಲ್ಲ ಗೊಂದಲಗಳ ನಿವಾರಕವಾದ ಸ್ಥಿರತೆಯ ಪ್ರತೀಕವಾಗಿ ಉಳಿಸಲ್ಪಡುತ್ತಾರೆ.

ಈ ಸ್ಥಿರತೆಯೂ ಉಳಿಯಲಾರದಷ್ಟು ತೀವ್ರವಾಗಿ ಸುತ್ತಲ ಬದುಕು ವಿಚ್ಛಿದ್ರವಾಗತೊಡಗಿದಾಗ ಇಂತಹ ಸ್ತ್ರೀಯರ ಸತ್ವವೂ ಸ್ಥಿತ್ಯಂತರಕ್ಕೆ ಒಳಗಾದುವನ್ನು ಇಂದಿರಾ ಅವರ "ಚಿದ್ವಿಲಾಸ"ವು ದಾಖಲಿಸುತ್ತದೆ. ಈ ಕಾದಂಬರಿಯ ಕೇಂದ್ರ ವ್ಯಕ್ತಿ ಭಾವನಾ ನಗರದ ಸುಶಿಕ್ಷಿತ ಕೆಳಮಧ್ಯಮ ವರ್ಗದ ಯುವತಿ, ತಂದೆಯ ಮರಣದಿಂದ ದೊಡ್ಡ ಕುಟುಂಬದ ಜವಾಬ್ದಾರಿಯನ್ನು ತನ್ನ ಹೆಗಲಿಗೇರಿಸಿಕೊಳ್ಳುವ ಆದರ್ಶವಾದಿ. ವಿದ್ಯೆ ಹೆಣ್ಣಿಗೆ ಅಗತ್ಯವಿಲ್ಲ ಎಂದು ನಂಬಿದ ಪುರಾತನ ಬದುಕಿನ ವಿಧಾನದಲ್ಲಿ ಸಹನೆ, ಸ್ಥೈರಣೆಗಳು ಕುಟುಂಬದ ಒಳಗೆ ಹೆಂಗಸಿನ ಆದರ್ಶಗಳಾಗಿದ್ದವು. ಆದರೆ ಶಿಕ್ಷಣಕ್ಕೆ ತೆರೆದುಕೊಂಡ ಮಧ್ಯಮ ವರ್ಗದ ಹೆಂಗಸರಿಗೆ ಈ "ಮಾತೆ"ಯ ಆದರ್ಶವಷ್ಟೇ ಅಲ್ಲ ; "ಪಿತೃತ್ವ"ದ ಪರ್ಯಾಯವನ್ನೂ ತಾವೇ ಸೃಷ್ಟಿಸಬೇಕಾದ ಅಗತ್ಯ ಒದಗಿತು.

ಭಾವನಾ ರೋಗಿಷ್ಟ ತಾಯಿಯ ಸೇವೆ, ಮೂವರು ತಂಗಿಯರು – ಒಬ್ಬ ತಮ್ಮನನ್ನು ಬೆಳೆಸಿ, ಓದಿಸಿ ಸರಿದಾರಿಗೆ ಹಚ್ಚುವ ಹೊಣೆಗೆ ಬದ್ಧಳಾಗಿ ಕೆಲಸಕ್ಕೆ

ಸೇರುತ್ತಾಳೆ. ಈ ಹೊರೆಗಳಡಿ ಆಕೆಯು ಸ್ವಂತ ಕನಸುಗಳನ್ನು, ಬಯಕೆಗಳನ್ನು ಹತ್ತಿಕ್ಕಿ ಕಿರಿಯರ ಏಳಿಗೆಗೆ ದುಡಿಯುತ್ತಾಳೆ.

ತಂಗಿ ರೂಪಾ ತನ್ನ ಸೌಂದರ್ಯ, ದಿಟ್ಟತನಗಳ ಬಂಡವಾಳದಿಂದ ಮೊದಲಿಯಾರರ ಸಿರಿವಂತ ಯುವಕನನ್ನು ಪ್ರೇಮಿಸಿ ಮದುವೆ ಮಾಡಿಕೊಳ್ಳುವುದರ ಮೂಲಕ ಭಾವನಾ ನಂಬಿದ್ದ ಮೌಲ್ಯಗಳಿಗೆ ಆಘಾತ ನೀಡುತ್ತಾಳೆ.

ಈ ರೀತಿ ಪರಸ್ಪರ ವಿರುದ್ಧ ಮೌಲ್ಯಗಳ ತಾಕಲಾಟದ ಪ್ರತೀಕಗಳಾಗಿ ಅವರ ಹೆಸರುಗಳನ್ನು ಆರಿಸಿಟ್ಟಿರುವ ಲೇಖಕಿ ರೂಪಾಳ ವರ್ತನೆಯನ್ನು ಶುದ್ಧ ಸ್ವಾರ್ಥದ ನಡತೆಯನ್ನಾಗಿ ಚಿತ್ರಿಸುತ್ತಾರೆ, ಭಾವನಾ ಕುಟುಂಬಕ್ಷೇಮದ ದೃಷ್ಟಿಯಿಂದ ರೂಪಾಳ ಯೋಜಿತ ವಿವಾಹದ ನೋಂದಣಿಗೆ ಸಹಿಹಾಕಿ, ಅವಳನ್ನು ಬೇರೆ ಕಡೆಗೆ ಸಾಗಹಾಕಿ, ಮನೆಯವರಿಂದ ವಿಷಯವನ್ನು ಗುಟ್ಟಾಗಿಟ್ಟು ತಾನೊಬ್ಬಳೇ ಯಾತನೆಯ ಪಲ್ಲಿ ಹೊರೆ ಹೊತ್ತ ಆದರ್ಶವಾದಿಯಾಗುವಂತೆ ಚಿತ್ರಿಸಿದ್ದಾರೆ. ಈ ಮೌಲ್ಯಗಳ ಗೊಂದಲಕ್ಕೆ ಮೂರನೆಯ ಆಯಾಮ ಒದಗಿಸುವ ಯತ್ನವನ್ನು ಮತ್ತೊಬ್ಬ ತಂಗಿ ಮಮತಾಳ ವೈವಾಹಿಕ ಬದುಕಿನ ಸಂದರ್ಭದಲ್ಲಿ ಕಾಣುತ್ತೇವೆ. ತನ್ನ ಸಹಪಾಠಿಯಾದ ರಾಧಾಕೃಷ್ಣನೊಂದಿಗೆ ಭಾವನಾ ಸ್ವತಃ ತಂಗಿಯ ಮದುವೆಯನ್ನು ಸಾಂಪ್ರದಾಯಿಕ ರೀತಿಯಿಂದ ನೆರವೇರಿಸಿ ಧನ್ಯತೆಯ ಭಾವನೆಯನ್ನು ಅನುಭವಿಸುತ್ತಾಳೆ.

ಇಡೀ ಕೃತಿಯಲ್ಲಿ ಭಾವನಾಳ ಮಾನಸಿಕ ತಾಕಲಾಟಗಳು, ಅವಳ ಸಂದಿಗ್ಧತೆ ಹಳೆಯ ಮೌಲ್ಯಗಳಿಗೂ ಹೊಸದಕ್ಕೂ ನಡುವೆ ಘರ್ಷಣೆಯಾಗಿರುವುದನ್ನು ಗಮನಿಸಬೇಕು. ರೂಪಾಳ ವಿಜಾತೀಯ ಮದುವೆಯಿಂದ ತನ್ನ ಇತರ ತಂಗಿಯರ ಮದುವೆಗೆ ಕಷ್ಟವಾಗುವುದೆಂದು ಭಾವನಾಳ ಕಳವಳ. ಆದಕ್ಕಾಗಿ ರೂಪಾಳ ಮದುವೆಯ ಸಂಗತಿಯನ್ನೇ ಇತರರಿಗೆ ತಿಳಿಯದಂತೆ ರಹಸ್ಯವಾಗಿಡುವುದು - ಇವೆಲ್ಲ ಆಕೆಯ ಚಿಂತನೆಗಳೂ ಹಳೆಯ ಸಮಾಜದ ನಿರೀಕ್ಷಿತ ಮೌಲ್ಯಗಳಿಗೆ ಬದ್ಧವಾಗಿರುವುದನ್ನೇ ಸೂಚಿಸುತ್ತವೆ.

ಮಮತಾಳಿಗೆ ತಾನೆ ನಿಂತು ವಿಧ್ಯುಕ್ತವಾಗಿ ಮದುವೆ ಮಾಡಿಸಿದಾಗ ಭಾವನಾ ಈ ಮದುವೆಯಲ್ಲಿನ ಸಂತೋಷ, ಸರಸ - ಸಂಭ್ರಮಗಳನ್ನು ಮೆಚ್ಚುತ್ತಾ ಯೋಚಿಸುವ ಬಗೆ ಗಮನಿಸಬೇಕು "ಅದೇ ರೂಪಾ ! ಎಂತಹ ಮದುವೆಯದು ! ರಿಜಿಸ್ಟ್ರಾರರ ಆಫೀಸಿನಲ್ಲಿ ಅವರು ರಿಜಿಸ್ಟರಿಗೆ ಸಹಿ ಹಾಕಿದಾಗ ತಾನೂ ಅಪರಾಧಿಯಂತೆ ನಡುಗುವ

ಕೈಗಳಿಂದ ಸಾಕ್ಷಿ ಹಾಕಿ ಬಂದಿದ್ದಳು. ಈ ಸರಸ ಸ್ವಚ್ಛಂದತೆ, ಧೈರ್ಯ ಆ ಕಳ್ಳತನದ ವ್ಯವಹಾರದಲ್ಲಿ ಎಲ್ಲಿಂದ ಬರಬೇಕು ?[8] (ಒತ್ತು ನನ್ನದು)

ಕೃತಿಯ ಕೊನೆಯಲ್ಲಿ ಮಮತಾಳ ಕುಟುಂಬದ ಸಾಮರಸ್ಯ ಕಂಡಾಗ ಭಾವನಾಳ ವಿಚಾರಗಳನ್ನು ಲೇಖಕಿ ತೃತೀಯ ಪುರುಷದಲ್ಲಿ ನಿರೂಪಿಸುತ್ತಾರೆ. "ಯಾವ ಜಾತಿಯಾದರೇನು ? ಯಾವ ಕುಲವಾದರೇನು ? ತನ್ನ ತಂಗಿ ಸುಖವಾಗಿದ್ದಾಳೆ ಎಂಬ ನಂಬಿಕೆ ಅವಳಿಗೆ ಬಂದಿದ್ದರೂ ಮತ್ತೊಬ್ಬರೆದುರಿಗೆ ಈ ಎಲ್ಲಾ ವಿವರಣೆ ಕೊಟ್ಟು ಸಮರ್ಥಿಸುವುದು ಬಹಳ ಕಷ್ಟದ ಕೆಲಸ. ಏನೇ ಆದರೂ ಇಂದಿನ ಸಮಾಜದ ರೀತಿನೀತಿಯನ್ನರಿತ ತನಗೇ ತನ್ನ ತಂಗಿ ಮಾಡಿದ ಕೆಲಸ ಸರಿಯಲ್ಲ ಅನ್ನಿಸುತ್ತದೆ. ಆದರೆ ಅವಳಿಗೆ ಕಾನೂನಿನ ನೆರವಿತ್ತು, ತಾಯಿಯ ಮತ್ತು ಅಕ್ಕನ ಅಂತರಂಗವನ್ನು ಅರಿತು ಅವಳು ತನ್ನ ಭವಿಷ್ಯದ ಕರೆಗೆ ಓಗೊಟ್ಟು ನಡೆದಳು. ನಿಸರ್ಗದ ಕೈವಾಡದ ಮುಂದೆ ಮಾನವರು ತುಂಬಾ ದುರ್ಬಲರು ಎಂಬ ತೀರ್ಮಾನಕ್ಕೆ ಬಂದಿದ್ದಳು"[9] ಇಲ್ಲಿ ತಂಗಿಯ ವರ್ತನೆ, ಮನದಾಳದಲ್ಲಿ ಇನ್ನೂ ತಪ್ಪಾಗಿ ಕಾಣಿಸುತ್ತಿರುವಾಗ, ಸಮಾಜ, ನಿಸರ್ಗ, ಕಾನೂನುಗಳ ಒತ್ತಡಕ್ಕೆ ಬಾಗಿ ಭಾವನಾ ತಳೆದ ಹತಾಶ ನಿಲುವು ಯಾವ ಕುಲವಾದರೇನು ಎಂದು ವ್ಯಕ್ತವಾಗುತ್ತದೆಯೇ ಹೊರತು, ಕುಲದ ಆಚೆಗೆ ಮಾನವೀಯ ಸಂಬಂಧಗಳನ್ನು ಗ್ರಹಿಸಬಲ್ಲ ಉದಾರ ಚಿಂತನೆ ಅದಲ್ಲ. ಹೀಗಾಗಿ ಭಾವನಾಳದೆಂದು ನಿರೂಪಿತವಾಗುವ ಈ ನಿಲುವು ಒಟ್ಟಾರೆ ಕೃತಿಯ ಮೂಲಕ ಲೇಖಕಿ ಪ್ರತಿಪಾದಿಸುವ ನಿಲುವೂ ಆಗಿ ತೋರುತ್ತದೆ. ಮಲೆನಾಡಿನ ಶ್ರೀಮಂತ ಹಳ್ಳಿಗರ ಬದುಕಿನ ಸಮೃದ್ಧತೆಯ ಬಗ್ಗೆ ಗಾಢವಾದ ಅನುರಕ್ತಿಯನ್ನು ಲೇಖಕಿ ತೋರಿಸುವುದನ್ನು ಕಂಡಾಗ ಇಂದಿರಾ ಆಧುನಿಕ ಜಗತ್ತಿನ ಸಂಕೀರ್ಣತೆ ಎದುರಲ್ಲಿ ಈ ಜಾನಪದ ಲೋಕದ ಸುಂದರ ಕನಸನ್ನು ಪರ್ಯಾಯವಾಗಿ ಸೂಚಿಸುತ್ತಾರೆ ಎಂದು ಖಚಿತವಾಗುತ್ತದೆ. ["ತಾಪದಿಂದ ತಂಪಿಗೆ", "ಶಾಂತಿಧಾಮ" ಮೊದಲಾದ ಇತರ ಕೃತಿಗಳೂ ಈ ಲೇಖಕಿಯ ಆಶಯವನ್ನು ಸಮರ್ಥಿಸಲು ರಚಿತವಾದಂತೆ ತೋರುತ್ತವೆ.]

ಹೆಣ್ಣಿನ ವ್ಯಕ್ತಿತ್ವಕ್ಕೆ ಸಂಬಂಧಿಸಿದ 'ಸ್ಥಿರ'ವೆನಿಸಿದ್ದ ಮೌಲ್ಯಗಳು ಅಸ್ಥಿರತೆಗೊಳಗಾದಂತೆ, ಸ್ತ್ರೀತ್ವದ ಸತ್ವ 'ಭಾವನಾ', 'ರೂಪಾ', 'ಮಮತಾ'ಗಳಾಗಿ ಛಿದ್ರಿತವಾದಂತೆ, ಈ ಕಳೆದುಕೊಂಡ ಸ್ಥಿರತೆ ಸಮಗ್ರತೆಗಳನ್ನು ಮತ್ತೆ ಅರಸುವ ಸಂಯೋಜಿಸುವ ಯತ್ನವಾಗಿ ಇಂದಿರಾ ಅವರ "ಫಣಿಯಮ್ಮ" ಬಹು ಮಹತ್ವಾಕಾಂಕ್ಷೆಯುಳ್ಳ ಕೃತಿಯೆನ್ನಬಹುದು.

ಕೃತಿಯ ಆರಂಭದಲ್ಲಿ ಸಾಂಪ್ರದಾಯಿಕ ಗ್ರಾಮೀಣ ಬದುಕಿನಲ್ಲಿ ತುಂಬಿರುವ ಅಜ್ಞಾನ, ಮೌಢ್ಯ, ಮಠದ ಸಂನ್ಯಾಸಿಗಳ ಧರ್ಮಾಂಧ ಕ್ರೌರ್ಯ, ಅದಕ್ಕೆ ಅಂಜಿ ಬದುಕುವ ಜನರ ಬದುಕಿನಲ್ಲಿನ ಪರಸ್ಪರ ವಿರುದ್ಧವಾದ ಆಚರಣೆಗಳು ಮೊದಲಾದು ವನ್ನು ವಿಡಂಬನೆ ಮತ್ತು ಹಾಸ್ಯ ಬೆರೆತ ಧಾಟಿಯಲ್ಲಿ ಪುರಾಣಗಳ ಕಥನ ತಂತ್ರವನ್ನು ಅನುಸರಿಸಿ ನಿರೂಪಿಸುತ್ತಾರೆ ಲೇಖಕಿ. ಆದರೆ ಆ ಸಾಮಾಜಿಕ ಪರಿಸರದಲ್ಲಿ ಬೇರು ಬಿಟ್ಟಿರುವ ಅವೈಚಾರಿಕತೆಗಳ ಬಗ್ಗೆ ಪ್ರಕಟವಾಗುವ ಈ ವಿಮರ್ಶಾ ದೃಷ್ಟಿ, ಅದೇ ಪರಿಸರದ ಉತ್ಪಾದನೆಯಾಗಿರುವ ಫಣಿಯಮ್ಮನ ವ್ಯಕ್ತಿತ್ವವನ್ನು ನಿರೂಪಿಸುವಾಗ ಮಾಯವಾಗುವುದಷ್ಟೇ ಅಲ್ಲ, ಬದಲಾಗಿ ಅಲ್ಲಿ ಲೇಖಕಿಯ ಆರಾಧನಾ ಭಾವ ವಿಜೃಂಭಿಸುತ್ತದೆ. ಉದಾಹರಣೆಗೆ: ಆಷಾಢದ ಧಾರಾಕಾರ ಮಳೆಯಲ್ಲಿ ನಡುರಾತ್ರಿ ಯಲ್ಲಿ ಫಣಿಯಮ್ಮ ಹುಟ್ಟಿದಾಗ ಮುದುಕ ವೆಂಕಪ್ಪಯ್ಯ ಗಳಿಗೆ ಎಣಿಸಿ, ಮುಹೂರ್ತ ಹಿಡಿದು ಜಾತಕ ಬರೆದು ಫಣಿಯಮ್ಮನ ಸೌಭಾಗ್ಯ ಫಲವನ್ನು ಹೇಳುವ ಬಗೆಗಳೆಲ್ಲ ವಾಸ್ತವವಾಗಿ ಫಣಿಯಮ್ಮನಿಗೆ ಬಂದೊದಗಿದ ವೈಧವ್ಯದ ದುರಂತದೆದುರು ವಿಡಂಬನೆ ಯಾಗಿ ತೋರುವುದನ್ನು ಇಂದಿರಾ ಅತ್ಯಂತ ಸಮರ್ಥವಾಗಿ ನಿರೂಪಿಸುತ್ತಾರೆ. ಆದರೆ ಫಣಿಯಮ್ಮ ಈ ಪರಿಸರದ ಪರಿಣಾಮವಾಗಿ ತಳೆದು ನಂಬಿರಬಹುದಾದ ಮೌಲ್ಯಗಳ ಬಗ್ಗೆ ಇದೇ ಎಚ್ಚರ ಕಾಣುವುದಿಲ್ಲ. ಬದಲಾಗಿ ಕೃತಿಯ ಕೊನೆಯಲ್ಲಿ ವಾಚ್ಯವಾಗಿ ಬರುವ ಈ ಮಾತುಗಳು ಲೇಖಕಿ ತನ್ನ ಸೃಷ್ಟಿಗಿಂತ ಬೇರೆಯಾಗಿಲ್ಲ ವೆಂಬುದನ್ನು ಖಚಿತಪಡಿಸುವಂತಿದೆ. "ಇತ್ತೀಚೆಗೆ ಬನಶಂಕರಮ್ಮನ ಬಾಯಿಂದ ಅವರ ಮಗಳು ಇಂದಿ ಎಲ್ಲಾ ವಿಷಯ ತಿಳಿದದ್ದರಿಂದ ಮತ್ತು ಅಂಚೆ ಅತ್ತೆಯನ್ನು ಅವಳು ಪ್ರತ್ಯಕ್ಷ ಕಂಡದ್ದರಿಂದ ಈ ಪುಟ್ಟ ಇತಿಹಾಸ ಬರೆಯಲು ಸಾಧ್ಯವಾಯಿತು. ಒಬ್ಬಳು ಅನಾಮಧೇಯ ವಿಧವೆಯ ಇತಿಹಾಸವಾದರೂ ಇದರಲ್ಲಿ ಏನೋ ಮಹತ್ವ ವಿದೆ ಅನ್ನಿಸಿತು. ಆದ್ದರಿಂದ ಇದು ರಚಿತವಾಗಿದೆ. ಆ ಪಾವನ ಜೀವಿಯ ಜೊತೆ ಎರಡು ವರ್ಷ ಕಾಲ ಇರುವ ಅವಕಾಶವೂ ಲೇಖಕಿಗಿತ್ತು. ಇದೂ ಒಂದು ಮಹತ್ವವೇ ಅಲ್ಲವೆ?"[10]

ಕೃತಿರಚನೆಗೂ ಮೊದಲೇ ಫಣಿಯಮ್ಮ ಒಬ್ಬ ಆದರ್ಶ ವ್ಯಕ್ತಿಯಾಗಿರುವುದ ರಿಂದ, ಕಾದಂಬರಿಯೆನ್ನುವುದು ಆ ಆದರ್ಶದ ಪ್ರಕಟಣೆಗೆ ಒಂದು ವಾಹಕ ಮಾತ್ರ ವಾಗಿರುವಂತೆ ತೋರುತ್ತದೆ. ಈ ಸಂಗತಿ ಕೃತಿಯೊಳಗೆ ಹುಟ್ಟುಹಾಕುವ ಅಂತರ್ ವಿರೋಧ ಲೇಖಕಿಯ ಅರಿವಿಗೆ ಬಾರದೆ ಉಳಿದಿರುವಂತೆನಿಸುತ್ತದೆ.

ಕೃತಿಯಲ್ಲಿ ಉದ್ದಕ್ಕೂ ಫಣಿಯಮ್ಮ ತಮ್ಮ ಸುತ್ತಲಿನ ಸಂಪ್ರದಾಯಸ್ಥ ಜಡಚೇತನಗಳಿಗಿಂತ ತುಂಬ ಭಿನ್ನರಾದವರೆನ್ನುವುದನ್ನು ಸ್ಥಾಪಿಸಲು, ಲೇಖಕಿ

ಫಣಿಯಮ್ಮನ ಮನಸ್ಸು ಯೋಚಿಸುವ ವಿಧಾನವನ್ನು ಮತ್ತೆ ಮತ್ತೆ ನಿರೂಪಿಸುತ್ತಾ ಸಾಗುತ್ತಾರೆ. "....ಆದರೂ ಕೆಲಸ ಮಾಡುವಾಗಲೆಲ್ಲ ಅವರ ತಲೆ ಈ ಸೃಷ್ಟಿ ರಹಸ್ಯದ ಬಗ್ಗೆ ಯೋಚಿಸುತ್ತಿತ್ತು. ಕಾಶಿಯಾತ್ರೆಯ ವಿನಾ ಮತ್ತೆ ಹೊರ ಪ್ರಪಂಚದ ಸಂಪರ್ಕವಿಲ್ಲದ ಅವರಿಗೆ ಮನೆಯ ಹಿರಿಯರು ಕಡ್ಡಾಯವಾಗಿ ಮಾಡಿಟ್ಟ ಸಂಪ್ರದಾಯಗಳ ಬಗೆಗೆ ಅರ್ಥವೇ ಆಗುತ್ತಿರಲಿಲ್ಲ....ಸಮ್ಮದೇ ಗರ್ಭದೊಳಗಿನ ರಕ್ತ ಹೊರಬಂದಾಗ ಅದು ಹೆಂಗಸಿನ ಪಾಲಿಗೆ ಮೈಲಿಗೆ, ಮೂರು ದಿನ ಹೊರಗೆ ಕೂತಿರಬೇಕು. ನಾಲ್ಕನೆಯ ದಿನಕ್ಕೆ ಅದು ಶುದ್ಧಿ. ನಂತರ ಮಡಿ....ತಿಂಗಳು ತಿಂಗಳು ಹಜಾಮನನ್ನು ಮುಟ್ಟಿಸಿಕೊಳ್ಳುವ ಮಡಿ ಹೆಂಗಸರು ಮಡಿ. ಯಾವ ಗಂಡಸಿನ ಸಂಪರ್ಕವೂ ಇಲ್ಲದ ಸಕೇಶಿಯರು ಯಾವ ಮಡಿ ಕೆಲಸಕ್ಕೂ ಬಾರದಷ್ಟು ಮೈಲಿಗೆ."[11] ಇಂತಹ ನೂರಾರು ಪ್ರಶ್ನೆಗಳು ಫಣಿಯಮ್ಮನ ತಲೆತಿನ್ನುತ್ತಿತ್ತು.

ತೋರಿಕೆಗೆ ಸಂಪ್ರದಾಯ ಮೀರುವಂತೆನಿಸುವ ಈ ಚಿಂತನೆಗಳ ಅಂತರಂಗದಲ್ಲಿ ಗಂಡಸಿನ ಸಂಪರ್ಕದಿಂದ ದೂರವಾಗಿರುವುದೇ ಮಡಿ. ಹಜಾಮನಿಂದ ಮುಟ್ಟಿಸಿಕೊಳ್ಳುವುದು ಅವರ ಜಾತಿ ಮತ್ತು ಗಂಡಸು ಎಂಬ ಕಾರಣಗಳಿಗಾಗಿ ಮೈಲಿಗೆ ಎಂಬ ನಂಬಿಕೆಗಳು ಅಡಗಿರುವುದರಿಂದ. ಈ ನಂಬಿಕೆಗಳೇ ಫಣಿಯಮ್ಮನನ್ನು ಅನೇಕ ಕ್ರಿಯೆಗಳಿಗೆ ಪ್ರೇರೇಪಿಸುತ್ತವೆ. ಹಜಾಮನ ಸ್ಪರ್ಶ ತಪ್ಪಿಸಲು ಆಕೆ ದತ್ತೂರಿ ರಸವನ್ನು ತಲೆಗೆ ಬಳಿದುಕೊಂಡು ಶಾಶ್ವತವಾಗಿ ತಲೆ ಬೋಳು ಮಾಡಿಕೊಂಡದ್ದು, ಹಾಗೂ ಕಾಮಸಂಬಂಧದ ಬಗ್ಗೆ ಆಕೆ ತಳೆದ ಗಾಢವಾದ ಜಿಗುಪ್ಸೆಗಳು ಅಂತಹ ಕೃತಿಗಳಾಗಿವೆ. ಆದರೆ ಈ ರೀತಿ ಲೇಖಕಿ ಫಣಿಯಮ್ಮನಿಗೆ ಆರೋಪಿಸಿ ಚಿತ್ರಿಸುವ ವೈಚಾರಿಕತೆಗೂ ಫಣಿಯಮ್ಮನ ಬದುಕಿಗೂ ಅಂತರವೇರ್ಪಟ್ಟಿರುವುದು ಲೇಖಕಿಯ ಗಮನಕ್ಕೆ ಬರದಷ್ಟು ಆರಾಧನಾ ಭಾವನೆ ಮತ್ತು ಗೌರವಗಳಿಂದ ಫಣಿಯಮ್ಮನ ಬದುಕಿನ ನಿರೂಪಣೆ ಸಾಗುತ್ತದೆ.

ಫಣಿಯಮ್ಮನ ಎಳೆ ಮನದ ಮೇಲೆ ಮೂರು ಘಟನೆಗಳು ಆಘಾತವುಂಟು ಮಾಡಿರುತ್ತವೆ–1) ಎಳ್ಳಮಾವಾಸ್ಯೆಯ ದಿನ ಕಳ್ಳರು ಆಕೆಯ ಜಡೆಕತ್ತರಿಸಿದ್ದು 2) ಮೈ ನೆರೆದ ನಾಲ್ಕನೇ ದಿನವೇ ತಲೆ ಬೋಳಿಸಲ್ಪಟ್ಟಿದ್ದು ಮತ್ತು 3) ಪುಟ್ಟಾಜೋಯಿಸ–ಸುಬ್ಬಿಯರ ಸಂಬಂಧವನ್ನು ಕಂಡದ್ದು. ಇವು ಮೂರೂ ಆಕೆಯನ್ನು ಈ ಸಂಸಾರದ 'ಬಂಧನ'ದಿಂದ 'ದೂರಮಾಡಿ' 'ಈ ಕೊಳಚೆಯ ಪ್ರಪಂಚದಿಂದ ತಪಸ್ವಿನೀ ಜೀವನದ ಕಡೆಗೆ ಒಯ್ದಿದ್ದವು' ಎಂದು ಲೇಖಕಿಯು ನಿರೂಪಿಸುತ್ತಾರೆ ಈ "ತಪಸ್ವಿನೀ" ತನದ ಸ್ವರೂಪವೇನೆಂದು ನೋಡಬೇಕು.

ಜಾತಿ ಮಡಿವಂತಿಕೆ ಬಿಟ್ಟು ಹೆರಿಗೆಮಾಡಿಸಿದ ಮಾನವೀಯತೆ, ದಾಕ್ಷಾಯಿಣಿಯ ಕೇಶ ಮುಂಡನದ ಬಗ್ಗೆ ಆಕೆ ತೋರಿದ ಸಾತ್ವಿಕ ವಿರೋಧ, ಜಾತಕ-ಭವಿಷ್ಯಗಳ ಬಗ್ಗೆ ಆಕೆ ತೋರುವ ತಿರಸ್ಕಾರಗಳು ಎಲ್ಲವೂ ಅಂತಹ ಪ್ರತಿಕ್ರಿಯೆಗಳಾಗಿವೆ. ಪ್ರತಿಯೊಂದು ಬಂಡಾಯವೂ ತನ್ನ ಮೂಲ ಸ್ವರೂಪದಲ್ಲಿ ಪ್ರತಿಕ್ರಿಯೆಯೇ ಆಗಿರುತ್ತದೆಂಬುದು ನಿಜ. ಈ ಪ್ರತಿಕ್ರಿಯೆ ಇತರರ ಬದುಕಿಗೆ ಚಾಲನೆ ನೀಡುವಂತೆ ಇದ್ದಾಗ ಪ್ರಗತಿಪರವೆನಿಸುತ್ತದೆ. ಈ ಮಟ್ಟಿಗೆ ಫಣಿಯಮ್ಮ ತಮ್ಮ ಮಿತಿಗಳ ಒಳಗೂ ಪ್ರಗತಿಪರವಾದ ಸತ್ವವುಳ್ಳ ವ್ಯಕ್ತಿಯೆಂದು ತೋರಬಹುದು.

ಆದರೆ ತನ್ನ ವೈಚಾರಿಕತೆಗಳನ್ನು ಯಾರೊಂದಿಗೂ ಹೇಳಿಕೊಳ್ಳದ ಅಂತರ್ಮುಖತೆ, ಹಾಗೂ ಸಂಪ್ರದಾಯವನ್ನು ಅದರ ಒಳ್ಳೆಯ ಅಂಶಗಳಲ್ಲಿ ಉಳಿಸಿಕೊಳ್ಳುವ ಯತ್ನವಾಗಿ ಫಣಿಯಮ್ಮ ತನ್ನ ಸುತ್ತಲಿನ ವ್ಯಕ್ತಿಗಳಿಗೆ ಕಾಣಿಸುವ ಬದುಕಿನ ವಿಧಾನ ಯಾವುದು ? ಸ್ವಂತ ಸುಖ, ಊಟೋಪಚಾರಗಳ ಹಂಬಲವಿಲ್ಲದ ಶಿಸ್ತಿನ ವ್ರತ, ತ್ಯಾಗ, ಸೇವೆ, ಸಹನೆ, ಕರುಣೆ, ಪರೋಪಕಾರ ಮತ್ತು ನಿಷ್ಕಾಮ ಕರ್ಮಯೋಗ, ಈ ಎಲ್ಲ ಗುಣಗಳೂ ಸಂಪ್ರದಾಯಸ್ಥ ಸಮಾಜ ವಿಧವೆಯೊಬ್ಬಳಿಂದ ನಿರೀಕ್ಷಿಸುತ್ತಿದ್ದ ಗುಣಗಳೇ ಆಗಿರುವುದರಿಂದಲೇ ಫಣಿಯಮ್ಮ 'ರಾಮಾಯಣ, ಮಹಾಭಾರತ, ಭಾಗವತದಲ್ಲೂ ಇಲ್ಲ'ದಂತಹ ಪಾವನಳಾದ ಹೆಣ್ಣು. ಆಕೆ 'ಶಾಪಗ್ರಸ್ತಳಾದ ದೇವತೆ' ಎಂದು ಆಕೆಯ ಸೋದರ (ಒಬ್ಬ ಪಿತೃರೂಪಿ?)ನಿಂದ ಪ್ರಶಂಸೆಗೆ ಒಳಗಾಗುವುದು. ಕೃತಿಯಲ್ಲಿನ ಧ್ವನಿಯೂ ಅದೇ ಆಗಿದೆ. ಅಂದರೆ ತಾನು ಪಡುವ ಬವಣೆಗಳಿಗಾಗಿ ಈಕೆ ಒಬ್ಬ "ತಪಸ್ವಿನಿ"ಯಾಗಿ ಇಲ್ಲಿ ಆರಾಧಿಸಲ್ಪಡುತ್ತಾಳೆ. ಕಳೆದ ಶತಮಾನದಲ್ಲಿ ಫಣಿಯಮ್ಮ ಬದುಕಿರಬಹುದಾದ ಅವಧಿಯಲ್ಲಿ ಪಂಡಿತೆ ರಮಾಬಾಯಿಯಂಥ ಬಾಲ ವಿಧವೆ, ಈ ಶತಮಾನದ ತಿರುಮಲಾಂಬಾ, ಕಲ್ಯಾಣಮ್ಮನಂಥವರು ನಿರ್ಮಿಸಿದ ಉಜ್ವಲ ಇತಿಹಾಸದ ಅರಿವು ಇರುವಾಗ ಫಣಿಯಮ್ಮ ಪ್ರತಿನಿಧಿಸುವ ಮೌಲ್ಯಗಳ ಆರಾಧನೆ ಸೂಕ್ತವೆ ; ಇವರ ಮೂಲಕ ಲೇಖಕಿ ಎತ್ತಿ ಹಿಡಿಯುತ್ತಿರುವುದು ಪರಂಪರಾಗತ ಮೌಲ್ಯಗಳನ್ನು ಮಾತ್ರ.

ಈ ವಿಶ್ಲೇಷಣೆಯ ಒಟ್ಟು ತಾತ್ಪರ್ಯವಾಗಿ ಇಂದಿರಾ ಅವರ ಕಾದಂಬರಿಗಳನ್ನು ಕುರಿತು ಈ ಅಂಶಗಳನ್ನು ಕ್ರೋಢೀಕರಿಸಿ ಹೇಳಬಹುದು :

1) ಪರಂಪರಾಗತವಾದ ಪಿತೃಪ್ರಾಧಾನ್ಯದ ಮೌಲ್ಯಗಳನ್ನು ಅರಗಿಸಿಕೊಂಡವರ ಬದುಕನ್ನು ಇಂದಿರಾ ಆ ಬದುಕು ಇರುವಂತೆ ನಮ್ಮೆದುರು ಚಿತ್ರಿಸಲು ಯತ್ನಿಸುತ್ತಾರೆ.

2) ಹಳ್ಳಿಯ–ಒಂದು ಇಡೀ ಸಮುದಾಯದ ಆಗು ಹೋಗುಗಳನ್ನು ವೈವಿಧ್ಯ ಪೂರ್ಣವಾಗಿ ನಿರೂಪಿಸಲು ಬೇಕಾದ ಅನುಭವ ಸಾಮಗ್ರಿ, ನಿರೂಪಣಾ ಸಾಮರ್ಥ್ಯ ಗಳು ಅವರಿಗೆ ದಕ್ಕಿರುವುದರಿಂದ ಪ್ರಧಾನ ಸಾಹಿತ್ಯ ವಾಹಿನಿಯು ನಿರೀಕ್ಷಿತ ಮೌಲ್ಯ ಗಳನ್ನು ಒಳಗೊಂಡ ಜನ ಬಯಸುವಂಥಾದ್ದನ್ನು. ಕೊಡುವುದರಿಂದ ಅವರ ಕೃತಿಗಳು ಬಹು ಜನಪ್ರಿಯವಾಗುವುದು ಸಾಧ್ಯವಾಗಿದೆಯೆನ್ನಬಹುದು.

3) ಹಳ್ಳಿಯ ನಗರದ ಶ್ರೀಮಂತ ಬಡ ಮಧ್ಯಮ ವರ್ಗಕ್ಕೆ ಬಹುವಾಗಿ ಸೀಮಿತ ವಾಗಿರುವ ಅವರ ಮಹಿಳಾ ಪಾತ್ರಗಳು ಈ ವರ್ಗದ ಕೌಟುಂಬಿಕ ಮೌಲ್ಯಗಳ ಪ್ರತಿ ನಿಧಿಗಳಾಗಿದ್ದಾರೆ. ಸಹನೆ, ಸೈರಣೆ, ಕರುಣೆ, ತ್ಯಾಗ, ದುಃಖ ನುಂಗಿ ನಗಬಲ್ಲ ಚೈತನ್ಯ, ದುಡಿಮೆಗಳು ಈ ಪಾತ್ರಗಳಲ್ಲಿ ಒಂದು ಸಮಗ್ರತೆಯನ್ನು ತಂದುಕೊಡುವ ಗುಣಗಳಾಗಿದ್ದು, ಈ ಒಟ್ಟಾರೆ ಸ್ತ್ರೀತ್ವದ ಕಲ್ಪನೆಯು ಪುರುಷ ಕಲ್ಪಿತವಾದ ಸ್ತ್ರೀ ಮೌಲ್ಯಗಳನ್ನೇ ಎತ್ತಿ ಹಿಡಿಯುವಂತೆ ತೋರುತ್ತದೆ.

4) ಬದಲಾವಣೆ ಧುತ್ತೆಂದು ಎದುರಾದಾಗ ಕುಸಿದು, ಕೊರಗಿ, ನವೆಯು ವವರ ಸಂತಾಪ, ಪರಿತಾಪಗಳನ್ನು ಸಹಜವಾಗಿ ಚಿತ್ರಿಸುವ ಇಂದಿರಾ, ಬದಲಾ ವಣೆಯ ಪ್ರಕ್ರಿಯೆಯಲ್ಲಿನ ಇತ್ಯಾತ್ಮಕ ಅಂಶಗಳಿಗೆ ಅಷ್ಟು ಸಹಜವಾಗಿ ತೆರೆದುಕೊಳ್ಳ ಲಾರರು. ಹಾಗಾಗಿ ಅವರ ಸ್ತ್ರೀ ಪಾತ್ರಗಳು ಸಾಮೂಹಿಕ ಬದುಕಿಗೆ ಕ್ರಿಯಾಶೀಲ ವಾಗಿ, ಉತ್ಪಾದಕವಾಗಿ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಬಲವಂತವಾಗಿ ಬದಲಾವಣೆಗೆ ಒಗ್ಗಿಕೊಳ್ಳುವ ಅಥವಾ ಸ್ವೀಕರಿಸುವ ಜಡತೆಯ ಪ್ರತೀಕಗಳಾಗಿ ಉಳಿಯುತ್ತಾರೆ ಎನಿಸುತ್ತದೆ.

5) ನಾಗರಿಕ ಲೋಕದ ಸಮಸ್ಯೆಗಳ ಸಂಕೀರ್ಣತೆಗೆ ಎದುರಾಗಿ ಹಿಂದಿನ ಗ್ರಾಮೀಣ ಬದುಕಿನ ತಂಪಿನ ಲೋಕವೊಂದನ್ನು ಕಲ್ಪಿಸುವ ರೀತಿ ಒಂದು ರೀತಿಯಲ್ಲಿ ಹಳ್ಳಿಗಂಟಿದ ಮನಸ್ಸು ಆಧುನಿಕತೆಯೆದುರು ಅನುಭವಿಸುವ ತಾಕಲಾಟವೆನ್ನಬಹುದು. ಇದು ಒಂದು ರೀತಿಯ ಪಲಾಯನವಾದವಾಗಿರುವುದರಿಂದ ಲೇಖಕಿ 'ತಾವು ನಿರ್ಮಿಸಿದ ಸಮಸ್ಯೆಯನ್ನು ಕೃತಿಯಲ್ಲಿ ತಾವೇ ಎದುರಿಸಲು ಅಸಮರ್ಥರಾಗುವರೆಂಬ' ಗಿರಡ್ಡಿಯವರ ಟೀಕೆ ಹಾಗೆಯೇ ಉಳಿಯುತ್ತದೆ.

ಒಟ್ಟಾರೆ ಹೇಳುವುದಾದರೆ ಇಂದಿರಾ ಬಿಂಬಿಸುವ ಸ್ತ್ರೀ ಪಾತ್ರಗಳು ಒಂದೋ ಹಳೆಯ ಪರಂಪರೆಯ ಆಧುನಿಕ ಸ್ಥಿರರೂಪಗಳಾಗಿ, ಕೃಷ್ಣಿ, ಮಂದಾಕಿನಿ ಅಥವಾ ಗೌರಿ, ಕಮಲೆಯರ ರೂಪ ತಳೆಯುವವರು. ಸಂಪ್ರದಾಯದ ಬೇರುಗಳೇ ಇವರ

ಗಟ್ಟಿತನಕ್ಕೆ ಆಧಾರ. ಈ ಬೇರು ಅಲುಗಿದಾಗ ಭಾವನಾ, ಫಣಿಯಮ್ಮನಂಥವರು ಸೃಷ್ಟಿಯಾಗುತ್ತಾರೆ. ಹೊಸದರೆದುರು ಚಲಿಸುವಂತೆ ಇವರು ತೋರಿದರೂ ಇವರ ಚಲನೆ ಅಂತಿಮವಾಗಿ ಹಿಮ್ಮುಖವಾಗಿರುತ್ತವೆ. ಬದಲಾಗುವ ಬದಲಾಗಲೇಬೇಕಾದ ಮೌಲ್ಯಗಳ ಬಗ್ಗೆ, ಸಮಕಾಲೀನ ಜಗತ್ತಿನ ಆಗುಹೋಗುಗಳಿಗೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಗತಿಸಿದ ಬದುಕಿನತ್ತಲೇ ಒಲವಿರುವ ಇಂದಿರಾ ಕೃತಿಗಳು ಸ್ತ್ರೀ ಪರವಾದಂತೆ ತೋರಿದರೂ ಪುರಾಣ ಮೌಲ್ಯಗಳ ಶೋಧನೆಗೇ ಮೀಸಲಾಗಿರುವಂತೆ ತೋರುತ್ತವೆ.

ಟಿಪ್ಪಣಿಗಳು

1] ಈ ನಿಟ್ಟಿನ ಸಂಶೋಧನೆ, ವಿಮರ್ಶೆಗಳಿಗೆ ಉದಾಹರಣೆ :

i) 'ಹಿತೈಷಿಣೀ' ತಿರುಮಲಾಂಬಾ : ಸಂ. ಚಿ. ನ. ಮಂಗಳ, ತಿರುಮಲಾಂಬ ಜನ್ಮ ಶತಮಾನೋತ್ಸವ ಸಮಿತಿ, 1987.

ii) ಆರ್. ಕಲ್ಯಾಣಮ್ಮ : ಜೀವನ ಮತ್ತು ಕಾರ್ಯ. ಎಚ್.ಎಸ್. ಪಾರ್ವತಿ. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

iii) ಶ್ಯಾಮಲಾ ಸಂಚಯ : ಸಂ. ಡಾ॥ ವಿಜಯದಬ್ಬೆ. ಅಖಿಲ ಕರ್ನಾಟಕ ಲೇಖಕಿಯರ ಸಂಘ. ಬೆಂಗಳೂರು. 1989.

iv) ಬೆಳಗೆರೆ ಜಾನಕಮ್ಮ : ನೇಮಿಚಂದ್ರ ಅಖಿಲ ಕರ್ನಾಟಕ ಲೇಖಕಿಯರ ಸಂಘ.

2] ಈ ನಿಟ್ಟಿನ ವಿಮರ್ಶೆಗೆ ನೋಡಿ :-

i) ಮಹಿಳೆ ಸಾಹಿತ್ಯ ಸಮಾಜ : ವಿಜಯಾ ದಬ್ಬೆ- ರಚನಾ ಪ್ರಕಾಶನ, ಮೈಸೂರು. 1989

ii) ತ್ರಿವೇಣಿ : ಸಂ. ಎನ್. ಗಾಯತ್ರಿ, ಜಾಗೃತಿ ಪ್ರಕಾಶನ, ಬೆಂಗಳೂರು. 1989

iii) ಸಾರ್ವತ್ರಿಕದೆಡೆಗೆ : ಬಿ. ಎನ್. ಸುಮಿತ್ರಾಬಾಯಿ, ಮಾನವೀ ಪ್ರಕಾಶನ, ಹಾಸನ. 1987

iv) 'ಅಚಲಾ' (ಸಂ. ಎನ್. ಗಾಯಿತ್ರಿ) ಮತ್ತು 'ಮಾನಸ ತಿಂಗಳ ಪತ್ರಿಕೆ' (ಸಂ.ಎಚ್.ಎಸ್. ಚಂಪಾವತಿ) ಪ್ರಕಟಿಸುವ ಹಲವಾರು ಸ್ತ್ರೀವಾದಿ ವಿಮರ್ಶೆಗಳು.

3] 'ತುಂಗಭದ್ರ' : ಪ್ರಥಮ ಮುದ್ರಣ- ಮನೋಹರ ಗ್ರಂಥಮಾಲಾ, ಧಾರವಾಡ. 1963 ಪ್ರ. ಕುರ್ತುಕೋಟಿಯವರ ಮುನ್ನುಡಿ.

4] ತುಂಗಭದ್ರ : ದ್ವಿ. ಮುದ್ರಣ– ಎಸ್. ಆರ್. ಪ್ರಕಾಶನ, ಬೆಂಗಳೂರು. 1970 ಪು.21

5] ಕುರ್ತಕೋಟಿ : ಪೂರ್ವೋಕ್ತ.

6] ಸದಾನಂದ : ಹೇಮಂತ ಸಾಹಿತ್ಯ ಪ್ರಕಾಶನ 1982. ಪು. 167.

7] ಮಹಿಳೆ ಮತ್ತು ಕನ್ನಡ ಸಾಹಿತ್ಯ : ಸಂ. ಜಿ. ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 1989. ಇದರಲ್ಲಿ 'ಕನ್ನಡ ಕಾದಂಬರಿಕಾರ್ತಿಯರಲ್ಲಿ ವಸ್ತು ನಿರ್ವಹಣೆ' ಲೇಖನ. ಪು. 21–22

8] ಚಿದ್ವಿಲಾಸ : ಮೂರನೇ ಮುದ್ರಣ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು–1983. ಪು. 78-79, 169.

9] ಅದೇ : ಪು. 95.

10] ಫಣಿಯಮ್ಮ : ಹೇಮಂತ ಸಾಹಿತ್ಯ ಪ್ರಕಾಶನದ ದ್ವಿ. ಮುದ್ರಣ, ಬೆಂಗಳೂರು 1981. ಪು. 112.

11] ಅದೇ 76-77: ಪು.

ಇಂದಿರಾ ಕೃತಿಗಳು ನಾನು ಕಂಡಂತೆ

○

○

○ **ಸಾರಾ ಅಬೂಬಕ್ಕರ್**

ಮಧ್ಯ ವಯಸ್ಸಿಗೆ ಕಾಲಿಟ್ಟ ಬಳಿಕವಷ್ಟೆ ಬರಹವನ್ನು ಕೈಗೆತ್ತಿಕೊಂಡ ಇಂದಿರಾ ಅವರ ಜೀವನಾನುಭವದಿಂದ ಮಾಗಿದ ಮನಸ್ಸು ಕಾಲ್ಪನಿಕತೆಗೆ ಅಷ್ಟಾಗಿ ಪ್ರಾಮುಖ್ಯ ನೀಡದೆ ಆದಷ್ಟೂ ಬದುಕಿನ ವಾಸ್ತವ ಚಿತ್ರಣವನ್ನೇ ಕೊಡಲು ಸೃಜನಶೀಲ ಕೃತಿಗಳತ್ತಲೇ ತಮ್ಮ ಗಮನವನ್ನು ಕೇಂದ್ರೀಕರಿಸಲು ಪ್ರಯತ್ನಿಸಿದೆ.

ಮಲೆನಾಡ ಭಾಷೆ, ಮುಗ್ಧವಾದ ಶೈಲಿ, ಸರಳವಾದ ನೇರ ನಿರೂಪಣೆ. ಇವು ಇಂದಿರಾರ ವೈಶಿಷ್ಟ್ಯ ಎನ್ನಬಹುದು. ಹಳ್ಳಿಯ ವಾತಾವರಣದಲ್ಲಿ ಬೆಳೆದ ನಾನಂತೂ ಅವರ ಈ ಮಲೆನಾಡಿನ ವರ್ಣನೆಗಳನ್ನು ಸವಿಯುತ್ತಾ ಅದರಲ್ಲಿ ತನ್ಮಯಳಾಗುತ್ತಿದ್ದೆ. ಎಂ. ಕೆ. ಇಂದಿರಾ ಅವರ ಕೃತಿಗಳನ್ನೋದುವುದೆಂದರೆ ಮಳೆಗಾಲದ ಒಂದು ದಿನ ಗೆಣಸಿನ ಹಪ್ಪಳ ಸುಟ್ಟು ತಿನ್ನುತ್ತಾ ನಮ್ಮ ಚಂದ್ರಗಿರಿ ನದಿಯ ನೆರೆ ನೋಡುತ್ತಾ ಕುಳಿತಂತಹ ಒಂದು ಆನಂದದ ಅನುಭೂತಿ ನಮ್ಮದಾಗುತ್ತದೆ.

ಇಂದಿರಾ ಅವರ ಕೃತಿಗಳಲ್ಲಿ ಫಣಿಯಮ್ಮ, ಗೆಜ್ಜೆಪೂಜೆ, ಸದಾನಂದ, ತಪೋವನದಲ್ಲಿ ಮುಂತಾದವುಗಳು ನನ್ನ ಮೆಚ್ಚಿನ ಕೃತಿಗಳಾಗಿವೆ. ಗೆಜ್ಜೆಪೂಜೆಯಲ್ಲಿ ವೇಶ್ಯಾಪದ್ಧತಿಯ ನೈಜ ಚಿತ್ರಣವಿದ್ದು ವೇಶ್ಯೆಯಲ್ಲಿ ಹುಟ್ಟಿದ ಹೆಣ್ಣು ಮಗಳೊಬ್ಬಳ ಮಾನಸಿಕ ತುಮುಲವನ್ನು ಅತ್ಯಂತ ಸಮರ್ಥವಾಗಿ ಬಿಂಬಿಸಲಾಗಿದೆ. ತನ್ನ ಬದುಕು ಪೂರ್ತಿ ತಾನು ವೇಶ್ಯೆಯಾಗಿ ಬಾಳು ಸವೆಸಬೇಕಲ್ಲದೆ ತಾನೆಂದೂ ಎಲ್ಲಿ

ಸಂಸಾರಸ್ಥ ಹೆಣ್ಣು ಮಕ್ಕಳಂತೆ ಓರ್ವನ ಮಡದಿಯಾಗಿ, ಗೃಹಿಣಿಯಾಗಿ ಮಕ್ಕಳ ತಾಯಾಗಿ ಬಾಳಲಾರೆ ಎಂಬ ಅರಿವು, ಅದಕ್ಕಾಗಿ ಆಕೆ ಪಡುವ ಸಂಕಟ ಇವುಗಳನ್ನೆಲ್ಲ ಈ ಕೃತಿಯಲ್ಲಿ ಸಮರ್ಥವಾಗಿ ಸೆರೆ ಹಿಡಿಯಲಾಗಿದೆ. ವೇಶ್ಯೆಯ ಮಗಳಾಗಿ ಹುಟ್ಟಿದ ಒಂದೇ ತಪ್ಪಿಗಾಗಿ ಆಕೆ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನೂ ಚಿವುಟಿ ಎಸೆದು ಊರವರ ಸ್ವತ್ತಾಗಿ ಬಾಳಬೇಕೆಂಬ ಯಾತನೆಯಿಂದಲೇ ಹಗಲಿರುಳೂ ಸಂಕಟಪಡುತ್ತಾಳೆ. ಅಂತಹ ನರಕದ ಬದುಕಿಗಿಂತಲೂ ಸಾವೇ ಸ್ವರ್ಗವೆಂಬ ಕಠಿಣ ನಿರ್ಧಾರವನ್ನೂ ಕೈಗೊಳ್ಳುತ್ತಾಳೆ. 'ಹೆಣ್ಣು ಮಕ್ಕಳು ಎಂದಿಗೂ ಆತ್ಮಹತ್ಯೆಯ ನಿರ್ಧಾರವನ್ನು ಕೈಗೆತ್ತಿಕೊಳ್ಳುವಂತೆ ಸಾಹಿತಿಗಳು ಚಿತ್ರಿಸಬಾರದು. ಎಷ್ಟೇ ಕಷ್ಟ ಪಟ್ಟರೂ ಅವರು ಬದುಕನ್ನು ಎದುರಿಸಬೇಕು. ಆತ್ಮಹತ್ಯೆ ಯಾವ ಸಮಸ್ಯೆಗೂ ಪರಿಹಾರವಾಗದು.' ಎಂದು ಹಿರಿಯ ಸಾಹಿತಿಗಳೊಬ್ಬರು ಒಮ್ಮೆ ನನ್ನೊಡನೆಂದಿದ್ದರು. ಆದರೆ ಕೆಲವೊಮ್ಮೆ ನಮ್ಮ ಹೆಣ್ಣುಮಕ್ಕಳು ಆತ್ಮಹತ್ಯೆಯ ಮೂಲಕವೇ ಸಮಾಜವನ್ನು ಪ್ರಶ್ನಿಸಬೇಕಾಗುತ್ತದೆ. ಅವರಿಗೆ ಬೇರೆ ಹಾದಿಯೇ ಇರುವುದಿಲ್ಲ. ನನ್ನ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯ ಕಥಾನಾಯಕಿ ಮತ್ತು ಇಂದಿರಾ ಅವರ 'ಗೆಜ್ಜೆ ಪೂಜೆ'ಯ ಕಥಾನಾಯಕಿ ಇಬ್ಬರೂ ಸಮಾಜವನ್ನು ಪ್ರಶ್ನಿಸಲು ಆತ್ಮಹತ್ಯೆಯಂತಹ ಕಠಿಣ ಕ್ರಮವನ್ನೇ ಕೈಗೊಳ್ಳಬೇಕಾಗಿತ್ತಲ್ಲದೆ ಬೇರೆ ಹಾದಿ ಇರಲಿಲ್ಲ ಎಂಬುದನ್ನಷ್ಟೆ ಇಲ್ಲಿ ಹೇಳಲಿಚ್ಛಿಸುತ್ತೇನೆ.

ಅವರ ಇನ್ನೊಂದು ಸೃಜನಾತ್ಮಕ ಕೃತಿ ಫಣಿಯಮ್ಮ. ಬಾಲ ವಿಧವೆಯೊಬ್ಬಳ ಬದುಕಿನ ನೈಜ ಚಿತ್ರಣ ಇದಾಗಿದೆ. ತನ್ನ ಒಂಭತ್ತನೇ ವರ್ಷದಲ್ಲಿ ಮದುವೆಯಾಗಿ ಆಗಲೇ ಪತಿಯನ್ನು ಕಳೆದುಕೊಂಡು ಮೈನೆರೆದೊಡನೆ ಕೇಶಮುಂಡನ ಮಾಡಿಸಿಕೊಂಡು ಒಂದು ಬಿಳಿ ಸೀರೆಯಲ್ಲಿ, ಅರೆಹೊಟ್ಟೆಯಲ್ಲಿ ಬದುಕು ಪೂರ್ತಿ ಸವೆಸಿದ ಫಣಿಯಮ್ಮನ ಬದುಕು ಓರ್ವ ಮಾನವಜೀವಿಯ ಬದುಕಲ್ಲ. ಆಕೆ ಹಾಗೆ ಬದುಕಿದ್ದು ಕೂಡಾ ನೂರಾ ಹನ್ನೆರಡು ವರ್ಷ! ಹೆಂಡತಿ ಸತ್ತಾಗ ಗಂಡನ ಮೇಲೆ ಯಾವ ನಿರ್ಬಂಧವನ್ನೂ ಹೇರದೆ ಆತನಿಗೆ ಇನ್ನೊಂದು ಎಳೆ ಹುಡುಗಿಯೊಡನೆ ಪುನರ್ವಿವಾಹದ ಏರ್ಪಾಟು ಮಾಡುವ ಸಮಾಜ ಒಂದು ಪುಟ್ಟ ಹುಡುಗಿಗೆ ಮದುವೆ ಮಾಡಿಸಿ ಆ ಗಂಡ ಸತ್ತಾಗ ಆಕೆ ಮಾನವ ಜೀವಿಯಾಗಿ ಬದುಕಲು ಅಯೋಗ್ಯಳು ಎಂದೇ ತೀರ್ಮಾನಿಸುತ್ತದಲ್ಲವೇ ?

ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ ಬೆಳೆದ ಇಂದಿರಾ ಅವರು ತಮ್ಮ ಸಮಾಜದಲ್ಲಿ ಹರಡಿರುವ ಹಲವಾರು ಮೂಢನಂಬಿಕೆಗಳನ್ನು, ಶಾಸ್ತ್ರ. ಸಂಪ್ರದಾಯಗಳನ್ನು ಧೈರ್ಯದಿಂದ ಟೀಕಿಸುತ್ತಾರೆ. ಶೃಂಗೇರಿ ಮಠದ ಸ್ವಾಮಿಗಳನ್ನೂ, ಅಲ್ಲಿನ ಧರ್ಮಾಧಿಕಾರಿಗಳನ್ನೂ, ಚೆನ್ನಾಗಿಯೇ ತರಾಟೆಗೆ ತೆಗೆದುಕೊಳ್ಳುವುದನ್ನು ನಾವು

'ಫಣಿಯಮ್ಮ' ಕೃತಿಯಲ್ಲಿ ಕಾಣುತ್ತೇವೆ. ಬಾಲ ವಿಧವೆಯನ್ನು ಬಸಿರು ಮಾಡಿದಾತನೇ ಮಠಕ್ಕೆ ಹೋಗಿ ದೂರು ನೀಡಿ ಆಕೆಗೆ ಬಹಿಷ್ಕಾರ ಹಾಕಿರುವುದನ್ನು ವಿವರಿಸುತ್ತಾ, ಸನ್ಯಾಸಿಯಾದ ಸ್ವಾಮಿಗಳಾದರೂ ಈ ವ್ಯಭಿಚಾರದ ಪುರಾಣ ಕೇಳುವುದು ತಮ್ಮ ಬ್ರಹ್ಮಚರ್ಯಕ್ಕೆ ಕುಂದು ಎಂದು ತಿಳಿಯರು ಎಂದು ಮುಲಾಜಿಲ್ಲದೆ ಬರೆದಿದ್ದಾರೆ. ಹಾಗೆಯೇ ಸಮಸ್ಯೆಗೆ ಪರಿಹಾರ ಕೇಳಲು ಹೋದವರು ಲಂಚ ನೀಡದೆ, ಕೆಲವು ಬೆಳ್ಳಿ ರೂಪಾಯಿಗಳು ಕೈ ಬದಲಾಗದೆ ತಮ್ಮ ಪ್ರಶ್ನೆಗೆ ಉತ್ತರ ದೊರೆಯಲಾರದು ಎಂಬುದನ್ನು ಯಾವ ಅಳುಕೂ ಇಲ್ಲದೆ ವಿವರಿಸಿದ್ದಾರೆ. 'ಸ್ವರ್ಗ, ನರಕ, ಪುನರ್ಜನ್ಮ, ನರಕದ ಶಿಕ್ಷೆ, ಪ್ರಾಯಶ್ಚಿತ್ತ ಇವುಗಳನ್ನು ಮೂಢರು ಬಲವಾಗಿ ನಂಬುತ್ತಿದ್ದರು; ಘಾಟಿಗಳು ನಂಬದಿದ್ದರೂ ನಂಬಿದಂತೆ ನಟಿಸುತ್ತಿದ್ದರು.' ಎಂಬ ವಾಕ್ಯದಲ್ಲಿ ಇಂದಿರಾ ತಮ್ಮ ವೈಚಾರಿಕತೆಗೆ ರೂಪ ಕೊಡಲೆತ್ನಿಸಿದ್ದಾರೆನ್ನಬಹುದು. ರಾಮಚಂದ್ರ ಸೀತೇನ್ನ ಬೆಂಕಿಗೆ ಹಾರಿಸ್ದ, ಬಸುರಿ ಹೆಂಗ್ಸನ್ನ ಕಾಡಿಗೆ ಕಳಿಸ್ದ. ದ್ರೌಪದಿ ತುಸು ಕಷ್ಟ ಪಟ್ಟಳೇ? ಎಂಥ ಪುರಾಣವೊ, ಪುಣ್ಯ ಕಥೆಯೊ, ಅಂತೂ ಮಾಡೋಕೆ ಕಸಬಿಲ್ಲ-ದೋರು ಬರೆದಿಟ್ರು. ನಮ್ಮಂಥ ಸೋಮಾರಿಗಳು ಅದನ್ನ ನಂಬೂದು. ಇಷ್ಟೆ ಸೈ' ರಾಮನ ಹೆಸರಿನಲ್ಲಿ ದೇಶಾದ್ಯಂತ ನೆತ್ತರ ಹೊಳೆ ಹರಿಸುತ್ತಿರುವ ಈ ಸಂದರ್ಭದಲ್ಲಿ ವೃದ್ಧಾಪ್ಯದಲ್ಲಿರುವ ಇಂದಿರಾ ಅವರಿಂದ ಈ ಮಾತುಗಳು ಈ ದೇಶದ ಭವಿಷ್ಯ ಅಷ್ಟೊಂದು ಕರಾಳವಾಗಿಲ್ಲ; ಮಾನವೀಯತೆಯ ಸೆಲೆ ಎಂದೂ ಬತ್ತಿ ಹೋಗಿಲ್ಲ ಎಂಬುದನ್ನು ದೃಢಪಡಿಸುತ್ತದೆ.

ಇಂದಿರಾ ಅವರ ಪ್ರಗತಿಪರ ಮನೋಭಾವಕ್ಕೆ ಕನ್ನಡಿ ಹಿಡಿಯುವಂತಹ ಹಲವು ಘಟನೆಗಳೂ ಇದೇ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ವಿಧವೆ ದಾಕ್ಷಾಯಿಣಿ ಕೇಶಮುಂಡನವನ್ನು ಪ್ರತಿಭಟಿಸಿ ಕೊನೆಗೂ ಸೋಲೊಪ್ಪಿಕೊಳ್ಳುತ್ತಾಳೆ. ಆದರೆ ಸೋಲಿನಲ್ಲೂ ಗೆಲುವನ್ನರಸಿ ಆಕೆ ತನ್ನ ಮೈದುನನಿಂದಲೇ ಬಸಿರಾಗುತ್ತಾಳೆ. ಆಕೆಯನ್ನು ತೌರಿಗಟ್ಟಬೇಕೆನ್ನುವ ಅತ್ತೆಯೊಡನೆ ಆಕೆ ಹೀಗನ್ನುತ್ತಾಳೆ.

"ನಿಮ್ಮ ಮಗನೇ ಬಸಿರು ತುಂಬಿದವನು. ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ. ಅಷ್ಟೆ ಸೈಯಲ್ಲ ?"

'ಫಣಿಯಮ್ಮ' ಕೃತಿಯ ಕುರಿತು ಒಂದು ಮಾತು ಕೇಳಿ ಬರುತ್ತದೆ. 'ಅದು ನೂರು ವರ್ಷಗಳ ಹಿಂದೆ ನಡೆದ ಕಥೆ. ಇಂದಿಗೆ ಅದು ಪ್ರಸ್ತುತವಲ್ಲ'' ಎಂದು. ಇಂದಿನ ವಿಧವೆಯರಿಗೆ ಅಂದಿನಷ್ಟು ಚಿತ್ರಹಿಂಸೆ ಇಲ್ಲದಿರಬಹುದು. ಆದರೆ ಇಂದಿಗೂ ವಿಧವೆಯರ ಬದುಕು ಮುಳ್ಳಿನ ಹಾಸಿಗೆಯೇ ಎಂಬುದರಲ್ಲಿ ಸಂದೇಹವಿಲ್ಲವಲ್ಲ ? ಇನ್ನೂ ಒಂದು ಮಾತು. ಮೂಲಭೂತವಾದ, ಪುನರುತ್ಥಾನ

ವೆಂಬ ಮಾತು ಇಂದು ಎಲ್ಲೆಲ್ಲೂ ಕೇಳಿ ಬರುತ್ತಿದೆ. ಬಹಳ ಕಷ್ಟಪಟ್ಟು ರಾಜಾ ರಾಮಮೋಹನರಾಯ್‌ರವರು ಸತೀ ಸಹಗಮನ ಪದ್ಧತಿಯನ್ನು ನಿಲ್ಲಿಸಿದರು. ಕಳೆದ ಒಂದೆರಡು ಶತಮಾನಗಳಿಂದಲೂ ಈ ದೇಶದಲ್ಲಿ ಸತೀಸಹಗಮನವನ್ನು ನಿಷೇಧಿಸಲಾಗಿತ್ತು. ಆದರೆ ಈಗ ಒಂದೆರಡು ವರ್ಷಗಳ ಹಿಂದೆ, ಜಗತ್ತು ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿಡ ಹೊರಟ ಈ ಸಂದರ್ಭದಲ್ಲಿ ಈ ಸತೀಸಹಗಮನ ಪದ್ಧತಿಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನವೊಂದನ್ನು ನಡೆಸಲಾಯಿತು ಎಂಬುದು ಸುಳ್ಳಲ್ಲವಲ್ಲ? ಪುರಿ ಶಂಕರಾಚಾರ್ಯರು ಮತ್ತು ಕೆಲವು ರಾಜಕಾರಣಿಗಳೂ ಕೂಡ ಸತೀಸಹಗಮನ ಪದ್ಧತಿಯನ್ನು ಸಮರ್ಥಿಸಿ ಸಾರ್ವಜನಿಕ ಭಾಷಣವನ್ನು ಮಾಡಿದ್ದು ಇನ್ನೂ ಹಸಿರು ನೆನಪು. ಹಿಂದೂಧರ್ಮದ ಪುನರುಜ್ಜೀವನದ ಹೆಸರಿನಲ್ಲಿ ರೂಪಾ ಕನ್ವರ್ ಹದಿಹರೆಯದ ಹೆಣ್ಣು ಮಗಳನ್ನು ನೂರಾರು ಜನ ನೋಡ ನೋಡುತ್ತಾ ಅಗ್ನಿಗರ್ಪಿಸಿದ್ದನ್ನು ಎಂದಾದರೂ ಮರೆಯಲು ಸಾಧ್ಯವೇ ? ಇಷ್ಟು ಮಾತ್ರವಲ್ಲ, ಆ ಬಳಿಕ ಆ ಸ್ಥಳದಲ್ಲಿ ಗುಡಿ ನಿರ್ಮಿಸಿ ಪೂಜೆ, ಜಾತ್ರೆಗಳನ್ನೂ ನಡೆಸಲಾಗುತ್ತಿದೆ! ಇಂತಹ ಮತಾಂಧ ರಾಕ್ಷಸರಿರುವ ಈ ಸಮಾಜದಲ್ಲಿ ಫಣಿಯಮ್ಮನ ಕತೆಯಂತಹ ಕತೆಯೊಂದು ಈಗ ನಡೆದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಫಣಿಯಮ್ಮ ಮತ್ತು ರೂಪಾ ಕನ್ವರ್ ಇಂದಿಗೂ ಅಪ್ರಸ್ತುತರಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

'ಸದಾನಂದ'ದಲ್ಲಿ ವಿಧವಾ ವಿವಾಹದ ಸಮಸ್ಯೆಯನ್ನು ಬಿಡಿಸ ಹೊರಟಿದ್ದರೆ, 'ತಪೋವನದಲ್ಲಿ' ಕಪಟ ಸನ್ಯಾಸಿಯೊಬ್ಬ ಮಹಿಳೆಯರನ್ನು ಯಾವ ರೀತಿ ವಂಚಿಸುತಿದ್ದನೆಂಬುದರ ನೈಜ ಚಿತ್ರಣವಿದೆ.

ಮಲೆನಾಡಿನ ಕೆಂಡದ ರೊಟ್ಟಿ, ಅರಳು ಅವಲಕ್ಕಿ, ಹಪ್ಪಳ ಸಂಡಿಗೆ, ಅಪ್ಪೆಮಿಡಿ ಉಪ್ಪಿನಕಾಯಿಯಿಂದ ಹಿಡಿದು ಕಾಸಿನ ಸರ, ಬೆಳ್ಳಿ ಡಾಬು, ಒಡ್ಯಾಣ, ಜಡೆ ಬಿಲ್ಲೆ ಎಲ್ಲಕ್ಕೂ ಎಂ. ಕೆ. ಇಂದಿರಾ ಅವರ ಕಾದಂಬರಿಗಳಲ್ಲಿ ಸ್ಥಾನವಿದೆ. ಇಂದಿರಾ ಅವರ ಕಾದಂಬರಿ ಮಲೆನಾಡಿನ ಸಂಸ್ಕೃತಿಯ ಒಂದು ಭಂಡಾರವೇ ಆಗಿದೆ.

ನನ್ನ ಮೆಚ್ಚಿನ ಲೇಖಕಿ ಎಂ. ಕೆ. ಇಂದಿರಾ ಅವರು ಎಪ್ಪತ್ತೈದನೆಯ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಸಂದರ್ಭದಲ್ಲಿ ಲೇಖಕಿಯನ್ನು ತುಂಬು ಹೃದಯದಿಂದ ಅಭಿನಂದಿಸುತ್ತಾ, ಅವರ ಅಜ್ಜಿ ಫಣಿಯಮ್ಮನಂತೆ ಅವರೂ ನೂರ ಹನ್ನೆರಡು ವರ್ಷಗಳವರೆಗೆ ಬದುಕಿ ಮಲೆನಾಡಿನ ಇನ್ನೂ ಹಲವಾರು ಚಿತ್ರಣಗಳನ್ನು ನಮಗೆ ನೀಡಲಿ ಎಂದಾಶಿಸುತ್ತಾ, ಸುರಗಿಯ ಮಾಲೆಗೆ ನನ್ನದೂ ಒಂದು ಪುಟ್ಟ ಮೊಗ್ಗನ್ನು ಸೇರಿಸುತ್ತಾ ಲೇಖನವನ್ನು ಕೊನೆಗೊಳಿಸುತ್ತೇನೆ.

“ತುಂಗ-ಭದ್ರ”ದ ಕೃಷ್ಣವೇಣಿ

○
○
○ ವೈದೇಹಿ

ಇನ್ನೂ ಮನಸ್ಸಿನಲ್ಲಿ ಉಳಿದುಕೊಂಡಿರುವ ಕೃಷ್ಣವೇಣಿ. ಅನಸೂಯೆ ತೋರಿದ ಮುತ್ತು. ಪುನಃ ಚೆನ್ನಾಗಿ ನೆನಪು ಮಾಡಿಕೊಳ್ಳಲು “ತುಂಗ-ಭದ್ರ” ತೆರೆದೆ.

ತಾನು ಒಬ್ಬಳೇ; ತನ್ನ ಸುಖ ತನಗೆ - ಎಂದು ಎಂದೂ ತಿಳಿದುಕೊಳ್ಳದೇ ಬದುಕಿದ ಕೃಷ್ಣವೇಣಿ. ಮುಗ್ಧೆಯಂತೆ ಕಾಣುತ್ತಾಳೆ. ಮುಗ್ಧೆಯಲ್ಲ. ಶಾಲೆಯಲ್ಲಿ ಕಲಿಯದಿದ್ದರೂ ದಡ್ಡಿಯಲ್ಲ. ಏನೂ ತಿಳಿಯದವಳಂತಿದ್ದರೂ ತಿಳುವಳಿಕೆಯವಳು. ಕಾದಂಬರಿ ಆರಂಭವಾಗುವಾಗ ಒಂಭತ್ತು ಗಂಟೆಯಿಂದ ಮಧ್ಯಾಹ್ನ ಊಟದ ಹೊತ್ತಿನವರೆಗೂ ಹೊಳೆ ಬದಿಯ ಜಾರುಬಂಡೆಯಲ್ಲಿ ಜಾರುತ್ತ ಹೊತ್ತು ಕಳೆವ ದಣಿವರಿಯದ ಒಂಭತ್ತು ವರ್ಷದ ಹುಡುಗಿ. ಸೂಕ್ಷ್ಮಜ್ಞಾನ ಇರುವ ಹಳ್ಳಿಯ ಹುಡುಗಿ. “ಸುತ್ತಲೂ ನೋಡಿದೊಡನೆಯೇ ಕೃಷ್ಣೆಗೆ ಗೊತ್ತಾಯಿತು. ಹೊತ್ತು ಎಷ್ಟಾಗಿದೆಯೆಂದು. ಮರದ ನೆರಳು ಮರದ ಬುಡ ಸೇರಿತ್ತು.”

ಮುದ್ದುರಾಮು ತನ್ನ ಗಂಡನಾಗುವವನೆಂದು ಗೊತ್ತು. ಗಂಡನೆಂದರೆ ಏನೆಂತ ಗೊತ್ತಿಲ್ಲ. ಆದರೆ ‘ಗಂಡ’ ಎಂದು ಬೇರೆಯವರು ಉಚ್ಚರಿಸಿದರೂ ಕೇಳಿ ನಾಚಬೇಕಾದ ಶಬ್ದ ಅಂತ ಗೊತ್ತು. ಅವಳ ಬಯಕೆಯಂತೆ ಮುದ್ದುರಾಮು “ಶಿವಮೊಗ್ಗ ಶಹರ”ದಿಂದ ಮುತ್ತಿನಸರ ತಂದುಕೊಟ್ಟಾಗ ನಾಗಾಭಟ್ಟರು “ಓ! ಗಂಡಯ್ಯ ಕಲ್ಯಾಣಿಸರ ತಂದುಕೊಟ್ಟನೇ!” – ಎಂದು ನಕ್ಕರು. ಆಗ ನಾಚಿಕೆಯಿಂದ ಓಟ

ಕಿತ್ತಳು ಕೃಷ್ಣವೇಣಿ. ಅವರ ಮದುವೆ ನಿಶ್ಚಯವಾದಾಗ ಆಕೆ: ತಾನು ಈಗ ಮದುವಣಗಿತ್ತಿ, ನಾಚಿಕೊಳ್ಳಬೇಕೆಂದು ಕಡ್ಡಾಯವಾಗಿ ತಿಳಿದವಳು - ಎಂದು ಕಾದಂಬರಿಯ ಸಾಲು ಹೇಳುತ್ತದೆ. ಇಲ್ಲಿಯ ವರೆಗಿನ ಕೃಷ್ಣವೇಣಿ ಮಾಮೂಲು ಪೋರಿ. ತುಂಗ ಭದ್ರೆಯರೊಡನೆ ಆಡುತ್ತಾ, 'ಗಂಡಯ್ಯ' ಆಗುವವನೊಡನೆ ಜಗಳಾಡುತ್ತಾ, ಹೊಳೆ ಮರಳು ಮನೆ ಎಂದು ಅತ್ತ ಇತ್ತ ತಿರುಗಾಡಿಕೊಂಡು ಗಮ್ಮತ್ತಿನಲ್ಲಿ ಬಾಲ್ಯ ಕಳೆಯುವ ಕೃಷ್ಣವೇಣಿ, ಅವಳ ನಿಜವಾದ ಮನಸ್ಸು ಹೊರಗೆ ಕಾಣುವುದು ಮದುವೆಯ ನಂತರವೇ.

ಮುದ್ದುರಾಮನ ಗೆಳೆಯ ರಾಘುವಿನ ತಂದೆ ಅಪ್ಪಣ್ಣಾಚಾರ್ರು, ಬೆಳೆದ ಮಗ ರಾಘುವಿಗೆ ಮದುವೆ ಮಾಡುವುದರ ಬದಲು ತಾನು ಮದುವೆ ಮಾಡಿಕೊಂಡು ಬರುವುದು ಎಲ್ಲರಿಗೂ ಆಘಾತ ಉಂಟುಮಾಡುತ್ತದೆ. ರಾಘುವಿನ ಪರವಾಗಿ ಮತ್ತೆ ಗೆಳೆಯ ಮುದ್ದುರಾಮನಂತೂ ರಾಘುವಿಗಾಗಿ ತುಂಬಾ ತುಡಿಯುತ್ತಾನೆ. ನೊಂದ ಗೆಳೆಯನನ್ನು ಹೇಗೆ ಸಂತೈಸುವುದೆಂದೇ ತಿಳಿಯದೆ ಒದ್ದಾಡುತ್ತಾನೆ. ಸಮಸ್ಯೆಗಳ ಕುರಿತು ಬರೀ ಯೋಚನೆ, ಚಿಂತೆ – ಇಷ್ಟರಲ್ಲಿಯೇ ಮುಳುಗುವ ಜಾಯಮಾನ ಮುದ್ದುರಾಮನದಾದರೆ, ಕೃಷ್ಣವೇಣಿ ಹಾಗಲ್ಲ. 'ಆಗಿರುವುದನ್ನು ನೆನೆಯುತ್ತ ಮಂಕಾಗಿ ಕೂರದೆ ಪರಿಹಾರ ಕಂಡುಕೊಳ್ಳುವ ಜಾತಿಯವಳು' ರಾಘು ಮಧ್ಯಾಹ್ನ ಊಟಕ್ಕೂ ಬರದೆ ಬೆಳಿಗ್ಗೆಯೂ ಏನೂ ತಿನ್ನದೆ ಶಾಲೆಗೆ ಹೋಗಿರುವುದರ ಚಿಂತೆಯಲ್ಲಿದ್ದ ಮುದ್ದುರಾಮನನ್ನು ಮೂರು ಮೂರು ಬಾರಿ ಊಟಕ್ಕೆ ಕರೆಯುತ್ತಾಳೆ. ಆತ ಏಳದಿದ್ದಾಗ ವಾಸ್ತವದ ಅತ್ಯಂತ ಎಚ್ಚರವುಳ್ಳ ದನಿಯಲ್ಲಿ "ಇದೀಗ ಚಂದಾತು. ನೀವಿಲ್ಲಿ ಹಿಂಗೆ ಕೂತ್ಬುಟ್ರೆ ರಾಘುವಿಗೆ ಅಲ್ಲಿ ಹೊಟ್ಟೆ ತುಂಬುತ್ತಾ ? ಎದ್ದೇಳಿ. ಅವ ಈವತ್ತೆಲ್ಲ ಮನೆಗ್ಬರಲ್ಲ. ಹ್ಯಾಂಗ್ ಬಂದಾನು ? ಯಂತದುಂಡಾನು ? ನೀವಷ್ಟು ಉಂಡು, ಅವನಿಗೆ ಅಷ್ಟು ಅನ್ನ ಸಾರು ತಗಂಡ್ಹೋಗಿ ಕೊಟ್ಬನ್ನಿ. ಆ ಸುಟ್ಟ ಅಪ್ಪಂಗೇನಾರ ಮಗನ ಯೋಚ್ನೆ ಅದಯನು ನೋಡಿ. ಅನಿಷ್ಟ ಮುದ್ಕ."
–ಮೊನ್ನೆ ಮೊನ್ನೆ ಆಡಿಕೊಂಡಿದ್ದ, ಈಗ ಕುತ್ತಿಗೆಯಲ್ಲಿ ತಾಳಿ ಮಾತ್ರ ವ್ಯತ್ಯಾಸವಿರುವ ಎಳೆಯ ಹದಿವಯದ ಹುಡುಗಿ ಆಡುವ ಮಾತು ಇದು. ಕೃಷ್ಣವೇಣಿಗೆ ಹೀಗೆ ಸಣ್ಣ ವಯಸ್ಸಿನಲ್ಲಿಯೇ ದೊಡ್ಡ ಹೆಂಗಸರ ಪ್ರಜ್ಞೆ ಎಲ್ಲಿಂದ ಬಂತು ? ಆಕೆ ಈಗ ಪುಟ್ಟ ಯಜಮಾನಿತಿ. ಅಷ್ಟೇ ಪುಟ್ಟ ಹುಡುಗಿಯೂ. ಎಲ್ಲೆಲ್ಲಿ ಹೇಗೆ ಹೇಗೆ ಇರಬೇಕೋ ಹಾಗೆ ಹಾಗೇ ಇರುವುದನ್ನು ಸ್ವಭಾವ ಸಹಜವಾಗಿ ಮೈಗೂಡಿಸಿಕೊಂಡಿರುವವಳು. ಎಲ್ಲಿಯೂ ಭಾವುಕತೆಯಲ್ಲಿ ಮೈಮರೆತು ಕೂರದವಳು. ಅವಳ ಭಾವಲೋಕದಲ್ಲಿ ಕೇವಲ ಮುದ್ದುರಾಮ ಮತ್ತು ತಾನು ಮಾತ್ರ ಅಲ್ಲ. ಶಂಭು, ತುಂಗ, ಭದ್ರ.

ಮಂದಾ ಎಲ್ಲರೂ ಇದ್ದಾರೆ. ರಾಘು ಇದ್ದಾನೆ. ಅವರೆಲ್ಲ ಸುಖವಾಗಿದ್ದರೆ ತಾನು ಕೂಡ ಸುಖಿಯಾಗಿರುವವಳು.

ಒಮ್ಮೆ ಮುದ್ದುರಾಮು ಅಪ್ಪ ಅಮ್ಮ ಇಲ್ಲದ ಒಂದು ಹುಡುಗಿಗೆ ಅವಳ ದೊಡ್ಡಪ್ಪ ಗಂಡು ಗೊತ್ತು ಮಾಡಿಕೊಡೆಂದು ತನಗೆ ಹೇಳಿರುವ ವಿಚಾರವನ್ನು ತಂದೆಯೊಡನೆ ಹೇಳುತ್ತಾ ಆ ಮಾತಿನಲ್ಲಿ ಸಾಗುತ್ತಿದ್ದಾಗ-ದುರ್ಗಾ ಭಟ್ಟರು "ನಮ್ಮನೇಲೆ ಆದಾವೆ ಮೂರು, ಮದಿವ್ಯಾಗಾವು. ನಾ ಎಲ್ಲಿ ಆದಕ್ಕೆ ಗಂಡು ನೋಡಾದ್ಬಂತು ?" ಎನ್ನಲು ಅಜ್ಜಯ್ಯನ ಮಾತು ಕೇಳಿ ಕೃಷ್ಣ ವಾದಕ್ಕಿಳಿಯುತ್ತಾಳೆ, ಆ ಯಾರೂ ದಿಕ್ಕಿಲ್ಲದ ಹುಡುಗಿಗೆ ಆಗಲೇ ಅವಳಿಗೊಬ್ಬ ವರ ಹೊಳೆದಿದ್ದಾನೆ. ಅವನು ಅಕ್ಷರಗಿಕ್ಷರ ಕಲಿಯದ, ಕೊಟ್ಟಿಗೆ ಕೆಲಸ ತೋಟದ ಕೆಲಸ ಗಳೆಂದರೆ ಎರಡಾಳಿನ ಬಲದಲ್ಲಿ ಮಾಡುವ ಉಪಾಯಕ ಹುಡುಗ ಶಂಭು. ತುಂಗ–ಭದ್ರ, ಮಂದಾರ ಅಣ್ಣ! ಅವಳ ಸೂಚನೆಯನ್ನು ದುರ್ಗಾ ಭಟ್ಟರು ತಳ್ಳಿ ಹಾಕುತ್ತಾರೆ. "ಮುದ್ದು ರಾಮು ಮುಖಪತ್ತಿ ನೋಡಿದ. ಅವಳು ಅಜ್ಜಯ್ಯನೊಡನೆ ವಾದಿಸುತ್ತಿದ್ದಳು. ಅವಳ ಗಮನ ಮುದ್ದುರಾಮನ ಕಡೆಗಿರಲಿಲ್ಲ!" ಕಡೆಯ ತನಕವೂ ಶಂಭುವಿಗೊಂದು ಮದುವೆ ಮಾಡಬೇಕು ಎಂದು ಹಂಬಲಿಸಿದಳು ಕೃಷ್ಣವೇಣಿ. ಆತ ಯಾರೊಡನೆಯೂ ಬಾಯಿ ಬಿಡಲು ಕೂಡ ಅರಿಯದೆ ತನ್ನೊಳಗೇ ನೋಯುವುದನ್ನು, ಏಕಾಕಿ ತನವನ್ನು ಜಗಿದು ನುಂಗುವುದನ್ನು, ತಡೆಯಲಾಗದಿದ್ದರೆ ಮೈ ಮೇಲೆ ಆವೇಶ ಬಂದಂತೆ ಕೆಲಸ ಮಾಡುವುದನ್ನು ಗಿಡಗಳನ್ನು ಕೊಚ್ಚುವುದನ್ನು ಸಮರ್ಪಕವಾಗಿ ಅರ್ಥ ಮಾಡಿ ಕೊಳ್ಳುವಾಕೆ ಮತ್ತು ಒಳಗೇ ಪರಿಹಾರಕ್ಕಾಗಿ ಚಡಪಡಿಸುವವಳು. ಹುಟ್ಟು ಕುರುಡಿಯರಾದ ತುಂಗ ಭದ್ರೆಯರು, ಅವಳ ಮಟ್ಟಿಗೆ ಕುರುಡಿಯರಲ್ಲ. ಕಣ್ಣು ಕುರುಡಾದರೇನು ? ಕಿವಿಯಿಲ್ಲವೆ ? ಕೇಳಿ ಗ್ರಹಿಸಲಾರರೆ ?

ಊರಿಗೆ ವರದಾಚಾರ್ಯರ ನಾಟಕ ಕಂಪನಿ ಬಂದಿದೆ. ರಾಘು ಮತ್ತು ಮುದ್ದುರಾಮು ಅದರ ಸಲುವಾಗಿ ಓಡಾಡುತ್ತಿದ್ದಾರೆ. ಮುದ್ದುರಾಮನ ಬಳಿ ಪಾಸುಗಳಿವೆ. ಹಾಗಾಗಿ ಮನೆಯಲ್ಲಿ ನಾಗಭಟ್ಟರು ಮತ್ತು ತುಂಗ ಭದ್ರೆಯರನ್ನು ಹೊರತು ಮಿಕ್ಕವರೆಲ್ಲರೂ ನಾಟಕ ನೋಡಲು ಹೋಗುತ್ತಾರೆ. ಎರಡು ಮೂರು ನಾಟಕಗಳು ಆಗುವವರೆಗೂ ಯಾರಿಗೂ ತುಂಗ ಭದ್ರೆಯರನ್ನು ಕರೆದೊಯ್ಯಬೇಕೆಂದು ಹೊಳೆದೇ ಇಲ್ಲ. ನಾಟಕ ನೋಡಿ ಬಂದ ಮಂದಾಕಿನಿ ಮತ್ತು ಕೃಷ್ಣವೇಣಿ ವೈಕುಂಠದ ವರ್ಣನೆ ಮಾಡುವಾಗ ತುಂಗ ಭದ್ರೆಯರು ಮೇಲಿಂದ ಮೇಲೆ ಪ್ರಶ್ನೆ ಹಾಕುತ್ತಾರೆ. ಉತ್ತರ ಹೇಳಿ ಸುಸ್ತಾದ ಮಂದಾ ಕೊನೆಗೆ ಛೇಡಿಸಿ ಉತ್ತರಿಸುತ್ತಾಳೆ. ಅವರು ನೊಂದುಕೊಂಡು "ಇನ್ಮೇಲೆ ಅವಳ್ಹತ್ರ ಯಂತದೂ ಕೇಳ್ಬಾರ್ದು"–ಎನ್ನುತ್ತಾರೆ.

ಇದನ್ನು ಕೃಷ್ಣವೇಣಿ ಕೇಳಿಸಿ ಕೊಳ್ಳುತ್ತಾಳೆ. ಅವಳ ಮನಸ್ಸಿನೊಳಗೆ ಈ ಮಾತು ಇಳಿಯುತ್ತದೆ. ಆದರೆ ಅದನ್ನು ಬರೀ ಬಾಯಿಮಾತಿನಲ್ಲಿ ಚೆಲ್ಲಿ ಮುಗಿಸುವವಳೇ ಕೃಷ್ಣವೇಣಿಯೆಂದರೆ ? ಆವತ್ತು ಊಟಕ್ಕೆ ಕುಳಿತಾಗ ಮುದ್ದುರಾಮನೊಡನೆ ಹೇಳಿದಳು. "ಅಲ್ಲ, ಇನ್ ಮ್ಯಾಲೆ ತುಂಗ ಭದ್ರರನ್ನೂ ನಾಲ್ಕಕ್ಕೆ ಕರ್‌ಕಂಡ್ ಬರ್ತನಿ. ಅಯ್ಯ ?" ಮುದ್ದುರಾಮ ಈ ಮಾತಿಗೆ ನಕ್ಕು ತಮಾಷೆಯಲ್ಲಿ ತೇಲಿಸಿದಾಗ ಅವಳೊಳಗಿನ ಯಜಮಾನಿ ತನ್ನ ಎಂದಿನ ಬಿಗಿಯಾದ, ಎಚ್ಚರದ, ಹರಿತದ ಅಂತಃಕರಣದ ತೂಕದ ಸ್ವರದಲ್ಲಿ ನುಡಿಯುತ್ತಾಳೆ. "ನಿಮ್ಜಂಬಕ್ಕಿಷ್ಟು ಕಲ್ಬಡೀತು ಅವಕ್ಕೆ ಕಣ್ಣಿರದಿದ್ರೆ ಕಿವಿ ಇಲ್ವಾ ? ಬ್ಯಾಂಡು, ಹಾರ್ಮಣಿ, ಪದ ಎಲ್ಲ ಕೇಳ್ತಾ ಕೂತಿರ್ತಾವೆ. ಮಾತಾಡುದೆಲ್ಲ ಕೇಳ್ಸುತ್ತಲ್ಲ. ಪಾಪ. ನಾವೆಲ್ಲ ನೋಡ್ಕಂಬಂದು ಅವೆರಡನ್ನೇ ಬಿಟ್ಬಿಡಾದಾ ?" ಈ ಗ್ರಹಿಕೆಯ ಕೃಷ್ಣವೇಣಿ ! ತನಗಿಂತ ದೊಡ್ಡವನಾದ ಮುದ್ದುರಾಮನನ್ನೇ ಹೆಗಲು ಮುಟ್ಟಿ ನೋಡಿಕೊಳ್ಳುವಂತೆ ಅತ್ಯಂತ ಸಹಜವಾಗಿ ಮಾಡಿಬಿಡುವಳು. ಮುದ್ದುರಾಮನಿಗೂ ಹೊಳೆಯದ ಸೂಕ್ಷ್ಮಗಳನ್ನು ಥಕ್ಕಂತ ಹೊಳೆಸುವವಳು. ಹಾಗೆಂತ ಆಕೆ ತುಂಗೆ-ಭದ್ರೆಯರಿಗಿಂತ ಮಹಾ ಎಷ್ಟು ದೊಡ್ಡವಳಿದ್ದಳು ! ಕೇವಲ ಎರಡು ವರ್ಷ. ಪುಸ್ತಕದುದ್ದಕ್ಕೂ ಕೃಷ್ಣವೇಣಿ ಆ ಹುಡುಗಿಯರೊಂದಿಗೆ ಮಾನಸಿಕವಾಗಿ ಒಂದು ಗಳಿಗೆಯೂ ಬೇರೆ ನಿಲ್ಲದವಳು ಎಂಬುದು ಎಷ್ಟು ಮಂದ್ರ ದನಿಯಲ್ಲಿ ಹರಡಿಕೊಂಡಿದೆಯೆಂದರೆ, ಅವಳ ಬಾಲ್ಯದ ದಿನಗಳಲ್ಲೇ ಅದರ ಎಲ್ಲ ಅಗೋಚರ ಬೇರುಗಳು ಅಡಗಿ ಕುಳಿತಂತೆ.

ತುಂಗ-ಭದ್ರೆಯರು ಮೈ ನೆರೆದ ದಿನ. ಮನೆಯಲ್ಲಿ ದೂರದ ದಾಯಾದಿಗಳು ಯಾರಾದರೂ ಸತ್ತಂತಹ ವಾತಾವರಣ. ಯಾರ ಮುಖದಲ್ಲಿಯೂ ನಗೆಯಿಲ್ಲ. ಹುಣಸೇಕೊಪ್ಪಲಿನಿಂದ ಮರಳಿದ ಮುದ್ದುರಾಮನಿಗೆ ಮನೆಯ ಈ ಸ್ಥಿತಿ ಅಚ್ಚರಿ ತರುತ್ತದೆ. ಯಾಕೆ ಹೀಗೆ ಎಂದು ಕೇಳಿದರೆ ತಕ್ಷಣ ಹೇಳುವವಳೇ ಕೃಷ್ಣವೇಣಿ ? ಅವನಿಗೆ ಊಟ ಬಡಿಸಿ ವೀಳೆಯ ಮಡಿಚಿ ಬಾಯಿಗಿಟ್ಟು, ವಿಷಯ ತಿಳಿಸುತ್ತಾಳೆ. ದುಗುಡಕ್ಕೆ ಅವಸರದಲ್ಲಿ ಮಾತು ಕೊಡದೆ ವಯಸ್ಸಿಗೆ ಮೀರಿದ ಸಾವಧಾನತೆಯನ್ನು ತಳೆಯುವಳಲ್ಲದೆ ಮುದ್ದುರಾಮನೊಡನೆಯೂ ಅದನ್ನೇ ಪರೋಕ್ಷವಾಗಿ ಅಪೇಕ್ಷಿಸುತ್ತಾಳೆ. ಮುಂದಿನ ಮಾತುಗಳಲ್ಲಿ ಅವಳ ಮನಸ್ಸಿನ ದರ್ಶನವೇ ಇದೆ.

ತುಂಗ - ಭದ್ರೆಯರ ಮದುವೆಯ ಬಗ್ಗೆ ಮಾತನಾಡುತ್ತಾ ಮುದ್ದುರಾಮ ನಿರಾಸೆಯನ್ನೇ ತೋರುತ್ತಾನೆ. ಅವರನ್ನೇ ಕೈಹಿಡಿದು ನಡೆಸಲು ಜನ ಬೇಕು. ಇಂಥವರನ್ನು ಯಾರು ಮದುವೆ ಮಾಡಿಕೊಳ್ಳುತ್ತಾರೆ ? ಒಂದಷ್ಟು ಜಮೀನು, ಆಸ್ತಿ ಏನಾದರೂ ಕೊಟ್ಟರೆ ಯಾರಾದರೂ ಒಬ್ಬ ಪರದೇಶಿ ಮಾಡಿಕೊಂಡಾನು

ಎಂದು ನುಡಿಯುತ್ತಾನೆ. ಆದರೆ ಕೃಷ್ಣವೇಣಿಯ ಮನಸ್ಸಿನಲ್ಲಿರುವುದೇ ಬೇರೆ. ಆಸ್ತಿ ಚೂರಿನ ಆಸೆಗೆ ಮದುವೆಯಾಗುವವರು ಅವರನ್ನು ಚೆನ್ನಾಗಿ ಇಟ್ಟುಕೊಳ್ತಾರ ? ಚರ್ಚೆ ಮುಂದುವರಿಯುತ್ತದೆ. ಆಗ ಅಚಾನಕವಾಗಿ ಎಂಬಂತೆ ಕೃಷ್ಣವೇಣಿ "ನೀವೇ ಅವೆರಡನ್ನೂ ಮದಿವ್ಯಾದರಾತು. ಕಸ್ಯಾಸೆರೆ ಬಿಡಿಸಿದ್ಹಾಂಗಾತು. ಅವ ಪಾಡಿಗೆ ಅವು ಇದ್ಕತಾವೆ ? ಈ ಮಾತು ಅವಳು ಆ ಹೊತ್ತಿನ ಮಟ್ಟಿಗೆ ಫಕ್ಕನೆ ಆಡಿದಂತೆ ಕಂಡರೂ ವಾಸ್ತವವಾಗಿ ಅದು ಅಲ್ಪಾಯುಷದ ಮಾತಲ್ಲ. ಅವಳ ಹೃದಯದೊಳಗೇ ತಿರುಗುತ್ತಿದ್ದ, ಆ ಹುಡುಗಿಯರನ್ನು ತೊರೆಯಲೊಪ್ಪದ, ಅವರೊಡನೆ ಬಾಲ್ಯದಿಂದಲೂ ಅವಳು ಬೆಸೆದುಕೊಂಡೇ ಬಂದಿರುವ ಅಪೂರ್ವ ಅವಿನಾಭಾವ ಸಂಬಂಧದ ಪರಿಣಾಮ ಚಿಮ್ಮಿದ ಪರಿ ಅದು. ಮುದ್ದುರಾಮನಿಗೆ ಈ ಮಾತು ಕೇಳಿ ಬೆರಗು ಕವುಚಿ "ಮದಿವ್ಯಾದರೆ ಆಮೇಲೆ ನೀನೇ ಅವನ್ನ ಸಾಕ್ಬೇಕು. ಗೊತ್ತನೇ ?"–ಎಂದರೆ "ಸಾಕ್ತನಿ. ಈಗ ಮೂಕತ್ತೆ, ತುಂಗ-ಭದ್ರನ್ನ ಏನು ಹ್ವಳಿಗ್ಹಾಕತಿದ್ರನು ?"–ಎಂದು ಮರು ಸವಾಲೆಸೆಯುತ್ತಾಳೆ ಅಪ್ಪಟ ಮನುಷ್ಯ ಅಂತಃಕರಣದ ಕೃಷ್ಣವೇಣಿ. ಇಂಥಲ್ಲಿ ಅವಳನ್ನು ಅಪ್ಪಟ ಮನುಷ್ಯ ಅಂತಃಕರಣ ವೆನ್ನದೆ ಮತ್ತೇನೆನ್ನಲಿ ? ಕೇವಲ ಸಾಮಾನ್ಯ ಹೆಣ್ಣು ಮಾತ್ರವಾಗಿದ್ದರೆ ಆಕೆ ಗಂಡನ ಬಳಿ ಆ ಪ್ರಸ್ತಾಪವನ್ನು ಮಾಡಲೇ ಹೋಗುತ್ತಿರಲಿಲ್ಲ. ಜವಾಬ್ದಾರಿ ಹೊರಲೂ ಸಿದ್ಧಳಿರುತ್ತಿರಲಿಲ್ಲ. ಗಂಡಿನ ಅಹಂಕಾರವೂ ಇಲ್ಲದ ಹೆಣ್ಣಿನ ಸಂಕೋಚ ಮನಸ್ಸೂ ಇಲ್ಲದ ಮಾನವೀಯ ಹೃದಯ ಈ ಪುಟ್ಟ ಹುಡುಗಿಯಲ್ಲಿ. ಮುದ್ದಾರಾಮ ಅವಳ ಆ ಮಾತಿಗೂ ಅಡ್ಡ ನುಡಿದಾಗ "ಸೈ ಬಿಡಿ. ನಿಮ್ಕೈಲಿಯಂತದೂ ಹರಿಯಲ್ಲ" -ಎಂದು ಅವನ ಕ್ರಿಯಾ ಹೀನತೆಯನ್ನು ಚುಚ್ಚುತ್ತಾಳೆ, ಭಾವುಕಳಾಗದೆ ವಾಸ್ತವದ ಪಾತಳಿಯ ಮೇಲೆಯೇ ನಿಂತು.

ಮುಂದೊಂದು ದಿನ ಮಂದಾಕಿನಿಯ ಮದುವೆ ಪ್ರಸ್ತಾಪ. ವಿಚಿತ್ರ ಸ್ಥಿತಿ ಮಂದಾಕಿನಿಯದು. ಬುದ್ಧಿವಂತನಲ್ಲದ ಅಣ್ಣ, ಕುರುಡಿ ಅಕ್ಕಂದಿರು, ಮುದುಕ ತಂದೆ-ತಾಯಿಯರು. ಮುದ್ದುರಾಮನ ಮನೆಯಲ್ಲಿ ಅವನ ವಹಿವಾಟು ನೋಡಿ ಕೊಂಡು ಸಾಗುವ ಸಂಸಾರ. ಮದುವೆಯಾಗಿ ತಾನೊಬ್ಬಳು ಹೊರಟು ಹೋಗು ವುದು ಅಷ್ಟು ಸುಲಭವಲ್ಲ ಮಂದಾಕಿನಿಗೆ. ಬಂದ ಒಂದು ಸಂಬಂಧವನ್ನು ಮಂದಾ ಒಲ್ಲೆನ್ನುತ್ತ ತನ್ನನ್ನು ಮದುವೆಯಾಗುವವನು ತುಂಗ-ಭದ್ರೆಯರನ್ನು ಮದುವೆಯಾಗ ಬೇಕು ಎಂದು ಶರ್ತ ಒಡ್ಡುತ್ತಾಳೆ. ತಾಯಿ ಮೂಕಮ್ಮ ಈ ಮಾತು ಕೇಳಿ ಅವಳನ್ನು ಗದರಿಸಿ "ಕೃಷ್ಣಿ ನಿನ್ಹಾಂಗೆ ಆಡಿದ್ಲೇನು ?"–ಎಂದು ಪ್ರಶ್ನಿಸಿದಾಗ ಮಂದಾ ಪಾಪ ಮುದ್ದ್ಮಾವನ್ನ ಯಾರ್ಬೇಕಾರೂ ಕುರ್ಡೀತಾ ಮದಿವ್ಯಾದಾರು. ಕೃಷ್ಣತ್ತೆ ಯಾಕೆ ಬ್ಯಾಡಾಂತಾರೆ ?"

—ಎಲ್ಲರಿಗೂ ಈ ಮಾತು ಸತ್ಯವೆನಿಸಿತು. ಕಾದಂಬರಿಯ ಸಾಲುಗಳು ಹೀಗಿವೆ : ಕೃಷ್ಣಾಳಿಗೂ ಆರಗದ ನೆಂಟಸ್ತನ ಇಷ್ಟವಿರಲಿಲ್ಲ. ಮಂದಾ ಬೇಡ ವೆಂದದ್ದು ಅವಳಿಗೆ ಸಂತೋಷವೇ ಆಗಿತ್ತು. ಅವಳು ಮಂದಾಗೆ ಹೇಳಿದಳು. "ಹೌದ್ಕಣೆ ಮಂದಾ. ನೀ ಹೇಳಿದ ಮಾತು ಬದ್ಧ. ಅಂದ್ಮಾಗೆ ನೀ ಅವರನ್ನ (ತನ್ನ ಗಂಡನ್ನ) ಯಾಕೆ ಮದುವಿಯಾಗ್ಬಾರ್ದು ?"ಈ ಮಾತನ್ನು ಮುಂದೆಯೂ ಮತ್ತೊಮ್ಮೆ ಆಕೆ ಮಂದಾಗೆ ಕೇಳುತ್ತಾಳೆ. ಬಹಳ ಆಶ್ಚರ್ಯವೆನಿಸುತ್ತದೆ, ತನ್ನ ಅತ್ಯಂತ ಪ್ರೀತಿ ಯವನನ್ನು ಹಂಚಿಕೊಂಡು ಒಮಕಲು ಹೊರಡುವ ಕೃಷ್ಣವೇಣಿಯನ್ನು ಓದುತ್ತ ಹೋದಂತೆ.

ಕಾದಂಬರಿಯ ಆದಿಯಿಂದಲೂ ಕೃಷ್ಣವೇಣಿಯಂತೆಯೇ ತುಂಗ-ಭದ್ರ ಮಂದಾಕಿನಿಯರೂ ಮುದ್ದುರಾಮನನ್ನು ಹಚ್ಚಿಕೊಂಡೇ ಬೆಳೆದು ಬಂದವರು. ಇದು ಅವಳ ಮನಸ್ಸಿನಲ್ಲಿ ತನಗೇ ಅರಿಯದಂತೆ ತರ್ಕ ಹೂಡಿರಬಹುದೇ ? ಮುದ್ದುರಾಮನ ಪ್ರೀತಿಯಲ್ಲಿನ ಪಾಲು ತನ್ನದೊಬ್ಬಳದೇ ಅಲ್ಲ. ಆತನ ಮೇಲೆ ತನಗಿದ್ದಷ್ಟೇ ಹಕ್ಕು ಅಧಿಕಾರ ಅವರಿಗೂ ಇದ್ದೇ ಇದೆ-ಅಂತಲ್ಲ ? ಮದುವೆಯಾದ ಮೇಲೆಯೂ ಮುದ್ದು ರಾಮುವಿನ ಸುತ್ತ ಈ ಹುಡುಗಿಯರ ಜೊತೆ ತಾನೂ ಕುಳಿತು ಕಥೆ ಕೇಳುವಾಗ ಕೃಷ್ಣವೇಣಿಗೆ "ಆ ಗಳಿಗೆಯಲ್ಲಿ ಆತ ತನ್ನ ಗಂಡನೆಂಬುದು ಮರೆತು ಹೋಯಿತು. ಅವನು ಮೊದಲಿನ ಮುದ್ದುಮಾವನೇ ಆಗಿದ್ದ !" ಹಾಗೆ ಆ ಹುಡುಗಿಯರಿಂದ ತಾನು ಬೇರೆ ಎಂದು ಅನಿಸಿಯೇ ಇರದ ಕೃಷ್ಣವೇಣಿಗೆ ಇರುವ ಒಂದೇ ಒಂದು ಅಂತರವನ್ನು ಅಳಿಸಿ ಹಾಕಿ, ಕೊನೆಯವರೆಗೂ ತಾವೆಲ್ಲ ಹೀಗೆ ಒಟ್ಟಿಗೇ ಇರುವ ಗುಪ್ತ ಬಯಕೆ ಅವಳಿಂದ ಈ ಮಾತುಗಳನ್ನು ಹೊರಡಿಸುತ್ತಿದ್ದಿರಬಹುದ ?

ಅಂತಿಮ ಗಳಿಗೆಯಲ್ಲಿಯೂ ಆಕೆ ಗಂಡನಿಗೆ ಸೂಚಿಸುವುದು ಇದನ್ನೇ "ಮಂದಾನ ಕೈ ಬಿಡಬೇಡಿ", "ತುಂಗಭದ್ರ ಇಲ್ಲೇ ಇದ್ಕಳ್ಳಿ." ಜೊತೆಗೆ "ಶಂಭುವಿಗೊಂದು ಮದುವೆ ಮಾಡ್ಬೇಕು" ಎನ್ನುವುದನ್ನು ಮರೆಯದ ! ಆಕೆ ತನ್ನ ಮನಸ್ಸಿಗೆ ತನಗೇ ಅರಿಯದಂತೆ ಆಜ್ಞೆ ಕೊಟ್ಟು ಕೊಂಡಂತೆ ನಿರ್ಗಮಿಸುತ್ತಾಳೆ. ಈ ಮೂಲಕ ಅಸಾಧ್ಯವೆಂದು ಕೊಂಡದ್ದಕ್ಕೆ ಅನುವು ಮಾಡಿಕೊಡುತ್ತಾಳೆ. ಅವಳ ಅಸ್ವಸ್ಥತೆಗೆ ತಾಯಿ ಭಾಗಮ್ಮನ ಸಾವು ಕೇವಲ ನೆಪಮಾತ್ರವೇನೋ ಎಂಬ ಸಂಶಯ ಏಳುತ್ತದೆ. ಮನುಷ್ಯನ ತೀರ ಒಳ ಅಂತಃಕರಣದಲ್ಲಿ ಏನೇನು ನಿರ್ಧಾರಗಳಾಗಿ, ಅದರ ಪರಿಣಾಮ ಬಾಹ್ಯದಲ್ಲಿ ಆ ತುಮುಲಗಳ ನೆರಳೂ ಇಲ್ಲದಂತೆ, ಊಹಿಸಲೂ ಸಾಧ್ಯವಿಲ್ಲದಂತೆ ಕಾಣಿಸಿಕೊಳ್ಳುತ್ತವೆಯಷ್ಟೆ.

ಮುದ್ದುರಾಮು "ಮಂದಾನ ಮುಖವೆತ್ತಿದ. ಅದು ಮಂದಾನ ಮುಖವಲ್ಲ. ಕೃಷ್ಣಾನ ಮುಖ ಎನಿಸಿತವನಿಗೆ."—ಕೃಷ್ಣಾ ಆ ಹುಡುಗಿಯರಲ್ಲಿ ಕರಗಿ ಹೋದ ಬಗೆ ಇದು, ತನ್ನ ಜೀವವನ್ನು ಅಪರಲ್ಲಿ ನೆಟ್ಟು ಹೋದ ಪರಿ.

ಆದರೂ ಶ್ರೀಮತಿ ಎಂ.ಕೆ ಇಂದಿರಾ ಮುದ್ದುರಾಮುನನ್ನು ಈ ಕಾದಂಬರಿಯ ಕೇಂದ್ರ ವ್ಯಕ್ತಿಯನ್ನಾಗಿ ಏಕೆ ಮಾಡಿದರೆಂಬುದು ಆಶ್ಚರ್ಯವಾಗಿ ಕಾಣುತ್ತದೆ. ಈ ಹೆಣ್ಣು ಮಕ್ಕಳ ಲೋಕದ ವಿವರ ವಿವರಗಳನ್ನು ಒಂದು ತುಣುಕೂ ಬಿಡದೆ ತಿಳಿದಿರುವ ಅಪರೂಪದ ಬರಹಗಾರ್ತಿ ಎಂ. ಕೆ. ಇಂದಿರಾ. ಊಹಿಸಿ ಬರೆಯ ಬಹುದಾದ ಮುದ್ದುರಾಮುನ ಲೋಕ ಬಿಟ್ಟು ಸೀದ ಈ ಹುಡುಗಿಯರ ಅಂಗಳದಲ್ಲೇ ನಿಂತು ಕಥೆಯನ್ನು ನೋಡಿದ್ದರೆ ಇದಕ್ಕಿಂತ ಭವ್ಯವಾದ ಒಂದು ಕಾದಂಬರಿ ಕಟ್ಟಡ ವನ್ನು ನೀಡುವ ಸಾಧ್ಯತೆ ಇತ್ತು ಅಂತ ಅನಿಸುವುದಿಲ್ಲವೇ ?

ಗೌರಿ ಅವನ ಎರಡೂ ಕಿವಿಗಳನ್ನು ಹಿಡಿದು ಮೇಲೆತ್ತಿ ಹೇಳಿದಳು.
"ಥೂ ! ಪರ್ದೇಶ್ ಮುಂಡೇದೆ ! ಹತ್ತಾರೆನೋ ದೇವಸ್ಥಾನದ ಗೋಪ್ರಾನ? ಶಾಸ್ತ್ರಿಗಳು ಕಂಡ್ರೆನಿನ್ನ ಸ್ಷಂಟ ಮುರೀತಾರೆ ಗೊತ್ತಾಸು?"

"ಯಾಕ ಹತ್ಬಾರ್ದು ? ಮಂಗ, ಕಾಗೆಯಲ್ಲ ಹತ್ತಿ ಗೋಪ್ರದ ತುಂಬ.... ಹೇತ್ಬಂದಾವೆ !"
ಬಚ್ಚ ತಟ್ಟನೆ ಹೇಳಿಯೇ ಬಿಟ್ಟ.

ಸದಾನಂದ-ಪುಟ. 72

ಇಂದಿರಾ ಕೃತಿಗಳಲ್ಲಿ ಸಾಮಾಜಿಕ ಪ್ರಜ್ಞೆ : ಒಂದು ಟಿಪ್ಪಣಿ

○

○

○ ಎನ್ ಗಾಯತ್ರಿ

ತಮ್ಮ ಮೊದಲ ಕೃತಿ 'ತುಂಗಭದ್ರ'ದ ಪ್ರಕಟಣೆಯ ಸಂದರ್ಭದಿಂದಲೂ ಪ್ರಕಾಶನದ ಸಮಸ್ಯೆಯನ್ನೇ ಎದುರಿಸದ ಇಂದಿರಾರವರ ಕೃತಿಗಳು ಹಲವಾರು ಮರುಮುದ್ರಣಗಳನ್ನು ಕಂಡು ಜನಮನ್ನಣೆಯನ್ನು ಅಪಾರವಾಗಿ ಪಡೆದಿವೆ.

ಇಂದಿರಾ ಬರವಣಿಗೆಯಲ್ಲಿ ತೊಡಗುವ ಕಾಲಕ್ಕೆ ಸುಮಾರು ಅರವತ್ತು ವರ್ಷಗಳ ಸುದೀರ್ಘವಾದ ಕನ್ನಡ ಕಾದಂಬರಿ ಪರಂಪರೆಯೇ ಅವರ ಬೆನ್ನಿಗಿತ್ತು. ಸ್ತ್ರೀ ಸಮಸ್ಯೆಗಳನ್ನೂ ಸೇರಿದಂತೆ ಪ್ರಗತಿಪರವಾದ ಚಿಂತನೆಯ ಅಭಿವ್ಯಕ್ತಿಯಾಗಿ ಸಾಹಿತ್ಯವನ್ನು ಗುರುತಿಸುವ ಪರಂಪರೆಯೊಂದು ಇಂದಿರಾ ಅವರ ಬರವಣಿಗೆಯ ಮುಂಚೆ ಕಾಣಬಹುದಾಗಿದೆ. ಆದರೂ ಬಾಲ್ಯ ವಿವಾಹ, ವಿಧವಾ ಸಮಸ್ಯೆ, ಕೇಶಮುಂಡನ, ವೇಶ್ಯಾ ಸಮಸ್ಯೆ. ಸ್ತ್ರೀ ವಿದ್ಯಾಭ್ಯಾಸ, ಮುಂತಾದವು ಸಾಹಿತ್ಯದ ಕಾಳಜಿಗಳಾಗಿದ್ದು ಕೃತಿ ರಚಿಸಿದ ತಿರುಮಲಾಂಬ, ಕಲ್ಯಾಣಮ್ಮ, ಶ್ಯಾಮಲಾ ದೇವಿ, ಗಿರಿಬಾಲೆ, ಮುಂತಾದವರ ಸಾಹಿತ್ಯಕ ಪ್ರಭಾವವಾಗಲೀ. ನಂತರ ಕೃತಿ ರಚಿಸಿದ ತ್ರಿವೇಣಿ, ಹೆಚ್.ವಿ. ಸಾವಿತ್ರಮ್ಮ, ಎಂ.ಆರ್. ಜಯಲಕ್ಷ್ಮಿ ಮುಂತಾದವರ ಸ್ತ್ರೀಪರ ಧೋರಣೆಯ ಕೃತಿಗಳ ಪ್ರಭಾವವಾಗಲೀ ಇಂದಿರಾ ಅವರ ಬರವಣಿಗೆಯ ಮೇಲೆ ಅಷ್ಟಾಗಿ ಕಾಣುವುದಿಲ್ಲ. ಈ ಒಟ್ಟು ಮಹಿಳಾ ಸಾಹಿತ್ಯ ಪರಂಪರೆಯ ವೈಚಾರಿಕತೆಯ ಪ್ರಭಾವವನ್ನು ತಟ್ಟಿಸಿಕೊಳ್ಳದೆ ಇಂದಿರಾರವರ ಕೃತಿಗಳು ತಮ್ಮಷ್ಟಕ್ಕೆ ತಾವೇ ಸ್ವತಂತ್ರ ಎನ್ನಿಸುವಷ್ಟು ಅನನ್ಯವಾಗಿ ಉಳಿದಿರುವುದು ಒಂದು ವಿಸ್ಮಯವೇ ಸರಿ.

ಇಂದಿರಾ ಅವರ ಬರವಣಿಗೆಯ ಮೂಲದ್ರವ್ಯ ಅವರ ಜೀವನಾನುಭವ. ಅದರಲ್ಲೂ ಅವರ ಬಾಲ್ಯದ ಜೀವನಾನುಭವವೇ ಅವರ ಬಹಳಷ್ಟು ಕೃತಿಗಳನ್ನು ರೂಪಿಸುತ್ತದೆ. ಪ್ರಮುಖವಾಗಿ ಮಲೆನಾಡಿನ ಗ್ರಾಮ್ಯಜೀವನದ ವಿವರಗಳನ್ನು ಪದರ ಪದರವಾಗಿ ಅತ್ಯುತ್ಸಾಹದಿಂದ ಬಿಚ್ಚಿಡುವ ಇಂದಿರಾ ಮಲೆನಾಡಿನ ದಟ್ಟ ಹಸುರಿನ ಪಾಕೃತಿಕ ಸಂಪತ್ತು, ಅದರ ಜೊತೆಗೆ ಆ ಪ್ರಕೃತಿಯ ಮಡಿಲಲ್ಲಿ ವಾಸವಾಗಿರುವ ಜನರ ಹೃದಯ ಸಂಪತ್ತನ್ನು ಅಭಿಮಾನದಿಂದ, ಅತಿಶಯವಾಗಿ ಚಿತ್ರಿಸುತ್ತಾರೆ. ಇಲ್ಲೆಲ್ಲಾ ಇಂದಿರಾರವರ ಸಾಹಿತ್ಯಿಕ ಪ್ರಜ್ಞೆ ಪ್ರಮುಖವಾಗಿ ಸಾಂಪ್ರದಾಯಿಕವಾಗಿ ಕೆಲಸ ಮಾಡುತ್ತದೆ. ಪರಂಪರಾಗತ ಮೌಲ್ಯಗಳನ್ನು ವೈಯಕ್ತಿಕ ಅನುಭವದ ನೆಲೆಯಲ್ಲಿಟ್ಟು ನೋಡುವ ಪ್ರಯತ್ನದಲ್ಲೂ ಅಂತಹ ಮೌಲ್ಯ ಸಂಘರ್ಷವೇನೂ ಇಲ್ಲ ; ಬದಲಿಗೆ ನಶಿಸಿ ಹೋಗುತ್ತಿರುವ ಸಾಂಪ್ರದಾಯಿಕ ಮೌಲ್ಯಗಳಲ್ಲಿ ಅವರಿಗೆ ಅಪಾರವಾದ ಶ್ರದ್ಧೆಯಿದೆ.

ಇಂದಿರಾ ಅವರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರೂ ವಿಮರ್ಶಾ ಲೋಕ ಅವರ ಸತ್ವಪೂರ್ಣ ಕೃತಿಗಳೆಂದು ಹೆಸರಿಸುವುದು ಬೆರಳೆಣಿಕೆಯ ಕೃತಿಗಳನ್ನಷ್ಟೇ. ಹೀಗೆ ಅಪಾರ ಜನಮನ್ನಣೆಗಳಿಸಿರುವ ಮತ್ತು ವಿಮರ್ಶಕರಿಂದಲೂ ಬೆನ್ನು ತಟ್ಟಿಸಿಕೊಂಡಿರುವ ಕಾದಂಬರಿಗಳಲ್ಲಿ ಕೆಲವನ್ನು ಉದಾಹರಣೆಗೆ 'ತುಂಗಭದ್ರಾ', 'ಸದಾನಂದ', 'ಗೆಜ್ಜೆಪೂಜೆ' ಮತ್ತು 'ಫಣಿಯಮ್ಮ' ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಕೃತಿಗಳಲ್ಲಿ ಕಂಡು ಬರುವ ಸಾಮಾಜಿಕ ಪ್ರಜ್ಞೆಯ ಎಳೆಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇಂದಿರಾ ಅವರು ಚಿತ್ರಿಸುವ ಬದುಕು ಹಾಗೂ ಸಮಾಜ ಸರಳವಾದದ್ದು. ಶ್ರೇಣೀಕೃತ ಸಮಾಜ ರಚನೆಯಲ್ಲಿನ ಪರಿಮಿತಗಳಿಲ್ಲದಂತಹ, ಸಂಘಟಿತವಾದ ನೆಮ್ಮದಿಯ ಕುಟುಂಬ ಸುಖವನ್ನುಳ್ಳಂತಹುದು. ಅವರೇ ಹೇಳಿಕೊಳ್ಳುವಂತೆ ಅವರ ಬಹಳಷ್ಟು ಕಾದಂಬರಿಯ ವಸ್ತುಗಳು ಅವರು ಕಂಡು ಕೇಳಿದ ಘಟನೆಗಳೇ ಆಗಿವೆ. ಈ ಘಟನೆಯ ವಸ್ತುಗಳು ಇಂದಿರಾರವರ ಅನುಭವದ ಮೂಸೆಯಲ್ಲಿ ಕಲಾತ್ಮಕ ಕೃತಿಯಾದಾಗ ಪಡೆದುಕೊಳ್ಳುವ ಸ್ವರೂಪ ಮತ್ತು ಹೊರಡಿಸುವ ವಾಗರ್ಥಗಳನ್ನು ವಿಶ್ಲೇಷಿಸುವುದು ಇಲ್ಲಿ ಒಂದು ಉದ್ದೇಶವಾಗಿದೆ.

ಇಂದಿರಾರವರ ಕಾದಂಬರಿಗಳಲ್ಲಿ ಬಹು ಮುಖ್ಯವಾಗಿ ಚರ್ಚಿತವಾಗುವ ಸಾಮಾಜಿಕ ಅಂಗ ಕುಟುಂಬ. ಈ ಕುಟುಂಬವೇ ಕಾದಂಬರಿ ಪ್ರತಿಪಾದಿಸುವ ಮೌಲ್ಯ ವ್ಯವಸ್ಥೆಯ ಬಹುಮುಖ್ಯ ಅಂಗವಾಗಿರುತ್ತದೆ. ಅವರ ತುಂಗಭದ್ರಾ ಕಾದಂಬರಿಯಲ್ಲಿ ವಿದ್ಯಾಭ್ಯಾಸ ಮತ್ತು ನಾಗರೀಕತೆಯ ಸ್ಪರ್ಶ ಅನುಭವಿಸಿದ ಪಾತ್ರ

ಗಳಾದ ಮುದ್ದುಕೃಷ್ಣ ಮತ್ತು ರಾಘವ ಕೂಡ 'ಕುಟುಂಬ'ವನ್ನು ಮೀರುವ ಸಾಹಸ ಮಾಡುವುದಿಲ್ಲ. ತಮ್ಮ ಇಚ್ಛೆಗೆ ವಿರುದ್ಧವಾಗಿ ನಿಲ್ಲುವ ಕುಟುಂಬದ ಹಿರಿಯರನ್ನು ಧಿಕ್ಕರಿಸಿ ಯಾವುದೇ ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಹೆಚ್ಚೆಂದರೆ ಪಲಾಯನವಾದ ಹೂಡಬಹುದಷ್ಟೇ. ಪುರುಷ ಪಾತ್ರಗಳ ಹಣೆಬರಹವೇ ಹೀಗಿರುವಾಗ ಇನ್ನು ವಿದ್ಯೆ, ಆಸ್ತಿ ಯಾವುದೂ ಇರದ ಸ್ತ್ರೀಪಾತ್ರಗಳಾದ ಕೃಷ್ಣವೇಣಿ, ತುಂಗ, ಭದ್ರಾ, ಮಂದಾ, ಎಲ್ಲರೂ ಕುಟುಂಬದ ನಿರ್ಧಾರಗಳಿಗೆ ಬದ್ಧರು.

ಮೈಸೂರಿನಂತಹ ಪಟ್ಟಣದ ನಾಗರೀಕತೆಯ ನಡುವೆ ಚಿತ್ರಿತವಾಗಿರುವ 'ಗೆಜ್ಜೆಪೂಜೆ' ಕಾದಂಬರಿಯಲ್ಲಿ ಬರುವ ಅವಧಾನಿಗಳ ಕುಟುಂಬವೂ ಕೂಡ ಸಾಮಾಜಿಕ ಸಂಬಂಧಗಳನ್ನು ಶಕ್ತಿಶಾಲಿಯಾಗಿ ನಿಯಂತ್ರಿಸುವ ಸಾಮಾಜಿಕ ಅಂಗವಾಗಿಯೇ ಕೆಲಸ ಮಾಡುತ್ತದೆ. ಈ ಕೃತಿಯ ಬಹುಮುಖ್ಯ ಪಾತ್ರವಾದ ಸೋಮು ಎಂ.ಎ. ಪದವೀಧರನಾದರೂ, ಉತ್ತಮ ಉದ್ಯೋಗ ಹೊಂದಿದ್ದರೂ ಮನೆಯವರ ಆಶೆ, ಆಕಾಂಕ್ಷೆಗಳನ್ನು, ರೀತಿ, ನೀತಿಗಳನ್ನು ಮೀರಲು ಸಿದ್ಧನಿಲ್ಲ. ಆ ಪಾತ್ರಕ್ಕೆ ಅಂತಹ ಸತ್ವಗ್ರಹಿಕೆಯೇ ಇಲ್ಲ. ಹಾಗೆಯೇ ವೇಶ್ಯಾ ಕುಲಕ್ಕೆ ಸೇರಿದ ಚಂದ್ರಾ ಕೂಡ 'ಮದುವೆ'ಯಾಗಬೇಕೆಂಬ ಹೆಬ್ಬಯಕೆಯನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾ ಬಂದರೂ ತನ್ನ ಕುಟುಂಬದ ರೀತಿ, ನಿಯಮಾವಳಿಗಳಾಚೆ ಪ್ರಯತ್ನವನ್ನು ಮಾಡುವಂತೆ ಕಂಡು ಬರುವುದೇ ಇಲ್ಲ. ಇಲ್ಲಿಯೂ ಅವಳು ಪಡೆದುಕೊಂಡ ವಿದ್ಯಾಭ್ಯಾಸ ಅವಳಿಗೆ ಅವಳ ಕುಟುಂಬವನ್ನು ಧಿಕ್ಕರಿಸಲು ಸಹಾಯ ಮಾಡುವುದೇ ಇಲ್ಲ.

'ಸಂಪ್ರದಾಯದ ಸಂಕೋಲೆಯೊಂದಿಗೆ ಶಾಂತವಾಗಿ' ಬೆಳೆದ ಬಾಲವಿಧವೆ ಫಣಿಯಮ್ಮನ ಕಥೆಯನ್ನು ಹೇಳುವ 'ಫಣಿಯಮ್ಮ' ಕಾದಂಬರಿಯಲ್ಲಿ ಚಿತ್ರಿತವಾಗಿರುವ ಕುಟುಂಬ ಒಂದು ದೊಡ್ಡ ವ್ಯವಸ್ಥೆಯಿದ್ದಂತೆಯೇ ಚಿತ್ರಿಸಲ್ಪಟ್ಟಿದೆ. "ಅಂಚೆ ಮನೆತನದವರು ಎಂದರೆ ಮಲೆನಾಡ ಪ್ರಾಂತ್ಯಕ್ಕೆಲ್ಲಾ ಚಿರಪರಿಚಿತ. ಹೀಗಾಗಿ ಅಂಚೆಮನೆತನದ ಆರ್ಥಿಕ ಸಂಪತ್ತು, ಅಂತಸ್ತು, ದೌಲತ್ತು ಎಲ್ಲವೂ ಬೆಳೆಯಿತಾದರೂ ರಕ್ತಗತವಾಗಿ ಅವರ ಹನ್ನೆರಡು ತಲೆಯ ಹಿಂದಿನಿಂದ ನಡೆದು ಬಂದ ಸಂಪ್ರದಾಯ, ಮಡಿವಂತಿಕೆ, ಮೂಢನಂಬಿಕೆಗಳ ಆಚರಣೆ ಮಾತ್ರ ಮತ್ತೂ ಸ್ವಲ್ಪ ಹೆಚ್ಚಿತೆಂದೇ ಹೇಳಬೇಕು." ಹೀಗೆ ಒಂದೊಂದು ಕುಟುಂಬ, ಮನೆತನವೂ ಪಾಳೇಗಾರಿ ಸಂಸ್ಥಾನದಂತೆ ವಿಜೃಂಭಿಸುತ್ತದೆ.

ಇಂದಿರಾ ಅವರ ಕಾದಂಬರಿಗಳಲ್ಲೆಲ್ಲಾ ವಿವಾಹ ಸಂಸ್ಥೆ ಬಹುಮುಖ್ಯ ಪಾತ್ರ ವಹಿಸುತ್ತದೆ. ಅವರ ಕಾದಂಬರಿಗಳಲ್ಲಿ ಇದು ಸಮಸ್ಯೆಯೂ ಹೌದು; ಹಾಗೆಯೇ

ಅದೇ ಪರಿಹಾರವೂ ಕೂಡ. ಅವರ ತುಂಗ ಭದ್ರಾ ಕಾದಂಬರಿಯಲ್ಲಿ ಮುಖ್ಯ ಸಮಸ್ಯೆ ಕುರುಡಿಯರಾದ ತುಂಗ-ಭದ್ರೆಯರಿಗೆ ಮದುವೆಯಾಗುವುದು ಹೇಗೆ? ಹುಡುಗಿಯರಿಗೆ ಮದುವೆಯಾಗದೆ ಮೈನೆರೆದರೆ ಮಠಾಧಿಪತಿಗಳನ್ನು ಎದುರಿಸುವುದು ಹೇಗೆ?—ಇವೆಲ್ಲ ಮುಖ್ಯ ಸಮಸ್ಯೆಗಳು. ಇಲ್ಲಿ ಇಂದಿರಾ ಕನ್ಯಾಸೆರೆಯನ್ನು ಬಿಡಿಸುವ ರೀತಿ ಸಮಸ್ಯೆಗೆ ಪರಿಹಾರವನ್ನು ಸೂಚಿಸುವುದಷ್ಟೇ ಅಲ್ಲದೆ, ನಮ್ಮ ವಿವಾಹ ಸಂಸ್ಥೆಯ ಟೊಳ್ಳುತನವನ್ನೂ ಬಯಲಿಗೆಳೆಯುತ್ತದೆ. ತುಂಗ-ಭದ್ರೆಯರಿಗೆ ವಿವಾಹವಾಗ ಬೇಕಾಗಿರುವುದು ತಂದೆ ತಾಯಿಗಳನ್ನು ಕನ್ಯಾಸೆರೆಯಿಂದ ಮುಕ್ತರನ್ನಾಗಿ ಮಾಡಲು, ಹಾಗೂ ಮಠಾಧಿಪತಿಗಳ ಪ್ರಕೋಪದಿಂದ ಬಿಡುಗಡೆ ಪಡೆಯಲು. ಅವರ ದೈಹಿಕ ಮಾನಸಿಕ ಅಗತ್ಯಗಳಿಗಾಗಿ ಮದುವೆ ಬೇಕೆಂಬ ಅಗತ್ಯವನ್ನು ನಿರ್ಲಕ್ಷಿಸುವ ಸಮಾಜವನ್ನು ವಿಡಂಬಿಸಲೆಂದೇ ಇಲ್ಲಿ ಅವರನ್ನು ನಾಮಮಾತ್ರಕ್ಕೆ ಮದುವೆಯಾಗಲು ಸಿದ್ಧರಿರುವ ಯಾರಿಗಾದರೂ ಧಾರೆಯೆರೆಯಲು ತಂದೆ ತಾಯಿಗಳು ಸಿದ್ಧರಿರುವಂತೆ ಚಿತ್ರಿಸಲಾಗಿದೆ. ಅವರು ಕಾದಂಬರಿಗಳಲ್ಲೆಲ್ಲಾ ಹೆಚ್ಚು ಪ್ರಗತಿಪರವಾದ ಅಂಶಗಳನ್ನು ಒಳಗೊಂಡಿರುವಂತೆ ತೋರುವ 'ಸದಾನಂದ' ಕಾದಂಬರಿಯಲ್ಲೂ 'ಮದುವೆ'ಯೇ ಮುಖ್ಯ ವಸ್ತು. ಕುಂಟಿಯಾದ ಗೌರಿಗೆ, ಬಾಲವಿಧವೆಯಾದ ಕಮಲಳಿಗೆ ಮದುವೆ ಮಾಡಿಸುವುದರೊಂದಿಗೆ ಕಾದಂಬರಿಯ ಉದ್ದೇಶ ಸಫಲವಾಗಿದೆ. 'ಆದರ್ಶಪೂರ್ಣ ವ್ಯಕ್ತಿತ್ವ'ವೆಂದು ಬಾಲವಿಧವೆಯಾದ ಫಣಿಯಮ್ಮನ ಕತೆಯನ್ನು ಹೇಳುವ 'ಫಣಿಯಮ್ಮ' ಕಾದಂಬರಿಯಲ್ಲಿಯೂ ವಿವಾಹದ ಬಗೆಗೆ ಫಣಿಯಮ್ಮ ಹೊಂದಿದ್ದ ವಿಚಾರಗಳನ್ನು ಚಿಂತನೆಯನ್ನು ವಿಮರ್ಶಿಸಲಾಗಿದೆ: "ಇಸ್ಸಿ, ಮದುವೆ, ಮುಂಜಿ, ಪ್ರಸ್ತ, ಮಕ್ಳು, ಬಾಣಂತನ, ಸಂಸಾರ. ಪೂಜೆ-ಪುನಸ್ಕಾರ. ಮಡಿ-ಹುಡಿ! ಯಾತಕ್ಕೆ ಮಣ್ಣು ಹುಯ್ಕೊಳೂಕೆ!" "ಸಧ್ಯ ನನ್ನ ಗಂಡ ಸತ್ತದ್ದೇ ಒಳ್ಳೇದಾತು. ಇದ್ದಿದ್ರೆ ನಂಗೂ ಇದೇ ಅವಸ್ಥೆ ಇತ್ತೋ ಏನು ಕತೆಯೋ! ಹೇಸಿಗೆ. ಗಂಡಸಿನ ಮುಂದೆ ಬೆತ್ಲೆ ಬಿದ್ಗಂಡು... ಥೂ!" ವಿವಾಹದ ಬಗೆಗೆ ಫಣಿಯಮ್ಮನಿಗಿರುವ ಈ ಜಿಗುಪ್ಸೆ ಅವಳನ್ನು ತಪಸ್ವಿನೀತನದತ್ತ ಒಯ್ದಿತ್ತು ಎಂಬುದನ್ನು ಸ್ಥಾಪಿಸುವ ಪ್ರಯತ್ನವನ್ನು ಇಂದಿರಾ ಇಡೀ ಕೃತಿಯುದ್ದಕ್ಕೂ ನಡೆಸುತ್ತಾರೆ.

ತಮ್ಮ ಇಂದಿನ ಎಷ್ಟೋ ಲೇಖಕಿಯರು ಯಶಸ್ವಿಯಾಗಿ ಬರೆದು ಚಿತ್ರಿಸಿದಂತಹ ಸಾಮಾಜಿಕ ಸಮಸ್ಯೆಗಳನ್ನು ಇಂದಿರಾ ಕೂಡ ತಮ್ಮ ಬರವಣಿಗೆಯ ವಸ್ತುವಾಗಿರಿಸಿಕೊಂಡವರು. ಆದರೆ ಈ ವಸ್ತುಗಳನ್ನು ಇಂದಿರಾ ನಿರ್ವಹಿಸುವ ರೀತಿಯೇ ಬೇರೆ. ಅವರ 'ಗೆಜ್ಜೆಪೂಜೆ' ಕಾದಂಬರಿ ವಿವಾಹವಾಗಬೇಕೆಂದು ಹಂಬಲಿಸುವ ವೇಶ್ಯಾಕುಲಕ್ಕೆ ಸೇರಿದ ಹೆಣ್ಣು ಮಗಳೊಬ್ಬಳ ಅಯಶಸ್ವೀಕತೆಯನ್ನು ಕುರಿತದ್ದು. ವಿವಾಹವಾಗಬೇಕೆಂಬ ನಾಯಕಿಯ ಹಂಬಲ ಕೂಡ ಇಲ್ಲಿ ಕ್ರಿಯೆಯ ಸ್ವರೂಪ ಪಡೆಯದೆ ಯೋಚನೆಯ ಹಂತದಲ್ಲಿದೆ. ಅಷ್ಟೇ ಅಲ್ಲ, ಸಮಾಜದ ಜ್ವಲಂತ ಸಮಸ್ಯೆ

ಜನಾದ ವೇಶ್ಯಾ ಪದ್ಧತಿ ಇಲ್ಲಿ ಸಮಸ್ಯೆಯಾಗಿಯೇ ಚಿತ್ರಿತವಾಗಿಲ್ಲ. ಶ್ಯಾಮಲಾದೇವಿ ಬೆಳಗಾಂವಕರ್ ಅವರ ಸಣ್ಣಕತೆ 'ಸ್ನೇಹದರ್ಶನ' ಇಲ್ಲಿ ನೆನಪಾಗುತ್ತದೆ. 'ಗೆಜ್ಜೆ ಪೂಜೆ'ಯ ಚಂದ್ರಳಿಗಿದ್ದಂತಹುದೇ ಪರಿಸ್ಥಿತಿಯುಳ್ಳದ್ದ 'ಸ್ನೇಹದರ್ಶನ' ಕತೆಯು ಪ್ರೇಮ ಆ ಕತೆಯು ಲೇಖಕಿಗಿದ್ದ ವೈಚಾರಿಕ ದೃಷ್ಟಿಕೋನದ ಭಿನ್ನತೆಯಿಂದಾಗಿ ಹೇಗೆ ಬೇರೆ ಯದೇ ಆದ, ಅನುಭವವನ್ನು ಕಟ್ಟಿಕೊಡುತ್ತಾಳೆ ಎಂಬುದನ್ನು ಗಮನಿಸಬಹುದು. 'ಸ್ನೇಹದರ್ಶನ'ದ ಕಥೆಯ ನಾಯಕಿಗೆ ವೇಶ್ಯಾ ಸಮಸ್ಯೆ ಕೇವಲ ವೈಯಕ್ತಿಕ ಸಮಸ್ಯೆ ಯಾಗದೇ ಸಾಮಾಜಿಕ ಸಮಸ್ಯೆಯೂ ಆಗಿ ಅನುಭವವಾದರೆ 'ಗಜ್ಜೆಪೂಜೆ'ಯ ಚಂದ್ರಳಿಗೆ ಅದು ಕೇವಲ ವೈಯಕ್ತಿಕ ಸಮಸ್ಯೆ. ಈ ವೈಯಕ್ತಿಕ ಸಮಸ್ಯೆಯನ್ನು ಎಂ. ಕೆ. ಇಂದಿರಾರವರು ಸಮಾಜದ ಸ್ಥಿತಿಯಾಗಷ್ಟೇ ನೋಡುವುದರಿಂದ ಆ ಸಮಸ್ಯೆಯ ಒಳನೋಟಗಳಾವುವೂ 'ಗೆಜ್ಜೆಪೂಜೆ'ಯಲ್ಲಿ ದೊರೆಯುವುದಿಲ್ಲ.

ಇಂದಿರಾರವರ 'ಫಣಿಯಮ್ಮ' ಕೃತಿ ಆದರ್ಶ ವ್ಯಕ್ತಿತ್ವ ಹೊಂದಿದ್ದ ಬಾಲ ವಿಧವೆಯಾದ ಫಣಿಯಮ್ಮನ ಆದರ್ಶಮಯ ಜೀವನವನ್ನು ನಿರೂಪಿಸುತ್ತದೆ. ಮುನ್ನುಡಿಯಲ್ಲಿ ಲೇಖಕಿಯೇ ಹೇಳಿಕೊಂಡಿರುವಂತೆ' ಈ ಫಣಿಯಮ್ಮ ನೂರೈವತ್ತು ವರ್ಷಗಳ ಹಿಂದಿನಕಾಲದ ಜೀವನಕ್ರಮವನ್ನು ಚಿತ್ರಿಸುವ ಕೃತಿ ; ಜೊತೆಗೆ ಕಥಾ ನಾಯಕಿಯಾದ ಫಣಿಯಮ್ಮನಿಗೂ ಲೇಖಕಿಗೂ ಇರುವ ಸಂಬಂಧವನ್ನು ಮುನ್ನುಡಿ ಯಲ್ಲಷ್ಟೇ ಅಲ್ಲದೆ ಕೃತಿಯ ಚೌಕಟ್ಟಿನಲ್ಲಿಯೂ ವಾಚ್ಯವಾಗಿ ಪ್ರಸ್ತಾಪಿಸಲಾಗಿದೆ. ಅಷ್ಟೇ ಅಲ್ಲ, ಅವರು ಕೃತಿಗೆ ಮುಂಚೆ ಕೊಟ್ಟಿದ್ದ ಶೀರ್ಷಿಕೆ 'ಕೂಪ' ಎಂಬುದನ್ನು ಗಮನಿ ಸಿದರೆ, ನೂರೈವತ್ತು ವರ್ಷಗಳ ಹಿಂದಿನ ಕಾಲದ ಜೀವನಕ್ರಮದಲ್ಲಿನ ವಿಧವೆಯೊಬ್ಬಳ ಸ್ಥಿತಿಯನ್ನು ಮತ್ತು ಅವಳಿರುವ ಪರಿಸರವನ್ನು ಒಂದು ಕೂಪಕ್ಕೆ ಹೋಲಿಸಲಾಗಿದೆ. ಸಂಪ್ರದಾಯದ, ಮಡಿವಂತಿಕೆಯ, ಮೂಢನಂಬಿಕೆಯ ಕೂಪದಲ್ಲಿದ್ದರೂ ಬಾಲವಿಧವೆ ಯಾದ ಫಣಿಯಮ್ಮ, ಹೇಗೆ ತನ್ನ ಪಾವನ ಚಾರಿತ್ರ್ಯದಿಂದಾಗಿ ಕರ್ಮಯೋಗಿಯೆನಿಸಿ, ತಪಸ್ವಿನಿಯಾದಳು ಎಂಬ ಮಹತ್ವದ ಅಂಶವನ್ನು ಈ ಕೃತಿಯಲ್ಲಿ ಇಂದಿರಾ ನಿರೂಪಿ ಸಲು ಹೊರಟಿದ್ದಾರೆ. ವಿಧವೆಯೊಬ್ಬಳ ಮಹತ್ವದ ಗುಣಗಳನ್ನು, ಶ್ರೇಷ್ಠ ವ್ಯಕ್ತಿತ್ವ ವನ್ನು ನಿರೂಪಿಸಲು ಹೊರಟಿರುವ ಲೇಖಕಿಯಿಂದ ವಿಧವಾಸಮಸ್ಯೆಯ ಸಂಕೀರ್ಣತೆಯ ಒಳನೋಟ ಇಲ್ಲಿ ಸಿಕ್ಕುವುದಿಲ್ಲ. ಅದು ಅವರ ಉದ್ದೇಶವೂ ಅಲ್ಲ.

ಇಂದಿರಾ ಅವರ 'ಸದಾನಂದ' ಕಾದಂಬರಿಯಲ್ಲಿ ವಿಧವಾ ಸಮಸ್ಯೆ ಮತ್ತು ಅಂಗವೈಕಲ್ಯದ ಸಮಸ್ಯೆ ಪ್ರಸ್ತಾಪಿಸಲ್ಪಟ್ಟಿದೆ. ಫಣಿಯಮ್ಮ ಕೃತಿಯಲ್ಲಿ ಸಮಸ್ಯೆಯೇ ಆಗದ ವಿಧವತ್ವ 'ಸದಾನಂದ'ದಲ್ಲಿ ಸಮಸ್ಯೆಯಾಗಿದೆ. ವಿಧವೆ ಕಮಲಳನ್ನು, ಅಂಗವಿಕಲೆ ಗೌರಿಯನ್ನು ಮದುವೆಯಾಗ.ವ ಸದಾನಂದ ಮತ್ತು ರಾಜಣ್ಣ ಅವರುಗಳ

ದೊಡ್ಡತನ, ಶ್ರೇಷ್ಠ ವ್ಯಕ್ತಿತ್ವವನ್ನು ವೈಭವಿಸುವುದೇ ಕೃತಿಯುದ್ದಕ್ಕೂ ಕಂಡುಬರುತ್ತದಲ್ಲದೇ ಸಮಸ್ಯೆಯ ಸಂಕೀರ್ಣತೆಯು ಅಷ್ಟಾಗಿ ಒಡಮೂಡಿಲ್ಲ. ಬಹುಶಃ ಕನ್ನಡದ ಬೇರಾವ ಲೇಖಕಿಯ ಕೃತಿಗಳಲ್ಲೂ ಕಂಡು ಬರದಷ್ಟು ಸಶಕ್ತವಾಗಿ ವ್ಯಂಗ್ಯದರ್ಶನ ಇಂದಿರಾರವರ ಕಾದಂಬರಿಗಳಲ್ಲಿ ಕಂಡುಬರುತ್ತದ. ತಾವು ನಂಬಿದ, ಬದುಕಿದ ಸಂಸ್ಕೃತಿಯ, ಪರಂಪರಾಗತ ಮೌಲ್ಯಗಳನ್ನು ಕುರಿತಂತೆ ಚಿಂತಿಸುವ ಸಂದರ್ಭದಲ್ಲಿ ಕೃತಿಯ ನಿರೂಪಣೆಗೆ ವ್ಯಂಗ್ಯದರ್ಶನ ಆಧಾರವಾಗದಿದ್ದರೂ, ಶೈಲಿಯಾಗಿ ಕೆಲವು ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತದೆ.

ಫಣಿಯಮ್ಮ ಕಾದಂಬರಿಯಲ್ಲಿ ಫಣಿಯಮ್ಮ ಹುಟ್ಟಿದ ಘಳಿಗೆಯನ್ನು ಬರೆದ ರೀತಿಯನ್ನು ಕುರಿತು ಹೀಗೆ ಹೇಳುತ್ತಾರೆ :

"ಯಂಟಣ್ಣಾ ಶಿರೋದಯ ಆತೂ"– ಎಂದು ಕೂಗಿದರು ಹೆರಿಗೆಗೆ ಕೂತಿದ್ದ ನಾಗಮ್ಮ. ವಯಸ್ಸಾದ ಯಂಟಣ್ಣನವರಿಗೆ ಕಿವಿಯೂ ಸ್ವಲ್ಪ ಮಂದವೇ. ಹುಟ್ಟಿದ ಮಗು ಕಾವ್-ಕಾವ್–ಕಾವ್ ಎಂದು ಕಿರುಚಿದ ಕೂಡಲೇ ಯಂಟಣ್ಣ ತಟ್ಟನೆ ಕಣ್ಣರಳಿಸಿ ಗಳಿಗೆ-ಬಟ್ಟಲು ನೋಡಿದರು. ಮುಳುಗಿ ಎಷ್ಟೊತ್ತಾಗಿತ್ತೋ ? ಆದರೂ ಅಂದಿನ ಲೆಕ್ಕಾಚಾರ ಪ್ರಕಾರ ರಾತ್ರಿ ಹನ್ನೆರಡೂವರೆಯ ಅಭಿಜಿನ್ ಮುಹೂರ್ತ ಕಳೆದು ಹೋಗಿತ್ತು. ಆದರೂ ಕೂಡಲೇ ಮಗು ಹುಟ್ಟಿದ ಸಮಯ ಬರೆದರು" (ಪುಟ ೪)

ನಂತರ ಫಣಿಯಮ್ಮನ ಪತಿ ನಂಜುಂಡ ತೀರಿದ ನಂತರ ಲೇಖಕಿ ಬರೆಯುವುದು "ಫಣಿಯಮ್ಮನ ಜಾತಕದ ಅಖಂಡ ಸೌಭಾಗ್ಯ, ಹದಿನಾರು ಗುಣಗಳು, ದೀರ್ಘ ಸೌಮಂಗಲ್ಯ, ಮಾಂಗಲ್ಯಕೂಟ, ಅಷ್ಟಪುತ್ರ ಸಂತಾನ, ಎಲ್ಲ ಸುಣ್ಣಗೆ ಅಳಿಸಿ ತೊಳೆದು ಈಗ ಅವಳು ಮೊದಲಿನ ಕನ್ಯಾಕುಮಾರಿಯೇ ಆಗಿದ್ದಳು" ಎಂದು ಹೇಳುವಲ್ಲಿ ಕಾದಂಬರಿಯಲ್ಲಿ ವ್ಯಂಗ್ಯ ಸ್ಪಷ್ಟವಾಗಿ ಪ್ರಕಟವಾಗುತ್ತದೆ.

"ಸೂತಕದ ಮನೆಯಿಂದ ಬಂದವರಾದ ತಮ್ಮಯ್ಯನವರಿಗೆ ಮಠದೊಳಗೆ ಹೋಗಲು ಪರವಾನಗಿ ದೊರೆಯಲಿಲ್ಲ. ಮನವಿಯನ್ನು ಪಾರುಪತ್ತೇಗಾರರಿಗೆ ಕಳುಹಿಸಿದ್ದರು. ಮೂರು ದಿನಗಳ ನಂತರ ಈ ಉತ್ತರ ಬಂತು. ಅದು ನೃಸಿಂಹ ಭಾರತಿಸ್ವಾಮಿಗಳ ತನಕ ಮುಟ್ಟಿತೆಂಬುದರಲ್ಲಿ ಯಾವ ಭರವಸೆಯೂ ಇಲ್ಲ."

"ಫಣಿಯಮ್ಮ ತನ್ನ ತಾಯಿಗೇ ನಾಲ್ಕು ಬಾಣಂತನ ಮಾಡಿದ್ದರೂ ಮಕ್ಕಳು ಹೇಗೆ ಹುಟ್ಟುತ್ತವೆ, ಎಂಬ ವಿಷಯ ಅವಳಿಗೆ ಗೊತ್ತಿಲ್ಲ"

ಇವೆಲ್ಲಾ ಎಂ. ಕೆ. ಇಂದಿರಾರವರ ವಿಡಂಬನೆಯ ಶೈಲಿಯನ್ನು ಪರಿಚಯಿ ಸುತ್ತವೆ.

ಎಂ. ಕೆ. ಇಂದಿರಾರವರ 'ತುಂಗಭದ್ರಾ' ಕಾದಂಬರಿಯಲ್ಲಿ ಈ ವಿಡಂಬನೆ ಹೆಚ್ಚು ಉದ್ದೇಶಪೂರ್ವಕವಾಗಿ ಬರುತ್ತದೆ. ಅಂಥ ಬಾಲಕಿಯರಾದ ತುಂಗ-ಭದ್ರೆಯರನ್ನು ಮದುವೆಯಾಗಲು ಯಾರೂ ಮುಂದೆ ಬರುವುದಿಲ್ಲ. ಆದರೆ ಅವರಿಗೆ ಮದುವೆಯಾಗ ದಿದ್ದರೆ ಮಠಾಧಿಪತಿಗಳ ಬಹಿಷ್ಕಾರಕ್ಕೆ ಸಿದ್ಧರಿರಬೇಕು. ಈ ವ್ಯವಸ್ಥೆಯನ್ನು ಒಪ್ಪಿಕೊಂಡ 'ತುಂಗ-ಭದ್ರಾ' ಕಾದಂಬರಿಯ ಸಮಾಜ ಕಂಡುಕೊಳ್ಳುವ ಒಳ ಮಾರ್ಗವು ಇಂದಿರಾರವರ ವ್ಯಂಗ್ಯದರ್ಶನಕ್ಕೆ ಅತ್ಯುತ್ತಮ ಉದಾಹರಣೆಯೆಂದು ನನಗನ್ನಿಸುತ್ತದೆ. ಮಂದಾಕಿನಿಯನ್ನು ಮದುವೆಯಾಗಲು ಸಿದ್ಧನಿರುವ ವರ, ತುಂಗ ಭದ್ರೆಯರನ್ನು ನಾಮಮಾತ್ರಕ್ಕಾದರೂ ಮದುವೆಯಾಗಲು ಸಿದ್ಧನಿರಬೇಕೆಂದು ಬಯಸುವ ಕುಟುಂಬ ಆ ಮೂರೂ ಹೆಣ್ಣು ಮಕ್ಕಳ ಮನಸ್ಸಿನ ಹಾಗೂ ದೈಹಿಕ ಅಗತ್ಯ ಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ. ವಿವಾಹ ಸಂಸ್ಥೆಯ ಉದ್ದೇಶವನ್ನು ಇಲ್ಲಿ ಗೇಲಿ ಮಾಡುವುದನ್ನು ನೋಡಬಹುದು.

ಒಟ್ಟಿನಲ್ಲಿ ಇಂದಿರಾರವರ ಸಾಮಾಜಿಕ ಪ್ರಜ್ಞೆ ತೀರ ತೆಳುವಾದುದು. ಕುಟುಂಬ ದಲ್ಲಿ, ಸಮಾಜದಲ್ಲಿ ಉಂಟಾಗಿರುವ ಅನ್ಯಾಯಗಳಿಗೆ ಲೇಖಿಕೆಗೆ ಸಹಾನುಭೂತಿ, ಅನುಕಂಪವಿದೆ. ಆದರೆ ಅವರ ಪ್ರಜ್ಞೆ ಈ ಸಹಾನುಭೂತಿಯಾಚೆ ಹರಿಯುವುದೇ ಇಲ್ಲ. ಎಂ. ಕೆ. ಇಂದಿರಾರವರ ಬಹಳಷ್ಟು ಕೃತಿಗಳ ವಸ್ತು ಅವರ ಕಾಲದಲ್ಲಿಯೇ ಬದಲಾವಣೆ ಬಯಸಿದಂತಹವು, ಹಾಗೂ ಪಡೆದಂತಹವು ಎಂದೆನಿಸಿದರೂ, ಇಂದಿರಾ ರವರ ಕೃತಿಗಳ ವಿಷಯಕ್ಕೆ ಬಂದಾಗ ಆ ಕೃತಿಗಳ ಒಟ್ಟು ಪ್ರಬಂಧಧ್ವನಿ ಯಥಾಸ್ಥಿತಿ ವಾದದ ಕಡೆಗೇ ವಾಲಿದಂತೆ ಗೋಚರಿಸುತ್ತದೆ.

ಇಂದಿರಾ ಕಾದಂಬರಿಗಳ ನೈತಿಕತೆ ಸಾಮಾನ್ಯವಾಗಿ ಗ್ರಾಮೀಣ ಸಂಸ್ಕೃತಿಯ ಪರವಾಗಿಯೇ ಇರುತ್ತದೆ. ಅವರ ಕಾದಂಬರಿಗಳ ಬಹಳಷ್ಟು ಪಾತ್ರಗಳು ಸಾಮಾಜಿಕ ಸಮಸ್ಯೆಯನ್ನು ಸಾಮಾಜಿಕ ಸ್ಥಿತಿಯಾಗಿಯೇ ಒಪ್ಪಿಕೊಳ್ಳುವುದು ಬಹುಷಃ ಈ ಕಾರಣದಿಂದಲೇ ಇರಬಹುದು. ನಗರ ಸಂಸ್ಕೃತಿಯನ್ನು ಪ್ರತಿನಿಧಿಸುವ ಅವರ ಬಹಳಷ್ಟು ಕಾದಂಬರಿಯ ಪಾತ್ರಗಳು ಹಲವಾರು ದೌರ್ಬಲ್ಯಗಳನ್ನು ಪ್ರತಿನಿಧಿಸುವವ ರಾಗಿರುತ್ತಾರೆ. ವಿದ್ಯಾಭ್ಯಾಸವು ಇವರ ಕಾದಂಬರಿಯ ಪಾತ್ರಗಳಿಗೆ ಭೂಷಣ ವಾಗುವುದಕ್ಕಿಂತ ಹೆಚ್ಚಿನ ಉದ್ದೇಶ ಹೊಂದಿಲ್ಲ. 'ಗೆಜ್ಜೆಪೂಜೆ' ಕಾದಂಬರಿಯ ಸೋಮು, ಚಂದ್ರಾ, ಮಾಲತಿ, ಎಲ್ಲರೂ ವಿದ್ಯಾವಂತರಾದರೂ ಅವರ ಪರಿಸರವನ್ನು

ಕುರಿತು ಚಿಂತಿಸುವ ರೀತಿಯಲ್ಲಿ ಅವರ ಮನೆಯ ಹಿರಿಯರಿಗಿಂತ ಹೆಚ್ಚೇನು ಭಿನ್ನವಾಗಿರುವುದಿಲ್ಲ.

ಇಂದಿರಾರವರ ಕಾದಂಬರಿ 'ತಾಪದಿಂದ ತಂಪಿಗೆ' ನಗರದ ದುರ್ವ್ಯಸನಗಳನ್ನು ತಾಪಕ್ಕೂ ಗ್ರಾಮ್ಯ ಜೀವನವನ್ನು ತಂಪಿಗೂ ಹೋಲಿಸುವುದನ್ನೂ ನೋಡಬಹುದು. ಅವರ ಎಲ್ಲಾ ಕಾದಂಬರಿಗಳಲ್ಲೂ ಮತ್ತೆ ಮತ್ತೆ ಬರುವ ಗ್ರಾಮ ವರ್ಣನೆಗಳು, ಗ್ರಾಮೀಣ ಸಂಸ್ಕೃತಿಯ ಒಂದು ಮುಖದ ತಂಪಿನ, ಚೇತೋಹಾರಿಯಾದ ಚಿತ್ರಣವನ್ನು ಮಾತ್ರ ಕೊಡುತ್ತದೆ. ಆದ್ದರಿಂದಲೇ ಇಂದಿರಾರವರ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆಗಳು ಸಮಸ್ಯೆಗಳೆನಿಸಿದ ಸಮಾಜದ ಸ್ಥಿತಿಯಾಗಷ್ಟೇ ಚಿತ್ರಿತವಾಗಿರುತ್ತದೆ. ಆದ್ದರಿಂದಲೇ 'ಸಂಪ್ರದಾಯದ ಸಂಕೋಲೆಯಲ್ಲಿ' ಬೆಳೆದರೂ ಬಾಲ ವಿಧವೆ ಫಣಿಯಮ್ಮನದು ಲೇಖಕಿಗೆ ಶಾಂತ ಜೀವನವೆನ್ನಿಸುತ್ತದೆ.

ಸಾಮಾಜಿಕ ಸಮಸ್ಯೆಗಳನ್ನು ನೋಡುವ ಇಂದಿರಾರವರ ದೃಷ್ಟಿಕೋನಕ್ಕೆ ಅವರ ಸಂಪ್ರದಾಯಪರತೆ, ಗ್ರಾಮೀಣ ಸಂಸ್ಕೃತಿಯ ಬಗೆಗಿರುವ ಮೋಹ ಒಂದು ತಾತ್ವಿಕತೆಯ ಸ್ವರೂಪ ಕೊಟ್ಟರೆ, ಪುರುಷ ಪ್ರಧಾನ ಸಮಾಜದ ಮೌಲ್ಯಗಳನ್ನು ಒಪ್ಪಿಕೊಳ್ಳುವ, ಅವರ ದೃಷ್ಟಿಕೋನವೂ ಆ ತಾತ್ವಿಕತೆಯ ಮತ್ತೊಂದು ಆಯಾಮವನ್ನು ಪ್ರತಿನಿಧಿಸುತ್ತದೆ. 'ಗೆಜ್ಜೆಪೂಜೆ' ಕಾದಂಬರಿಯ ಮುಖ್ಯ ಪಾತ್ರವೊಂದಾದ ಸೋಮು ಚಿಕ್ಕವನಿರುವಾಗ ಅವರೂರ ಕೆರೆಯಲ್ಲಿ ಬಿಟ್ಟ ಕಮಲವೊಂದನ್ನು ಬಯಸಿದ್ದಕ್ಕಾಗಿ ಹಿರಿಯರಿಂದ ಶಿಕ್ಷೆಗೊಳಗಾಗುತ್ತಾನೆ. ಆ ಕಮಲವನ್ನು ಕುರಿತು ಲೇಖಕಿ, "ಬೆಳಗಿನಲ್ಲಿ ನಗುನಗುತ್ತ ಅವನ ಕೈಗೆ ಬಂದ ಕಮಲ ಶೀಲವಂತ ಹಿರಿಯರ ಶಿಕ್ಷೆಗೊಳಪಟ್ಟು ಈಗ ಬಾಡಿ ಬಸವಳಿದು ಬಿದ್ದಿದೆ ತಿಪ್ಪೆಯಲ್ಲಿ." ಎನ್ನುತ್ತಾರೆ. ಇಲ್ಲಿ ಹಿರಿಯರ ಶೀಲವಂತಿಕೆಯನ್ನು ವ್ಯಂಗ್ಯ ಮಾಡುತ್ತಿಲ್ಲ. ಏಕೆಂದರೆ ಕಾದಂಬರಿಯ ಕೊನೆಯಲ್ಲಿ ತನ್ನ ಪ್ರಾಣ ನೀಗಿಕೊಂಡ ಚಂದ್ರಾ ತನ್ನ ಮರಣದ ಚೀಟಿಯಲ್ಲಿ ತನ್ನ ತಾಯಿಯನ್ನು ತ್ಯಜಿಸಿದ ಅಪ್ಪ ಮತ್ತು ತನ್ನನ್ನು ತಿರಸ್ಕರಿಸಿದ ಗೆಳೆಯನನ್ನು ಸ್ಮರಿಸಿಕೊಳ್ಳುತ್ತಾಳೆ. ಚಂದ್ರಳ ಆತ್ಮಹತ್ಯೆಯ ಕೃತ್ಯಕ್ಕೆ ಲೇಖಕಿ ಷರಾ ಬರೆಯುತ್ತಾ "ಅಜ್ಜಿ, ತಾಯಿಯರ ಇಷ್ಟದಂತೆ ಅವಳು ವೇಶ್ಯೆಯಾಗಲು ಪ್ರಯತ್ನಿಸಿದಳು. ಆದರೆ ತಂದೆಯಂತೆ ಪವಿತ್ರಳಾಗಿ ಬಾಳಲು ಆಶಿಸಿದಳು. ಎರಡಕ್ಕೂ ಮುಳವಾಗಿ ಬಂದಿತು ಅವಳ ಜೀವನಮಾರ್ಗ. ತನ್ನ ಮನದಂತೆ ನಡೆದುಕೊಂಡಳು" ಇಲ್ಲಿ ಚಂದ್ರಳ ತಂದೆ ಪ್ರತಿನಿಧಿಸುವ ಮೌಲ್ಯವಾದರೂ ಎಂತಹುದು ? ಪ್ರೇಮಿಸಿದವಳನ್ನು ವಂಚಿಸಿದ ಚಂದ್ರಾಳ ತಂದೆಯು ಪ್ರತಿನಿಧಿಸುವ ಮೌಲ್ಯವು ಕಾದಂಬರಿಯ ಧೋರಣೆಯೂ ಆಗಿದೆ. 'ಫಣಿಯಮ್ಮ' ಕಾದಂಬರಿಯಲ್ಲೂ ತ್ಯಾಗಮಯಿಯಾದ ಆಕೆ ಸೀತೆ, ಸಾವಿತ್ರಿಯರನ್ನೂ ಮೀರಿಸದವಳಾಗಿ ಚಿತ್ರಿತವಾಗಿದೆ.

ಒಟ್ಟಿನಲ್ಲಿ ಸಾಂಪ್ರದಾಯಿಕವಾದ ಸಾಮಾಜಿಕ ಪ್ರಜ್ಞೆಯಿಂದ ಕೃತಿ ರಚಿಸುವ ಎಂ.ಕೆ. ಇಂದಿರಾ ನಮ್ಮ ಲೇಖಕಿಯರ ನಡುವೆ ತಮ್ಮದೇ ಆದ ಶೈಲಿಯನ್ನು ಛಾಪಿಸಿಕೊಂಡವರು. ಕಥೆ ನಡೆಯುವ ಪರಿಸರದ ಸಾಮಾಜಿಕ ಬದಲಾವಣೆಗಳನ್ನು ಗುರುತಿಸುವಲ್ಲಿ, ವಿವರಿಸುವಲ್ಲಿ ಇಂದಿರಾ ಅವರ ತಾಳ್ಮೆ ಮತ್ತು ಪರಿಶ್ರಮವನ್ನು ಯಾರಾದರೂ ಮೆಚ್ಚಲೇಬೇಕು. ಆದರೆ ಈ ವಿಶ್ಲೇಷಣೆ ವ್ಯಕ್ತಿಗಳ ಬದುಕಿನ ಒಳನೋಟಗಳನ್ನು, ಸಂಘರ್ಷವನ್ನು ಗುರುತಿಸುವಲ್ಲಿ ಇಲ್ಲವಾಗುತ್ತದೆ. ಇವರು ದಾಖಲಿಸುವ ಸಾಮಾಜಿಕ ಬದಲಾವಣೆಯು ವ್ಯಕ್ತಿಯ ಜೀವನದ ಆಗ-ಹೋಗುಗಳು ಬೀರುವ ಪರಿಣಾಮವನ್ನು ಕೂಡ ಮೇಲ್‌ಪದರಗಳಲ್ಲಿಯೇ ಗುರುತಿಸುತ್ತದೆ. ಅದು ಆಳಕ್ಕೆ ಇಳಿಯುವುದೇ ಇಲ್ಲ.

"…ನಮ್ಮ ಕಾಲದಲ್ಲಿ ಹೀಗಿತ್ತು ಎಂಬುದನ್ನು ಮುಂದಿನ ಪೀಳಿಗೆಯವರಿಗೆ ತಿಳಿಸುವುದಕ್ಕಾದರೂ ಈಗಿನವರು ಈ ಸಮಕಾಲೀನ ಪರಿಸ್ಥಿತಿಗಳನ್ನು ಗ್ರಂಥ ರೂಪದಲ್ಲಿ ಬರೆದಿಡಬೇಕು. ಆ ಕೆಲಸವನ್ನು ಇಂದಿನ ಲೇಖಕರಾದ ನಾವು ಮಾಡಬೇಕಾದ್ದು ನಮ್ಮ ಕರ್ತವ್ಯ…."

(ದಾವಣಗೆರೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ)

ಎಂ. ಕೆ. ಇಂದಿರಾ ಅವರ ಸಣ್ಣ ಕಥೆಗಳು

○

○

○ **ನೇಮಿಚಂದ್ರ**

ನಲವತ್ತಮೂರು ವರ್ಷಗಳ ಜೀವನದ ಅನುಭವವನ್ನು ಜೋಳಿಗೆಯಲ್ಲಿಟ್ಟುಕೊಂಡು ಪರಿಪಕ್ವವಾಗಿ ಬರೆಯಹೊರಟವರು ಎಂ. ಕೆ. ಇಂದಿರಾ. ಯಥೇಚ್ಛವಾಗಿ ಕತೆಗಳನ್ನು, ಕಾದಂಬರಿಗಳನ್ನು, ಒಂದಷ್ಟು ಹರಟೆಗಳನ್ನು ಬರೆದಿದ್ದಾರೆ.

ಎಂ. ಕೆ. ಇಂದಿರಾ ತಮ್ಮ ಸುತ್ತಲ ಪರಿಸರದಿಂದ ಆಯ್ದು ಹೆಕ್ಕಿಕೊಂಡ ವಸ್ತುಗಳೇ ಹೆಚ್ಚು. ಕಂಡ ಘಟನೆಯೋ, ಯಾರೋ ಹೇಳಿದ ಸುದ್ದಿಯೋ, ಇಲ್ಲ ಕಥೆ–ಕಥಾ ಪರಿಸರಕ್ಕೆ ಹತ್ತಿರವಾದ ಸ್ವಂತ ಅನುಭವವೋ ಇವರಿಗೆ ಸ್ಫೂರ್ತಿ ನೀಡುತ್ತದೆ. ಗಮನೀಯವಾದದ್ದೆಂದರೆ, ಇವರ ಕತೆಗಳು ಮಹತ್ವಾಕಾಂಕ್ಷೆ ಹೊತ್ತವಲ್ಲ, ಯಾವುದೇ ನಿಖರ ಸಿದ್ಧಾಂತ-ಧೋರಣೆಯ ಪ್ರತಿಪಾದಿಸಲು ಹೊರಟವಲ್ಲ. ಒಂದು ಘಟನೆಯನ್ನು ಹೇಳಿಯೋ, ಒಂದು ಬದುಕಿನ ಚಿತ್ರವನ್ನು ನೀಡಿಯೋ ತೃಪ್ತವಾಗುವ ಸರಳ ಕತೆಗಳು ಇವು.

ಎಂ. ಕೆ. ಇಂದಿರಾ ತಮ್ಮ ಕತೆಗಳಿಗೆ ಇಂಥದ್ದೇ ವಸ್ತು ಎಂದು ಪರಿಧಿ ಹಾಕಿಕೊಂಡವರೇ ಅಲ್ಲ. ಮಲೆನಾಡ ಹಳ್ಳಿಗಾಡಿನ ದಟ್ಟ ಅನುಭವದ ಹಿನ್ನೆಲೆಯ ಕತೆಗಳು, ಪಟ್ಟಣದ ನವನಾಗರಿಕತೆಯ ಕತೆಗಳು, ಬಡವ-ಭಿಕ್ಷುಕರ ಕತೆಗಳು, ಕಾಲೇಜು ತರುಣಿಯರ ಕತೆಗಳು–ಎಲ್ಲವೂ ಇವರಿಗೆ ವಸ್ತುವಾಗಿವೆ. ಬರೀ ಸಾಮಾಜಿಕ ಕತೆಗಳಲ್ಲ. ಪೌರಾಣಿಕ, ಐತಿಹಾಸಿಕವಷ್ಟೇ ಅಲ್ಲ, ಪತ್ತೇದಾರಿ ಕತೆಗಳನ್ನೂ ಇವರು ಬರೆದಿದ್ದಾರೆ. ಇವರು ಆಯದ ವಿಷಯಗಳಿಲ್ಲ. ಪ್ಲೇಗು ಬಂದ ಹಳ್ಳಿಯಲ್ಲಿ ದಯ್ಯದಂತೆ ಒಂಟಿ

ಉಳಿವ ಅಚ್ಚಂದಿ, ಅವಳ ಮಗ ತಮ್ಮಾಭಟ್ಟ 'ಹೆದರಬೇಡಿ'ಯಲ್ಲಿ ಕತೆಯಾದರೆ, ಕಾಲೇಜು ಹುಡುಗ-ಹುಡುಗಿಯ ಪ್ರಣಯ 'ಪ್ರೇಮಿಗಳ ದುರಂತ'ದ ವಸ್ತು. ನಾರದನ ಗರ್ವ ಮುರಿವ ಪೌರಾಣಿಕ ವಸ್ತು 'ಆತ್ಮ ನಿವೇದನ'ವಾದರೆ, ಕಾಂತಿಮತಿ–ತೇಜಸಿಂಹರ ಐತಿಹಾಸಿಕ ವಿಷಯ 'ಕಾಂತಿಮತಿ' ಕತೆಯಾಗಿದೆ. ಕೊಲೆಯೊಂದರ ಕುತೂಹಲಕಾರಿ ಪತ್ತೆ 'ಖದೀಮ ಕೊಲೆಗಾರ' ಕತೆಯಾದರೆ, ಅತ್ತೆಯ ಕಾಟ ತಡೆಯಲಾರದೆ ದೆವ್ವವನ್ನು ಹೇರಿಕೊಳ್ಳುವ ಕತೆ 'ಕಾಮಚ್ಚಿಯ ದೆವ್ವ'ದ್ದು. ಇಷ್ಟು ವೈವಿಧ್ಯದ ವಸ್ತುಗಳಲ್ಲಿ ಸಲೀಸಾಗಿ ಕೈ ಆಡಿಸಿರುವ ಲೇಖಕಿ ಈಕೆ. ಈ ಎಲ್ಲ ಕತೆಗಳ ಸಮಾನ ಗುಣವೆಂದರೆ ನಿರೂಪಣೆಯ ಲಾಲಿತ್ಯ. ಬೇಜಾರಿಲ್ಲದೆ ಓದಿಸಿಕೊಳ್ಳುವ ಗುಣ. ಬಹಳಷ್ಟು ಬಾರಿ ಕತೆಗಳು ಅಷ್ಟಕ್ಕೇ ಕೊನೆಗೊಳ್ಳುವುದೂ ಉಂಟು. ಓದಿ ಮುಚ್ಚಿದೊಡನೆ ಮುಗಿದು ಹೋಗುವುದುಂಟು. ಕಾರಣ ಬಹಳಷ್ಟು ಕತೆಗಳಿಗೆ ಒಂದು ಘಟನೆಯ ಹೇಳುವ ಹೊರತಾಗಿ, ಹೆಚ್ಚಿನ ಉದ್ದೇಶ, ಆಶಯವಿಲ್ಲ. ಚಿತ್ತವ ಸಿಲುಕಿಸುವ, ಚಿಂತಿಸುವಂತೆ ಪ್ರೇರೇಪಿಸುವ ವೈಚಾರಿಕ ಗುಣ ಇವಕ್ಕಿಲ್ಲದಿದ್ದರೂ, ಕತೆಯ ಒಳ ಹಂದರಕ್ಕೆ ಓದುಗರನ್ನು ಎಳಕೊಳ್ಳುವ ಗುಣ ಇವರ ಬಹಳಷ್ಟು ಕತೆಗಳಿಗಿದೆ.

ಈ ಲೇಖಕಿ ವಿಶಿಷ್ಟ ಧೋರಣೆಗಳ ಹೊತ್ತವರಲ್ಲ, ಸ್ತ್ರೀವಾದಿ ಹಣೆಪಟ್ಟಿಯನ್ನಾಗಲಿ, ಸೈದ್ಧಾಂತಿಕ ನೆಲೆಯನ್ನಾಗಲಿ ಹಿಡಿದು ಬರೆಯ ಹೊರಟವರಲ್ಲ. ಇದು ಒಂದು ರೀತಿಯಲ್ಲಿ ಇವರ ಕತೆಗಳ ಶಕ್ತಿ ಹಾಗೂ ಮಿತಿ ಎರಡೂ ಆಗಿದೆ. ಇವರ ಸುಮಾರು 60-70 ಕತೆಗಳನ್ನು ಓದಿದರೂ, ಆ ಕತೆಗಳೆಲ್ಲವನ್ನೂ ಕೂಡಿಸುವ, ಅವುಗಳ ಹಿಂದೆ ದುಡಿವ ಸಮಾನ ನಿಲುವೊಂದನ್ನು ಹುಡುಕುವುದು ಕಷ್ಟವಾಗುತ್ತದೆ. ಅವರ ಅಪಾರ ಸಂಖ್ಯೆಯ ಕತೆಗಳಲ್ಲಿ, ಲೇಖಕಿಯ ಮನ ಕಲಕಿ ಹೊರಬಂದ ಆತ್ಮೀಯ ಕತೆಗಳನ್ನು ಗುರುತಿಸುವುದು ಕೊಂಚ ಕಷ್ಟವಾದರೂ, ಅಸಾಧ್ಯವಲ್ಲ.

ಎಂ. ಕೆ. ಇಂದಿರಾರವರು ತಮ್ಮ ಮಲೆನಾಡ ಗ್ರಾಮ್ಯ ಅನುಭವಗಳನ್ನು ಹೆಕ್ಕಿ ಅವರ ಕಾಲ, ಪರಿಸರ, ಪೀಳಿಗೆಗೇ ವಿಶಿಷ್ಟವಿದ್ದ ಆ ಚಿತ್ರಗಳ, ಆ ಜೀವನ ಕ್ರಮವನ್ನು ತಮ್ಮದೇ ಆದ ಭಾಷೆ, ಧಾಟಿ, ವ್ಯಂಗ್ಯದೊಡನೆ ಸೊಗಸಾಗಿ ಬರೆಯಬಲ್ಲರು. ಅವರ ಸಣ್ಣ ಕತೆಗಳು ಯಶಸ್ವಿಯಾಗುವುದು, ಇಂಥ ಗಾಢ ಅನುಭವಗಳ ದಟ್ಟ ಕತೆಗಳಲ್ಲಿ. 'ಹೆದರಬೇಡಿ' 'ಉಳುವವನಿಗೇ ಭೂಮಿ' 'ದೇಶಾಂತರ, ಸುಡುಗಾಡು ಮತ್ತು ಕೆರೆ' 'ಹೆತ್ತೊಡಲು' 'ಅಜ್ಜಿ' 'ದಯೆ ಎಲ್ಲುಂಟು ಗೊತ್ತುಂಟಾ ?' 'ಕಾಮಚ್ಚಿಯ ದೆವ್ವ' ನೆನಪಲ್ಲಿ ಉಳಿವಂಥಾ ಕತೆಗಳು. ಮಲೆನಾಡ ಜೀವನ ಅನೇಕ ಲೇಖಕರ ಲೆಕ್ಕಣಿಯಲ್ಲಿ ವಿಸ್ತರಿಸಿದೆ. ಆದರೆ ಎಲ್ಲಿಯೂ ಹೆಂಗಸರ ಬದುಕಿನ ಆ ಒಳನೋಟ, ಹೊರಗಿನವರಿಗಿರಲಿ, ಒಳಗಿನ ಗಂಡಸರಿಗೂ ವೇದ್ಯವಾಗದ ಆ ಹೆಣ್ಣಿನ

ಒಳ ಬದುಕು, ಬಸಿರು-ಬಾಣಂತನ, ಅಡಿಗೆ-ಮನೆಗೆಲಸ, ಮಡಿ-ಹುಡಿ, ಬಿಡುವಿಲ್ಲದ ದುಡಿತ-ಶ್ರಮ ಜೀವನ, ಹೊಡೆತ ಬಡಿತ–ಅತ್ತೆಕಾಟ–ಇವೆಲ್ಲವೂ ಹೆಣ್ಣು ಹೃದಯಕ್ಕೆ ತಟ್ಟಿದ ವಿಷಯಗಳಾಗಿ, ಕಣ್ಣಿಗೆ ಕಟ್ಟಿದ ಚಿತ್ರಗಳಾಗಿ ನಿಂತಿವೆ. ಅವೇ ಚಿತ್ರಗಳನ್ನು ಓದುಗರೆದುರು ನವಿರಾಗಿ ಬಿಡಿಸಿ ಹರವುತ್ತಾರೆ. ಒಂದು ಕಾಲ, ಪರಿಸರ, ಪೀಳಿಗೆಯ ಹೆಣ್ಣುಗಳ ಜೀವನಕ್ರಮವನ್ನು, ಅವರ ಬದುಕನ್ನು ಒಂದಿಷ್ಟು ಅಂತಃಕರಣದಿಂದ, ಅನುಕಂಪದಿಂದ, ಅಭಿಮಾನ–ಮೆಚ್ಚುಗೆಯಿಂದ ಕಂಡಿದ್ದಾರೆ. ಹೆಣ್ಣನ್ನಷ್ಟೇ ಅಲ್ಲ. ಇಡೀ ಸಮಾಜವನ್ನೇ ಕಾಡುವ ಸಂಪ್ರದಾಯ, ಅಂಧಶ್ರದ್ಧೆಗಳ ಬಗ್ಗೆ ಇಂದಿರಾರವರ ಅಸಮಾಧಾನವಿದೆ. ಅದು ಅವರ ಕತೆಗಳಲ್ಲಿ ಗಟ್ಟಿಯಾಗಿ ಹೊರಬರದಿದ್ದರೂ, ಅವರದೇ ವಿಶಿಷ್ಟ ವ್ಯಂಗ್ಯಧಾಟಿಯಲ್ಲಿ ಸೂಕ್ಷ್ಮವಾಗಿ ಇಣುಕುತ್ತದೆ.

ಇವರ ಮಲೆನಾಡ ಹೆಣ್ಣುಗಳು ಕಾಡುವಂಥವರು. ಗಟ್ಟಿಗಿತ್ತಿ ಹೆಂಗಸರು. ಮೇಲು ನೋಟಕ್ಕೆ ತಂದೆ–ಗಂಡನ ಅಧೀನವಾಗಿ ಕಂಡರೂ, ಯಾರನ್ನೂ ಯಾವುದಕ್ಕೂ ಆಧರಿಸಿದವರಲ್ಲ. ಏನನ್ನೂ ಸಾಧಿಸಬಲ್ಲವರು. ಶ್ರಮ ಜೀವಿಗಳು, ದುಡಿದು ದಣಿದವರು, ಗಂಡನ ಕೈ ಕಾದವರಲ್ಲ. ಮನೆಯ ವಿಷಯವೊಂದನ್ನು ಬಿಟ್ಟು ಊರ ರಾಜಕೀಯವನ್ನೆಲ್ಲ ಹರಟಿ ಕುಳಿತ ಗಂಡಂದಿರ ಪಾಲಿನ 'ಗಂಡು' ಕೆಲಸಗಳನ್ನು ಮಾಡಿ ಒಗೆದ ಗಂಡೆದೆಯವರು, ಸ್ವಾವಲಂಬಿಗಳು, ಸ್ವಾಭಿಮಾನಿಗಳು. ಕ್ರಾಂತಿಯ ಯಾವ ಘೋಷಣೆ ಇಲ್ಲದೆ ಕ್ರಿಯೆಯಲ್ಲೇ, ದುಡಿತದಲ್ಲೆ ಬದುಕಿ-ಬಾಳಿದವರು. ಕೆಲವು ಕತೆಗಳನ್ನು ಇಲ್ಲಿ ಉದಾಹರಿಸಲೇಬೇಕಿದೆ.

'ದಯೆ ಎಲ್ಲುಂಟು ಗೊತ್ತುಂಟಾ' ಕತೆಯ ರಮಾಬಾಯಿ ಬೈಗಿನಿಂದ–ಮಧ್ಯ ರಾತ್ರಿಯವರೆಗೂ ದುಡಿವ ಹೆಣ್ಣು. ಎಮ್ಮೆ–ದನಗಳ ಆರೈಕೆ, ಮನೆಗೆಲಸ, ಹೋಟೆಲಿನ ಕೆಲಸ ಎಲ್ಲಕ್ಕೂ ಕಚ್ಚೆ ಬಿಗಿದು ಊಟ-ನಿದ್ರೆ–ವಿಶ್ರಾಂತಿ ಇಲ್ಲದೆ ದೆವ್ವದಂತೆ ದುಡಿವವಳು. ಭಾರೀ ಮಳೆ ಸುರಿದು ಮನೆಯ ಗೋಡೆಗಳೆಲ್ಲ ಕುಸಿದು, ಹೆಂಚುಗಳೆಲ್ಲ ಕಿತ್ತು ಹೋದಾಗಲೂ 'ಸರಿ ಮಾಡಿಸ್ತೀನೆ' ಎಂದು ಮುಂಡೂಡುತ್ತಲೇ ಓಡಾಡುವ ಗಂಡನ ಕೈ ಕಾಯದೆ, ಮಾಡು ಏರಿ ಹೆಂಚು ಸರಿ ಮಾಡುವ ಗಟ್ಟಿಗಿತ್ತಿ-ರಮಾಬಾಯಿ. ಅವಳ ಧೈರ್ಯ, ಅಂತಃಕರಣ ಕಾಣುವುದು ರಾತ್ರಿ ಮನೆಗೆ ಬಾರದ ಗೊಡ್ಡೆಮ್ಮೆ ಗಿಡ್ಡಿಯನ್ನು ಹುಡುಕ ಹೊರಟಾಗ. ಕತ್ತಲಿಗೆ ಹೆದರಿ ಕುಳಿತ ಗಂಡ-ಅಳಿಯನ ಕಾಯದೆ, 'ಗಿಡ್ಡೀ ಬಾ ಬಾ' ಎಂದು ಸರಿ ರಾತ್ರಿಯಲ್ಲಿ ಕೂಗುತ್ತಾ ಹುಡುಕ ಹೊರಟ ರಮಾಬಾಯಿ, ದೊಡ್ಡ ಗುಂಡಿಯ ಕೊಚ್ಚೆಯಲ್ಲಿ ಕಿರುಬನ ಬಾಯಿಗೆ ಸಿಕ್ಕ ಗಿಡ್ಡಿಯನ್ನು ಬಿಡಿಸಿ ತರುವ ಧೈರ್ಯವಂತೆ. ಆ ಗಲಾಟೆಯಲ್ಲಿ ಅರೆಜೀವವಾದ ಕಿರುಬನ ಬಗ್ಗೆಯೂ ಒಂದಿಷ್ಟು ಪ್ರಾಣಿ ದಯೆ ತೋರುವ ಅಂತಃಕರಣ ಅವಳದು.

‘ಉಳುವವನಿಗೇ ಭೂಮಿ’ ಕತೆಯ ಪದ್ಮಾವತಿಯಾದರೂ ಅಷ್ಟೆ, ದುಡಿದು ದಣಿವ ಹೆಣ್ಣು. ಆಸ್ತಿ ಕಳಕೊಂಡೊಡನೆ ತಮ್ಮ ಸಂಬಂಧ ಕಡಿವ ಅತ್ತೆ-ಅತ್ತೆಮಗನತ್ತ ಕಣ್ಣೆತ್ತಿಯೂ ನೋಡದೆ ಪದ್ಮಾವತಿ ಅಪ್ಪನ ಭೋಳೆ ಸ್ವಭಾವಕ್ಕೆ ಕಾಣದ ಸತ್ಯಗಳನ್ನೆಲ್ಲ ಅರಿವ ಸೂಕ್ಷ್ಮಮತಿ. ಕೋಪ ಬಂದಾಗಂತೂ ತಮ್ಮ ಭೂಮಿಕಾಣಿ ದೋಚಿಕೊಂಡ ನಾಗರಾಜನನ್ನು ‘ಕುಂಟಿ ಕ್ವಾಣ’ ಎಂದು ಎತ್ತಿ ಝಾಡಿಸಿದವಳು. ಯಾರ ದಾನ-ದಯೆ ಬಯಸದ ಈಕೆ, ಎರಡುಪಲ್ಲ ಭತ್ತ ಹೇರಿಕೊಂಡು ಬಂದ ನಾಗರಾಜನ್ನ ‘ನಿಮ್ಮ ಭಿಕ್ಷೆ ಬ್ಯಾಡ ನಮಗೆ’ ಎಂದು ಬೈದು, ಅಪ್ಪನಿಗೆ ‘ನಾನು ಕೊಪ್ಪದ ಮಿಡ್ಲ್ ಸ್ಕೂಲಿನಾಗೆ ಕೆಲಸಕ್ಕೆ ಸೇರ್ತನಿ. ಇಬ್ರೂ ರಾಮ-ಕೃಷ್ಣಾಂತ ಅಲ್ಲೇ ಹೋಗಿ ಇರಾಣ’ ಎನ್ನುವ ಸ್ವಾಭಿಮಾನಿ.

ಇಂಥಾ ಹೆಣ್ಣುಗಳು ಎಂ. ಕೆ. ಇಂದಿರಾರವರ ಅನೇಕ ಕತೆಯಲ್ಲಿ ಮೂಡಿ ಬಂದಿದ್ದಾರೆ. ಬದುಕಿನ ಬವಣೆಗೆ ಬಗ್ಗಿದವರಲ್ಲ, ಸೋತವರಲ್ಲ, ದುಡಿದು ಗೆದ್ದವರು. ಬದುಕಿಗೆ ಕ್ರಿಯಾತ್ಮಕವಾಗಿ ಸ್ಪಂದಿಸಿದ ಈ ಜೀವಂತ ಹೆಣ್ಣುಗಳು, ಕಲಾತ್ಮಕವಾಗಿ ತೆರೆದುಕೊಳ್ಳುತ್ತಾರೆ ಇವರ ಕತೆಗಳಲ್ಲಿ. ಎಂ. ಕೆ. ಇಂದಿರಾ ಅವರ ಬದುಕನ್ನು ತಿದ್ದಲು, ತೀಡಲು, ವಿಶ್ಲೇಷಿಸಲು, ಬಂಡಾಯಿಸಲು ಹೋಗುವುದಿಲ್ಲ, ದಾಖಲಿಸುತ್ತಾರೆ- ತಮ್ಮ ಸ್ವಂತ ಧೋರಣೆಗಳನ್ನು ಕಲಸದೆ ತಾವು ಕಂಡ ಬದುಕನ್ನಷ್ಟೇ ತೆರೆದಿಡುತ್ತಾರೆ. ಹಿಂದೆಯೇ ಹೇಳಿದಂತೆ ಇದು ಕತೆಯ ವೈಶಿಷ್ಟ್ಯವೂ ಆಗಿದೆ, ಮಿತಿಯೂ ಆಗಿದೆ. ಎಂ. ಕೆ. ಇಂದಿರಾ ಪ್ರಜ್ಞಾಪೂರ್ವಕವಾಗಿ ಇಂಥಾ ಸ್ತ್ರೀ ಪಾತ್ರಗಳನ್ನು ಗಟ್ಟಿಗಿತ್ತಿಯರನ್ನಾಗಿ ಚಿತ್ರಿಸಿದವರಲ್ಲ: ಅಂಥಾ ಗಟ್ಟಿಗಿತ್ತಿಯರನ್ನು ದಾಖಲಿಸಿದವರು. ಅವರ ಕತೆಗಳ ಹಿಂದೆ ಒಂದು ಹೆಂಗರುಳು ಉಂಟು; ಅದು ಬಡಿಸಿಕೊಂಡರೂ ಅವಲಂಬಿತರಲ್ಲದ, ಇಡೀ ಮನೆಯನ್ನೇ ತಮ್ಮ ಹೆಗಲ ಮೇಲೆ ಹೊತ್ತು, ಏನನ್ನೂ ಸಂಭಾಳಿಸಬಲ್ಲ ಈ ಹೆಂಗಸರನ್ನು ಸೂಕ್ಷ್ಮವಾಗಿ ಗಮನಿಸಿದ-ಹೆಂಗರುಳು. ಇವರ ಹೆಣ್ಣುಗಳು ಕರ್ಮ-ಧರ್ಮ ಎಂದು ಗೋಳಿಟ್ಟವರಲ್ಲ. ಬದುಕನ್ನು ಅದರೆಲ್ಲ ಕಷ್ಟ-ನಷ್ಟ ದುಡಿಮೆಯೊಂದಿಗೆ ನಿರ್ಲಿಪ್ತವಾಗಿ ಸ್ವೀಕರಿಸಿಬಿಟ್ಟ ಹೆಂಗಸರು. ಅನುಪಮಾರ ಸ್ತ್ರೀ-ಪಾತ್ರಗಳಂತೆ ಮಹತ್ವಾಕಾಂಕ್ಷೆಯುವಲ್ಲ, ಸ್ತ್ರೀ ಪರ ಸ್ತ್ರೀವಾದಿ ಧೋರಣೆಗಳ ಬಿಂಬಿಸಿದವರಲ್ಲ, ಹೆಚ್. ವಿ. ಸಾವಿತ್ರಮ್ಮನವರ ಸ್ತ್ರೀ ಪಾತ್ರಗಳಂತೆ ಅಂತರಂಗದ ಆಳಕ್ಕಿಳಿದು ತಮ್ಮ ವ್ಯಕ್ತಿತ್ವವ ಪ್ರತಿಪಾದಿಸಿದವರಲ್ಲ, ತ್ರಿವೇಣಿಯವರ ಹೆಣ್ಣುಗಳಂತೆ ಪ್ರಶ್ನೆಗಳ ಎತ್ತಿ ಕಾಡುವವರಲ್ಲ ಶ್ಯಾಮಲಾದೇವಿಯವರ ಕಥಾ ಪಾತ್ರಗಳಂತೆ ಎಚ್ಚೆತ್ತವರಲ್ಲ-ಬದುಕಿದವರು, ಬಾಳಿದವರು, ಈ ಲೇಖಕಿಯ ಕತೆಗಳಲ್ಲಿ ದಾಖಲಾದವರು. ಅವರ ಕತೆಗಳ ಈ ಸರಳ ಸೂತ್ರ ತನ್ನದೇ ಆಕರ್ಷಣೆ ಹೊಂದಿದೆ.

ಕಾದಂಬರಿಗಳಲ್ಲಿ 'ಫಣಿಯಮ್ಮ', 'ತೆಗ್ಗಿನ ಮನೆ ಸೀತೆ'ಯಾಗಿ ಹೊರಬಂದ ವ್ಯಕ್ತಿ ಚಿತ್ರಗಳು, ಚೊಕ್ಕವಾಗಿ ಸಣ್ಣ ಕತೆಗಳಲ್ಲೂ ಮೂಡಿವೆ—'ಹೆದರಬೇಡ' ಕತೆಯ 'ಅಚ್ಚಂದಿ'ಯಾಗಿ, 'ನಾ ಒಲ್ಲೆ ಅಪ್ಪಯ್ಯ'ದ ಶಂಕರಿಯಾಗಿ, 'ದಯೆ ಎಲ್ಲುಂಟು ಗೊತ್ತುಂಟಾ'ದ ರಮಾಬಾಯಿಯಾಗಿ. 'ಉಳುವವನಿಗೇ ಭೂಮಿ'ಯ ಪದ್ಮಾವತಿಯಾಗಿ, 'ಕಾಮಚ್ಚಿಯ ದೆವ್ವ'ದ ಕಾಮಚ್ಚಿಯಾಗಿ. ಅಂದಿನ ಹೆಂಗಸರ ದಿನದಿನದ ದುಡಿಮೆಯ ಅಲಭ್ಯ ವಿವರಗಳ, ಅದ್ಭುತ ನೆನಪಿನಲ್ಲಿ, ಅದ್ಭುತ ವಿವರ ಗಳೊಡನೆ ತೆರೆದಿಡುತ್ತಾರೆ. ಬದುಕು ಪೂರಾ ಬಿಡುವು-ವಿಶ್ರಾಂತಿ-ಮನೋರಂಜನೆ ಏನೊಂದನ್ನು ಕಾಣದೆ 'ದೆವ್ವದಂತೆ ದುಡಿವ' ಈ ಜೀವಿಗಳ ಬಗ್ಗೆ ಎಂಥದೋ ದಿಗ್ಭ್ರಮೆ. ಗೌರವ,ಅನುಕಂಪ ಮೂಡುತ್ತದೆ.

'ಹೆದರ ಬೇಡಿ' ಇವರ ಮತ್ತೊಂದು ಗಮನೀಯ ಕತೆ. ಪ್ಲೇಗು ಬಡಿದು ಊರೆಲ್ಲ ಹೊಳೆ ದಾಟಿ ಗುಡಾರ ಹಾಕಿದರೂ, ಹಾಳು ಸುರಿಯುವ, ಬೋಳು ಗ್ರಾಮ ದಲ್ಲಿ ದೆವ್ವಗಳಂತೆ ಉಳಿಯುತ್ತಾರೆ ಅಚ್ಚಂದಿ ಮತ್ತು ಅವಳ ಮಗ ತಮ್ಮಾಭಟ್ಟ.ಮಗ ಪ್ಲೇಗಿನ ಗಡ್ಡೆ ಬಡಿದು ಸಾಯುವುದು, ಅಚ್ಚಂದಿ ತುಂಬಿದ ಹೊಳೆಯ ತೆಂಗಿನ ಸಾರದ ಮೇಲೆ ದಾಟಿ, ಅಂತೂ ಜನರ ಸೇರಿಸಿ ಸಂಸ್ಕಾರ ಮಾಡುವುದು—ಇಲ್ಲಿಯ ಒಟ್ಟು ಕತೆ. ಅಂದಿನ ಪ್ಲೇಗಿನ ಮಾರಿ-ಜನ ಅದಕ್ಕೆ ಪ್ರತಿಕ್ರಿಯಿಸುವ ರೀತಿ ಕಣ್ಣ ಮುಂದೆ ಕಟ್ಟಿದಂತೆ ನಿಲ್ಲಿಸಿದ್ದಾರೆ.

ಇವರ ನಿರ್ಲಿಪ್ತ ವ್ಯಂಗ್ಯದ ಧಾಟಿಯನ್ನು ಆಸ್ವಾದಿಸಲು 'ದೇಶಾಂತರ, ಸುಡುಗಾಡು ಮತ್ತು ಕೆರೆ' ಕತೆ ಓದಬೇಕು. ದಿನಬೆಳಗಿನ ಗಂಡ-ಹೆಂಡರ ಜಗಳ 'ದೇಶಾಂತರ ಹೋಗ್ತೇನೆ, ಸುಡುಗಾಡಿಗೆ ಹೋಗ್ತೇನೆ' ಎಂದು ಅರಚಿ ಹೋಟಲಿಗೆ ಹೋಗಿ ಕೂರುವ ಅಪ್ಪ, 'ಕೆರೆಗೆ ಹಾರ್‌ಕಳ್ತೀನಿ' ಎಂದು ಬೆದರಿಸಿ ಬಟ್ಟೆ ಒಗೆಯಲು ಹೋಗುವ ಅಮ್ಮ—ಪುಟ್ಟ ಹುಡುಗಿ ಅಂಬಜ್ಜಿಯ ದಿನಚರಿಯಲ್ಲಿ ಎಷ್ಟು ಸಲೀಸಾಗಿ ಹಾಸು ಹೊಕ್ಕಿದ್ದರೆಂದರೆ, ಯಾರೇ ಕೇಳಿದರೂ ನಿರಾತಂಕವಾಗಿ 'ಅಪ್ಪ ದೇಸಾಂತ್ರ ಹೋದ್ರು' 'ಅಮ್ಮ ಪ್ರಾಣ ಕಳಕಳಕ್ಕೆ ಕೆರೆಗೋದ್ರು' ಎಂದು ವರದಿ ಮಾಡಿ, ಜಗಲಿ ಯಲ್ಲೇ ಮುಂಗುರುಳು ತೀಡುತ್ತಾ ಆರಾಮ ಕುಳಿತುಕೊಳ್ಳುವಳು. 'ಹಗಲಿನ ಇಷ್ಟು ರಗಳೆಯಾದರೂ ರಾತ್ರಿ ಸುಡುಗಾಡಿಗೆ, ಕೆರೆಗೆ ಹೋಗಲು ಸಾಧ್ಯವೆ? ಅದರಿಂದ ಅವರಿಬ್ಬರೂ ಒಂದೇ ಕಡೆ ಹಜಾರದಲ್ಲಿ ಮಲಗಿರುತ್ತಾರೆ' ಎನ್ನುತ್ತಾರೆ ಲೇಖಿಕಿ ತಮ್ಮ ಹಾಸ್ಯಲೇಪಿತ ವ್ಯಂಗ್ಯ ಧಾಟಿಯಲ್ಲಿ.

* * *

ಇಂತಹ ಸುಂದರ ಕತೆಗಳನ್ನು ನೀಡಿರುವ ಎಂ. ಕೆ. ಇಂದಿರಾರವರ ಏಷ್ಟೋ ಕತೆಗಳು ಒತ್ತಡದಲ್ಲಿ ಹೆಣೆದಂತೆ ತೋರುವುದುಂಟು. ಅವರು ಕಲ್ಪನೆಯ ಕಸರತ್ತಿ ಗಿಳಿದಾಗ, ಅವೆಲ್ಲ ಕಲ್ಪನಾ ಲೋಕದಲ್ಲಿ ಹುಟ್ಟಿ, ಬೆಳೆದು, ಅಲ್ಲಿಯೇ ಮುಗಿ ಯುತ್ತವೆ. ಮಹಡಿ ಮನೆಯಲ್ಲಿರುವ ಅನುಪಮ ಜೋಡಿಯನ್ನು ಕಂಡು ಏನೆಲ್ಲ ಕಲ್ಪಿಸಿದ ಕಾಲೇಜು ಹುಡುಗಿಯರು, ಆಕೆಯ 'ಫಾರಿನ್ ರಿಟರ್ನ್ಡ್' ಗಂಡ ಹೋಟಲೊಂದರಲ್ಲಿ ಅಡಿಗೆಯಾತ ಎಂದು ತಿಳಿದಾಗ ಭ್ರಮನಿರಸನವಾಗುವ ಕತೆ 'ಕಲ್ಪನಾ ವಿಲಾಸ'ದ್ದು. ಎದುರು ಮನೆಯ ಹುಡುಗಿಗೆ ಮನಸೋತು ಮದುವೆಯ ಕನಸು ಕಾಣುತ್ತಿರುವಾಗ ಆಕೆ ವಿವಾಹಿತೆ, ಅವರು ಆಕೆಯ ಅಮ್ಮ-ಅಪ್ಪ ಅಲ್ಲ, ಅತ್ತೆ-ಮಾವ ಎಂದು ತಿಳಿದಾಗಿನ ದಿಗ್ಭ್ರಮೆ 'ಎದುರು ಮನೆ ಹುಡುಗಿ' ಕತೆಯ ವಸ್ತು. ಸುಂದರ ಯುವತಿ ರೋಹಿಣಿ ಬಡತನದ ಕಾರಣದಿಂದಾಗಿ ತಾನು ಪ್ರೀತಿಸಿ ದವನ ತ್ಯಜಿಸಿ ಶ್ರೀಮಂತನ ಕೈ ಹಿಡಿಯುತ್ತಾಳೆ 'ಶಿಲ್ಪಿ' ಕತೆಯಲ್ಲಿ. ಆತ ಕಾಮಾಕ್ಷಿ ಅಮ್ಮನ ದೇವಸ್ಥಾನ ಕಟ್ಟ ಸಹೊರಡುತ್ತಾನೆ. ಅಮ್ಮನವರ ವಿಗ್ರಹ ನೋಡುವ ಕುತೂಹಲದಿಂದ ಶಿಲ್ಪಿಯ ಬಾಗಿಲಿಗೆ ಬಂದ ರೋಹಿಣಿ ಕಾಣುವುದೇನು - ನಿಜ, ಊಹಿಸಿದಂತೆಯೇ ಶಿಲ್ಪಿ ಆಕೆಯ ಮಾಜಿ ಪ್ರಿಯಕರ. ಕಾಮಾಕ್ಷಿ ಅಮ್ಮ, ರೋಹಿಣಿಯ ತದ್ರೂಪ ಪಡೆದಿದೆ! ಹಳ್ಳಿಗೆಲ್ಲ ತನ್ನ ಹಸ್ತಗುಣಕ್ಕೆ ಹೆಸರಾದ ಸೋಮಪ್ಪ ಡಾಕ್ಟರು, ವಾಸ್ತವದಲ್ಲಿ ಡಿಸ್ಮಿಸ್ ಆದ ಪಟ್ಟಣದ ಕಾಂಪೌಂಡರ್. ಆತ ಒಂದಿಷ್ಟು ಸಾರಿಡಾನ್, ಅವೇದನ್ ಮಾತ್ರೆಗಳನ್ನು ಮಧ್ಯರಾತ್ರಿ ಕುಳಿತು ಪುಡಿಮಾಡಿ ಕಟ್ಟಿಕೊಡುತ್ತಾನೆ ಎಂದು ಪತ್ತೆಯಾಗುವುದೇ 'ಧನ್ವಂತರಿ'ಯ ಕಥಾ ವಸ್ತು. ಯಾವುದೋ ಕಾರಣಕ್ಕೆ ತಾನು ಹಳ್ಳಿಯ ಒಂದು ಪುರಾತನ ಮನೆಯಲ್ಲಿ ತಂಗಬೇಕಾಗುವುದು, ನಿರೂಪಕ ಆ ಮನೆಯ ಅಟ್ಟದಲ್ಲಿ ಗೆದ್ದಲು ತಿಂದ ಪುಸ್ತಕ ತೆಗೆದು ಹಳೆಯ ರಾಜನ ಕಥೆಯನ್ನು ಓದುವುದು, ಇಷ್ಟೇ ಇಲ್ಲಿ ಒಂದು ಕತೆಯಾ ಗಿರುವುದೂ ಉಂಟು – 'ಗೆದ್ದಲು ತಿಂದ ಸಂಸ್ಥಾನ'ದಲ್ಲಿ. ಹೊಸದಾಗಿ ಮದುವೆ ಯಾಗಿ ಹೋದ ಅಕ್ಕ, ಅಡಿಗೆ ಮನೆಯಿಂದ ಹೊರಬಂದಾಗ ಕಣ್ಣು ಕೆಂಪಾಗಿದ್ದದ್ದು ಅತ್ತೆ ಮನೆಯ ಕಿರುಕುಳವನ್ನು ಕಲ್ಪಿಸಿ ಇಡೀ ಮನೆ ಚಿಂತೆಗೀಡಾಗುವಂತೆ ಮಾಡು ತ್ತದೆ 'ಕಾರಣ' ಕತೆಯಲ್ಲಿ. ಅಕ್ಕನ ಕಣ್ಣು ಕೆಂಪಾದುದಕ್ಕೆ ಅತ್ತೆಮನೆ ಕಾಟ ಕಾರಣವಲ್ಲ, ಈರುಳ್ಳಿ ಹಚ್ಚಿದ್ದೇ ಕಾರಣ ಎಂದು ತಿಳಿಯುತ್ತದೆ ಕತೆಯ ಕಡೆಯಲ್ಲಿ. ಮತ್ತೊಂದು ಕತೆ 'ಕಾವ್ಯನಾಮ', ಕುರೂಪಿ ಹುಡುಗಿ 'ಪ್ರಿಯತಮೆ' ಎಂದು ಕಾವ್ಯನಾಮ ಇಟ್ಟುಕೊಂಡು ಬರೆಯುವುದು, 'ಹೃದಯೇಶ್ವರ' ಎಂಬ ಕಾವ್ಯ ನಾಮದ ಲೇಖಕನ ಕುರಿತು ಏನೆಲ್ಲ ಕಲ್ಪಿಸುವುದು, ಕಪ್ಪಗಿನ ಸಿಡುಬಿನ ಕಲೆಯ, ಮೊಂಡು ಮೂಗಿನ, ಒರಚುಗಣ್ಣಿನ 'ಹೃದಯೇಶ್ವರ'ನ ಸ್ವರೂಪ ಕಂಡು ಕಾವ್ಯ ನಾಮದ ಮಹಿಮೆ ತಿಳಿಯುವುದು ಇಲ್ಲಿಯ ಕಥಾವಸ್ತು.

ಈ ಕತೆಗಳೂ ಕೂಡಾ ಸೊಗಸಾಗಿ ಓದಿಸಿಕೊಂಡು ಹೋದರೂ, ಆ ಕ್ಷಣದ ಮನೋರಂಜನೆಯಷ್ಟೇ ಆಗಿ, ಓದಿದೊಡನೆ ಮುಗಿದುಬಿಡುವ, ಮರೆತುಹೋಗುವ ಕತೆಗಳಾಗಿಬಿಟ್ಟಿವೆ. ಎಂ. ಕೆ. ಇಂದಿರಾ ಇಲ್ಲೆಲ್ಲ ಸಣ್ಣ ಕುತೂಹಲ, ಸೋಜಿಗವನ್ನು ಅಡಗಿಸಿಟ್ಟು ಕೊನೆಯಲ್ಲಿ ಒಡಪು ಒಡೆದು ಖುಷಿಪಡುತ್ತಾರೆ. ಆ ಅಚ್ಚರಿಗಳು ಬಹಳ ಬಾರಿ ಓದುಗನ ಕಲ್ಪನೆಗೆ ಹೊಳೆದುಬಿಡುವ ಕಾರಣ ಸ್ವಾರಸ್ಯ ಕಳಕೊಳ್ಳುವ ಅಪಾಯಕ್ಕೊಳಗಾಗುತ್ತವೆ.

ಇಂಥದ್ದೇ ಸಣ್ಣ ಘಟನೆ, ಕುತೂಹಲವೇ ಕೊಂಚವೂ ಕೃತಕವಾಗದೆ, ನೆನಪಿನಲ್ಲಿ ಉಳಿವ ಕತೆಯಾಗಿರುವ ಅನೇಕ ನಿದರ್ಶನಗಳೂ ಇವೆ. ಮಗನೊಡನೆ ಕಲಕತ್ತೆಯಿಂದೆಲ್ಲೋಬಂದ 'ಹರಿಸೇನ', ಮುವತ್ತು ವರ್ಷಗಳ ಹಿಂದೆ ಸತ್ತನೆಂದು ತಿಳಿದ ತನ್ನ ಮಗ 'ನರಹರಿ'ಯೇ ಎಂದು ಗುರುತಿಸುವ 'ಹೆಣ್ತೊಡಲು' ಕತೆ, ಮೈಸೂರಿನ ವಠಾರವೊಂದರ ಸ್ವಾರಸ್ಯಕರ ಕತೆ 'ಸ್ಮಾರಕ' ಇದಕ್ಕೆ ಉತ್ತಮ ಉದಾಹರಣೆ.

ಇವರ ಅನೇಕ ಕತೆಗಳು ವಿಪರೀತದ ಮಾತುಗಾರಿಕೆಯಲ್ಲಿ ವಾಚ್ಯವಾಗಿ, 'ಹರಟೆ'ಯ ಹಣೆಪಟ್ಟಿಗೆ ಒಳಪಡುವುದೂ ಉಂಟು. 'ವೇಗಯುಗ' ಕತೆಯನ್ನು ಇಲ್ಲಿ ಉದಾಹರಿಸಬಹುದು. ವೇಗಯುಗದ ಮಹಿಮೆ ಹೇಳುತ್ತಾ ಒಬ್ಬ–'ಮಕ್ಕಳು ಹುಟ್ಟಿದ ಕೂಡ್ಲೆ ಕಣ್ಬಿಟ್ಟು; ಮೂರು ದಿನಕ್ಕೆ ನಕ್ಕು, ಒಂದು ತಿಂಗಳಿಗೆ ಮಾತಾಡಿ ; ನಾಕ್ತಿಂಗಳಿಗೆ ಓಡಾಡಿ, ಒಂದು ವರ್ಷಕ್ಕೆ ಕವನ ಕಟ್ಟಿ, ಮೂರು ವರ್ಷಕ್ಕೆ ಪ್ರಣಯ, ಪತ್ತೇದಾರಿ ಕಾದಂಬರಿ ಬರೆದು, ಆರು ವರ್ಷಕ್ಕೆ ನಾಟಕ ಆಡಿ....' ಹೀಗೇ ಅರ್ಧ ಪುಟ ಹೇಳಿದರೆ, ಮತ್ತೊಬ್ಬ 'ಬಲಗಡೆ ಕೆನ್ನೆಯಿಂದ ರೇಜರ್ ಎಳೆದು ಎಡಗಡೆ ಕೆನ್ನೆಗೆ ಬರೋದರಲ್ಲಿ ಪುತ್ತೆ ಬಲಗಡೆ ಒಂದು ಇಂಚು ಬೆಳೆದಿರುತ್ತೆ. ಮತ್ತೆ ಈ ಕಡೆ ಒಂದಿಂಚು....' ಮತ್ತರ್ಧಪುಟ ಶುದ್ಧ ಹರಟೆಯ ಧಾಟಿಯಲ್ಲಿ ಮುಂದುವರೆಸುತ್ತಾನೆ. 'ಎರಡು ನಾಲಿಗೆ' 'ಪಾಪರ್ ಚೀಟಿ'ಯಂಥಾ ಕತೆಗಳು ಮಾತಿನಲ್ಲಿ ಆರಂಭವಾಗಿ ಮಾತಿನಲ್ಲೇ ಮುಗಿಯುತ್ತವೆ. ವಾಚ್ಯವಿದ್ದೂ ಸಂಭಾಷಣೆಯ ಚುರುಕಿನಲ್ಲಿ, ಲವಲವಿಕೆಯಲ್ಲಿ ತಿಳಿನಗೆ ಮೂಡಿಸುವ ಕತೆಗಳೂ ಉಂಟು. 'ಡುಮ್ಮಕ್ಕ' ಅಂಥಾ ಒಂದು ಕತೆ. ದಪ್ಪಗಿರುವವರ ವಿಶಾಲ ಹೃದಯ, ಸಕಲ ಸದ್ಗುಣಗಳನ್ನು ಪೂರಾ ಮಾತಿನಲ್ಲೇ ವಿವರಿಸುವ ಕತೆ ಇದು. ಇಲ್ಲಿಯ ಮಾತುಗಳು ಒಳ್ಳೆ ಮೋಜಿನವು. 'ದುಂಡು ಮೂಗಿಗೆ ಒಂದು ಮೂಗು ಬೊಟ್ಟಿಟ್ರೆ ನಕ್ಷತ್ರದ್ಹಾಗೆ ಕಾಣುತ್ತೆ, ಒಣಕಲ ಮುಖಕ್ಕೆ ಇಟ್ರೆ ಹಳೇಮನೆ ಗೋಡೆಗೆ ಮೊಳೆ ಒಡಿದ್ಹಾಗಿರುತ್ತೆ', 'ಸಿಟಿ ಬಸ್ನಲ್ಲಿ ತೆಳ್ಳಗಿರೋರೆಲ್ಲ ಬಾವಲಿ ಹಕ್ಕಿ ಹಾಗೆ ಆ ಬೆಲ್ಟು ಹಿಡಕೊಂಡು ನೇತಾಡ್ತಾರೆ'–ಇಂಥ

ತಿಳಿಹಾಸ್ಯದ ಅನೇಕ ಕತೆಗಳು ಮಂದಹಾಸ ಮೂಡಿಸುತ್ತವೆ. ಇವರ ಅನೇಕ ಕತೆಗಳಲ್ಲಿ ವ್ಯಂಗ್ಯದ ಧಾಟಿ, ಹಾಸ್ಯದ ಲೇಪ ಕಾಣಬಹುದು. ವೀರಚಕ್ರ ಗೆದ್ದು ಬಂದ ಶಿವಾನಿ ಹಳ್ಳಿ ಮನೆಯ ಇಲಿ ಹೆಗ್ಗಣಗಳಿಗೆ ಬೆದರುವ ಪ್ರಟ್ಟ ಘಟನೆಯ ಸೊಗಸಿನ ನಿರೂಪಣೆಯನ್ನು 'ವೀರಚಕ್ರ'ದಲ್ಲಿ ಕಾಣಬಹುದು.

* * *

ಎಂ.ಕೆ. ಇಂದಿರಾ ಕತೆಗಳ ಮುಖ್ಯ ತೊಡಕೆಂದರೆ, ಅವರ ಬಹಳಷ್ಟು ಕತೆಗಳನ್ನು ಓದಿ ಮುಗಿಸಿದ ಮೇಲೂ ಲೇಖಕಿಯ ಸ್ವಂತ ಅಭಿಪ್ರಾಯಗಳು, ಧೋರಣೆಗಳು ಸ್ಪಷ್ಟವಾಗುವುದಿಲ್ಲ. ಕೆಲವು ಕಡೆ ಲೇಖಕಿಯ ಪೂರ್ವಗ್ರಹಗಳು ಕೆಲಸ ಮಾಡಿ ಸಿದ್ಧ ಜಾಡಿನ ಸಾಂಪ್ರದಾಯಿಕ ಚಿಂತನೆಯ ಚೌಕಟ್ಟಿನಾಚೆ ಜಿಗಿಯದ ಉದಾಹರಣೆಗಳಿವೆ. 'ಪ್ರೇಮಿಗಳ ದುರಂತ' ಕತೆಯಲ್ಲಿ ಪ್ರೇಮಿಸಿ ಅಪ್ಪ-ಅಮ್ಮನ ವಿರೋಧಕ್ಕೆ ಹೆದರಿ ಆಗುವ 'ರಿಜಿಸ್ಟರ್‌ಡ್' ಮದುವೆಯನ್ನು 'ಗೂರಲು ಮುದುಕಿಯ ಅಪರ ಕರ್ಮ'ಕ್ಕೆ ಹೋಲಿಸುತ್ತಾರೆ. ಅವರ ಪ್ರೇಮದ ಬಗೆಗಿನ ವ್ಯಂಗ್ಯ ಮುಂದುವರೆದು, ಅವರ ಹುಟ್ಟಿನ ವಿವಾಹ, ಅವಳ ಬಸರು, ಅವ ಅಮೇರಿಕೆಗೆ ಹಾರಿ ಕೈ ಕೊಡುವಲ್ಲಿ ಮುಗಿಯುತ್ತದೆ. ವಿಧವೆ ಶ್ಯಾಮಲಾದೇವಿಯನ್ನು ವಿವಾಹವಾಗ ಬಯಸಿದ ಯುವಕನಿಗೆ ಶ್ಯಾಮಲಾ 'ನಾನು ಕೇವಲ ಮೈಯ ಸುಖಕ್ಕಾಗಿ ಮತ್ತೆ ಮದುವೆಯಾಗಲಾರೆ. ನನ್ನಂತಹ ನತದೃಷ್ಟೆಯನ್ನೇಕೆ ಮದುವೆಯಾಗ ಬಯಸುತ್ತೀರಿ? ನೀವು ನನ್ನನ್ನು ಮದುವೆಯಾದರೆ ಹೊಸ ಬಟ್ಟೆಗೆ ಹಳೆಯ ತೇಪೆ ಹಚ್ಚಿದ ಹಾಗಾಗುತ್ತದೆ' ಎಂದು ಹೇಳುತ್ತಾಳೆ. ಅವಳ ಉತ್ತರದ ಮುಂದೆ ಆತ ಶೀರಾ ಕುಳ್ಳಾಗುವ ಕತೆ 'ಕುಳ್ಳ'ದ್ದು! 'ನಾ ಒಲ್ಲೆ ಅಪ್ಪಯ್ಯ' ಕತೆಯಲ್ಲಿ 'ಗಂಡಿಗೆಂಥಾ ಅಂದ ಚೆಂದಾ...' 'ದೇಹಕ್ಕೆ ಯಾವ ಹೆಣ್ಣಾದರೇನು ...' ಎಂಬಂಥ ಹೇಳಿಕೆಗಳು ನಮ್ಮ ಸಮಾಜದ ಪೂರ್ವಗ್ರಹಗಳಿಗೆ ಇವರ ನಾಯಕಿಯರು ನಿರ್ಯೋಜನೆಯಿಂದ ಒಗ್ಗಿ ಕೊಂಡ ಬಗೆಯ ನಿದರ್ಶಿಸುತ್ತವೆ. ಕೆಲವೊಮ್ಮೆ ಜನಪ್ರಿಯ ಜನಜನಿತ ಹೇಳಿಕೆಗಳ, ನಂಬಿಕೆಗಳ ಯಥಾವತ್ತಾಗಿ ಚಿತ್ರಿಸಿರುವುದೂ ಉಂಟು. ದುಡ್ಡಿರುವ ಶ್ರೀಮಂತರೆಲ್ಲ ಮಾನಸಿಕವಾಗಿ ಅಸುಖಿಗಳು, ಹಣವಿಲ್ಲದ ಬಡವರು ಸುಖಿಗಳು ಎಂಬಂತೆ ರಮ್ಯ ಕಲ್ಪನೆಯ 'ಕಷ್ಟ-ಸುಖ' ದಂಥಾ ಕತೆಗಳಲ್ಲಿ ಕಾಣಬಹುದು. ರಸ್ತೆ ಕೆಲಸವನ್ನು ಗಮನಿಸುವ ದೊಡ್ಡ ಬಂಗಲೆಯ ಸೊಸೆ, ಆ ಟಾರು-ಧೂಳು-ಬಿಸಿಲಿನಲ್ಲಿ ದುಡಿವ, ಅರೆಹೊಟ್ಟೆ ಉಣ್ಣುವ ಆ ಕಷ್ಟ ಜೀವಿಗಳೇ ಸುಖಿಗಳು-ಸ್ವತಂತ್ರರು ಎಂದು ನಿಡುಸುಯ್ಯುತ್ತಾಳೆ. 'ಪ್ರೇಮ ಕುರುಡಲ್ಲ' ಕತೆಯಲ್ಲಿ ತಿರುಪೆಗ ಬರುತ್ತಿದ್ದ ಕುಂಟಿ-ಕುರುಡರ ಬದುಕಿನ ಪ್ರೀತಿ-ನಿಯತ್ತನ್ನು ಹೋಲಿಸಿ, ವಿದ್ಯಾವಂತ ಗೆಳತಿ ಪ್ರೇಮ ವಿವಾಹವಾಗಿ ವಿಚ್ಛೇದಿತವಾಗುವ ಘಟನೆಯನ್ನು ಸಮಾನಾಂತರದಲ್ಲಿ ನಿಲ್ಲಿಸುತ್ತಾರೆ.

ಆದರೆ ಎಂ.ಕೆ. ಇಂದಿರಾರವರ ಧೋರಣೆ ನಂಬಿಕೆಗಳನ್ನು ಈ ಕೆಲವು ಕತೆಗಳಲ್ಲಿ ಅಳೆಯುವುದು ಪೂರಾ ತಪ್ಪಾಗಬಹುದು. ಕೆಲವೆಡೆ ಪ್ರತಿಗಾಮಿಯಾಗಿರುವಂತೆಯೇ, ಮತ್ತೆ ಕೆಲವೆಡೆ ಅಪ್ಪಟ ಪುರೋಗಾಮಿ ಧೋರಣೆಗಳನ್ನು ಪ್ರತಿಪಾದಿಸಿರುವುದುಂಟು. ಲೇಖಕಿಯ ಧೋರಣೆಗಳ ಒಂದು ಅಂದಾಜು ಸಿಗುವುದು 'ಕೊನೆಯ ಮನೆ' 'ದುರ್ದಾನ' 'ಕಾಮುಚ್ಚಿಯ ದೆವ್ವ' ದಂಥಾ ಕತೆಗಳಲ್ಲಿ. ಕುಡುಕ ನೀಚ, ಏತಕ್ಕೂ ಬಾರದ ಚಾಂಡಾಳ ಗಂಡ ಬಿಟ್ಟು ಹೋಗಿ, ಇದ್ದ ಗುಡಿಸಲಿನಿಂದ ಹೊರ ಹಾಕಲ್ಪಟ್ಟಾಗ, ಸ್ಮಶಾನದ ಕಲ್ಲುಮಂಟಪಕ್ಕೆ ಮೂರು ಸಣ್ಣ ಮಕ್ಕಳ ಕಟ್ಟಿಕೊಂಡು ಬಂದು ಆಶ್ರಯಿಸುವ ಮಸಣಿ, ಅಲ್ಲಿಯ ಕಾವಲುಗಾರ ಮಾಯಣ್ಣನ ಕಾಮುಕ್ಕೆ ಒಪ್ಪಿಸಿಕೊಳ್ಳುತ್ತಾಳೆ. 'ನೆಟ್ಟಗೆ ಮೂರು ದಿನ ಹೊಟ್ಟೆಗೆ ಹಾಕದ ಅವನೆಂಥಾ ಗಂಡ ! ತನಗೆ, ಮಕ್ಕಳಿಗೆ ಒಂದು ನೆಲೆ ಆಶ್ರಯ ಬೇಕಾದರೆ ಮಾಯಣ್ಣನ ಮಾತಿಗೆ ಒಪ್ಪಲೇ ಬೇಕು' ಎಂದು ಅತ್ಯಂತ ನೇರವಾಗಿ 'ತನಗೇನು ಗಂಡು ಬೇಡ ಎಂದಿರಲಿಲ್ಲ' ಎಂದು ಒಪ್ಪಿಸಿಕೊಳ್ಳುವ ಮಸಣಿಗೆ ಶೀಲ, ಪಾತಿವ್ರತ್ಯ ಬಹಳ ದುಬಾರಿಯದು. ವ್ಯರ್ಥದ್ದೂ ಕೂಡ. ಆಕೆ, ಬದುಕಿನೊಡನೆ ರಾಜಿಯಾಗುವ, ತನ್ನ-ತನ್ನ ಮಕ್ಕಳ ಬದುಕು ಸುಗಮವಾಗಿಸುವ ಬಗೆಯನ್ನು ಒಂದಿಷ್ಟು ಮೆಚ್ಚುಗೆ ಅಂತಃಕರಣದಿಂದಲೇ ಚಿತ್ರಿಸಿದ್ದಾರೆ.

ಮಡಿ–ಹುಡಿ, ಮಾಟ-ಮಂತ್ರ, ದೆವ್ವ-ಭೂತ, ಹೋಮ-ಶಾಂತಿ ಇಂಥಾ ಅಂಧಶ್ರದ್ಧೆಗಳ ನಡುವೆಯೇ ಬೆಳೆದರೂ ಲೇಖಕಿಗೆ ಅವುಗಳ ಬಗ್ಗೆ ಅಸಡ್ಡೆ, ಅಪನಂಬಿಕೆ ಇರುವುದು ಅವರ ನಿರೂಪಣೆಯ ಧಾಟಿಯಲ್ಲೇ ಗುರುತಿಸಬಹುದಿದೆ. 'ಕಾಮುಚ್ಚಿಯ ದೆವ್ವ'ದ ಕತೆ ಹೇಳುತ್ತಲೇ 'ದೆವ್ವ-ಭೂತ-ಪಿಶಾಚಿ ಎಲ್ಲ ಬರೀ ಸುಳ್ಳು ಕಣ್ರೆ ಮಕ್ಕಳಾ. ಹೀಗೇ ಏನಾರಾ ತಡೀಲಾರದ ಕಾಟಕ್ಕೆ ದೆವ್ವ ಅವತಾರ ತಾಳ್ತಾರ್ವೋ ಏನೋ. ಪುಣ್ಯಕ್ಕೆ ಈಗಿನ ಕಾಲಕ್ಕೆ ಅತ್ತೆ ಕಾಟವೂ ಕಾಣೆ, ದೆವ್ವದ ಕಾಟವೂ ಕಾಣೆ. ಅದ್ನೆಲ್ಲ ನಂಬಬೇಡಿ ನೀವು ಜಾಣ ಹುಡುಗ್ರು, ಅನ್ನುವ ಕಾಮುಚ್ಚಿ, ಮಲ ಅತ್ತೆಯ ಕಾಟ ತಾಳಲಾರದೆ ಸತ್ತ ಅತ್ತೆಯ ಭೂತವ ಮೈಮೇಲೆ ಹೊತ್ತು ಮಲ ಅತ್ತೆಗೆ ಬುದ್ಧಿ ಕಲಿಸಿದಳು.

'ದುರ್ದಾನ' ಇಂಥದ್ದೇ ಮತ್ತೊಂದು ವಿಶೇಷ ಕತೆ. ಮೈಮೇಲಿರುವ ಪೀಡೆ ಪರಿಹಾರಕ್ಕೆ ಎಂಥೆಂಥದ್ದೋ ಶಾಂತಿ ಹೋಮ ಮಾಡಬೇಕಿದ್ದು, ದುರ್ದಾನ ತೆಗೆದುಕೊಂಡು ಅವರ ಪೀಡೆಯ ತಮ್ಮ ಮೈ ಮೇಲೆ ಹಾಕಿಕೊಳ್ಳುವ ಬ್ರಾಹ್ಮಣನೊಬ್ಬ ಬೇಕಿರುತ್ತದೆ. ಅಷ್ಟಶನಿಗಳ ದಾನ ತೆಗೆದುಕೊಳ್ಳುವವನಿಗೆ ಎಮ್ಮೆ–ಬಾಂಡಲೆ, ನೂರು ಸೇರು ಸಣ್ಣಕ್ಕಿ, ಪಾತ್ರೆ-ಪಡಗ, ಹಾಸಿಗೆ-ದುಪಟಿ, ಬಟ್ಟೆ-ಬರೆಯೊಂದಿಗೆ ನೂರಿನ್ನೂರು ರೊಕ್ಕ ಕೊಡುತ್ತಾರೆಂದು ಕೇಳಿದ್ದೇ ತಡ, ತುಂಬು ಸಂಸಾರ ತೂಗಿಸಲಾರದೆ

ಬಡತನದಲ್ಲಿ ಒದ್ದಾಡುತ್ತಿದ್ದ ತಮ್ಮಾ ಭಟ್ಟ ಆರಾಮವಾಗಿ ಆ ದುರ್ದಾನ ಸ್ವೀಕರಿಸುತ್ತಾನೆ. ಅವ ಯಾವ ಶನಿ-ಪ್ರಾರಬ್ಧಕ್ಕೂ ಗುರಿಯಾಗದೆ, ಅವನ ದೆಸೆಯೇ ಪೂರಾ ಬದಲಾಗುತ್ತದೆ. ಲೇಖಕಿಯ ಕಡೆಯ ಮಾತು ಬಹಳ ಅರ್ಥಪೂರ್ಣ–'ಆ ದುರ್ದಾನ ತೆಗೆದುಕೊಂಡ ತಮ್ಮಾಭಟ್ಟ ಈಗ ಫಿರಂಗಿ ಗುಂಡಿನಂತಿದ್ದಾನೆ. ದಾನ ಬೇಡ ಎಂದವರೆಲ್ಲಾ ಆಗಲೇ ನೆಗೆದು ಬಿದ್ದಾಯ್ತು.'

* * *

ಹೀಗೆ, ಎಂ. ಕೆ. ಇಂದಿರಾರವರ ಕತೆಗಳು ಯಾವ ಸಿದ್ಧಸೂತ್ರಕ್ಕೂ ಒಳಪಡುವುದಿಲ್ಲ. ವೈವಿಧ್ಯಮಯ ವಸ್ತುಗಳ ಸುಂದರ ನಿರೂಪಣೆ ಇಲ್ಲಿದೆ. ಗ್ರಾಮ್ಯ ಹೆಣ್ಣಿನ ಒಳ ಬದುಕನ್ನು ನೀಡಬಲ್ಲ ಶಕ್ತಿಯುತ ಚಿತ್ರಗಳಿವೆ. ಬರೀ ಕಲ್ಪನೆಯಾಗಿ ಸೋತವೂ ಇವೆ. ಪ್ರತಿಗಾಮಿ ನೋಟವೆಂದು ಈ ಕತೆಯಲ್ಲಿ ನಿರಾಶರಾಗುತ್ತಿದ್ದಂತೇ, ಮುಂದಿನ ಕತೆಯಲ್ಲಿ ಅಪ್ಪಟ ಪುರೋಗಾಮಿ ಧೋರಣೆಯಿಂದ ಬೆರಗುಗೊಳಿಸುತ್ತಾರೆ. ಹೆಚ್ಚಿನ ಕತೆಗಳು ಯಾವೊಂದು ಧೋರಣೆಯ ಪ್ರತಿಪಾದಿಸಲು ಹೋಗದಿದ್ದರೂ ಅವರ ಬದುಕಿನ ಅನುಭವಗಳು, ನೆನಪಿನ ಅದ್ಭುತಗಳು ಕತೆಗೆ ಹೊಸ ಆಯಾಮ ನೀಡುತ್ತವೆ. ಒಂದು ಸಾಲಿನಲ್ಲಿ, ಒಂದು ಮಾತಿನಲ್ಲಿ ಹೇಳಲಾರದ, ಹಿಡಿದಿಡಲಾರದ, ಎಲ್ಲ ಬಣ್ಣದಲ್ಲಿ ದೊರಕುವ ವೈವಿಧ್ಯಮಯ ಕತೆಗಳು ಎಂ. ಕೆ. ಇಂದಿರಾರವರದು.

"....ಚಲನಚಿತ್ರದ ಜೊತೆಯಲ್ಲೇ ಕೆಮ್ಮು ಜನ್ಮತಳೆಯಿತು. ಚಲನಚಿತ್ರ ರಂಗಕ್ಕೆ ಅರ್ಧ ಶತಮಾನ ಕಳೆದರೂ ಈ ಕೆಮ್ಮು ಮಾತ್ರ ಗೂರಲು ಅಜ್ಜನಂತೆ ಶಾಶ್ವತವಾಗಿ ಉಳಿದುಕೊಂಡಿದೆ...."

(ಚಲನಚಿತ್ರ ಮತ್ತು ಕೆಮ್ಮು ಲೇಖನದಿಂದ)

ಎಂ. ಕೆ. ಇಂದಿರಾ ಅವರ ಚಲನಚಿತ್ರವಾದ ಕಾದಂಬರಿಗಳು

○
○
○ ವಿಜಯಾ

ಮೂಲ ಕಥಾವಸ್ತುವೊಂದನ್ನು ಆಧಾರವಾಗಿಟ್ಟುಕೊಂಡು ಮತ್ತೊಂದೇ ಕೃತಿಯನ್ನು ನಿರ್ಮಿಸುವಲ್ಲಿ ಚಲನಚಿತ್ರ ಮಾಧ್ಯಮದ ವೈಶಿಷ್ಟ್ಯವೇ ಬೇರೆ. ಇತರ ಎಲ್ಲ ಕಲೆಗಳನ್ನು ಮೇಳೈಸಿಕೊಂಡು ಮತ್ತೊಂದು ಸೃಜನಶೀಲ ಕೃತಿಯನ್ನು ರೂಪಿಸುವ ಜಾದುಗಾರಿಕೆ ಈ ಮಾಧ್ಯಮಕ್ಕೆ ಉಂಟು.

ಸಿನಿಮಾ ತನ್ನದೇ ಆದ ಪ್ರತ್ಯೇಕ ಭಾಷೆಯನ್ನು ಕಂಡುಕೊಂಡಿದೆ. ಆದರೂ ಏಕೆ ಸಿದ್ಧ ಕತೆಯೊಂದನ್ನು ಮೂಲದ್ರವ್ಯವಾಗಿ ಬಳಸಲಾಗುತ್ತದೆ ? ಮಾಧ್ಯಮಕ್ಕಾಗೇ ವಸ್ತು ಸಿದ್ಧವಾಗುವುದು ಅತಿ ವಿರಳ ಏಕೆ ? ಇತ್ಯಾದಿ ಅಂಶಗಳ ಬಗ್ಗೆ ಇಲ್ಲಿ ಚರ್ಚೆ ಮಾಡದೆ ಕಾದಂಬರಿಯನ್ನು ಆಧರಿಸಿ ಸಿದ್ಧವಾದ ಚಲನಚಿತ್ರವನ್ನು ಕುರಿತು, ಮುಖ್ಯವಾಗಿ ಈ ಎರಡೂ ಒಂದಕ್ಕಿಂತ ಇನ್ನೊಂದು ಹೇಗೆ ಪ್ರತ್ಯೇಕ, ಎಲ್ಲಿ ಅವುಗಳ ಕೊಡು ಕೊಳ್ಳುವಿಕೆ ಅರ್ಥಪೂರ್ಣವಾಗಿ ನಡೆಯುತ್ತದೆ ಎಂಬ ಬಗ್ಗೆ ಲೇಖನ ಒತ್ತು ಕೊಡುತ್ತದೆ.

ಎಂ. ಕೆ. ಇಂದಿರಾ ಅವರ ಸದಾನಂದ, ಫಣಿಯಮ್ಮ, ಹೂಬಾಣ, ಗೆಜ್ಜೆ ಪೂಜೆ, ಈ ನಾಲ್ಕೂ ಕಾದಂಬರಿಗಳು ಚಲನಚಿತ್ರವಾಗಿವೆ. ಹೂಬಾಣವೊಂದರ ವಿನಾ ಉಳಿದವಕ್ಕೆ ಶೀರ್ಷಿಕೆಯೂ ಬದಲಾಗಿರಲಿಲ್ಲ. 'ಮುತ್ತು ಒಂದು ಮುತ್ತು' ಎಂದು ಹೆಸರಿಡಲಾದ 'ಹೂಬಾಣ'

ಕಾದಂಬರಿ ಆಧರಿಸಿದ ಚಿತ್ರದ ಶೀರ್ಷಿಕೆ ಕೂಡ ಕಾದಂಬರಿಯ ಒಳಗೇ ಇರುವ ಒಂದು ವಾಕ್ಯವಾಗಿದೆ.

ಇಂದಿರಾ ಅವರು ಚಿತ್ರಿಸುವ ಸನ್ನಿವೇಶಗಳಲ್ಲಿರುವ ನಾಟಕೀಯತೆ, ಸಂಭಾಷಣೆಯಲ್ಲಿರುವ ಸಹಜತೆ-ಸೊಗಸಾದ ಆಡುಮಾತಿನ ಕಾರಣವಾಗಿ ಎಂಥ ನಿರ್ದೇಶಕರೇ ಆದರೂ ಕಾದಂಬರಿಯ ಕೆಲವು ಸನ್ನಿವೇಶ–ಸಂಭಾಷಣೆಗಳನ್ನು ಇಡಿಯಾಗಿ ಚಿತ್ರದಲ್ಲಿ ಬಳಸಿಕೊಂಡು ಬಿಟ್ಟಿರುತ್ತಾರೆ. ಎಂದರೆ ಎಂ. ಕೆ. ಇಂದಿರಾ ಅವರ ಕಾದಂಬರಿಗಳು 'ಪಟಕತೆ' (Screen Play)ಯ ಹಾಗೇ ಇರುತ್ತವೆ, ಇವು ಸಹಜವಾಗೇ ತೆರೆಗೆ ಹೊಂದಿಕೊಂಡು ಬಿಡಬಲ್ಲವು ಎನ್ನಬಹುದಾಗಿದೆ.

ಇತ್ತೀಚಿನ ನಮ್ಮ ಅನೇಕ ಕಾದಂಬರಿಗಳು ಚಲನಚಿತ್ರಗಳನ್ನು ಅನುಕರಿಸಿ ಬರೆದವುಗಳಾಗಿ ಕಂಡರೆ, ಇಂದಿರಾ ಅವರ ಕೃತಿಗಳಲ್ಲಿ ಬದುಕಿನ ಸಹಜ ಚಿತ್ರಣಗಳಿವೆ. ಅವು ನಾಟಕೀಯವಾಗಿ, ನಿರೂಪಿತವಾಗಿವೆ.ಅಂತೇ ಅವು ಚಲನಚಿತ್ರದಲ್ಲಿ ಯಥಾವತ್ ಮೂಡಿದಾಗಲೂ ಜೀವ ತುಂಬಿ ನಿಲ್ಲುತ್ತವೆ. ಆದರೆ ಈ ಅವಸ್ಥಾಂತರಗಳ ನಡುವೆ ಎರಡು ಸೃಜನಶೀಲ ಪ್ರತಿಭೆಗಳ ದುಡಿಮೆ ಇದೆ. ಹೀಗಾದಾಗ ಚಿತ್ರ–ಕಾದಂಬರಿಗಳಿಗೆ ಹೋಲಿಸಿದರೆ ಅವು ಒಂದು ಇನ್ನೊಂದಕ್ಕಿಂತ ಮೇಲಾಗುವ, ಕೆಲವೊಮ್ಮೆ ಏರಲಾಗದೆ ಹೋಗುವ ಸಂಭವಗಳೂ ಇವೆ. ನಮ್ಮ ಚಲನಚಿತ್ರಗಳು ರಂಗಭೂಮಿಯ ಅನುಕರಣೆಗಿಂತ ಹೆಚ್ಚಿನದನ್ನ ಸಾಧಿಸಿದ್ದಾವೆಂದು ಎಲ್ಲ ಸಂದರ್ಭದಲ್ಲೂ ಹೇಳಲಾರೆವು. ಸಿನಿಮಾ ಮಾಧ್ಯಮಕ್ಕೆ ಮೂಲದ್ರವ್ಯವಾಗಿ ಕಥೆಯೊಂದರ ಬಳಕೆ ಎಂದಾಗ ಅದು ಹೇಗೆ ರೂಪಾಂತರಗೊಳ್ಳುತ್ತದೆ ಎಂಬುದು ಮುಖ್ಯವಾಗುತ್ತದೆ. ಈ ಎರಡೂ ಮಾಧ್ಯಮಗಳಲ್ಲೂ ಒಂದು ಮತ್ತೊಂದಕ್ಕಿಂತ ಹೆಚ್ಚು ಸೌಲಭ್ಯ-ಅವಕಾಶ ಇರುವಂಥವುಗಳೇ ಆಗಿವೆ. ಆ ಕಾರಣಕ್ಕಾಗೇ ರೂಪಾಂತರ ಎಂದರೆ ಕಥಾವಸ್ತುವಿನ ಬೆಳವಣಿಗೆಯ ಅರ್ಥದಲ್ಲಿ ಕಾದಂಬರಿಯನ್ನು ಚಿತ್ರೀಕರಿಸುವುದು ಎಂಬ ಸರಳ ಅರ್ಥ ಅಲ್ಲ; ಹಾಗೇ ಆಗಬಾರದು.

ಕಾದಂಬರಿ ಒಂದು ಭಾಷೆಯಿಂದ (ಇಲ್ಲಿ ಕನ್ನಡಭಾಷೆ) ಆದ ರಚನೆ, ಇದನ್ನು ವಿಭಿನ್ನವಾಗಿ ಚಿತ್ರಭಾಷೆಯಿಂದಾಗುವ ರಚನೆಗೆ, ಅಂದರೆ ಚಲನಚಿತ್ರಕ್ಕೆ ವರ್ಗಾಯಿಸಬೇಕು. ಇವು ಒಂದು ಮತ್ತೊಂದರ ಜೊತೆಗೆ ಆರೋಗ್ಯಕರ ಪೈಪೋಟಿ ನಡೆಸುವ ರೀತಿಯಲ್ಲಿ ಒಂದು ಮಾಧ್ಯಮದಲ್ಲಿಯ ಅಸಾಧ್ಯಗಳು ಇನ್ನೊಂದು ಮಾಧ್ಯಮದಲ್ಲಿ ಸಾಧಿತವಾಗುವ, ತನ್ಮೂಲಕ ಹೊಸರೂಪ,ಅರ್ಥ, ಧ್ವನಿಯನ್ನು ಕೊಡುವಂಥ ಕ್ರಿಯೆಯಲ್ಲಿ ತೊಡಗಬೇಕು. ಈ ಕಾರಣಕ್ಕಾಗೇ ರೂಪಾಂತರ ಎಂದರೆ ಚಿತ್ರೀಕೃತ

ಕಾದಂಬರಿ ಅಲ್ಲ, ಹಾಗೆ ಆದ ಪಕ್ಷದಲ್ಲಿ ನಿಜವಾದ ಅಂತಸ್ಸತ್ವವನ್ನು ಹೊರತೆಗೆಯು ಲಾಗದೆ, ಮಾಧ್ಯಮದ ಬಂಧವೂ ಸಡಿಲಾಗಿಬಿಡಬಹುದು.

ಆಗಲೇ ತಿಳಿಸಿದಂತೆ ಚಲನ ಚಿತ್ರದ ಹೊಸ ಭಾಷೆ ಇತರ ಕಲಾ ಮಾಧ್ಯಮ ಗಳಾದ ಸಂಗೀತ, ನೃತ್ಯ, ಕಲೆ ಇತ್ಯಾದಿಗಳನ್ನು ಸಮರ್ಥವಾಗಿ ದುಡಿಸಿಕೊಳ್ಳದೆ ಕೇವಲ ರಂಜನೆಯ ಸಾಧನವಾಗಿಸಿದ್ದರ ಫಲವಾಗಿ, ಈ ನವೀನ ಭಾಷಾ ಮಾಧ್ಯಮಕ್ಕೆ ಗೌರವದ ಸ್ಥಾನ ಸುಲಭದಲ್ಲಿ ಸಿಗಲಿಲ್ಲ. ಅಕಾಡೆಮಿಕ್ ವ್ಯಾಖ್ಯಾನಕ್ಕೆ ಈ ಭಾಷೆ ಯನ್ನು ಒಗ್ಗಿಸಿಕೊಳ್ಳದೇಹೋದ ದಿವ್ಯನಿರ್ಲಕ್ಷ್ಯದ ಕಾರಣವಾಗಿ ಈ ತಂತ್ರ ಭಾಷೆಗೆ ಆದರದೇ ಆದ ವಿಮರ್ಶೆಯ ಪರಿಭಾಷೆ - ರೂಪಗಳೂ ಸಾಕಷ್ಟು ಇಲ್ಲ ವಾಯಿತು. ಸಾಹಿತ್ಯಕ ಮಾನದಂಡಗಳೇ ಇಲ್ಲಿಗೂ ಅನ್ವಯವಾದವು. ಸಾಹಿತ್ಯ ವಾಗಿ ಬಂದ ಶಾಬ್ದಿಕ ಭಾಷೆಗೆ ಸಂದ ಮೊದಲಮಣೆ ಚಲನಚಿತ್ರ ಮಾಧ್ಯಮಕ್ಕೆ ಈವರೆಗೆ ಸಿಕ್ಕಿಲ್ಲ. [ಒಂದೆರಡು ಅಪವಾದಗಳಿರಬಹುದು.]

ಎಂ. ಕೆ. ಇಂದಿರಾ ಅವರ ಕಾದಂಬರಿಗಳಿಗೆ ಹೊಸ ಅರ್ಥ ವ್ಯಾಪ್ತಿ ಈ ಮಾಧ್ಯಮದಿಂದ ಸಿಕ್ಕಿದೆ ಎಂಬುದಕ್ಕಿಂತ ಆಗಲೇ ಹೇಳಿದ ಹಾಗೆ ನಾಟಕೀಯವಾಗಿ ತೆರೆಗೆ ಅನುವಾದಗೊಂಡಿವೆ ಎನ್ನಬಹುದು. ಎಂ. ಕೆ. ಇಂದಿರಾ ಅವರ ಕಾದಂಬರಿ ಗಳೂ ಅಂಥ ಸವಾಲನ್ನು ಒಡ್ಡುವಂಥಾ ಸಂಕೀರ್ಣವಾದ ಅನುಭವ ಕೊಡುವುದಿಲ್ಲ. ಯಾವುದೇ ಸಾಂಕೇತಿಕತೆ, ಪ್ರತಿಮೆಗಳ ಮೂಲಕ ಮಾತಾಡದ ಇಂದಿರಾ ಅವರ ಸರಳ-ನೇರ ಕತೆಗಾರಿಕೆ ಮಾತ್ರವಾದ ಕೃತಿಗಳಿಗೆ ಮಧ್ಯಮ ವರ್ಗದ, ಸಂಪ್ರದಾಯ ಬದ್ಧ ಕುಟುಂಬಗಳ ಪರಿಸರ, ಕೊಂಚ ಹೆಚ್ಚೆನಿಸುವ ಭಾವನಾಮಯತೆಯೇ ಬಂಡವಾಳ.

ಗೆಜ್ಜೆಪೂಜೆ ಕಾದಂಬರಿಯನ್ನು ಪುಟ್ಟಣ್ಣ ಕಣಗಾಲರು ನಿರ್ದೇಶಿಸಿದ್ದರು. ಕಾದಂಬರಿ-ಸಿನಿಮಾ ಎರಡೂ ಹೇಳಹೊರಡುವ ಉದಾತ್ತತೆಗಿಂತ ಅವುಗಳ ಗರ್ಭದಲ್ಲೇ ಇರುವ ಯಥಾಸ್ಥಿತಿವಾದದ ಕಾರಣದಿಂದಾಗಿ ವೈಯಕ್ತಿಕವಾಗಿ ನನಗೆ ಇವೆರಡೂ ಅಮುಖ್ಯ. ಆದರೆ ಎರಡೂ ಕೃತಿಗಳಿಗಿರುವ ಓದಿಸಿಕೊಳ್ಳುವ, ನೋಡಿಸಿಕೊಳ್ಳುವ ಗುಣದ ಹಿನ್ನೆಲೆಯಲ್ಲಿ, ಇಂದಿರಾ ಬದುಕಿದ ಮೌಲ್ಯ, ಪುಟ್ಟಣ್ಣ ನಂಬಿದ ಮೌಲ್ಯಗಳು ಒಂದೇ ಆದಾಗ, ಅವರುಗಳು ಈ ವಿಚಾರಗಳನ್ನು ಹೇಗೆ ಪ್ರತಿಪಾದಿಸುತ್ತಾರೆ ಎಂಬು ದನ್ನಷ್ಟೇ ನನ್ನ ಲೇಖನ ಗುರುತಿಸುತ್ತದೆ.

'ಗೆಜ್ಜೆಪೂಜೆ' ಒಂದು ಸಂಪ್ರದಾಯ. ಇದೇ ಹೆಸರಿನ ಇಂದಿರಾರ ಕಾದಂಬರಿ

'ವೇಶ್ಯೆ'ಯ ಕತೆಯನ್ನು ಹೇಳುತ್ತಿದೆ. ಇಲ್ಲಿ ವೇಶ್ಯಾಸಮಸ್ಯೆಯ ಬಗ್ಗೆ ಗಂಭೀರವಾದ ಚರ್ಚೆ-ತೀರ್ಮಾನ ಇಲ್ಲ. ಗೆಜ್ಜೆಪೂಜೆ ತೆರೆಕಂಡ ಸಂದರ್ಭದಲ್ಲೇ ತೆರೆಗೆ ಬಂದ ವಿ. ಎಂ. ಇನಾಂದಾರರ ಕಾದಂಬರಿ 'ಶಾಪ'ದ ಆಧಾರದ 'ಮುಕ್ತಿ'ಗೆ ಹೋಲಿಸಿದರೆ ಅಲ್ಲಿ ಏಳುವ ಸಮಸ್ಯೆಯ ಸಂಕೀರ್ಣತೆ ಇಲ್ಲಿ ಇಲ್ಲ. ಆದರೆ ಬಹುಜನಪ್ರಿಯವಾಗುವ ರೀತಿಯಲ್ಲಿ ಚಿತ್ರಕ್ಕೆ ಕಥೆಯೊಂದನ್ನು 'ಗೆಜ್ಜೆಪೂಜೆ' ಕೊಟ್ಟಿದೆ.

ಪುಟ್ಟಣ್ಣನವರು ಈ ಕಥೆಯನ್ನು ಆಯ್ದುದ್ದರ ಹಿಂದೆ ಅವರಿಗೆ ಅತಿಪ್ರಿಯವಾದ ದೃಶ್ಯ ವೈಭವಕ್ಕೆ ಹೊಂದುವ 'ಗೆಜ್ಜೆಪೂಜೆ'ಯ ಆಚರಣೆಯ ವಿಶೇಷ, ಅವರ ನಿರೂಪಣೆಯಲ್ಲಿ ಪ್ರಧಾನವಾಗಿ ಕಾಣುವ ಅತಿನಾಟಕೀಯತೆ, ಭಾವನಾಮಯತೆಗಳಿಗೆ ಹತ್ತಿರಾಗುವ ಸನ್ನಿವೇಶಗಳು, ಮುಖ್ಯವಾಗಿ ಅವರು ಒಪ್ಪಿಕೊಂಡ ಕೆಲವು ಪರಂಪರಾ ಗತ ಮೌಲ್ಯಗಳನ್ನು ಮತ್ತೆ ಮತ್ತೆ ಸ್ಥಾಪಿಸಲು ಇರುವ ವಿಪುಲವಾದ ಅವಕಾಶಗಳೇ ಕಾರಣ.

ಕಾದಂಬರಿಕಾರ್ತಿಗೆ ಈ ಸಮಸ್ಯೆಯ ಬಗ್ಗೆ ಅಥವಾ ಇಲ್ಲಿ ಬರುವ ಪಾತ್ರ ಸ್ವಭಾವಗಳಿಗೆ ಇರಬೇಕಾದ ಕಾರ್ಯ ಕಾರಣ ಸಂಬಂಧಗಳು ಮುಖ್ಯವೆನಿಸಿಲ್ಲ. ಕಾದಂಬರಿಯ ಪಾತ್ರಗಳಿಗೆ ಕ್ರಮಬದ್ಧ ಬೆಳವಣಿಗೆ ಇಲ್ಲ, ಅವುಗಳ ವರ್ತನೆಗೆ ತಾರ್ಕಿಕ ವಾದ ಕಾರಣಗಳೂ ಇಲ್ಲ. ಅದೊಂದು ಗೊತ್ತಾದ ಕತೆಯ ಸರಳ ನಿರೂಪಣೆ.

ಚಲನಚಿತ್ರ ನಿರ್ದೇಶಕರು ಕಥಾಭಾಗದ ಪ್ರತಿಯೊಂದು ಹಂತದಲ್ಲೂ ಎಚ್ಚರ ವಾಗಿದ್ದಾರೆ. ಈ ಕಾರಣದಿಂದಲೇ ಕಾದಂಬರಿಗಿಂತ ಚಲನಚಿತ್ರವೇ ಎತ್ತರದಲ್ಲಿ ನಿಲ್ಲುತ್ತದೆ.

ಕಾದಂಬರಿಯಲ್ಲಿ ಕಥೆಗೆ ಏನೂ ಸಂಬಂಧವಿಲ್ಲದಂತೆ ಬರುವ 'ದೂರದಲ್ಲೆಲ್ಲೋ ಪಿಟೀಲಿನ ಧ್ವನಿ ಕೇಳಿಬರುತ್ತಿತ್ತು.' ಎಂಬ ಒಂದೇ ಒಂದು ವಾಕ್ಯ ಪುಟ್ಟಣ್ಣನವರಿಗೆ ಇಡೀ ಚಿತ್ರದಲ್ಲಿ ಮುಖ್ಯ ಪಾತ್ರದಂತೆ ಕೆಲಸ ಮಾಡಿದೆ. ಇಲ್ಲಿ ಪಿಟೀಲು ಪ್ರೇಮದ ಸಂಕೇತ. ಅದು ವಿಷಾದದ ಕ್ಷಣಗಳನ್ನು ತುಂಬಲೂ ಸಹಾಯಕವಾಗಿದೆ. ಕಥಾ ನಾಯಕಿಯ ತಾಯಿ ಅಪರ್ಣಾಳ ತಾರುಣ್ಯದ ದಿನಗಳಲ್ಲಿಯ ತನ್ನಪ್ರಿಯಕರ ಕಲಿಸಿದ ಸಂಗೀತ, ಆತ ಪ್ರೀತಿಯಿಂದ ಕೊಟ್ಟ ಪಿಟೀಲು ಮುಂದೆ ಆತನೇ ಆ ಪಿಟೀಲು ಎಂಬಂತೆ ಕಾಪಾಡಿಕೊಂಡಳು. ಒಂದು ಗೊತ್ತಾದ ರಾಗ ಇಡೀ ಚಿತ್ರದಲ್ಲಿ ಧ್ವನಿಪೂರ್ಣವಾಗಿ ಬಳಕೆಯಾಗಿದೆ. ಮತ್ತು ಆ ರಾಗದ ನುಡಿಸುವಿಕೆ ಯಿಂದಲೇ ತಾರುಣ್ಯ ಕಳೆದ ಇಳಿ ವಯಸ್ಸಿನಲ್ಲೂ, ಹಲವಾರು ವರ್ಷಗಳ ಅಗಲಿಕೆಯ

ಅನಂತರವೂ ಅಂತರಂಗದಲ್ಲಿ ಅಷ್ಟೇ ಗಟ್ಟಿಯಾಗಿ ಉಳಿದ ಪ್ರೇಮವನ್ನು ನೆನೆದು ಪ್ರಣಯಿಗಳು ಭೆಟ್ಟಿಯಾಗುವ ಸಂದರ್ಭ ಒದಗುತ್ತದೆ. ಪಿಟೀಲು ನುಡಿಸುವಿಕೆ ನೆರೆಹೊರೆಯ ಸಂಪ್ರದಾಯ ಶರಣರಲ್ಲೂ ಅಪರ್ಣಾಳ ಬಗ್ಗೆ ಮೃದುಭಾವವನ್ನು ತುಂಬುತ್ತದೆ. ಅದು 'ಕೊಯ್ಯಾ ಪಿಯ್ಯಾ' ಆಗಿ ಅಪರ್ಣಾಳ ಸಾಕು ತಾಯಿಗೆ ಹಿಂಸೆ ಎನಿಸುವುದೂ ಕೂಡ ಅಷ್ಟೇ ಮುಖ್ಯ. ಹೀಗೆ ಒಂದು ವಾಕ್ಯವಾಗಿ ಎಲ್ಲೋ ತೂರಿದ ಕಾದಂಬರಿಯ ಸಾಲು ನಿರ್ದೇಶಕನಿಗೆ ಹೇಗೆ ಹೆಜ್ಜೆ ಹೆಜ್ಜೆಗೂ ಒತ್ತಾಸೆಯಾಗಿ ನಿಂತಿತು ಎಂಬುದು ಆ ಮಾಧ್ಯಮವನ್ನು ಅರ್ಥಪೂರ್ಣವಾಗಿ ದುಡಿಸಿಕೊಳ್ಳಬಲ್ಲ ಪ್ರತಿಭೆಯ ಸೂಕ್ಷ್ಮಜ್ಞತೆಗೆ ಒಂದು ಮಾದರಿ.

ಇದೇ ರೀತಿಯಲ್ಲಿ ಎಲ್ಲೋ ಒಂದು ಸಂಭಾಷಣೆಯಲ್ಲಿ ಲೇಖಕಿಯ ಚಿಂತನೆಯಲ್ಲಿ ತೂರಿದ ದಾಂಪತ್ಯದ ಅರ್ಥವಾದ ಧರ್ಮ, ಅರ್ಥ, ಕಾಮಗಳಲ್ಲಿಯ ಸಹಭಾಗಿತ್ವ - ಅತಿಕ್ರಮಿಸದ ವರ್ತನೆ ಕುರಿತ ಮಾತು ಚಿತ್ರದಲ್ಲಿ ವಿವಾಹ ವಿಧಿಯ ಪಾವಿತ್ರ್ಯ ವನ್ನು ಮತ್ತಷ್ಟು ಸ್ಪಷ್ಟಮಾಡಲು ಮತ್ತು ಅಂಥದೊಂದು ವಿಧಿಗೆ ಎಂದೆಂದೂ ವಂಚಿತಳಾಗೇ ಉಳಿಯಬೇಕಾದ ತರುಣಿಯ ಮನಸ್ಸಿನಲ್ಲಿ ಈ ಮಾತಿನ ಪರಿಣಾಮ ಕುರಿತು ಚಿತ್ರ ಸೊಗಸಾಗಿ ವ್ಯಾಖ್ಯಾನಿಸುತ್ತದೆ. ಆ ಮೂಲಕ ಪುಟ್ಟಣ್ಣನವರ ಪರಂಪರಾಗತ ಮೌಲ್ಯಗಳಲ್ಲಿಯ ಗಟ್ಟಿಯಾದ ನಂಬಿಕೆಯೂ ಧ್ವನಿಸಿದೆ ; ಸ್ಥಾಪಿತ ಗೊಂಡಿದೆ.

ಪುಟ್ಟ ಬಾಲೆ ಚಂದ್ರಾ ಶಾಲೆಗೆ ಸೇರುವ ಸನ್ನಿವೇಶ ಅಥವಾ ಅರ್ಜಿ ಫಾರಂ ತುಂಬುವುದು, ತಂದೆಯ ಹೆಸರು ಹೇಳಬೇಕಾದಾಗ ಆಗುವ ತಳಮಳ, ನೆಪಕ್ಕೊಂದು ವಿವರ - ಇವೆಲ್ಲ ನಡೆದಾಗ ಪುಟ್ಟ ವಿದ್ಯಾರ್ಥಿನಿಯೊಬ್ಬಳು 'ಇವರು ಸೂಳೆಯರು' ಎಂದುಬಿಡುತ್ತಾಳೆ. ಆ ಬಗ್ಗೆ ಮುಖ್ಯೋಪಾಧ್ಯಾಯರು - ಅಧ್ಯಾಪಕಿಯ ನಡುವೆ ಚರ್ಚೆ ನಡೆಯುತ್ತದೆ. ಅಧ್ಯಾಪಕಿಗೆ ಹುಡುಗಿಯನ್ನು ನೋಡಿದಾಗ ವೇಶ್ಯೆಯ ಲಕ್ಷಣಗಳೇ ಕಾಣುತ್ತವಂತೆ ! ಓರೆಗಣ್ಣಿನಿಂದ ಚಂದ್ರಾಳ ಮುಖ ನೋಡಿದ ಆಕೆಗೆ "...ನೀಲಮಣಿಯಂತಹ ಮನಮೋಹಕ ಕಣ್ಣುಗಳು; ಚುಂಬನಕ್ಕೆ ಆಹ್ವಾನಕೊಡುವ ಮುದ್ದು ತುಟಿಗಳು ; ಹುಡುಗಿಯ ಲೋಲಾಕಿನಂತೆಯೇ ಹಣೆಯಮೇಲೆ ನರ್ತಿಸುವ ಕುರುಳು ; ಸ್ವಲ್ಪ ದೊಡ್ಡವೆನಿಸಿದರೂ ಜಗನ್ಮೋಹಕ ನಗೆಯನ್ನು ಚೆಲ್ಲುವ ಹಲ್ಲುಗಳು ! " ಕಂಡು "....ಅಂತೂ ವೇಶ್ಯಾ ಲಕ್ಷಣಗಳೆಲ್ಲವೂ ಇವೆ. ಯುವತಿ ಯಾದರೆ ಹೇಗಾಗಬಹುದೆಂಬ ಕಲ್ಪನೆ ಅವರ ಚಿತ್ತವನ್ನು ಕಲಕಿತು...."

ಇದು ಕಾದಂಬರಿಯಲ್ಲಿ ಬರುವ ವಿವರ. ಆದರೆ ಚಿತ್ರದಲ್ಲಿ 'ಸೂಳೆ' ಎಂಬ

ಪದ ಬಳಸಿದ ಹುಡುಗಿಯನ್ನು ಹಾಗೆ ಮಾತಾಡಬಾರದೆಂದು ಗದರಿಸಿ, ಮಗುವನ್ನು ಆದರದಿಂದ ಮಾತಾಡಿಸಿ ಧೈರ್ಯ ತುಂಬುವ ಟೀಚರ್ ಪಾತ್ರ ತೋರಿಸಿದ್ದಾರೆ. ಅಷ್ಟರ ಮಟ್ಟಿಗೆ ಚಿತ್ರದ್ದು ಆರೋಗ್ಯಕ ಬೆಳವಣಿಗೆ.

ಕಾದಂಬರಿಯ ಬಹುತೇಕ ಸನ್ನಿವೇಶಗಳಲ್ಲಿ ಈ 'ಸೂಳೆ' ಶಬ್ದದ ಬಳಕೆ ಅಷ್ಟೇನೂ ಹಿತವಲ್ಲದ ರೀತಿಯಲ್ಲಿ ಪ್ರಸ್ತಾಪವಾಗುತ್ತಲೇ ಹೋಗುತ್ತದೆ. ಆ ಬಗ್ಗೆ ಚರ್ಚಿಸುವ ಎಲ್ಲ ಪಾತ್ರಗಳೂ ಚಂದ್ರಾಳ ಕೃತಿಯೊಂದು ಚಲನವಲನದಲ್ಲೂ 'ಸೂಳೆ'ಯ ಲಕ್ಷಣಗಳನ್ನು ಹುಡುಕಿ ಬಾಯಿ ಚಪಲ ತೀರಿಸಿಕೊಳ್ಳುತ್ತಿರುತ್ತವೆ. ವೇಶ್ಯಾವೃತ್ತಿಯಲ್ಲಿರುವ ಹೆಂಗಸರು ಮನುಷ್ಯರೇ ಅಲ್ಲ ವಿಚಿತ್ರ ಪ್ರಾಣಿಗಳು ಎಂಬಂತೆ ಈ ಮಾತು-ವರ್ತನೆಗಳು ಇವೆ. ಚಲನಚಿತ್ರದಲ್ಲಿಯ ಪಾತ್ರಗಳ ವರ್ತನೆಯಲ್ಲಿ ಕೊಂಚ ಮಾನವೀಯತೆ ಇದೆ. ಮುಖ್ಯವಾಗಿ ಎದುರುಮನೆಯವರು, ಚಂದ್ರಾಳ ಗೆಳತಿಯಾದ ಮಾಲತಿ ಮೊದಲಾದವರು. ಸೋಮುವಿನ ತಂದೆಯ ಪಾತ್ರವಂತೂ ಆಕೆಯ ಬಗ್ಗೆ ಪ್ರೀತಿಯ ಹೊಳೆಯನ್ನೇ ಹರಿಸಿದೆ; ಆತ್ಮಸ್ಥೈರ್ಯವನ್ನು ತುಂಬುತ್ತದೆ.

ಒಳ್ಳೆಯದು-ಕೆಟ್ಟದ್ದು ಏನೇ ಇದ್ದರೂ ಅದು ಕೇವಲ ವೈಯಕ್ತಿಕ ಅಭಿವ್ಯಕ್ತಿ ಆಗುವುದು ಅಪಾಯ ತರುವ ಸಂಗತಿ. ಯಾವನೇ ಕಲಾವಿದ ಕೃತಿಯ ನಿರ್ಮಿತಿಯ ಮೂಲಕ ಸಾಮಾಜಿಕವಾಗಿ ಮುಖ್ಯವಾದ್ದನ್ನು, ಸಾರ್ವಜನಿಕರಿಗೆ ಉಪಯುಕ್ತವಾದ್ದನ್ನು ಹೇಳುತ್ತಲೇ ಇರುತ್ತಾನೆ. ಮಾನವ ಸ್ವಭಾವದ ಒಂದು ಅಥವಾ ಅನೇಕ ಮಗ್ಗುಲುಗಳನ್ನು ತೆರೆದಿಡುವ, ಒಲ್ಲೆನೆಂದರೂ ಬಿಡದೆ ಹಿಂಬಾಲಿಸುವ ಸಾಮಾಜಿಕ ಜವಾಬ್ದಾರಿ ಇದ್ದೇ ಇರುತ್ತದೆ. ಈ ಕಾರಣದಿಂದಲೇ ಕೃತಿಕಾರನ ವೈಯಕ್ತಿಕ ಅಭಿಪ್ರಾಯ ಏನೇ ಇದ್ದರೂ ಒಳ್ಳೆಯದು ಕೆಟ್ಟದ್ದರ ಬಗ್ಗೆ ಹೇಳುವಾಗ ತನ್ನ ಎದುರಿಗೆ ಇರುವ ಬಹುದೊಡ್ಡ ಸಮಾಜದಲ್ಲಿ ಅಂಥದೇ ಪ್ರಸಂಗದಲ್ಲಿ ಸಿಕ್ಕಿರುವ ವ್ಯಕ್ತಿಗಳ ಮೇಲೆ ಆಗಬಹುದಾದ ಪರಿಣಾಮದ ಬಗ್ಗೆ ಯೋಚಿಸದ ಸ್ವೇಚ್ಛೆಯ ತೀರ್ಮಾನ ಆಗಬಾರದು. ಅಂತೇ ವೇಶ್ಯಾವೃತ್ತಿ, ವೇಶ್ಯೆಯರನ್ನು ಕುರಿತಂತೆ ಇಂದಿರಾ ಅವರಂಥ ಸಂಪ್ರದಾಯಸ್ಥ ಮನೆತನದ ಹಿನ್ನೆಲೆ ಇರುವವರು ತೆಗೆದುಕೊಳ್ಳುವ ವೈಯಕ್ತಿಕ ಅಭಿಪ್ರಾಯಗಳು ಅವರ ಸೃಷ್ಟಿಯ ಪಾತ್ರಗಳ ಮೂಲಕ ಹೊರಡುವ ಮಾತುಗಳು ಒಮ್ಮೊಮ್ಮೆ ಸಂಕುಚಿತ ಮನೋಧರ್ಮವನ್ನು ಹೊಂದಿಬಿಡುತ್ತವೆ.

ಚಲನಚಿತ್ರ ಮಾಧ್ಯಮದಲ್ಲಿ ದುಡಿಯುವ ಜನ ಅಕ್ಷರ ಮಾಧ್ಯಮಕ್ಕಿಂತ

ಹೆಚ್ಚು ಎಚ್ಚರದಿಂದ ವರ್ತಿಸುವ ಅನಿವಾರ್ಯತೆ ಇದ್ದೇ ಇದೆ. ಇಲ್ಲಿ ತರ್ಕಬದ್ಧತೆಗಾಗಿ ಹೆಣಗಾಟ ನಡೆದಿರುತ್ತದೆ.

ಕಾದಂಬರಿಯಲ್ಲಿ ಚಂದ್ರಾಳನ್ನು ಕುರಿತು ಬರುವ ಕೆಲವು ಮಾತುಗಳನ್ನ ಗಮನಿಸಿರಿ.

> "ಆ ಹುಡುಗೀನ ನೋಡಿದ ಕೂಡ್ಲೆ ಮೋಹಿನಿಯ ಜ್ಞಾಪಕ ಬರುತ್ತೆ" ಎಂದ ಅಜ್ಜಿಗೆ ಉತ್ತರಿಸಿದ ಆಕೆಯ ಮಗಳು ತಂಗಮ್ಮ,
>
> "ಸೈ ಈಗಂತದು ಊರ್ತುಂಬಾ ಮೋಹಿನೀರೇ....ಅಂದ್ರೆ ನೀವಂದ್ಹಾಗೆ ಈ ರೂಪು ಮಾತ್ರ ಯಾರ್ಗೂ ಇಲ್ಲ ನೋಡಿ. ಆ ಜಾತಿಗೆ ತಕ್ಕಾಗಿ ಅದೆಲ್ಬರುತ್ತೋ ಈ ಹಾಳಾದ ರೂಪು! ಅಷ್ಟಲ್ದೆ ಗಂಡಸ್ರೆಲ್ಲ ಹೋಗಿ ಹಳ್ಳಕ್ಬಿದ್ದಾರಾ ?"

ಈ ಮಾತಿಗೆ ಮಗಳು ಲಲಿತೆಯ ಪ್ರತಿಭಟನೆ, ಗೆಳತಿ ಅಂಥವಳಲ್ಲ ಎಂಬ ಸಮರ್ಥನೆ. ಈಗ ಅಜ್ಜಿ ಗುಂಡಮ್ಮ ಹೇಳುವ ಕಥೆ ನೋಡಿ, "ಯಮ ಮೋಹಿನೀನ ತನ್ನ ವಜ್ರಪದಕದಾಗೇ ಮುಚ್ಚಿಟ್ಕಂಡಿದ್ನಂತೆ. ಅವ ಗೊರಕೆ ಹೊಡೆದ ಕೂಡ್ಲೆ ಮೋಹಿನಿ ಹೊರಗೆದ್ದು ಬಂದು ಸಜ್ಜೆ ಮನೆ ದೀವಾನ ಆವಾಹನೆ ಮಾಡಿ ಅಗ್ನಿ ಜತೆ ಕೂಡ್ಕಾಕ್ತಿದ್ಲಂತೆ. ಗೊತ್ತೇನೇ ನಿಂಗೆ ? ಆ ಜಾತಿ ಬುದ್ಧಿ ಎಲ್ಹೋಗುತ್ತೆ ಹೇಳು. ಈಗಂತೂ ಕುಲಸ್ಥರ ಮನೆ ಹೆಣ್ಮಕ್ಳೆ ಕೆಟ್ ಹಾಳಾಗ್ಹೋಗ್ತಾರೆ...." ಇತ್ಯಾದಿ.

ಅತ್ಯಂತ ಶಕ್ತಿಶಾಲಿಯಾಗಬಹುದಾಗಿದ್ದ ಈ ಪ್ರತಿಮೆ ಅತ್ಯಂತ ದುರ್ಬಲವಾದ ಬಳಕೆಯ ಕಾರಣದಿಂದಾಗಿ ತನ್ನ ಅರ್ಥಗಳನ್ನು ಬಿಟ್ಟುಕೊಡದೆ ವ್ಯರ್ಥವಾಗಿದೆ.

ಇಂಥ ಸಾಧ್ಯತೆಗಳನ್ನು ಚಿತ್ರಮಾಧ್ಯಮವೂ ಬಳಸಿಕೊಂಡಿಲ್ಲ. ಕಾದಂಬರಿಯ ಆರಂಭದಲ್ಲೇ ಬಾಲಕ ಸೋಮು ಕೊಳದಲ್ಲಿ ಅರಳಿದ್ದ ತಾವರೆಗೆ ಅಪೇಕ್ಷೆ ಪಡುವುದು, ಅದನ್ನು ಕಂಡು ಆತನ ತಾಯಿ ತಂಗಮ್ಮ ಆಡುವ

"......ಊರೋರೆಲ್ಲ ಹೊಲಸು ತೊಳೀತಾರೊ ಅದರಾಗೆ"ಎಂದು ಕೆರೆಯನ್ನು ಸಮೀಪಿಸದಿರಲು ಮಾಡುವ ತಾಕೀತು. ಹುಡುಗ ಹೇಗೊ ಸಂಪಾದಿಸಿದ ಸಿರಿದಾವರೆ ಕಂಡಾಗ "ಥೂ, ಪ್ರಾರಬ್ಧ ಮುಂಡೆಗಂಡ! ಯಾಕೊ ತಂದೆ ಅದ್ನ! ನಡಿ ಬಚ್ಚಲಮನೆಗೆ

ಬಿಸಾಕು ಅದ್ನ ತಿಪ್ಪೆಗುಂಡಿಗೆ, ಎಲ್ಲಾ ಬಿಟ್ಟು ಆ ಹದ್ನೆಂಟು ಜಾತಿ ಹೊಲಸು ತರೋಕ್ಹೋಗಿದ್ದಾನೆ! ನಡೀ ಒಟ್ಟೆ ನೆಸ್ನ...." ಎಂದು ಆತನಿಗೆ ಸ್ನಾನ ಮಾಡಿಸಿ ಮೈಲಿಗೆ ಕಳೆಯುವ ಪ್ರಸಂಗ ಬರುತ್ತದೆ.

ಇದು ಇಡೀ ಕಾದಂಬರಿಯ ಒಳಗೇ ಇರುವ ಚಂದ್ರಾ ಮತ್ತು ಸೋಮುವಿನ ಸಂಬಂಧಗಳ ಬಗ್ಗೆ ಸಾಂಕೇತಿಕವಾಗಿ ಏನೋ ಹೇಳುತ್ತಿದೆ ಅನ್ನಿಸಿದ್ದರೂ ಹಾಗೇನೂ ಆಗಿಲ್ಲ. ಸೋಮು ಚಂದ್ರಾಳನ್ನು ಬಳಸಿಕೊಂಡನಾಗಲೀ, ಆಸರೆಯಾಗಲಿಲ್ಲ.

ಚಂದ್ರಾಳ ಪಾತ್ರಕ್ಕೆ ಕಾದಂಬರಿಯಲ್ಲಿ ಒಂದು ಕ್ರಮಬದ್ಧ ಬೆಳವಣಿಗೆ ಇಲ್ಲ. ಚಂದ್ರಾಳೇ ಔಚಿತ್ಯ ಮೀರಿ ವರ್ತಿಸಿ ಸೋಮುವಿನ ಸಂಪರ್ಕ ಸಾಧಿಸುವುದು, ಯಾವ ಸಂಕೋಚವೂ ಇಲ್ಲದೆ ಮೊದಲ ಭೇಟಿಯಲ್ಲೇ ಚುಂಬನ! ದೇಹ ಸಂಬಂಧ, ಬೆಳೆಸುವುದು ಇತ್ಯಾದಿಗಳಿಂದಾಗಿ ಚಂದ್ರಾಳ ಬಗ್ಗೆ ಸಹಾನುಭೂತಿ ಉಳಿಯುವುದಿಲ್ಲ.ಹೀಗಾಗಿ ಸೋಮು ಆಕೆಯನ್ನು ವಿವಾಹವಾಗದೇ ಹೋದರೆ ಆತನ ಬಗ್ಗೆ, ಅಥವಾ ಅಂಥದೊಂದು ಸಮಾಜದ ಬಗ್ಗೆ ಓದುಗನಿಗೆ ಏನೂ ಅನ್ನಿಸದೇ ಹೋಗಬಹುದು. ಆದರೆ ಚಿತ್ರಮಾಧ್ಯಮ ಇದಕ್ಕಿಂತ ಭಿನ್ನವಾಗಿ ಕೆಲಸ ಮಾಡಿದೆ. ಚಂದ್ರಾಳ ಪಾತ್ರ ಎಲ್ಲೂ ಔಚಿತ್ಯ ಮೀರುವುದಿಲ್ಲ. ದೃಶ್ಯದಿಂದ ದೃಶ್ಯಕ್ಕೆ ಅದು ಗಂಭೀರವಾಗಿ ಬೆಳೆಯುತ್ತದೆ. ಪುಟ್ಟಣ್ಣನವರು ಹೇಳುವ ರೀತಿಯಲ್ಲಿ ತುಸು ಅತಿರೇಕ-ಭಾವುಕತೆ, ವಾಚ್ಯತೆ ಕಂಡರೂ ಪಾತ್ರಗಳ, ಕಥೆಯ ಓಟದಲ್ಲಿ ತರ್ಕಕ್ಕೆ ಎಡೆಯುಂಟು.

ಕಾದಂಬರಿಯಲ್ಲಿ ಚಂದ್ರಾಳ ತಂದೆಯ ಭೇಟಿಗೂ. ಸಿನಿಮಾದಲ್ಲಿಯ ಈ ಸನ್ನಿವೇಶಕ್ಕೂ ಬಹಳ ವ್ಯತ್ಯಾಸವಿದೆ. ವ್ಯಾಪಾರಕ್ಕೆಂದು ಬಂದವರು ಚಂದ್ರಾಳ ಅಜ್ಜಿ ಊರಲಿಲ್ಲವೆಂದು ತಿಳಿದು ಗುಟ್ಟಾಗಿ ಬರುವ ಕಾದಂಬರಿಯ ತಂದೆಗಿಂತ, ಎದುರು ಮನೆಗೆ ಗೆಳೆಯನ ಮನೆಗೆ ಬಂದಾಗ ಕೇಳಿಸಿದ ಅಪರ್ಣಾ ನುಡಿಸುವ ಪಿಟೀಲಿನ ಅವರಿಬ್ಬರ ಪ್ರೇಮವನ್ನು ನೆನಪಿಸುವ ಅದೇ ರಾಗ ಆತನನ್ನು ಭಾವನಾಲೋಕಕ್ಕೆ ತಳ್ಳುವುದು....ಅನಂತರದ ಭೇಟಿ ತುಂಬ ಗಂಭೀರವಾದ ವಾತಾವರಣ ತರುವಲ್ಲಿ ಚಲನಚಿತ್ರ ಯಶಸ್ವಿಯಾಗಿದೆ. ತನಗೆ ತಂದೆ ಇದ್ದಾರೆ. ತನ್ನ ತಾಯಿ ಕುಲೀನ ಮನೆತನದ ಹೆಣ್ಣು, ಆಶ್ರಯಹೀನಳಾಗಿದ್ದಾಗ ವೇಶ್ಯೆಯೊಬ್ಬಳು ತಂದು ಸಾಕಿದ್ದಷ್ಟೇ ಎಂಬ ಸತ್ಯ ತಿಳಿದಾಗ ಚಂದ್ರಾಳ ಪ್ರತಿಕ್ರಿಯೆ ಭಾವುಕವಾದರೂ ಸಹ್ಯವಾದದ್ದು. ಇಲ್ಲಿಯ ಸಂಭಾಷಣೆ, ದೃಶ್ಯ ಕಾದಂಬರಿಯಲ್ಲಿ ಇದ್ದ ಹಾಗೇ ಯಥಾವತ್ ತೆರೆಗೂ ಅಳವಡಿಸಲಾಗಿದೆ. ಆ ಸನ್ನಿವೇಶ ಮನಮಿಡಿಯುವಂಥದ್ದೂ ಹೌದು. ಚಂದ್ರಾಳ ತಾಯಿ ವೇಶ್ಯೆಯಾಗಲು ಒಪ್ಪದೇ ಹೋದಾಗ

ಎಳೆಯ ಮಗು ಚಂದ್ರಾಳ ಅಳುವನ್ನೇ ಮುಂದಿಟ್ಟು ಭಾವನಾತ್ಮಕವಾದ ಬೆದರಿಕೆ ಒಡ್ಡಿ ಆಕೆಯನ್ನು ತನ್ನ ದಾರಿಗೆ ತಂದುಕೊಳ್ಳುತ್ತಾಳೆ (ವೇಶ್ಯೆ) ಸಂಗವ್ವ... ಈ ಎಲ್ಲ ಅಂಶಗಳೂ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ಬಂದರೆ ಚಿತ್ರದಲ್ಲಿ ಪರಿಣಾಮಕಾರೀ ದೃಶ್ಯಗಳಾಗಿ ಅಳವಟ್ಟು ಪಾತ್ರಗಳಿಗೆ, ಅವುಗಳ ಸ್ವಭಾವ-ಕ್ರಿಯೆಗಳಿಗೆ ಅರ್ಥವನ್ನು ತುಂಬುತ್ತವೆ.

ಚಂದ್ರಾ ತಂದೆಯೊಂದಿಗೆ ಮಹಡಿಯಲ್ಲಿ ಸಂತೋಷದ 'ಉನ್ಮಾದ'ದಲ್ಲಿದ್ದಾಗ ತೆರೆದ ಕಿಟಕಿಯಿಂದ ಇದನ್ನು ನೋಡಿದ ಸೋಮು ಚಂದ್ರಾಳ ನಿಷ್ಠೆಯ ಬಗ್ಗೆ ತಪ್ಪು ತಿಳಿಯುತ್ತಾನೆ. ಅಂತೆ ಆತ ತೆಗೆದುಕೊಳ್ಳುವ ಮತ್ತೊಂದು ಹುಡುಗಿಯೊಂದಿಗಿನ ವಿವಾಹದ ನಿರ್ಧಾರಕ್ಕೆ ಕೊಂಚಮಟ್ಟಿನ ತರ್ಕಬದ್ಧ ಎನ್ನಿಸುವ ಕಾರಣವೂ ಸಿದ್ಧವಾಗುತ್ತದೆ ! ಕಾದಂಬರಿಯಲ್ಲಿ ಇಂಥ ಅಂಶಗಳು ಇಲ್ಲದ್ದರಿಂದ ಸೋಮುವಿನ ವರ್ತನೆ ಅಕ್ಷಮ್ಯ ಆಗುತ್ತದೆ. ಮತ್ತು ಆತ ಚಂದ್ರಾಳ ಹಾಗೇ ಇರುವ ಕುಲೀನ ಮನೆತನದ ಹುಡುಗಿಯನ್ನು ಒಪ್ಪಿಕೊಂಡುದರ ಹಿಂದೆ ಮನಃಸ್ಥರ ಮನೆ ಹೆಣ್ಣು ಹಿರಿಯರ ಒಪ್ಪಿಗೆ ಇದೆ, ತನಗೆ ಪ್ರಿಯವಾಗುವ ಚಂದ್ರಾಳದೇ (ಆಕೆ ಚಂದ್ರಾಳ ತಂಗಿ) ಚೆಲುವೂ ಇದೆ ಎಂಬ ಏಕಪಕ್ಷೀಯವಾದ ಕಾರಣ....ತೃಪ್ತಿಯೂ ಇದೆ. ಇದನ್ನು ನೋಡಿದಾಗ ಚಿತ್ರದ ಸೋಮುವಿಗಿಂತ ಕಾದಂಬರಿಯ ಸೋಮು ದುರ್ಬಲ ವ್ಯಕ್ತಿತ್ವದವನಾಗುತ್ತಾನೆ.

ವಿವಾಹ ಬಂಧನದ ಅಪೇಕ್ಷೆ ಇರುವ ಚಂದ್ರಾ ವೇಶ್ಯಾವೃತ್ತಿ ಸ್ವೀಕರಿಸಲು ಒಲ್ಲೆ ಎಂದು ಸೋಮುವಿನ ಬಳಿ ಪ್ರಸ್ತಾಪಿಸಿದಾಗ ಆತ "....ನಿಜವಾಗಿ ನೀನು ನನಗೆ ಸಿಕ್ಕುವ ವಸ್ತು ಅಲ್ಲಾಂತ ಒಂಥರಾ ಉದಾಸೀನ ಇತ್ತು. ಈಗ ಒಂದ್ಸರ್ತಿ ಅಲ್ಲ ಎರಡ್ಸರ್ತಿ ರುಚಿ ಕಂಡಾಯ್ತು. ಇನ್ಮೇಲೆ ಎಷ್ಟು ಕಷ್ಟ ಗೊತ್ತಾ?" ಎಂದು ಹೇಳುವಲ್ಲಿ ಆತನ ಪ್ರೀತಿಯ ಶುಷ್ಕತೆಯ ಬಗ್ಗೆ ನನ್ನ ಮರು ವ್ಯಾಖ್ಯಾನ ಬೇಕಿಲ್ಲ.

ಗೆಜ್ಜೆ ಪೂಜೆಯ ಒತ್ತಾಯಕ್ಕೆ ಮಣಿಯಲಾರೆ ಎಂದ ಚಂದ್ರಾ "....ಆದಕ್ಕೆಲ್ಲ ಒಪ್ಪಿದ್ರೆ ನಾನು ಸೂಳೇರ ಹುಡುಗೀನೇ ಆಗ್ತೀನಲ್ಲ...."–ಎಂದು ತನ್ನ - ಅವನ ಸಂಬಂಧದ ಬಗೆಗಿನ ನಿಷ್ಠೆಯನ್ನು ವ್ಯಕ್ತಪಡಿಸಿದಾಗಲೂ ಆಕೆಯನ್ನು ವಿವಾಹವಾಗುವ ಆಶ್ವಾಸನೆ ಕೊಡದ ಸೋಮು ತಾಯಿ ಹೇಳಿದ ಹಾಗೆ ಕೇಳಬೇಕೆಂದೂ ಶ್ರೀಮಂತ ಮದುವೆಯಾದರೆ ಒಪ್ಪಿ ಇರಬೇಕೆಂದೂ, ಈ ಜಾತಿಯಲ್ಲೂ ನಿಯತ್ತು ಇರುತ್ತದೆಂದೂ ಬೋಧಿಸತೊಡಗುತ್ತಾನೆ. ಈಗ ಮಾತ್ರ ಚಂದ್ರಾ ಕೆಂಡವಾಗಿ ಅವನ ಮುಂಗೈ ಮೇಲೆ ಹಲ್ಲುಗಳು ಊರುವಂತೆ ಕಚ್ಚಿ ತನ್ನ ಪ್ರತಿಭಟನೆ - ಕೋಪವನ್ನು ತೋರು

ತ್ತಾಳೆ. ತನ್ನ ಜನ್ಮರಹಸ್ಯ ಗೊತ್ತಿದ್ದೂ ಅದನ್ನ ಹೇಳದೇ ಇರುವಂತೆ ತಾಯಿ ಮಾಡಿದ ಪ್ರಮಾಣಕ್ಕೆ ಬದ್ಧಳಾಗಿ ತಂದೆಗೆ ಸಮಾಜದಲ್ಲಿ ಇರುವ ಗೌರವದ ಸ್ಥಾನವನ್ನ ಕಾಪಾಡಲು ಹೋಗಿ ತಾನು ಬೆಂಕಿಯಲ್ಲಿ ಬಿದ್ದ ಹುಳುವಾಗಿದ್ದಳಾಕೆ.

ಈ ಸನ್ನಿವೇಶ ಕಾದಂಬರಿಗಿಂತ ಚಲನಚಿತ್ರದಲ್ಲಿ ಇನ್ನಷ್ಟು ಹೆಚ್ಚು ಪರಿಣಾಮ ಕಾರಿಯಾಗಿ ಮೂಡಿದೆ. ನಂಜನಗೂಡಿನಲ್ಲಿ ಭೇಟಿಯಾದ ಜೋಡಿ, ಸೋಮು ಚಂದ್ರಾ ಳನ್ನ ವಿವಾಹವಾಗುತ್ತೇನೆಂದು ಆಶ್ವಾಸನೆ ಕೊಡಲಿಲ್ಲ. ಪ್ರೇಮಿಸುತ್ತೇನೆ ಎಂದಿದ್ದು, ಆಕೆ ಉತ್ಸಾಹದ ಭರದಲ್ಲಿ ವಿವಾಹದ ಒಪ್ಪಂದ ಎಂದೇ ಭಾವಿಸಿದಳು. ಇಲ್ಲಿ ಒಮ್ಮೆಲೇ ಉಕ್ಕಿದ ಸಂತೋಷವನ್ನು "ಗಗನವು ಎಲ್ಲೋ ಭೂಮಿಯು ಎಲ್ಲೋ...." ಎಂಬ ಗೀತೆಯ ಮೂಲಕ ಅಭಿವ್ಯಕ್ತಿಸಲಾಗಿದೆ. ಈ ಸಂದರ್ಭದಲ್ಲಿ ಅವರಿಬ್ಬರ ನಡುವಣ ಮಾತು-ಕೃತಿಗಳ ಅಂತರವನ್ನು ದೂರ-ಸಮೀಪ ಚಿತ್ರಿಕೆಗಳ ಮೂಲಕ ನಿರ್ದೇಶಕರು ಸೂಚಿಸಿರುವ ರೀತಿ ವಿಶಿಷ್ಟವಾಗಿದೆ. ತಂತ್ರಭಾಷೆಗೆ ಈ ಅನನ್ಯ ವೆನಿಸುವ ಸಾಧ್ಯತೆಗಳಿವೆ.

ಕಾದಂಬರಿಯ ಸೋಮು ಪರೀಕ್ಷೆಗೆ ಓದುವ ಕೂಚುಭಟ್ಟ. ಚಂದ್ರಾ ಪರೀಕ್ಷೆ ಯಲ್ಲಿ ನಪಾಸು. ಚಿತ್ರದಲ್ಲಿ ದುರ್ಬಲನಾದ ಸೋಮುವೇ ನಪಾಸು; ಚಂದ್ರಾ ಅಲ್ಲ. ಪಾತ್ರವನ್ನು ಗಟ್ಟಿಯಾಗಿಸಲು ಇದು ಸರಿಯಾದ ಚಿಂತನೆ ಹೌದು.

ಭಾರತೀಯ ಜೀವನ - ಸಮಾಜ - ಸಂಸ್ಕೃತಿಗಳ ಬಗೆಗೆ ಗಂಭೀರವಾದ ಹೇಳಿಕೆ ಗಳನ್ನು ನೀಡುವ ಪ್ರವೃತ್ತಿ ಪುಟ್ಟಣ್ಣನವರ ಎಲ್ಲ ಚಿತ್ರಗಳಲ್ಲೂ ಕಾಣುತ್ತದೆ. ಇದೇ ಮೌಲ್ಯಗಳನ್ನೇ ಹಾಡು, ನೃತ್ಯ, ಹಾಸ್ಯ, ಮೆಲೋಡ್ರಾಮ ಇತ್ಯಾದಿಗಳನ್ನು ಬಳಸಿಯೂ ಹೇಳುವ ಪ್ರಯತ್ನ ಮಾಡುತ್ತಿದ್ದರವರು. ಅನೇಕ ಸಂದರ್ಭಗಳಲ್ಲಿ ಅವು ಚಿತ್ರಕತೆಯ ಬಂಧದೊಂದಿಗೆ ಹೊಂದದ ಕ್ಲೀಷೆಗಳಾಗಿ, ವಾಚ್ಯವಾಗಿ ಕಂಡರೂ ಅವರು ಲಕ್ಷಿಸುತ್ತಿರಲಿಲ್ಲ. ಅವರ ಮನರಂಜನೆಯ ದ್ವಾರಾ ಸಾಮಾಜಿಕ ವಿಚಾರಗಳ ವಿಶ್ಲೇಷಣೆ ಮಾಡುವ ತಂತ್ರದಿಂದಾಗಿ ವಸ್ತು ಸಾಂದ್ರತೆಯನ್ನು ಕಳೆದುಕೊಂಡು ಬಿಡುವುದುಂಟು. ಗೆಜ್ಜೆಪೂಜೆ ಚಿತ್ರದಲ್ಲಿ ಸಹ "ಹೆಜ್ಜೆ ಹೆಜ್ಜೆಗೂ....ಗೆಜ್ಜೆ ಪೂಜೆಯು ಉರುಳಿಗೆ - ಕೊರಳನೆಂದೂ ನೀಡೆನು" ಎಂಬ ಗೀತೆಯ ದೃಶ್ಯಗಳು ಇದಕ್ಕೊಂದು ಉದಾಹರಣೆ. ಸಂಗೀತವನ್ನು ಭಾವೋದ್ರೇಕವುಳ್ಳ ಸನ್ನಿವೇಶದ ಸ್ಪಷ್ಟತೆಗಾಗಿ ಬಳಸುವ ರೀತಿಗೆ ಅನೇಕ ಮಿತಿಗಳಿವೆ. ಇದು ವೃತ್ತಿ ರಂಗಭೂಮಿಯಿಂದ ಎರವಲಾಗಿ ಬಂದ ಕೆಟ್ಟ ಅನುಕರಣೆ.

ಕಾದಂಬರಿಯಲ್ಲಿ ಎಂ. ಕೆ. ಇಂದಿರಾ ತರುವ ಮನಶ್ಶಾಸ್ತ್ರದ ವಿದ್ಯಾರ್ಥಿನಿ ಮಾಲತಿಯ ಪಾತ್ರ ಭಾವಕ್ಕೆಲ್ಲ ಮಾತು ತುಂಬಲಾಗದೆ ಮೌನಿಯಾಗುವ ಚಂದ್ರಾಳ ಪ್ರತಿರೂಪವಾಗಿ ತಾನೇ ಮಾತಾಡುತ್ತದೆ. ಕೊನೆಯವರೆಗೆ ಆಕೆಯ ಜೊತೆಗೆ ಇದ್ದು ಸ್ಥೈರ್ಯ ತುಂಬುವ ಈ ಪಾತ್ರ ಚಲನಚಿತ್ರದಲ್ಲಿ ಕ್ಯಾರಿಕೇಚರ್ ಆಗಿ (ಗುಡ್‌-ಮಾರ್ನಿಂಗ್ ರಮಾ) ಗಾಂಭೀರ್ಯವನ್ನೇ ಕಳೆದುಕೊಂಡಿದೆ.

ಈ ಹಿಂದೆ ಸೂಚಿಸಿದ ಹಾಗೆ ವೇಶ್ಯಾವೃತ್ತಿಯ ಬಗ್ಗೆ ತಂಗಮ್ಮ ಹೇಳುವ "ಈಚೆಗೆ ಮನೆತನಸ್ಥ ಹೆಂಗಸರೇ ಹಾಳಾಗುತ್ತಿದ್ದಾರೆ" ಎಂಬ ಒಂದು ವಾಕ್ಯ ಪುಟ್ಟಣ್ಣನವರಲ್ಲಿ ಒಂದು ಸಮಾನಾಂತರವಾದ ಕತೆಯಾಗಿ ಬೆಳೆಯುತ್ತದೆ. ನಟಿ ಬಾಲಕೃಷ್ಣ ಲಕ್ಷ್ಮೀದೇವಿಯರ ದಾಂಪತ್ಯದ ಕಥೆಯೊಂದನ್ನ ಬೆಳೆಸುವ ಪುಟ್ಟಣ್ಣನವರು ಗರತಿಯಂತಿದ್ದು ಪರಪುರುಷನೊಂದಿಗೆ ಸಂಬಂಧ ಬೆಳೆಸಿ ಓಡಿ ಹೋದ ಹೆಂಗಸಿನ ಬಗ್ಗೆ ಹಸಿಹಸಿಯಾಗಿ ಮಾತಾಡುತ್ತಾರೆ. ಆಕೆಯನ್ನು ಮೂರನೆಯ ಹೆಂಡತಿಯಾಗಿ ಸ್ವೀಕರಿಸಲು ಒಪ್ಪಿದ ವಿವಾಹವೆಂಬ ವ್ಯವಸ್ಥೆಯಲ್ಲೇ ಇರುವ ಮೂಲಭೂತ ದೋಷ ಅವರಿಗೆ ಕಾಣುವುದಿಲ್ಲ. ಅರೆಹುಚ್ಚನಂತೆ ವರ್ತಿಸುವ ಗಂಡ ವೇಶ್ಯೆಯ ಪಟ್ಟ ಹೊತ್ತು ಒಬ್ಬನಿಗೇ ನಿಷ್ಠಳಾಗಿ ಯಾವ ಗರತಿಗೂ ಕಡಿಮೆ ಇಲ್ಲದ ಬದುಕು ಎಂದು ಅಪರ್ಣಾಳನ್ನು ಕೊಂಡಾಡುತ್ತಾನೆ. ಈ ಮಾತು ಹೇಳಿಸಲು ಹೇಗೆ ಹೇಗೋ ಕಥೆ ಪಾತ್ರ ಸುತ್ತಿಸುವ ಪುಟ್ಟಣ್ಣನವರ ಈ ಕಲ್ಪನೆಯೇ ಅಪಕ್ವವಾದ್ದು.

ಕಾದಂಬರಿಯ ಚಂದ್ರಾ ಕೊನೆಯಲ್ಲಿ ಗೆಜ್ಜೆ ಪೂಜೆಗೆ ಒಪ್ಪಿ ಬಂದ ಶ್ರೀಮಂತನಿಂದ ಸಾಕಷ್ಟು ಹಣ ಸೆಳೆದು ತಾಯಿ–ಅಜ್ಜಿಯರ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಪುಟ್ಟಣ್ಣ ಈ ಅಂಶದತ್ತ ಗಮನಹರಿಸಿಲ್ಲ. ವಿದ್ಯಾವಂತೆ ಸ್ವಾವಲಂಬನೆ ಸಾಧ್ಯವಿರುವ ಛಲ ಇರುವ ಹುಡುಗಿ ಹೀಗೆ ಗೆಜ್ಜೆ ಪೂಜೆಯಂಥ ವಿಧಿಯನ್ನು ಒಪ್ಪಿ, ಬೇರೆ ಗತ್ಯಂತರ ಇಲ್ಲವೆಂಬಂತೆ ಆತ್ಮಹತ್ಯೆ ಮಾಡಿಕೊಳ್ಳುವುದೇ ಪರಿಹಾರ ಎಂಬ ತೀರ್ಮಾನವನ್ನು ಕಾದಂಬರಿ ಸಿನಿಮಾ ಎರಡೂ ಸಮರ್ಥಿಸಿವೆ ಎಂಬುದು ಪ್ರಗತಿಪರವಾದ ಧೋರಣೆ ಅನಿಸುವುದಿಲ್ಲ.

ತನ್ನ ಮೌನವೊಂದರಿಂದಲೇ ಕ್ರೌರ್ಯವನ್ನು ಧೈರ್ಯವಾಗಿ ಎದುರಿಸುವ ಅಪರ್ಣಾ ಕಾದಂಬರಿ-ಸಿನಿಮಾ ಎರಡರಲ್ಲೂ ಅನನ್ಯವಾದ ಪಾತ್ರ.

ಕಾದಂಬರಿ–ಸಿನಿಮಾ ಎರಡೂ ಒಂದು ಮತ್ತೊಂದಕ್ಕಿಂತ ಮೇಲುಗೈ ಆಗುವ

ಕೆಲವು ಸನ್ನಿವೇಶಗಳನ್ನು ಮಾತ್ರ ಇಲ್ಲಿ ಚರ್ಚಿಸಿದ್ದೇನೆ. ಲೇಖನ ಮಿತಿ ಗಮನದಲ್ಲಿಟ್ಟು, ಉಳಿದ ಮೂರು ಕಾದಂಬರಿಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಮುಗಿಸುತ್ತೇನೆ.

ಇಂದಿರಾ ಅವರ ಫಣಿಯಮ್ಮ ಕಾದಂಬರಿ - ಸಿನಿಮಾಬಗ್ಗೆ ಸಾಕಷ್ಟು ಚರ್ಚೆ ಆಗಿದೆ ; ಹತ್ತಾರು ಕಾರಣಗಳಿಂದಾಗಿ ಚಲನಚಿತ್ರ ಕಾದಂಬರಿಗಿಂತ ಹೆಚ್ಚಿನವನ್ನು ಸಾಧಿಸಿದೆ.

ಫಣಿಯಮ್ಮ ಒಂದು ಜೀವಂತ ಪಾತ್ರ ; ಕಲ್ಪನೆಯಲ್ಲ. ಆಕೆಯನ್ನು ಕಂಡವರಿದ್ದಾರೆ. ಸ್ವತಃ ಲೇಖಕಿಗೆ ಹತ್ತಿರದ ಬಂಧು. ಇಂಥ ಕಾರಣಗಳು ತೊಡಕಾಗದೇ ಕಲ್ಪನೆಗೆ ಹೊಸ ಅನ್ವೇಷಣೆಗೆ ಇನ್ನೂ ಅವಕಾಶ ಒದಗುವಂತಿದ್ದಿದ್ದರೆ ನಿರ್ದೇಶಕಿ ಪ್ರೇಮಾ ಕಾರಂತರು ವ್ಯಕ್ತಿತ್ವ–ಪರಿಸರ–ಸಾಮಾಜಿಕ ಅಂಶಗಳನ್ನು ಮತ್ತೂ ಹಲವು ಮಗ್ಗುಲುಗಳಿಂದ ವಿಶ್ಲೇಷಿಸುವ ಸಾಧ್ಯತೆಗಳಿದ್ದವು. ಪ್ರೇಮಾ ಅವರು ವೈಚಾರಿಕವಾಗಿ ವಸ್ತುವನ್ನು ವಿಶ್ಲೇಷಿಸಿ ಮುಂದಿಡಬಲ್ಲ ಪ್ರತಿಭಾವಂತೆ. ಸಾಮಾಜಿಕವಾದ ಕಾಳಜಿಗಳು, ಪ್ರಗತಿಪರವಾದ ಚಿಂತನೆ ಆಕೆಯ ನಿರ್ದೇಶನದ ಕೃತಿಯಲ್ಲಿ ಕಾಣಸಿಗುತ್ತವೆ.

ಇಂದಿರಾ ಅವರಿಗೆ ತಮ್ಮ ಕುಟುಂಬದ ಹಿರಿಯ ಜೀವವೊಂದರ ಬದುಕಿನ ಬಗ್ಗೆ ಇರುವ ಅಭಿಮಾನ, ಅದು ಇಡೀ ಜಿಲ್ಲೆಗೇ ದೊಡ್ಡಮಾತೆಂಬ ಹೆಮ್ಮೆ ಕೊಂಚ ವೈಭವೀಕರಣಕ್ಕೆ ದಾರಿಯಾಗಿದ್ದರೂ, ಬಹುದೊಡ್ಡ ಬದುಕನ್ನು ತೆರೆದಿಡುವಲ್ಲಿ ತಮ್ಮೆಲ್ಲ ಸೃಜನಶೀಲ ಪ್ರತಿಭೆಯನ್ನು ತೊಡಗಿಸಿಕೊಂಡಿದ್ದಾರೆಂಬುದರಲ್ಲಿ ಎರಡು ಮಾತಿಲ್ಲ. ಫಣಿಯಮ್ಮನ ಋತು - ಬದುಕು-ನಿರ್ಧಾರಗಳ ಬಗ್ಗೆ ಆಧುನಿಕ ಸಮಾಜದ ನಿಲುವು ಏನೇ ಇರಲಿ, ಅಥವಾ ಹಾಗೆ ಹೇಳುತ್ತಿರುವ ಕಾದಂಬರಿಗಾರ್ತಿಯ ನಿಲುವನ್ನ ಇಲ್ಲಿ ಗುರುತಿಸಿಕೊಂಡಾಗ ನಮ್ಮಲ್ಲಿ ಏಳುವ ಪ್ರಶ್ನೆಗಳು ಎಂಥವೇ ಇರಲಿ ಇವೆಲ್ಲದರ ಆಚೆಗೂ ಫಣಿಯಮ್ಮ ಒಂದು ಕುತೂಹಲ-ಅಭಿಮಾನ ಮೂಡಿಸುವಂಥ ದೊಡ್ಡ ಬದುಕನ್ನು ಕಂಡರಿಸಿದೆ. ಫಣಿಯಮ್ಮನ ದುರಂತದ ಮುನ್ನುಡಿಯಾಗಿ ಬರುವ ಜಡೆಬಿಲ್ಲೆಗಾಗಿ ಜಡೆ ಕತ್ತರಿಸಿ ಹೋದ ಪ್ರಸಂಗ, ತುಳಸಿ ಪೂಜೆಗೆ ಹೋದಾಗ ಕಾಗೆ ಕುಕ್ಕಿ ಚೆಲ್ಲಿದ ಮಂಗಳದ್ರವ್ಯ–ಇವೆಲ್ಲ ಮೇಲ್ನೋಟಕ್ಕೆ ಒಂದು ನಂಬಿಕೆಯ ಹಿಂದೆ ಓಡುತ್ತಿವೆ ಅನ್ನಿಸಿದರೂ, ಒಂದು ಪ್ರಾದೇಶಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇಂಥ ಅಂಶಗಳನ್ನು ಬೇರೆಯಾಗಿ ವ್ಯಾಖ್ಯಾನಿಸಿಕೊಳ್ಳಲೂಬಹುದು. ಹಾಗೆ ಬಂದವನ್ನೆಲ್ಲ ಸಾರಾಸಗಟಾಗಿ 'ಮೂಢನಂಬಿಕೆ' ಎಂದುಬಿಡುವಂತಿಲ್ಲ. ಸ್ಮೃತಿತಂತ್ರ ಬಳಸಿ ಮೂರು ತಲೆಮಾರುಗಳ ಅಂತರದಲ್ಲಿ ಸಂಸ್ಕೃತಿಯಲ್ಲಾದ ಅವಸ್ಥಾಂತರಗಳನ್ನು ಹಿಡಿಯಲು ಪ್ರೇಮಾ ಪ್ರಯತ್ನಿ

ಸುತ್ತಾರೆ. ಫಣಿಯಮ್ಮನ ಪಾತ್ರವನ್ನು ಮೂವರು ಅಭಿನಯಿಸಿದ್ದಾರೆ. [ವಯಸ್ಸಿನ ಅಂತರಕ್ಕಾಗಿ] ದಾಕ್ಷಾಯಣಿಯ ಪ್ರಸಂಗದಲ್ಲಿ ಕಾದಂಬರಿಕಾರ್ತಿ ಫಣಿಯಮ್ಮನ ನವುರಾದ ಮಾತಿನಲ್ಲಿ ಹೇಳುವ ಪ್ರತಿಭಟನೆಯ ಮೊಳಕೆಯನ್ನು ಸ್ಪಷ್ಟವಾಗಿ ಮೂರ್ತವಾಗಿಸಿ ವಿಜೃಂಭಿಸಿದ್ದಾರೆ ನಿರ್ದೇಶಕಿ ಪ್ರೇಮಾಕಾರಂತ. ಆಧುನಿಕ ಮನಸ್ಸು-ಚಿಂತನೆಗಳು ಇಂಥಲ್ಲಿ ತನ್ಮಯವಾಗಿ ಕೆಲಸ ಮಾಡುವುದು ಕೇವಲ ಸಹಜ.

ತಂತ್ರ ಒಂದು ಮೌಲ್ಯರಹಿತ ಅಸ್ತಿತ್ವ ಅಲ್ಲ. ಅದು ಹೊಳಹು ಚಿಂತನೆಗಳು, ಸಾಮಾಜಿಕತೆ, ಮಾನವೀಯತೆಗೆ ಹೊಂದಿಕೊಂಡೇ ಇರುತ್ತದೆ. ಇದನ್ನು ಫಣಿಯಮ್ಮ ಕಾದಂಬರಿ (ನೀಳ್ಗತೆ !) ಬೆಳ್ಳಿ ತೆರೆಗೆ ರೂಪಾಂತರಗೊಳ್ಳುವಾಗಿನ ತಂತ್ರವಿಧಾನದಲ್ಲೂ ಗುರುತಿಸಬಹುದಾಗಿದೆ. ಚಲನಚಿತ್ರ ಹೊಸ ದೃಶ್ಯ-ಶ್ರವ್ಯ ಭಾಷೆ. ಅದರ ವಿಸ್ತಾರವಾದ ಬಳಕೆ, ಸಂಕೀರ್ಣತೆಗಳು ಶಾಬ್ದಿಕ ಭಾಷೆಗೆ ಸರಿಸಮನಾಗಿ ನಿಲ್ಲಬೇಕು ಎಂಬುದು ಆ ಮಾಧ್ಯಮದಲ್ಲಿ ದುಡಿವವರ ಕಾಳಜಿಯಾಗಿರುತ್ತದೆ. ಅಂತೆ ಶಬ್ದ (ಅಕ್ಷರ) ಮಾಧ್ಯಮದಿಂದ ಆಯ್ದ ಮೂಲದ್ರವ್ಯ ಮತ್ತಷ್ಟು ಧ್ವನಿ-ಸಂಕೇತಗಳ ಮೂಲಕ ಇಲ್ಲಿ ಅರಳುತ್ತಾ ಅರ್ಥಗಳನ್ನು ಬಿಡಿಸತೊಡಗುತ್ತದೆ. ಫಣಿಯಮ್ಮನ ಹಲವು ಅಂಶಗಳು ಇಂಥ ಕ್ರಿಯೆಯಲ್ಲಿ ವಿಸ್ತಾರವಾಗುತ್ತ ಹೋಗಿದೆ. ಅಂಚೆಮನೆಯ ರನ್ನರ್, ಮಲೆನಾಡ ಸಿರಿವಂತಿಕೆ ಇತ್ಯಾದಿಗಳ ವರ್ಣನೆಯನ್ನೂ ದೃಶ್ಯಗಳು ಅಷ್ಟೇ ಜೀವಂತವಾಗಿ ಹಿಡಿದಿಟ್ಟಿವೆ. ಇಲ್ಲಿ ಬಳಸಲಾದ ಯಕ್ಷಗಾನ ಪ್ರಸಂಗವೊಂದು ಏಕೋ ಬಂಧದಿಂದ ಹೊರಗುಳಿಯಿತು ! ದಾಕ್ಷಾಯಿಣಿಯ ವರ್ತನೆ ಒಂದು ಉನ್ಮಾದ ಸ್ಥಿತಿಯಹಾಗೆ 'ಅತಿ' ಯಾದರೆ ಫಣಿಯಮ್ಮನ ಉದಾತ್ತತೆ ಕೂಡಾ ವ್ಯಕ್ತಿತ್ವವೊಂದರ ಬಗೆಗಿನ ವ್ಯಾಮೋಹ ಮಾತ್ರವೆನ್ನಿಸಬಹುದು. ಸಿನಿಮಾ-ಕಾದಂಬರಿ ಎರಡೂ ಹೊಸ ಹೊಳಹು-ಬೆಳಕು ಚೆಲ್ಲುತ್ತಿವೆ ಎಂದು ಸಾಬೀತು ಮಾಡುವ ತಿಣುಕಾಟಕ್ಕಿಂತ ಯಥಾಸ್ಥಿತಿಯನ್ನೇ ಒಪ್ಪಿಕೊಂಡೂ ಬದುಕನ್ನ 'ಸಾರ್ಥಕ ಮಾಡಿಕೊಂಡ ಒಂದು ವ್ಯಕ್ತಿತ್ವದ ಪರಿಸರವನ್ನು ಸಾಮಾಜಿಕ ಸಂದರ್ಭವನ್ನು ಗುರುತಿಸಲು ಇವು ನೆರವಾಗುವುದಂತೂ ಸತ್ಯ.

ಇಂದಿರಾ ಅವರ 'ಸದಾನಂದ' ಹುಸು ವಿವರಗಳ ಅತಿಯ ನಡುವೆಯೂ ಒಳ್ಳೆಯ ಕಾದಂಬರಿ ಅನ್ನಿಸಿಕೊಳ್ಳುತ್ತದೆ. ಇದ್ದುದನ್ನ ಇದ್ದ ಹಾಗೇ ವಿವರಿಸುವುದಷ್ಟೇ ಗುರಿಯಾದ ಇಂದಿರಾ ಅವರಿಗೆ ಇಲ್ಲೂ ಪಾತ್ರ ಸನ್ನಿವೇಶಗಳನ್ನು ಒಂದು ನೆಲೆಗೆ ತಂದು ನಿಲ್ಲಿಸುವತ್ತ ಗಮನ ಇಲ್ಲ. ಅಂತೆಯೇ 'ಸದಾನಂದ'ದ ಬಚ್ಚ, ಶಿಂತ್ರಿ, ಮೊದಲಾದ ಹಲವು ಪಾತ್ರಗಳು ಕಥೆಯ ಚೌಕಟ್ಟಿನ ಒಳಗೆ ಹೊಂದಿಕೊಳ್ಳದೇ ಹೊರಗೆ ಉಳಿಯುತ್ತವೆ. ಮೂರ್ತಿಯ ಪಾತ್ರ ಥಟ್ಟನೆ ನಿಂತರೆ, ಕೃಷ್ಣವೇಣಿಯ ಮನಸ್ಸಿನ ಬಗ್ಗೆ ಗಮನ ಕೊಡಲಿಲ್ಲ ಅನ್ನಿಸುತ್ತದೆ.

ಕರ್ನಾಟಕ ಸರ್ಕಾರವೇ ಧನಸಹಾಯವಿತ್ತು ಈ ಕಾದಂಬರಿಯ ಚಿತ್ರೀಕರಣಕ್ಕೆ ಮುಂದಾಯಿತು. ಅನಂತಹಿರೇಗೌಡರ್ ಅವರು ಹೊನ್ನಪ್ಪ ಭಾಗವತರಿಗಾಗಿ ನಿರ್ದೇಶಿಸಿದ್ದರು. ನಾನು ಚಿತ್ರವನ್ನು ನೋಡಿ ಬಹಳ ದಿನಗಳಾದವು. ಆದರೂ ನೆನಪಿನಲ್ಲಿ ಉಳಿಯುವಂಥ ಯಾವ ಅಂಶವೂ ಇರಲಿಲ್ಲ ಎಂಬುದೂ ನಿಜ. ಕಾದಂಬರಿಯಲ್ಲೇ ಪದೇ ಪದೇ ವಿವೇಕಾನಂದರಿಗೆ ಹೋಲಿಸುವ ರಾಜುವಿನ ಪಾತ್ರ ಅಂಗವಿಕಲೆಯನ್ನು ವಿವಾಹವಾಗುವ ಆದರ್ಶದ ಸಾಧನೆಗಾಗಿ ಈಗಾಗಲೇ ಗೊತ್ತಾದ ಮದುವೆಯಿಂದ ತಪ್ಪಿಸಿಕೊಳ್ಳಲು ಮೂರ್ಛೆ ರೋಗದ ನಾಟಕವಾಡುವುದು ಇತ್ಯಾದಿ ಆ ಪಾತ್ರದ ಘನತೆಗೆ ತಕ್ಕುದಾಗಿ ಮೂಡಿ ಬಂದಿಲ್ಲ. ಸಿನಿಮಾ ಸಹ ಇದನ್ನೇ ಸಾಧಿಸ ಹೊರಟು ಸೋತಿದೆ. 'ಸದಾನಂದ'ರ ಪಾತ್ರವಂತೂ ಚಿತ್ರದಲ್ಲಿ ಎಲ್ಲ ಸತ್ವವನ್ನು ಕಳೆದುಕೊಂಡು ನೀರಸವಾಗುತ್ತದೆ.

ಕಾದಂಬರಿಯ ತದ್ವತ್ ಅನುವಾದ ಹಾಗಿರಲಿ ಕಾದಂಬರಿಯ ಒಂದಂಶವನ್ನೂ ಸಮರ್ಥವಾಗಿ ಬೆಳ್ಳಿತೆರೆಗೆ ತರಲಾಗಲಿಲ್ಲ. ಅದೊಂದು ವಿಫಲ ಪ್ರಯತ್ನ. 'ಸದಾನಂದ' ಕಾದಂಬರಿಯ ವಸ್ತು ಒಂದು ಪಾರಂಪರಿಕ ಸಮಾಜದ ನಿಶ್ಚಿತ ಮೌಲ್ಯಗಳ ಮೇಲೆ ಆಧುನೀಕರಣದ ಪ್ರಭಾವದಿಂದಾಗಿ ಉಂಟಾದ ಪರಿವರ್ತನೆಯ ಹಂತಗಳನ್ನು, ಒಳಗಾದವರ ಮಾನಸಿಕ ತುಡಿತಗಳನ್ನು ಸ್ಪಷ್ಟವಾಗಿ ತೆರೆದಿಡುವುದಿಲ್ಲ. ಸದಾನಂದನ ಸಹವಾಸ, ಆತನ ಕೃತಿಗಳ ಓದಿನ ಫಲವಾಗಿ ಬಂದ ಆಧುನಿಕ ವಿಚಾರಗಳಲ್ಲಿಯ ಸಜೀವಾಂಶ, ಪರಂಪರೆಯಲ್ಲಿನ ಸಜೀವಾಂಶಗಳನ್ನು ಒಟ್ಟುಗೂಡಿಸಿ ಸಮಾಜ–ಬದುಕಿನ ವಿಕಾಸಕ್ಕೆ ಕಾರಣವಾಗಬೇಕೆಂಬ ಒಳನೋಟಗಳನ್ನು ಸಿನಿಮಾದಲ್ಲೂ ತರಲಾಗಿಲ್ಲ. ಕೇವಲ ಕಥೆ-ಘಟನೆಗಳು ಆದಾಗ, ಅವು ತೀರಾ ಸಪ್ಪೆ ನಿರೂಪಣೆಯಾಗಿ ಇರಬೇಕಾದ ನಾಟಕೀಯತೆಯೂ ಚಲನಚಿತ್ರದಲ್ಲಿ ಕಂಡುಬರಲಿಲ್ಲ.

'ಹೂಬಾಣ' ಕಾದಂಬರಿಯ ನಾಯಕ ವೈದ್ಯ. ಲಂಪಟನಾದ ತಂದೆಯಿಂದ ದೂರವಾಗಿ, ಜೈಲಿಗೆ ಹೋದ ಗಂಡನ ಕಾರಣದಿಂದ ಒಂಟಿಯಾದ ಸೋದರಿಯೊಂದಿಗೆ ದೂರದೂರಿನಲ್ಲಿ ಏಕಾಂತವನ್ನೇ ಅಪ್ಪಿಕೊಂಡು ನೀರಸ ಬದುಕಿಗೆ ಒಗ್ಗಿದ್ದ ತರುಣನಿಗೆ ಬುದ್ಧಿ ಮಾಂದ್ಯದ, ಮೂಗ ಹುಡುಗಿ ಬೆಳಕಾಗಿ ಬರುತ್ತಾಳೆ. ಅವಳನ್ನು ವಿವಾಹವಾಗುವ ಅವನ ಔದಾರ್ಯದ ಹಿಂದೆ ತನ್ನ ಕುಟುಂಬದ ಹಿನ್ನೆಲೆಯ ಬಗ್ಗೆ ಆಕೆ ಅಥವಾ ಆಕೆಯ ಜನ ಪ್ರಶ್ನಿಸದಿರಲಿ ಎಂಬ ಸ್ವಾರ್ಥವೂ ಇದೆ. ಆದರೆ ಅಪಘಾತವೊಂದರಲ್ಲಿ ಸತ್ತುಹೋದ ತಂದೆಯನ್ನು, ಆತನ ಪ್ರೇಯಸಿಯನ್ನು ನೋಡಲು ಹೋದಾಗ ತನ್ನ ತಂದೆಯ ಪ್ರೇಯಸಿಯೇ ತನ್ನ ಮೂಗಿ ಹೆಂಡತಿಯ ತಾಯಿ ಎಂದು ತಿಳಿಯುತ್ತದೆ. (ಆ ಹುಡುಗಿಯ ವಿಧವೆ ತಾಯಿ ಬಹಳ ಹಿಂದೆಯೇ

ಎಳೆ ಮಗುವನ್ನು ಬಿಟ್ಟು ಹೊರಟುಹೋಗಿರುತ್ತಾಳೆ) ಇದೊಂದು ವಿಚಿತ್ರ ತಿರುವು. ಇಲ್ಲಿ ಸಂಬಂಧಗಳು ಏನು ? ಇಲ್ಲಿ ದಾಂಪತ್ಯ ಸರಿಯೆ ? ಏನು ತೀರ್ಮಾನ? ಎಂಬ ಪ್ರಶ್ನೆಗಳು ಏಳುತ್ತವೆ. ಆದರೆ ಅದಾವುದನ್ನೂ ಲೇಖಕಿ ಯೋಚಿಸುವುದಿಲ್ಲ. ಎಂದೋ ತಾಯಿ ಮಗಳಿಗೆ ಕೊಟ್ಟ ಕಠಿಣ ಶಿಕ್ಷೆಯ ಭಯದಿಂದಾಗಿ ಮೂಗಿಯಾಗಿದ್ದ ಹುಡುಗಿಗೆ ಮಾತು ವಿಸ್ಮಯಕರವಾಗಿ ಬಂದೇಬಿಡುತ್ತದೆ. ತಾಯಿಯ ಅಕ್ರಮ ಸಂಬಂಧವನ್ನು ಒಲ್ಲದ ಎಳೆ ಮನಸ್ಸು ಮತಿಕೆಡಿಸಿಕೊಂಡಿತ್ತು. ಈಗ ಅದೂ ತನ್ನಂತೆ ಸರಿಹೋಯಿತು. ತಂದೆಯ ದೊಡ್ಡ ಆಸ್ತಿಗೆ ವಾರಸುದಾರನಾಗಿ ವೈದ್ಯ, ಅವನ ಹೆಂಡತಿ ಸುಖವಾಗಿ ಜೀವನ ನಡೆಸಿದರು ಎಂಬುದು ಲೇಖಕಿಯ ನಿಲುವು. ಆದರೆ ಇದು ಅಷ್ಟು ಸುಲಭ ಪರಿಹಾರಕ್ಕೆ ಒಗ್ಗುವ ಸಮಸ್ಯೆಯಲ್ಲ.

ಈ ಕ್ಲಿಷ್ಟತೆಯ ಅರಿವು ಚಲನಚಿತ್ರ ನಿರ್ದೇಶಕರಿಗೆ ಇದೆ. ಯಾವನೇ ಚಿತ್ರ ನಿರ್ಮಾಪಕನಿಗೆ ಸಹಜವಾಗಿ ತನ್ನೆದುರು ಇರುವ ಪ್ರೇಕ್ಷಕ ವರ್ಗ ಈ ಕಥೆಯನ್ನು ಒಪ್ಪುತ್ತದೆಯೋ ಇಲ್ಲವೋ ಎಂಬ ಆತಂಕ ಇರುತ್ತದೆ. ಎಚ್ಚರದಿಂದಲೇ ನಿರ್ವಹಿಸುತ್ತಾನೆ. 'ಹೂಬಾಣ' ಚಿತ್ರವಾದಾಗ ಕಾದಂಬರಿಯ ಒಳಗೆ ಇರುವ ಒಂದು ವಾಕ್ಯವಾದ 'ಮುತ್ತು ಒಂದು ಮುತ್ತು' ಎಂಬ ಹೆಸರಿನಲ್ಲಿ ತೆರೆ ಕಂಡಿತು. ಚಿತ್ರ ತುಂಬ ಉತ್ತಮ ಗುಣಮಟ್ಟದ್ದಾಗಲಿಲ್ಲ. ಜಾಳು ಜಾಳಾದ ನಿರೂಪಣೆ. ಮುಖ್ಯವಾಗಿ ಈ ಕಥೆಯನ್ನು ಆಯ್ದುಕೊಂಡಾಗ ಮೂಗಿಯಾದ ಸುಂದರ ಹುಡುಗಿ, ಆಕೆಯ ನಡವಳಿಕೆಯಲ್ಲಿಯ ವಿಶೇಷಗಳು (ಚೆಲ್ಲುತನ-ಸಾಹಸ ಇತ್ಯಾದಿ) ಮತ್ತು ಮತಿಭ್ರಮಣೆಯ ಕಾರಣವಾಗಿ ಆಕೆಯ (ಚಿತ್ರ ಬರೆದು ಹರಿಯುವ, ಬೊಂಬೆ ಮಾಡಿ ಒಡೆದುಹಾಕುವುದು ಇತ್ಯಾದಿ) ಕೆಲವು ಪ್ರವೃತ್ತಿಗಳು ಚಿತ್ರಮಾಧ್ಯಮದಲ್ಲಿ ಹೊಸ ರೀತಿಯ ನಿರೂಪಣೆ ಸಾಧ್ಯ ಅನ್ನಿಸಿರಬಹುದು. ಆಗಷ್ಟೇ ಹೊಸ ಶೋಧವಾಗಿ ಸುದ್ದಿಯಲ್ಲಿದ್ದ ರೂಪಾ ಚಕ್ರವರ್ತಿ ಎಂಬ ತರುಣಿಮುನ್ನು, ಆಕೆಯ ಅಗಲವಾದ ಕಣ್ಣುಗಳು, ತುಂಬು ಗಲ್ಲಗಳಿಂದಾಗಿ ಇತರ ನಾಯಕಿ ನಟಿಯರಿಗಿಂತ ಭಿನ್ನವಾಗಿದ್ದಾಳೆಂಬ ಕಾರಣಕ್ಕೇ ಆಯ್ಕೆ ಮಾಡಿದ್ದರು. ಆ ಹುಡುಗಿಯ ಕಂಠದಲ್ಲಿ ಕೋಮಲತೆ ಇರಲಿಲ್ಲವಾಗಿ ಚಿತ್ರದ ಬಹ್ವಂಶ ಮೂಗಿಯೇ ಆದ್ದರಿಂದ ಕೇವಲ ಭಾವಾಭಿನಯಕ್ಕೆ ಆಕೆ ಸರಿಯಾದ ಆಯ್ಕೆ ಕೂಡಾ. ಆದರೆ ಚಿತ್ರಕಥೆಯ ಅಂತಿಮ ಹಂತದಲ್ಲಿ ಕತೆಗೆ ಕೊಡಬೇಕಾದ ತಿರುವು ಕಾದಂಬರಿಗಾರ್ತಿಯಷ್ಟು ಸಲೀಸಂತೂ ಅಲ್ಲ. ಸಂಬಂಧಗಳನ್ನು ಹಾಗೆ ಬಿಟ್ಟುಬಿಡುವಂತಿಲ್ಲ. ಆದ್ದರಿಂದಲೇ ಆ ವೈದ್ಯನ ತಂದೆ-ಪ್ರೇಯಸಿ ವಿವಾಹದ ಸಂದರ್ಭದಲ್ಲಿ ಅವಸರದಲ್ಲಿ ಬಂದು ಸಮಸ್ಯೆಗೆ ಹೊಸ ತಿರುವು ಏರ್ಪಡುತ್ತದೆ. ಒಟ್ಟಾರೆ ಆ ಚಿತ್ರ ಇತ್ತ ರಂಜನೆಯೂ ಅಲ್ಲದ, ಕಲೆಯೂ ಅಲ್ಲದ ಸ್ಥಿತಿಯಲ್ಲಿ ನಿಂತು ವಿಫಲ ಚಿತ್ರವಾಗಿತ್ತು.

ಈ ಎಲ್ಲ ಹೋಲಿಕೆಗಳ ಮೂಲಕ ಒಂದು ಕಾದಂಬರಿ ತೆರೆ ಕಾಣುವಾಗಿನ ಅವಸ್ಥಾಂತರದ ಸ್ಥೂಲ ರೂಪವನ್ನು ಕೇವಲ ವಸ್ತುವಿನ ಹಂತದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ. ಸಿನಿಮಾ ಮಾಧ್ಯಮದ ತಾಂತ್ರಿಕ ಅಂಶಗಳನ್ನು ಇಲ್ಲಿ ಗೌಣ ವಾಗಿಸಿದ್ದೇನೆ. ಈ ಮಾಧ್ಯಮಗಳ ಪೈಪೋಟಿಯ ನಡುವೆಯೂ ಇಂದಿರಾ ಅವರ ಸರಸ ಸಂಭಾಷಣೆ, ಸನ್ನಿವೇಶಗಳಲ್ಲಿಯ ಭಾವನಾತ್ಮಕತೆಯೇ ಅನನ್ಯವಾದದ್ದು, ಅವನ್ನು ಅವು ಇರುವಂತೆಯೇ ತೆರೆಗೆ ವರ್ಗಾಯಿಸಿದಾಗಲೂ ಅಷ್ಟೇ ಆಕರ್ಷಕ ವಾಗಿದ್ದವು ಎಂಬ ಮಾತನ್ನು ಮತ್ತೆ ಮತ್ತೆ ಹೇಳಬಹುದಾಗಿದೆ.

ಅವರು ಕೊಡುವ ಪ್ರಕೃತಿಯ ಚಿತ್ರಣ ಛಾಯಾಗ್ರಾಹಕನಿಗೆ ಒಂದು ಹಬ್ಬ; ಹಾಗೂ ಸವಾಲು. ಸಾಧಾರಣವಾದ ಪ್ರಯತ್ನವಿದ್ದರೂ, ಪ್ರೇಕ್ಷಕನನ್ನು ಹಸಿರಿನ ಲೋಕಕ್ಕೆ ಒಯ್ಯಬಲ್ಲದು. ಇಂದಿರಾ ಅವರು ನಮ್ಮ ಮುಂದಿಡುವ ಪ್ರಾದೇಶಿಕ ಸಂಸ್ಕೃತಿ ಒಂದು ಕಾಲದ, ಸಮಾಜದ ಸ್ಥಿತಿಯನ್ನು ಅದು ಇರುವ ಹಾಗೇ ಚಿತ್ರಿಸು ತ್ತದೆ. ಇದನ್ನು ಹಾಗೆ ಬೆಳ್ಳಿತೆರೆಯಲ್ಲಿ ಹಿಡಿದಿಡಲು ಯಾವ ಚಿತ್ರಕರ್ತನಿಗೂ ಸಾಧ್ಯವಾಗಿಲ್ಲ. ಆ ಮಟ್ಟಿಗೆ ಚಿತ್ರಪ್ರೇಕ್ಷಕ ಎಂ. ಕೆ. ಇಂದಿರಾ ಅವರ ಜೀವಂತ ಭಾಷೆ - ಪ್ರಕೃತಿ ಚಿತ್ರಣ, ಪ್ರಾದೇಶಿಕತೆಯ ಪರಿಚಯಗಳಿಂದ ವಂಚಿತನೇ ಸರಿ.

ಈ ಗ್ರಂಥದ ಹೆಸರು ಸುರಗಿ. ಸುರಗಿ ಒಂದು ಸುಂದರವಾದ, ಸುಗಂಧ ಪೂರಿತ ಹೂವು. ಇದರ ಬಗ್ಗೆ 'ಹೂಬಾಣ' ಕಾದಂಬರಿಯಲ್ಲಿ ಇಂದಿರಾ ಹೆಚ್ಚು ವಿವರಿಸಿದ್ದಾರೆ. ಇಂಥ 'ಸುರಗಿ'ಯನ್ನು ಪರಿಚಯಿಸಿದ ಇಂದಿರಾ ನನಗೆ ಬಹು ಕಾಲದಿಂದ ಹಿರಿಯಕ್ಕನಂತೆ ಆತ್ಮೀಯರು. ಸುರಗಿಯನ್ನು ಕೋದುಕೊಡಲು ಪ್ರಯತ್ನಿಸಿದ ಈ ಸಮಯ "ಅಮ್ಮಾ ಈ ಸುರಗಿಯ ಮಾಲೆ ಅರ್ಧವಾಗಿದೆ, ಇನ್ನಷ್ಟು ಸುಗಂಧವಿರುವ ಸುರಗಿಯನ್ನು ಕೊಡಿ" ಎಂದು ವಿನಯದಿಂದ ಆಕೆಯನ್ನು ಪ್ರಾರ್ಥಿಸು ತ್ತಿದ್ದೇನೆ.

* ಈ ಲೇಖನದಲ್ಲಿ ವಿಶ್ವ ಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿ ಸಿದ 'ಗೆಜ್ಜೆ ಪೂಜೆ' ಕೃತಿಯಿಂದ ವಾಕ್ಯಗಳನ್ನು ಉದ್ಧರಿಸಲಾಗಿದೆ.

* 'ಗೆಜ್ಜೆ ಪೂಜೆ' ಚಲನ ಚಿತ್ರವನ್ನು ವಿಶೇಷವಾಗಿ ವೀಕ್ಷಿಸಲು ಅನುವು ಮಾಡಿಕೊಟ್ಟ ವಾರ್ತಾ ಇಲಾಖೆಯವರಿಗೆ ಲೇಖಕಿಯ ಕೃತಜ್ಞತೆಗಳು.

ನಾನೇಕೆ ಫಣಿಯಮ್ಮ ಚಲನಚಿತ್ರ ಮಾಡಿದೆ ?

○
○
○ ಪ್ರೇಮಾ ಕಾರಂತ

1980ನೇ ಇಸವಿ. ಒಂದು ದಿನ ಬಳ್ಳಾರಿಯ ಪದ್ಮಾವತಿ ಬಾಯಿ ಎಂಬ ಸಮಾಜ ಸೇವಕಿ, ಡಾ. ಚಿಟಗೋಪಿಯವರೊಡನೆ ನಮ್ಮ ಮನೆಗೆ ಬಂದರು. ನಾವು ಮಹಿಳೆಯರೇ ಸೇರಿ ಒಂದು ಚಲನಚಿತ್ರ ತಯಾರಿಸಬೇಕೆಂದಿದ್ದೇವೆ. ತಾವು ಈಗಾಗಲೇ ಚಲನಚಿತ್ರಗಳಲ್ಲಿ ಕೆಲಸ ಮಾಡಿದ್ದೀರಿ, ನಾಟಕದಲ್ಲಿ ಪಳಗಿದ್ದೀರಿ. ನೀವೇ ನಿರ್ದೇಶನದ ಹೊರೆ ಹೊರಬೇಕೆಂದರು.

ನಿರ್ದೇಶಕಿಯಾಗಬೇಕೆಂಬ ಕನಸನ್ನೆಂದೂ ನಾನು ಕಂಡೇ ಇರಲ್ಲಿಲ್ಲ. ಇದ್ದಕ್ಕಿದ್ದಂತೆ ಬಂದ ಅವಕಾಶವನ್ನು ಕಳೆದು ಕೊಳ್ಳಲೂ ಸಿದ್ಧಳಿರಲಿಲ್ಲ. ಕೂಡಲೇ ಆಗಲಿ ಎಂದು ಒಪ್ಪಿಗೆ ಕೊಟ್ಟೆ, ನಾನೇಕೆ ಮಾಡಬಾರದು ಎನಿಸಿತು. ಸಂಗೀತಕ್ಕೆ ಭಾನುಮತಿ, ಸಂಕಲನಕ್ಕೆ ಅರುಣಾ ವಿಕಾಸ್, ಕಲಾ ನಿರ್ದೇಶನಕ್ಕೆ ಶಮಾ ಜೈದಿ ಇವರುಗಳ ಹೆಸರುಗಳನ್ನ ಸೂಚಿಸಿ ಯಾಯಿತು. ಆದರೆ ಅವರು ತಂದ ಕಥೆ ನನಗೆ ಹಿಡಿಸದೇ ಹೋದಿದ ರಿಂದ ಮತ್ತೊಮ್ಮೆ ಓದುವೆನೆಂದು ತೆಗೆದು ಕೊಂಡೆ.

ಹೆಂಗಸೇ ಬರೆದ ಕಥೆಗೆ ಹುಡುಕಾಟ ಶುರುವಾಯಿತು. ಅದೇ ಸಮಯಕ್ಕೆ ಜಿ.ಬಿ. ಯವರು ಫಣಿಯಮ್ಮನ ಕರಡು ಪ್ರತಿಯನ್ನು ಓದಲೆಂದು ನನಗೆ ಕಳುಹಿಸಿ ಕೊಟ್ಟರು. ಓದಿದ ತಕ್ಷಣ ಖಂಡಿತ ಅದನ್ನೇ ಮಾಡಬೇಕೆನಿಸಿತು.

ಮಹಿಳೆಯರೇ ಸೇರಿ ಚಿತ್ರ ಮಾಡುತ್ತೇವೆಂದಾಗ ಸ್ನೇಹಿತರೆಲ್ಲಾ ಗೇಲಿಮಾಡಿದರು. ಆದರೆ ಏಕಾಗಬಾರದು? ಅದೊಂದು ಪ್ರಯೋಗವಾಗಿ ಆದರೆ ಎಷ್ಟು ಚೆಂದ ಅನ್ನಿಸಿತು. ಛಾಯಾಗ್ರಾಹಕಿ ಯಾರೂ ಸಿಕ್ಕದೆ ಹೋದ್ದರಿಂದ ಕೈ ಬಿಡಬೇಕಾಯಿತು.

ನಾನು ಪದ್ಮಾವತಿಬಾಯಿ ಇಬ್ಬರೂ ಸೇರಿ ಎಂ.ಕೆ. ಇಂದಿರಾ ಅವರ ಒಪ್ಪಿಗೆ ಪಡೆಯಲು ಹೋದೆವು. ನನ್ನ ಪರಿಚಯ ಕೊಂಚ ಅವರಿಗಿತ್ತು. ಆದರೆ ಅವರ ಬಾಕಿ ಎಲ್ಲಾ ಕಾದಂಬರಿಗಳನ್ನು ಬಿಟ್ಟು ಫಣಿಯಮ್ಮ ಕಾದಂಬರಿಯನ್ನು ಚಲನ ಚಿತ್ರಕ್ಕೆ ಕೇಳಿದ್ದು ಆಶ್ಚರ್ಯವಾಗಿರಬೇಕು. 'ಬಹಳ ಕಷ್ಟ ಹೇಗೆಮಾಡುತ್ತೀರಿ ?' ಎಂದರು. ಆಗ ನನಗೂ ಉತ್ತರ ಗೊತ್ತಿರಲಿಲ್ಲ. ಗೊತ್ತಿಲ್ಲ ಎಂದೇ ಹೇಳಿದೆ.

ಇದು ನಿಜ, ಫಣಿಯಮ್ಮ ಯಾರೇ ಓದಲಿ ಅದನ್ನು ಚಲನ ಚಿತ್ರ ರೂಪದಲ್ಲಿ ಯೋಚಿಸಲೂ ಸಾಧ್ಯವಿಲ್ಲ. ಕಾರಣ ಅದು ಯಾವುದೋ ಒಂದು ಕಾಲದ ಜೀವನ ಕ್ರಮವನ್ನು ಚಿತ್ರಿಸುವ ಕೃತಿ. ಆಗಿದ್ದ ಅಂಚೆ ಮನೆ, ಮನೆಯವರ ಶೈಶವ, ಬಾಲ್ಯ, ರೀತಿನೀತಿಗಳನ್ನು ಸೊಗಸಾಗಿ ವರ್ಣಿಸಿದ್ದಾರೆ. ಇದನ್ನು ಹೇಗಿದೆಯೋ ಹಾಗೇ ಚಿತ್ರ ಮಾಡಿದ್ದರೆ ಬರೇ ಆಗಿನ ಕಾಲದ ದಾಖಲೆಯಾಗುತ್ತಿತ್ತೇ ವಿನಹ ಮತ್ತೇನೂ ಆಗಲು ಸಾಧ್ಯವಿರಲಿಲ್ಲ.

ಇದೇ ಸಂದರ್ಭದಲ್ಲಿ ನಾನು ಎಂ.ಕೆ. ಇಂದಿರಾ ಅವರ ಮನೆಗೆ ಆಗಾಗ್ಗ ಭೇಟಿ ನೀಡಲು ಶುರುಮಾಡಿದೆ. ಅವರೆಂಥಾ ಮಾತುಗಾರರೆಂಬುದು ಎಲ್ಲರಿಗೂ ತಿಳಿದ ವಿಷಯ. 'ಫಣಿಯಮ್ಮ'ನ ಬಗ್ಗೆ ಎಷ್ಟು ಮಾತನಾಡಿದರೂ ಅವರಿಗೆ ತೃಪ್ತಿಯೇ ಆಗುತ್ತಿರಲ್ಲಿಲ್ಲ. ಅವರಿಗೆ ಫಣಿಯಮ್ಮನ ಬಗ್ಗೆ ಅತೀವ ಪೂಜ್ಯಭಾವ ವಿದ್ದುದು ವ್ಯಕ್ತವಾಗುತ್ತಿತ್ತು.

ಆದರೆ ಈ ಮಧ್ಯೆ ಪದ್ಮಾವತಿಬಾಯಿಯವರ ಒಂದೂವರೆ ಲಕ್ಷದ ಬಂಡವಾಳ ದಲ್ಲಿ ಎಲ್ಲವೂ ಆಗಿಬಿಡುವುದಿಲ್ಲ ಎಂಬ ಅಂಶ ಬಹುಬೇಗ ಅನುಭವಕ್ಕೆ ಬಂತು. ಅದನ್ನು ಆಕೆಗೆ ಹೇಳಿದಾಗ ನಾನೇನೊ ಹಣ ದೋಚಿ ಬಿಡುವಂತೆ ಮಾತನಾಡಿದರು. ಉತ್ಸಾಹದಿಂದ ಶುರುವಾದ ಈ ಪ್ರಯೋಗ ಅಲ್ಲಿಗೇ ನಿಂತು ಹೋಯಿತು.

ನಾನು ನಿರ್ದೇಶಕಿಯಾಗಬಲ್ಲೆನೆಂಬ ಆಶೆ, ಧೈರ್ಯ ನನ್ನಲ್ಲಿ ಹುಟ್ಟಿಸಿದ್ದು ಪದ್ಮಾವತಿಬಾಯಿಯೇ. ಅದು ನಿಂತು ಹೋದಾಗ ನಾನೆಲ್ಲೋ ಸೋತು ಹೋಗು ತ್ತಿದ್ದೇನೆಂದು ಒದ್ದಾಡಿ ಹೋದೆ. ಕೊನೆಯದಾಗಿ ಆದದ್ದಾಗಲಿ ಎಂದು ಚಿತ್ರಕಥೆಗೆ

ಒಂದು ಆಕಾರ ಕೊಡುತ್ತಾ ಬಂದೆ. ಚಿತ್ರಕಥೆ ರೂಪಗೊಂಡನಂತರ ಧೈರ್ಯ ಮಾಡಿ ಫಿಲ್ಮ್ ಫೈನಾನ್ಸ್ ಕಾರ್ಪೊರೇಶನ್‌ಗೆ ಕಳುಹಿಸಿಯೇ ಬಿಟ್ಟೆ. ಅದು ಅಲ್ಲಿ ಒಪ್ಪಿಗೆ ಪಡೆಯುತ್ತದೆಂಬ ಧೈರ್ಯವೂ ನಂಬಿಕೆಯೂ ಇರಲೇ ಇಲ್ಲ. ಯಾವಳೋ ಒಬ್ಬ ಅನಾಮಧೇಯ ಮುಡಿ ಹೆಂಗಸಿನ ಕಥೆ ಯಾರಿಗೆ ತಾನೆ ಹಿಡಿಸುತ್ತೆ? ಅಂತೂ ಒಪ್ಪಿಗೆ ಸಿಕ್ಕಿತು. ನನ್ನ ಊಹಾಪೋಹಗಳನ್ನೆಲ್ಲ ಮೀರಿ ತೀರ್ಪು ಸಿಕ್ಕಿತ್ತು. ಬಂಡವಾಳ ಮೂರುಲಕ್ಷ. ಭರದಿಂದ ಕೆಲಸ ಆರಂಭಿಸಿದೆ.

ನನಗಂತೂ ಸೊಗಸಾದ ವರ್ಣನೆಗಳನ್ನು ಬಿಟ್ಟರೆ, ಸಿನಿಮಾ ಮಾಡಲು ಅವಶ್ಯಕವಾದ ವಸ್ತುವೇ ಇಲ್ಲವಲ್ಲ ಎನ್ನಿಸಿತ್ತು. ಯೋಚಿಸಿ ಕೊನೆಗೆ ಬರುವ ನಾಟಕೀಯ ಅಂಶಗಳನ್ನೆಲ್ಲಾ ಒಂದೆಡೆ ಸೇರಿಸಿ ನಂತರ ಹೇಗೆ ಚಿತ್ರಕಥೆ ಬರೆಯಬಹು ದೆಂದು ಯೋಚಿಸೋಣವೆಂದು, ಎಷ್ಟೇ ಯೋಚಿಸಿದರೂ ಎಂ. ಕೆ. ಇಂದಿರಾ ಅವರ ಆಲೋಚನೆಗಳು, ಸಾಂಪ್ರದಾಯಕ ವ್ಯವಸ್ಥೆಗಳು, ರೀತಿ ನೀತಿಗಳು ಫಣಿಯಮ್ಮ ನನ್ನು ಮರೆಸಿಬಿಡುತ್ತಿದ್ದವು. ಆಗ ನನಗನ್ನಿಸಿತು. ಈ ವರ್ಣನೆಗಳ ಬಗ್ಗೆ ತಲೆಕೆಡಿಸಿ ಕೊಳ್ಳದೆ, ನನ್ನ ಮನಸ್ಸು ಫಣಿಯಮ್ಮ, ಸುಬ್ಬಿ, ದಾಕ್ಷಾಯಿಣಿ ಈ ಮೂರು ಪಾತ್ರ ಗಳಲ್ಲಿ ಬರುವ ನಾಟಕೀಯತೆಯ ಸುತ್ತಲೇ ಸುಳಿದಾಡ ಹತ್ತಿತು. ಹಾಗಾಗಿ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಫಣಿಯಮ್ಮ ತೀರ್ಥಹಳ್ಳಿಯ ಅಣ್ಣನ ಮನೆಗೆ ಹೋದನಂತರ, ತಾನು ಹುಟ್ಟಿದ ಅಂಚೆಮನೆಗೆ ಬರುವುದೇ ಇಲ್ಲ. ನಾನವಳನ್ನು ಸಿಂಕಿ ಹೆರಿಗೆಯ ನೆಪದಿಂದ ಅಂಚೆಮನೆಗೆ ಬರುವಂತೆ ಮಾಡಿ, ಮನೆಯಲ್ಲೆಲ್ಲಾ ಸುತ್ತಾಡುವಾಗ ಬಂದ ನೆನಪುಗಳಂತೆ (flash back) ತಂತ್ರ ಉಪಯೋಗಿಸಿ ನಾಟಕೀಯವಾಗಿ ಮಾಡಿದೆ. ಕಥೆಯ ಆಯಾಮಕ್ಕೆ ನನ್ನದೇ ವಿಶ್ಲೇಷಣೆ ತಂದೆ.

ಸಾಹಿತ್ಯ ಮತ್ತು ಚಲನಚಿತ್ರ ಎರಡೂ ಪ್ರತ್ಯೇಕ ಮಾಧ್ಯಮಗಳು. ಇತ್ತೀಚೆಗೆ ಲೇಖಕಿಯರು ಚಲನಚಿತ್ರಕ್ಕೆಂದೇ ಕಾದಂಬರಿಗಳನ್ನು ಬರೆಯುವುದುಂಟು. ಆದರೆ ಫಣಿಯಮ್ಮ ಹಾಗೆ ಬರೆದದ್ದೇ ಅಲ್ಲ. ಒಂದು ಸಾಹಿತ್ಯವನ್ನು ಚಿತ್ರ ಮಾಧ್ಯಮಕ್ಕೆ ಅಳವಡಿಸುವಾಗ ಸಾಹಿತ್ಯ ಕೃತಿಯ ಸತ್ವವನ್ನು ಗ್ರಹಿಸಿಕೊಂಡು ತನ್ನದೇ ಆದ ಮಾಧ್ಯಮದಲ್ಲಿ ರೂಪುಗೊಳ್ಳುತ್ತಾ ಹೋಗಬೇಕು. ಹಾಗಾದಾಗ ಮಾತ್ರ ಮೂಲ ಕೃತಿಗೆ ನ್ಯಾಯ ದೊರಕುತ್ತೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಬರೆದ ಚಿತ್ರಕಥೆಯನ್ನು ತಿದ್ದುತ್ತಾ ಹೋದೆ.

ಇನ್ನು ಫಣಿಯಮ್ಮ ನನಗೇಕೆ ಇಷ್ಟವಾಯಿತು? ಫಣಿಯಮ್ಮನ ಪಾತ್ರದಿಂದಾಗಿ.

ಇದು ಚಲನಚಿತ್ರವಾದ ಮೇಲೆ ಪ್ರಶಸ್ತಿಗಾಗಿ ನೋಡಿದ ಸಮಿತಿಯ ಸದಸ್ಯರುಗಳಿಗೆ ಕಂಡಿದ್ದು ಜಾತಿ. ಅದಕ್ಕಾಗಿ ಅದಕ್ಕೆ ಎರಡನೇ ಸ್ಥಾನ. ಜಾತಿ ಎದ್ದು ಕಾಣುತ್ತೇನೋ ನಿಜ. ಸಂಪ್ರದಾಯಗಳಂತೂ ಜಾತಿಯಲ್ಲಿ ಹಾಸು ಹೊಕ್ಕಾಗಿ ಬಿಡುತ್ತವೆ. ಆದರೆ ಯಾವುದೇ ಜಾತಿಯಾದರೂ ತನ್ನದೇ ಸಂಪ್ರದಾಯ ರೀತಿ ನೀತಿಗಳನ್ನು ಹೊಂದಿರುತ್ತದೆ. ಆದರೆ ಇಲ್ಲಿ ಫಣಿಯಮ್ಮನ ಪಾತ್ರವನ್ನು ಅರ್ಥಮಾಡಿ ಕೊಂಡಾಗ, ಆಕೆ ಯಾವ ಜಾತಿಯವಳೇ ಬೇಕಾದರೂ ಆಗಿರಬಹುದು, ಯಾವ ದೇಶದವಳೇ ಆಗಿರಬಹುದು. ಆದ್ದರಿಂದಲೇ "ಫಣಿಯಮ್ಮ" universal ಆದದ್ದು. ಹಾಗೇ ಸಂಸ್ಕಾರವನ್ನು ತೆಗೆದುಕೊಂಡರೆ ಅಲ್ಲಿ ಜಾತಿಗೇ ಪ್ರಾಮುಖ್ಯ. ಹಾಗೇ ವಂಶವೃಕ್ಷ ವನ್ನು ತೆಗೆದುಕೊಂಡರೆ ಅಲ್ಲಿ ಶ್ರೋತ್ರಿ ಹಾಗೂ ಕಾತ್ಯಾಯಿನಿ ಮುಖ್ಯವಾಗುತ್ತಾರೆ. ಫಣಿಯಮ್ಮನಿಗೂ ಕಾತ್ಯಾಯಿನಿಗೂ ಹೋಲಿಸಿ ನೋಡಿದರೆ, ಕಾತ್ಯಾಯಿನಿ ಪಾಪ ಪ್ರಜ್ಞೆಯಿಂದ ಕೊರಗಿ ಸೋಲುವ ಪಾತ್ರ. ಅವಳು ಮಾಡಿದ ಪಾಪವಾದರೂ ಯಾವುದು ? ವಿಧವಾ ವಿವಾಹ! ಅದನ್ನು ಧೈರ್ಯವಾಗಿ ಎದುರಿಸಿ ಬದುಕಲು ಆಗುತ್ತಿರಲಿಲ್ಲವೇ? ಅದೇ ಫಣಿಯಮ್ಮ ಪಾಪವೇನೂ ಮಾಡದಿದ್ದರೂ ಸುತ್ತಮುತ್ತಲಿನ ಜನರ ಜೀವನವನ್ನೇ ಅರ್ಥಮಾಡಿಕೊಂಡು ಗೆದ್ದ ಪಾತ್ರ. ಪಾತ್ರವನ್ನು ನೋಡಿ ಅರ್ಥಮಾಡಿಕೊಳ್ಳುವ ದೃಷ್ಟಿ ಸೀಮಿತವಾಗ ಬಾರದು.

ನನಗಂತೂ ಫಣಿಯಮ್ಮನ ಪಾತ್ರ ಬಹಳವಾಗಿ ಹಿಡಿಸಿತು. ಹೊರಗಿನಿಂದ ನೋಡಲು ಒಬ್ಬ ಸಾಧಾರಣ ಹೆಂಗಸೇನೋ ನಿಜ. ಆದರೆ ಅವಳ ಒಳಹೊಕ್ಕು ಆತ್ಮವಿಶ್ವಾಸವನ್ನು ನೋಡಿದಾಗ ಎಂಥಾ ಅಸಾಧಾರಣ ಹೆಂಗಸು ಎನ್ನುವುದು ಅರ್ಥವಾಗುತ್ತದೆ. ಬಾಲ್ಯವಿವಾಹದ ಸಂಪ್ರದಾಯಕ್ಕೆ ಸಿಕ್ಕಿ, ವಿಧವೆಯಾಗಿ ಬದುಕಿನ ಎಷ್ಟೋ ಅನುಭವಗಳನ್ನೇ ಕಾಣದೆ ಹೋದವಳು. ಆದರೆ ತನಗಾದ ಅನ್ಯಾಯಕ್ಕೆ ಒಂದಿಷ್ಟೂ ಪರಿತಾಪ ಪಡದೆ, ಸುತ್ತಮುತ್ತಲಿನ ಜನರ ಅನುಭವಗಳನ್ನೆಲ್ಲಾ ತನ್ನ ಬರಿದಾದ ಜೀವನದಲ್ಲಿ ತುಂಬಿಕೊಂಡು ತನ್ನ ಅನುಭವ ಪ್ರಪಂಚವನ್ನು ದೊಡ್ಡದು ಮಾಡಿಕೊಂಡ ಹಿರಿತನ ಅವಳದು. ತಾನು ನಿಜ ಜೀವನದಲ್ಲಿ ಏನನ್ನೂ ಅನುಭವಿಸದೇ ಹೋದರೂ ಜೀವನದ ಎಲ್ಲಾ ಸಮಸ್ಯೆ ಗಳನ್ನು ಅನುಭವಗಳನ್ನು ಕಂಡೂ ಕಾಣದಂತೆ ನೋಡಿ ಮೂಕಳಾಗಿ ಅನುಭವಿಸು ತ್ತಾಳೆ. ಇದೇನಾ ಜೀವನ! ಎಂದು ಆಶ್ಚರ್ಯಪಡುತ್ತಾಳೆ. ತನ್ನ ಸೀಮಿತ ಶಕ್ತಿ ಯನ್ನು ಅರ್ಥ ಮಾಡಿಕೊಂಡು ತಾನು ಜೀವನದಲ್ಲಿ ಮಾಡಬೇಕಾದ್ದೇನು ? ತನ್ನ ಕೈಲಿ ಏನು ಸಾಧ್ಯ? ಎಂಬುದನ್ನೆಲ್ಲಾ ಯಾವ ಗಂಡಸಿನ ಸಹಕಾರವೂ ಇಲ್ಲದೆ ತಾನೇ ನಿರ್ಧರಿಸಿ, ಸುತ್ತಮುತ್ತಲಿನ ಜನಕ್ಕೆ ನೆರವಾಗಿ ತುಂಬಿದ ಕೊಡದಂತೆ ಬಾಳಿ ಬದುಕು ತ್ತಾಳೆ. ನೂರು ವರುಷಗಳ ಹಿಂದೆ ಯಾವುದೋ ಹಳ್ಳಿಯಲ್ಲಿ ಜನಿಸಿದ ಒಬ್ಬ

ಅನಾಮಧೇಯ, ಅವಿದ್ಯಾವಂತ ಹೆಣ್ಣು ತನ್ನ ಜೀವನವನ್ನು ತಾನೇ ರೂಪಿಸಿಕೊಂಡ ರೀತಿ ಸಾಧಾರಣವೇನಲ್ಲ. ನಮ್ಮಲ್ಲಿ ಹೆಂಗಸಿಗೆ ಇಂಥಾ ಘಟನೆಗಳೇನಾದರೂ ಆದರೆ, ಜೀವನ ಪೂರ ಪರಿತಪಿಸುತ್ತಲೇ ಇರುತ್ತಾರೆ. ಫಣಿಯಮ್ಮನಂತೆ ಪರಿತಪಿಸದೆ ಜೀವನ ವನ್ನು ರೂಪಿಸಿಕೊಳ್ಳುವವರ ಸಂಖ್ಯೆ ಬೆರಳೆಣಿಸುವಷ್ಟು.

ಆದರೂ 'ಫಣಿಯಮ್ಮ'ನಂಥ ಪಾತ್ರಗಳನ್ನು ನಾವು ಸರ್ವೇ ಸಾಮಾನ್ಯವಾಗಿ ನೋಡುತ್ತಲೇ ಇರುತ್ತೇವೆ. ಅವರು ತಮ್ಮನ್ನು ತಾವು ಸಮಾಜಕ್ಕೆ ಅರ್ಪಿಸಿಕೊಳ್ಳುವ ರೀತಿ, ಪರಿತಪಿಸದೆ ಸುತ್ತ ಮುತ್ತಲಿನ ಪ್ರಪಂಚವೇ ತಮ್ಮದೆಂಬ ರೀತಿಯಲ್ಲಿ ನಡೆಯುವಿಕೆ ಆಶ್ಚರ್ಯವನ್ನುಂಟು ಮಾಡುತ್ತೆ.

ಹಾಗಂತ ಇದು ಬರೀ ಫಣಿಯಮ್ಮನ ಕಥೆಯಾಗಿ ಚಿತ್ರದಲ್ಲಿ ತೋರಿಸಿಲ್ಲ. ಹೆಂಗಸಿನ ಆತ್ಮ ಬಲದ ನಾನಾ ಮುಖಗಳನ್ನು ತೋರಿಸುವ ಕಥೆ. ಒಬ್ಬ ವ್ಯಕ್ತಿಯ ಆತ್ಮ ಬಲದಲ್ಲಿ ನನಗೆ ಪೂರಾ ನಂಬಿಕೆಯಿದೆ. ಪ್ರತಿಯೊಬ್ಬ ಹೆಂಗಸಿನಲ್ಲೂ ಸಮರ್ಪಿಸಿ ಕೊಳ್ಳುವ ಹಾಗೂ ವಿರೋಧಿಸುವ ಶಕ್ತಿ ಎರಡೂ ಇದ್ದೇ ಇರುತ್ತೆ.

ಫಣಿಯಮ್ಮ ಹೊಸತನ್ನು ಸ್ವೀಕರಿಸುವ ಶಕ್ತಿ ಪಡೆದಿದ್ದರೂ, ಅವಳಿಗೆ ಎದುರಿಸುವ ಮನಸ್ಥೈರ್ಯ ಇಲ್ಲ. ಸುಬ್ಬಿಯಲ್ಲಿ ಮೊದಲು ವಿರೋಧಿಸುವ ಶಕ್ತಿ ಕಂಡು ಬರುತ್ತೆ. ಸುಬ್ಬಿಯ ಮೂಲಕ ಫಣಿಯಮ್ಮ ಜೀವನದ ಮತ್ತೊಂದು ಮುಖ ವನ್ನು ಕಂಡುಕೊಳ್ಳುತ್ತಾಳೆ. ಇದು ಪೂರ್ಣವಾಗಿ ಅರಳುವುದು ಕಥೆಯ ಕೊನೆಯಲ್ಲಿ ಬರುವ ದಾಕ್ಷಾಯಿಣಿಯ ಪಾತ್ರದಲ್ಲಿ. ದಾಕ್ಷಾಯಿಣಿ ಬಾಲ ವಿಧವೆಯಾದಾಗ, ಫಣಿಯಮ್ಮ ಮೂಕಳಾಗಿ ಒಪ್ಪಿಕೊಂಡ ಸಂಪ್ರದಾಯವನ್ನು ವಿರೋಧಿಸಿ ಪ್ರತಿಭಟಿಸಿ ನಿಲ್ಲುತ್ತಾಳೆ. ಹೆಂಗಸಿನ ವಿರುದ್ಧ ಸ್ವಭಾವಗಳು ಪ್ಲಸ್ ಮೈನಸ್ ಇದ್ದ ಹಾಗೆ. ಫಣಿಯಮ್ಮ ಎಲ್ಲವನ್ನು ಒಪ್ಪಿಕೊಂಡರೂ, ತನ್ನ ಜೀವನವನ್ನು ತನಗೆ ಸರಿ ಎನ್ನಿಸಿದ ರೀತಿಯಲ್ಲಿ ರೂಪಿಸಿಕೊಂಡವಳು. ಅದೇ ದಾಕ್ಷಾಯಿಣಿ ತದ್ವಿರುದ್ಧ ರೀತಿಯಲ್ಲಿ ಸಿಡಿದೆದ್ದು ಸಂಪ್ರದಾಯವನ್ನು ತುಳಿದು ತನ್ನ ಜೀವನವನ್ನು ರೂಪಿಸಿಕೊಂಡಾಗ, ಫಣಿಯಮ್ಮ ಕಾಲ ಬದಲಾದ ಹಾಗೆ ಅದೂ ಸಹ ಸರಿ ಎಂದು ಒಪ್ಪಿಕೊಳ್ಳುತ್ತಾಳೆ. ಇದು ಅವಳ ದೊಡ್ಡತನವನ್ನು ತೋರಿಸುತ್ತದಲ್ಲದೆ, ಅವಳ ಮನಸ್ಸಿನಲ್ಲಿ ಅಡಗಿದ್ದ ವಿರೋಧಿಸುವ, ಪ್ರತಿಭಟಿಸುವ ಶಕ್ತಿ ದಾಕ್ಷಾಯಿಣಿಯಲ್ಲಿ ಸ್ಫೋಟಗೊಳ್ಳುತ್ತದೆ. ಹೀಗೆ ಫಣಿಯಮ್ಮ ಬರೀ ಫಣಿಯಮ್ಮನ ಚರಿತ್ರೆಯಾಗದೆ ಹೆಂಗಸಿನ ಅಸಹಾಯಕತೆ, ನೋವು, ರೊಚ್ಚು, ಸಮರ್ಪಣೆ ಎಲ್ಲವನ್ನೂ ತೋರಿಸುತ್ತದೆ.

ಇಂಥಾ ಮಾನವೀಯ ದೃಷ್ಟಿಕೋನವುಳ್ಳ ಹೆಂಗಸಿನ ಪಾತ್ರದ ಚಿರಿಮೆಗಾಗಿ ನಾನು ಫಣಿಯಮ್ಮ ಮಾಡಿದೆನೇ ಹೊರತು, ಜಾತಿಯನ್ನು ಎತ್ತಿ ತೋರಿಸಲು ಖಂಡಿತ ಅಲ್ಲ. ಒಂದು ಮಾತಿದೆ 'ಸಂಪ್ರದಾಯಗಳು ಎಷ್ಟು ಕ್ರೂರವೋ, ಪ್ರಕೃತಿ ಅಷ್ಟೇ ಮೆದು' ಎಂದು. ಫಣಿಯಮ್ಮನನ್ನು ಪ್ರಕೃತಿಗೆ ಹೋಲಿಸುವ ಪ್ರಯತ್ನ ಚಿತ್ರದಲ್ಲಿ ಮಾಡಿರುವುದೇ ಇದಕ್ಕೆ.

ಇನ್ನು ಚಿತ್ರೀಕರಣದ ಬಗ್ಗೆ, ಶ್ರೀಮತಿ ಎಂ.ಕೆ. ಇಂದಿರಾ ಅವರು 'ಫಣಿಯಮ್ಮ' ಚಿತ್ರೀಕರಿಸಲು ಒಪ್ಪಿಗೆ ನೀಡಿದ್ದಲ್ಲದೆ, ಹಳ್ಳಿಗಳನ್ನು ನೋಡಲು ಮನೆಗಳನ್ನು ಹುಡುಕಲು ನಮ್ಮ ಜತೆ ಬಂದರು. ಸುಮಾರು 50 ಹಳ್ಳಿಗಳನ್ನು ತೋರಿಸಿದರು, ಫಣಿಯಮ್ಮ ಹುಟ್ಟಿದ ಬೆಳೆದ ಮನೆಗೂ ಕರೆದೊಯ್ದರು. ಕೊನೆಗೆ ಶೀರನಾಳಿ ಮಂಜುನಾಥ ಭಟ್ಟರ ಮನೆ ಪ್ರಶಸ್ತವಾದ್ದರಿಂದ ಒಪ್ಪಿಗೆಯಾಯಿತು. ಮಲೆನಾಡ ಸೆರಗು. ಸುತ್ತಲೂ ಕಾಡು. ಹಾವುಗಳ ಹಾವಳಿ ಬೇರೆ. ಯಾವುದೋ ಕಾಲದ ಅರಮನೆಯನ್ನು ನೆನಪಿಸುವಂಥಾ ಮನೆ. ಅಪಾಯ ಬಂದರೆ ರಕ್ಷಣೆಗಾಗಿ ಕೂಗಿದರೂ ನರಪ್ರಾಣಿ ಸುಳಿದಾಡದಂಥಾ ನಿರ್ಜನ ಪ್ರದೇಶ. ಏನು ಬೇಕೆಂದರೂ ತೀರ್ಥಹಳ್ಳಿ ಅಥವಾ ಮೇಗರವಳ್ಳಿಗೇ ಹೋಗಬೇಕು.

ಆದರೆ ಹಳ್ಳಿಯವರ ಸಹಕಾರ ಬಹಳ ದೊಡ್ಡದು. ಊಟದ ವ್ಯವಸ್ಥೆಯೇ ಆಗಲಿ, ಹಳೆಯ ಕಾಲದ ಒಡವೆ ವಸ್ತುಗಳನ್ನು ಒದಗಿಸುವುದರಲ್ಲೇ ಆಗಲಿ ಅವರ ಚಾಕಚಕ್ಯತೆ ಎಂದೂ ಮರೆಯಲಾಗುವುದಿಲ್ಲ. ನನ್ನ ಕೆಲಸದಲ್ಲಿ ನಂಬಿಕೆಯುಳ್ಳ ನನ್ನ ಸ್ನೇಹಿತರ ತಂಡವೇ ನನ್ನ ಬೆಂಗಾವಲಿಗೆ ಒಂದು ನಿಂತಿತು. ಆ ದೊಡ್ಡ ಮನೆಯಲ್ಲಿ ಒಂದು ತಿಂಗಳಕಾಲ ಎಲ್ಲರಿಗೂ ಅಲ್ಲೇ ವಾಸ, ಅಲ್ಲೇ ಊಟದ ವ್ಯವಸ್ಥೆ. ಅಲ್ಲೇ ಶೂಟಿಂಗ್ ಸಹ.

ಮೊದಲ ರಾತ್ರಿಯ ಘಟನೆ. ಸುಸ್ತಾಗಿದ್ದ ನಾನು ಗಾಢ ನಿದ್ರೆಯಲ್ಲಿ ಮುಳುಗಿದ್ದೆ. ಒಂದು ಮಂಡಲದ ಹಾವು ಒಳಗೆ ಬಂದಿತ್ತಂತೆ. ಎಲ್ಲರೂ ಕೂಗಾಡಿ, ಹಾರಾಡಿದರೂ ನನಗೆ ಎಚ್ಚರವೇ ಇಲ್ಲ. ಹಾವನ್ನು ಯಾರೋ ಹಿಡಿದು ಕೊಂದು ಹಾಕಿದರಂತೆ. ನಾವು ಚಿತ್ರೀಕರಣ ನಡೆಸುತ್ತಿರುವಾಗಲೇ ಹಾವಿನ ಮರಿಗಳು ಮನೆಯಲ್ಲೇ ಓಡಾಡುತ್ತಿದ್ದುವು. ಇದಾದ ಮೂರು ನಾಲ್ಕು ದಿನ ಚಿತ್ರೀಕರಣ ಸರಾಗವಾಗಿ ನಡೆಯಿತು. ಮತ್ತೆ ಕಿರುಚಾಟದ ಸದ್ದು. ನನಗೂ ಎಚ್ಚರವಾಯ್ತು. ಲೈಟ್ ಬಾಯ್ಸ್ ಒಂದು ಬಿಳೀ ಸೀರೆಯುಟ್ಟ ಹೆಂಗಸು ಹೋಗುತ್ತಿರುವುದನ್ನು ನೋಡಿದರಂತೆ. ಆ ಮನೆಯಲ್ಲಿ ಒಂದು ಹೆಂಗಸಿನ ಭೂತ ಇದೆಯೆಂದು ಮಂಜುನಾಥ

ಭಟ್ಟರು ಹೇಳಿದರು. ಭಯವೇನಿಲ್ಲ ಒಳ್ಳೇ ಭೂತ. ಅಷ್ಟ ದಿಗ್ಬಂಧನ ಕೂಡ ಮಾಡಿಸಿಯಾಗಿದೆ. ಏನೂ ಯೋಚಿಸಬೇಡಿ ಎಂದರು. ನನಗದರಲ್ಲೆಲ್ಲಾ ನಂಬಿಕೆ ಇಲ್ಲದ್ದರಿಂದ ಸುಮ್ಮನೇ ಇದ್ದುಬಿಟ್ಟೆ. ಮತ್ತೆ ಮತ್ತೆ ಆ ಭೂತ ಕಾಣಿಸಿಕೊಳ್ಳುತ್ತಲೇ ಇತ್ತೆಂದು ಲೈಟ್ ಬಾಯ್ಸ್ ಹೇಳುತ್ತಿದ್ದರು. ಹೆದರಿಕೆಯಿಂದ ಅವರುಗಳು ನಿದ್ರೆಯೇ ಮಾಡುತ್ತಿರಲಿಲ್ಲ.

ಫಣಿಯಮ್ಮ ಮೂರೂವರೆ ಲಕ್ಷದಲ್ಲಿ ಮುಗಿಸಿದಂಥಾ ಚಿತ್ರ. ನಟನಟಿಯರ ಸಹಕಾರ ದೊಡ್ಡದು. ಎಲ್ಲರೂ ಒಂದೇ ಫ್ಯಾಮಿಲಿಯಂತೆ ಇದ್ದೆವು. ಯಾರೂ ಹೆಚ್ಚಲ್ಲ, ಯಾರೂ ಕಡಿಮೆಯಿಲ್ಲ. ಎಷ್ಟೋ ಸಲ ಚಿತ್ರ ನೋಡಿದಾಗ ನನಗನ್ನಿಸುವುದು, "ಇನ್ನೂ ಕೊಂಚ ಹಣ ದೊರಕಿದ್ದರೆ ಆ ದೃಶ್ಯ ಇನ್ನೂ ಚೆನ್ನಾಗಿ ಮಾಡಬಹುದಿತ್ತೇನೋ" ಎಂದು. ಇದೇ ಮಾತನ್ನು ಮೃಣಾಲ್ ಸೇನರ ಹತ್ತಿರ ಹೇಳಿದಾಗ "ಇಲ್ಲ. ಹಣಜಾಸ್ತಿ ಇದ್ದಿದ್ದರೆ ನೀನು ಖಂಡಿತ ಚಿತ್ರವನ್ನು ಕೆಡಿಸಿಬಿಡುತ್ತಿದ್ದೆ' ಎಂದರು. ಒಮ್ಮೊಮ್ಮೆ ಹಾಗೂ ಆಗುವುದುಂಟು.

'ಫಣಿಯಮ್ಮ' ಪ್ರಪಂಚವನ್ನೆಲ್ಲಾ ಸುತ್ತಿ ಬಂದಿದ್ದಾಳೆ. ಇಂಗ್ಲೆಂಡ್, ಪ್ಯಾರಿಸ್, ಜರ್ಮನಿ, ಇಟಲಿ, ಫ್ರಾನ್ಸ್, ಪೋಲೆಂಡ್, ಪೋರ್ಚುಗಲ್, ಜಪಾನ್, ಹವಾಯ್, ಅಮೆರಿಕದ ಹದಿಮೂರು ದೇಶಗಳು. ಒಬ್ಬಳೇ ಹೋಗಲಿಲ್ಲ, ನನ್ನನ್ನೂ ಕರೆದೊಯ್ದಳು; ಇಂದು ಎಲ್ಲರ ಮನಸ್ಸಿನಲ್ಲೂ ಇದ್ದಾಳೆ. ನನ್ನ ನಿರೀಕ್ಷೆಗೆ ಮೀರಿ ಚಿತ್ರ ಸಫಲವಾಯಿತು. ಎಲ್ಲರ ಶ್ರಮ ಸಾರ್ಥಕವಾಯಿತೆಂದು ಅನ್ನಿಸುತ್ತದೆ.

ಇಂದು 'ಫಣಿಯಮ್ಮ' ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಸೇರಿ ಹೋಗಿದ್ದಾಳೆ. ಅದು ಎಂ.ಕೆ. ಇಂದಿರಾ ಅವರಿಗೂ, ನನಗೂ ಹೆಮ್ಮೆಯ ವಿಷಯ.

ಅನುಬಂಧ

ಎಂ. ಕೆ. ಇಂದಿರಾ ಕೃತಿಸಿರಿ

○

○

○ **ಕಾದಂಬರಿಗಳು**

1.	ತುಂಗಭದ್ರ	1963	ಮನೋಹರ ಗ್ರಂಥಮಾಲೆ, ಧಾರವಾಡ
2.	ಕನಸು–ನನಸು	1965	ಹೇಮಂತ ಪ್ರಕಾಶನ, ಬೆಂಗಳೂರು
3.	ಹೆಣ್ಣಿನ ಆಕಾಂಕ್ಷೆ	1966	ಹೇಮಂತ ಸಾಹಿತ್ಯ, ಬೆಂಗಳೂರು
4.	ಗೆಜ್ಜೆ ಪೂಜೆ	1966	ಎಸ್.ಆರ್. ಪ್ರಕಾಶನ, ಬೆಂಗಳೂರು
5.	ಕಲಾದರ್ಶಿ	1967	ಗೀತಾ ಪಬ್ಲಿಕೇಷನ್ಸ್, ಮೈಸೂರು
6.	ತಾಪದಿಂದ ತಂಪಿಗೆ	1968	ಹಂಸಧ್ವನಿ ಪ್ರಕಾಶನ, ಬೆಂಗಳೂರು
7.	ತಪೋವನದಲ್ಲಿ	1968	ಗೀತಾ ಪಬ್ಲಿಕೇಷನ್ಸ್, ಮೈಸೂರು
8.	ಬ್ರಹ್ಮಚಾರಿ	1969	ಗೀತಾ ಪಬ್ಲಿಕೇಷನ್ಸ್, ಮೈಸೂರು
9.	ಬಿದಿಗೆ ಚಂದ್ರಮ ಡೊಂಕು	1969	ಪ್ರಕಾಶ ಸಾಹಿತ್ಯ, ಬೆಂಗಳೂರು
10.	ಗಿರಿಬಾಲೆ	1969	ಎಸ್. ಆರ್. ಪ್ರಕಾಶನ, ಬೆಂಗಳೂರು
11.	ನಾಗವೀಣಾ	1969	ಪ್ರಕಾಶ ಸಾಹಿತ್ಯ, ಬೆಂಗಳೂರು
12.	ಮನ ತುಂಬಿದ ಮಡದಿ	1969	—
13.	ಚಿದ್ವಿಲಾಸ	1971	ಹೇಮಂತ ಸಾಹಿತ್ಯ, ಬೆಂಗಳೂರು
14.	ಸುಖಾಂತ	1972	ವಾಸವಾಂಬ ಪ್ರಕಾಶನ, ಬೆಂಗಳೂರು
15.	ಯಾರು ಹಿತವರು	1972	—
16.	ಮನೆ ಕೊಟ್ಟು ನೋಡು	1972	ಎಸ್. ಆರ್. ಪ್ರಕಾಶನ, ಬೆಂಗಳೂರು
17.	ಮುಸುಕು	1972	ಪ್ರಕಾಶ ಸಾಹಿತ್ಯ, ಬೆಂಗಳೂರು
18.	ಆತ್ಮಸಖಿ	1972	ಪ್ರಕಾಶ ಸಾಹಿತ್ಯ, ಬೆಂಗಳೂರು
19.	ಡಾಕ್ಟರ್	1973	ಹೇಮಂತ ಪ್ರಕಾಶನ, ಬೆಂಗಳೂರು
20.	ಟು-ಲೆಟ್	1973	ಎಸ್. ಆರ್. ಪ್ರಕಾಶನ, ಬೆಂಗಳೂರು
21.	ಜಾತಿ ಕೆಟ್ಟವಳು	1973	ಹೇಮಂತ ಪ್ರಕಾಶನ, ಬೆಂಗಳೂರು
22.	ಹೂ ಬಾಣ	1973	ಪ್ರಕಾಶ ಸಾಹಿತ್ಯ, ಬೆಂಗಳೂರು
23.	ಕತೆಗಾರ	1974	ವಾಸವಾಂಬ ಪ್ರಕಾಶನ, ಬೆಂಗಳೂರು

24.	ಸದಾನಂದ	1975	ಇಂದಿರಾ ಪ್ರಕಾಶನ, ಬೆಂಗಳೂರು
25.	ಕೂಚುಭಟ್ಟ	1975	ಹೇಮಂತ ಸಾಹಿತ್ಯ, ಬೆಂಗಳೂರು
26.	ಹಸಿವು	1975	ಹೇಮಂತ ಪ್ರಕಾಶನ, ಬೆಂಗಳೂರು
27.	ಮಧುವನ	1976	ಹೇಮಂತ ಸಾಹಿತ್ಯ, ಬೆಂಗಳೂರು
28.	ಫಣಿಯಮ್ಮ	1976	ಹೇಮಂತ ಸಾಹಿತ್ಯ, ಬೆಂಗಳೂರು
29.	ಜಾಲ	1976	ಪ್ರಕಾಶ ಸಾಹಿತ್ಯ, ಬೆಂಗಳೂರು
30.	ಗುಂಡ	1977	ರವೀಂದ್ರ ಪುಸ್ತಕಾಲಯ, ಶಿವಮೊಗ್ಗ
31.	ಆಭರಣ	1979	ಪ್ರಕಾಶ ಸಾಹಿತ್ಯ, ಬೆಂಗಳೂರು
32.	ಒಂದೇ ನಿಮಿಷ	1979	ಪ್ರಕಾಶ ಸಾಹಿತ್ಯ, ಬೆಂಗಳೂರು
33.	ನೂರೊಂದು ಬಾಗಿಲು	1980	ಹೇಮಂತ ಸಾಹಿತ್ಯ, ಬೆಂಗಳೂರು
34.	ಪೂರ್ವಾಪರ	1980	ರವೀಂದ್ರ ಪ್ರಕಾಶನ, ಬೆಂಗಳೂರು
35.	ರಸವಾಹಿನಿ	1980	ಪ್ರಕಾಶ ಸಾಹಿತ್ಯ, ಬೆಂಗಳೂರು
36.	ಅಮರಾವತಿ	1981	ಪ್ರಕಾಶ ಸಾಹಿತ್ಯ, ಬೆಂಗಳೂರು
37.	ತುಳಿದವರು	1982	ಹೇಮಂತ ಸಾಹಿತ್ಯ, ಬೆಂಗಳೂರು
38.	ಮನೋಮಂದಿರ	1983	ಹೇಮಂತ ಸಾಹಿತ್ಯ, ಬೆಂಗಳೂರು
39.	ಸೂತ್ರಧಾರ	1984	ಜೈಸು ಪ್ರಕಾಶನ, ಶಿಕಾರಿಪುರ
40.	ತೆಗ್ಗಿನ ಮನೆ ಸೀತೆ	1984	ಪ್ರಕಾಶ ಸಾಹಿತ್ಯ, ಬೆಂಗಳೂರು
41.	ವರ್ಣಲೀಲೆ	1985	ಹೇಮಂತ ಸಾಹಿತ್ಯ, ಬೆಂಗಳೂರು
42.	ಅಗೋಚರ	1985	ಪ್ರಕಾಶ ಸಾಹಿತ್ಯ, ಬೆಂಗಳೂರು
43.	ಕಲ್ಪವೃಕ್ಷ	1986	ಪ್ರಕಾಶ ಸಾಹಿತ್ಯ, ಬೆಂಗಳೂರು
44.	ಕಲಾಸಂಗಮ	—	—
45.	ಶಾಂತಿಧಾಮ	1986	—
46.	ಕೆಸರಿನ ಕಮಲ	—	—
47.	ಸಂದರ್ಶನ	—	—
48.	ಹಂಸಗಾನ	—	—

○

○

○ **ಕಥಾಸಂಕಲನಗಳು**

1.	ನವರತ್ನ	1967	ಹೇಮಂತ ಸಾಹಿತ್ಯ, ಬೆಂಗಳೂರು
2.	ನಗಬೇಕು	1968	ಎಸ್. ಆರ್. ಪ್ರಕಾಶನ, ಬೆಂಗಳೂರು

3.	ಚೆಲ್ಲಿದ ನೀರು	1969	
4.	ಅಂಬರದ ಅಪ್ಸರೆ	1970	ಹಂಸಧ್ವನಿ ಪ್ರಕಾಶನ, ಬೆಂಗಳೂರು
5.	ಸ್ಫೂರ್ತಿ	1971	ಪ್ರಕಾಶ ಸಾಹಿತ್ಯ, ಬೆಂಗಳೂರು
6.	ದಶಾವತಾರ	1973	ಹೇಮಂತ ಸಾಹಿತ್ಯ, ಬೆಂಗಳೂರು
7.	ಕಲ್ಪನಾ ವಿಲಾಸ	1974	ಪ್ರಕಾಶ ಸಾಹಿತ್ಯ, ಬೆಂಗಳೂರು
8.	ಸುಸ್ವಾಗತ	1976	ಪ್ರಕಾಶ ಸಾಹಿತ್ಯ, ಬೆಂಗಳೂರು
9.	ಪವಾಡ	1977	ಪ್ರಕಾಶ ಸಾಹಿತ್ಯ, ಬೆಂಗಳೂರು
10.	ಕವಲು	1979	ಪ್ರಕಾಶ ಸಾಹಿತ್ಯ, ಬೆಂಗಳೂರು
11.	ಮೋಹನ ಮಾಲೆ	1980	ಸುರೇಶ ಪ್ರಕಾಶನ, ಬೆಂಗಳೂರು
12.	ಪೌರ್ಣಿಮೆ	1980	ಇಂದಿರಾ ಪ್ರಕಾಶನ, ಬೆಂಗಳೂರು
13.	ಅನುಭವ ಕುಂಜ	1981	ಹೇಮಂತ ಸಾಹಿತ್ಯ, ಬೆಂಗಳೂರು
14.	ಕನ್ಯಾಕುಮಾರಿಯರಿಗೆ	1982	ಹೇಮಂತ ಸಾಹಿತ್ಯ, ಬೆಂಗಳೂರು
15.	ನವಜೀವನ	1970	—

○
○
○ **ಇತರ ಕೃತಿಗಳು**

1.	ಕನ್ನಡ ಚಿತ್ರಶಿಲ್ಪಿ ಪುಟ್ಟಣ್ಣ ಕಣಗಾಲ್	1970	ಹೇಮಂತ ಸಾಹಿತ್ಯ, ಬೆಂಗಳೂರು
2.	ಚಿತ್ರಭಾರತ	1985	ಹೇಮಂತ ಸಾಹಿತ್ಯ, ಬೆಂಗಳೂರು

ಬರಹದ ಸಿದ್ಧತೆಯಲ್ಲಿ

“ ಬಿಂದು ”

“ಸುರಗಿ” ಲೇಖಕರ ವಿಳಾಸಗಳು

○

○

ಹೇಮಲತಾ ಮಹಿಷಿ
ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು-560 012

ಡಾ. ಪು. ತಿ. ನರಸಿಂಹಾಚಾರ್
11ನೇ ಮುಖ್ಯ ರಸ್ತೆ, ಜಯನಗರ ‘ಟಿ’ ಬ್ಲಾಕ್, ಬೆಂಗಳೂರು-560 041

ಎಚ್. ಎಸ್. ಪಾರ್ವತಿ
‘ಸ್ನೇಹ’ 3368, 13ನೇ ಕ್ರಾಸ್, ಶಾಸ್ತ್ರಿನಗರ, ಬೆಂಗಳೂರು-560 028

‘ರಾಮ್ಸ್ವಾಮಿ’
ಎಂ. ಎಸ್. ರಾಮಸ್ವಾಮಿ, 151/3, ಛಾಯಾ ನಿವಾಸ, ಆರ್. ವಿ. ರಸ್ತೆ
ವಿಶ್ವೇಶ್ವರಪುರ, ಬೆಂಗಳೂರು-560 004

ಅನುಪಮಾ ನಿರಂಜನ
'ಕಥೆ', 515, 7ನೇ ಮೇನ್, 5ನೇ ಬ್ಲಾಕ್, 46ನೇ ಕ್ರಾಸ್, ಜಯನಗರ
ಬೆಂಗಳೂರು-560 041

ಡಾ. ಎ. ಎಸ್. ವೇಣುಗೋಪಾಲರಾವ್
ರೀಡರ್ ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಕಮಲಾ ನೆಹರೂ ಮಹಿಳಾ ಕಾಲೇಜ್
ಶಿವಮೊಗ್ಗ

ಲಲಿತಾ ರಾಮಚಂದ್ರರಾವ್
ನಂ. 617 (ಮಹಡಿ), 15ನೇ ಮುಖ್ಯ ರಸ್ತೆ, 22ನೇ ತಿರುವು
ಬನಶಂಕರಿ ಎರಡನೇ ಹಂತ, ಬೆಂಗಳೂರು-560 070

ಸೂರ್ಯನಾರಾಯಣ ಚಡಗ
ನಂದನ ಪ್ರಕಾಶನ, ಬನಶಂಕರಿ ನಿಲಯ, ನಂ. 309/12, 4ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560 010

ಡಾ. ಎಚ್. ಎಸ್. ಸುಜಾತಾ
53, 'ಸುಹಾಸ', 6ನೇ ಬ್ಲಾಕ್, ಕುವೆಂಪು ನಗರ, ಮೈಸೂರು-570 023

ಎಚ್. ವಿ. ಸಾವಿತ್ರಮ್ಮ
41, 15ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-560 003

ಡಾ. ಎಚ್. ಕೆ. ರಂಗನಾಥ್
942, 23ನೇ ಮೇನ್, ಜಯನಗರ 'ಟಿ' ಬ್ಲಾಕ್, ಬೆಂಗಳೂರು-560 011

ರಾಂಕಿ
C/o ಎಚ್. ಕೆ. ರಂಗನಾಥ್, 942, 23ನೇ ಮೇನ್, ಜಯನಗರ 'ಟಿ' ಬ್ಲಾಕ್
ಬೆಂಗಳೂರು-560 011

ವೆಂಕಟೇಶ
'ಹೇಮಂತ ಸಾಹಿತ್ಯ', ರಾಜಾಜಿನಗರ ನಾಲ್ಕನೆ ವಿಭಾಗ, ಬೇಗಳೂರು-560 010

ಕೀರ್ತಿನಾಥ ಕುರ್ತಕೋಟಿ
1, ದೇಸಾಯಿ ಕಾಲನಿ, ಯೂನಿವರ್ಸಿಟಿ ಕ್ರಾಸ್, ಧಾರವಾಡ-3

ಶ್ರೀನಿವಾಸ ಉಡುಪ
ಕಮಲಾ ನೆಹರೂ ಕಾಲೇಜ್, ಶಿವಮೊಗ್ಗ

ಪ್ರೇಮಾ ಭಟ್
'ಗುರುಪ್ರಸಾದ', 845, ನಾಲ್ಕನೇ ತಿರುವು, ನಾಲ್ಕನೇ ಮುಖ್ಯ ರಸ್ತೆ
ವಿಜಯನಗರ, ಬೆಂಗಳೂರು-560 040

ಉದಯಾದ್ರಿ
'ಆಕಾಶವಾಣಿ', ಯಾದವಗಿರಿ, ಮೈಸೂರು

ಭುವನೇಶ್ವರಿ ಹೆಗಡೆ
ಉಪನ್ಯಾಸಕಿ, ಅರ್ಥಶಾಸ್ತ್ರ ವಿಭಾಗ, ಸರ್ಕಾರಿ ಕಾಲೇಜು, ಮಂಗಳೂರು-575 001

ಡಾ. ಮಂದಾಕಿನಿ ಪುರೋಹಿತ
C/o ವಿ. ನವಿಲಗುಂದ, ಕಗೆದಾಳ ಕಾಂಪೌಂಡ್, ಸಾರಸ್ವತಪುರ-ಮಂಜುನಾಥಪುರ
ಧಾರವಾಡ-580 002

ಶೇಷನಾರಾಯಣ
21, ಎಂ.ಎಸ್.ಆರ್. ನಗರ, ಮತ್ತೀಕೆರೆ, ಬೆಂಗಳೂರು-560 054

ಡಾ. ಜ್ಯೋತ್ಸ್ನಾ ಕಾಮತ್
110, 'ಶಶಿಕಿರಣ', 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು-560 055

ಬಿ. ಟಿ. ಲಲಿತಾ ನಾಯಕ್
6, 2ನೇ ಬಿ, ಗಾಂಧಿನಗರ, ಕೆ.ಎಚ್.ಬಿ. ಕಾಲೋನಿ, ಯಲಹಂಕ
ಬೆಂಗಳೂರು-560 064

ಕೆ. ವಿಜಯಶ್ರೀ
ಉಪಸಂಪಾದಕಿ, 'ಪ್ರಜಾವಾಣಿ', ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು-560 001

ಕೆ. ಉಷಾ ಪಿ. ರೈ.
345, 'ಸಮೃದ್ಧ', ಲಕ್ಷ್ಮೀ ರಸ್ತೆ, 7ನೇ ಕ್ರಾಸ್, ಶಾಂತಿನಗರ
ಬೆಂಗಳೂರು-560 027

ನಾ. ಡಿಸೋಜ
15:14, 2ನೇ ಕ್ರಾಸ್, ನೆಹರೂ ನಗರ, ಸಾಗರ-577 401

ನೀಳಾದೇವಿ
(41) 85, 10ನೇ ಮೇನ್, ಮಲ್ಲೇಶ್ವರ, ಬೆಂಗಳೂರು-560 003

ಶಾಂತಾ ನಾಗರಾಜ್
161ಎ:16, ಮಹಡಿ, 1ನೇ 'ಎನ್' ವಿಭಾಗ, ರಾಜಾಜಿನಗರ
ಬೆಂಗಳೂರು-560 010

ಬಿ. ಎಸ್. ವೆಂಕಟಲಕ್ಷ್ಮಿ
79, 'ಸಾಯಿರಾಂ', 13ನೇ 'ಬಿ' ಮೇನ್, ಇಂದಿರಾನಗರ
ಎಚ್.ಎ.ಎಲ್. 2ನೇ ಸ್ಟೇಜ್, ಬೆಂಗಳೂರು-560 038

ಡಾ. ವಿಜಯಾ ಸುಬ್ಬರಾಜ್
316:3, ಎರಡನೇ ಮಹಡಿ, 7ನೇ ಮುಖ್ಯ ರಸ್ತೆ, ವೈಯ್ಯಾಲಿಕಾವಲ್
ಬೆಂಗಳೂರು-560 003

ಡಾ. ಬಿ. ಎನ್. ಸುಮಿತ್ರಾ ಬಾಯಿ
73-15, 5ನೇ ಕ್ರಾಸ್, 3ನೇ ಮೇನ್, ಹನುಮಂತನಗರ, ಬೆಂಗಳೂರು-560 019

ಸಾರಾ ಅಬೂಬಕ್ಕರ್
ಮಾರ್ಟಿನ್ ಪಾಯಿಸ್ ರಸ್ತೆ, ಲಾಲ್‌ಬಾಗ್, ಮಂಗಳೂರು-560 004

ವೈದೇಹಿ
3-1-15, ಎನ್-ಬ್ಲಾಕ್, ಹಿರಾಬಾಗ್, ಉಡುಪಿ-576 103

ಎನ್. ಗಾಯತ್ರಿ
ಬಿ-30, ಆರ್.ಬಿ.ಐ. ಸ್ಟಾಫ್ ಕ್ವಾರ್ಟರ್ಸ್, 1ನೇ ಮುಖ್ಯ ರಸ್ತೆ, 9ನೇ ತಿರುವು
ವಿಜಯನಗರ 2ನೇ ಹಂತ, ಬೆಂಗಳೂರು-560 040

ನೇಮಿಚಂದ್ರ
401, 'ವಿಜಯ ಟವರ್ಸ್', 488/1, ಆರ್.ಪಿ.ಸಿ. ಲೇ-ಔಟ್, 2ನೇ ಮೇನ್
8ನೇ ಕ್ರಾಸ್, ವಿಜಯನಗರ 2ನೇ ಹಂತ, ಬೆಂಗಳೂರು-560 040

ಡಾ. ವಿಜಯಾ
153, 4ನೇ ಮುಖ್ಯ ರಸ್ತೆ, 8ನೇ ತಿರುವು, ಚಾಮರಾಜಪೇಟೆ
ಬೆಂಗಳೂರು-560 018

ಪ್ರೇಮಾ ಕಾರಂತ
11, 'ಶ್ರೀಧರ ನಿವಾಸ', ಎನ್.ಆರ್. ಕಾಲೋನಿ, 4ನೇ ಮುಖ್ಯರಸ್ತೆ,
ಬೆಂಗಳೂರು-560 019

ಎಪ್ಪತ್ತೈದು ಸಾರ್ಥಕ ವಸಂತಗಳನ್ನು ದಾಟಿ, ಕನ್ನಡ ಸಾರಸ್ವತ ವಲಯದಲ್ಲಿ ನಿರಂತರ ಸೂಸುತ್ತಲೇ ಉಳಿವ ಮಲೆನಾಡಿನ ಸಾಂಸ್ಕೃತಿಕ ಪರಿಮಳವಾಗಿ, ತಮ್ಮ ಅದಮ್ಯ ಚೈತನ್ಯದಿಂದ ನಮ್ಮೆಲ್ಲರ ಉಲ್ಲಾಸವನ್ನು ಮೀಟುವ ಶ್ರೀಮತಿ ಎಂ. ಕೆ. ಇಂದಿರಾ ಅವರಿಗೆ ನಾವು ಸಲ್ಲಿಸುತ್ತಿರುವ ಪ್ರೀತಿ

ಈ

ಸುರಗಿ

ಇಳಾ ಪ್ರಕಾಶನ, ಬೆಂಗಳೂರು